ಕನ್ನಡ ಶಾಸನಗಳಲ್ಲಿ ಸೆಟ್ಟಿಕುಲ

(ವಿಜಯನಗರ ಶಾಸನಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ
ಪಿಎಚ್. ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಭೀಮರತ್ನ

ಮಾರ್ಗದರ್ಶಕರು

ಡಾ.ಡಿ.ವಿ.ಪರಮಶಿವಮೂರ್ತಿ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೩

533

ಕನ್ನಡ ಶಾಸನಗಳಲ್ಲಿ ಸೆಟ್ಟಿಕುಲ

(ವಿಜಯನಗರ ಶಾಸನಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕಿ
ಭೀಮರತ್ನ

ಮಾರ್ಗದರ್ಶಕರು
ಡಾ.ಡಿ.ವಿ.ಪರಮಶಿವಮೂರ್ತಿ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೩

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಕರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಕರಗಳು

ಭಾರತೀಯ ಪುರಾಣಗಳ ಪ್ರಕಾರ "ಸೃಷ್ಟಿಕರ್ತನಾದ ಪರಮಾತ್ಮನು ಸೃಷ್ಟಿ ಕಾರ್ಯವು ನಿಯಮಬದ್ಧವಾಗಿ ನಡೆಯಲು ಋಷಿಗಳನ್ನು ನಾಲ್ಕು ವರ್ಗಗಳಾಗಿ ವಿಭಜಿಸಿ, ಅವರವರ ಧರ್ಮಗಳನ್ನು ಅವರವರೇ ಆಚರಿಸಿ, ಧರ್ಮಾದಿ ಮೋಕ್ಷ ಪರ್ಯಂತ ಇರುವ ಪುರುಷಾರ್ಥಗಳನ್ನು ಪಡೆದು ಧನ್ಯರಾಗಲೆಂದು ನಿಯಮಿಸಿದನೆಂದು ತಿಳಿದುಬರುತ್ತದೆ. ಬೋಧಕ ವರ್ಗ, ಪಾಲಕವರ್ಗ, ಪೋಷಕ ವರ್ಗ ಮತ್ತು ಸೇವಕವರ್ಗಗಳೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬ ನಾಲ್ಕು ವರ್ಗಗಳು. ಈ ನಾಲ್ಕು ವರ್ಗಗಳು ಅವರವರ ಸ್ಥಾನಗಳಲ್ಲಿ ವಿಶಿಷ್ಟವಾಗಿ, ವಿಭಿನ್ನವಾಗಿ ಕಾಣಿಸಿಕೊಂಡರೂ ಎಲ್ಲವೂ ಸಮವೇ. ಈ ನಾಲ್ಕು ವರ್ಗಗಳಲ್ಲಿ ವೈಶ್ಯವರ್ಗವು ವ್ಯಾಪಾರ ವಹಿವಾಟುಗಳನ್ನು ಮಾಡುವಂಥ ವರ್ಗ. ಉದ್ಯೋಗದ ಆಧಾರದ ಮೇಲೆ ಮೇಲ್ಕಂಡ ವರ್ಗಗಳು ರಚನೆಯಾಗಿದ್ದು ಅವುಗಳನ್ನು ವರ್ಣಗಳ ಆಧಾರದ ಮೇಲೆ ವಿಭಾಗ ಮಾಡಲಾಗಿತ್ತು ಎಂದು

ತಿಳಿದುಬರುತ್ತದೆ. ಇಂತಹ ವರ್ಗಗಳಲ್ಲಿ ಪ್ರಮುಖವಾದ ವರ್ತಕ ಸಮುದಾಯದವರನ್ನು ಪ್ರಾಚೀನ ಕಾಲದಿಂದಲೂ ಶಾಸನಗಳು ಮತ್ತು ಕಾವ್ಯಗಳಲ್ಲಿ ಸೆಟ್ಟಿ, ಶೆಟ್ಟಿ, ಚೆಟ್ಟಿ, ಪಟ್ಟಣಸ್ವಾಮಿ, ಮಂಡಲಸ್ವಾಮಿ, ಮುಮ್ಮರಿದಂಡ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದ ಬಗ್ಗೆ ಆಧಾರಗಳಿವೆ. ಈ ವರ್ತಕವರ್ಗವು ಶ್ರೀಮಂತವಾಗಿ ಬದುಕುವುದಕ್ಕಿಂತ ತಮ್ಮ ಸಾಮಾಜಿಕ ಪರಿಸರದಲ್ಲಿ ಬದುಕನ್ನೇ ಶ್ರೀಮಂತಗೊಳಿಸಿದವರು. ಇವರು ತಮ್ಮ ವ್ಯಾಪಾರ ವಹಿವಾಟುಗಳು ಮತ್ತು ಆರ್ಥಿಕ ಲಾಭವನ್ನಷ್ಟೇ ನೋಡಿಕೊಂಡು ಹೋಗದೇ ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದ್ದರು. ಅದು ಹೇಗೆ?,ಯಾವ ರೀತಿ?, ಅದಕ್ಕೆ ಕಾರಣಗಳೇನು? ಅದರ ಪರಿಣಾಮಗಳೇನು? ಇನ್ನೂ ಮುಂತಾದ ರೀತಿಯಲ್ಲಿ ವರ್ತಕರ ಅಂದರೆ ಸೆಟ್ಟಿಗಳ ಪಾತ್ರವನ್ನು ವಿಮರ್ಶಿಸುವುದು ಈ ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಸೆಟ್ಟಿ ಕುಲದವರು ಅಥವಾ ವರ್ತಕವರ್ಗದವರ ಸಾಮಾಜಿಕ ಕಾರ್ಯಗಳನ್ನು ಮುಖ್ಯವಾಗಿ ಶಾಸನಗಳ ಮುಖಾಂತರ ಮತ್ತು ಪ್ರಾಸಂಗಿಕವಾಗಿ ಕಾವ್ಯಗಳ ಮುಖಾಂತರ ತಿಳಿಸಿಕೊಡುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ಅತಿವ್ಯಾಪ್ತಿಯ ಕಾರಣದಿಂದ ಈ ನಮ್ಮ ಅಧ್ಯಯನವನ್ನು ಕಾಲಮಿತಿಗೊಳಪಡಿಸಿಕೊಂಡು ವಿಜಯನಗರ ಅವಧಿಯ ಕನ್ನಡ ಶಾಸನಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು **ಕನ್ನಡ ಶಾಸನಗಳಲ್ಲಿ ಸೆಟ್ಟಿ ಕುಲ" (ವಿಜಯನಗರ ಶಾಸನಗಳನ್ನು ಅನುಲಕ್ಷಿಸಿ)** ಎಂಬ ತಲೆ ಬರೆಹದ ಅಡಿಯಲ್ಲಿ (ಅಂದರೆ ಕ್ರಿ.ಶ.೧೩೩೬ ರಿಂದ ೧೫೬೫ರವರೆಗಿನ ಆಡಳಿತ ಕಾಲದಲ್ಲಿ) ಸೆಟ್ಟಿ ಕುಲದವರು ಕೈಗೊಂಡ ಸಮಾಜೋದ್ಧಾರದ ಕಾರ್ಯಗಳನ್ನು ಅಧ್ಯಯನ ಮಾಡಲಾಗಿದೆ.

ಪ್ರಾಚೀನ ಕರ್ನಾಟಕದ ಜನರು ತಮ್ಮ ದಾನ-ಧರ್ಮ ಕಾರ್ಯಗಳು ಮುಂದಿನವರಿಗೆ ಗೊತ್ತಾಗಲಿ ಮತ್ತು ತಮ್ಮ ಹೆಸರು ಮತ್ತು ಕೀರ್ತಿ ಶಾಶ್ವತವಾಗಿರಲಿ ಎಂದು ಶಾಸನಗಳನ್ನು ಬರೆಸುತ್ತಿದ್ದರು. ಕನ್ನಡ ನಾಡಿನ ಸಹಸ್ರಾರು ದಾನಶಾಸನಗಳು ನಮ್ಮ ಪೂರ್ವಿಕರ ದಾನ ಪ್ರಕ್ರಿಯೆಯ ಬಗ್ಗೆ ವಿವರಗಳನ್ನು ನೀಡುತ್ತವೆ. ದೊರೆತಿರುವ ಆಧಾರಗಳಿಂದ ಸೆಟ್ಟಿ ಕುಲದವರು ಆರ್ಥಿಕವಾಗಿ ಪ್ರಬಲವಾಗಿದ್ದವರು ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಸಹಜವಾಗಿಯೇ ಇವರು ದಾನ-ಧರ್ಮ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದರು. ದೇವಾಲಯ ನಿರ್ಮಾಣ/ನಿರ್ವಹಣೆ ದಾನ, ಕೆರೆ-ಕಟ್ಟೆ ನಿರ್ಮಾಣ, ಅನ್ನ ಸತ್ರಗಳ ನಿರ್ಮಾಣ ಮೊದಲಾದ ಜನಹಿತ ಕಾರ್ಯಗಳಲ್ಲಿ ಸೆಟ್ಟಿಕುಲದವರು ಮುಂದಿದ್ದರು. ಅವರ ಈ ರೀತಿಯ ಜನೋಪಯೋಗಿ ಕಾರ್ಯಗಳನ್ನು ಎತ್ತಿ ತೋರಿಸುವ ಮೂಲಕ ಮಧ್ಯಕಾಲೀನ ಕರ್ನಾಟಕದಲ್ಲಿ ಸೆಟ್ಟಿ ಕುಲದವರ ಸ್ಥಾನಮಾನವೇನೆಂದು ತೋರಿಸಿಕೊಡುವುದೇ ಈ ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

"ಕೊಟ್ಟದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತ್ತೆನ್ನಬೇಡ" ಎಂಬ ಸರ್ವಜ್ಞನ ವಚನದಲ್ಲಿ ದಾನದ ಮಹತ್ವ ಅಡಗಿದೆ. ದಾನ ಮಾನವನ ಜೀವನ ಮೌಲ್ಯಗಳಲ್ಲಿ ಒಂದು. ಪ್ರಾಚೀನ ಕಾಲದಲ್ಲಿ ದಾನ ಶಾಸನಗಳನ್ನು ದೊರೆಗಳು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಆಡಳಿತ ವರ್ಗದವರು, ವ್ಯಾಪಾರೀ ಸಂಘಗಳು ಅಲ್ಲದೇ ಸಾಮಾನ್ಯ ಪ್ರಜೆಗಳು ಕೂಡ ನಿರ್ಮಿಸುತ್ತಿದ್ದರು. ದೇವಾಲಯದ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕೆ ಅಗ್ರಹಾರಗಳಿಗೆ, ವಿದ್ಯಾಕೇಂದ್ರಗಳಿಗೆ, ಘಟಿಕಾ ಸ್ಥಳಗಳಿಗೆ, ಕೆರೆ, ಬಾವಿ, ಅರವಟ್ಟಿಗೆ ಮತ್ತು ಅನ್ನಸತ್ರಗಳಿಗೆ ದಾನ ನೀಡಿರುವ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಇವುಗಳಲ್ಲಿ ವರ್ತಕರು ಅಂದರೆ ಸೆಟ್ಟಿ ವರ್ಗದವರು ನೀಡಿರುವ ದಾನ ದತ್ತಿಗಳನ್ನು ತಿಳಿಸಿಕೊಡುವುದು ಸಂಶೋಧನೆಯಲ್ಲಿ ಒಳಗೊಂಡಿದೆ. 'ನೂರಾರು ಕೈಗಳಿಂದ ಕೂಡಿಸು, ಅದನ್ನು ಸಾವಿರಾರು ಕೈಗಳಿಂದ ದಾನ ಮಾಡು, ದಾನ ಶೀಲತೆಯಿಂದಲೇ ಮನುಷ್ಯನು ಭಾಗ್ಯವಂತಾಗುತ್ತಾನೆ'. 'ಬಹಳ ಕೊಡುವುದಾಗದಿದ್ದರೆ, ನಿನ್ನ ಒಂದು ತುತ್ತಿನಲ್ಲಿ ಅರ್ಧ ತುತ್ತನ್ನಾದರೂ ಏಕೆ ಕೊಡುವುದಿಲ್ಲ?' ಎನ್ನುವ ಮಾತುಗಳಲ್ಲಿ ದಾನದ ಪವಿತ್ರತೆ ಹುದುಗಿದೆ. ಇಂಥ ಹಿತೋಕ್ತಿಗಳನ್ನು ಅರ್ಥ ಮಾಡಿಕೊಂಡಿರತಕ್ಕಂತಹ ಸೆಟ್ಟಿ ಕುಲದವರು ನೀಡಿದ ಯಥೇಚ್ಛ ದಾನ ಧರ್ಮಗಳನ್ನು ಎಳೆ ಎಳೆಯಾಗಿ ಬಿಡಿಸಿ, ಮಹತ್ವತೆಯನ್ನು ತಿಳಿಸಿಕೊಡುವುದು ಮತ್ತು ವರ್ತಕ ಸಮುದಾಯದವರ ಗುಣಗಳನ್ನು ಬಿಚ್ಚಿಡುವುದು ಅಧ್ಯಯನದ ಗುರಿಯಾಗಿದೆ.

ವರ್ತಕರ ಗುಣಗಾನದ ಬಗ್ಗೆ ಯಲಬುರ್ಗಾ ತಾಲೂಕಿನ ಮುಧೋಳ ಶಾಸನವೊಂದರಲ್ಲಿ ಉಲ್ಲೇಖವಿದೆ. ತ್ರೈಲೋಕ ಮಲ್ಲನು ಕಲ್ಯಾಣದಲ್ಲಿ ಆಳುತ್ತಿರುವಾಗ ಇವನ ಅನುಮತಿ ಪಡೆದು ೫೦೦ ಜನ ವ್ಯಾಪಾರಿಗಳು ಗವಿ ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿದರು. ಈ ವ್ಯಾಪಾರಿಗಳನ್ನು ನಾನಾ ರೀತಿಯಲ್ಲಿ ಶಾಸನ ವರ್ಣಿಸಿವೆ. ಇವರು ಬಲದಲ್ಲಿ ಬಲಿಯಂತೆ, ಛಲದಲ್ಲಿ ದುರ್ಯೋಧನನಂತೆ ಸತ್ಯದಲ್ಲಿ ಧರ್ಮರಾಯ, ಸಾಹಸದಲ್ಲಿ ಭೀಮ, ಜ್ಞಾನದಲ್ಲಿ ಸಹದೇವ ಶೌರ್ಯದಲ್ಲಿ ಭೀಷ್ಮ, ತೇಜದಲ್ಲಿ ಆದಿತ್ಯ, ಭೋಗದಲ್ಲಿ ಇಂದ್ರ, ತ್ಯಾಗದಲ್ಲಿ ಕರ್ಣ, ಗಟ್ಟಿತನದಲ್ಲಿ ಯಮನಂತೆ ಅಭಯ ಗುಣಗಳನ್ನು ಇವರು ಹೊಂದಿದ್ದರು. ವರ್ತಕರ ಗುಣ ಸ್ವಭಾವಗಳನ್ನು ತಿಳಿಸಿಕೊಡುವ ಈ ಶಾಸನವು ನಿಜಕ್ಕೂ ಮಹತ್ವವಾಗಿದೆ. ಹೇಗೆ ನಾನಾ ಕ್ಷೇತ್ರದಲ್ಲಿ ಇವರು ಸಲ್ಲಿಸಿದ ಸೇವೆಯ ಬಗ್ಗೆ ಇಂದಿನ ಸಮಾಜಕ್ಕೆ ಪರಿಚಯಿಸಿ, ತನ್ಮೂಲಕ ಇಂದಿನ ಸಮಾಜದವರೂ ದಾನದ ಮಹತ್ವವನ್ನು ಅರಿಯಲಿ ಎನ್ನುವುದು ನನ್ನ ಮಹಾತ್ವಾಕಾಂಕ್ಷೆಯಾಗಿದೆ.

ವಿಜಯನಗರ ಕಾಲದ ಜನರು 'ಯಥಾ ರಾಜ ತಥಾ ಪ್ರಜಾ' ಎನ್ನುವಂತೆ ರಾಜರ ಔದಾರ್ಯ ಗುಣಗಳು ಪ್ರಜೆಗಳಿಗೆ ಒಳ್ಳೆಯ ದಾರಿಯಲ್ಲಿ ಮುನ್ನುಗ್ಗಲು ಪ್ರಚೋದನೆಯನ್ನು ನೀಡುತ್ತಿದ್ದವು. ವಾಣಿಜ್ಯ ಸಂಪರ್ಕ ವಿಸ್ತೃತಗೊಂಡುದರ ಪರಿಣಾಮವಾಗಿ ಇಲ್ಲಿನ ಜನ ಶ್ರೀಮಂತರಾದರು. ಅದರಲ್ಲೂ ವಿಶೇಷವಾಗಿ ವರ್ತಕ ವರ್ಗವು ಹೇರಳ ಲಾಭ ಗಳಿಸಿತು. ಅವರು ತಮ್ಮದೇ ಆದ ದೇವರು, ದೇವಾಲಯಗಳು, ಸಂಘ ಸಂಸ್ಥೆಗಳನ್ನು ರಚಿಸಿಕೊಂಡರು. ಹೆಚ್ಚಿನ ದೇವಾಲಯಗಳಿಗೆ ಬೇಕಾದಷ್ಟು ದಾನದತ್ತಿಗಳನ್ನು ನೀಡಿದರು. ಬ್ರಾಹ್ಮಣ ಸಂತರ್ಪಣೆಗಾಗಿ ಸ್ವತಃ ಮಠ ಕಟ್ಟಿಸಿ ಅನೇಕ ದಾನಗಳನ್ನು ನೀಡಿ ವ್ಯವಸ್ಥೆಗೊಳಿಸಿದರು. ಈ ದಿಸೆಯಲ್ಲಿ ವರ್ತಕರ ಸೇವೆಯನ್ನು ತಿಳಿಸಿಕೊಡುವುದು ನನ್ನ ಸಂಶೋಧನೆಯಲ್ಲಿ ಒಳಗೊಂಡಿದೆ.

ಡಾ.ಬಿ.ಆರ್.ಹಿರೇಮಠರ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಕೃತಿ ಸೆಟ್ಟಿಯರ ಕೊಡುಗೆಯನ್ನು ತಿಳಿಯಲು ಮಾರ್ಗದರ್ಶನದಂತಿದೆ. ಪ್ರಾಚೀನ ವಾಣಿಜ್ಯ ಚಲನವಲನಗಳ ಬಗ್ಗೆ ತಿಳಿಯಲು ಇದು ದಾರಿ ದೀವಿಗೆಯಾಗಿದೆ. ಪ್ರಾಚೀನ ಕರ್ನಾಟಕದ ಧಾರ್ಮಿಕ, ರಾಜಕೀಯ ಕ್ಷೇತ್ರಗಳ ಅಧ್ಯಯನ ವಿಪುಲ ಪ್ರಮಾಣದಲ್ಲಿ ನಡೆದಿದೆ. ನಡೆಯುತ್ತಲಿದೆ. ಅಂದರೆ ವಿದ್ವಾಂಸರು ಈವರೆಗೆ ಪ್ರಾಚೀನಕಾಲ ಬ್ರಾಹ್ಮಣ, ಕ್ಷತ್ರಿಯ ಚಟುವಟಿಕೆಗಳನ್ನು ಬಹುಮಟ್ಟಿಗೆ ಗುರುತಿಸಿದ್ದಾರೆ. ಆದರೆ ಇಷ್ಟೇ ಮಹತ್ವದ ವೈಶ್ಯ ಚಟುವಟಿಕೆಗಳ ಹೊಸ ಕ್ಷೇತ್ರವನ್ನು ಡಾ.ಬಿ.ಆರ್.ಹಿರೇಮಠರು ತಮ್ಮ ಕೃತಿಯಲ್ಲಿ ಪರಿಚಯಿಸಿದ್ದಾರೆ. ಆದರೆ ನನ್ನ ಸಂಶೋಧನೆಯಲ್ಲಿ ವಿಜಯನಗರ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸೆಟ್ಟಿ ಅಥವಾ ವರ್ತಕರ ಮಂಗಳಕರ ಕಾರ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದು ನನ್ನ ಉದ್ದೇಶ.

ಸೆಟ್ಟಿ ಕುಲದ ಕಾರ್ಯಗಳನ್ನು, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಬಿಂಬಿಸಬೇಕೆನ್ನುವುದು ಈ ಸಂಶೋಧನೆಯ ಯೋಜನೆಯಲ್ಲಿದೆ. ಈ ಕ್ಷೇತ್ರಗಳಲ್ಲಿ ಸೆಟ್ಟಿ ಕುಲದವರ ಕೈಂಕರ್ಯಗಳು ಅಷ್ಟಾಗಿ ಆಗಿರದಿದ್ದ ಕಾರಣದಿಂದ, ಶಾಸನಗಳಲ್ಲಿ ಬಂದಿರುವ ಸೆಟ್ಟಿಗಳ ಕೊಡುಗೆಗಳನ್ನು ತಿಳಿಸುವುದು ನನ್ನ ಸಂಶೋಧನೆಯಲ್ಲಿ ಒಳಗೊಂಡಿದೆ. ಸುಮಾರು ೫೦೦ ಶಾಸನಗಳ ಆಧಾರವಿಟ್ಟುಕೊಂಡು ಸೆಟ್ಟಿಕುಲದವರ ಕಲ್ಯಾಣಕರ ಕೆಲಸಗಳನ್ನು ಬರೆಯಲು ನಿರ್ಧರಿಸಿರುವೆನು. ಈ ಸೆಟ್ಟಿ ಕುಲದವಳೇ ಅಂದರೆ ವೈಶ್ಯರ ಕುಲಕ್ಕೆ ಸೇರಿದ ನಾನು ಇಂಥ ಕೆಲಸವನ್ನು ಮಾಡುವುದು ನನ್ನ ಕರ್ತವ್ಯವೆಂದೇ ನಾನು ಭಾವಿಸಿರುವೆನು.

ಸೆಟ್ಟಿಯರು ವ್ಯಾಪಾರವನ್ನು ಮಾತ್ರ ತಮ್ಮ ದೃಷ್ಟಿಯಲ್ಲಿಟ್ಟುಕೊಳ್ಳದೇ ಸಮಗ್ರ ಸಮಾಜದ ಕಲ್ಯಾಣಕ್ಕಾಗಿ ಶ್ರಮವಹಿಸಿದ ಉಲ್ಲೇಖಗಳಿರುವ ಶಾಸನಗಳ ಪರಿಚಯ ಮಾಡಿಸುವುದೂ ಸೇರಿದೆ. ವರ್ತಕರು ಮತ್ತು ವ್ಯಾಪಾರದ ಕೆಲವು ಉಲ್ಲೇಖಗಳನ್ನು ಬಿಟ್ಟರೆ ಕಾವ್ಯಗಳಲ್ಲಿ ದೊರೆಯುವ ವಿವರ ಇಲ್ಲವೆನ್ನುವಷ್ಟು ಕಡಿಮೆ. ಪೇಟೆ, ಪಟ್ಟಣ, ಅಂಗಡಿಗಳ ವರ್ಣನೆ ಬಂದರೂ ಕಾವ್ಯಗಳಲ್ಲಿ ಅದು ಹೆಚ್ಚಾಗಿ ವಾಸ್ತವವಾಗಿರದೆ ಸಾಂಪ್ರದಾಯಿಕತೆ, ಉತ್ಪ್ರೇಕ್ಷೆಗಳಿಂದ ಕೂಡಿದುದಾಗಿರುತ್ತದೆ. ಹೀಗಾಗಿ ವಸ್ತು ನಿಷ್ಠತೆಯನ್ನು ಹೊತ್ತು ನಿಂತಿರುವ ಶಾಸನಗಳು ಮಾತ್ರ ಕಾವ್ಯಗಳಿಗಿಂತ ಹೆಚ್ಚು ಪ್ರಯೋಜನಕಾರಿಯೆನಿಸಿ, ನಾಡಿನ ಆರ್ಥಿಕ ವ್ಯವಸ್ಥೆಯ ಮೂಲಭೂತ ಘಟಕಗಳಾದ ವರ್ತಕರ ಸಮಾಜದ ಉದ್ಧಾರದ ಚರಿತ್ರೆಯನ್ನು ಪ್ರಕಟಿಸುತ್ತವೆ. ಆದ್ದರಿಂದ ಶಾಸನಗಳು ತಿಳಿಯಪಡಿಸುವ ಸೆಟ್ಟಿ ಕುಲದವರ ಸಾಮಾಜಿಕ ಹಿತಕಾರಿ ಕೆಲಸಗಳು ಅತ್ಯಂತ ಮಹತ್ವವೆನಿಸಿ ಈ ನಿಟ್ಟಿನಲ್ಲಿ ನನ್ನ ಸಂಶೋಧನೆಯನ್ನು ಕೈಗೊಂಡಿರುವೆನು.

ಈ ಪ್ರಬಂಧವು ವರ್ತಕರ ಜೀವನದ ವಿವಿಧ ಮುಖಗಳ ಪರಿಚಯವನ್ನು ಒಳಗೊಂಡಿದೆ. ಸೆಟ್ಟಿಗಳ ಸಾಮಾಜಿಕ, ಧಾರ್ಮಿಕ ವೀರ ಜೀವನ, ಕೌಟುಂಬಿಕ ಸಂಬಂಧ ಹೊಂದಿದ್ದ ವಿಶಿಷ್ಟ ಅಧಿಕಾರ-ಕರ್ತವ್ಯಗಳನ್ನು ಕೇಳುವುದರೊಂದಿಗೆ ಸೆಟ್ಟಿಗಳ ಹಿರಿಮೆ ಇದರಲ್ಲಿ ಒಳಗೊಂಡಿದೆ. ವೈದಿಕ, ಜೈನ, ಶೈವ ಮತದ ಸೆಟ್ಟಿಗಳು ದೇವಾಲಯ-ಕಂಬ-ಮಂಟಪ, ದೀಪಮಾಲೆ, ಮಠ, ಅನ್ನಸತ್ರ, ಕೆರೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರದಂತಹ ರಚನಾತ್ಮಕ ಕಾರ್ಯ ಕೈಗೊಂಡಿರುವರು. ದೇವಾಲಯಗಳ ಚೈತ್ರ-ಪವಿತ್ರ ಪರ್ವ ಖಂಡಸ್ಫುಟಿತ ಜೀರ್ಣೋದ್ಧಾರ, ಅಂಗಭೋಗ-ರಂಗಭೋಗ ಮುಂತಾದ ಕಾರ್ಯಗಳಿಗೆ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ದಾನ ಮಾಡಿದ್ದಾರೆ. ವರ್ತಕರ ಇಂಥ ಧಾರ್ಮಿಕ ಕಾರ್ಯಗಳು ಶಾಸನಗಳಲ್ಲಿ ಪ್ರಕಟವಾಗಿರುವುದನ್ನು ಇಂದಿನ ಸಮಾಜಕ್ಕೆ ತಿಳಿಸಿಕೊಡುವುದು ನನ್ನ ಸಂಶೋಧನೆಯಲ್ಲಿ ಒಳಗೊಂಡಿದೆ.

ಮಹಿಳೆ ಪ್ರಪ್ರಥಮವಾಗಿ ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ. ಇದೊಂದು ಸೀಮಿತ ಕ್ಷೇತ್ರ, ಪತಿ ಮಕ್ಕಳು ಬಂಧುಬಳಗದ ಯೋಗಕ್ಷೇಮದೊಂದಿಗೆ ಸಮಾಜದಲ್ಲಿ ವಿಶಿಷ್ಟ ಸ್ಥಾನಮಾನ ಕಾಯ್ದುಕೊಳ್ಳುವುದು ಈ ಕ್ಷೇತ್ರದ ಗುರಿ. ಆದರೆ ಮಹಿಳೆಯರು ಈ ಸೀಮಿತ ಪರಿಸರವನ್ನೂ ಮೀರಿ ಜೀವನದಲ್ಲಿ ಹೆಚ್ಚಿನದನ್ನು ಸಾಧಿಸಬೇಕೆಂಬ ಲವಲವಿಕೆಯುಳ್ಳವರಾಗಿರುತ್ತಾರೆ. ಕರ್ನಾಟಕದಲ್ಲಿ ಶಾಸನೋಕ್ತ ಮಹಿಳೆಯರ ಇತಿಹಾಸ ಕದಂಬರ ಕಾಲದಿಂದ ಪ್ರಾರಂಭವಾಗುತ್ತದೆ.

ಅಂದಿನಿಂದ ಸಾಮಾನ್ಯವಾಗಿ ಶಾಸನಗಳ ಒಡಲಲ್ಲಿ ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತವರ್ಗದ ಮಹಿಳೆಯರು ಇವರಲ್ಲಿ ಚಕ್ರಾಧಿಪತಿಗಳ ರಾಣಿಯರಿಗಿಂತ ಸಾಮಂತ, ಮಾಂಡಲಿಕ, ದಂಡನಾಯಕ ಮತ್ತು ವರ್ತಕರ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇದರಲ್ಲಿ ಕೆಲವು ಮಹಿಳೆಯರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದವರಾದರೆ ಇನ್ನು ಕೆಲವರು ಸ್ವಕಾರ್ಯಬಲದಿಂದ ಪ್ರಾಮುಖ್ಯತೆ ಪಡೆದವರು. ಸೆಟ್ಟಿ ಕುಲದ ಮಹಿಳೆಯರು ಮಾಡಿದ ಧಾರ್ಮಿಕ, ಸಾಮಾಜಿಕ ಕಲ್ಯಾಣ ಕಾರ್ಯಗಳು ಇದರಲ್ಲಿ ಒಳಗೊಂಡಿವೆ. ಶಾಸನದಲ್ಲಿ ಉಕ್ತವಾದ ಮಹಿಳೆಯರ ದಾನ ಧರ್ಮಗಳು ನಿಜಕ್ಕೂ ಶ್ಲಾಘನೀಯ. ಸೆಟ್ಟ ಕುಲದ ಮಹಿಳೆಯರೂ ಪುರುಷರಷ್ಟೇ ಸಮಾಜದಲ್ಲಿ ತಮ್ಮ ಉದಾರಗುಣ, ದಾನ ಧರ್ಮಾದಿಗಳಿಂದ ಪ್ರಸಿದ್ಧರಾಗಿರುವರು. ಈ ಮಹಿಳೆಯರು ಶಾಸನದುದ್ದಕ್ಕೂ ತಮ್ಮ ಮಹಾನ್ ಕಾರ್ಯಗಳಿಂದ ಪ್ರಸಿದ್ಧರಾಗಿರವರು. ಶಾಸನದಲ್ಲಿ ಉಲ್ಲೇಖವಾಗಿರುವ ಮಹಿಳೆಯರ ದಾನ ಧರ್ಮಾದಿಗಳನ್ನು ತಿಳಿಸಿಕೊಡುವುದೂ ಇದರಲ್ಲಿ ಒಳಗೊಂಡಿದೆ.

ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಾರೋದ್ಯಮವನ್ನು ಬೆಳೆಸುವಲ್ಲಿ ಅವಿರತವಾಗಿ ದುಡಿದ ಈ ವರ್ತಕರು ಕೆಲವೊಂದು ರಾಜಕೀಯ, ಸಾಮಾಜಿಕ, ಆರ್ಥಿಕ ಅಧಿಕಾರಗಳನ್ನು ಹಾಗೂ ಹೊಣೆಗಾರಿಕೆಯನ್ನು ಪರಿಪಾಲಿಸುತ್ತಾ ಬಂದಿರುವರು. ಇವರ ಕಾರ್ಯಗಳಿಗೆ ಸೆಟ್ಟಿ ಕುಲದ ಮಹಿಳೆಯರೂ ಸಹಕಾರ ನೀಡಿರುವರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಪುರುಷ ಮತ್ತು ಸ್ತ್ರೀ ಸಮಾಜದ ಅವಶ್ಯ ಮತ್ತು ಅನಿವಾರ್ಯ ಘಟಕಗಳು. ನಾಣ್ಯದ ಎರಡು ಮುಖಗಳಂತೆ ವಿರುದ್ಧವೆಂದರೂ ಇವು ಪರಸ್ಪರ ಪೂರಕವಾದುವು. ಪುರುಷನಿಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ ಸ್ತ್ರೀ ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ನಡೆದುಬಂದ ವಿಷಯ ಮನುಕುಲದ ಚರಿತ್ರೆಯಲ್ಲಿ ಅರ್ಧಭಾಗವನ್ನು ವ್ಯಾಪಿಸಿದೆ. ಲೋಕದ ಬೇರೆ ಬೇರೆ ಭಾಗಗಳಲ್ಲಿ ಈ ಸ್ತ್ರೀ ಸಮಾಜ ಯಾವುದೇ ಬಗೆಯಲ್ಲಿ ಬದುಕಿರಲಿ, ಭಾರತೀಯ ಹಿನ್ನಲೆಯಲ್ಲಿ ಇದು ಬದುಕಿದ ಬಗೆಯನ್ನು ಗುರುತಿಸುವುದು ಉಪಯುಕ್ತ ಮತ್ತು ಕುತೂಹಲಕಾರಿ ಅಭ್ಯಾಸವಾಗಿದೆ. ಆದ್ದರಿಂದ ನನ್ನ ಸಂಶೋಧನೆಯಲ್ಲಿ ಮಹಿಳೆಯರ ಕಲ್ಯಾಣಕರ ಕಾರ್ಯಗಳನ್ನು ಶಾಸನಗಳ ಆಧಾರದಿಂದ ಗುರುತಿಸಿರುವೆನು. ವಿಜಯನಗರ ಕಾಲದ ಶಾಸನಗಳನ್ನು ನೋಡುವಾಗ ರಾಜರು, ರಾಣಿಯರು, ರಾಜಮನೆತನದವರು ಅಗಾಧವಾದ ರೀತಿಯಲ್ಲಿ ದಾನ ಧರ್ಮಗಳನ್ನು ಮಾಡಿರುವರು. ರಾಜರು ಮಾಡಿದ ದಾನ ಧರ್ಮಗಳು, ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳು

ಜನತೆಯ ಮೇಲೆ ಅಥವಾ ಸಮಾಜದ ಮೇಲೆ ನೇರ ಪರಿಣಾಮ ಬೀರುತ್ತಿದ್ದವು. ಅರಸರು ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳು ಒಂದು ರಾಜ್ಯದ ಧಾರ್ಮಿಕ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಮೇಲೆ ಗಾಢ ಪರಿಣಾಮ ಬೀರುತ್ತಿದ್ದವು. ರಾಜನನ್ನು ದೇವರೆಂದೇ ಪರಿಗಣಿಸಿದ್ದ ಜನತೆ ಅವನ ಪ್ರತಿಯೊಂದು ಚಲನವಲನವನ್ನು ಗಮನಿಸುತ್ತಿದ್ದರು. 'ಯಥಾ ರಾಜ ತಥಾ ಪ್ರಜಾ' ಎನ್ನುವ ಮಾತಿನಂತೆ ಉದಾರಿಗಳಾದ ವಿಜಯನಗರದ ಅರಸರ ಒಳ್ಳೆಯ ಗುಣಗಳು ಸಾಮಾನ್ಯ ವರ್ಗದ ಜನರ ಮೇಲೆ ಪರಿಣಾಮ ಬೀರಿ, ಅವರೂ ಕೊಡುಗೈ ದಾನಿಗಳಾಗಿದ್ದರು ಎನ್ನುವ ಅಂಶವನ್ನು ಶಾಸನಗಳು ಬಿತ್ತರಿಸುತ್ತವೆ. ಸೆಟ್ಟಿ ಕುಲದವರು ರಾಜರುಗಳ ಈ ಒಳ್ಳೆಯ ಗುಣಗಳನ್ನು ಅನುಸರಿಸಿಕೊಂಡು ಬಂದು ಶಾಸನದುದ್ದಕ್ಕೂ ಪ್ರಭಾವ ಬೀರಿರುವುದರಲ್ಲಿ ಆಶ್ಚರ್ಯವೇನಿಲ್ಲ.

ನಾನು ವೈಶ್ಯ ಕುಲದವಳಾಗಿದ್ದು, ವರ್ತಕ ಶ್ರೇಣಿಯ ಅಥವಾ ಸೆಟ್ಟಿಗಳ ಮಹತ್ಕಾರ್ಯಗಳನ್ನು ಶಾಸನಗಳಿಂದ ಹುಡುಕಿ ತೆಗೆಯುವುದು ನನ್ನ ಕರ್ತವ್ಯವೆಂದು ಭಾವಿಸಿ **'ಕನ್ನಡ ಶಾಸನಗಳಲ್ಲಿ ಸೆಟ್ಟಿ ಕುಲ'** ಎಂಬ ವಿಷಯವನ್ನು ಆಯ್ದುಕೊಂಡಿರುವೆನು. ನಮ್ಮವರು ಮಾಡಿದ ಮಹಾನ್ ಕಾರ್ಯಗಳನ್ನು ಇಂದಿನ ಸಮಾಜಕ್ಕೆ ಪರಿಚಯಿಸಬೇಕೆಂಬುದೇ ನನ್ನ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ

ಈ ಪ್ರಬಂಧ ರಚನೆಯಲ್ಲಿ ಶಾಸನಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ. ವಿಜಯನಗರ ಕಾಲದಲ್ಲಿನ ಸೆಟ್ಟಿಗಳು ಮತ್ತು ಅವರ ಇತಿಹಾಸವನ್ನು ವಿವೇಚಿಸುವಲ್ಲಿ ಕನ್ನಡ ಶಾಸನಗಳನ್ನು ಆಧಾರವಾಗಿಟ್ಟುಕೊಂಡಿರುವೆನು. ಕೆಲವೊಂದು ತೆಲುಗು, ತಮಿಳು ಶಾಸನಗಳನ್ನು ಅವಶ್ಯವಿದ್ದಲ್ಲಿ ಉಲ್ಲೇಖಿಸಿರುವೆನು. ಈ ಪ್ರಬಂಧವು ವಿಜಯನಗರ ಅರಸರ ಪ್ರಾರಂಭದಿಂದ ಅಂದರೆ ಕ್ರಿ.ಶ.೧೩೩೬ ರಿಂದ ಕೊನೆಯವರೆಗೂ ಕ್ರಿ.ಶ.೧೬೫೦ರ ವರೆಗಿನ ವ್ಯಾಪ್ತಿಯನ್ನು ಪಡೆದಿದೆ. ಈ ಪ್ರಬಂಧವು ವಿವಿಧ ಸೆಟ್ಟಿ ಕುಲಗಳೂ, ಸಾಮಾಜಿಕ ಕೊಡುಗೆ, ಧಾರ್ಮಿಕ ಕೊಡುಗೆ, ಸೆಟ್ಟಿ ಕುಲದ ತೌಲನಿಕ ಚರ್ಚೆ, ಸಮಾರೋಪ ಇದಲ್ಲದೇ ಅಧ್ಯಯನದ ಉದ್ದೇಶ ಮತ್ತು ಸ್ವರೂಪವನ್ನು ಒಳಗೊಂಡು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಇಲ್ಲಿ ಸೆಟ್ಟಿಕುಲದ ಅರ್ಥವನ್ನು ಸೀಮಿತವಾಗಿ ಒಂದೇ ಕುಲಕ್ಕೆ ಬಳಸದೇ, ಜೈನ ಸೆಟ್ಟಿಗಳು, ವೀರಶೈವ ಸೆಟ್ಟಿಗಳು ಮತ್ತು ಆರ್ಯವೈಶ್ಯ ಸೆಟ್ಟಿಗಳು ಅಲ್ಲದೇ ಸೆಟ್ಟಿಗಳು ಎನ್ನುವ ನಾಮಾಧೇಯದಿಂದ

ಉಕ್ತವಾಗಿರುವ ಸೆಟ್ಟಿಗಳ ವಿಶಾಲ ಕಾರ್ಯಕ್ಷೇತ್ರಕ್ಕೆ ಒಳಗೂಡಿಸಿಕೊಂಡು ಸಂಶೋಧನೆ ಕೈಗೊಂಡಿರುವೆನು. ವಿಜಯನಗರ ಕಾಲದಲ್ಲಿನ ಶಾಸನಗಳನ್ನು ಆಧಾರವಾಗಿಟ್ಟುಕೊಂಡಾಗ್ಯೂ ವಿರಳವಾಗಿ ಕೆಲವೊಂದು ಮಾತ್ರ ತೆಲುಗು, ತಮಿಳು ಶಾಸನಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಮುಖವಾಗಿ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಸೆಟ್ಟಿಗಳು ಸಲ್ಲಿಸಿದ ಸೇವೆಯನ್ನು ಆಧಾರವಾಗಿಟ್ಟುಕೊಂಡು ವಿಷಯ ಸಂಗ್ರಹಣೆ ಮಾಡಲಾಗಿದೆ. ಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡಾಗ, ಅನೇಕ ಅಂಶಗಳು ಬೆಳಕಿಗೆ ಬಂದಿವೆ. ತುಮಕೂರಿನಲ್ಲಿ ಸೆಟ್ಟಿ ಕುಲದವರು ಮನೆತನವನ್ನು ಭೇಟಿ ಮಾಡಿ ಶಿವಗಂಗಾ ಕ್ಷೇತ್ರದ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ, ಪ್ರಬಂಧದಲ್ಲಿ ಅಳವಡಿಸಿದ್ದೇನೆ. ಹಗರಿಬೊಮ್ಮನಹಳ್ಳಿಯ ಶ್ರೀ ಗುರುಮೂರ್ತಿ ಪೆಂಡಕೂರ್ ಇವರನ್ನು ಭೇಟಿಯಾಗಿ ವೈಶ್ಯ ಸಮಾಜದ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದೆನು. ರಾಯಚೂರಿನ ಸೋಮವಾರಪೇಟೆಯ ಮಠದ ಸ್ವಾಮಿಗಳಾದ ಶ್ರೀ ಷ॥ ಬ್ರ॥ ರಾಚೋಟಿ ವೀರ ಶಿವಾಚಾರ್ಯ ಸ್ವಾಮಿಗಳು ಇದವರಿಂದ ಮಠಗಳ ಸ್ವರೂಪ ಹಿನ್ನೆಲೆಗಳ ಬಗ್ಗೆ ಚರ್ಚಿಸಿರುವೆ. ಗಂಗಾವತಿಯ ವೈಶ್ಯ ಕುಲೋತ್ತಮರೂ ಹಾಗೂ ತಂದೆ ತಾಯಿಗಳೂ ಆದ ಶ್ರೀ ಶರಭಣ್ಣ ಶೆಟ್ಟಿ ಮತ್ತು ಶ್ರೀಮತಿ ಹಂಪಮ್ಮನವರೊಂದಿಗೆ ವೈಶ್ಯ ಸಮಾಜದ ಜನರ ಮಾಹಿತಿಗಳನ್ನು ಸಂಗ್ರಹಿಸಿರುವೆನು. ಕರ್ನಾಟಕ ಆರ್ಯವೈಶ್ಯ ಶತಮಾನೋತ್ಸವದ ಮಹಾಸಭೆ ೨೦೧೧ರಲ್ಲಿ ಬೆಂಗಳೂರಿನಲ್ಲಿ ನಡೆದಾಗ ನಾನು ವೈಯಕ್ತಿಕವಾಗಿ ಅಲ್ಲಿಗೆ ಹೋಗಿ ವಿಷಯದ ಬಗ್ಗೆ ಮಹಾಸಭೆಯ ಹಿರಿಯರೊಂದಿಗೆ ಸದಸ್ಯರೊಂದಿಗೆ ನನಗೆ ಬೇಕಾದ ಮಾಹಿತಿಗಳನ್ನು ಪಡೆದುಕೊಂಡೆನು. ಅಲಂಪಲ್ಲಿ ಎಸ್.ವಿಷ್ಣುಭಾರತ್ ಇವರು 'ಆರ್ಯವೈಶ್ಯ' ಎನ್ನುವ ಕಿರುಪುಸ್ತಕದ ರಚನಾಕಾರರು. ಇವರ ಜೊತೆ ದೂರವಾಣಿಯ ಮೂಲಕ ಸಂಪರ್ಕದೊಂದಿಗೆ ನನ್ನ ವಿಷಯಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳ ಬಗ್ಗೆ ತಿಳಿದುಕೊಂಡೆನು. ಇವರ ಜೊತೆಗೆ ವಿಷಯಗಳನ್ನು ಚರ್ಚಿಸುವಾಗ ಗಾಂಧೀಜಿ, ಸಾಮ್ರಾಟ್ ಅಶೋಕ್, ವಿಕ್ರಮಾದಿತ್ಯ ರಾಜ, ಶ್ರವಣಕುಮಾರ ಇವರೆಲ್ಲ ಆರ್ಯವೈಶ್ಯರೆಂದು ತಿಳಿದುಬಂತು. ಆದರೆ ಸಂಶೋಧನೆಯಲ್ಲಿ ನನಗೆ ಶಾಸನಗಳ ಆಧಾರ ದೊರೆತಿಲ್ಲ.

ಈ ನಮ್ಮ ಅಧ್ಯಯನದಲ್ಲಿ ಸೆಟ್ಟಿಕುಲದ ಬಗ್ಗೆ ಹಲವು ಪ್ರಶ್ನೆಗಳನ್ನು ಗುರುತಿಸಿ ಅವಕ್ಕೆ ಉತ್ತರವನ್ನು ಹುಡುಕಲು ಪ್ರಯತ್ನಿಸಲಾಗಿದೆ. ಆ ಪ್ರಶ್ನೆಗಳು ಈ ಕೆಳಕಂಡಂತಿವೆ.

೧. ಸೆಟ್ಟಿಕುಲದವರ ಚರಿತ್ರೆಯ ಪ್ರಾರಂಭ ಯಾವಾಗ ?

೨. ಸೆಟ್ಟಿಕುಲದವರು ಪ್ರಾಚೀನ ಕರ್ನಾಟಕದಲ್ಲಿ ಯಾವ ಸ್ಥಾನ ಮಾನವನ್ನು ಹೊಂದಿದ್ದರು?

೩. ಸೆಟ್ಟಿಕುಲದವರ ಆರ್ಥಿಕ ಸ್ಥಿತಿ ಹೇಗಿತ್ತು ?

೪. ಇವರು ರಾಜಕೀಯವಾಗಿ ಹೇಗೆ ಪ್ರಬಲರಾಗಿದ್ದರು ?

೫. ಇವರುಗಳು ಯಾವರಿತಿಯಲ್ಲಿ ಸಮಾಜದ ಉನ್ನತಿಗೆ ಶ್ರಮಿಸಿದರು ?

೬. ಇವರು ಎದುರಿಸಿದ ಸಮಸ್ಯೆಗಳೇನು ?

೭. ವಿವಿದ ಕಾಲ ಘಟ್ಟಗಳಲ್ಲಿ ಇವರ ಪರಿಸ್ಥಿತಿ ಹೇಗಿತ್ತು ?

೮. ಇವರು ಕೈಗೊಂಡ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಗಳೇನು ?

ಎಂಬ ಹಲವು ಪ್ರಶ್ನೆಗಳೊಂದಿಗೆ ನಮ್ಮ ಅಧ್ಯಯನ ಮುಖಾಮುಖಿಯಾಗಿದೆ.

ದೇವಾಲಯಗಳಿಗೆ ಸೆಟ್ಟಿ ಕುಲದವರು ನೀಡಿದ ದಾನದ ಬಗ್ಗೆ ವಿವೇಚನೆ ಮಾಡುವಾಗ, ಬಸದಿಗಳು, ಶೈವದೇವಾಲಯಗಳು, ವೈಷ್ಣವ ದೇವಾಲಯಗಳಿಗೆ ನೀಡಿದ ದಾನ ಮತ್ತು ದೇವಾಲಯ ಬಸದಿಗಳ ಜೀರ್ಣೋದ್ಧಾರಗಳ ಬಗ್ಗೆಯೂ ಶಾಸನಗಳಲ್ಲಿರುವ ಉಲ್ಲೇಖವನ್ನು ನೀಡಲಾಗಿದೆ.

ವರ್ತಕರ ಅಥವಾ ಸೆಟ್ಟಿಗಳ ಜೀವನದ ವಿವಿಧ ಮುಖಗಳ ಪರಿಚಯವನ್ನು ಈ ಮಹಾಪ್ರಬಂಧ ಒಳಗೊಂಡಿದೆ. ಸೆಟ್ಟಿಕುಲದ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ಜೀವನ, ಇವರು ಹೊಂದಿರುವ ವಿಶಿಷ್ಟ ಅಧಿಕಾರಗಳು ಕರ್ತವ್ಯಗಳನ್ನು ಹೇಳುವುದರೊಂದಿಗೆ ವಿವರಣೆ ನೀಡಲಾಗಿದೆ. ತುಂಬಾ ವಿರಳವಾಗಿ ದೊರೆತಿರುವ ಸೆಟ್ಟಿಕುಲದವರ ನ್ಯೂನತೆಗಳನ್ನೂ ಇಲ್ಲಿ ಚರ್ಚಿಸಲಾಗಿದೆ.

ವೈದಿಕ, ಜೈನ, ಶೈವ ಮತದ ವ್ಯಾಪಾರಿಗಳು ವೈಯಕ್ತಿಕವಾಗಿ, ಸಾಮೂಹಿಕವಾಗಿ ನಿರ್ವಹಿಸಿದ ಧಾರ್ಮಿಕ ಕಾರ್ಯಗಳಲ್ಲಿ ದೇವಸ್ಥಾನದ ನಿರ್ಮಾಣ ಮತ್ತು ಪ್ರತಿಷ್ಠಾಪನಾ ಕಾರ್ಯ ಪ್ರಧಾನವಾಗಿದೆ. ಇವುಗಳಲ್ಲಿ ವೈಯಕ್ತಿಕ ಧಾರ್ಮಿಕ ಕಾರ್ಯಗಳಿಗಿಂತ ಸಾಮೂಹಿಕ ಧಾರ್ಮಿಕ ಕಾರ್ಯಗಳ ಸಂಖ್ಯೆಯೇ ಅತ್ಯದಿಕ. ಇದರಿಂದ ಸೆಟ್ಟಿಕುಲದವರ ಧಾರ್ಮಿಕಾಸಕ್ತಿ, ಭಕ್ತಿಭಾವ, ತ್ಯಾಗಮೌಲ್ಯಗಳ ಚರ್ಚೆಯನ್ನು ನನ್ನ ಸಂಶೋಧನೆಯು ಒಳಗೊಂಡಿದೆ.

ಪ್ರತಿಯೊಂದು ಅಧ್ಯಾಯದಲ್ಲಿ ಪ್ರತಿಪಾದಿತವಾದ ವಿಷಯಗಳ ಸಾರಾಂಶ, ಅಲ್ಲಿ ಕಾಣುವ ವಿಶಿಷ್ಟ ಅಂಶಗಳು "ಸಮಾರೋಪ"ದಲ್ಲಿ ಬರುತ್ತವೆ. ಹೀಗೆ ಪ್ರಸ್ತುತ ಪ್ರಬಂಧವು ಆರು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಅಪರಿಚಿತ ಪದಗಳನ್ನು ಅರ್ಥೈಸುವಲ್ಲಿ,

ವಿವರಿಸುವಲ್ಲಿ, ನಿರ್ಣಯ ನೀಡುವಲ್ಲಿ ಶಾಸನದ ಪಾಠಸ್ಖಾಲಿತ್ಯ, ಪಾಠಲುಪ್ತೆಗಳಿಂದ ಅನೇಕ ತಪ್ಪುಗಳಾಗಿರಬಹುದು. ಶಾಸನಗಳಲ್ಲಿ ಕೆಲವೊಮ್ಮೆ ಅತಿಶಯೋಕ್ತಿ, ಪುನರುಕ್ತಿ, ಚರ್ವಿತ ಚರ್ವಣಗಳು ತುಂಬಿಕೊಂಡಿರಬಹುದು. ಈ ಎಲ್ಲಾ ಕೊರತೆಗಳನ್ನು, ಅಂಶಗಳನ್ನು ಅನುಲಕ್ಷಿಸಿ ವಿಷಯಗಳನ್ನು ವಿವೇಚಿಸಬೇಕಾಗುತ್ತದೆ. ಇದೇ ಮಾದರಿಯಲ್ಲಿಯೇ ಇಲ್ಲಿ ವಿವೇಚಿಸಲಾಗಿದೆ.

ಅಧ್ಯಯನದ ಆಕರಗಳು

ಸಾಹಿತ್ಯದಲ್ಲಿ ಸೆಟ್ಟಿಕುಲದ ಪ್ರಾತಿನಿಧ್ಯವನ್ನು ಕುರಿತು ಇದುವರೆಗೂ ನೇರವಾದ ಅಧ್ಯಯನಗಳು ನಡೆದಿಲ್ಲ. ಆದರೆ ಹಲವು ಅಧ್ಯಯನಗಳಲ್ಲಿ ಪ್ರಾಸಂಗಿಕವಾಗಿ ಈ ವಿಷಯ ಪ್ರಸ್ತಾಪಿತವಾಗಿದೆ. ಚರಿತ್ರೆಯನ್ನು ಆಕರವನ್ನಾಗಿಟ್ಟುಕೊಂಡು ರಚನೆಯಾದ ಸಾಹಿತ್ಯದ ಪಠ್ಯಗಳನ್ನೇ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈವರೆಗೆ ಪ್ರಕಟವಾಗಿರುವ ಲೇಖನಗಳು ಮತ್ತು ನಿಘಂಟುಗಳನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ. ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು, ಎಫಿಗ್ರಾಫಿಯ ಇಂಡಿಕಾ, ಎಫಿಗ್ರಾಫಿಯಾ ಕರ್ನಾಟಿಕಾ, ಸೌತ್ ಇಂಡಿಯನ್ ಇನ್ಸ್‌ಕ್ರಿಪಶನ್ಸ್ ಸಂಪುಟಗಳನ್ನು ಆಧಾರವನ್ನಾಗಿ ಬಳಸಿಕೊಂಡಿರುವೆನು.

ಡಾ.ಬಿ.ಆರ್.ಹಿರೇಮಠ ಅವರ "ಶಾಸನಗಳಲ್ಲಿ ಕರ್ನಾಟಕದ ವರ್ತಕರು" ಕೃತಿಯಲ್ಲಿ ಸೆಟ್ಟಿಕುಲದ ಹಿನ್ನೆಲೆ, ವಿವಿಧ ಸೆಟ್ಟಿಕುಲಗಳು, ಅವರಲ್ಲಿರುವ ಪಂಗಡಗಳು, ಸಾಮಾಜಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ ಸೆಟ್ಟಿಕುಲದ ಕೊಡುಗೆಗಳನ್ನು ತಿಳಿಸುವುದರೊಂದಿಗೆ ಸೆಟ್ಟಿ ಕುಲದ ಹಲವು ಅಂಶಗಳ ಅಧ್ಯಯನವು ಇದರಲ್ಲಿದೆ. ಸೆಟ್ಟಿಕುಲದ ಸುದೀರ್ಘ ಅಧ್ಯಯನವನ್ನು ಇದರಲ್ಲಿ ನಡೆಸಲಾಗಿದೆ.

ಎಸ್.ಅಲಂಪಲ್ಲಿ ವಿಷ್ಣುಭಾರತ್‌ರವರು ಬರೆದ 'ಆರ್ಯವೈಶ್ಯ'ಎನ್ನುವ ಕೃತಿಯಲ್ಲಿ ಸೆಟ್ಟಿಕುಲದ ವಿವಿಧ ನಾಮಧೇಯಗಳು, ವಿವಿಧ ರಾಜ್ಯಗಳಲ್ಲಿ ಸೆಟ್ಟಿಕುಲದವರನ್ನು ಕರೆಯುವ ನಾಮಾಂಕಿತಗಳು, ಪೂರ್ವೋತ್ತರ ಕಾಲದಿಂದಲೂ ಆಗಿ ಹೋದ ಸೆಟ್ಟಿಕುಲದ ಮಹಾನ್ ವ್ಯಕ್ತಿಗಳ ಚರಿತ್ರೆಯನ್ನು ಇದರಲ್ಲಿ ಬಿಂಬಿಸಲಾಗಿದೆ. ಇವರ ಕೃತಿಯಲ್ಲಿ ನಮ್ಮ ರಾಷ್ಟ್ರಪಿತ ಮಹಾತ್ಮಗಾಂಧೀಜಿ, ಸಾಮ್ರಾಟ್ ಅಶೋಕ, ಲಾಲಾಲಜಪತ್‌ರಾಯ್, ರಾಮಮನೋಹರ ಲೋಹಿಯಾ, ಶ್ರವಣಕುಮಾರ, ಚಂದ್ರಗುಪ್ತಮೌರ್ಯ, ಸಂತ ತುಕಾರಾಮ, ಮಹಾರಾಜ ಅಗ್ರಸೇನರಂಥ ಮಹನೀಯರು ಸೆಟ್ಟಿಕುಲದವರು ಎನ್ನುವ ಅಂಶವನ್ನು ಒತ್ತಿ ಹೇಳಿದೆ.

ಡಾ.ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ಎಂಬ

ಕೃತಿಯಲ್ಲಿ ಶಾಸನಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿರುವುದು ಸರ್ವವಿದಿತ. ಶಾಸನಗಳಿಂದ ನಮ್ಮ ಪೂರ್ವಿಕರ, ರಾಜರುಗಳ ಬಗ್ಗೆ ದೊರೆಯುವ ಅಂಶಗಳನ್ನು ಸಾಂಸ್ಕೃತಿಕ ದೃಷ್ಟಿಯ ಆಧಾರದಿಂದ ಪರಿಶೋಧಿಸಿ ಅಧ್ಯಯನ ನಡೆಸಿರುವರು. ಇದರಲ್ಲಿಯೂ ಪ್ರಾಸಂಗಿಕವಾಗಿ ಸೆಟ್ಟಿಕುಲದವರ ಮಹತ್ವವನ್ನು ಪ್ರಸ್ತಾಪಿಸಿದ್ದಾರೆ.

ಶ್ರೀ ರಾ.ಲ.ಪುರುಷೋತ್ತಮರ 'ಆಚಾರ–ವಿಚಾರ'ವು ಆರ್ಯವೈಶ್ಯ ಕುಲದವರ ನಡೆನುಡಿ, ಆಚಾರ–ವಿಚಾರಗಳನ್ನು ಸಮಗ್ರವಾಗಿ ಚರ್ಚಿಸಿದೆ. ಸೆಟ್ಟಿಕುಲದವರು ಶ್ರೀಮಂತರಾಗಿ ಬದುಕಿರುವುದಕ್ಕಿಂತ ಸಮಾಜವನ್ನೇ ಶ್ರೀಮಂತಗೊಳಿಸಿರುವರು ಎನ್ನುವ ಅಂಶವು ಅವರ ಆಚಾರ–ವಿಚಾರಗಳಿಂದ ಸಮಾಜಕ್ಕೆ ತಿಳಿಸಿರುವರು. ಮದುವೆ, ಹಬ್ಬ–ಹರಿದಿನ ಮುಂತಾದ ಸಂದರ್ಭಗಳಲ್ಲಿ ಸೆಟ್ಟಿಕುಲದವರು ಪಾಲಿಸಿಕೊಂಡು ಬಂದಿರುವ ಸಂಪ್ರದಾಯಗಳನ್ನು ಈ ಕೃತಿ ಒಳಗೊಂಡಿದೆ.

ಶ್ರೀಮತಿ ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ'ಎನ್ನುವ ಕೃತಿಯು ಶಾಸನಗಳಲ್ಲಿ ಮಹಿಳೆಯರ ಸ್ಥಾನಮಾನವನ್ನು ಕುರಿತು ಹೇಳಿರುವ ಗ್ರಂಥವಾಗಿದೆ. ಶಾಸನೋಕ್ತ ಕಾಲದಿಂದಲೂ ಮಹಿಳೆ ಪ್ರಥಮವಾಗಿ ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ, ಇದೊಂದು ಸೀಮಿತ ಕ್ಷೇತ್ರ. ಮಹಿಳೆಯರು ಈ ಸೀಮಿತ ಕ್ಷೇತ್ರವನ್ನು ಮೀರಿ ಜೀವನದಲ್ಲಿ ಸಾಧಿಸಿದ ಮಹಾನ್ ಕಾರ್ಯಗಳನ್ನು ಇದರಲ್ಲಿ ಚಿತ್ರಿಸಿರುವರು. ಪ್ರಭುವರ್ಗದ ಮಹಿಳೆಯರು ರಾಜನೊಂದಿಗೆ ಸ್ವತಂತ್ರ ಆಡಳಿತ ನಡೆಸುವಲ್ಲಿ, ಯುದ್ಧ ಮತ್ತು ವೀರಮರಣದಂತಹ ಸಾಹಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ತಮ್ಮ ಅಗ್ಗಳಿಕೆಯನ್ನು ಮೆರೆದುದುಂಟು. ಈ ಕೃತಿಯಲ್ಲಿ ಶಾಸನಗಳಲ್ಲಿನ ಸ್ತ್ರೀ ಸಮಾಜದ ಬಗ್ಗೆ ವರ್ಣಿಸುವಾಗ ಪ್ರಾಸಂಗಿಕವಾಗಿ ಅನೇಕ ಸೆಟ್ಟಿಕುಲದ ಮಹಿಳೆಯರ ಬಗ್ಗೆ, ಅಧಿಕಾರಿಗಳ ಪತ್ನಿಯರು, ಗ್ರಾಮದ ಮುಖಂಡರ ಸ್ತ್ರೀವರ್ಗದವರನ್ನು ಚರ್ಚಿಸಿರುವರು.

ಡಾ.ಡಿ.ವಿ.ಪರಮಶಿವಮೂರ್ತಿ ಅವರ 'ಕೃಷ್ಣದೇವರಾಯನ ಶಾಸನಗಳು' ಕೃತಿಯಲ್ಲಿ ಕೃಷ್ಣದೇವರಾಯನ ಕಾಲದಲ್ಲಿನ ಶಾಸನಗಳ ಸಮಗ್ರ ಸಮೀಕ್ಷೆಯಿದೆ. ಇವರ ಆಡಳಿತಾವಧಿಯಲ್ಲಿ ಜರುಗಿದ ಸಮಾಜಕ್ಕೆ ಹಿತಕಾರಿಯಾಗುವ ಕಾರ್ಯಗಳನ್ನು ಶಾಸನ ಆಧಾರದಿಂದ ನೀಡಿರುವ ಅನೇಕ ಉಲ್ಲೇಖಗಳಿವೆ. ಈ ಶಾಸನಗಳಲ್ಲಿ ಸೆಟ್ಟಿಕುಲದವರು ಸಲ್ಲಿಸಿರುವ ಸೇವೆಯೂ ಒಳಗೊಂಡಿದೆ. ಇದೇ ಲೇಖಕರ 'ಪ್ರೌಢದೇವರಾಯನ ಶಾಸನಗಳು'ಕೃತಿಯಲ್ಲೂ ಪ್ರೌಢದೇವರಾಯನ ಅವಧಿಯಲ್ಲಿ ಶಾಸನಗಳಲ್ಲಿ ಕಂಡುಬರುವ ಸೆಟ್ಟಿವರ್ಗದ ಬಗ್ಗೆ ಅನೇಕ ವಿವರಗಳಿವೆ.

ಡಾ.ದೇವರಕೊಂಡಾರೆಡ್ಡಿಯವರ 'ಹಂಪಿ ಸಂಪುಟ: ಕಲೆ, ಕ್ರೀಡೆ ಮತ್ತು ಕೌಶಲ' ಕೃತಿಯಲ್ಲಿ ವಿಜಯನಗರ ಆಡಳಿತಾವಧಿಯಲ್ಲಿನ ವಿವಿಧ ಕಲೆ, ಸಾಹಿತ್ಯ ವಿಚಾರಗಳನ್ನು ಐತಿಹಾಸಿಕ ವಿಧಾನದ ಮೂಲಕ ಚರ್ಚಿಸಿರುವರು. ಇದರಲ್ಲಿಯೂ ಕೆಲವು ಸೆಟ್ಟಿಗಳ ವಿವರವಿದೆ.

ನಾಡು-ನುಡಿಯ ಕುರಿತ 'ಕರ್ನಾಟಕ ಇತಿಹಾಸ ದರ್ಶನ'ದಲ್ಲಿ ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟರು ಅನೇಕ ಸಾಂಸ್ಕೃತಿಕ ವಿಚಾರಗಳನ್ನು ಚರ್ಚಿಸಿದ್ದಾರೆ. ಇವರು ವಿವಿಧ ಕಾಲಘಟ್ಟ ಗಳಲ್ಲಿ ಕರ್ನಾಟಕದ ವಿಕಾಸದ ಕುರಿತಾಗಿ ಇತಿಹಾಸವನ್ನು ಮುಂದಿಟ್ಟಿರುವರು. ಐತಿಹಾಸಿಕ ವಸ್ತುವನ್ನು ವಿವಿಧ ಹಿನ್ನೆಲೆಗಳಲ್ಲಿ ಅಭಿವ್ಯಕ್ತಗೊಳಿಸಿರುವರು. ಈ ಕೃತಿಯಲ್ಲಿಯೂ ಸೆಟ್ಟಿಕುಲದ ಅಧಿಕಾರಿಗಳು, ವ್ಯಾಪಾರಿಗಳು ಅವರ ಕಾರ್ಯಗಳನ್ನು ಚರ್ಚಿಸಿದ್ದಾರೆ.

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ ಮತ್ತು ಮಠಗಳಿಗೆ ನಿಕಟವಾದ ಸಂಬಂಧವಿತ್ತು. ಸಾಮಾನ್ಯವಾಗಿ ದೇವಾಲಯವೇ ಮುಖ್ಯವಾಗಿದ್ದು, ಮಠ ಅದರ ಅಂಗವಾಗಿತ್ತು. ಮಠಗಳು ಶೈವ ಗುರುಗಳ ಪ್ರಸಿದ್ಧ ಕೇಂದ್ರವಾಗಿದ್ದವು. ಪ್ರಾಚೀನ ಕಾಲದ ಬೌದ್ಧ ವಿಹಾರಗಳು ಹಾಗೂ ಜೈನ ಬಸದಿಗಳು ಇಂದಿನ ಮಠಗಳ ಸ್ವರೂಪವನ್ನೇ ಹೊಂದಿದ್ದವು. ಮೂಲತಃ ಮಠಗಳು ಮುನಿಗಳ ವಾಸಸ್ಥಾನ. ಇಂತಹ ಮಠಗಳಿಗೆ ಸೆಟ್ಟಿ ಕುಲದವರು ಸಲ್ಲಿಸಿರುವ ದಾನಧರ್ಮಗಳನ್ನು ಡಾ.ಬಿ.ಸಿ.ವೀರಪ್ಪ ಅವರ 'ಬೆಂಗಳೂರು ನಗರದ ವೀರಶೈವ ಮಠಗಳು: ಒಂದು ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಚರ್ಚಿಸಲಾಗಿದೆ.

ಕರ್ನಾಟಕದಾದ್ಯಂತ ನೂರಾರು ಬಸದಿಗಳು ಕಂಡುಬರುತ್ತವೆ. ಇವು ಜೈನರ ಭಕ್ತಿ ಭಾವದ ಪ್ರತೀಕವಾಗಿವೆ. ಜೈನರ ಬಸದಿಗಳು ವಾಸ್ತು ಮತ್ತು ಮೂರ್ತಿಶಿಲ್ಪವಲ್ಲದೇ ದೇವಾಲಯಗಳ ನಿರ್ಮಾಣದಲ್ಲಿ ಬಳಸಿಕೊಂಡಿರುವ ಕಲೆ, ವಿಶಿಷ್ಟ ಸಂಪ್ರದಾಯಗಳನ್ನು ಡಾ.ಕೆ.ಜಿ.ಭಟ್‌ಸೂರಿ ಅವರ 'ಗೇರುಸೊಪ್ಪೆಯ ಜೈನವಾಸ್ತು ಮತ್ತು ಮೂರ್ತಿಶಿಲ್ಪ' ಕೃತಿಯಲ್ಲಿ ಅಧ್ಯಯನ ಮಾಡಲಾಗಿದೆ. ಇಲ್ಲಿಯೂ ಕೆಲವು ಸೆಟ್ಟಿಕುಲದವರ ದಾನವನ್ನು ಕುರಿತು ಚರ್ಚಿಸಿದೆ.

ಶ್ರೀ ಗುರುಮೂರ್ತಿ ಪೆಂಡಕೂರ ಅವರು ತಮ್ಮ 'ಅನೇಕಮುಖಿ' ಕೃತಿಯಲ್ಲಿ ವೈಶ್ಯ ಕುಲದೇವತೆ ಶ್ರೀ ಕನ್ನಿಕಾಪರಮೇಶ್ವರಿಯ ಮಹೋನ್ನತೆಯ ಬಗ್ಗೆ ಪೆನುಗೊಂಡ ಪಟ್ಟಣ, ಕೋಮಟಿಗರ ಬಗ್ಗೆ ವಿಶದವಾಗಿ ಅರ್ಥೈಸಿರುವರು. ಶ್ರೀ ಕುಸುವ ಶ್ರೇಷ್ಠಿ ಕುಸುಮಾಂಬೆಯರ ಗರ್ಭಾಂಬುಧಿಯಲ್ಲಿ ಪುತ್ರಕಾಮೇಷ್ಠಿ ಯಜ್ಞದ ಫಲವಾಗಿ ಜಗನ್ಮಾತೆ ಶ್ರೀ ವಾಸವಿಯು ಅವತರಿಸಿದಳು ಎಂಬ ನಂಬಿಕೆಯಿದೆ.

ಮಹಾರಾಜನ ಮೋಹವನ್ನು ಖಂಡಿಸಿ, ಪರಮ ಪುಣ್ಯವಂತರಾದ ೧೦೨ ವೈಶ್ಯದಂಪತಿಗಳು ಜೊತೆಯಲ್ಲಿ ತಾನು ಅಗ್ನಿಕುಂಡದಲ್ಲಿ ಪ್ರವೇಶಿಸಿ ಆತ್ಮಾರ್ಪಣೆ ಮಾಡಿಕೊಂಡಿರುವ ವಿಚಾರವು ಈ ಕೃತಿಯಲ್ಲಿದೆ.

ವೈಶ್ಯರ ಆಚಾರ-ವಿಚಾರ, ಕುಲಗೋತ್ರಗಳು, ಸಂಪ್ರದಾಯಗಳು, ವಿಧಿವಿಧಾನಗಳನ್ನು ಒಳಗೊಂಡಿರುವ ಎನ್.ಜಿ.ವೆಂಕಟಕೃಷ್ಣಯ್ಯ ಶ್ರೇಷ್ಠಿಯವರ 'ಆರ್ಯ ವೈಶ್ಯ ಮಾರ್ಗದರ್ಶಿ' ಕೃತಿಯು ಗಮನ ಸೆಳೆಯುತ್ತದೆ. ವೈಶ್ಯರದು ಪಶುಪಾಲನೆ, ವ್ಯಾಪಾರ, ವ್ಯವಸಾಯ ವೃತ್ತಿಯಾಗಿದೆ, ವೃತ್ತಿಪರವಾಗಿ ಗುರುತಿಸಲ್ಪಟ್ಟ ವೈಶ್ಯಕುಲವು ವ್ಯಾಪಾರದಲ್ಲಿ ಮಾತ್ರವಲ್ಲದೇ, ಸಮಾಜದ ಕಲ್ಯಾಣಕ್ಕೂ ಶ್ರಮಿಸಿದೆ ಎಂಬ ಅಂಶವನ್ನು ಇಲ್ಲಿ ಚರ್ಚಿಸಲಾಗಿದೆ.

ಡಾ.ಸಿ.ಎಸ್.ವಾಸುದೇವನ್‌ರವರ 'ಕನ್ನಡ ಇನ್‌ಸ್ಕ್ರಿಪ್‌ಶನ್ಸ್ ಆಫ್ ಆಂಧ್ರಪ್ರದೇಶ'ಎನ್ನುವ ಸೂಚಿ ಕೃತಿಯಲ್ಲಿ ಶಾಸನಗಳಲ್ಲಿ ವ್ಯಕ್ತವಾದ ಮಹತ್ತರ ಅಂಶಗಳನ್ನು ನೀಡಿದ್ದಾರೆ. ಆಂಧ್ರಪ್ರದೇಶದಲ್ಲಿ ದೊರೆತಿರುವ ಕನ್ನಡ ಶಾಸನಗಳ ಅಧ್ಯಯನವನ್ನು ಇದರಲ್ಲಿ ಕೂಲಂಕಷವಾಗಿ ಚರ್ಚಿಸಿರುವರು. ಈ ಸೂಚಿಯಲ್ಲಿ ಅನೇಕ ಸೆಟ್ಟಿಕುಲದ ವಿವರಗಳಿವೆ.

ಹಂಪೆಯ ಕಲೆ, ಸಂಸ್ಕೃತಿಯನ್ನು ಮತ್ತು ಕನ್ನಡ ನಾಡು-ನುಡಿಗಳಿಗೆ ಸಂಬಂಧಿಸಿದ ಮಹತ್ತರವಾದ ಅಧ್ಯಯನವನ್ನು ಡಾ.ಪಿ.ಬಿ.ದೇಸಾಯಿಯವರು ತಮ್ಮ 'ಹಂಪೆ' ಎನ್ನುವ ಕಿರು ಕೃತಿಯಲ್ಲಿ ಅಧ್ಯಯನ ಮಾಡಿದ್ದಾರೆ.

ಡಾ.ಬಿ.ನಂಜುಂಡಸ್ವಾಮಿಯವರ 'ಶಿವಗಂಗಾಕ್ಷೇತ್ರ ಹಾಗೂ ವೀರಶೈವ ಮಠಗಳು'ಕೃತಿಯು ವೀರಶೈವ ಮಠಗಳ ಸ್ಥಾಪನೆ, ಉದ್ದೇಶ, ಮಠಗಳಿಂದಾಗುತ್ತಿರುವ ಧರ್ಮಕಾರ್ಯಗಳು, ಮಠಗಳಿಂದ ವಿದ್ಯಾಭ್ಯಾಸಕ್ಕೆ ದೊರೆಯುತ್ತಿರುವ ಪ್ರೋತ್ಸಾಹ, ಗುರುಕುಲಗಳ ಬಗ್ಗೆ ತಿಳಿಸುತ್ತದೆ. ಇದರಲ್ಲಿ ಸೆಟ್ಟಿಕುಲದವರ ದಾನ-ಧರ್ಮಗಳ ಬಗ್ಗೆಯೂ ಹೇಳಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಹಾಕಿಸಿದಂತಹ ಶಾಸನಗಳು, ಇವುಗಳಲ್ಲಿ ಸೆಟ್ಟಿ ಕುಲದವರನ್ನು ಒಳಗೊಂಡ ಶಾಸನಗಳು, ಸಂಪಾದಕರಾದ ಸಿ.ಎಸ್.ಪಾಟೀಲರ 'ವಿಜಯನಗರದ ಶಾಸನಗಳು, ಕರ್ನಾಟಕದ ಶಾಸನಗಳು, ಸಂಪುಟ ೧'ರಲ್ಲಿ ಒಳಗೊಂಡಿದೆ. ಇದರಲ್ಲಿ ಸೆಟ್ಟಿಕುಲದ ಅನೇಕ ಶಾಸನಗಳನ್ನು ನೀಡಿದ್ದಾರೆ.

ಡಾ.ಚನ್ನಬಸವ ಹಿರೇಮಠರ 'ರಾಯಚೂರು, ಕೊಪ್ಪಳ ಜಿಲ್ಲೆಯ ಶಾಸನಗಳು'ಕೃತಿಯಲ್ಲಿ

ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಾರೋದ್ಯಮವನ್ನು ಬೆಳೆಸುವಲ್ಲಿ ಅವಿರತವಾಗಿ ದುಡಿದ ಸೆಟ್ಟಿಕುಲದ ಕೆಲವೊಂದು ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳನ್ನು ಹಾಗೂ ಹೊಣೆಗಾರಿಕೆಯನ್ನು ಪರಿಪಾಲಿಸುತ್ತಾ ಬಂದಿರುವರು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಶಾಸನಗಳಲ್ಲಿರುವ ನಮ್ಮ ನಾಡಿನ ಸಾಹಿತ್ಯ, ಸಂಸ್ಕೃತಿಯ ಅಂಶಗಳನ್ನು ಹೆಕ್ಕಿ ತೆಗೆದು ಇಂದಿನ ಪೀಳಿಗೆಗೆ ಅರಿವಾಗುವಂತೆ ನೀಡಿರುವ ಡಾ.ಸಿ.ನಾಭೂಷಣ ಅವರ 'ಸಾಹಿತ್ಯ, ಸಂಸ್ಕೃತಿ ಹುಡುಕಾಟ' ಕೃತಿಯು ಸೆಟ್ಟಿಕುಲದ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸುತ್ತದೆ.

ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳ 'ಹಳೆಯ ಹೊನ್ನು', ಆರ್.ಶೇಷಾಶಾಸ್ತ್ರಿಯವರ 'ಶಾಸನ ಪರಿಚಯ', ಮೇವುಂಡಿ ಮಲ್ಲಾರಿಯವರ 'ಕನ್ನಡ ಶಾಸನ ಕವಿಗಳು, ಡಾ.ದಸ್ತಗೀರ್‌ಸಾಬ್ ದಿನ್ನಿಯವರ 'ಸಂಸ್ಕೃತಿ ಮಹಿಳಾ ಮಾಲಿಕೆ, ಡಾ.ಎಂ.ಎಸ್.ನರೇಗಲ್‌ರ 'ಉತ್ತರ ಗದಗ ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ', ಬಸವರಾಜಸ್ವಾಮಿಯವರ 'ಬೆಳಕಿನ ಬಳ್ಳಿ', ಡಾ.ಜೆ.ಎಂ. ನಾಗಯ್ಯನವರ 'ಆರನೆಯ ವಿಕ್ರಮಾದಿತ್ಯನ ಶಾಸನಗಳು, ಜಿ.ಎಂ.ಜಯವೀರನಾಥರ 'ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆ', ಡಾ.ಸರಸ್ವತೀದೇವಿ ಎಸ್.ಭಗವಂತ ಇವರ 'ಹಂಪೆಯ ಶಾಸನಗಳು: ಒಂದು ಅಧ್ಯಯನ' ಇನ್ನೂ ಮುಂತಾದ ಕೃತಿಗಳು ಸೆಟ್ಟಿ ಕುಲದವರನ್ನು ಪ್ರಾಸಂಗಿಕವಾಗಿ ಚರ್ಚಿಸಿರುವರು.

ಇಷ್ಟೆಲ್ಲ ಅಧ್ಯಯನ ನಡೆದಿದ್ದರೂ ದೊರಕುವ ಎಲ್ಲ ಆಕರಗಳನ್ನು ಬಳಸಿಕೊಂಡು ಸೆಟ್ಟಿಕುಲದವರ ಸಾಮಾಜಿಕ ಕೊಡುಗೆಯ ಬಗ್ಗೆ ಯಾರೂ ಚರ್ಚಿಸಿರಲಿಲ್ಲ. ಈ ಕೊರತೆಯನ್ನು ಮನಗಂಡು ಅದೇ ಜನಾಂಗದವಳಾದ ನಾನು ಶಾಸನಗಳು, ಕಾವ್ಯಗಳು, ಐತಿಹ್ಯಗಳು ಮೊದಲಾದ ಆಕರಗಳನ್ನು ಬಳಸಿ ಸೆಟ್ಟಿಕುಲದವರ ಚರಿತ್ರೆಯನ್ನು ಪುನಾರಚಿಸಲು ಈ ಮಹಾಪ್ರಬಂಧದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಶಾಸನಗಳ ವಿಪುಲ ಸಂಖ್ಯೆ ಮತ್ತು ವಿಸ್ತಾರ ಕಾಲವನ್ನು ಗಮನಿಸಿ ಒಂದು ಮಿತಿಗೆ ಒಳಪಟ್ಟಂತೆ ವಿಷಯವನ್ನು ಆಯ್ದುಕೊಳ್ಳಲಾಗಿದೆ. ಪ್ರಾಚೀನ ಕಾಲ ದಿಂದಲೂ ಸೆಟ್ಟಿಕುಲದ ಬಗ್ಗೆ ಅನೇಕ ಆಕರಗಳು ದೊರೆಯುತ್ತವೆ. ಅದರಲ್ಲೂ ಶಾಸನಗಳಲ್ಲಿ ಹೆಚ್ಚಾಗಿ ದೊರೆಯುತ್ತದೆ. ವಿಷಯದ ವಿಸ್ತಾರದ ಭಯದಿಂದ ನನ್ನ ಅಧ್ಯಯನವನ್ನು ವಿಜಯನಗರದ ಶಾಸನಗಳನ್ನು ಮಾತ್ರ ಪರಿಗಣಿಸಿ ಕೈಗೊಂಡಿದ್ದೇನೆ.

ಇವರ ಅವಧಿಯಲ್ಲೇ ಸುಮಾರು ೫೦೦ ಶಾಸನಗಳು ಸೆಟ್ಟಿಕುಲದ ಬಗ್ಗೆ ಮಾಹಿತಿ ನೀಡುತ್ತವೆ.

ಅಲ್ಲದೆ ದಕ್ಷಿಣ ಭಾರತದಾದ್ಯಂತ ಈ ಶಾಸನಗಳು ಹರಡಿವೆ. ಅಲ್ಲದೆ ನಾಲ್ಕು ವಂಶಗಳು ವಿಜಯನಗರವನ್ನು ಆಳಿದ್ದರಿಂದ ಅವರ ಕಾಲದ ಆರ್ಥಿಕ, ಸಾಮಾಜಿಕ ರೀತಿಗಳು ಸಾಮಾನ್ಯ ಜನರ ಮೇಲೆ ಪ್ರಭಾವ ಬೀರಿವೆ. ಸಹಜವಾಗಿಯೇ ಈ ಅಂಶ ಸೆಟ್ಟಿಗಳ ಮೇಲೂ ಪ್ರಭಾವ ಬೀರಿವೆ. ನನ್ನ ಅಧ್ಯಯನದಲ್ಲಿ ಹೀಗೆ ಭಿನ್ನ ಅರಸರು, ಭಿನ್ನ ಪ್ರದೇಶ, ಭಿನ್ನ ಧರ್ಮದ ಸೆಟ್ಟಿಗಳಿಗೆ ಸಂಬಂಧಿಸಿದ ಆಕರಗಳನ್ನು ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ. ಇದರಿಂದಾಗಿ ದಕ್ಷಿಣ ಭಾರತದಾದ್ಯಂತ ಇರುವ ಸೆಟ್ಟಿಕುಲದವರ ಏರುಪೇರು, ಸಾಮಾಜಿಕ ಅವಸ್ಥೆಗಳನ್ನು, ಅವರ ಕೊಡುಗೆಗಳನ್ನು, ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಲು ಸಹಕಾರಿಯಾಗಿದೆ.

ಅಧ್ಯಾಯ ಎರಡು

ಚಾರಿತ್ರಿಕ ವಿವೇಚನೆ

೨.೧. ಸೆಟ್ಟಿ ಅರ್ಥ, ಬೆಳವಣಿಗೆ

೨.೨. ವಿವಿಧ ಸೆಟ್ಟಿ ಕುಲಗಳು

೨.೨.೧. ಜೈನ

೨.೨.೨. ವೀರಶೈವ(ಬಣಜಿಗ–ನಕರರು)

೨.೨.೩. ವೈಶ್ಯಕುಲ

ಅಧ್ಯಾಯ ಎರಡು

ಚಾರಿತ್ರಿಕ ವಿವೇಚನೆ

ನಮ್ಮ ಸುತ್ತಮುತ್ತಲಿನ ಪರಿಸರದತ್ತ ಅವಲೋಕಿಸಿದಾಗ ಅನೇಕ ವಸ್ತುಗಳು ಗೋಚರಿಸುತ್ತವೆ. ಆ ಎಲ್ಲಾ ವಸ್ತುಗಳು ಒಂದೇ ತೆರನಾಗಿರದೆ, ವೈವಿಧ್ಯಮಯವಾಗಿವೆ. ಅಷ್ಟೇ ಅಲ್ಲದೇ ಒಂದು ನಿರ್ದಿಷ್ಟ ವಸ್ತುವಿನ ರಚನೆಯಲ್ಲಿ ಹಲವಾರು ಸ್ತರಗಳನ್ನೂ ಸಹ ಕಾಣಬಹುದು. ಇದೇ ರೀತಿಯಲ್ಲಿ ಮಾನವ ಸೃಷ್ಟಿಯಾದ "ಸಮಾಜ" ಕೂಡ ವೈವಿಧ್ಯಮಯವಾಗಿದೆ. ಮಾನವ ಸಮಾಜದ ಅಸ್ತಿತ್ವಕ್ಕೆ ಸಾಮ್ಯತೆಯಷ್ಟೇ ವೈವಿಧ್ಯತೆಯೂ ಕೂಡ ಮಹತ್ವದ್ದಾಗಿದೆ. ವೈವಿಧ್ಯತೆ ಇಲ್ಲದ ಸಮಾಜ ನಿರಾಶಾದಾಯಕವಾಗುವುದರಲ್ಲಿ ಸಂಶಯವಿಲ್ಲ, ವೈವಿಧ್ಯತೆ ಇಲ್ಲದ ಸಮಾಜವನ್ನು ಕಲ್ಪನೆ ಮಾಡಿಕೊಳ್ಳಲೂ ಕೂಡ ಸಾಧ್ಯವಿಲ್ಲ. ಸಮಾಜದಲ್ಲಿ ವ್ಯಕ್ತಿ ನಿರ್ವಹಿಸುವ ಪಾತ್ರಗಳ ಆಧಾರದ ಮೇಲೆ ಶ್ರೇಷ್ಠ-ಕನಿಷ್ಠ, ಉಚ್ಚ-ನೀಚ, ಮೇಲು-ಕೀಳು ಎಂದು ವಿಭಾಗಿಸಲಾಗಿದೆ. ಹೀಗೆ ಜನರನ್ನು ವಿವಿಧ ಸ್ತರಗಳನ್ನಾಗಿ

ವಿಭಾಗಿಸುವುದಕ್ಕೆ 'ಸಾಮಾಜಿಕ ಸ್ತರವಿನ್ಯಾಸ' ಎಂದು ಕರೆಯಲಾಗುವುದು. ಕಿಂಗ್ಸರೇ ಡೇವಿಸ್ ಅವರು "ಸಾಮಾಜಿಕ ಸ್ತರವಿನ್ಯಾಸ ಹೊಂದದ ಸಮಾಜ ಕಾಣುವುದು ಅತೀ ದುರ್ಲಭ" ಎಂದು ಅಭಿಪ್ರಾಯಪಟ್ಟಿರುವರು. ವರ್ಣ, ಜಾತಿ ಮತ್ತು ವರ್ಗಗಳು ಸಾಮಾಜಿಕ ಸ್ತರವಿನ್ಯಾಸದ ಮುಖ್ಯ ರೂಪಗಳಾಗಿವೆ. ಪ್ರಾಚೀನ ಭಾರತದಲ್ಲಿ 'ವರ್ಣಪದ್ಧತಿ' ಆಧುನೀಕೃತ ಹಾಗೂ ಕೈಗಾರಿಕೀಕೃತಗೊಂಡ ಸಮಾಜದಲ್ಲಿ 'ವರ್ಗ ವ್ಯವಸ್ಥೆ' ಕಾಣಬಹುದಾಗಿದೆ. ಆದರೆ 'ಜಾತಿವ್ಯವಸ್ಥೆ' ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಮೈಗೂಡಿಸಿಕೊಂಡು ಭಾರತದಲ್ಲಿ ಮಾತ್ರ ಇಂದಿಗೂ ಅಸ್ತಿತ್ವದಲ್ಲಿದೆ. ಭಾರತೀಯ ಸಮಾಜವೆಂಬ ನೇಯ್ಗೆಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳದ ಹೊರತು ಭಾರತೀಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಾರದು.

ಸಾವಿರಾರು ವರ್ಷಗಳವರೆಗೆ ವಿದೇಶಿಯರ ದಾಸ್ಯಕ್ಕೆ ಭಾರತವು ಒಳಗಾಗಿದೆ. ಇದರ ಮೇಲೆ ಹಲವಾರು ಪಾಶ್ಚಿಮಾತ್ಯ ಸಂಸ್ಕೃತಿಗಳು ಆಕ್ರಮಣ ಮಾಡಿವೆ. ಆದರೂ ಸಹ 'ಜಾತಿ ವ್ಯವಸ್ಥೆ' ಅಂದಿನಿಂದ ಇಂದಿನವರೆಗೂ ತನ್ನ ಅಸ್ತಿತ್ವ ಕಾಯ್ದುಕೊಂಡು ಬಂದಿದೆ. ಮಹಾವೀರ, ಗೌತಮಬುದ್ಧ, ಬಸವೇಶ್ವರ, ರಾಜಾರಾಮ ಮೋಹನರಾಯ, ಡಾ.ಅಂಬೇಡ್ಕರ್, ಮೊದಲಾದ ಅನೇಕ ಮಹಾನುಭಾವರು 'ಜಾತಿಪದ್ಧತಿ'ಯನ್ನು ತೊಡೆದು ಹಾಕಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ವಿಶೇಷವೆಂದರೆ, ಇದನ್ನು ತೊಡೆದು ಹಾಕುವ ಉದ್ದೇಶದಿಂದ ಪ್ರಾರಂಭವಾದ ಆಂದೋಲನ ಹಾಗೂ ಸಂಸ್ಥೆಗಳು ಹೊಸ ಹೊಸ ಜಾತಿಗಳ ಉದಯಕ್ಕೆ ಕಾರಣವಾಗಿವೆ. ಇದರಿಂದ ಭಾರತೀಯ ಸಮಾಜದಲ್ಲಿ ಜಾತಿಪದ್ಧತಿಯ ಬೇರುಗಳು ಮತ್ತಷ್ಟು ಆಳಕ್ಕೆ ಪಸರಿಸಲು ಅನುಕೂಲವಾಗಿವೆ.

'ಜಾತಿ' ಎಂಬ ಪದವು ಆಂಗ್ಲಭಾಷೆಯ "ಕಾಸ್ಟ್"(caste) ಎಂಬ ಪದದ ಅನುವಾದವಾಗಿದೆ. 'ಕಾಸ್ಟ್' ಎಂಬ ಆಂಗ್ಲ ಪದವು 'ಕಾಸ್ಟಾ'(Casta) ಎಂಬ "ಪೋರ್ಚುಗೀಸ್" ಭಾಷೆಯ ಪದದಿಂದ ಉಗಮವಾಗಿದೆ. ಸ್ಪ್ಯಾನಿಷ್ ಬಾಷೆಯಲ್ಲಿ "ಜನಾಂಗ"(Race) "ಉತ್ಪತ್ತಿಯ ತಳಿ"(breed) "ಅನುವಂಶೀಯತೆ"(bredity) ಇತ್ಯಾದಿ ಅರ್ಥವನ್ನು ಹೊಂದಿದೆ. ಜಾತಿ ಎಂಬ ಪದಕ್ಕೆ ಸಂಸ್ಕೃತ ಭಾಷೆಯಲ್ಲಿ 'ವರ್ಣ' ಎಂಬ ಪರ್ಯಾಯ ಪದವಿದೆ. ಸಂಸ್ಕೃತ ಭಾಷೆಯಲ್ಲಿ 'ವರ್ಣ' ಎಂದರೆ 'ಬಣ್ಣ' ಅಂದರೆ ಭಾರತೀಯ ಜಾತಿ ಪದ್ಧತಿಯು ಜನಾಂಗ, ಬಣ್ಣ, ಶ್ರಮವಿಭಜನೆ ಹಾಗೂ ಉದ್ಯೋಗ ಮೊದಲಾದವುಗಳ ಆಧಾರ ಹೊಂದಿದೆಯೆಂಬ ಅರ್ಥ ಪಡೆದುಕೊಂಡಿದೆ. ಸಿ.ಎಚ್.ಕೂಲೇ "ವರ್ಗವು ಸ್ವಲ್ಪ ಮಟ್ಟಿಗೆ ಕಟ್ಟುನಿಟ್ಟಾಗಿ

ಅನುವಂಶೀಯವಾದರೆ ಅದನ್ನು ಜಾತಿ ಎಂದು ಕರೆಯಬಹುದಾಗಿದೆ" ಎಂದಿರುವರು. ಡಾ.ಎಸ್.ಮಜುಂದಾರ್ ಮತ್ತು ಟಿ.ಎನ್.ಮದನ್ "ಜಾತಿ ಒಂದು ನಿರ್ಬಂಧಿತ ಸಮೂಹವಾಗಿದೆ" ಎಂದಿರುವರು. ವರ್ಣಾಶ್ರಮ ಪದ್ಧತಿಯ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವಿಭಾಗಗಳಿವೆ. ಬ್ರಾಹ್ಮಣರದು ವೇದಾಧ್ಯಯನ, ಪೂಜೆಪುನಸ್ಕಾರ ಮಾಡುವುದು ಉದ್ಯೋಗವಾಗಿತ್ತು. ಕ್ಷತ್ರಿಯರು ದೇಶರಕ್ಷಣೆ ಮಾಡುವ ಕೆಲಸ ಹಾಗೆಯೇ ವೈಶ್ಯರು ವ್ಯಾಪಾರ, ಕೊನೆಯ ವರ್ಗವಾದ ಶೂದ್ರರು ಮೊದಲಿನ ಮೂರು ವರ್ಗಗಳ ಸೇವೆ ಮಾಡುವುದಾಗಿತ್ತು. ಬರುಬರುತ್ತಾ ಈ ಜಾತಿಗಳು ಅನೇಕ ಉಪಜಾತಿಗಳಾಗಿ ಪರಿವರ್ತನೆಗೊಂಡವು.

೨.೧. ಸೆಟ್ಟಿ: ಅರ್ಥ–ಬೆಳವಣಿಗೆ

ಚಾತುರ್ವರ್ಣ ಪದ್ಧತಿಯಲ್ಲಿ ವ್ಯಕ್ತಿಯ ಹೆಸರನ್ನು ಕೇಳಿದರೇ ಸಾಕು ಆತ ಯಾವ ವರ್ಣದವನೆಂದು ಸುಲಭವಾಗಿ ತಿಳಿಯಲೋಸುಗವಾಗಿ ನಮ್ಮ ಪುರಾತನರು ಬ್ರಾಹ್ಮಣರಿಗೆ 'ಶರ್ಮ' ಎಂತಲೂ, ಕ್ಷತ್ರಿಯರಿಗೆ 'ವರ್ಮ' ಎಂತಲೂ, ವೈಶ್ಯರಿಗೆ 'ಶ್ರೇಷ್ಠಿ' ಎಂತಲೂ ಮತ್ತು ಶೂದ್ರರಿಗೆ 'ದಾಸ' ಎಂತಲೂ ಅವರವರ ಹೆಸರಿನ ಕೊನೆಯಲ್ಲಿ ವರ್ಣಸೂಚಕ ಪದವನ್ನು ಸೇರಿಸಿ ಬಳಕೆಯಲ್ಲಿ ತಂದರು. ಸನಾತನ ಧರ್ಮ ಅಥವಾ ಹಿಂದೂ ಧರ್ಮದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೂರನೇ ವರ್ಣವೇ ಆರ್ಯವೈಶ್ಯ ಜನಾಂಗ. ಪುರುಷಸೂಕ್ತದ ಪ್ರಕಾರ ಆರ್ಯವೈಶ್ಯರು ಶ್ರೀಮನ್ನಾರಾಯಣನ ತೊಡೆಯಿಂದ ಜನಿಸಿದರು. ಶೆಟ್ಟಿ ಎನ್ನುವ ಪದವು ಆರ್ಯವೈಶ್ಯರಿಗಷ್ಟೇ ಅಲ್ಲ, ವೀರಶೈವ ಶೆಟ್ಟಿ, ಜೈನಶೆಟ್ಟಿಗಳು, ದೇವಾಂಗದವರಲ್ಲೂ ಶೆಟ್ಟಿಗಳಿದ್ದಾರೆ. ಇದನ್ನು ನೋಡಿದರೆ ನಮ್ಮ ಸಮಾಜದಲ್ಲಿ ಈ ಶೆಟ್ಟಿ ಪದವು ಒಂದು ಜಾತಿಗಷ್ಟೇ ಸೀಮಿತವಾಗಿರದೆ, ವ್ಯಾಪಾರ ಮಾಡುವವರನ್ನು ಶೆಟ್ಟಿ, ಸೆಟ್ಟಿ ಎಂದು ಕರೆಯುತ್ತಿದ್ದರೆಂದು ಡಾ.ಬಿ.ಆರ್.ಹಿರೇಮಠರು ಬರೆದ "ಶಾಸನಗಳಲ್ಲಿ ಕರ್ನಾಟಕದ ವರ್ತಕರು" ಎನ್ನುವ ಕೃತಿಯಲ್ಲಿ ತಿಳಿಸಿರುವರು. 'ಶೆಟ್ಟಿ' ಎನ್ನುವ ಪದ 'ಶ್ರೇಷ್ಠಿನ್' ಎನ್ನುವ ಸಂಸ್ಕೃತ ಪದದ ರೂಪ. ಹೇಗಿದ್ದರೂ ಮೂಲದಲ್ಲಿ ಸೆಟ್ಟಿ ಪ್ರತಿಷ್ಠಾ ಸೂಚಿ. 'ವಣಿಜ' ವೃತ್ತಿಸೂಚಿ ಆಗಿರಬೇಕೆನಿಸುತ್ತದೆ. ಆಮೇಲೆ ಎರಡೂ ಪದಗಳು ವೃತ್ತಿವಾಚಿಯಾಗಿ ಪರಿಣಮಿಸಿರಬಹುದು. ಕಾರಣ ಸೆಟ್ಟಿ, ಬಣಂಜಿಗ ಎಂಬ ರೂಪಗಳು ಮೂಲತಃ ವೃತ್ತಿವಾಚಿಗಳಾಗಿದ್ದು ಕ್ರಮೇಣ ಜಾತಿಸೂಚಕವಾಗಿ ಬೆಳೆದವು. ಸುಂಕದ ಬಂಕಣ್ಣಗಳ ವಚನದಲ್ಲಿ(ಸಕಲ ಪುರಾತನರ ವಚನಗಳು, ಸಂಪುಟ ೨, ವಚನ ಸಂಖ್ಯೆ ೧೮೬೨) ಬರುವ ಸರಕು ತುಂಬುವ ಚೀಲದ ವರ್ಣನೆಯಿದೆ.

"ಸಾಕಾರವೆಂಬ ಚೀಲದಲ್ಲಿ ಪ್ರಕೃತಿ ವಿಕಾರವೆಂಬ
ಕ್ರಿಯಾ ಧರ್ಮಗಳೆಂಬ ದಾರವ ದಾರದಲ್ಲಿ ಸೇರಿಸಿ
ಕಟ್ಟಲರಿಯದ ಅಣ್ಣಗಳಿಗೆ ಜಗಸೆಟ್ಟಿತನವೇಕೆ?"

ಈ ಒಂದು ವಚನದ ಆಧಾರದ ಮೇಲೆ ನಾವು ಸೆಟ್ಟಿ ಪದವು ವೃತ್ತಿವಾಚಕ ಎನ್ನಬಹುದು. ಸೆಟ್ಟಿ, ಬಣಂಜಿಗ, 'ವರ್ತಕ'ದ ಸಮಾನಾರ್ಥ ಪದಗಳು. ವ್ಯಾಪಾರ ವೃತ್ತಿಯನ್ನು ಜೀವನೋಪಾಯದ ಸಾಧನವಾಗಿಸಿಕೊಂಡವರು ಬಣಂಜಿಗ ಅಥವಾ ಸೆಟ್ಟಿಯರು.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವ ಸೆಟ್ಟಿ
ಒಮ್ಮನವಾದಡೆ ನುಡಿವನು, ಇಮ್ಮನವಾದಡೆ ನುಡಿಯನು
ಕಾಣಿಯ ಸೋಲ, ಅರ್ಧಗಾಣಿಯಗೆಲ್ಲ
ಜಾಣ ನೋಡಪ್ಪ ನಮ್ಮ ಕೂಡಲಸಂಗಮದೇವ

ಗ್ರೀಕ್ ದೇಶದ ಅರಿಸ್ಟಾಟಲ್‌ರ 'ದೇವರು ಲೆಕ್ಕಾಚಾರಸ್ಥ' ಎಂಬ ನಂಬಿಕೆಯ ಮಾತನ್ನೇ ನಮ್ಮ ದೇಶದಲ್ಲಿ ೧೨ನೆಯ ಶತಮಾನದಲ್ಲಿ ಆಗಿ ಹೋದ ಶರಣ ಬಸವಣ್ಣನವರೂ ತಮ್ಮ ವಚನವೊಂದರಲ್ಲಿ ಈ ಮೇಲಿನಂತೆ ಹೇಳಿದ್ದಾರೆ. ಇಲ್ಲಿ ಸೆಟ್ಟಿ ಪದದ ಬಳಕೆ ವ್ಯಾಪಾರಿಗಳಿಗೆ ಸೀಮಿತವಾಗಿದೆ ಎಂದೆನಿಸದೇ ಇರದು. ಜಾನಪದ ಹಾಡಿನಲ್ಲಿ ಬರುವ 'ಭಾಗ್ಯದ ಬಳೆಗಾರ ಹೋಗಿ ಬಾ ಎನ್ನ ತವರೀಗೆ' ಎನ್ನುವಲ್ಲಿ ಬಳೆಗಾರ ಸೆಟ್ಟಿ ಎಂದು ಬಳೆಗಾರರನ್ನು ಸಂಬೋಧಿಸಿದ್ದು ನೋಡಿದರೆ, ಸೆಟ್ಟಿ ಪದವು ವ್ಯಾಪಾರ ವರ್ಗಕ್ಕೆ ಉಪಯೋಗಿಸುವ ಅನ್ವರ್ಥಕ ಎನ್ನಿಸುವುದು. ಹೀಗೆ ವೃತ್ತಿಗೆ, ವ್ಯಾಪಾರಕ್ಕೆ ಸಂಬಂಧಪಟ್ಟವರನ್ನು ಸೆಟ್ಟಿಗಳೆಂದು ಕರೆಯುವರು. ವೃತ್ತಿಗೆ ಮಾನವನ ಇತಿಹಾಸದಷ್ಟು ಪ್ರಾಚೀನತೆಯಿದೆ. ವ್ಯಕ್ತಿಯ ಜೀವನಾಧಾರವೇ ವೃತ್ತಿ, ವೃತ್ತಿಯಲ್ಲದೇ ಬಾಳುವುದು ಬದುಕುವುದು ಮನುಷ್ಯನಿಗೆ ಕಷ್ಟಸಾಧ್ಯ. "ಉದ್ಯೋಗಂ ಪುರುಷ ಲಕ್ಷಣಂ" ಎನ್ನುವ ಮಾತು ಈ ಸಂದರ್ಭದಲ್ಲಿ ನೆನೆಪಾಗದೇ ಇರದು. ಆರಂಭದಲ್ಲಿ ವೃತ್ತಿಗಳು ಅನುವಂಶಿಕವಾಗಿದ್ದವು. ಅಲ್ಲದೆ ಜಾತಿವಾಚಿ, ಧರ್ಮವಾಚಿಗಳಾಗಿರದೇ

ವೃತ್ತಿವಾಚಿಗಳೆನಿಸಿದ್ದವು. ಕ್ರಮೇಣ ಇವು ಜಾತಿನಿಷ್ಠ, ಜನಾಂಗನಿಷ್ಠ, ಪ್ರದೇಶನಿಷ್ಠೆಗಳಾಗಿಯೂ ಬೆಳೆದು ಬಂದವು. ವ್ಯಾಪಾರವನ್ನು ಮತ್ತು ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡವರು ವರ್ತಕರು. ಭಾರತದಲ್ಲಿ ವೈದಿಕ ಸಾಹಿತ್ಯದಿಂದ ಮೊದಲು ಮಾಡಿ ಇತಿಹಾಸದುದ್ದಕ್ಕೂ ಅನೇಕ ಆಕರಗಳಲ್ಲಿ ಇವರ ಉಲ್ಲೇಖ ಕಂಡುಬರುತ್ತದೆ. ಆದರೆ ಕರ್ನಾಟಕದ ಶಾಸನಗಳಲ್ಲಿ ಮಾತ್ರ ಇವರ ಉಲ್ಲೇಖ ೭-ಲನೆಯ ಶತಮಾನದಿಂದ ದೊರೆಯುತ್ತದೆ. ವ್ಯಾಪಾರ ಮಾಡುವ ವರ್ಗ ಶೆಟ್ಟಿ ಎಂಬ ನಾಮಾಧೇಯದಿಂದ ಕರೆಯಲ್ಪಡುತ್ತಿತ್ತು. ಒಂದೇ ಜಾತಿಗೆ ಸೇರಿದ ಒಂದೇ ತರಹ ವೃತ್ತಿಯಿಂದ ಜೀವನ ಮಾಡುವ ಜನರ ಒಂದು ಗೋಷ್ಠಿಯೇ 'ಶ್ರೇಣಿ' ಎಂದು ಅಪಾರ್ಕನ ಯಾಜ್ಞವಲ್ಕ್ಯ ವ್ಯಾಖ್ಯಾನದಲ್ಲಿ ವಿವರಿಸಲಾಗಿದೆ. ವ್ಯಾಪಾರಿಗಳ ಸಮುದಾಯವು ಸಾಮೂಹಿಕವಾಗಿ ನಡೆಸುವ ಚಟುವಟಿಕೆ 'ಶ್ರೇಣಿ' ಎಂದೂ ಕರೆಯಬಹುದಾಗಿದೆ. ವೃತ್ತಿಗಳನ್ನು ಉತ್ಪಾದಕ ವೃತ್ತಿ, ಉತ್ಪಾದಕ ವಿನಮಯ ವೃತ್ತಿ ಮತ್ತು ಇತರ ವೃತ್ತಿ ಎಂದು ವರ್ಗೀಕರಿಸಿಕೊಡುವಲ್ಲಿ ಡಾ.ಬಿ.ಆರ್.ಹಿರೇಮಠರ ಜಾಣ್ಮೆ ಮೆಚ್ಚುವಂಥದ್ದು, ವಿನಿಮಯ ವರ್ತಕರಲ್ಲಿ ಸೆಟ್ಟಿ, ಬಣಂಜಿಗ, ಸೆಟ್ಟಿಗುತ್ತ, ನಕರ, ಮುಂಮುರಿದಂಡ, ವಡ್ಡವ್ಯವಹಾರಿ, ಗವರಿಗ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ ಬಲ್ಲಾಳುಗಳೆಂಬ ಪ್ರಕಾರಗಳನ್ನು ಗುರುತಿಸುವರು. ಉತ್ಪಾದನೆ, ವಿನಿಮಯ ಕಾರ್ಯಗಳೆರಡನ್ನೂ ಮಾಡುವ ಕುಂಬಾರ, ಅಕ್ಕಸಾಲಿಗ, ಮಾದಿಗ, ಸಮಗಾರ, ಮೇದಾರ ಮೊದಲಾದವರು ಉತ್ಪಾದಕ ವಿನಿಮಯ ವರ್ತಕರಾಗಿದ್ದಾರೆ.

ಸರಕನ್ನು ಎತ್ತಿನ ಮೇಲೆ ಹೇರಿಕೊಂಡು ಮತ್ತು ತಲೆಯ ಮೇಲೆ ಹೊತ್ತುಕೊಂಡು ಮಾರುವ ಸೆಟ್ಟಿಯರ ಚಿತ್ರವೊಂದು ಹೀಗಿದೆ.

ಸಾಕಾರವೆಂಬ ಶೆಟ್ಟಿ ಜೀವವೆಂಬ ಎತ್ತಿನ ಮೇಲೆ
ಎತ್ತಿ ಹೊಡೆಯಲಾಗಿ ಬಹುವಿಧ ಚರಿತ್ರದ
ಬೆವಹಾರದ ಒಡೆಯಂಗೆ ಕೊಡಿ

ಕರಣಂಗಳೆಂಬ ಸರಕ ಹೊತ್ತು ಮಾರುವ ಸೆಟ್ಟಿಗಳೆಲ್ಲರೂ ಕೂಡಿ ಬಂಕೇಶ್ವರ ಲಿಂಗಕ್ಕೆ ಸುಂಕವ ಸರಕು ಹೇರುತ್ತಿದ್ದುದರಿಂದ ಇವರು 'ಹೇಱುವ ಬಣಂಜಿಗ' 'ಹೇವ ಸೆಟ್ಟಿ'ಯರೆನಿಸಿದರು. ಹೀಗೆ ಸೆಟ್ಟಿ ಕುಲವು ನಾನಾರ್ಥಗಳನ್ನು ಹೊಂದಿದೆ.

೨.೨. ವಿವಿಧ ಸೆಟ್ಟಿಕುಲಗಳು

ಕರ್ನಾಟಕದಲ್ಲಿ ಪೂರ್ವಕಾಲದಿಂದಲೂ ಅನೇಕ ವಿಧದ ಸೆಟ್ಟಿಯರಿದ್ದರೆಂದು ಶಾಸನಗಳು ಮತ್ತು ಕಾವ್ಯಗಳು ತಿಳಿಸುತ್ತವೆ. ಎಲ್ಲ ಧರ್ಮಗಳಲ್ಲಿಯೂ ಸೆಟ್ಟಿಕುಲಗಳಿದ್ದವು. ಅವು ಈ ಕೆಳಗಿನಂತಿವೆ.

೨.೨.೧. ಜೈನ

ಧರ್ಮವು ಹಿಂದೂಗಳ ಪ್ರಪ್ರಥಮ ಪುರುಷಾರ್ಥವಾಗಿದೆ. ಹಿಂದೂ ಪರಂಪರೆಗೆ ಧರ್ಮವು ಅಡಿಪಾಯವಾಗಿದೆ. 'ಧರ್ಮ'ವೆಂಬ ಪದವು ಸಂಸ್ಕೃತ ಭಾಷೆಯ ಮೂಲದಿಂದ ಅವತರಿಸಿದೆ. ಇದು 'ಧ' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. 'ಧ' ಎಂಬುದು 'ಧರಿಸು', 'ಧಾರಣೆ', 'ಪೋಷಣೆ' ಹಾಗೂ 'ಹಿಡಿದಿಟ್ಟುಕೊಳ್ಳು' ಮೊದಲಾದ ಅರ್ಥವನ್ನು ಹೊಂದಿದೆ. ಯಾವುದು ಎಲ್ಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆಯೋ ಅದನ್ನು ಧರ್ಮವೆಂದು ಕರೆಯಲಾಗಿದೆ. 'ಧರ್ಮಾತ್ ಧಾರಯತಿ ಇತಿ ಅಹುರ್' ಅಂದರೆ ಜಗತ್ತನ್ನು ಉದ್ಧಾರ ಅಥವಾ ಪೋಷಣೆ ಮಾಡುವುದು ಧರ್ಮವಾಗಿದೆ. ಧರ್ಮ ಮಾರ್ಗದಲ್ಲಿ ನಡೆದರೆ ಜಯವಿದೆ. ಧರ್ಮದಿಂದಲೇ ಆಯಸ್ಸು ವೃದ್ಧಿಸುತ್ತದೆ. ಜೈನ ಧರ್ಮವು ಮಹಾವೀರನಿಂದ ಸಂಸ್ಥಾಪನೆಗೊಂಡಿದೆ. ದಕ್ಷಿಣ ಭಾರತದ ಜೈನ ಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆ. ಪ್ರಾಚೀನ ಕರ್ನಾಟಕದಲ್ಲಿ ಜೈನ ಧರ್ಮ ಒಂದು ಪ್ರಬಲ ಧರ್ಮವಾಗಿತ್ತು. "ಆತ್ಮವು ತನ್ನ ಸಹಜ ಶುದ್ಧತೆಯನ್ನು ಮರಳಿ ಪಡೆದುಕೊಂಡು ಕೇವಲ ಜ್ಞಾನವನ್ನು ಪಡೆಯುವುದೇ ಜೀವನದ ಗುರಿ. ಅದೊಂದು ಅಲೌಕಿಕ ಸ್ಥಿತಿ. ಆತ್ಮವು ಆಗ ಎಲ್ಲಾ ಪೂರ್ಣತೆಗಳನ್ನು ಹೊಂದಿರುತ್ತದೆ." ಎನ್ನುವುದು ಜೈನ ಧರ್ಮದ ತಿರುಳಾಗಿದೆ. ಜೈನ ದೇವಾಲಯಗಳನ್ನು 'ಬಸದಿ'ಗಳೆಂದು ಕರೆಯುತ್ತಾರೆ. ಬೆಟ್ಟದ ಮೇಲೆ ಬಸದಿಯಿದ್ದುದನ್ನು ಕಂಡು ಹೊಯ್ಸಳ ದೊರೆ ವಿನಯಾದಿತ್ಯ ದೇವನು 'ಅಲ್ಲಿದ್ದರೆ ಯಾರಾದರೂ ಕದಿಯುವುದಿಲ್ಲವೇ?' ಎಂದು ಊರಿನವರನ್ನು ಪ್ರಶ್ನಿಸಿದಾಗ ಆ ಊರಿನ ಮಾಣಿಕ ಸೆಟ್ಟಿ ಎಲ್ಲರ ಪ್ರತಿನಿಧಿಯಾಗಿ ನಿಂತು' "ನಿಮ್ಮ ಪಡದರ್ಥಕ್ಕೆ ಪ್ರಮಾಣುಂಟೆ ದೇವರರ್ಥಮುಂ ಮಲೆಯರಸುಗಳ ಹಡೆದ ಭತ್ತಮುಂ ಸಮಾನಂ"(MAR, ೧೯೩೨, P.೧೭೧, ೧೧೨೪ AD) ಅಂದರೆ, ನೀವು ಊರಲ್ಲಿ ಬಸದಿ ಕಟ್ಟಿಸಿ ಕೊಡಿ, ನಾವೋ ಬಡವರು ಏನು ತಾನೇ ಕಟ್ಟಿಸಿಯೇವು! ನಿಮ್ಮ ಐಶ್ವರ್ಯಕ್ಕೆ ಮಿತಿಯಿದೆಯೇ? ಮಲೆಗಳ ರಾಜರುಗಳ ಹತ್ತಿರ ಭತ್ತ ಎಷ್ಟಿದೆಯೋ ಅಷ್ಟಿದೆ ನಿಮ್ಮ ಹತ್ತಿರ ಹಣ" ಎಂದಾಗ ರಾಜನು ಆ ವಾಕ್ಚಾತುರ್ಯಕ್ಕೆ ಮೆಚ್ಚಿ

ನಕ್ಕು, ಊರಲ್ಲಿ ಬಸದಿ ಕಟ್ಟಿಸಿ ಅದಕ್ಕೆ ಬೇಕಾದ ಭೂಮಿಗಳನ್ನೂ, ತೆರಿಗೆಗಳನ್ನೂ ಬಿಡುತ್ತೇವೆ. ಜೈನ ಶೆಟ್ಟಿಗಳು ಬಸದಿಯ ನಿರ್ಮಾಣಕ್ಕೆ ರಾಜನಿಗೆ ಮಾಡಿಕೊಂಡ ನಿವೇದನೆಯಿಂದ ಅವರಲ್ಲಿರುವ ಧಾರ್ಮಿಕ ಬಾವನೆಯ ಅರಿವಾಗುವುದು. ಜೈನರು ಬಸದಿಗಳಿಗೆ ತೀರ್ಥಂಕರರ ಹೆಸರುಗಳ ಜೊತೆಗೆ ಕಟ್ಟಿಸಿದವರ ಹೆಸರುಗಳನ್ನೂ ಇಡುತ್ತಿದ್ದರು. ಕದಂಬರ ಸಿಂಹವರ್ಮನ ಮಗ ಎರಡನೇ ಕೃಷ್ಣವರ್ಮನ ಕಾಲದ ಬನ್ನಹಳ್ಳಿ ತಾಮ್ರಶಾಸನ(EP. Ind.Vol-VIP-೧೮)ದಲ್ಲಿ ಇವನು ತನ್ನ ಏಳನೆಯ ವರ್ಷದ (ಕ್ರಿ.ಶ.೫೨೩) ಕಾರ್ತಿಕ ಶುಕ್ಲ ಪಂಚಮಿ ಜೇಷ್ಠಾ ನಕ್ಷತ್ರದಂದು ತುರಿಯಲ್ಲ ಗೋತ್ರದ ಪ್ರವರಗಳುಳ್ಳ ಹರಿದತ್ತ ಶ್ರೇಷ್ಠಿಯ ಉಪದೇಶದ ಮೇರೆಗೆ ಕೌಶಿಕ ಗೋತ್ರದ ವಿಷ್ಣುಶರ್ಮನೆಂಬ ಬ್ರಾಹ್ಮಣನಿಗೆ ವಳ್ಳಾವಿ ವಿಷಯದಲ್ಲಿದ್ದ ಕೋಳಾಲನಲ್ಲೂರು ಗ್ರಾಮವನ್ನು ದಾನ ಮಾಡಿದ್ದಾನೆ. ಜೈನರ ಉದಾರತೆ, ದಾನಶೀಲತೆ, ಧರ್ಮದ ಬಗ್ಗೆ ಇರುವ ಅಭಿಮಾನ ದಾನದಿಂದ ತಿಳಿಯುವುದು, ಇಂಥಹ ದಾನಶೀಲ ಸಂಪನ್ನರಾದ ಜೈನರು ಆರಂಭದಿಂದಲೂ ಒಂದಲ್ಲ ಒಂದು ಸಂಕಷ್ಟದಲ್ಲಿ ಸಿಲುಕಿಕೊಳ್ಳುತ್ತಿದ್ದರು ಎನ್ನುವುದು ಇತಿಹಾಸದ ಆಧಾರದಿಂದ ತಿಳಿಯುತ್ತದೆ. ಮಧ್ಯಕಾಲೀನ ಕರ್ನಾಟಕದಲ್ಲಿ ಜೈನ ಧರ್ಮೀಯರ ಬಹುಸಂಖ್ಯೆಯ ಪ್ರದೇಶವಾದ ಕರಾವಳಿ ಕರ್ನಾಟಕದಲ್ಲೂ ಇವರಿಗೆ ಕಷ್ಟ ತಪ್ಪಿರಲಿಲ್ಲ. ಇದಕ್ಕೆ ಪ್ರತ್ಯಕ್ಷ ಸಾಕ್ಷಿಯೆಂಬಂತೆ ಮೂಡಬಿದರೆಯ ಶಾಸನವೊಂದು ಜೈನರಿಗೆ ಒದಗಿದ ಕಷ್ಟವನ್ನು ಮತ್ತು ಅದು ನಿವಾರಣೆಯಾದ ಬಗೆಯನ್ನು ತಿಳಿಸುತ್ತಿದೆ. ಕೃಷ್ಣದೇವರಾಯನ ಅವಧಿಯಲ್ಲಿ ಮಂಗಳೂರು ಮತ್ತು ಬಾರಕೂರು ನಾಡನ್ನು ರತ್ನಪ್ಪವೊಡೆಯರು ಆಳುತ್ತಿರುತ್ತಾರೆ. ಇವರ ಅವಧಿಯಲ್ಲಿ ಅಂಣಸೇನಬೋವ ಮತ್ತು ಸಾವಿರದವರು ಕೂಡಿಕೊಂಡು ಮೂಡಬಿದರೆಯ ಜೈನ ಮಠಾಧೀಶರಾದ ಅಭಿನವ ಚಾರುಕೀರ್ತಿ ಪಂಡಿತ ದೇವರ ಸಮ್ಮುಖದಲ್ಲಿ ಸೆಟ್ಟಿ ಕುಲದವರಿಗೆ, ಜೈನ ಮುಖಂಡರಿಗೆ ಮತ್ತು ಜೈನ ವ್ಯಾಪಾರಿಗಳಿಗೆ ತಪ್ಪೊಪ್ಪಿಗೆಯ ತಾಮ್ರ ಶಾಸನವನ್ನು ಬರೆದುಕೊಡುತ್ತಾರೆ.

ಗಂಗರದು ಜೈನ ಸಿಂಹಣಂದ್ಯಾಚಾರ್ಯರ ಆಶೀರ್ವಾದದಲ್ಲಿಯೇ ತಲೆಯೆತ್ತಿದ ರಾಜ ಮನೆತನ. ಈ ರಾಜರುಗಳ ಆಡಳಿತಾವಧಿ ಜೈನಧರ್ಮದ 'ಸುವರ್ಣಯುಗ'ವೆಂದೇ ಹೇಳಬೇಕು. ಇದೇ ಕಾಲದ ಬಾದಾಮಿ ಚಾಲುಕ್ಯರು, ಇವರಿಗಿಂತ ರಾಷ್ಟ್ರಕೂಟರು ಜೈನ ಧರ್ಮದ ಮೇಲ್ಮೆ ೖಯನ್ನು ಹೆಚ್ಚಿಸಿದರು. ಹೀಗಾಗಿ ಈ ಧರ್ಮ ಹತ್ತನೆಯ ಶತಮಾನದವರೆಗೆ ಸೊಂಪಾಗಿ ಬೆಳೆಯುತ್ತ ಬಂದಿತು. ಈ ಕಾಲದ ಗಂಗಮಂತ್ರಿ ಚಾವುಂಡರಾಯ, ರಾಷ್ಟ್ರಕೂಟ

ಅಮೋಘವರ್ಷ, ಇಂದ್ರ, ಸಾಮಂತ ಶಂಕರಗಂಡ ಮತ್ತು ಚಾಲುಕ್ಯ ಕಾಲದ ಅತ್ತಿಮಬ್ಬೆ ಉಲ್ಲೇಖಾರ್ಹ ವ್ಯಕ್ತಿಗಳೆನ್ನಬಹುದು. ಜೈನಧರ್ಮ ಮಗಧ ದೇಶದಿಂದಲೇ ಭಾರತದ ತುಂಬಾ ಪ್ರಸಾರವಾಯಿತು. ಅದು ಕರ್ನಾಟಕದಲ್ಲಿ ಬಹು ಹಿಂದೆಯೇ ಪ್ರವೇಶಿಸಿತು. ಮೌರ್ಯ ಚಂದ್ರಗುಪ್ತನ ಕಾಲಾವಧಿಯಲ್ಲಿಯೇ ಜೈನಮುನಿ ಭದ್ರಬಾಹು ಶ್ರವಣ ಬೆಳಗೊಳಕ್ಕೆ ಬಂದು ನೆಲೆನಿಂತು ಅದರ ಪ್ರಸಾರಕ್ಕೆ ನಾಂದಿ ಹಾಡಿದನೆಂದು ಜೈನ ಪರಂಪರೆ ಹೇಳುತ್ತದೆ. ಕ್ರಿ.ಶ.೫ನೆಯ ಶತಮಾನದಿಂದ ಮಾತ್ರ ಆ ಮತಕ್ಕೆ ಸಂಬಂಧಪಟ್ಟ ಶಾಸನಗಳು ನಮ್ಮ ನಾಡಿನಲ್ಲಿ ದೊರೆಯುತ್ತವೆ. ಹಲಸಿಗೆಯಲ್ಲಿ ಕದಂಬ ಕಾಕುಸ್ಥವರ್ಮನು ಯುವರಾಜನಾಗಿದ್ದಾಗ ಹೊರಡಿಸಿದ ದಾಖಲೆಯಲ್ಲಿ ಜೈನಧರ್ಮದ ಉಲ್ಲೇಖವಿದೆ. ಅದರಲ್ಲಿನ ಪ್ರತಿಗ್ರಹಿ ಶ್ರುತಕೀರ್ತಿ ಸೇನಾಪತಿ ಜೈನಧರ್ಮೀಯನು. ಈ ಶಾಸನದ ಕಾಲಕ್ಕೆ ಸರಿಸುಮಾರಾಗಿ ಶ್ರವಣಬೆಳಗೊಳದಲ್ಲಿ ಕೂಡ ಜೈನ ಧರ್ಮೀಯರು ನೆಲೆಸಿದ್ದ ಬಗ್ಗೆ ಶ್ರವಣಬೆಳಗೊಳದ ಮೊದಲ ಶಾಸನದಲ್ಲಿ ಆಧಾರವಿದೆ. ಕೆಲವು ವಿದ್ವಾಂಸರ ಪ್ರಕಾರ, ಜೈನಧರ್ಮವು ಭಾರತದ ಹಳೆಯ ಧರ್ಮಗಳಲ್ಲಿ ಒಂದು. ಅದು ವೇದ ವಿರೋಧಿ ಧರ್ಮವಿದ್ದಂತೆ, ವೇದ ಪೂರ್ವ ಧರ್ಮವೂ ಇದ್ದೀತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಪ್ರಭಾಚಂದ್ರನೆಂಬ ಜೈನಯತಿ ಸಮಾಧಿಮರಣದಿಂದ ಮುಡಿಪಾದ ಸಂಗತಿ ವರ್ಣಿತವಾಗಿದೆ. ಇದರ ಹಿಂದಿನ ಕಾಲಾವಧಿಯ ಶಾಸನಗಳು ನಮ್ಮಲ್ಲಿ ಕಂಡುಬರುವುದಿಲ್ಲ.

ಪ್ರಾಚೀನ ಕನ್ನಡ ನಾಡಿನ ಇನ್ನೊಂದು ವರ್ತಕ ಪ್ರಕಾರ (ಸಿ.ಟಿ.ಆಯ್ ಪು.೮೮ ಪೇರೂರ-ನಲ್ಗೊಂಡ ಜಿಲ್ಲೆ) ನಕರ ಶಾಸನಗಳು ಅಂಗಡಿ ಸೆಟ್ಟಿಯರೆಂದು (ಹಿ.ಕ.ಸ್ವರಿ.ಆ.ಬ.ನಂ.೫೪ ಮಾತ್ನಾಳ(ತಾ) ಅಫಜಲಪುರ, ಕ್ರಿ.ಶ.೧೧೧೯) ಕರೆದಿರುವುದರಿಂದ ಅಂಗಡಿ ವ್ಯಾಪಾರಿಗಳೆಂದು ಹೇಳಬಹುದು. ನಕರರಲ್ಲಿ ಜೈನ ಹಾಗೂ ಶೈವ ಧರ್ಮೀಯರಿದ್ದಾರೆ. ಜೈನ ನಕರರು ಶ್ರವಣಬೆಳ್ಗೊಳ ಶಾಸನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರಿಗೆ 'ಭವ್ಯನಕರ' (ಭವ್ಯ=ಜಿನಭಕ್ತ) (ಎ.ಕ.XV, ಬೇಲೂರು, ೩೩೪ ಬಸ್ತಿಹಳ್ಳಿ, ಕ್ರಿ.ಶ.೧೨೫೭) ಮಾಣಿಕ್ಯ ನಕರ (ಎ.ಕ.II ಶ್ರವಣಬೆಳ್ಗೊಳ ೪೫೬, ಕ್ರಿ.ಶ.೧೨೮೨) ಎಂಬ ಪದಗಳನ್ನು ಬಳಸಲಾಗಿದೆ. 'ಜಿನ' ಇವರ ಆರಾಧ್ಯದೈವ. ಈ ದೈವದ ಹೆಸರಿನಲ್ಲಿರುವುದು 'ನಕರ ಜಿನಾಲಯ' ಪಾಂಡ್ಯಮಹಾದೇವಿಯರ ನಗರ ಸಮೂಹ'ವೆಂಬ ಅಪರೂಪದ ಉಲ್ಲೇಖ ಕೋಟಕೇರಿ ಶಾಸನದಲ್ಲಿದೆ. (ಸೌ.ಇ.ಇ.VII ೩೭೬ ಕೊಟಕೇರಿ(ತಾ) ಉಡುಪಿ, ಕ್ರಿ.ಶ.೧೦೫೫) ಬಹುಶಃ ಇದು

ಪಾಂಡ್ಯಮಹಾದೇವಿ ಒಡೆತನದ ನಕರವಿರಬೇಕು. ಕರ್ನಾಟಕದಲ್ಲಿ ಸ್ತ್ರೀಯ ಹೆಸರಿನಲ್ಲಿ ಸಿಗುವ ನಕರದ ಏಕೈಕ ಉದಾಹರಣೆಯಿದು. ಬಳ್ಳಿಗಾವೆ ಶಾಸನದ (ಎ.ಕ.VII.ಶಿಕಾರಿಪುರ, ೧೦೦ ಬಳ್ಳಿಗಾವೆ, ಕ್ರಿ.ಶ.೧೧೮೯)

ಪರಹಿತರೇಕ ವಾಕ್ಯಂಜುವಿಂಗೆ ತವರ್ಮ್ಮನೆ ಧರ್ಮ್ಮದಾಗರಂ
ಸರಸಕವೀಶ್ವರಾವಳಿಗೆ ಕೇಳಿಗೃಹಂ ಕಣಿ ಪೆರ್ಮ್ಮೆಗೊರ್ಮ್ಮೆಯುಂ
ಹರಿಹರ ಪಂಕಜಾಸನ ಜಿನಾದಿ ವಿನಿರ್ಮ್ಮಳ ಧರ್ಮ್ಮರೆಂದೊಡಾ
ರ್ದ್ದೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀ ಧರಿತ್ರಿಯೊಳ್
ಕಿಡುವೊಡಮೆಯನೊನ್ದನೆ ಕೊ
ಟ್ಟಡೆ ಮಡಗದಿಹಂ ಪರಂಗಳೆಂಬೆರಡು ಮನಂ
ಗಡಿಯೊಳ್ಕಿಡದೂಡಮೆಯ ನಡಿ
ಗಡಿಗಾರ್ಜ್ಜಿಪರಲ್ಲಿ ನೆಗೆರ್ದ ನಗರಜನಂ
ಸುರಪತಿಯನ್ತೆ ಸರ್ವ್ವ ವಿಬುದಾಶ್ರಯರಿಂದ್ರಗಜೇಂದ್ರದನ್ತೆ
ಭಾಸುರತರ ದಾನಸಂಪದಧಿಕೋನ್ನತರಿನ್ದುವಿನನ್ತೆ ಸತ್ಕಳಾ
ಧರರಹಿರಾಜನನ್ತೆ ನಿಖಿಳಕ್ಷಮೆಗಾಸ್ಪದರೆನ್ದೊಡೀಗಳಾ
ರ್ದ್ದೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀ ಧರಿತ್ರಿಯೊಳ್

ಪದ್ಯಗಳಲ್ಲಿ ಬಳ್ಳಿಗಾವೆ ನಕರರ ಗುಣ ಶ್ರೀಮಂತಿಕೆಯ ವಿವಿಧ ಮುಖಗಳು ಮೂಡಿನಿಂತಿವೆ. ಇದರಿಂದ ನಕರರ ಧವಳ ವ್ಯಕ್ತಿತ್ವ ಕಣ್ಣಿಗೆ ಎದ್ದು ಕಾಣುತ್ತದೆ. ಕ್ರಿ.ಶ.೧೧೩೧ರ ಬಳ್ಳಿಗಾವೆ (ಎ.ಕ.VII ಶಿಕಾರಿಪುರ, ೧೩೩, ಬಳ್ಳಿಗಾವೆ ಕ್ರಿ.ಶ.೧೧೩೧) ಶಾಸನದ "ಸಮಸ್ತ ಪ್ರಶಸ್ತಿ ಸಹಿತಾನೇಕ ಗುಣಗಣಾಳಂಕ್ರಿತ ಸತ್ಯ ಶೌಚಾಚಾರ ನಯ ವಿನಯ ಶೀಳ ಸಂಪನ್ನರುಂ ಶ್ರೀಕಾಳಿಕಾದೇವಿ ವಿಲಬ್ಧವರ ಪ್ರಸಾದರುಂ ಪಂಚಲೋಹಾಧಿಪತಿಗಳುಂ ತತ್ಸುಂಕ ಪರಿರಕ್ಷಿತರುಮಪ್ಪ ಶ್ರೀಮತ್ಕಟಕದ ಮಹಾನಕರ" -ಈ ಗದ್ಯದಿಂದ ಬಳ್ಳಿಗಾವೆ ಬೆನ್ನಗೆಯ್ಕೆ ನಕರರು ಸತ್ಯವಂತರು, ಶುಚಿತ್ವವುಳ್ಳವರು, ಆಚಾರವಂತರು, ನಯವಿನಯವಂತರು, ಕಾಳಿಕಾದೇವಿ ಲಬ್ಧ ವರಪ್ರಸಾದರು,

ಪಂಚಲೋಹಾಧಿಪತಿಗಳು ಎಂಬಂಶಗಳೂ ಸು.ಶ.೧೩ ಶ್ರವಣಬೆಳ್ಗೊಳ ಶಾಸನದ(ಎ.ಕ.II ಶ್ರವಣಬೆಳಗೊಳ, ೪೫೫ ಶ್ರವಣಬೆಳ್ಗೊಳ, ಸು.೧೩)

ಧರೆಯೊಳು ಖಂಡಳಿಮೂಳ ಭದ್ರ ವಿಳಸದ್ವಂಶೋದ್ಭವರ್ಸ್ವತ್ವ ಶೌ
ಚರತರ್ಸ್ಸಿಂಹ ಪರಾಕ್ರಮಾನ್ವಿತರನೇಕಾಂಬೋಧಿ ವೇಳಾಪುರಾಂ
ತರ ನಾನಾ ವ್ಯವಹಾರ ಜಾಳ ಕುಶಳರ್ವ್ವಿಖ್ಯಾತ ರತ್ನತ್ರಯಾ
ಭರಣ ರ್ಬ್ಬೆಳ್ಗುಳ ತೀರ್ತ್ಥವಾಸಿ ನಗರಂಗಳು ರೂಢಿಯಂ ತಾಳ್ದಿದರು

ಈ ಪದ್ಯದಿಂದ ಶ್ರವಣಬೆಳ್ಗೊಳದ ಜೈನ ನಕರರು (ಯುದ್ಧ ದೇವತೆ) ಖಂಡಳಿ ಮೂಲ ಭದ್ರವಂಶೋದ್ಭವರು, ಸಿಂಹಪರಾಕ್ರಮಿಗಳು, ಸಮುದ್ರ ವ್ಯಾಪಾರ ಕುಶಲರು, ರತ್ನತ್ರಯಾಭರಣರೆಂಬ ಮಹತ್ವ ಪೂರ್ಣ ಸಂಗತಿಗಳೂ ಸುವ್ಯಕ್ತವಾಗುತ್ತವೆ. ಅಲ್ಲದೆ ಕೆಲವು ಶೈವ-ಜೈನ ನಕರರು ಪ್ರಕೃತಿ(ಶಕಿ), ಪುರುಷರ ಆಧಾರಕರೆಂಬುದೂ ಗೊತ್ತಾಗುವುದು. ಹನುಮಂತಸೆಟ್ಟಿ, ಬಮ್ಮಿಸೆಟ್ಟಿ, ಮೇಚಿಸೆಟ್ಟಿ, ಚಿಟ್ಟಿಮಯ್ಯ, ಶಂಕರಯ್ಯ, ನಾಗಿಸೆಟ್ಟಿ ಮುಂತಾದವರು ನಕರರೆಂದು ತಿಳಿದುಬರುತ್ತದೆ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕ ಪ್ರಕಾರಗಳಲ್ಲಿ ವಡ್ಡವ್ಯವಹಾರಿ ಅತ್ಯಂತ ಪ್ರಮುಖವೂ ಅಧ್ಯಯನಯೋಗ್ಯವೂ ಆದುದಾಗಿದೆ. ವಡ್ಡವ್ಯವಹಾರಿ, ಹಿರಿಯ ವ್ಯಾಪಾರಿ ಎಂದರ್ಥವುಳ್ಳ ಪದ (ವೃದ್ಧ>ವಡ್ಡ>ವಡ್ಡ) ಇವರನ್ನು ತಮಿಳಿನಲ್ಲಿ 'ವಟ್ಟವ್ಯವಹಾರಿ' (ಎ.ಕ.IX ಕಾನಕಾನಹಳ್ಳಿ ೭೮, ನಿಟ್ಟೂರು ಕ್ರಿ.ಶ.೧೨೮೮) ಎಂದು ಕರೆಯಲಾಗಿದೆ. ವಡ್ಡ ವ್ಯವಹಾರಿ ಕೆಲವು ಸಲ ಪಟ್ಟಣಸ್ವಾಮಿ ಹುದ್ದೆಯನ್ನು ವಹಿಸಿಕೊಳ್ಳುತ್ತಿದ್ದ(ಎ.ಕ.IX ಚೆನ್ನಪಟ್ಟಣ ೩೭ ಹಪೂರ ಕ್ರಿ.ಶ.೧೩೯೫) ವಡ್ಡ ವ್ಯವಹಾರಿಗಳಲ್ಲಿ ಜೈನಮತೀಯರೂ ಇದ್ದಾರೆ. ಜೈನನಾದ ಸಿದ್ಧಿಗೆ ಸೆಟ್ಟಿ ರಾಯಶ್ರೇಷ್ಠಿ ಮುಖ ತಿಳಕನೂ ಮಹಾವಡ್ಡವ್ಯವಹಾರಿಯೂ ಆಗಿದ್ದನು. ಕೇತಿಸೆಟ್ಟಿ, ಸಾತಿಸೆಟ್ಟಿಯರು ವಡ್ಡ ವ್ಯವಹಾರಿಗಳಾಗಿದ್ದುದನ್ನು ಗುತ್ತಲ(ಸೌ.ಇ.ಇ.XVIII ೨೯೩ ಗುತ್ತಲ(ತಾ) ಹಾವೇರಿ (ಕ್ರಿ.ಶ.೧೧೬೨), ಶ್ರವಣ ಬೆಳ್ಗೊಳ (ಎ.ಕ.II ಶ್ರವಣ ಬೆಳಗೊಳ ೫೬೪ ಶ್ರವಣ ಬೆಳ್ಗೊಳ (ಹೊ.ಬಲ್ಲಾಳ) ಶಾಸನಗಳು ಉಲ್ಲೇಖಿಸುತ್ತವೆ.

೨.೨.೨. ವೀರಶೈವ(ಬಣಜಿಗ, ನಕರರು)

ವ್ಯಾಪಾರ ವೃತ್ತಿಯನ್ನು ಜೀವನೋಪಾಯದ ಸಾಧನವನ್ನಾಗಿಸಿಕೊಂಡವರು ಬಣಂಜಿಗ ಅಥವಾ ಸೆಟ್ಟಿಯರು, ಇವರು ಸರಕುಗಳನ್ನು ಎತ್ತು, ಕತ್ತೆ, ಕೋಣಗಳ ಮೇಲೆ ಹೇರಿಕೊಂಡು

ತಲೆಯ ಮೇಲೆ ಹೊತ್ತುಕೊಂಡು ಹೋಗಿ ಸಂತೆ, ಪಟ್ಟಣಗಳಲ್ಲಿ ವ್ಯಾಪಾರ ವ್ಯವಸಾಯ ಮಾಡುತ್ತಿದ್ದರು. 'ಬಣಂಜಿಗ' ಪದಕ್ಕೆ ಸಂಬಂಧಿಸಿದ ವೀರಬಣಂಜಿಗ ಮತ್ತು ವೀರವಣಿಗೆ ಸಮಾನಾರ್ಥ ಪದಗಳೆಂದು ತೋರುತ್ತದೆ. ಶೈವ ಉಪಾಧಿಯಾಗಿದ್ದಂತೆ ಬಣಂಜುಪದಕ್ಕೂ 'ವೀರ' ಎಂಬುದು ಉಪಾಧಿಯಾಗಿದೆ. ಇದನ್ನು ಗಮನಿಸಿ ವೀರಬಣಂಜುದವರೇ ವೀರಶೈವರಾದರೆಂದು ಕೆಲವರು ಊಹಿಸುತ್ತಾರೆ. (ಪಾರಮಾರ್ಥ ಪ್ರಕಾಶಿಕೆ; ಅರಿಕೆ, ಪು.೩೧) ವೀರಬಣಂಜ) ಶಬ್ದ ಶರಣರ ಕಾಲವಾದ ೧೨ನೆಯ ಶತಮಾನದ ಎಡಬಲದಲ್ಲಿ ದಟ್ಟವಾಗಿ ಉಲ್ಲೇಖಗೊಂಡಿರುವುದನ್ನು ಗಮನಿಸಬೇಕು.

ಶಾಸನಗಳಲ್ಲಿ ಬೀರವಣಿಗರ ಹೆಸರಿನ ಮುಂದೆ 'ನಾಯಕ' ಎಂಬುದು ಬರುವುದರಿಂದ ಇವರು ವ್ಯಾಪಾರಿಗಳಾಗಿರದೆ, ಅಧಿಕಾರಿಗಳಾಗಿದ್ದಾರೆಂದೂ ಅದರಲ್ಲಿಯೂ 'ಇಱಿದವನೆ ವೀರವಣಿಗ'(ಎ.ಕ.VIII ಸೊರಬ ೨೬೮ ದೇವಸ್ಥಾನದ ಹಕ್ಕಲು ಕ್ರಿ.ಶ.೧೨೪೫) ಎಂಬ ಶಾಸನ ವಾಕ್ಯದಿಂದ ವೀರವೃತ್ತಿಯುಳ್ಳವರಾಗಿದ್ದರೆಂದೂ ಊಹಿಸಬಹುದಾಗಿದೆ. ಶಾಸನಗಳಲ್ಲಿ ಉಕ್ತರಾದ ಮಲ್ಲಿದೇವ (ಸೌ.ಇ.ಇ.XVIII ೨೭೫, ದೇವಿ ಹೊಸೂರ (ತಾ) ಹಾವೇರಿ ಕ್ರಿ.ಶ.೧೪೦೨) ದೂಹೆಯ ನಾಯಕ (ಎ.ಇ.XV, ಪು.೩೧೭-೨೬, ಮಾಗಡಿಹಾಳ (ತಾ) ಜತ್ತ (ಕ್ರಿ.ಶ.೧೧೭೨), ದೂಳರಸ(ಸೌ.ಇ.ಇ.XX ೨೯ ಕಡ್ಲೇವಾಡ (ತಾ) ಸಿಂದಗಿ ಸು.ಶ.೧೨)ಬಾಚೆಯ ನಾಯಕ (ಜಬಾರಾ ಸೊ X ಪುಟ.೨೪೮, ನೇಸರಗಿ(ತಾ) ಬೈಲಹೊಂಗಲ, ಕ್ರಿ.ಶ.೧೨೯) ಹಬ್ಬೆಯ ನಾಯಕ(ಇನಾಕಾಕೊಸ್ಪೇ ನಂ.೧೫, ಪಿರಸಂಗಿ(ತಾ) ಸವದತ್ತಿ, ಕ್ರಿ.ಶ.೧೧೮೬) ಬೀರವಣಿಗರಾಗಿದ್ದಾರೆ. ಬಣಜ(ಸೌ.ಇ.ಇ.IX-i ೧೯೦ ಪೆದ್ದ ಹೊಟ್ಟೂರ(ತಾ) ಗೂಟಿ ಕ್ರಿ.ಶ.೧೧೩೪) ಬಳಂಜು (ಎ.ಕ.XVII, ಮುಳಬಾಗಲ ೩೦೬, ಆವನಿ, ಕ್ರಿ.ಶ.೯೫೦) ಬಳಂಜಿಗರು (ಎಕ.VIII, ಸೊರಬ, ೨೯ ತೊರೆವಂದ ಕ್ರಿ.ಶ.೧೦೭೪) ರೂಪಗಳೂ ಶಾಸನಗಳಲ್ಲಿವೆ. ತಳಬಣಂಜಿಗರು (ಹಿಕಸ್ಪರಿ ಅಬ ನಂ.೫೪ ಮಾಶ್ಯಾಳ (ತಾ) ಅಫಜಲಪುರ ಕ್ರಿ.ಶ.೧೧೧೯) ತಳದ ಬಣಂಜಿಗರು(ಸೌ.ಇ.ಇ.XXIII ದೇವರ ನಾವದಗಿ (ತಾ) ಸಿಂದಗಿ, ಕ್ರಿ.ಶ.೧೧೪೦) ಸ್ತಾನ ಬಣಂಜಿಗರು(ಸೌ.ಇ.ಇ XX.೧೩೪ ತದಲಬಾಗಿ(ತಾ) ಜಮಖಂಡಿ ಕ್ರಿ.ಶ.೧೧೨೦) ತಳದ ಸೆಟ್ಟಿಯರು(ಎಇ.V ಪು.೧೯-೨೦ ಮನಗೂಳಿ(ತಾ) ಬಂಟ್ವಾಳ, ಕ್ರಿ.ಶ.೧೩೩೭) ಎಂಬ ಪ್ರಯೋಗಗಳು ಸ್ಥಳೀಯ ವರ್ತಕರನ್ನು ಸೂಚಿಸುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ತಳದೊಕ್ಕಲು(ಹೈ.ಆ.ಸಿ III ನಂ.I ನಾಗಾವಿ(ತಾ) ಚಿತ್ತಾಪುರ, ಕ್ರಿ.ಶ.೧೯೦೨ ತಳದವರು (ಸೌ.ಇ.ಇ XX ೭೮, ಲಕ್ಷ್ಮೀಶ್ವರ (ತಾ) ಶಿರಹಟ್ಟಿ, ಕ್ರಿ.ಶ.೧೧೧೮) ಎಂಬ ಪದಗಳೂ ಇವರನ್ನೇ ನಿರ್ದೇಶಿಸುತ್ತಿರಬೇಕು ಎನಿಸುತ್ತದೆ.

ಭಾರತದ ಅತ್ಯಂತ ಪ್ರಾಚೀನ ಧರ್ಮ ಶೈವಧರ್ಮ ಎನ್ನುವುದಕ್ಕೆ ಹರಪ್ಪಾ, ಮೊಹೆಂಜೊದಾರೋ ಮತ್ತು ಲೋಥಾಲ್‌ಗಳ ಉತ್ಖನನದಲ್ಲಿ ಲಭ್ಯವಾದ ಶಿವಲಿಂಗಗಳೇ ಸಾಕ್ಷಿ. ಆರ್ಯರು ಪರ್ಷಿಯಾದ ಮಾರ್ಗವಾಗಿ ವಾಯುವ್ಯ ಕಣಿವೆಗಳ ಮೂಲಕ ಭಾರತಕ್ಕೆ ಬಂದರು ಎಂಬುದನ್ನು ನಾವು ಒಪ್ಪಿಕೊಂಡರೆ ಸಿಂಧೂ ಸಂಸ್ಕೃತಿಯ ಶೈವಧರ್ಮವು ಅವೈದಿಕವಷ್ಟೇ ಅಲ್ಲ, ವೇದಪೂರ್ವವೂ ಎಂದಾಗುತ್ತದೆ. ಎಷ್ಟೋ ವರ್ಷಗಳ ನಂತರ ಆರ್ಯರ ಧರ್ಮ ಮತ್ತು ಭಾರತದಲ್ಲಿ ಮೊದಲೇ ಇದ್ದ ಶೈವಧರ್ಮ ಎರಡೂ ಒಂದುಗೂಡಿ ಮುಂದೆ ಅದೂ ವೈದಿಕ ಅಥವಾ ಹಿಂದೂ ಧರ್ಮದ ಶಾಖೆಯಾಯಿತು. ಆದರೆ, ಈಗ ನಮಗೆ ಗೊತ್ತಿರುವಂತೆ ಶೈವಧರ್ಮದಲ್ಲಿ ಪಾಶುಪತ, ಕಾಳಾಮುಖ, ಶೈವಸಿದ್ಧಾಂತ(ತಮಿಳು ಶೈವ), ಕಾಶ್ಮೀರ ಶೈವ, ವೀರಶೈವ ಮುಂತಾದ ಅನೇಕ ಉಪಶಾಖೆಗಳಿವೆ.

ಶೈವಧರ್ಮದ ಒಂದು ಭಾಗ ವೀರಶೈವಧರ್ಮ ಎಂದಾಯಿತು. ವೀರಶೈವದ ಹಿನ್ನೆಲೆಯಲ್ಲಿ ಸೆಟ್ಟಿಯರ ಉಗಮದ ಪ್ರಾಚೀನತೆಯನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನಗಳು ಅಷ್ಟೇ. ಹೀಗಾಗಿ ಈ ಕತೆಗಳ ಆಧಾರಗಳಿಂದ ಸೆಟ್ಟಿಯರ ನಿಜವಾದ ಮೂಲ ಮತ್ತು ಮೂಲಪುರುಷರನ್ನು ಗುರುತಿಸುವುದು ಸಮಂಜಸವಲ್ಲ ಎನಿಸುತ್ತದೆ. ಆದರೆ ಆ ಸಮಯದಲ್ಲಿದ್ದ ವರ್ತಕ ಪ್ರಬೇಧ, ಅವರು ಸಮಾಜದಲ್ಲಿ ಹೊಂದಿದ್ದ ಸ್ಥಾನಮಾನ ನಿರ್ವಹಿಸುತ್ತಿದ್ದ ಕಸುಬುಗಳ ಮಾಹಿತಿ ಮಾತ್ರ ಬೆಲೆಯುಳ್ಳದ್ದು. ಶಿವನ ಸದ್ಯೋಜಾತ ಮುಖದಿಂದ ಹಸುಬೆಸೆಟ್ಟಿ, ವಾಮದೇವ ಮುಖದಿಂದ ವಾಲಿಸೆಟ್ಟಿ, ಅಘೋರ ಮುಖದಿಂದ ಸಂಗಮ ಶೆಟ್ಟಿ, ತತ್ಪುರುಷ ಮುಖದಿಂದ, ಭೂಸುರ ಸೆಟ್ಟಿ, ಈಶಾನ್ಯ ಮುಖದಿಂದ ಭಾರಮಾರ್ಗದ ಸೆಟ್ಟಿಯರು ಹುಟ್ಟಿದರೆಂಬ ಇನ್ನೊಂದು ಬಗೆಯ ಪೌರಾಣಿಕ ಕತೆಯೂ ಹಸ್ತಪ್ರತಿಯೊಂದರಲ್ಲಿದೆ(ಕನ್ನಡ ಸಂಶೋಧನ ಸಂಸ್ಥೆ, ಕಾಗದ ಪ್ರತಿ ೨೯೭). ಅಯ್ಯವಳ್ಳಿ ಪುರಾಧೀಶ್ವರನಾದ ಪಂಚವಕ್ತ್ರಗಣವರನಿಂದ ಪಂಚವಾಣಿಜರು ಜನಿಸಿದರು. ಇವರ ಹೆಸರು ಕೋರಿಸೆಟ್ಟಿ, ಮಹಾನಾಡಸೆಟ್ಟಿ, ವಾಲಿಶೆಟ್ಟಿ, ಪಟ್ಟಣಶೆಟ್ಟಿ, ಮಿಂಡಗುದ್ದಲಿಶೆಟ್ಟಿ(ನಿರಂಜನ ವಂಶರತ್ನಾಕರ, ಪು.೨೬-೨೮) ಇವರಲ್ಲದೆ ಗಣವರನಿಂದ ಗುಡಾರಶೆಟ್ಟಿ, ಬಣಕಾರಶೆಟ್ಟಿ, ಗುಣಹಾರಿಶೆಟ್ಟಿ ಇವರು ಮೂರು ವಾಣಿಜರು ಹುಟ್ಟಿದರು. ಈ ಅಷ್ಟವಾಣಿಜರು ಅವರವರ ಕಸುಬುಗಳನ್ನು ಮಾಡುತ್ತಾ ಇದ್ದಾರೆ. ಇವರೊಳಗೆ ಪಂಚವಾಣಿಜರೇ ಪ್ರಸಿದ್ಧರಾದರು. ಪ್ರಾಚೀನ ಕನ್ನಡ ನಾಡಿನ ಇನ್ನೊಂದು ವರ್ತಕ ಪ್ರಕಾರ ನಕರ(ಸಿ.ಟಿ.ಆಯ್, ಪು.೮೮

ಪೇರೂರ ನಲ್ಗೊಂಡ ಜಿಲ್ಲೆ) ಶಾಸನಗಳು ಇವರನ್ನು ಅಂಗಡಿ ಸೆಟ್ಟಿಯರೆಂದು (ಹಿ.ಕ.ಸ್ಪ.ರಿ.ಆ.ಬ.ನಂ.೫೪ ಮಾಶ್ಯಾಳ(ತಾ) ಅಫಜಲ್‌ಪುರ ಕ್ರಿ.ಶ.೧೧೯೯) ಕರೆದಿರುವುದರಿಂದ ಸಂತೆ ಪಟ್ಟಣಗಳ ಸ್ಥಿರವಾದ(ಸೌಇಇ.XVIII, ೩೩೮ ಹತ್ತಿಮತ್ತೂರ(ತಾ) ಹಾವೇರಿ ಸು.ಶ.II) ಅಂಗಡಿ ವ್ಯಾಪಾರಿಗಳವರೆಂದು ಹೇಳಬಹುದು. ಕುರಗೋಡ ಶಾಸನದ (ಸೌ.ಇ.ಇ.IX ೧೯೭೭, ಕುರಗೋಡ(ತಾ) ಬಳ್ಳಾರಿ ಕ್ರಿ.ಶ.೧೧೭೭) ಪಟ್ಟಣದ ನಖರರು ಉಲ್ಲೇಖ, ಇವರು ಹೆಚ್ಚಾಗಿ ಪಟ್ಟಣಗಳಲ್ಲಿ ವಾಸಿಸುತ್ತಿದ್ದರೆಂಬುದನ್ನು ಸೂಚಿಸುತ್ತದೆ.

ನಕರರು ಸಂತೆ ಪೇಟೆಗಳಿಗೆ ಬಂದ ವಿವಿಧ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಹಾಗೂ ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ಶೈವ ನಕರರು ನಾಡಿನ ಪ್ರಮುಖ ಪಟ್ಟಣಗಳ ತುಂಬೆಲ್ಲ ಪ್ರಸರಿಸಿದ್ದರು. ಇವರ ಆರಾಧ್ಯ ದೈವ ನಕರೇಶ್ವರ(ಶಿವ) ನಕರೇಶ್ವರ ದೇವಾಲಯ ಈ ದೇವರ ಹೆಸರಿನ ಗುಡಿ. ನಕರರಲ್ಲಿ ಕೆಲವು 'ಗ್ರಾಮಿಣಿ' (ನೀಚ)ಯರೂ ಇದ್ದರು. ಇಂಥವರು ಸ್ಥಾನಾಚಾರ್ಯರ ಬುದ್ಧಿಯನ್ನು ಪಲ್ಲವಗೊಳಿಸುವ ಅಪವಿತ್ರ ಕಾರ್ಯದಲ್ಲಿ ತೊಡಗಿದ್ದರು. ಆದುದರಿಂದ ಸ್ಥಾನಾಚಾರ್ಯರ ಮನೆ ಪ್ರವೇಶ ಇವರಿಗೆ ಪ್ರತಿಬಂಧಿತವಾಯಿತೆಂದು ಶ್ರವಣ ಬೆಳಗೊಳ ಶಾಸನ ತಿಳಿಸುತ್ತದೆ(ಎ.ಕ.II, ಶ್ರವಣಬೆಳಗೊಳ ೪೪೫, ಶ್ರವಣಬೆಳಗೊಳ(ಸು.ಶ.೧೩) ಹೀಗಾಗಿ ಅಂದು ನಕರ ಸಮಾಜಕ್ಕೆ ಇದ್ದಂಥ ಕೆಟ್ಟ ಹೆಸರೂ ಇದರಿಂದ ವ್ಯಕ್ತವಾಗುತ್ತದೆ. ಕೆಲವು ಸಲ ನಕರರು ಮತ್ತು ಸ್ಥಾನಾಚಾರ್ಯರ ಮಧ್ಯ ಹಲವು ವಿಷಯಗಳಿಗಾಗಿ ಒಪ್ಪಂದಗಳು ನೆರವೇರುತ್ತಿದ್ದವು (ಎ.ಕ.II, ಶ್ರವಣಬೆಳ್ಗೊಳ ೪೫೮, ಶ್ರವಣಬೆಳ್ಗೊಳ ಕ್ರಿ.ಶ.೧೨೮೯).

ಕೆಲವು ಸಲ ಪಟ್ಟಣದ ನಕರರ ಮೇಲ್ವಿಚಾರಣೆ ನೋಡಿಕೊಳ್ಳಲು ಚಕ್ರವರ್ತಿ ಆಡಳಿತಗಾರರನ್ನು ನಿಯಮಿಸುತ್ತಿದ್ದನು. (ತು.ನಾ.ಶಾ.ನಂ.೨೨ ಉದಯಾವರ(ತಾ) ಉಡುಪಿ(ಸು.ಶ.೯) ನಕರರು ಪಟ್ಟಣ ಪ್ರದೇಶಗಳಲ್ಲಿದ್ದು ಕೊಂಡು ಸತತ ಪರಿಶ್ರಮ, ಪ್ರಯತ್ನಗಳ ಮೂಲಕ ವ್ಯವಹಾರ ಕಾರ್ಯಗಳಿಗೆ ಜೀವ ತುಂಬಿದರು. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಪಟ್ಟಣಗಳ ಸಮಗ್ರ ಆರ್ಥಿಕಾಭಿವೃದ್ಧಿಯಲ್ಲಿ ನಕರರ ಪಾತ್ರ ಗಮನಾರ್ಹವಾಗಿದ್ದಿತು. ಅಲ್ಲದೆ, ಪಟ್ಟಣ ಜೀವನದ ಪ್ರಾಣಸ್ವರೂಪರಾಗಿ ಅವರು ಬಾಳಿದರು. ಬದುಕಿದರು. ಸೆಟ್ಟಿಯರಲ್ಲಿ ವಿವಿಧ ಧರ್ಮೀಯರು ಇದ್ದರು. ಸೆಟ್ಟಿಯರಲ್ಲಿಯೇ ವಂಶಪಾರಂಪರ್ಯವಾಗಿ ನಡೆದು ಬಂದ ಮಹಾಪ್ರಭು, ನಾಡಪ್ರಭು ಮನೆತನಗಳಿದ್ದವು. ಇನ್ನು ಕೆಲವರು ದಂಡನಾಯಕ,

ಸರ್ವಾಧಿಕಾರಿ ಸಾಮಂತರಾಗಿ ರಾಜ್ಯಭಾರ ನಿರ್ವಹಿಸಿದರು. ಒಟ್ಟಿನಲ್ಲಿ ಮತ, ಮನೆತನ, ಅಧಿಕಾರಗಳೆಂಬ ವೈವಿಧ್ಯಮಯ ಹಾಗೂ ವರ್ಣಮಯ ಬದುಕು ನಡೆಸಿದ ಸೆಟ್ಟಿಯರು ವ್ಯಾಪಾರರಂಗದ ಸಮರ್ಥ ವಾರಸುದಾರಿಕೆ ವಹಿಸಿದ್ದರು.

ವೀರಶೈವ ಮತವು ಅತಿ ಪ್ರಾಚೀನ ಕಾಲದಿಂದಲೂ ತನ್ನ ಉಚ್ಚಸ್ಥಾನದಲ್ಲಿ ಮಹಾವೈಭವದಿಂದ ಮೆರೆಯುತ್ತಿದ್ದುದು ವೇದಾಗಮ ಪುರಣೇತಿಹಾಸಗಳಿಂದ ಶೃತವಾಗುತ್ತದೆ. ಕೆಲವು ಪರವಾದಿಗಳ ಅಸೂಯಾಂಧತೆಯಲ್ಲಿ ಸಿಕ್ಕು ತನ್ನ ಪ್ರಗತಿಯ ಪ್ರಕಾಶಕ್ಕೆ ಕತ್ತಲಗವಿದು ಸುತ್ತಲಿನ ತೇಜಃ ಪುಂಜ ಧರ್ಮೋನ್ನತಿಗೆ ಅಡ್ಡಿಯಾಗಿತ್ತೆಂದು ಹಲವು ಇತಿಹಾಸಗಳಿಂದ ತೋರುತ್ತದೆ.

ವೀರಶೈವ ಧರ್ಮ ಹುಟ್ಟಿದ್ದೇ ಪ್ರತಿಕ್ರಿಯಾತ್ಮಕವಾಗಿ, ಸಮಾಜ ಜೀವನದಲ್ಲಿ ಹಬ್ಬಿದ್ದ ಅಂಧ ವಿಶ್ವಾಸಗಳನ್ನು ಕಿತ್ತೊಗೆದು, ಆಡಂಬರಗಳನ್ನು ಖಂಡಿಸಿ, ಸದಾಚಾರದಿಂದ ಸ್ವಾನುಭೂತಿಯಿಂದ, ಸತ್ಯನಿಷ್ಠೆಯಿಂದ ಸತ್ತ ಬಳಿಕವಲ್ಲ. ಈ ಜನ್ಮದಲ್ಲೇ ಧರಾಧಾಮವನ್ನು ಮೋಕ್ಷಾಧಾಮವನ್ನಾಗಿ ಮಾಡುವ ಪರಿಯನ್ನು ಶರಣರು ಬಿತ್ತರಿಸಿದರು. ಈ ರೀತಿ ಶಿವೇತ ರಕ್ಷತಿಗಾಗಿ ಹುಟ್ಟಿದ ವೀರಧರ್ಮ ವೀರಶೈವ ಧರ್ಮ, ಅಂತೆಯೇ ಅದರ ಸಾಹಿತ್ಯವೂ ವೀರಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿ ವೀರರಸಕ್ಕೆ ಪ್ರಾಧಾನ್ಯ. ಆದ್ದರಿಂದ ಅದು ವೀರಯುಗ ಇಲ್ಲವೆ ಕ್ಷಾತ್ರಯುಗವೆನಿಸಿತು. ಲೋಕ ಜೀವನದಲ್ಲಿ ಪ್ರಾಪ್ತವಾಗಿದ್ದ ಈ ವೀರವೇ ಧರ್ಮ ಜೀವನವನ್ನು ಹೊಕ್ಕು ವೀರಶೈವ ಎನಿಸಿತು. ಈ ವೀರಶೈವ ಜನಾಂಗದಲ್ಲಿ ಸೆಟ್ಟಿ ಕುಲದವರು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿರುವ ಅವರು ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಕೊಡುಗೆಗಳನ್ನು ಸಲ್ಲಿಸಿರುವರು.

ಕ್ರಿ.ಶ.೧೫೫೯ರಲ್ಲಿ ಬಸರೂರಿನ ಪಡುವಕೇರಿಯ ಸೆಟ್ಟಿಕಾರರಾದ ಜೊಕಿಸೆಟ್ಟಿಯ ಮಗಳಾದ ಕೋಚಿಸೆಟಿ, ನಾರಾಣಸೆಟ್ಟಿಯ ಹೆಂಡತಿ ತಿರುಮಕಸೆಟ್ಟಿ, ಇಬ್ಬರೂ ಸೇರಿಸಿ ಮಠವೊಂದನ್ನು ಕಟ್ಟಿಸಿ ಭೂಮಿಯನ್ನು ದಾನವಾಗಿ ನೀಡಿರುವರು.(ಸ.೧೨೫, ಬಸ್ರೂರು, ಕ್ರಿ.ಶ.೧೫೫೯). ಕ್ರಿ.ಶ.೧೫೭೦ರ ಮತ್ತೊಂದು ಶಾಸನದಲ್ಲಿ ಸಂಕರಸೆಟ್ಟಿ ಎಂಬುವನು ತನ್ನ ಮೊಮ್ಮಗಳಾದ ತಿರುಮಕ್ಕರಾವುತಿಗೆ ಮಕ್ಕಳು ಇಲ್ಲದ ಕಾರಣ ಆಕೆಯ ಬಳಿಯಿದ್ದ ಬಂಗಾರದಿಂದ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ಗದ್ದೆ ಮತ್ತು ವರಹಗಳನ್ನು ದಾನವಾಗಿ ನೀಡಿದ ವಿಷಯವಿದೆ(ಸಂ.೧೩೨ ಬಸ್ರೂರು, ಕ್ರಿ.ಶ.೧೫೭೦). ಈ ರೀತಿಯಾಗಿ ಶಾಸನಗಳಲ್ಲಿ

ಶೆಟ್ಟಿಗಳ ಉದಾರತೆ, ದಾನಶೀಲತೆಯ ಬಗ್ಗೆ ಸಾಕಷ್ಟು ದೃಷ್ಟಾಂತಗಳಿವೆ. ಈ ವಿಷಯವಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರವಾದ ವಿಷಯವನ್ನು ಒಳಗೊಂಡಿದೆ.

೨.೨.೩. ವೈಶ್ಯಕುಲ

ಕನ್ನಡದ ಮೊದಲ ಕೃತಿ 'ಕವಿರಾಜಮಾರ್ಗ'ದಲ್ಲಿ ನಾಲ್ಕು ವರ್ಣಗಳನ್ನು ಹೇಳಿ ಅವುಗಳನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂಬ ಅನುಕ್ರಮದಲ್ಲಿ ಹೇಳಿದೆ. ಪಶುಪಾಲನೆ, ವ್ಯಾಪಾರ, ವ್ಯವಸಾಯ ವೈಶ್ಯರ ವೃತ್ತಿಯಾಗಿದೆ. ವೃತ್ತಿಪರವಾಗಿ ಗುರುತಿಸಲ್ಪಟ್ಟ ವೈಶ್ಯಕುಲವು ವ್ಯಾಪಾರದಲ್ಲಷ್ಟೇ ಅಲ್ಲ ಸಮಾಜದ ಕಲ್ಯಾಣಕ್ಕೂ ಶ್ರಮಿಸಿದೆ. ಇವರು ಜೀವಂತವಾಗಿ ಬದುಕಿದ್ದಷ್ಟೇ ಅಲ್ಲ, ಬದುಕನ್ನೇ ಶ್ರೀಮಂತಗೊಳಿಸಿದವರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅನನ್ಯವಾದುದು. ಈ ದಿಸೆಯಲ್ಲಿ ವೈಶ್ಯಕುಲವು ಉತ್ತಮ ಮಟ್ಟದಲ್ಲಿದೆ. ವಾಣಿಜ್ಯ ಕ್ಷೇತ್ರದಲ್ಲಿಯಂತೂ ಇವರ ಸೇವೆ ಅಪಾರವಾದುದು. ಈ ವೈಶ್ಯ ಕುಲವನ್ನು ಸೆಟ್ಟಿ, ಶೆಟ್ಟಿ, ಶ್ರೇಷ್ಠಿ, ಚೆಟ್ಟಿ, ಕೋಮಟಿ, ಗುಪ್ತ ಎನ್ನುವ ಹೆಸರಿನಿಂದ ಕರೆಯುವುದುಂಟು. ಈ ವೈಶ್ಯರ ಕುಲದವರು ಮಾತೆ ವಾಸವಿಯನ್ನು ಕುಲದೇವತೆಯೆಂದು ನಂಬಿದ್ದಾರೆ. ಆ ಕಾಲದ ವೈಶ್ಯರ ತಪೋನಿಷ್ಠೆ, ಕ್ಷಾತ್ರ ತೇಜಸ್ಸು, ಕುಲ ಧರ್ಮ, ವಿಶ್ವಾಸ ಆಶ್ಚರ್ಯ ತರುವಂತಹುದಾಗಿದೆ. ತಮ್ಮ ತಕ್ಕಡಿ ಒಪ್ಪಿಕೊಂಡು ಪಶುಬಲ, ಅಧಿಕಾರಬಲ ಮತ್ತು ಧನಬಲಗಳಿಗೆ ನಮಿಸಿ ಜಯಕಾರ ಮಾಡುವುದು ನಮ್ಮ ಜನರಲ್ಲಿ ಈಗ ಅನೇಕರ ಸೌಭಾಗ್ಯವಾಗಿದೆ. ಇವರ ಆರಾಧ್ಯ ದೇವತೆ ಶ್ರೀ ಕನ್ನಿಕಾ ಪರಮೇಶ್ವರಿಯಾಗಿದ್ದಾಳೆ. ಈ ದೇವಿಯನ್ನು ವಾಸವಾಂಬ, ವಾಸವಿ, ಕನ್ನಿಕಾಂಬ ಎಂಬ ಹಲವು ನಾಮಧೇಯದಿಂದ ಕರೆಯುವರು ಎನ್ನುವುದು ಪುರಾಣಗಳಿಂದ ತಿಳಿದು ಬರುತ್ತದೆ.

ಆರ್ಯವೈಶ್ಯರು ವೈಶ್ಯ ಜನಾಂಗಕ್ಕೆ ಸೇರಲ್ಪಟ್ಟವರು. ವೈಶ್ಯತ್ವ ಎಂದರೆ ಅದೊಂದು ಜಾತಿ. ಅದು ಮೂರನೆಯ ವರ್ಣವೆಂದು ಸರ್ವಸಾಧಾರಣ ಸಮ್ಮತಿಯನ್ನು ಪಡೆದಿದೆ. ಇವರನ್ನು ಕೋಮಟಿಗಳೆಂದೂ ಕರೆಯುತ್ತಾರೆ. ಗೋಲೋಕದಲ್ಲಿ ಸುಖವಾಗಿದ್ದ ಸುರಭಿಯನ್ನು ಮಾತೃಭಾವದಿಂದ ಯಾಚಿಸಿ, ನಂತರ ಆ ಕಾಮಧೇನುವನ್ನು ಪೂಜಿಸಿ ಅವರು "ಗೋಮಠ"ರೆಂದು ಪ್ರಸಿದ್ಧರಾದರು. ಗೋವು ತನ್ನ ಗರ್ಭದಲ್ಲಿ ವೈಶ್ಯರನ್ನು ಧರಿಸಿದ ಕಾರಣ ಅವರಿಗೆ ಗೋಮಠರು ಎಂಬ ಹೆಸರು ಬಂದಿದೆಯೆಂದು ಪುರಾಣಗಳು ತಿಳಿಸುತ್ತವೆ. ಇವರು

ಲಕ್ಷ್ಮಿ ಪುತ್ರರೆಂದೇ ಹೆಸರು ಗಳಿಸಿರುವರು. ಪ್ರಾಚೀನ ಕಾಲದಿಂದಲೂ ಇವರು ವ್ಯಾಪಾರದಲ್ಲಿ ಎತ್ತಿದ ಕೈ.

ಸೃಷ್ಟಿಕರ್ತನಾದ ಪರಮಾತ್ಮನು ಸೃಷ್ಟಿ ಕಾರ್ಯವು ನಿಯಮಬದ್ಧವಾಗಿ ನಡೆಯಲು ಋಷಿಗಳನ್ನು ನಾಲ್ಕು ವರ್ಗಗಳಾಗಿ ವಿಭಜಿಸಿ, ಅವರವರ ಧರ್ಮಗಳನ್ನು ಅವರವರೇ ಆಚರಿಸಿ, ಧರ್ಮಾಧಿ ಮೋಕ್ಷ ಪರ್ಯಂತ ಇರುವ ಪುರುಷಾರ್ಥಗಳನ್ನು ಪಡೆದು ಧನ್ಯರಾಗಲೆಂದು ನಿಯಮಿಸಿದರು. ಬೋಧಕ ವರ್ಗ, ಪಾಲಕವರ್ಗ, ಪೋಷಕವರ್ಗ ಮತ್ತು ಸೇವಕ ವರ್ಗಗಳೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬ ನಾಲ್ಕು ವರ್ಗಗಳು, ಈ ನಾಲ್ಕು ವರ್ಣಗಳು ಅವರವರ ಸ್ಥಾನಗಳಲ್ಲಿ ವಿಶಿಷ್ಟವಾಗಿ, ವಿಭಿನ್ನವಾಗಿ ಕಾಣಿಸಿಕೊಂಡರೂ ಎಲ್ಲವೂ ಸಮವೇ. ವೈಶ್ಯರು ಷಟ್ಕರ್ಮವನ್ನು ವೇದೋಕ್ತ ಪದ್ಧತಿಯಿಂದ ಆಚರಿಸಿ ಸ್ವಧರ್ಮವಾದ ಕೃಷಿ, ಗೋರಕ್ಷೆ, ವಾಣಿಜ್ಯಗಳನ್ನು ಉದ್ಯೋಗಗಳೊಂದಿಗೆ ಆಚರಿಸಿ, ಪರಮೇಶ್ವರನಿಗೆ ಮೆಚ್ಚುಗೆಯಾಗುವಂತೆ ಮಾಡಿ, ಚಿತ್ತಶುದ್ಧಿಯನ್ನು ಹೊಂದಿ, ಪರಮ ಪುರುಷಾರ್ಥವಾದ ಮೋಕ್ಷವನ್ನು ಪಡೆದಿರುವಂತಹ ಘಟನೆಗಳು ಹಲವಾರು. ಧರ್ಮಪಾಲರಾಗಿ, ಗುರುಗಳನ್ನು ಸೇವಿಸಿ ಧನ್ಯರಾದವರು ಧರ್ಮ ಗುಪ್ತರು. ಇವರು ಚ್ಯವನ ಮಹರ್ಷಿಗಳನ್ನು ಆಶ್ರಯಿಸಿ ವೇದ ವೇದಾಂಗಗಳ ಅಧ್ಯಯನ ಮಾಡಿ ಅವರ ಕೃಪೆಗೆ ಪಾತ್ರರಾಗಿ, ಕರ್ತವ್ಯ ನಿಷ್ಠನಾದುದರಿಂದ ವಾಸುಕಿಯ ಅನುಗ್ರಹವನ್ನು ಹೊಂದಿ ಆದಿಶೇಷನ ದರ್ಶನ ಮಾಡಿ, ಅವರ ಅನುಗ್ರಹದಿಂದ ಹಲವಾರು ವಿಷಯಗಳನ್ನು ತಿಳಿದುಕೊಂಡು, ಗುರುಸನ್ನಿಧಿಗೆ ಬಂದು ಉತ್ತಮವಾದ ಗೃಹಸ್ಥನಾಗಿ ಧನ್ಯನಾದನು. ವೈಶ್ಯ ಮಹರ್ಷಿಗಳು ಆಹಾರ ನಿದ್ರೆಗಳನ್ನು ತ್ಯಜಿಸಿ, ಇಷ್ಟ ವಸ್ತುವನ್ನು ಪರಿತ್ಯಾಗ ಮಾಡಿ, ತಪಸ್ಸನ್ನು ಆಚರಿಸಿ, ಪರಶಿವನನ್ನು ಮೆಚ್ಚಿಸಿ, ಅವನ ದರ್ಶನವನ್ನು ಪಡೆದು ಕೈಲಾಸವನ್ನು ಸೇರಿದರು. ತನ್ನ ಸನ್ನಿಧಿಗೆ ಬಂದ ವೈಶ್ಯರನ್ನು ಬರಮಾಡಿಕೊಂಡು ವೈಶ್ಯರು ಭೂಲೋಕದಲ್ಲಿ ಇಲ್ಲದಿರುವುದರಿಂದ ಕೃಷಿ ಗೋರಕ್ಷ ವಾಣಿಜ್ಯಗಳು ನಿಂತು ಹೋದ ಪರಿಣಾಮವಾಗಿ, ಪುನಃ ಅವುಗಳನ್ನು ನಿರ್ವಹಿಸಲು ವೈಶ್ಯರನ್ನು ಭೂಲೋಕಕ್ಕೆ ಕಳುಹಿಸಿದನು. ವೈಶ್ಯರು ಶಿವನ ಸಾನ್ನಿಧ್ಯವನ್ನು ಬಿಡಲು ಇಷ್ಟಪಡಲಿಲ್ಲ. ಆದರೂ ಅವರನ್ನು ಓಲೈಸಿ ಹರಸಿ ಭೂಲೋಕಕ್ಕೆ ಕಳುಹಿಸಿದನು. ಇಂತವರಲ್ಲಿ ಹಲವಾರು ಮಹಾತ್ಮರೂ, ತ್ಯಾಗಿಗಳೂ, ವೇದಸಂಪನ್ನರೂ ಮತ್ತು ಪಂಡಿತರೂ ಜನ್ಮಿಸಿದ್ದಾರೆ. ತುಲಾಧರನು ತಾಯಿ, ತಂದೆಗಳ ಸೇವೆ ಮಾಡಿ ಸ್ವಧರ್ಮವನ್ನು ನಿರ್ವಹಿಸುತ್ತಾ ತನ್ನ ಹತ್ತಿರ ಬಂದಿದ್ದ ಜಾಜಲಿ ಎಂಬ ಬ್ರಾಹ್ಮಣೋತ್ತಮನ

ಸಂದೇಹಗಳನ್ನು ನಿವಾರಿಸಿ ಕಳುಹಿಸಿದನು. ತಾನೂ ಧನ್ಯನಾದನು ಎನ್ನುವ ಸಂಗತಿಗಳು ಪುರಾಣಗಳ ಆಧಾರದಿಂದ ತಿಳಿದುಬರುತ್ತದೆ.

"ವಿಶ್ವಕರ್ಮನು ನಿರ್ಮಿಸಿದ ಹದಿನೆಂಟು ಪಟ್ಟಣಗಳಲ್ಲಿ ಪೆನುಗೊಂಡೆ ನಗರವನ್ನು ಮುಖ್ಯ ಪಟ್ಟಣವಾಗಿ ಮಾಡಿ ರಾಜ್ಯವನ್ನಾಳಿದ ಶ್ರೀ ಕುಸುಮಶ್ರೇಷ್ಠಿ ಮತ್ತು ಕುಸುಮಾಂಬೆಯರ ಗರ್ಭಾಂಬುಧಿಯಲ್ಲಿ ಪುತ್ರಕಾಮೇಷ್ಠಿ ಯಜ್ಞದ ಫಲವಾಗಿ ಶ್ರೀವಾಸವಿ ಅವತರಿಸಿದಳು. ವಿರುಪಾಕ್ಷನು ಜೊತೆಯಲ್ಲಿಯೇ ಜನಿಸಿ ಕುಸುಮಶ್ರೇಷ್ಠಿಯ ಮಗನಾದನು. ಶ್ರೀ ವಾಸವಿಯ ವಿಶ್ವರೂಪವನ್ನು ಆರಾಧಿಸಿ, ವಿಷ್ಣುವರ್ಧನ ಮಹಾರಾಜನ ಮೋಹವನ್ನು ಖಂಡಿಸಿ, ಪರಮ ಪುಣ್ಯವಂತರಾದ ೧೦೨ ವೈಶ್ಯ ದಂಪತಿಗಳ ಜೊತೆಯಲ್ಲಿ ತಾನೂ ಕೂಡ ಅಗ್ನಿಕುಂಡದಲ್ಲಿ ಪ್ರವೇಶಿಸಿ ಆತ್ಮಾರ್ಪಣೆ ಮಾಡಿಕೊಂಡಳು. ಅವರೆಲ್ಲರಿಗೂ ದಿವ್ಯಲೋಕವು ಪ್ರಾಪ್ತಿಯಾಗಿ ಮೋಕ್ಷ ಲಭಿಸಿತು" ಎಂದು ವೈಶ್ಯಕುಲದವರು ನಂಬಿದ್ದಾರೆ ಎನ್ನುವುದು ಧರ್ಮಗ್ರಂಥಗಳ ಆಧಾರದಿಂದ ವಿಧಿತವಾಗುತ್ತದೆ.

ಕರ್ನಾಟಕ ಮತ್ತು ಆಂಧ್ರದಲ್ಲಿ ವೈಶ್ಯರು ಅಥವಾ ಕೋಮಟಿಗರನ್ನು ಆರ್ಯವೈಶ್ಯರೆಂತಲೂ, ಕೋಮಟಿಗರೆಂತಲೂ, ಸೆಟ್ಟರೆಂತಲೂ ಕರೆಯುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ನಿಘಂಟಿನ ಪ್ರಕಾರ ಕೋಮಟಿ ಒಂದು ಜನಾಂಗ. ಕನ್ನಡ ಕಾವ್ಯ ನಾಟಕಗಳಲ್ಲಿ, ಶಾಸನಗಳಲ್ಲಿ, ಗಾದೆಗಳಲ್ಲಿ, ಜನಪದ ಕಥನ ಕಾವ್ಯಗಳಲ್ಲಿ ಮತ್ತು ರೂಢಿಯಲ್ಲಿ ಈ ಜನಾಂಗವನ್ನು ಕೋಮಟಿಗರೆಂದೇ ಗುರುತಿಸಿದ್ದಾರೆ.

೧. ಕೋಮಟಿಯನು ಮತದಿ ಮರುಳಾಗಿ ಶಿವನುಂ ತನಯನಂ ಕಾಮಿಸಿ ಕೊಲಿಸಿದನು (ಬಸವ ಪುರಾಣ).

೨. ಸಿರಿವಂತ ಕೋಮಟಿಗ ಮಲ್ಲಿಸೆಟ್ಟಿಯುಮೆಂಬ ಹರಿದಂಗೆ (ಗುರುರಾಜ ಚಾರಿತ್ರ).

೩. ಕೋಮಟಿಗನಾ ಕಪಿಲನಂ ಪಿಡಿದು ಭೂವರಂಗೆ ವೈರವೆರಸೀಯಲ್ (ಕೊಟ್ಟೂರ ಬಸವೇಶ್ವರ ಪುರಾಣವು).

೪. ಬೇಡಿದುದನು ಕೊಟ್ಟಪೆವೆಂದು ಸೇವೆ ಮಾಡಿಸಿಕೊಂಡು ಭಟರನು ಖೋಡಿಗಳೆವ ಕೋಮಟಿಗ ದೊರೆಗಳ ಬಿಟ್ಟು ಕೂಡಿತು ವೀರರಾಮನಿಗೆ (ಕುಮಾರರಾಮ ಸಾಂಗತ್ಯ).

೫. ಅನಘನೀತನ ಮಹಿಮೆಯಂ ನೋಡವೇಳ್ಕೆಂದು ವಿನಯದಿಂ ಕೋಮಟಿಗನಾಲಯಕೆ ಬಸವೇಶನೊಡಗೊಂಡು ನಡೆತಂದನು (ಗುರುರಾಜ ಚಾರಿತ್ರ) ಎಂದು ಹಳಗನ್ನಡ ಕಾವ್ಯದಲ್ಲಿ ಉಲ್ಲೇಖಗಳಿವೆ.

ವೈಶ್ಯರು ನಮ್ಮ ರಾಜ್ಯದಲ್ಲಿ ಆರ್ಯವೈಶ್ಯರೆಂದು ಕರೆದುಕೊಳ್ಳುತ್ತಾರೆ. ಹಿಂದೆ ಅವರು ಆಂಧ್ರದಿಂದ ವಲಸೆ ಬಂದಿರಬಹುದೆಂದೂ ಅಭಿಪ್ರಾಯವಿದೆ. ಉತ್ತರ ಕರ್ನಾಟಕ ಗೆಝೆಟಿಯರ್ ನಲ್ಲಿ ಇವರು ಅಚ್ಚ ಕನ್ನಡಿಗರು ಮತ್ತು ಇವರ ಭಾಷೆ ಕನ್ನಡ ಎಂದು ಹೇಳಲಾಗಿದೆ. ಕೋಮಟಿಗರು ವಂಶಪಾರಂಪರ್ಯವಾಗಿ ಉದ್ಯೋಗ, ವ್ಯಾಪಾರ ಮತ್ತು ವಾಣಿಜ್ಯದಲ್ಲಿರುವವರು. ಹಣ ಪ್ರಧಾನವಾದ ಸಮಾಜವಾದ್ದರಿಂದ ಅವರು ಸಹಜವಾಗಿ ಹಣಕಾಸಿನ ವ್ಯವಹಾರದಲ್ಲಿ ಚತುರರು.

ಸಾಮಾನ್ಯವಾಗಿ ಪಾಶ್ಚಿಮಾತ್ಯ ಚರಿತ್ರಕಾರರು ಬರೆದಂತೆ ಸಿಂಧೂ ಕಣಿವೆಯ ಮೆಹಂಜೋದಾರೋ, ಹರಪ್ಪಾ, ಲೋಥಾಲ್ ಮುಂತಾದ ಸಂಸ್ಕೃತಿಗಳು ದ್ರಾವಿಡ ಸಂಸ್ಕೃತಿಗಳು. ಈ ದ್ರಾವಿಡ ಜನರೇ ಉತ್ತರ ಭಾರತದಲ್ಲೆಲ್ಲಾ ನೆಲೆಸಿದ್ದರು. ಆದರೆ ಅನಂತರ ಏಷಿಯಾ ಮೈನರ್‌ನಿಂದ ಆಗಮಿಸಿದ ಆರ್ಯನ್ ಯೋಧರು ಈ ಸಂಸ್ಕೃತಿಯನ್ನು ನಾಶ ಮಾಡಿದರು. ಜನರನ್ನು ಗುಲಾಮರನ್ನಾಗಿ ಮಾಡಿದರು. ದ್ರಾವಿಡರ ನಗರಗಳನ್ನು ನಾಶ ಮಾಡಿದ ಆರ್ಯರು ತಮ್ಮ ಧರ್ಮ, ಭಾಷೆ ಮತ್ತು ಸಂಸ್ಕೃತಿಯನ್ನು ಇಲ್ಲಿನವರ ಮೇಲೆ ಹೇರಿದರು. ಬಹುತೇಕ ಸಾಮಾನ್ಯರು ವಿಂಧ್ಯ ಪರ್ವತಾವಳಿಯನ್ನು ದಾಟಿ ದಕ್ಷಿಣ ಭಾರತಕ್ಕೆ ಓಡಿಸಲ್ಪಟ್ಟರು. ಸಿಂಧು ಕಣಿವೆಯ ನಗರಗಳನ್ನು ಯಾವ ದಾಳಿಕೋರರೂ ನಾಶ ಮಾಡಲಿಲ್ಲ. ಪರಿಸರ ಮತ್ತು ಭೂಗರ್ಭದ ಬದಲಾವಣೆಗಳಿಂದ ಭೂಕಂಪದಿಂದ, ನೆರೆಹಾವಳಿಯಿಂದ, ಸಿಂಧು-ಸರಸ್ವತಿ ನದಿಗಳು ಪಾತ್ರ ಬದಲಾಯಿಸುತ್ತಿದ್ದುದರಿಂದಲೂ ಈ ನಗರಗಳು ನಾಶವಾದವು. ಉತ್ತರದ ಜನರು ದಕ್ಷಿಣದ ಕಡೆಗೆ ಬರಲೇ, ಇಲ್ಲ. ಬದಲಾಗಿ ಅವರು ಪೂರ್ವ ಭಾಗದ ಗಂಗಾ ಬಯಲಿಗೆ ಪಯಣಿಸಿದರು. ಹೊರಗಿನಿಂದ ವಲಸೆ ಬಂದವರೆಲ್ಲಾ ಗಂಗಾ ಬಯಲಿಗೆ ತೆರಳಿ ನೆಲೆಸಿದರು. ದಕ್ಷಿಣದ ಅತ್ಯಂತ ಪ್ರಾಚೀನ ಭಾಷೆಗಳಾದ ತಮಿಳು ಮತ್ತು ಕನ್ನಡ ಸಾಹಿತ್ಯದಲ್ಲೆಲ್ಲೂ ಉತ್ತರದಿಂದ ದಕ್ಷಿಣಕ್ಕೆ ಜನರು ವಲಸೆ ಬಂದ ಉಲ್ಲೇಖಗಳಿಲ್ಲ. ವೇದಗಳಲ್ಲಿ ಆರ್ಯ ಎಂಬ ಸಂಬೋಧನೆ ಮಾಡಲಾಗಿದೆ. ಅದು ಜನಾಂಗ ವಾಚಕವಲ್ಲ. ಗೌರವ ಸೂಚಕ ಪದ. ಜನಾಂಗಗಳು ತಮ್ಮ ಜಾತಿಗಳನ್ನು ಬದಲಾಯಿಸಿಕೊಂಡಿವೆ

ಮತ್ತು ಬದುಕಲೆಂದು ವಲಸೆ ಹೋಗಿವೆ. ಸೌರಾಷ್ಟ್ರದ ನೇಕಾರರು ಮಧುರೆಗೆ ಹೋಗಿ ಅಯ್ಯಂಗಾರರಾದರು. ಪುರಾತನ ಭಾರತದಲ್ಲಿ ಶ್ರೇಷ್ಠಿಗಳು ಉತ್ತರದಲ್ಲಿ ಸೇಠ್ ಮತ್ತು ಸೇಠಿಗಳಾದರೆ, ಆಂಧ್ರ ಕರ್ನಾಟಕದಲ್ಲಿ ಶೆಟ್ಟರೆನಿಸಿದರು. ಅವರೇ ತಮಿಳುನಾಡಿನಲ್ಲಿ ಚೆಟ್ಟಿಯರಾದರು.

ಬೇಲೂರಿನ ಶಾಸನವೊಂದರಲ್ಲಿ ಬೇಲೂರ ಕೋಮಟಿಗನ ಮಂನಾರಿಸಿದವನ ಸೇವಾರ್ಥ ಎಂದು ಉಲ್ಲೇಖಿಸಲಾಗಿದೆ(ಎ.ಕ.೧೫, ಬೇಲೂರು ೨೬೮, ಕ್ರಿ.ಶ.೧೨೯೯). ಈ ಜನಾಂಗದವರು ಬಹುತೇಕ ಚಿನ್ನ, ಬೆಳ್ಳಿ, ವ್ಯಾಪಾರ, ಹಣಕಾಸಿನ ಲೇವಾದೇವಿ, ಎಣ್ಣೆ, ಅಕ್ಕಿ, ಜವಳಿ ಗಿರಣಿಗಳು, ಕಾಫಿ, ಏಲಕ್ಕಿ ಮುಂತಾದ ಬೆಳೆಗಾರರೂ ಖಾದ್ಯ ವಸ್ತು ತಯಾರಕರೂ ಆಗಿರುತ್ತಾರೆ. ಡಾ. ಶಂಬಾಜೋಶಿ ಅವರು ಕೋಮಟಿಗ ಪದವನ್ನು ಕೊಂ+ಅಟಿಗ ಅಂದರೆ ಕೊಂಡು ಮಾರುವವನು ಎಂದು ನಿರ್ವಚನ ಮಾಡಿದ್ದಾರೆ. ತೆಲುಗು ಭಾಷಾತಜ್ಞರು ಕೋಮಟಿಗ ಎಂದರೆ ಕೊನುನಮ್ಮುನಟ್ಟಿವಾಡುಕೊನು ಅಮ್ಮು ಅಟ್ಟಿವಾಡು ಕೊನಮ್ಮಟಿವಾಡು-ಕೋಮಟಿ ಎಂದು ತರ್ಕಿಸಿದ್ದಾರೆ. ಆದರೆ ಕೋಮಟಿಗರ ಪವಿತ್ರ ಗ್ರಂಥವಾದ 'ಶ್ರೀ ಕನ್ನಿಕಾಪರಮೇಶ್ವರಿ ಪುರಾಣ'ದಲ್ಲಿ 'ಗಾಂ' ಪಾಲನೇನ ಮತಿರ್ಸುದ್ಧಿರ ಸ್ಯಸಃ ಗೋಮತಿಃ ಎಂದರೆ ಗೋವುಗಳ ಲಾಲನೆ ಪಾಲನೆಯಲ್ಲಿ ಪ್ರೀತಿ ಆಸಕ್ತಿ ಉಳ್ಳವನು ಗೋಮತಿ ಎನ್ನಲಾಗಿದೆ. ಗೋಮತಿ ಗೋಮಠವಾಗಿ ಕೋಮಟಿಗ ಆಗಿದೆಯೆಂದು ಅಭಿಪ್ರಾಯ. ಋಗ್ವೇದದಲ್ಲಿ 'ಗಾಂ' ವೇದವಚನಾನಿಪಾಲನೇನ ಮತಿರ್ಸ್ಜುದ್ಧಿರಸ್ಯಸಃ ಆಚರಣೇ ವೈಶ್ಯಧರ್ಮ ಪರಾಃ ಎಂದು ಹೇಳಲಾಗಿದೆ. ಗೋ ಪರಿಪಾಲನೆ ಮಾಡುವವರು, ಗೋಮಠ ನಡೆಸುವವರು ವೈಶ್ಯರು ಎಂದಾಗಿದೆ. ಅಮರಕೋಶದಲ್ಲಿ ಕೂಡಾ ಗವಾಂ ಮಠಾಃ ಗೋಮಠಾಃ ಎಂದಿದ್ದಾರೆ.

ಭಾರತದ ಎಲ್ಲ ಪ್ರಾಂತಗಳಲ್ಲಿ ವೈಶ್ಯರಿದ್ದಾರೆ. ಉತ್ತರದಲ್ಲಿ ಬಿರ್ಲಾ, ಗುಪ್ತಾ, ಲೋಹಿಯಾ, ಬನಿಯಾ, ಬಜಾಜ್, ಅಗರ್ ವಾಲ್, ಮಾಹೇಶ್ವರಿ, ಗಾಂಧಿ ಮುಂತಾದ ನೂರಕ್ಕೂ ಹೆಚ್ಚು ವಿಭಾಗಗಳಿವೆ. ಅಲ್ಲಿಯವರು ಪೂರ್ವತಃ ವಿಷ್ಣುಭಕ್ತರು, ಆದ್ದರಿಂದ ಅವರು ತಮ್ಮನ್ನು ವೈಷ್ಣವ ಜನ, ವೈಷ್ಣೋಯಿ ಎಂದು ಕರೆದರು. ದಕ್ಷಿಣದ ಪಕ್ಕಾ ದ್ರಾವಿಡ ಪಂಗಡವಾದ ಕೋಮಟಿಗರನ್ನು ಅವರು ತಮ್ಮವರೆಂದು ಭಾವಿಸುವುದಿಲ್ಲ. ವೈಶ್ಯರಲ್ಲಿ ಮೂರು ಮುಖ್ಯ ವಿಭಾಗಗಳಿವೆ. ಅವು ಪರಸ್ಪರ ಸಂಬಂಧಗಳಿಲ್ಲದಿರುವುದರಿಂದ ಪ್ರತ್ಯೇಕ ಜಾತಿಗಳಂತೆಯೇ ಆಗಿವೆ. ಅವುಗಳೆಂದರೆ ಗವರ, ತುಪ್ಪದ ಮತ್ತು ತ್ರೈವರ್ಣಿಕ ಅಥವಾ ಎಣ್ಣೆಯ ಪಂಗಡಗಳು.

ಗವರ ಪಂಗಡದವರು ಶಿವನ ಸತಿಯಾದ ಗೌರಿಯ ಸಂಬಂಧದಿಂದ ತಾವೇ ಶ್ರೇಷ್ಠರೆಂದು ಭಾವಿಸುತ್ತಾರೆ. ಗವರ ವೈಶ್ಯರು ಆಂಧ್ರದ ಶ್ರೀಕಾಕುಳಂ ಮುಂತಾದ ಕಡೆ ಬಹು ಸಂಖ್ಯೆಯಲ್ಲಿ ಕಾಣಬಹುದು. ಅಲ್ಲಿ ಕಳಿಂಗದಿಂದ ಶ್ರೀ ಕೃಷ್ಣದೇವರಾಯರ ಕಳಿಂಗ ದಿಗ್ವಿಜಯದ ಕಾಲದಲ್ಲಿ ವಲಸೆ ಬಂದ ಮಾಂಸಾಹಾರಿಗಳಾದ ಕಳಿಂಗ ವೈಶ್ಯರಿದ್ದಾರೆ. ಕೋಮಟಿಗರು ಮುಖ್ಯವಾಗಿ ಶಿವಾರಾಧಕರು. ಅವರ ಆರಾಧ್ಯ ದೈವವೆಂದರೆ ಶ್ರೀನಗರೇಶ್ವರಸ್ವಾಮಿ ಮತ್ತು ಶ್ರೀ ಕನ್ನಿಕಾ ಪರಮೇಶ್ವರಿ. ಶ್ರೀದೇವಿ ಭೂದೇವಿ ಸಮೇತ ಶ್ರೀ ಜನಾರ್ಧನ ಸ್ವಾಮಿಯನ್ನು ಪೂಜಿಸುತ್ತಾರೆ. ಜಾನಪದರು 'ಮಾತಂಗಿ'ಯನ್ನೇ ಕೋಮಟಿಗರು ಕನ್ನಿಕೆಯೆಂದು ಪೂಜಿಸುತ್ತಾರೆ. ಉತ್ತರ ಕರ್ನಾಟಕದ ಕೋಮಟಿಗರಿಗೆ ಕನ್ನಡವೇ ಮನೆ ಮಾತು ಮತ್ತು ವ್ಯವಹಾರದ ಮಾಧ್ಯಮ ವಾಗಿದೆ. ಕೆಲವರ ಮನೆ ಮಾತು ತೆಲುಗು ಇರಬಹುದು. ವಿಜಯನಗರದ ಸಾಮ್ರಾಜ್ಯದ ಕಾಲದವರೆಗೆ ಭಾಷೆಗಳು ಇವರನ್ನು ಒಗ್ಗೂಡಿಸುವ ಸಾಧನಗಳಾಗಿದ್ದವು. ಕಾರವಾರ ಜಿಲ್ಲೆಯಲ್ಲಿ ಬೇರೆ ಪ್ರಾಂತದಿಂದ ವಲಸೆ ಬಂದ ಭಾಟಿಯಾ, ಕಾಲವಾಡಿ, ಬಾವಕುಳೆ, ಪೆಚಣೀಕರ, ಅಗರವಾಲ, ಸೆಟ್ಟಿ, ಚೆಟ್ಟಿ ಎಂಬ ವೈಶ್ಯರಲ್ಲದೇ ಮಾಂಸಾಹಾರಿಗಳಾದ ಕನ್ನಡ ವೈಶ್ಯರೂ ಇದ್ದಾರೆ.

ಗುಬ್ಬಿ ವೀರಣ್ಣನವರ ಸದಾರಮೆಯ ಸೆಟ್ಟರಾಗಲೀ, ಪುಟ್ಟಣ್ಣ ಕಣಗಾಲರ ರಂಗನಾಯಕಿಯ ಗೊಗ್ಗರು ದನಿಯ ಸೆಟ್ಟರಾಗಲಿ, ಅನಕೃ, ತರಾಸು, ಬೀಚಿ ಕಾದಂಬರಿ ಲೋಕದ ವಿಲಾಸೀ ಸೆಟ್ಟರಾಗಲೀ ಈಗ ಅಪರೂಪ. ಸಾಮ್ರಾಟ್ ಅಶೋಕ, ವಿಕ್ರಮಾದಿತ್ಯ, ಮಹಾತ್ಮಗಾಂಧಿ, ಲಾಲಾಲಜಪತರಾಯ್, ರಾಮಮನೋಹರ ಲೋಹಿಯಾ, ಮಹಾರಾಜ ಅಗ್ರಸೇನ, ಶ್ರವಣ ಕುಮಾರ, ಸಂತ ತುಕಾರಾಂ, ಚಂದ್ರಗುಪ್ತಮೌರ್ಯ, ಪುರಂದರದಾಸರು ಇವರೆಲ್ಲ ವೈಶ್ಯರು ಎನ್ನುವುದು ಆರ್ಯವೈಶ್ಯರು ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಆರ್ಯ ಎಂದರೆ great, good, sajjana, vysya: community people. ಹಿಂದೂ ಧರ್ಮವು ಒಂದು ದೊಡ್ಡ ನದಿಯಿದ್ದಂತೆ. ಅದು ಅನೇಕ ಕವಲುಗಳನ್ನು ಹೊಂದಿದೆ. ಅದರಲ್ಲಿ ಆರ್ಯ ವೈಶ್ಯ ಎನ್ನುವುದು ಒಂದು ಕವಲಿದ್ದಂತೆ. ತೆಲುಗಿನ ಮಹಾಕವಿಗಳಾದ ನನ್ನಯ ತಿಕ್ಕನಾರ್ಯರು ರಚಿಸಿದ ಮಹಾಭಾರತದಲ್ಲಿ ವೈಶ್ಯ ಪದಕ್ಕೆ ಪರ್ಯಾಯ ಪದವಾಗಿ ಕೋಮಟಿ ಎಂಬ ಪದವನ್ನು ಪದೇ ಪದೇ ಉಪಯೋಗಿಸಿದ್ದಾರೆ. ಜೈನ ಮತ್ತು ಬೌದ್ಧ ಸಾಹಿತ್ಯದಲ್ಲಿ ಗೋಮತಿ ಎಂಬ ಪದವೇ ಉಪಯೋಗಿಸಲ್ಪಟ್ಟಿದೆ. ಬೌದ್ಧಯುಗದಲ್ಲಿ ಧರ್ಮಾವಲಂಬಿಗಳಾದ ವರ್ತಕರು

ವ್ಯವಸ್ಥೆಗೊಳಿಸಿದ್ದ 'ಗೋಮಟಿ ವಿಹಾರ'ವು ಆ ಕಾಲದಲ್ಲಿ ಮಧ್ಯ ಏಷಿಯಾದಲ್ಲಿಯೇ ಅತ್ಯಂತ ಬೃಹತ್ತಾದ ಪ್ರಸಿದ್ಧವಾದ ಧಾರ್ಮಿಕ ಸಂಸ್ಥೆಯಾಗಿತ್ತು.

ಮೌರ್ಯ ಯುಗದಲ್ಲಿ ರಚಿತವಾದ ಪಾಣಿನಿಯ 'ಅಷ್ಟಾಧ್ಯಾಯಿ' ಮತ್ತು ಕೌಟಿಲ್ಯನ 'ಅರ್ಥಶಾಸ್ತ್ರ' ಮತ್ತು ಜಾತಕ ಕಥೆಗಳಲ್ಲಿ ವೈಶ್ಯರ ಬಗ್ಗೆ ಅಸಂಖ್ಯಾತ ವಿವರಗಳಿವೆ. ಪಾಣಿನಿಯು ಕ್ರಿ.ಪೂ.ಐದನೆಯ ಶತಮಾನದಲ್ಲಿಯೇ ವೈಶ್ಯರನ್ನು 'ಆಯಸ್ವಾಮಿ ವೈಶ್ಯರೇ' ಅಂದರೆ 'ಆಯಸ್ವಾಮಿ ವೈಶ್ಯಯೇ' ಎಂದು ಸಂಬೋಧಿಸಿದ್ದಾರೆ. ಅಧ್ಯಯನ, ಯಜ್ಞ, ದಾನ, ಕೃಷಿ, ಪಶುಪಾಲನೆ ಮತ್ತು ವಾಣಿಜ್ಯ ಎಂಬ ಷಟ್ಕರ್ಮಗಳೇ ವೈಶ್ಯರ ಜೀವನ ವಿಧಾನವಾಗಿತ್ತು.

ಅಡಿಟಿಪ್ಪಣಿಗಳು

೧. ಪುರುಷೋತ್ತಮ ರಾ.ಲ., ಆಚಾರ ವಿಚಾರ

೨. ಭಟ್ ಎಸ್.ಆರ್., ಪ್ರಾಚೀನ ಭಾರತದಲ್ಲಿ ಜನಜೀವನ

೩. ವಿಜಯನಗರ ಸಂಪುಟ ಅಧ್ಯಯನ ೧೨

೪. ಸಂಸ್ಕೃತಿ ಮಹಿಳಾ ಮಾಲಿಕೆ, ಸಂಪುಟ ೩

೫. ನಾಗಭೂಷಣ ಸಿ., ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ

೬. ನಾಗಭೂಷಣ ಸಿ., ಶಾಸನಗಳು ಮತ್ತು ಕನ್ನಡ ಸಾಹಿತ್ಯ

೭. ಆಲಂಪಲ್ಲಿ ಎಸ್.ವಿಷ್ಣುಭಾರತ್, ಆರ್ಯವೈಶ್ಯ

೮. ಪೆಂಡಕೂರ್ ಗುರುಮೂರ್ತಿ, ಶ್ರೀ ಕನ್ನಿಕಾಪರಮೇಶ್ವರಿ ಚರಿತಾಮೃತ

೯. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು

೧೦. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

೧೧. ಕಲಬುರ್ಗಿ ಎಂ.ಎಂ., ಶಾಸನಗಳಲ್ಲಿ ಶಿವಶರಣರು

೧೨. ಬಸವರಾಜಸ್ವಾಮಿ ಬೆಳಕಿನ ಬಳ್ಳಿ, ಶ್ರೀ ಬಸವಸೇನಾ ಪ್ರತಿಷ್ಠಾನ

೧೩. ಸೀತಾರಾಮ್ ಜಾಗೀರ್‌ದಾರ್, ರಘುನಾಥ್ ಭಟ್ ಎಚ್.ಆರ್., ಕನ್ನಡ ಶಾಸನದಲ್ಲಿ ಜಿನಸೇನ ಹಾಗೂ ಗುಣಭದ್ರರು, ಮಾ.ಕ.ಸಂ.೧೬, ಸಂಚಿಕೆ ೧

ಅಧ್ಯಾಯ ಮೂರು

ಸಾಮಾಜಿಕ ಕೊಡುಗೆ

೩.೧. ಜಲಸಂಬಂಧಿ ಕೊಡುಗೆ

೩.೧.೧. ಕೆರೆ-ಕಟ್ಟೆ ನಿರ್ಮಾಣ-ನಿರ್ವಹಣೆ

೩.೨.೧. ಬಾವಿ-ಕೊಳ ಅರವಟ್ಟಿಗೆ ನಿರ್ಮಾಣ ನಿರ್ವಹಣೆ

೩.೨. ಆಡಳಿತ

೩.೨.೧. ಪಟ್ಟಣಸ್ವಾಮಿಗಳು

೩.೨.೨. ನ್ಯಾಯ ತೀರ್ಮಾನ(ನ್ಯಾಯದಾನ)

೩.೨.೩. ಇನ್ನಿತರ ದಾನ

೩.೨.೪. ಸೆಟ್ಟಿ ಕುಲದ ನ್ಯೂನತೆಗಳು

೩.೩. ಇತರ ಕೊಡುಗೆ: ಮಹಿಳೆಯರು

ಅಧ್ಯಾಯ ಮೂರು

ಸಾಮಾಜಿಕ ಕೊಡುಗೆ

ಒಂದು ಸಮಾಜವನ್ನು ನಾವು ಅವಲೋಕಿಸಿದಾಗ ಮತ್ತು ಅಲ್ಲಿಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ನಮಗೆ ತಿಳಿಯಬೇಕಾದರೆ ನಾವು ಇತಿಹಾಸದ ಮೊರೆ ಹೋಗಬೇಕಾಗುತ್ತದೆ. ಯಾವುದೇ ಒಂದು ಸಮಾಜವನ್ನು ತೆಗೆದುಕೊಂಡಾಗ ಅದು ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗೆ ಮಾಡಿದ ಸಾಧನೆಗಳು ನಮಗೆ ಸ್ಪಷ್ಟವಾಗುತ್ತವೆ. ಏಕೆಂದರೆ, 'ಸಮಾಜವು ಮಾನವ ಹೃದಯದ ಕಾರ್ಯಾಲಯ ಅದೊಂದು ಪ್ರಚಂಡ ಕಾರ್ಖಾನೆ, ವಿಕಲಾಂಗ ಜನರತ್ತ ಸಹಾನುಭೂತಿ ತೋರುವುದು' ಎನ್ನುವುದು. ಟ್ಯಾಗೋರ್‌ರವರ ಅಭಿಪ್ರಾಯ. 'ಒಳ್ಳೆಯ ಸಮಾಜವು ಶರೀರವಿದ್ದಂತೆ ದುಃಖಿತರನ್ನು ರಕ್ಷಿಸಬೇಕಾಗುತ್ತದೆ' ಎನ್ನುವ ವಿನೋಭಾಬಾವೆಯವರ ಮಾತಿನಿಂದ ಸಮಾಜದ ಪ್ರಾಮುಖ್ಯತೆಯು ತಿಳಿಯದೇ ಇರದು. ನೈತಿಕ ಗುಣದಿಂದ ಕೂಡಿದ ಸಮಾಜ ಸುಖಿಯಾಗಿರಬಲ್ಲದು. ಒಬ್ಬರನ್ನೊಬ್ಬರು

ಹಾರ್ದಿಕ ಭಾವನೆಯಿಂದ ಸನ್ಮಾನಿಸುವ ಸಮಾಜವೇ ಸುಖೀ ಸಮಾಜ. ಇಂಥ ಸಮಾಜವನ್ನು ಕಾಲ ಕಾಲಕ್ಕೆ ಮಹನೀಯರು ತಮ್ಮ ಸ್ವಪ್ರಯತ್ನದಿಂದ ಸಮಾಜದ ಒಳಿತನ್ನು ಬಯಸಿ, ಆ ದಿಸೆಯಲ್ಲಿ ಮುನ್ನಡೆಯುವರು. ಜಾತಿ, ಧರ್ಮ, ಪಂಥಗಳ ಬೇಧವಿಲ್ಲದೆ ಮಹಾತ್ಮರು ಸಮಾಜದ ಏಳ್ಗೆಗಾಗಿ ಶ್ರಮಿಸಿದ್ದಾರೆ. ಸಮಾಜದ ಏಳ್ಗೆಯಲ್ಲಿ ಸಮಾಜದ ಜನರ ಹಿತವಿದೆ. ಸಮಾಜ ಮತ್ತು ಮನುಷ್ಯ ಇವರಲ್ಲಿ ಬಿಡಿಸಲಾರದ ನಂಟಿದೆ. ಇಂಥ ಸಮಾಜಕ್ಕೆ ಸೆಟ್ಟಿ ಕುಲ ನೀಡಿದ ಕೊಡುಗೆಯನ್ನು ಜಲಸಂಬಂಧಿ ಕೊಡುಗೆಗಳಾದ ಕೆರೆ-ಕಟ್ಟೆ ನಿರ್ಮಾಣ-ನಿರ್ವಹಣೆ, ಬಾವಿ-ಕೊಳ ಅರವಟ್ಟಿಗೆ ನಿರ್ಮಾಣ ನಿರ್ವಹಣೆಯ ಬಗ್ಗೆ ನೋಡೋಣ.

೩.೧. ಜಲಸಂಬಂಧಿ ಕೊಡುಗೆ

ಮನುಷ್ಯನ ಜೀನವಕ್ಕೆ ನೀರು ಅತ್ಯವಶ್ಯ. ಜಲದಿಂದಲೇ ದಾನ ಧರ್ಮಕ್ಕೆ ಹೆಚ್ಚಿನ ಮಹತ್ವವಿದೆ. ಹಿಂದಿನ ಕಾಲದಿಂದ ಇಲ್ಲಿಯವರೆಗೆ ಅವಲೋಕಿಸಿದಾಗ, ಜಲಸಂಬಂಧಿತವಾದ ಕೊಡುಗೆಗಳು ಸಮಾಜದ ಜನರ ಕಲ್ಯಾಣಕ್ಕಾಗಿ ಕೊಡಲ್ಪಟ್ಟಿವೆ. ಅನೇಕ ರಾಜರುಗಳು ಈ ದಿಶೆಯಲ್ಲಿ ಸಮಾಜದ ಜನರಿಗೆ ಸಹಾಯ ಮಾಡಿದ್ದಾರೆ. ಸೆಟ್ಟಿ ಕುಲವು ಈ ದಿಸೆಯಲ್ಲಿ ಮಾಡಿದ ಸಾಮಾಜಿಕ ಕೊಡುಗೆಗಳಲ್ಲೊಂದಾದ ಕೆರೆ-ಕಟ್ಟೆ ನಿರ್ಮಾಣ-ನಿರ್ವಹಣೆಯ ಬಗ್ಗೆ ನೋಡೋಣ.

೩.೧.೧. ಕೆರೆ-ಕಟ್ಟೆ ನಿರ್ಮಾಣ-ನಿರ್ವಹಣೆ

ಹಿಂದಿನ ಕಾಲದಲ್ಲಿ ರಾಜರು ಪ್ರಜಾಹಿತಕ್ಕಾಗಿ ಕಲ್ಯಾಣಪರ ಕಾರ್ಯಗಳನ್ನು ಮಾಡುತ್ತಿದ್ದರು. ಪ್ರಜಾಹಿತಕ್ಕಾಗಿ ಪ್ರಜೆಗಳಿಗೆ ಅನುಕೂಲವಾಗಲೆಂದು ಕೆರೆಗಳನ್ನು ನಿರ್ಮಿಸಿ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸುತ್ತಿದ್ದರು. ಇದರಿಂದ ದನಕರು, ಪಶುಪಕ್ಷಿಗಳಿಗೂ ಸಾಕಷ್ಟು ಉಪಯೋಗವಾಗುತ್ತಿತ್ತು. "ನೂರಾರು ಕೈಗಳಿಂದ ಕೂಡಿಸು, ಅದನ್ನು ಸಾವಿರಾರು ಕೈಗಳಿಂದ ಹಂಚಿಕೊಡು" ಎಂದು ಹೇಳುವ ಅಥರ್ವಣವೇದದ ಮಾತು ರಾಜರುಗಳ ಪಾಲಿಗೆ ವೇದವಾಕ್ಯ ವಾಗಿತ್ತು. "ನಿಮ್ಮ ಬಲಗೈಗೆ ಕೊಟ್ಟಿದ್ದು ಎಡಗೈಗೆ ಗೊತ್ತಿರಬಾರದು" ಎನ್ನುವ ಮಾತು ದಾನದ ಮಹತ್ವವನ್ನು ತಿಳಿಸಿಕೊಡುತ್ತದೆ. "ದಾನ ಶೀಲತೆಯಿಂದಲೇ ಮನುಷ್ಯನು ಭಾಗ್ಯವಂತ"ನಾಗುತ್ತಾನೆ. ಈ ಮಾತುಗಳು ನಮ್ಮ ಹಿಂದಿನ ರಾಜರಿಗೆ ಅನ್ವರ್ಥಕವಾಗಿವೆ ಎಂದು ಹೇಳಬಹುದು.

ಸಾರ್ವಜನಿಕ ಪ್ರಯೋಜನಾರ್ಥವಾಗಿ ಕೆರೆ ಕಟ್ಟಿಸಿದವರಲ್ಲಿ ವರ್ತಕರೂ ಕಂಡುಬರುತ್ತಾರೆ. ಶೆಟ್ಟಿ ಕುಲದವರು ಕೆರೆ-ಕಟ್ಟೆ, ಕಾಲುವೆ ಮತ್ತು ಬಾವಿಗಳನ್ನು ತೋಡಿಸಿ ಸಾಮಾನ್ಯ ಜನರ ಜೀವನಾವಶ್ಯಕವಾದ ಜಲಸಂಪತ್ತನ್ನು ಹೆಚ್ಚಿಸಿದ್ದು, ಎಲ್ಲಿ ಜಲಸಂಪನ್ಮೂಲ ಯಥೇಚ್ಛವಾಗಿರುತ್ತದೋ ಅಲ್ಲಿ ಜನರು ಸಮೃದ್ಧ ಜೀವನವನ್ನು ಸಾಗಿಸುತ್ತಾರೆಂದು ಇವರು ನಂಬಿದ್ದರು. ಪುರಾತನ ಕಾಲದಿಂದಲೂ ದಾನಗಳಲ್ಲಿ ಉದಕದಾನ ಬಹಳ ಶ್ರೇಷ್ಠವೆಂದು ಜನರ ನಂಬಿಕೆಯಾಗಿದೆ. ಈ ಕಾರಣದಿಂದಲೂ ಕೆರೆ-ಕಾಲುವೆಗಳ ನಿರ್ಮಾಣಕ್ಕೆ ಅರಸರು, ಅಧಿಕಾರಿಗಳು ಮುಂದಾದಾಗ ಸಾಮಾನ್ಯ ಜನರೂ ತಮ್ಮ ತನು-ಮನ-ಧನಗಳ ನೆರವನ್ನು ನೀಡುತ್ತಿದ್ದರು.

ಕೃಷ್ಣದೇವರಾಯನ ಆರಂಭಕಾಲದ ಶಾಸನಗಳಲ್ಲಿ ಕೆರೆ ಮತ್ತು ಬಾವಿಗಳ ಉಲ್ಲೇಖ ವಿದ್ದರೂ ದಾನದ ಮೇರೆಗಳನ್ನು ತಿಳಿಸುವಾಗ ಅಥವಾ ದಾನದ ಭೂಮಿಯನ್ನು ತಿಳಿಸುವಾಗ ಪ್ರಾಸಂಗಿಕವಾಗಿ ಉಲ್ಲೇಖಗೊಂಡಿವೆ. ಕೆರೆ ಅಥವಾ ಬಾವಿಯ ವಿಷಯವನ್ನೇ ನೇರವಾಗಿ ಉಲ್ಲೇಖಿಸುವ ಪ್ರಥಮ ಶಾಸನ ಕ್ರಿ.ಶ.೧೫೦೯ರದ್ದಾಗಿದೆ. ಕೃಷ್ಣದೇವರಾಯನ ಸೇನಾಧಿಪತಿಯಾದ ವೀರಣನಾಯ್ಕರ ಪ್ರಧಾನನಾದ ನರಸರಾಜನೆಂಬುವನು ಈಗಿನ ಗೊಳ್ಳ ಎಂಬ ಗ್ರಾಮದಲ್ಲಿ ವಿರೂಪಾಕ್ಷದೇವರ ಗುಡಿಯ ಗರ್ಭಗೃಹ, ಸುಖನಾಸಿ, ರಂಗಮಂಟಪವನ್ನು ಕಟ್ಟಿಸಿ, ಬಾವಿಯನ್ನು ತೋಡಿಸಿ ಅದರ ಬಳಿ ಮಾವಿನ ತೋಪನ್ನು ನಿರ್ಮಿಸಿ ದಾನವನ್ನು ಬಿಟ್ಟಿರುವನು. ದೇವರ ಸೇವೆಗೂ ಮತ್ತು ಮಾವಿನ ತೋಪಿನ ರಕ್ಷಣೆಗೂ ಹೀಗೆ ಎರಡೂ ಕಾರ್ಯಗಳಿಗೂ ಬಾವಿಯನ್ನು ತೋಡಿಸಿದ್ದಾರೆ.[೧]

ಮೇಲುಕೋಟೆಯ ಕ್ರಿ.ಶ.೧೫೧೯ರ ಒಂದು ಶಾಸನದಲ್ಲಿ ಚೆಲುವನಾರಾಯಣ ದೇವರ ಭಂಡಾರಕ್ಕೆ ಸೇರಿದ ತಿರುವಿಡಿಯಾಟಪುರದ ಹೊಸದಾದ ಕೆರೆಯು ಒಡೆದು ಹೋಗಿದ್ದಾಗ ಲಕ್ಷ್ಮೀಪತಿಸೆಟ್ಟಿಯು ಅದರ ಏರಿಯನ್ನು ಕಟ್ಟಿಸಿ, ತೂಬನ್ನು ಮತ್ತೆ ನಿಲ್ಲಿಸಿ, ಕೋಡಿಯ ಮಣ್ಣನ್ನು ತೆಗೆಸಿ ಜೀರ್ಣೋದ್ಧಾರ ಮಾಡಿಸುತ್ತಾನೆ. ಇದಕ್ಕಾಗಿ ಅವನಿಗೆ ಮುನ್ನೂರು ಗದ್ಯಾಣ ಗಟ್ಟಿ ವರಹಗಳು ಖರ್ಚಾಗುತ್ತದೆ. ಲಕ್ಷ್ಮೀಪತಿ ಸೆಟ್ಟಿಯ ತಂದೆ ವೊಡೆಯ ರತಿಬಸೆಟ್ಟಿಯು ಮಧ್ಯಸ್ಥಿಕೆಯನ್ನು ಮಾಡಿ ಆ ಹಣವನ್ನು ದೇವರ ಭಂಡಾರದಿಂದ ನಿತ್ಯ ಕಟ್ಟಳೆಯಾಗಿ ಶ್ರೀ ವೈಷ್ಣವರು ಆರೋಗಣೆಯನ್ನು ಮಾಡಲು ನೀಡುವಂತೆ ವ್ಯವಸ್ಥೆ ಮಾಡುತ್ತಾನೆ. ಈ ಶಾಸನದಲ್ಲಿ ಕೆರೆಯ ಪ್ರಮುಖ ಭಾಗಗಳಾದ ವೊಡವು, ತೂಬು ಮತ್ತು ಕೋಡಿಯನ್ನು ಉಲ್ಲೇಖಿಸಲಾಗಿದ್ದು ಈಗಲೂ ಈ ಶಬ್ದಗಳೇ ಪ್ರಯೋಗವಾಗುತ್ತಿರುವುದು ಗಮನೀಯ

ಅಂಶವಾಗಿದೆ.[೨] ತಮಿಳುನಾಡಿನಿಂದ ವಲಸೆ ಬಂದ ಶ್ರೀವೈಷ್ಣವ ಧರ್ಮೀಯರು ಕರ್ನಾಟಕದ ನೆಲೆಯಲ್ಲಿ ಬಾಳಬೇಕಾದಲ್ಲಿ ಸ್ಥಳೀಯರ ಸಹಕಾರ ಅತ್ಯಗತ್ಯವೆಂಬುದನ್ನು ಮನಗಂಡು ನಿತ್ಯ ಜೀವನಕ್ಕೆ ಅವಶ್ಯವಾದ ಕೆರೆ-ಕಟ್ಟೆ ನಿರ್ಮಿಸುವ ಮೂಲಕ ಜನರ ವಿಶ್ವಾಸ ಗಳಿಸುತ್ತಿದ್ದರೆಂದು ಈ ಶಾಸನದಿಂದ ಊಹಿಸಬಹುದಾಗಿದೆ. ಹೀಗೆ ಪ್ರಾಚೀನ ಕಾಲದಲ್ಲಿ ಬಾವಿ, ಕೆರೆ, ಅರವಟ್ಟಿಗೆಗಳ ನಿರ್ಮಾಣ ಶ್ರೇಷ್ಠವಾದ ಕಾರ್ಯವಾಗಿತ್ತು. ಈ ಮೇಲಿನ ಎರಡೂ ಶಾಸನಗಳ ಉಲ್ಲೇಖ ಕೃಷ್ಣದೇವರಾಯನ ಕಾಲದ್ದು.

ಸಂಗಮ ಅರಸರ ಮಲ್ಲಿಕಾರ್ಜುನನ ಅವಧಿಯ ಶಾಸನವೊಂದರ ಪ್ರಕಾರ ನಾಗಮಂಗಲದ ಪ್ರಭು ಮಹಾಪ್ರಧಾನಿ ತಿಮ್ಮಣ್ಣದಂಡನಾಯಕರ ಪತ್ನಿಯಾದ ರಂಗಾಂಬಿಕೆ (ರಂಗಮ್ಮ)ಯು ಮೇಲುಕೋಟೆಯ ಚೆಲುವನಾರಾಯಣನಿಗೆ ಆಭರಣಗಳು, ಬೆಳ್ಳಿ ಪಲ್ಲಕ್ಕಿ ಮತ್ತು ಕೆರೆಯೊಂದನ್ನು ಕಟ್ಟಿಸಿ ದಾನವಾಗಿ ನೀಡುವಳು. ಪಾಳುಬಿದ್ದ ನಿವೇಶನವನ್ನು ಕೊಂಡು ತನ್ನ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿ ಅವದರಲ್ಲಿ ೨೪ ಜನ ಬ್ರಾಹ್ಮಣರಿಗೆ ಊಟವನ್ನು ಹಾಕಲು ಮತ್ತು ಆ ಸ್ಥಳವನ್ನು ರಾಮಾನುಜಕೂಟವನ್ನಾಗಿ ಪರಿವರ್ತಿಸಲು ಗ್ರಾಮಗಳನ್ನು ಮತ್ತು ಹಣವನ್ನು ದಾನವಾಗಿ ನೀಡಿರುವಳು.[೩] ರಾಜಮನೆತನದ ರಾಜರಂತೆ, ರಾಣಿಯರೂ ಮಾಡುವ ಇಂಥ ಕಾರ್ಯಗಳಿಂದ ಜನರೂ ಪ್ರಭಾವಿತರಾಗಿ ಕಲ್ಯಾಣಕರ ಕಾರ್ಯಗಳನ್ನು ಮಾಡುತ್ತಿದ್ದರು.

ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ ರಾಮಾನುಜಸಿದ್ಧಾಂತ ಸ್ಥಾಪಕರಾದ ತಿಬಸೆಟ್ಟಿಯರ ಮಠ ಲಕ್ಷುಮೀಪತಿಸೆಟ್ಟಿಯರಿಗೆ ಈ ಶಾಸನವನ್ನು ಬರೆಸಿಕೊಡಲಾಗಿದೆ.[೪] ಚೆಲ್ಲಪಿಳೆರಾಯರ ಭಂಡಾರಕ್ಕೆ ಸಲ್ಲುವ ತಿರುವಿಡಿಯಾಟದ ಪುರದ ಗ್ರಾಮದ ಹೊಸ ಕೆರೆಯು ಒಡೆದು ಹಾಳಾಗಲು ಇದನ್ನು ಸರಿಪಡಿಸಿ, ತೂಬನ್ನು ನಿಲ್ಲಿಸಿ, ಕೋಡಿಯನ್ನು ಭದ್ರಪಡಿಸಿ ಜೀರ್ಣೋದ್ಧಾರ ಮಾಡಿದ್ದರಿಂದ ಆ ಕಾರ್ಯಕ್ಕೆ ತಗುಲಿದ ೩೦೦ ಗದ್ಯಾಣ ಘಟ್ಟಿವರಹಗಳನ್ನು ಶ್ರೀ ವೈಷ್ಣವರ ಆರೋಗಣೆಗಾಗಿಯೂ ದಾನ ನೀಡಿದೆ. ಚೆಲಪಿಳೆರಾಯರ ಭಂಡಾರದ ಸೇನಬೋವ ರಾಮಾನುಜನೆಂಬುವನು ಈ ಶಾಸನವನ್ನು ರಚಿಸಿರುವನು. ಇದಕ್ಕೆ ಅಯಿವತಿಬ್ಬರ ಒಪ್ಪವೂ ಇದೆ. ಲಕ್ಷ್ಮೀಪತಿ ಸೆಟ್ಟಿಯನ್ನು ಶಾಸನದಲ್ಲಿ ತಿರುನಾರಾಯಣದೇವರ ಭಕ್ತನೂ, ದೇವಮಾರ್ಗ ಪ್ರತಿಷ್ಠಾಚಾರ್ಯ, ಮಂತ್ರವಾದಿ ಭಯಂಕರ, ಮಾಯಾವಾದಿ ಕೋಳಾಹಳ, ಶರಣಾಗತ ವಜ್ರಪಂಜರ, ಶ್ರೀರಾಮಾನುಜಾಚಾರ್ಯರ ಪ್ರಥಮಶಿಷ್ಯ,

ರಾಮಾನುಜ ಸಿದ್ಧಾಂತ ಸ್ಥಾಪಕನೆಂದು ಹೊಗಳಲಾಗಿದೆ. ಈ ರೀತಿಯಾಗಿ ರಾಜ ಪರಿವಾರದವರು ಕೆರೆ-ಕಟ್ಟೆಗಳನ್ನು ನಿರ್ಮಿಸಿ ರಾಜ್ಯದ ಜನರಿಗೆ ಮಾದರಿಯಾಗಿದ್ದರು. ಇವರ ಉದಾರ ಗುಣವನ್ನು ನೋಡಿ ಪ್ರಜೆಗಳೂ ಕಲ್ಯಾಣಕರ ಕೆಲಸಗಳನ್ನು ಮಾಡಲು ಮುಂದೆ ಬರುತ್ತಿದ್ದರು.

ಇಮ್ಮಡಿ ಹರಿಹರನು ನಾಲ್ಕು ಶಾಸನಗಳಲ್ಲಿ ಪ್ರತಿನಿಧಿತನಾಗಿದ್ದಾನೆ. ಮೂರು ಚನ್ನರಾಯಪಟ್ಟಣ ತಾಲ್ಲೂಕು ಹಾಗೂ ಒಂದು ಅರಸೀಕೆರೆ ತಾಲ್ಲೂಕಿಗೆ ಸೇರಿದೆ. ಹುಲಿಕೆರೆಯ ಚನ್ನರಾಯಪಟ್ಟಣ ೧೩೧ನೆಯ ಶಾಸನದ ಕಾಲ ಕ್ರಿ.ಶ.೧೩೭೮. ಕೆಲವು ಬ್ರಾಹ್ಮಣರಿಗೆ ಹೊಯ್ಸಳ ದೇಶಕ್ಕೆ ಸೇರಿದ ಜಂಜೂರು ಗ್ರಾಮವನ್ನು ದಾನವಿತ್ತ ಸಂಗತಿ ಈ ಶಾಸನದಲ್ಲಿ ನಿರೂಪಿತವಾಗಿದೆ. ಮುದ್ದ ದಂಡೇಶನೆಂಬ ಸಚಿವನ ಉಲ್ಲೇಖವೂ ಇದರಲ್ಲಿದೆ. ಕ್ರಿಯಾಶಕ್ತಿ ಆಚಾರ್ಯನನ್ನು ಒಂದನೆಯ ಬುಕ್ಕನ ರಾಜಗುರುವೆಂದು ವರ್ಣಿಸಲಾಗಿದೆ. ಮರಯವೂರಿನಲ್ಲಿ ಸಂಭವಿಸಿದ ಕದನವೊಂದರಲ್ಲಿ ಬೋರೆಯ ನಾಯಕನು ಮರಣ ಹೊಂದಿದ ವಿಷಯವನ್ನು ಕ್ರಿ.ಶ.೧೩೯೮ರ ಚೆನ್ನರಾಯಪಟ್ಟಣದ ೫೯ನೆಯ ಶಾಸನವು ತಿಳಿಸುತ್ತದೆ. ಹನ್ನೆರಡು ಗದ್ಯಾಣಗಳ ವೆಚ್ಚದಲ್ಲಿ ವೀರಗಲ್ಲನ್ನು ಸಿದ್ಧಪಡಿಸಿ ನಿಲ್ಲಿಸಲಾಯಿತು. ಈ ವೀರಗಲ್ಲನ್ನು ಕೆತ್ತಿಕೊಟ್ಟ ರೂವಾರಿ ಗುಂಡೋಜ. ಇಮ್ಮಡಿ ಹರಿಹರನಿಗೆ 'ಅನೇಕ ರಾಜ್ಯಾಭ್ಯದಯ'ವಾಗಬೇಕೆಂದು ಭೂಮಿದಾನ ಮಾಡಿದ ಸಂಗತಿಯನ್ನು ಕ್ರಿ.ಶ.೧೩೯೯ರ ಚನ್ನರಾಯಪಟ್ಟಣದ ೨೯ನೆಯ ಶಾಸನವು ವಿವರಿಸುತ್ತದೆ. ಲಕ್ಕಣ್ಣ ಒಡೆಯರ ನಿರೂಪದ ಮೇರೆಗೆ ರಾಯಿಸೆಟ್ಟಿಯು ಚೆನ್ನಕೇಶವದೇವರಿಗೆ ಧನಧಾನ್ಯವನ್ನು ನೀಡಿದನು. ಕ್ರಿ.ಶ.೧೪೦೩ಕ್ಕೆ ಸೇರಿದ ಗಂಡಸಿಯ ಅರಸೀಕೆರೆಯ ೧೯೮ನೆಯ ಶಾಸನವು ಭಾಯಣ್ಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಂಗಾಪುರವೆಂಬ 'ಗ್ರಾಮವಂ ರಚಿಸಿ ಅದಕೆ ಮಂಗಸಮುದ್ರವೆಂಬ ತಟಾಕಮಂ' ಕಟ್ಟಿಸಿದ. ಹಿರಿಯ ಗಂಡಸಿ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದ ಹಾಗೂ ಅಲ್ಲಿನ ಹಿರಿಯಕೆರೆಗೆ ತಂದ ಕಾಲುವೆಗೆ ರಕ್ಷಣಾರ್ಥವಾಗಿ ಹನುಮಂತದೇವರ ಪ್ರತಿಷೆವಿಯನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ.

೧ ಶ್ರೀ ವಿರೂಪಾಕ್ಷಾಯನಮಃ ಸ್ವಸ್ತಿ ಶ್ರೀಜ

೨ ಭ್ಯುದಯ ಶಕವರುಷ ೧೩೧೬ ಸಂದವ

೩ ಮಾನ ವಿರೋಧಿಕ್ರುತು ಸಂವತ್ಸರದ ಮಾಘಶು

೪ ೧೦ ಗು ಲು ಶ್ರೀ ಮನ್ಮಹಾರಾಜಾಧಿರಾಜ ರಾಜ

೫ ....ಶ್ರೀ ವೀರಪ್ರತಾಪ ದೇವರಾಯಮಹಾರಾಯ

೬ ....ಮಕ್ಕಳ ಮೂಱುರಾಯ ಬಸವಶಂಕರಸೆಟ್ಟಿ

೭ ನಾಯಕಱ ನೇಱಲಿಗೆಯ ಹಿರಿಯಕೆಱೆಗೆ ಅ

೮ ಡುವ ಕೆಱೆಯಭಂಡಿಱಜೀವಿತ ಕೊಟ ಭುಮಿ

೯ ಯ ವಿವರ ಹಿರಿಯಹಳದಿಂ ಮೂಡ ಬ ಹಳಿ

೧೦ ಯವರು ಮಡುವ ಗದೆಯಿಂ ತೆಂಕ ಕಾಲುವೆಯಿಂ ಪಡುವ

೧೧ ಹಿರಿಯಕಟೆಯ ಕೆಱೆಯಭಂಢಿಯ ಗದ್ದೆಯಿಂ ಬಡ

೧೨ ಗ ಯಿಂತಿ ಚತುಸೀಮೆ ಒಳಗುಳ ಭೂಮಿಯನೂ ಕೆ

೧೩ ಱೆ ಭಂಡಿಗೆ ಕೊಡುಗೆಯಾಗಿ ಕೊಟೆವಾಗಿ ಆ ಭೂಮಿ

೧೪ ಯನು ತೋಟ ಗದೆಯ ಮಾಡಿಕೊಂಡು ಕೆಱೆಯ ಭಂಡಿ

೧೫ ಯನು ನಡಸಿ ಬಹಿರಿ॥ ಸ್ವದತ್ತಾಂ ಪರದತ್ತಾಂ ವಾ ಯೋ

೧೬ ಹರೇತು ವಸುಂಧರಾಂ ಷಷ್ಟಿರ್ವ್ವರುಷ ಸಹಸ್ರಣಿ ವಿಷ್ಟಾಯಾಂ

೧೭ ಜಾಯತೇ ಕ್ರಿಮಿಃ। ದಾನಪಾಲನಯೋರ್ಮ್ಮದ್ಯೇ ದಾನಾತ್ಶ್ರೇಯೋ

೧೮ ನುಪಾಲನಂ ದಾನತ್ಸ್ವರ್ಗ್ಗಮವಾಪ್ನೋತಿ ಪಾಲನ

೧೯ ದಚ್ಚುತಂಫದಂ ಶ್ರೀ ಶ್ರೀ ಶ್ರೀ

ಈ ಶಾಸನವು ವಿಜಯನಗರ ರಾಜರ ಕಾಲದ್ದು. ವಿಜಯನಗರವನ್ನು ಆಳಿದ ರಾಜನಾದ ದೇವರಾಯನ ಕಾಲಕ್ಕೆ ಸಂಬಂಧಪಟ್ಟ ಶಾಸನವಿದು. ಬಸವಶಂಕರ ಸೆಟ್ಟಿಯು ಹಿರಿಯಕೆರೆಗೆ ಕೊಟ್ಟ ದಾನವನ್ನು ಬಿಂಬಿಸುವ ಶಾಸನವು ಇದಾಗಿದೆ.[೫]

ತಿರುಮಕೂಡಲದ ಈ ಶಾಸನವು ಅಗಸ್ತೇಶ್ವರ ದೇವಾಲಯದಲ್ಲಿ ಕಟ್ಟಿಸಿದ ದೇವಿ ಲಕ್ಷ್ಮಿಯ ಗುಡಿಯ ಪ್ರಸ್ತಾಪವನ್ನು ತಿಳಿಸುತ್ತದೆ. ಈ ದೇವಾಲಯವನ್ನು ಕಟ್ಟಿದವರು ಶರಣಪ್ಪ

ಶೆಟ್ಟಿ, ಇವರ ತಂದೆ ಹೊಂಗಾಣಿಶೆಟ್ಟಿ, ಶರಣಪ್ಪ ಶೆಟ್ಟಿಯ ಹಿರಿಯಣ್ಣ ಬೆಟಪ್ಪ ಶೆಟ್ಟಿ, ಇವರು ವಿಜಯನಗರ ರಾಜ್ಯದ ಕೃಷ್ಣರಾಯ ರಾಜನ ಆಡಳಿತದಲ್ಲಿದ್ದ ಕಾಲದಲ್ಲಿನ ಪ್ರತಿಭಾವಂತ, ಪ್ರಸಿದ್ಧರಾದ ವ್ಯಾಪಾರಿಗಳು. ಈ ಸೆಟ್ಟಿ ಕುಲದವರು ಪಾರ್ವತಿ ದೇವಿಯ ದೇವಾಲಯದ ನಿರ್ವಹಣೆಗಾಗಿ ಗದ್ದೆ, ಹಿರಿಯಕೆಱೆ, ಕಾಲುವೆಯನ್ನು ನೀಡಿದ್ದನ್ನು ಈ ಶಾಸನವು ತಿಳಿಸುತ್ತದೆ.[೬]

ಸ್ವಸ್ತಿ ಶ್ರೀಮತು ಶಕ ವರುಸ ಸಾಸಿರದಮು
ಂನೂಱ ತೊಂಭತ್ತಮೂಱನೆಯ ವಿಕೃ
ತಿ ಸಂವತ್ಸರದ ಚೈತ್ರ ಶುದ್ಧ.... ಆದಿವಾ
ರದಂದು ಶ್ರೀವೀರಬುಕ್ಕರಾಯ ರಾಜ್ಯಂ ಗೆಯ್ಯು
ವಕಾಲದಲು ಶ್ರೀಮತು ಹೊಂಬುಚ್ಚನಾಡ
...ಮೂವತ್ತುವೊಳಗಾದ ಸಮಸ್ತನಾಡವ
ರು ಭಾರದ್ವಾಜಗೋತ್ರದ ಕುಂದುಗುಳ್ಳದ ಶೆಟ್ಟಿ
ಯಪ್ಪ... ಚಾಮದ(ಗ್ರ್ಯಾ) ವತ್ಸಗೋತ್ರದ
.....ಹಿ.ಪ್ಪಂಗಳಿಗೆ ....ನಾಡಕೆ
ಱೆಯ... ಕೆಸವಿನಮಾನೆಯ ಕೆಱೆ
ಯ ಕೆಯಿ ಮಾವಿನಕೆಯಿ ಹೊಸಗದೆ..
ಯಕೆಯಿ ಇದಱ ಚತುಸೀಮೆಯಲು
ಳ್ಳಂಥಾ ಮಕ್ಕಿಹಕ್ಕಲು ಮಂದುಮನೆ
ನಿಕ್ಕೇಪಜಲಪಾಷಾಣವೊಳಗಾ ಆಚಂ
ದ್ರಾರ್ಕ್ಕಸ್ಥಾಯಿಯಾಗಿ ಧಾರಾಪೂರ್ವಕವಾ
ಗಿ ಬರಸಿಕೊಟ್ಟ ಶಿಲಾಶಾಸನ ॥ ಸ್ವದತ್ತಾಂ

ಪರದತ್ತಾಂ ವಾ ಯೋ ಹರೇಚ ವ

ಸುಂಧರಾಂ ಷಷ್ಟಿರ್ವರ್ಷ ಸಹಸ್ರಾ

ಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ

ಸಾಮಾನ್ಯೋಯಂ ಧರ್ಮಸೇತುಂ ನೃಪಾ

ಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ

ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾನ್ಭೂ

ಯೋ ಭೂಯೋ ಯಾಚತೇ ರಾಮಚಂದ್ರಃ

ವಿಜಯನಗರ ರಾಜನಾದ ಬುಕ್ಕನ ಕಾಲದ ಶಾಸನವಿದು.[೭] ಬುಕ್ಕರಾಯನಿಗೆ ಹೊಂಬಚ್ಚುನಾಡ ಜನರು, ಶೆಟ್ಟಿಯಪ್ಪ ಇವರೆಲ್ಲರೂ ನೀರಿನ ನಿಕ್ಷೇಪ ಆ ಚಂದ್ರಾರ್ಕವಾಗಿ ಇರುವಂತೆ, ನಾಡಕೆರೆಯನ್ನು ಕೆಸವಿನ ಮಾನೆಯಕೆಜೆಯನ್ನು ಶ್ರೀವೀರಬುಕ್ಕರಾಯರಿಗೆ ನೀಡಿದ ಮಾಹಿತಿ ಈ ಮೇಲಿನ ಶಾಸನದಲ್ಲಿದೆ.

ವಿಜಯನಗರದ ಅರಸರಲ್ಲಿ ಅತ್ಯಂತ ಶಕ್ತಿಶಾಲಿಯೂ, ವಿಜಯನಗರದ ಅರಸರಿಗೆಲ್ಲಾ ಕಿರೀಟ ಪ್ರಾಯನಾದ ಅರಸ ಕೃಷ್ಣದೇವರಾಯನು ನಿಶ್ಚಿತ ಗ್ರಾಮಗಳನ್ನು ಕನ್ನಕೀಯಕಟೆ, ಬಂಕಾಪುರ, ನಾಗಲಾಪುರ, ಗೌರಾಜಿಯ ಕೆರೆ, ಮೂರು ತೋಟಗಳನ್ನು ಮತ್ತು ಭೂಮಿಗಳನ್ನು ಪ್ರಸನ್ನ ವಿರೂಪಾಕ್ಷ ದೇವರ ಸೇವೆಗಾಗಿ ದಾನ ಮಾಡಿದನು. ಆತನ ತಂದೆ ನರಸಣ್ಣನಾಯಕ ಮತ್ತು ತಾಯಿ ನಾಗಾಜಿ ಅಮ್ಮನವರ ಒಳಿತಿಗಾಗಿ ದಾನ ಮಾಡಲಾಯಿತು.[೮] ಇದೇ ರೀತಿ ವೀರ ಬುಕ್ಕಣ್ಣ ಒಡೆಯನು ಹಸ್ತಿನಾವತಿ(ಆನೆಗೊಂದಿ)ಯಿಂದ ಆಳುತ್ತಿದ್ದನು. ಇವನ ಮಹಾಪ್ರಧಾನನಾದ ಬಸವೆದಣ್ಣಯಕನು ವಿರೂಪಾಕ್ಷದೇವರ ಸೇವೆಗಾಗಿ ರಾಮಾಪುರದ ಕೆರೆಯ ಕೆಳಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಮಾಹಿತಿಯು ನಮಗೆ ಪ್ರಸನ್ನ ವಿರೂಪಾಕ್ಷ ದೇವಾಲಯದ ನೈಋತ್ಯಕ್ಕೆ ನಾಗೇಶಪ್ಪನವರ ಹೊಲದಲ್ಲಿರುವ ದೇವಾಲಯಕ್ಕೆ ಸಮೀಪದಲ್ಲಿರುವ ಶಾಸನದಿಂದ ಈ ವಿಷಯ ವ್ಯಕ್ತವಾಗುತ್ತದೆ.[೯] ಚಿಕ್ಕತಿಂಮಯದೇವನ ಮಗ ತಿಂಮರಾಜನು ಶ್ರೀರಾಮಚಂದ್ರದೇವರ ಭಂಡಾರಕ್ಕೆ ಕೆಲವು ದಾನಗಳನ್ನು ನೀಡಿರುತ್ತಾನೆ. ಹಿಂದೆ ಕೃಷ್ಣರಾಯ ಮಹಾರಾಯನು ರಾಮಚಂದ್ರ ದೇವರ ಅಮೃತಪಡಿಗೆ ಸಮರ್ಪಿಸಿದ್ದ

ಸೊಂಡೂರ ಸೀಮೆಯ ತಾಳೂರಿಗೆ ಪಶ್ಚಿಮಕ್ಕಿರುವ ಚಿಕ್ಕಬೆಂಚೆಯೆಂಬ ಕುಂಟೆಯು ಒಡೆದು ಹೋಗಿರಲು ಅದನ್ನು ದೊಡ್ಡ ಕೆರೆಯಾಗಿ ಕಟ್ಟಿಸಿದ. ಜೊತೆಗೆ ದೇವರಗುಡಿಯ ಮುಂದೆ ಉತ್ತರಕ್ಕೆ ಉತ್ಸವ ಮಂಟಪವನ್ನು ಕಟ್ಟಿಸಿದ. ಈ ಕಾರ್ಯವನ್ನು ತಿಂಮರಾಜನು ಮಾಡಿದ್ದಕ್ಕೆ ದೇವರಕಾರ್ಯಕ್ಕೆ ಕರ್ತನಾದ ಅಲ್ಲಮರಸ, ಆಗಮಿಕ ನಾರಾಯಣಭಟ್ಟ, ಸ್ತಾನಿಕ ಮಾಧವಯ್ಯ, ಸೇನಭೋವ ನರಸಯ್ಯ ಮುಂತಾದವರು ಇವನು ಕಟ್ಟಿಸಿದ ಕೆರೆಗೆ, ಕಟುಮಾನ್ಯವಾಗಿ ಒಂದು ಖಂಡುಗ ಗದ್ದೆಯನ್ನು ನೀಡಿದರು. ಇದರಲ್ಲಿ ಕುಳಪಾಲನ್ನು ಕಳೆದು ರಾಜಮಾನ್ಯವಾಗಿ ಬರುವ ಪಾಲನ್ನು ದೇವರ ಉತ್ಸವಗಳಿಗಾಗಿ, ತನ್ನ ತಂದೆ ಚಿಕ್ಕತಿಂಮರಾಜವೊಡೆಯರಿಗೂ ತಾಯಿ ಕೋನಾಜಿ ಅಂಮನಿಗೂ ಪುಣ್ಯವಾಗಬೇಕೆಂದು ಬಿಡುತ್ತಾನೆ. ಈ ಮಾನ್ಯದಲ್ಲಿ ದೇವರಿಗೆ ಮಾಡುವ ಅನೇಕ ಉತ್ಸವಗಳು ಮತ್ತು ನೈವೇದ್ಯಕ್ಕೆ ಮಾಡಬೇಕಾದ ತಿನಿಸುಗಳ ವಿವರಗಳಿವೆ. ಈ ಶಾಸನವನ್ನು ಸೇನಬೋವ ಮಾಗುಡಿ ಕಾಮರಸನ ಮಗ ಬೋಕಪ ಶಿಂಘರಸನು ಬರೆದ.[೧೦]

ಇವುಗಳನ್ನು ಗಮನಿಸಿದಾಗ, ವಿಜಯನಗರ ಕಾಲದ ಅರಸರು ದಾನ ಧರ್ಮಗಳಲ್ಲಿ ಎತ್ತಿದ ಕೈ ಎನ್ನುವುದು ನಿಶ್ಚಿತ. ರಾಜರುಗಳ ಉದಾರಗುಣ ಪ್ರಜೆಗಳಿಗೆ ಮಾದರಿಯಾಗಿತ್ತು. ಯಥಾರಾಜ ತಥಾ ಪ್ರಜೆ ಎನ್ನುವಂತೆ ವಿಜಯನಗರ ಸಾಮ್ರಾಜ್ಯದ ಪ್ರಜೆಗಳೂ ಜನಹಿತ ಕೈಂಕರ್ಯವನ್ನು, ಸೇವಾಮನೋಭಾವದಿಂದ ಮಾಡುತ್ತಿದ್ದರು. ರಾಜರುಗಳ ಜನಪರ ಕಾರ್ಯಗಳಿಂದ ಪ್ರಭಾವಿತರಾದ ಜನತೆ ಸ್ವಮನಸ್ಸಿನಿಂದ ತಮ್ಮ ತನು, ಮನ, ಧನಗಳ ಅರ್ಪಣೆಯಲ್ಲಿ ಮಂಚೂಣಿಯಲ್ಲಿರುತ್ತಿದ್ದರೆಂದರೆ, ತಪ್ಪಾಗಲಿಕ್ಕಿಲ್ಲ. ವಿಜಯನಗರದ ಪ್ರಜೆಗಳು ಎಷ್ಟೊಂದು ದಯಾಪರರಾಗಿದ್ದರೆಂದರೆ, ತಾವು ಮಾಡಿದ ಕಲ್ಯಾಣಕರ ಕಾರ್ಯಗಳಿಗೆ, ಪುಣ್ಯ ಇಂಥವರಿಗೆ ಸಿಗಬೇಕೆಂದು ಅವರ ಹೆಸರನ್ನು ಶಾಸನದಲ್ಲಿ ನಮೂದಿಸುತ್ತಿದ್ದರು. ತಮ್ಮ ಮಕ್ಕಳಿಗೆ, ತಂದೆ-ತಾಯಿಗಳಿಗೆ, ರಾಜರಿಗೆ, ಬಂಧುವರ್ಗದವರಿಗೆ ಹಾಗೂ ನೆರೆಹೊರೆಯವರಿಗೆ ತಮ್ಮ ಕೆಲಸದಿಂದ ಅಂದರೆ ತಾವು ಮಾಡಿದ ಪುಣ್ಯಕೆಲಸದಿಂದ ಒಳ್ಳೆಯದಾಗಲಿ, ಪುಣ್ಯವಾಗಲಿ ಎಂದು ಶಾಸನದಲ್ಲಿ ಬರೆಸಿದ್ದನ್ನು ಗಮನಿಸಿದರೆ, ಪ್ರಜೆಗಳ ನಿಸ್ವಾರ್ಥ ಮನಸ್ಸು ಇಂದಿನ ಪೀಳಿಗೆಯವರಿಗೆ ಮಾದರಿಯ ಪಾಠವನ್ನು ಕಲಿಸುವುದೆನ್ನುವುದರಲ್ಲಿ ಸಂಶಯವಿಲ್ಲ. ಅಂಥ ಒಂದು ಶಾಸನ ಹಗರಿಬೊಮ್ಮನಹಳ್ಳಿ ತಾಲೂಕು ಮಗಿ ಮಾವಿನಹಳ್ಳಿ ಬಳಿಯ ಕೆರೆಯ ಕೋಡಿ ಬಳಿಯಲ್ಲಿ ದೊರೆತಿರುವುದು.[೧೧] ಈ ಶಾಸನವನ್ನು ಬಯಕಾರ ರಾಮಪ್ಪನು ತನ್ನ

ಮಗಳು ಲಕ್ಕರಸಮ್ಮನಿಗೆ ಪುಣ್ಯವಾಗಬೇಕೆಂದು ಕಾಮಸಮುದ್ರ ಎಂಬ ಹೆಸರಿನ ಕೆರೆಯನ್ನು ಕಟ್ಟಿಸಿದ. ಇದೇ ಶಾಸನ ಮುಂದುವರಿದು ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ನೀಡಿದ್ದು ಅದರಂತೆ ಕೊಂಡವೀಟಿ ಸಿಂಗಯ, ಇವನ ಮಗ ಭಾವಯ ಮಂತ್ರಿ, ಇವನ ಮಗ ರಾಯಮಂತ್ರಿ, ಇವನ ಪತ್ನಿ ತೆಲಗಮಾಂಬ, ಇವರ ಮಗ ಪೆದ್ದತಿಮ್ಮಯ್ಯ, ಪತ್ನಿ ಲಕ್ಕಾಂಬಿಕೆ. ಅವರ ಮಗನೇ ರಾಮಪ್ಪಯ್ಯ, ಇವನು ತಿಮ್ಮಾಪುರ, ಚೆನ್ನತಿಮ್ಮಾಪುರ ಮತ್ತು ಮಗಿಮಾವಿನಹಳ್ಳಿ ಅಗ್ರಹಾರಗಳನ್ನು ಪೆದತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳನ್ನು ಕಟ್ಟಿಸಿ, ಈ ದೇವಾಲಯಗಳ ಪೂಜೆ ಪುನಸ್ಕಾರಕ್ಕಾಗಿ ಹೊಳಗುಂದಿಯನ್ನು ದಾನ ನೀಡಿದ. ತನ್ನ ಮಗಳ ಹೆಸರಿನಲ್ಲಿ ಅಚ್ಯುತತಮ್ಮಾಪುರವನ್ನು ಕಟ್ಟಿಸಿದ. ಅಲ್ಲಿ ಕೃಷ್ಣನ ಪ್ರತಿಷ್ಠೆ ಮಾಡಿದ. ಈತನು ಅಚ್ಯುತಮ್ಮ ಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರ ಸಮುದ್ರ, ವೆಂಕಟೇಂದ್ರ ಸಮುದ್ರ, ಪೆದ್ದಲಕ್ಕ ಸಮುದ್ರ, ಲಿಂಗಾಲಯ ತಟಾಕ, ವೆಂಕಟಯ್ಯ ತಟಾಕ, ಪೆದತಿಂಮ್ಮ ಸಮುದ್ರ ಮತ್ತು ಚಿನಬಾಚ ಸಮುದ್ರವೇ ಮೊದಲಾದ ೧೬ ಕೆರೆಗಳನ್ನು ಕಟ್ಟಿಸುತ್ತಾನೆ. ಸಂಗೀತದ ಮೇಲೆ ಒಂದು ಕೃತಿಯನ್ನು ರಚಿಸಿರುತ್ತಾನೆ. ತಿಮ್ಮಮಂತ್ರಿ, ಸುರೀಂದ್ರ, ಭಾಸ್ಕರ ಚಮೂಪತಿ ಮತ್ತು ಭಾವಯ ಇವನ ಚಿಕ್ಕಂಪದಿರಾಗಿದ್ದು ರಾಚನ ಕೈಕೆಳಗೆ ಅನೇಕ ಹುದ್ದೆಗಳನ್ನು ಹೊಂದಿದ್ದರು.

ಹೀಗೆ ವಿಜಯನಗರ ಅರಸರ ಕಾಲದ ಶಾಸನಗಳನ್ನು ತೂಗಿ ನೋಡುವಾಗ ಬಹಳ ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುವ ಅಂಶವೆಂದರೆ ಅವರು ಇತರೆ ರಾಜವಂಶಗಳಿಗಿಂತ ಹೆಚ್ಚಾಗಿ ಕೆರೆ-ಕಟ್ಟೆ, ಕಾಲುವೆ ಮತ್ತು ಬಾವಿಗಳನ್ನು ತೋಡಿಸಿ ಸಾಮಾನ್ಯ ಜನರ ಜೀವನಾವಶ್ಯಕ ವಾದ ಜಲಸಂಪತ್ತನ್ನು ಹೆಚ್ಚಿಸಿದ್ದು, ಎಲ್ಲಿ ಜಲಸಂಪನ್ಮೂಲ ಯಥೇಚ್ಛವಾಗಿರುತ್ತದೋ ಅಲ್ಲಿ ಜನರು ಸಮೃದ್ಧ ಜೀವನವನ್ನು ಸಾಗಿಸುತ್ತಾರೆಂದು ಇವರು ನಂಬಿದ್ದರು. ಪುರಾತನ ಕಾಲ ದಿಂದಲೂ ದಾನಗಳಲ್ಲಿ ಉದಕದಾನ ಬಹಳ ಶ್ರೇಷ್ಠವೆಂದು ಜನರ ನಂಬಿಕೆಯಾಗಿದೆ. ಈ ಕಾರಣದಿಂದಲೂ ಕೆರೆ-ಕಾಲುವೆಗಳು ನಿರ್ಮಾಣಕ್ಕೆ ಅರಸರು, ಅಧಿಕಾರಿಗಳು ಮುಂದಾದಾಗ ಸಾಮಾನ್ಯ ಜನರೂ ತಮ್ಮ ತನು-ಮನ-ಧನಗಳ ನೆರವನ್ನು ನೀಡುತ್ತಿದ್ದರು. ವಿಜಯನಗರದ ರಾಜಧಾನಿ ಹಂಪಿಯಲ್ಲಿ ಅಷ್ಟೊಂದು ಸಿರಿ-ಸಂಪತ್ತು ತುಂಬಿದ್ದಕ್ಕೆ ಕಾರಣಗಳನ್ನು ಹೇಳುವಾಗ ಅಲ್ಲಿದ್ದ ಜಲಶ್ರೀಮಂತಿಕೆಯೂ ಒಂದು ಪ್ರಮುಖ ಕಾರಣವೆಂದು

ಹೇಳಬಹುದಾಗಿದೆ. ವಿಜಯನಗರದ ಎಲ್ಲ ಅರಸರಂತೆ ಕೃಷ್ಣದೇವರಾಯನೂ ತನ್ನ ಅವಧಿಯಲ್ಲಿ ಅನೇಕ ಕೆರೆ-ಕಟ್ಟೆ-ಬಾವಿ ಮತ್ತು ಕಾಲುವೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ತನು-ಮನ-ಧನದ ಪ್ರೇರಣೆಯನ್ನು ನೀಡಿದ್ದಾನೆ.

ಕ್ರಿ.ಶ.೧೫೧೩ರ ಒಂದು ಶಾಸನದಲ್ಲಿ[೧೨] ದೇವರಾಯ ಪಟ್ಟಣದ ಕೆಂಚಸೋಮಣ್ಣ ವೊಡೆಯನು ತನ್ನ ಆಳ್ವಿಕೆಯಲ್ಲಿದ್ದ ಚನ್ನಪಟ್ಟಣ ಸೀಮೆಯ ಕೂಡ್ಲೂರ ಹಿರಿಯಕೆರೆಯು ಹಾಳಾಗಿದ್ದಾಗ ಆ ಕೆರೆಯನ್ನು ಜೀರ್ಣೋದ್ಧಾರ ಮಾಡಲು ಹೊಸಹಳ್ಳಿ ಎಂಬ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಈ ಗ್ರಾಮದಿಂದ ಉತ್ಪತ್ತಿಯಾಗುವ ಆದಾಯದಲ್ಲಿ ಕೂಡ್ಲೂರು ಕೆರೆಗೆ ೪, ಮೊಗೆಹಳ್ಳಿ ಕೆರೆಗೆ ೨, ಹೀಗೆ ಒಟ್ಟು ೬ ಬಂಡಿಗಳನ್ನು ನೇಮಿಸಿಕೊಂಡು ಪ್ರತಿವರ್ಷವೂ ಕೆರೆಯ ಹೂಗಳನ್ನು ತೆಗೆದು ಹಾಕಿ, ಆ ಕೆರೆಗಳ ಏರಿಗೆ ಮಣ್ಣನ್ನು ಹಾಕಿಕೊಂಡು ಸರಿಪಡಿಸಿಕೊಳ್ಳಬೇಕೆಂಬ ನಿಯಮವನ್ನು ವಿಧಿಸಿ ದಾನ ನೀಡಲಾಗಿದೆ. ಈ ಶಾಸನವು ಪ್ರಾಚೀನ ಕಾಲದ ಕೆರೆ ನಿರ್ವಹಣೆಯ ರೀತಿಯನ್ನು ತಿಳಿಸುತ್ತದೆ. ಮಳೆಯ ಪ್ರಭಾವದಿಂದ ಕೆರೆಯಲ್ಲಿ ಹೂಳು ಸಂಗ್ರಹವಾಗುವುದಲ್ಲದೆ. ಏರಿಯ ಮೇಲಿನ ಮಣ್ಣು ಸವೆದು ಹೋಗುತ್ತದೆ. ಇದರಿಂದ ಕೆರೆಯಲ್ಲಿ ನೀರು ನಿಲ್ಲುವ ಸಾಮರ್ಥ್ಯ ಕುಂಠಿತವಾಗುತ್ತದೆ. ಇದನ್ನು ಚೆನ್ನಾಗಿ ಬಲ್ಲ ನಮ್ಮ ಪೂರ್ವಿಕರು ಕೆರೆಯ ಹೂಳನ್ನು ಸಾಗಿಸಲು ಅನೇಕ ಬಂಡಿಗಳನ್ನು ನಿಯಮಿಸಿ ಆ ಬಂಡಿಗಳ ನಿರ್ವಹಣೆಗೆ (ಎತ್ತುಗಳು ಮತ್ತು ಆಳುಗಳ ಕೆಲಸಕ್ಕೆ) ಹಣವನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ.

ವಿಜಯನಗರ ಅರಸರ ಕಾಲದಲ್ಲಿ ಕೆರೆ-ಕಟ್ಟೆ ನಿರ್ಮಾಣ ಮಾತ್ರವಲ್ಲದೇ ಅವುಗಳ ನಿರ್ವಹಣೆಗಾಗಿ ಊಳಿಗದವರನ್ನು ನೇಮಿಸಿರುತ್ತಿದ್ದರು. ಊಳಿಗದವರು ಎಂದರೆ ಹೇಳಿದ ಕೆಲಸ ಮಾಡುವವರು, ಆಳುಗಳು ಸದಾ ಸೇವೆಯಲ್ಲಿರುವವರು, ಸೇವಕ ಎಂದು ನಾನಾ ಅರ್ಥಗಳಿವೆ. ಶಾಸನಗಳ ಆಧಾರದಿಂದ ಇದರ ಅರ್ಥವನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ಅನೇಕ ಜನ ಊಳಿಗದವರು ದೇವಾಲಯ ನಿರ್ಮಾಣ, ನಿರ್ವಹಣೆ, ಕೆರೆಗಳ ನಿರ್ಮಾಣ, ನಿರ್ವಹಣೆಗೆಂದು ಭೂಮಿ ಹಣ ಮೊದಲಾದವನ್ನು ದಾನ ನೀಡಿರುವರು. ವಿಜಯನಗರ ಸಾಮ್ರಾಜ್ಯ ಆಳುತ್ತಿರುವಾಗ ಸಾಮಾನ್ಯ ಜನರೂ, ಪ್ರಜೆಗಳಿಗೆ ಅನುಕೂಲವಾಗಲೆಂದು, ಪಶುಪಕ್ಷಿಗಳಿಗೆ ಪರೋಪಕಾರಾರ್ಥವಾಗಿ ಕೆರೆಗಳ ನಿರ್ಮಾಣ, ಜೀರ್ಣೋದ್ಧಾರ ಮಾಡುತ್ತಿದ್ದರು. ಇಂಥಹ ವಿಚಾರವನ್ನು ತೋರಿಸಿ ಕೊಡತಕ್ಕಂತಹ ಶಾಸನ

ಹೀಗಿದೆ. ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ ದೇವರಾಯ ಪಟ್ಟಣದ ತಿಂಮಣ್ಣೊಡೆಯ ಮಗ ಕೆಂಚಸೋಮಣ್ಣವೊಡೆಯನು ತನ್ನ ನಾಯಕತನದ ಚನ್ನಪಟ್ಟಣದ ಸೀಮೆಯಲ್ಲಿನ ಕೂಡ್ಲೂರ ಹಿರಿಯಕೆರೆಯು ಹಾಳಾಗಿದ್ದಾಗ ತನ್ನ ಅರಸನಿಗೆ ಪುಣ್ಯವಾಗಲೆಂದು ಆ ಕೆರೆಯ ಜೀರ್ಣೋದ್ಧಾರಕ್ಕೆ ಕೂಡಲೂರು ಸ್ಥಳದ ಹೊಸಹಳ್ಳಿ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಈ ಗ್ರಾಮದಿಂದ ಬರುವ ಆದಾಯವನ್ನು ಅನುಭವಿಸಿಕೊಂಡು ಕೂಡಲೂರು ಕೆರೆಗೆ ೪ ಬಂಡಿಗಳು, ಮೊಗೆಹಳ್ಳಿಯ ಕೆರೆಗೆ ೨ ಬಂಡಿಗಳು ಹೀಗೆ ಒಟ್ಟು ೬ ಬಂಡಿಗಳನ್ನು ನಿಯಮಿಸಿ ಪ್ರತಿವರುಷವೂ ಆಯಾ ಕೆರೆಯ ಹೂಳನ್ನು ತೆಗೆದು, ಏರಿಗೆ ಮಣ್ಣನ್ನು ಹಾಕಿ ಸರಿಮಾಡಬೇಕೆಂದು ನಿಯಮ ಹಾಕಿ ದಾನ ನೀಡಲಾಗಿದೆ. ಈ ದಾನವನ್ನು ಮಂಗಳೇಶ್ವರ ದೇವರ ಸನ್ನಿಧಿಯಲ್ಲಿ ನೀಡಿದೆ.

ಈ ಶಾಸನದಿಂದ ಪ್ರಾಚೀನ ಕರ್ನಾಟಕದ ಕೆರೆ ನಿರ್ವಹಣೆಯ ವಿಧಾನವನ್ನು ಮತ್ತು ಅದಕ್ಕೆ ನೀಡುತ್ತಿದ್ದ ಮಹತ್ವವನ್ನು ತಿಳಿಯಬಹುದಾದಿಗೆ.[೧೩] ಇದೇ ರೀತಿ ಕೃಷ್ಣದೇವರಾಯನು ರಾಜ್ಯವಾಳುವಾಗ ಇವರ ಪುರೋಹಿತನಾದ ರಂಗನಾಥ ದೀಕ್ಷಿತರು ಅರಸನ ಕೈಯಿಂದ ಗ್ರಾಮವನ್ನು ಪಡೆದು ಅರಸನ ತಾಯಿ ನಾಗಲದೇವಿಗೆ ಪುಣ್ಯವಾಗಲೆಂದು ನಾಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ಆ ಗ್ರಾಮಕ್ಕೆ ನಾಗಲಾದೇವಿಪುರವೆಂದು ಮರು ಹೆಸರಿಟ್ಟು ಬ್ರಾಹ್ಮಣರಿಗೆ ದಾನವಾಗಿ ನೀಡುವನು.

ದಾನನೀಡಿದ ರಂಗನಾಥ ದೀಕ್ಷಿತನನ್ನು ಶಾಸನವು ಜಾಮದಗ್ನ್ಯ ಗೋತ್ರದ, ಆಶ್ವಲಾಯನ ಸೂತ್ರದ, ರುಕುಶಾಖೆಯ ನಂಜಿನಾಥಭಟ್ಟರ ಮಗನೆಂದು ಹೇಳಿ ಸರ್ವಕ್ರತು ವಾಜಪೇಯ ಸರ್ವತೋಮುಖಯಾಜಿಗಳಾದನೆಂದೂ ಹೇಳುತ್ತದೆ.[೧೪] ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ, ರಾಮಾನುಜಸಿದ್ಧಾಂತ ಸ್ಥಾಪಕರಾದ ತಿಬಸೆಟ್ಟಿಯರ ಮಗ ಲಕ್ಷುಮೀಪತಿಸೆಟ್ಟಿಯರಿಗೆ ಈ ಶಾಸನವನ್ನು ಬರೆಸಿಕೊಡಲಾಗಿದೆ. ಚೆಲ್ಲಪಿಳೆರಾಯರ ಭಂಡಾರಕ್ಕೆ ಸಲ್ಲುವ ತಿರುವಿಡಿಯಾಟದ ಪುರದ ಗ್ರಾಮದ ಹೊಸಕೆರೆಯು ಒಡೆದು ಹಾಳಾಗಲು ಇದನ್ನು ಸರಿಪಡಿಸಿ, ತೂಬನ್ನು ನಿಲ್ಲಿಸಿ, ಕೋಡಿಯನ್ನು ಭದ್ರಪಡಿಸಿ ಜೀರ್ಣೋದ್ಧಾರ ಮಾಡಿದ್ದರಿಂದ ಆ ಕಾರ್ಯಕ್ಕೆ ತಗುಲಿದ ೩೦೦ ಗದ್ಯಾಣ ಘಟ್ಟಿ ವರಹಗಳನ್ನು ಶ್ರೀ ಭಂಡಾರದಿಂದ ನಿತ್ಯ ಕಟ್ಟಳೆಗಾಗಿ ದಾನ ನೀಡಿದ ವಿವರವಿದೆ. ಇನ್ನು ಕೆಲವು ವರಹಗಳನ್ನು ಶ್ರೀ ವೈಷ್ಣವರ ಆರೋಗಣೆಗಾಗಿಯೂ ದಾನ ನೀಡಿದೆ.

ಚೆಲಪಿಳೆರಾಯರ ಭಂಡಾರದ ಸೇನಬೋವ ರಾಮಾನುಜನೆಂಬುವನು ಈ ಶಾಸನವನ್ನು ರಚಿಸಿರುವನು. ಇದಕ್ಕೆ ಅಯಿವತಿಬ್ಬರ ಒಪ್ಪವೂ ಇದೆ. ಲಕ್ಷ್ಮೀಪತಿಸೆಟ್ಟಿಯನ್ನು ಶಾಸನದಲ್ಲಿ ತಿರುನಾರಾಯಣದೇವರ ಭಕ್ತನೂ, ದೇವಮಾರ್ಗ ಪ್ರತಿಷ್ಠಾಚಾರ್ಯ, ಮಂತ್ರವಾದಿ ಭಯಂಕರ, ಮಾಯಾವಾದಿ ಕೋಳಾಹಳ, ಶರಣಾಗತ ವಜ್ರ ಪಂಜರ, ಶ್ರೀರಾಮಾನುಜಾಚಾರ್ಯರ ಪ್ರಥಮ ಶಿಷ್ಯ, ರಾಮಾನುಜ ಸಿದ್ಧಾಂತ ಸ್ಥಾಪಕನೆಂದು ಹೊಗಳಲಾಗಿದೆ.[೧೫] ಮಹಾಮಂಡಳೇಶ್ವರನಾದ ತಿಂಮ್ಮರಾಜರುಗಳು ಶ್ರೀರಾಮಚಂದ್ರದೇವರಿಗೆ (ಈಗಿನ ಹಜಾರ ರಾಮಚಂದ್ರ) ಗುಡಿಯ ಮುಂದೆ ಉತ್ತರ ದಿಕ್ಕಿನಲ್ಲಿ ಒಂದು ಉತ್ಸವ ಮಂಟಪವನ್ನು ಕಟ್ಟಿಸುತ್ತಾನೆ. ಅಲ್ಲದೆ ದೇವರ ಸೇವೆಗಾಗಿ ಕೃಷ್ಣದೇವರಾಯನು ಸೊಂಡೂರು ಸೀಮೆಯ ತಾಳೂರು ಗ್ರಾಮವನ್ನು ದಾನವಾಗಿ ನೀಡಿರುತ್ತಾನೆ.

ಈ ಗ್ರಾಮದ ಪಶ್ಚಿಮಕ್ಕೆ ಚಿಕಬೆಂಚೆಯೆಂಬ ಸಣ್ಣಕೆರೆ ಒಡೆದು ಹಾಳಾಗಿದ್ದನ್ನು ತಿಮ್ಮರಾಜರುಗಳು ದೊಡ್ಡ ಕೆರೆಯಾಗಿ ಕಟ್ಟಿಸುತಾರೆ. ಇದಕ್ಕೆ ಕರಣಿಕ ಮಂಗರಸರ ಅಧಿಕಾರ ಅಲ್ಲಮರಸರು, ಆಗಮಿಕ ನಾರಾಯಣಭಟರು, ಸ್ತಾನಿಕ ಮಾಧವಯ್ಯಗಳು. ಸ್ಥಳದ ಸೇವಬೋವ ನರಸಯ್ಯಗಳು ಈ ಕೆರೆಗೆ ಕಟ್ಟುಮಾನ್ಯವಾಗಿ ಒಂದು ಖಂಡುಗ ಬೀಜವರಿ ಗದ್ದೆಯನ್ನು ದಾನವಾಗಿ ನೀಡಿರುವರು. ಈ ಗದ್ದೆಯಿಂದ ಬಂದ ಆದಾಯದ ಸ್ವಲ್ಪ ಭಾಗವನ್ನು ತಿಂಮ್ಮರಾಜನು ತಂದೆ ಚಿಕ್ಕ ತಮ್ಮರಾಜ ವೊಡೆಯ ತಾಯಿ ಕೋನಾಜಿ ಅಮ್ಮನವರಿಗೆ ಪುಣ್ಯವಾಗಬೇಕೆಂದು ರಾಮಚಂದ್ರದೇವರ ವಿವಿಧ ಉತ್ಸವ, ಆಚರಣೆಗಳ ಸಮಯದಲ್ಲಿ ತಾನು ಕಟ್ಟಿಸಿದ ಉತ್ಸಮ ಮಂಟಪದಲ್ಲಿ ದೇವರನ್ನು ಇಟ್ಟಾಗ ಆ ಸಮಯದಲ್ಲಿ ಪೂಜಾ ಪ್ರಸಾದ (ಜೆಜಿಪು)ದ ಸೇವೆಗೆ ದಾನವಾಗಿ ನೀಡಿರುವನು. ನೀಡಬೇಕಾದ ವಸ್ತುಗಳು ಮತ್ತು ಅವುಗಳ ಪ್ರಮಾಣವನ್ನು ವಿವರವಾಗಿ ನಮೂದಿಸಲಾಗಿದೆ. ಈ ಶಾಸನವನ್ನು ಬರೆದವನು ಸೇನಬೋವನಾದ ಮಾಗುಡಿಕಾಮರಸರ ಮಗ ಬೋಕಪ ಶಿಂಘರಸನೆಂಬುವನು.[೧೬]

ನೀರಿನೊಂದಿಗಿನ ಮಾನವನ ಸಂಬಂಧ ವಿಶಿಷ್ಟವಾದದ್ದು. ನೀರು ಅವನ ಬದುಕಿನಲ್ಲಿ ಕೇವಲ ಅವಶ್ಯಕ ದ್ರವ್ಯವಾಗಿ ಉಳಿಯಲಿಲ್ಲ. ಅದು ಅವನ ಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನ ಪಡೆಯಿತು. ದೈವತ್ವಕ್ಕೇರಿತು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಲಯದಲ್ಲಿ ಮಹತ್ವದ ಸ್ಥಾನ ಪಡೆಯಿತು. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಗ್ರಾಮಗಳು ತಮ್ಮ ಮುಖ್ಯ ಆದಾಯದ ಕೃಷಿಯ ಅಭಿವೃದ್ಧಿಯ ದೃಷ್ಟಿಯಿಂದ ಕೆರೆ, ಕಟ್ಟೆ, ಬಾವಿ ಕಾಲುವೆ

ಅಣೆಕಟ್ಟುಗಳ ನಿರ್ಮಾಣಕಾರ್ಯಕ್ಕೆ ಸ್ವಯಂ ಪ್ರೇರಣೆಯಿಂದ ಮುಂದಾಗುತ್ತಿದ್ದವು. ಮತ್ತು ಉತ್ತಮವಾದ ವ್ಯವಸ್ಥಿತವಾದ ನಿರ್ಮಾಣ ನಿರ್ವಹಣೆ, ನೀರಿನ ಹಂಚಿಕೆಯಿಂದ ಶಾಂತಿಯುತವಾದ ಸಹಬಾಳ್ವೆಗೆ ಅವಕಾಶ ಮಾಡಿಕೊಟ್ಟಿದ್ದವು. ಸಮುದಾಯದ ಹಿತದೃಷ್ಟಿಯಿಂದ ಧಾರ್ಮಿಕ ಪ್ರಜ್ಞೆಯಿಂದ ಇವುಗಳ ನಿರ್ಮಾಣ, ನಿರ್ವಹಣೆಯನ್ನು ಶ್ರದ್ಧೆಯಿಂದ ಕೈಗೊಳ್ಳಲಾಗುತ್ತಿತ್ತು. ಅದೊಂದು ಸಾಮಾಜಿಕ ಜವಾಬ್ದಾರಿಯಾಗಿತ್ತು. ನಿರ್ಮಾತೃವಿನ ಧರ್ಮ ಪ್ರಜ್ಞೆಯೊಂದಿಗೆ ಅವನಿಗೆ ನೀಡಲಾಗುತ್ತಿದ್ದ ಅನೇಕ ದಾನ ದತ್ತಿಗಳು ಉಂಬಳಿಗಳು, ತೆರಿಗೆ ವಿನಾಯಿತಿಗಳು ಇಂತಹ ಕೆಲಸಗಳಲ್ಲಿ ತೊಡಗಲು ಸ್ಫೂರ್ತಿಯನ್ನು ನೀಡುತ್ತಿದ್ದವು. ಹಿರಿಯರು ಬೆಟ್ಟಗುಡ್ಡಗಳ ಮೇಲೆ ಬಿದ್ದ ನೀರನ್ನು ಸಂಗ್ರಹಿಸಲು ಕೆರೆ ಕಟ್ಟೆ ಬಾವಿಗಳನ್ನು ಅಸಂಖ್ಯವಾಗಿ ನಿರ್ಮಿಸಿದ್ದಾರೆ. ಅನೇಕ ಕೆರೆಗಳು ಇಂದಿಗೂ ಉಳಿದುಕೊಂಡು ಬಂದಿದ್ದು ತೋಟದ ಬಾವಿಗಳು ಊರೊಳಗಿನ ನೆಲ ಬಾವಿ ಮತ್ತು ಸೇದುವ ಬಾವಿಗಳು ಪ್ರತಿ ಊರಿನಲ್ಲೂ ವಿಶೇಷವಾಗಿ ಪ್ರತಿ ಹಳ್ಳಿಯಲ್ಲೂ ಕಂಡುಬರುತ್ತವೆ.

ಕೆರೆಯೊಂದನ್ನು ನಿರ್ಮಿಸಬೇಕೆಂಬ ವಿಚಾರ ಬಂದಾಗ ಆ ಕಾರ್ಯಕ್ಕೆ ಅನುಭವಿಗಳನ್ನು ತೊಡಗಿಸಲಾಗುತ್ತಿತ್ತು. ಅವರು ಭೌಗೋಳಿಕ ಪರಿಸ್ಥಿತಿಯನ್ನು ಜಲಾನಯನ ಪ್ರದೇಶಗಳನ್ನು ಅಧ್ಯಯನ ಮಾಡಿ ಸೂಕ್ತ ಭೂಮಿಯನ್ನು ಆಯ್ಕೆ ಮಾಡುತ್ತಿದ್ದರು. ತಂತ್ರಜ್ಞರು ಕೆರೆಗೆ ಹರಿದು ಬರುವ ನೀರಿನ ಪ್ರಮಾಣ ಜಲಾನಯನ ಪ್ರದೇಶಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಹೇಗೆ ಕೆರೆ ನಿರ್ಮಿಸಬೇಕೆಂದು, ಬಾವಿಗಳನ್ನು ನಿರ್ಮಿಸುವಾಗ ವಿಶೇಷ ಕಾಳಜಿಯನ್ನು ವಹಿಸುತ್ತಿದ್ದರು. ಕೆರೆಯ ಅಂಗಳದಲ್ಲಿ ಅಗೆದ ಮಣ್ಣನ್ನು ಏರಿಯ ನಿರ್ಮಾಣಕ್ಕೆ ಬಳಸಿಕೊಂಡು, ಗಟ್ಟಿಯಾದ ಏರಿಯನ್ನು ನಿರ್ಮಿಸಿ ಅದರ ಒಳಮುಖದಲ್ಲಿ ಕಲ್ಲುವಾಡವನ್ನು ಕಟ್ಟುವುದು, ತೂಬು ಕೂರಿಸುವುದು, ಕೋಡಿ ತಿದ್ದುವುದು, ಕಾಲುವೆಗಳನ್ನು ನಿರ್ಮಿಸುವುದು ತಂತ್ರಜ್ಞರ ಕಾರ್ಯವಾಗಿತ್ತು. ಕೆರೆಗಳನ್ನು ಶಾಸನಗಳು ಕೆರೆ, ಕಟ್ಟೆ ಅಥವಾ ಘಟ್ಟ ತಟಾಕ ಸಮುದ್ರ ಮುಂತಾಗಿ ಕರೆದಿವೆ. ಕೆರೆಗಳ ರೂಪ ರಚನೆಯು ಭೌಗೋಳಿಕ ಪರಿಸ್ಥಿತಿ ಮತ್ತು ನಿರ್ಮಾಣವಾಗಬೇಕಾದ ಸ್ಥಳದ ಮೇಲೆ ಅವಲಂಬಿಸಿರುತ್ತದೆ.

ಮಳೆಗಾಲದಲ್ಲಿ ದೊರೆಯುವ ನೀರಿನ ಮೊತ್ತವನ್ನು ಗಮನದಲ್ಲಿಟ್ಟುಕೊಂಡು ಮಳೆ ನೀರಿನಿಂದ ಒಡೆದು ಹೋಗದಂತೆ ಏರಿಯ ಆಕಾರವನ್ನು ನಿರ್ಮಿಸಲಾಗುತ್ತಿತ್ತು. ಕೋಟೆಯ ಹೊರಗೆ ಅಗಳಿಗೆ ನೀರು ಹರಿಸಲು ಸುಲಭವಾಗುವಂತೆ ಕೆರೆಗಳನ್ನು ನಿರ್ಮಿಸಲಾಗಿದೆ.

ಪ್ರಮುಖವಾಗಿ ಧಾರ್ಮಿಕ ಮತ್ತು ಲೌಕಿಕ ಎರಡೂ ಪ್ರೇರಣೆಗಳು ಕೆರೆಗಳ ನಿರ್ಮಾಣಕ್ಕೆ ಸ್ಫೂರ್ತಿ ನೀಡಿರುವುದು ಕಂಡುಬರುತ್ತದೆ. ಸಕಲ ಜೀವ ಜಂತು, ಸಸ್ಯ ಸಂಕುಲಕ್ಕೆ ಅವಶ್ಯಕವಾದ ನೀರನ್ನು ಒದಗಿಸಿಕೊಡುವ ಭೂತದಯೆ, ನಾವು ಮಾಡುವ ದಾನ ಧರ್ಮಗಳು ಎಲ್ಲ ಜೀವ ಸಂಕುಲದ ಉಪಯೋಗಕ್ಕೆ ಒದಗುವಂತದ್ದಾಗಬೇಕೆಂಬ ಪ್ರೇರಣೆ ಕೆರೆ, ಬಾವಿ, ನಿರ್ಮಾಣಕ್ಕೆ ಸ್ಫೂರ್ತಿ. ತಮ್ಮ ಪ್ರೀತಿ ಪಾತ್ರರಾದವರ ಶ್ರೇಯಸ್ಸಿಗಾಗಿ, ಪುಣ್ಯ ಪ್ರಾಪ್ತಿಗಾಗಿ ಕೆರೆಗಳನ್ನು ಕಟ್ಟಿಸಿರುವುದಕ್ಕೆ ಹೆಚ್ಚು ಉದಾಹರಣೆಗಳು ಸಿಕ್ಕುತ್ತವೆ. ಅಗಲಿದ ತಂದೆ ತಾಯಿಗಳ ಮೇಲಿನ ಭಕ್ತಿ ಪ್ರೇಮಗಳಿಂದ ಮಕ್ಕಳು ಅವರ ಹೆಸರಿನಲ್ಲಿ ಪರೋಕ್ಷ ವಿನಯಕ್ಕೆಂದು ಕೆರೆ ನಿರ್ಮಿಸಿದ್ದಾರೆ. ಅದರಿಂದ, ಮಡಿದವರ ಆತ್ಮಕ್ಕೆ ಶಾಂತಿಯೂ ಸದ್ಗತಿಯೂ ದೊರೆಯುವುದೆಂಬ ನಂಬಿಕೆಯಿದೆ.

ಕೆರೆ ನಿರ್ಮಾಣದ ಹಿಂದೆ ರಾಜಕೀಯ ಉದ್ದೇಶವು ಪ್ರಧಾನ ಪಾತ್ರವಹಿಸಿರುವುದನ್ನು ಗಮನಿಸಬಹುದು. ತಮ್ಮ ಅಧಿಪತ್ಯಕ್ಕೆ ಒಳಪಟ್ಟ ಪ್ರದೇಶಗಳ ಸಂಪತ್ತಿನ ಅಭಿವೃದ್ಧಿಯ ಉದ್ದೇಶ ದೊಂದಿಗೆ ಸ್ಥಳೀಯರ ಪ್ರೀತಿಗೆ ಪಾತ್ರವಾಗು ವುದಕ್ಕಾಗಿ ದೊರೆಗಳು, ಸ್ಥಳೀಯ ಆಡಳಿತಗಾರರು ಕೆರೆ ಕಟ್ಟೆಗಳ ನಿರ್ಮಾಣಕ್ಕೆ ಮುಂದಾಗು ತ್ತಿದ್ದರು. ನಾನಾ ಕಾರಣಗಳಿಗಾಗಿ ಹೊಸ ಗ್ರಾಮಗಳು, ಅಗ್ರಹಾರಗಳು ಸ್ಥಾಪಿತವಾಗುತ್ತವೆ. ಅಂತಹ ಸಂದರ್ಭಗಳಲ್ಲಿ ಅಲ್ಲಿನ ಜನರ ಅವಶ್ಯಕತೆಗಾಗಿ ಕೆರೆಗಳು ನಿರ್ಮಾಣವಾಗುತ್ತವೆ. ಹೊಸ ಗ್ರಾಮವಾಸಿಗಳ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅವರ ಜೀವಿತಕ್ಕೆ ಆಧಾರವಾದ ಕೃಷಿಭೂಮಿಗಳ ನಿರ್ಮಾಣದೊಂದಿಗೆ ಕೆರೆ ನಿರ್ಮಾಣಕ್ಕೆ ಮೊದಲು ಆದ್ಯತೆಯಿರುತ್ತದೆ.

ಕೆರೆಗಳ ನಿರ್ಮಾಣದ ಉದ್ದೇಶ ಸಫಲವಾಗಬೇಕಾದರೆ, ಸಮರ್ಪಕವಾಗಿ ಬಳಸಿಕೊಳ್ಳಲು, ಉಳಿಸಿಕೊಳ್ಳಲು ವ್ಯವಸ್ಥಿತವಾದ ನಿರ್ವಹಣೆ ಅಗತ್ಯ. ಅದಕ್ಕಾಗಿ ನಿರ್ವಾಹಕರ ಅವಶ್ಯಕತೆಯಿರುತ್ತದೆ. ಈ ಕಾರ್ಯಕ್ಕಾಗಿ ಹತ್ತಾರು ದಾನಿಗಳು. ಶ್ರೇಣಿಗಳು, ಗ್ರಾಮ ಸಭೆಗಳು, ನಿರ್ಮಾತೃಗಳು ಧಾರಾಳವಾಗಿ ದಾನ ಬಿಟ್ಟಿದ್ದಾರೆ. ಹಾಗೆ ಮಾಡಿದ್ದರಿಂದಲೇ ನಮ್ಮಲ್ಲಿ ಸಾವಿರಾರು ಕೆರೆಗಳು ಇನ್ನೂ ಜೀವಂತವಾಗಿವೆ. ಕೃಷಿಕರ ಜೀವನಾಧಾರವಾಗಿವೆ.

ಕೆರೆಗಳ ನಿರ್ಮಾಣ ಪುಣ್ಯವೆಂಬ ನಂಬಿಕೆಯಂತೆಯೇ ಅದನ್ನು ಹಾಳುಗೆಡಹುವುದು ಪಾಪಕ್ಕೆ ಕಾರಣವೆಂಬ ನಂಬಿಕೆಯೂ ಇತ್ತು. ಜೊತೆಗೆ ಅಂತಹ ದುಷ್ಟರಿಗೆ ಶಿಕ್ಷೆಯನ್ನು

ವಿಧಿಸಲಾಗುತ್ತದೆಂಬ ಭೀತಿಯೂ ಇತ್ತು. ಅರ್ಥಶಾಸ್ತ್ರವು ಅಂಥವರನ್ನು ನೀರಿನಲ್ಲಿ ಮುಳುಗಿಸಿ ಕೊಲ್ಲಬೇಕೆಂದು ಹೇಳಿ ಕೆರೆಗಳನ್ನು ಅಲಕ್ಷಿಸಿದವರಿಗೆ ದಂಡವಿಧಿಸುವಂತೆ ಹೇಳಿದೆ."[೧೭] ಶಾಸನಗಳೂ ಕೆರೆಗಳನ್ನು ಕುರಿತು ಶಾಪಾಶಯಗಳನ್ನು ಹೇಳಿವೆ.

ಕೆರೆಗಳ ಒಡೆತನ ಉಸ್ತುವಾರಿಯನ್ನು ನಿರ್ಮಾತೃವಿಗೆ ಅಥವಾ ದಾನಿಗೆ ಅಥವಾ ಗ್ರಾಮದ ಮಹಾಜನಗಳಿಗೆ ಅಥವಾ ದೇವಾಲಯ ಆಡಳಿತ ವರ್ಗಕ್ಕೆ, ಗ್ರಾಮಸಭೆಗಳಿಗೆ ವಹಿಸಿಕೊಡಲಾಗುತ್ತಿತ್ತು. ಕೆರೆಗಳನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿಯೂ ಅವರದೇ ಆಗಿರುತ್ತಿತ್ತು. ಈ ನಿಟ್ಟಿನಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು, ಮಹಾಜನರು, ಗ್ರಾಮಸಭೆಗಳು ಕೆರೆ ಉಸ್ತುವಾರಿಗೆಂದೇ ನೀರುಗಂಟಿಗಳನ್ನು, ಏರಿಗಣಕರನ್ನು, ಕೆರೆಬಂಡಿಯವರನ್ನು ನೇಮಿಸಿ ಅವರಿಗೆ ಉಂಬಳಿಗಳನ್ನು ಬಿಡುತ್ತಿದ್ದರು.

ಹೂಳೆತ್ತುವ ಕಾರ್ಯವು ಕೆರೆ ನಿರ್ವಹಣೆಯಲ್ಲಿ ಅತ್ಯಂತ ಮಹತ್ವದ್ದು. ಕೆರೆಯ ತಳದಲ್ಲಿ ಹೂಳು ಶೇಖರಣೆಯಾಗದಂತೆ ಹಾಗೂ ನೆರೆಯ ಹಾವಳಿಯಿಂದ ಕೆರೆಯಲ್ಲಿ ಅನಾವಶ್ಯಕ ವಸ್ತುಗಳು ಸೇರಿ ಕೆರೆಯಂಗಳದಲ್ಲಿನ ನೀರಿನ ಮಟ್ಟವನ್ನು ಕಡಿಮೆ ಮಾಡದಂತೆ ನೋಡಿ ಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಕೆರೆಗಳ ಸುತ್ತಮುತ್ತ ತೋಟಗಳನ್ನು, ತೋಪುಗಳನ್ನು, ನಂದನವನಗಳಿಗಾಗಿ ಜಾಗ ಮಾಡಿ ಗಿಡ ಮರಗಳನ್ನು ಬೆಳೆಸುತ್ತಿದ್ದರು. ಅವು ಮಣ್ಣು ಕೊಚ್ಚಿ ಹೋಗದಂತೆ ತಡೆಯುತ್ತಿದ್ದವು. ವಿಜಯನಗರದ ಅರಸರ ವೀರಪ್ರತಾಪದೇವರಾಯನ ಕಾಲದಲ್ಲಿ ಕೆರೆಬಂಡಿಗೆ ಏರ್ಪಾಡು ಮಾಡಿದ ಎರಡು ಉದಾಹರಣೆಗಳು ನೇರ್ಲಿಗೆ ಮತ್ತು ತಿಮ್ಮನ ಹಳ್ಳಿಯ ಶಾಸನಗಳಲ್ಲಿವೆ.[೧೮]

ಈ ಎರಡೂ ಜಮೀನುಗಳ ಪಕ್ಕದಲ್ಲಿಯೇ ಕಾಲುವೆಯಿದ್ದು, ಉತ್ತಮ ನೀರಾವರಿ ಜಮೀನುಗಳನ್ನೇ ಇಂಥಹ ಉಂಬಳಿಗಳಾಗಿ ನೀಡಲಾಗುತ್ತಿತ್ತು. "ಈ ಭೂಮಿಯನು ತೋಟ ಗದ್ದೆಯ ಮಾಡಿಕೊಂಡು ಕೆರೆಯ ಬಂಡಿಯನು ನಡೆಸಿ ಬಹಿರಿ" ಎಂದು ಶಾಸನ ಉಂಬಳಿ ಪಡೆದವರಿಗೆ ನಿರ್ದೇಶನ ನೀಡಿರುವುದು ಗಮನಾರ್ಹವಾಗಿದೆ.[೧೯] ಮತ್ತೊಂದು ಶಾಸನವು[೨೦] ಅರಸೀಕೆರೆಯ ಹಿರಿಯಕೆರೆಯ ಬಂಡಿಯ ಆಳ ಜೀವಿತಕ್ಕೆ ಮತ್ತು ಎತ್ತಿನ ಅಹಾರಕ್ಕೆ ನಾಲ್ಕು ಕೊಳಗ ಭೂಮಿಯನ್ನು ಹಿರಿಯಂಣ ಎಂಬುವವನಿಗೆ ಒಂದು ಗದ್ಯಾಣವನ್ನು, ವರುಷಂ ಪ್ರತಿಯಾಗಿ ಫಲ ನೂರು ಒಟ್ಟು ಗದ್ಯಾಣ ನೂರ ಇಪ್ಪತ್ತನ್ನು ಅಚಂದ್ರಾರ್ಕ ತಾರಂಬರು

ನಡೆಸುವಂತಾಗಿ ದತ್ತಿ ಬಿಡಲಾಗಿದೆ. ಇಲ್ಲಿ ಗಮನಿಸಬೇಕಾದದ್ದು ಕೆರೆ ನಿರ್ವಹಣೆಗೆ ವಿಶೇಷವಾಗಿ ಉಂಬಳಿ ಜಮೀನಿಗಿಂತ ಹಣದ ರೂಪದಲ್ಲಿ ಕೊಡುಗೆ ನೀಡಿರುವುದು.

ದುರಸ್ತಿ ಕಾರ್ಯಗಳು ಕೆರೆ ಕಾಳಜಿ ನಿರ್ವಹಣೆಯಲ್ಲಿ ಬಹಳ ಮುಖ್ಯ ಏನೆಲ್ಲ ಮುನ್ನೆಚ್ಚರಿಕೆ, ತಂತ್ರಜ್ಞಾನಗಳನ್ನು ಬಳಸಿ ಕೆರೆಗಳ ನಿರ್ಮಾಣ ಮಾಡಿದ್ದವು. ಏರಿಗಳ ದುರಸ್ತಿ ಕಾಮಗಾರಿಗಳಿಗಾಗಿ, ತೂಬು, ಕೋಡಿಗಳ ದುರಸ್ತಿಗಾಗಿ ಅವಶ್ಯಕತೆಗೆ ತಕ್ಕಂತೆ ಹೊಸ ತೂಬುಗಳು ಮತ್ತು ಕಾಲುವೆಗಳನ್ನು ಜೋಡಿಸುವುದು ಕೋಡಿಗಳನ್ನು ತಿದ್ದುವುದು ಕಾಲಕಾಲಕ್ಕೆ ನಡೆಯುತ್ತಿದ್ದವೆಂಬುದನ್ನು ಶಾಸನಗಳ ಆಧಾರದಿಂದ ತಿಳಿಯಬಹುದು.

ಕೆರೆಗಳು ಗ್ರಾಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳು. ಉತ್ತಮ ಕೆರೆಗಳು ರೈತರ ಬದುಕನ್ನು ಹಸನುಗೊಳಿಸುತ್ತವೆ. ಇದನ್ನು ಅರಿತಿದ್ದ ನಮ್ಮ ಪೂರ್ವಿಕರು ಕೆರೆಗಳ ನಿರ್ಮಾಣಕ್ಕೆ ಮತ್ತು ಜೀರ್ಣೋದ್ಧಾರಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಕ್ರಿ.ಶ.೧೪೩೨ರ ತಿಮ್ಮನಹಳ್ಳಿ ಶಾಸನದಲ್ಲಿ ಕೆರೆಯ ಬಂಡಿ ಜೀವಿತಕ್ಕೆ ದಾನ ನೀಡಿದ ವಿಷಯವಿದೆ. ಬಸವ ಶಂಕರಶೆಟ್ಟಿ ಎಂಬುವನು ನೆರಲಿಗೆಯ ಹಿರಿಯ ಕೆರೆಯ ಭಂಡಿಗಾಗಿ ಭೂಮಿ ದಾನ ನೀಡಿದ್ದಾನೆ. ಆ ಭೂಮಿಯಲ್ಲಿ ತೋಟ ಮತ್ತು ಗದ್ದೆಯನ್ನು ಮಾಡಿಕೊಂಡು ಕೆರೆಯಭಂಡಿಯನ್ನು ನಡೆಸಬೇಕೆಂದಿದೆ.[೨೧] ಈ ಶಾಸನವು ಇಮ್ಮಡಿ ದೇವರಾಯನ ಕಾಲದ್ದು. ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯದ ಚರಿತ್ರೆಯಲ್ಲಿ ಇಮ್ಮಡಿ ದೇವರಾಯನ ಅವಧಿಯು ಸುವರ್ಣ ಕಾಲವೆಂದು ಹೆಸರು ಪಡೆದಿದೆ.

ವಿಜಯನಗರದ ರಾಜನಾದ ಪ್ರೌಢದೇವರಾಯನ ಪ್ರಧಾನಿಯಾದ ಪೆರುಮಾಳೆದೇವ ದಂಣ್ಣಾಯ್ಕರ ಮಕ್ಕಳಾದ ಚಿಕ್ಕ ಪೆರುಮಾಳೆದೇವರಿಗೆ ದೇವರಾಯ ಮಹಾರಾಯರು ಚೆನ್ನಪಟ್ಟಣದ ರಾಜ್ಯವನ್ನು ದಯಪಾಲಿಸಿರುತ್ತಾರೆ. ಈ ನಾಡಿಗೆ ಸಲ್ಲುವ ಕಿಱುಗವರ ಸ್ಥಳದ ಸುಳ್ಳೇರಿಯ ಬಳಿಯ ನಾಲ್ವತ್ತು ಹೊನ್ನು ಉತ್ಪಾದನೆಯುಳ್ಳ ಬೆಟ್ಟಹಳ್ಳಿ ಎಂಬ ಗ್ರಾಮವು ಬಹಳ ಕಾಲದಿಂದಲೂ ಹಾಳಾಗಿ, ಹುಲ್ಲು, ಗಿಡಗಳು ಹುಟ್ಟಿಕೊಂಡಿದ್ದವು. ಆ ಭೂಮಿಯೆಲ್ಲ ಸಾಗುವಳಿಗೆ ಅಯೋಗ್ಯವಾಗಿ ದನ ಕರುಗಳು ಮೇಯುವ ಸ್ಥಳವಾಗಿತ್ತು. ಇದನ್ನು ನೋಡಿದ ಚಿಕ್ಕಪೆರುಮಾಳೆದೇವ ಮತ್ತು ಇವನ ಅಣ್ಣ ತಿರುಮಲನಾಥ ಒಡೆಯರು ತಲ್ಲೆಹದ ಅಂಕಸೆಟ್ಟಿ ಮತ್ತು ಮಕ್ಕಳಾದ ಅಳಗಿಸೆಟ್ಟಿಯರಿಗೆ ಸರ್ವಮಾನ್ಯವಾಗಿ ದಾನ ನೀಡುವನು. ಅವರು ಈ

ಗ್ರಾಮದ ಸಮೀಪ ತಿರುಮಲನಾಥಪುರವೆಂಬ ಹೊಸ ಗ್ರಾಮವನ್ನು ಕಟ್ಟಿಸಿ, ಮರಗಳನ್ನು ನೆಟ್ಟು ಈ ಗ್ರಾಮದಲ್ಲಿ ಉತ್ಪತ್ತಿಯಾದ ಆದಾಯವನ್ನು ದೇವರು, ಬ್ರಾಹ್ಮಣರು, ಗುರುಲಿಂಗ ಜಂಗಮಕ್ಕೆ ಅನ್ನ ಮತ್ತು ಉದಕದ ಸೇವೆಗಾಗಿ ಬಳಸಬೇಕೆಂದು ಲಿಂಗಮುದ್ರೆ ಶಾಸನವನ್ನು ಹಾಕಿಸಿಕೊಡುವರು.

ಇದರಂತೆ ಅಳಗಿ ಸೆಟ್ಟಿಯರು ತಮ್ಮ ಕೈಯಿಂದ ಬಹಳ ಹಣವನ್ನು ಖರ್ಚುಮಾಡಿ ತಿರುಮಲನಾಥಪುರವನ್ನು ಪಟ್ಟಣವನ್ನಾಗಿ ರೂಪಿಸಿ ಆ ಊರಿನ ಮುಂದೆ ಅಂಕಸಮುದ್ರವೆಂಬ ದೊಡ್ಡ ಕೆರೆಯನ್ನು ಕಟ್ಟಿಸಿ, ಅದರ ಉತ್ತರಕ್ಕೆ ಅಡವಿಯಲ್ಲಿ ತಿರುಮಲನಾಥ ಒಡೆಯರ ನೆನಪಿಗೆ ತಿಂಮ್ಮ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಅಲ್ಲಿ ಹಿಂದೆ ಇದ್ದ ಅಂಕನಾಥಗುಡಿ ಹಾಳಾಗಿರುವಾಗ ಅದರ ಜೀರ್ಣೋದ್ಧಾರ ಮಾಡಿಸಿ, ಗರ್ಭಗೃಹ, ಸುಖನಾಸಿ, ರಂಗಮಂಟಪ, ಶಿಖರ ಮುಂತಾದವನ್ನು ಕಟ್ಟಿಸಿ ಪ್ರತಿನಿತ್ಯ ೧೨ ಮಂದಿ ಬ್ರಾಹ್ಮಣರು ಊಟ ಮಾಡುವಂತೆ ವ್ಯವಸ್ಥೆಯನ್ನು ಮಾಡುವನು. ಇದಕ್ಕೆ ಕೆರೆಯ ಬಳಿ ೧೦ ಖಂಡುಗ ಗದ್ದೆಯನ್ನು ದಾನ ಬಿಡುವನು. ಆ ಬ್ರಾಹ್ಮಣರ ಛತ್ರಕ್ಕೆ ಸುಳ್ಳೇರಿಯ ಕೆರೆಯ ಕೆಳಗಿನ ಗದ್ದೆಯನ್ನು ಅಂಕನಾಥ ದೇವರ ನೈವೇದ್ಯ ಹಾಗೂ ಅಮೃತಪಡಿಗೆ ಗದ್ದೆಯನ್ನು, ನಂದಾದೀಪಕ್ಕೆ ಹೊಲವನ್ನೂ ದಾನವಾಗಿ ನೀಡಿ ಲಿಂಗಮುದ್ರೆ ಕಲ್ಲನ್ನು ನೆಡಿಸುವನು. ಈ ಶಾಸನವನ್ನು ಬರೆದವನು ಪೆರುಮಾಳದೇವ ಎಂಬುವನು.

ಒಂದು ಗ್ರಾಮವನ್ನು ನಿರ್ಮಿಸಿ, ಅಲ್ಲಿನ ಎಲ್ಲ ವ್ಯವಹಾರವನ್ನೂ ಸುಸೂತ್ರವಾಗಿ ನಡೆಸಲು ವ್ಯವಸ್ಥೆ ಮಾಡುವ ಮತ್ತು ಅಲ್ಲಿನ ಗುಡಿಗಳಿಗೆ ದಾನ ನೀಡುವ ಅಪರೂಪದ ಶಾಸನ ಇದಾಗಿದೆ." ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ನೀಲಗುಂದದ ಶಾಸನದ ಪ್ರಕಾರ, ಬರಿಸೆಟ್ಟಿ ಎಂಬುವನು ಬಾರಿಯ ಕೆರೆಯ ತೂಬನ್ನು ಜೀರ್ಣೋದ್ಧಾರ ಮಾಡಿಸಿದ ಉಲ್ಲೇಖವಿದೆ. ನೀರ್ಗುಂದದ ಮಹಾಜನಗಳು ಬರಿಸೆಟ್ಟಿಗೆ ಈ ಸಮಯದಲ್ಲಿ ದತ್ತಿ ಬಿಡುತ್ತಾರೆ.[೨೩] ಹೀಗೆ ವಿಜಯನಗರದ ಕಾಲದ ಶಾಸನಗಳಲ್ಲಿ ಸೆಟ್ಟಿ ಕುಲದವರು ಕೆರೆ ಕಟ್ಟೆ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ತೋರಿದ ಉದಾರತೆ ನಿಜಕ್ಕೂ ಶ್ಲಾಘನೀಯವಾಗಿದೆ. ಕೆರೆಯೆಂದರೆ ಮೊದಲು ನೆನಪಾಗುವುದು ಲಕ್ಷ್ಮೀಧರಾಮಾತ್ಯನ ಶಾಸನ "ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರವಂ ಮಾಡಿಸು" ಎಂಬ ವಿಜಯನಗರದ ಪ್ರೌಢಪ್ರತಾಪರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಲುಣಿಸುವ ಸಂದರ್ಭದಲ್ಲಿ ಹೇಳುವ

ಮಾತಿದು. ಭೂಮಿಗಿಂತ ದೊಡ್ಡವಳು ತಾಯಿ ಎನ್ನುವ ಮಾತು ಈ ಸಂದರ್ಭದಲ್ಲಿ ನೆನಪಾಗದೇ ಇರದು. ಒಬ್ಬ ಆದರ್ಶ ತಾಯಿಯು ನೂರು ಜನ ಗುರುಗಳಿಗಿಂತಲೂ ಶ್ರೇಷ್ಠಳು ಎನ್ನುವ ಮಾತು ಲಕ್ಷ್ಮೀಧರನ ತಾಯಿಯ ವಿಷಯದಲ್ಲಿ ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಕ್ರಿ.ಶ.ಹದಿನೈದನೇ ಶತಮಾನದ ಪ್ರಾರಂಭಕ್ಕಾಗಲೇ ಗುಮ್ಮಳಾಪುರದಲ್ಲಿ ವೀರಶೈವ ಮಠಗಳು ಹುಟ್ಟಿಕೊಂಡಿದ್ದವು.

ವೀರಶೈವ ವರ್ತಕರ ಪ್ರಭಾವವನ್ನು ಬಿಂಬಿಸುವ ಕ್ರಿ.ಶ.೧೪೦೭ರ ವಿಜಯನಗರ ಅರಸ ಇಮ್ಮಡಿ ಹರಿಹರರಾಯನ ಕುಮಾರ ದೇವರಾಯನ ಕಾಲದ ಶಾಸನವೊಂದು ಈ ಊರಲ್ಲಿದ್ದು, ಸಾಜಿರಿ ನಾಗಿನಾಯಕನ ಮಗ ಹಿರಿಯಪೆಮ್ಮೆಯ ನಾಯಕ ಹಾಗೂ ಪಟ್ಟಣಸ್ವಾಮಿಯ ಹಾಮ್ಮಿಸೆಟ್ಟಿಯ ಮಗ ಕರಡಿಸೆಟ್ಟಿಯವರುಗಳು ಕುಂಟೆ(ಕೆರೆ)ಯೊಂದನ್ನು ನಿರ್ಮಿಸಿರುವ ಬಗ್ಗೆ ಮಾಹಿತಿ ಒದಗಿಸುತ್ತದೆ.[೨೪] ಕ್ರಿ.ಶ.೧೫೨೭ರ ಗುಮ್ಮಳಾಪುರದಲ್ಲೇ ಇರುವ ಶಾಸನವು.[೨೫] ಅಕ್ಕಲಚೆನ್ನಿಸೆಟ್ಟಿ ಎಂಬುವನು ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರನೆಂದು ತಿಳಿಸುತ್ತದೆ. ಕ್ರಿ.ಶ.೧೫೩೦ರ ಅಚ್ಯುತರಾಯನ ಕಾಲದ ಶಾಸನ.[೨೬] ತಳಿಗ್ರಾಮದ ಕೆರೆಯ ಕಟ್ಟೆಯ ಮೇಲಿದ್ದು ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರಾದ ಅಕ್ಕನ ಚೆನ್ನಿಸೆಟ್ಟಿಯ ಪೌತ್ರ ಹೊನ್ನಸೆಟ್ಟಿಯ ಪುತ್ರ ಹೊನ್ನಹಲಗಿಸೆಟ್ಟಿ ಎಂಬುವನು 'ಹೊನ್ನಾಂಬುಧಿ' ಎಂಬ ಕೆರೆಯನ್ನು ಕಟ್ಟಿಸಿದ ಬಗ್ಗೆ ವಿವರ ನೀಡುತ್ತದೆ.

ಈ ಶಾಸನಗಳನ್ನು ಗಮನಿಸಿದಾಗ ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರೆನಿಸಿ ಕೊಂಡ ಗುಮ್ಮಳಾಪುರಕ್ಕೆ ಸೇರಿದ ವೀರಶೈವ ವರ್ತಕರು ಪ್ರಸಿದ್ಧರಿದ್ದಂತೆ ತೋರುತ್ತದೆ. ಅಕ್ಕನ/ ಅಕ್ಕಲ ಚೆನ್ನಿಸೆಟ್ಟಿ ವಿಜಯನಗರದ ಕೃಷ್ಣದೇವರಾಯನ ಕಾಲದ ರಾಜಬೆವಹಾರಿ(Rayal Merchant)ಯಾಗಿದ್ದ. ಆತನ ಮಗನೇ ಹೊನ್ನಸೆಟ್ಟಿ, ಮೊಮ್ಮಗ ಹೊನ್ನಹಲಗಿಸೆಟ್ಟಿ. ಈತನು ಸಾಕಷ್ಟು ಶ್ರೀಮಂತನಿದ್ದಿರಬೇಕು. ಅಂತೆಯೇ 'ಹೊನ್ನಾಂಬುಧಿ' ಎಂಬ ಕೆರೆಯನ್ನು ನಿರ್ಮಿಸಿ, ದೇವ, ಬ್ರಾಹ್ಮಣ, ಜಂಗಮ ಮತ್ತು ವಿದ್ವಾಂಸರಿಗೆ ಅಗ್ರಹಾರವೊಂದ್ನು, ದತ್ತಿಬಿಟ್ಟಿರುವುದನ್ನು ಕಂಡರೆ, ಅಂದಿನ ಸಮಾಜದ ವಣಿಕ ವರ್ಗದ ಉದಾರತೆ, ದೇವ, ಬ್ರಾಹ್ಮಣ, ಜಂಗಮ ಮತ್ತು ವಿದ್ವಾಂಸರ ಬಗೆಗಿನ ಗೌರವಾದರಗಳು ಮನವರಿಕೆಯಾಗುತ್ತದೆ. ಈ ಶಾಸನಗಳಲ್ಲಿ ಪ್ರಯುಕ್ತವಾಗಿರುವ ನಾಗಮಂಗಲವು ಮಂಡ್ಯ ಜಿಲ್ಲೆಯ ನಾಗಮಂಗಲವೇ ಆಗಿದೆ. ಏಕೆಂದರೆ ಅಲ್ಲಿನ ವೀರಭದ್ರೇಶ್ವರ ದೇವಸ್ಥಾನದೊಳಗೆ ನವರಂಗ ಮಂಟಪದ ಬಾಗಿಲಿನ ಬಲಭಾಗದಲ್ಲಿರುವ

ಶಾಸನವು[೨೭] ಕ್ರಿ.ಶ.೧೫೧೧ಕ್ಕೆ ಸೇರಿದ್ದು, 'ಶ್ರೀವೀರಪ್ರತಾಪ ಕೃಷ್ಣದೇವರಾಯರೂ ಪ್ರಥ್ವೀರಾಜ್ಯಂಗೆಯಿವುತಿರಲು ಅವರ ಅರಮನೆಯ ಬೇಹಾರಿಗಳು ಗುಂಮಳಾಪುರದ ಅಕ್ಕನ ಚೆಂನಿಸೆಟ್ಟಿಯರ ಮಕ್ಕಳೂ ಹೊಂನಿಸೆಟ್ಟಿಯರೂ ವೀರಭದ್ರದೇವರ ರಂಗಮಂಟಪ ಮುಂದಣ ಗಂಧಗೋಡಿ ಮಂಟಪದ ಸೇವೆಯನೂ ಮಾಡಿ ವೀರಭದ್ರದೇವರ ಶ್ರೀ ಪಾದಕ್ಕೆ ಸಮರ್ಪಿಸಿದ ವಿವರವನ್ನು ನೀಡುತ್ತದೆ.

ವಿಜಯನಗರದ ರಾಜಧಾನಿಯಲ್ಲಿ ಕೆರೆಗಳು ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ. ಅರಸರು ಈ ಭಾಗದ ಮಳೆಯ ವೈಪರೀತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸಿದ್ದಾರೆ.[೨೮] ನಗರ ಕೆರೆಗಳ ಬಗ್ಗೆ ಎಂ.ಎಲ್.ಸರಸ್ವತಿಯವರು, ಜಿ.ಎಸ್.ದೀಕ್ಷಿತ್, ಜಿ.ಆರ್. ಕುಪ್ಪಸ್ವಾಮಿ, ಸಿ.ಟಿ.ಎಂ.ಕೊಟ್ರಯ್ಯ, ಡಾ.ವಸುದೇವನ್, ಎಂ.ಕೊಟ್ರೇಶ್ ಇವರು ಸಂಶೋಧನೆ ಮಾಡಿರುವರು. ರಾಜಧಾನಿಯ ಕೋಟೆಯ ಒಳಗೂ ನೀರಿನ ವ್ಯವಸ್ಥೆಗಾಗಿ ಕೆರೆಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುವ ಅಂಶ. ಇಲ್ಲಿ ಭೂಪತಿ ಕೆರೆ[೨೯] ಕಮಲಾಪುರದ ಕೆರೆ[೩೦] ಕೃಷ್ಣರಾಯ ಸಮುದ್ರದ ಕೆರೆ.[೩೧] ಇವುಗಳು ಕೋಟೆಯೊಳಗಿರುವ ಮುಖ್ಯ ಕೆರೆಗಳಾಗಿವೆ. ಇವುಗಳಲ್ಲಿ ಕಮಲಾಪುರದ ಕೆರೆ ಮಾತ್ರ ಉಳಿದುಕೊಂಡಿದೆ.

ತಮಿಳುನಾಡಿನ ಶಿಲಾ ಶಾಸನವೊಂದು ಕುಂಟೆಯ ಬಗೆಗೆ ವಿವರಿಸಿದೆ. ಇಬ್ಬರು ವ್ಯಕ್ತಿಗಳು ಹಳ್ಳಿಯ ಮುಖಂಡ ಹಾಗೂ ಹಿರಿಯ ಪಮ್ಮೆಯ ನಾಯಕ ಅರಸನ ಅಧಿಕಾರಿ ಪಟ್ಟಣಸ್ವಾಮಿ ಕರಡಿಸೆಟ್ಟಿ ಇವರು ಹಳ್ಳಿಗರ ಅನುಕೂಲಕ್ಕೆಂದು ಒಂದು ಕುಂಟಿಯನ್ನು ನಿರ್ಮಿಸಿದರು.[೩೨] ಕ್ರಿ.ಶ.೧೫೪೬ರಲ್ಲಿ ಸದಾಶಿವರಾಯನು ಚಕ್ರವರ್ತಿಯಾಗಿದ್ದಾಗ ಶಂಕರಲಿಂಗಸೆಟ್ಟಿ ಎಂಬಾತ ಧರ್ಮಸತ್ರದೊಂದಿಗೆ ವಿಠ್ಠಲದೇವರ ಸೇವೆಗಾಗಿ ಕೆರೆಯೊಂದನ್ನು ನಿರ್ಮಿಸಿಕೊಟ್ಟನು.[೩೩]

ಕ್ರಿ.ಶ.೧೪೯೨ರ ತಿರುಪತಿಯ ಒಂದು ಶಾಸನವು ಇದಕ್ಕೆ ಉದಾಹರಣೆ ಆಗಿದೆ. ಈ ದಾಖಲೆಯು ಹೇಳುವಂತೆ, ಮಹಾಮಂಡಳೇಶ್ವರ ಬೈಚಿರಾಜ ತಿಮ್ಮರಾಜನೆಂಬ ಅಧಿಕಾರಿಯು ಮಹಾಜನರ ಸಭೆಗೆ ಹಣ ನೀಡಿ ಕೆರೆಗೆ ಬೇಕಾದ ಭೂಮಿಯನ್ನು ಕೊಂಡುಕೊಂಡ. ಹೀಗೆ ಕೊಂಡ ಭೂಮಿಯ ಗಡಿಯಲ್ಲಿ ವಿಷ್ಣು ಚಕ್ರದ ಕಲ್ಲುಗಳನ್ನು ಹೂಳಿಸಿ ಗುರುತಿಸಲಾದ ಪ್ರದೇಶದಲ್ಲಿ ಒಂದು ಕೆರೆ ಮತ್ತು ಹೂದೋಟವನ್ನು ರಚಿಸಲಾಯಿತು. ಕೆರೆಯ ಮಧ್ಯೆ ಒಂದು ಮಂಟಪವನ್ನೂ ನಿರ್ಮಿಸಲಾಯಿತು. ಹೀಗೆ ನಿರ್ಮಾಣಗೊಂಡ ಕೆರೆ, ಉದ್ಯಾನ ಮತ್ತು

ಮಂಟಪವನ್ನು ಗೋವಿಂದ ದೇವರಿಗೆ ಅರ್ಪಿಸಲಾಯಿತು. ಮೂಲತಃ ಈ ಸರೋವರವು ಧಾರ್ಮಿಕ ಉದ್ದೇಶಗಳಿಗೆಂದೇ ನಿರ್ಮಿಸಿದ ಪುಷ್ಕರಣೆಯಾಗಿತ್ತು.[೩೪] ಕ್ರಿ.ಶ.೧೫೦೦ರ ಒಂದು ಶಿಲಾ ಶಾಸನದಲ್ಲಿ ಪಟ್ಟಣಸ್ವಾಮಿ ಮಾದಿಸೆಟ್ಟಿಯ ಮಗ ನಾಗಿಸೆಟ್ಟಿಯು ಒಂದು ಚಿಕ್ಕ ಕಟ್ಟೆ ಅಥವಾ ಕೆರೆಯನ್ನು ನಿರ್ಮಿಸಿದ.[೩೫] ಕ್ರಿ.ಶ.೧೫೩೩ರ ಒಂದು ಚಿಕ್ಕ ದಾಖಲೆಯಂತೆ ವೀರನು ಎಂಬ ವರ್ತಕನು ಒಂದು ಚಿಕ್ಕ ಕುಂಟೆಯನ್ನು ನಿರ್ಮಿಸಿದನು.[೩೬] ಕ್ರಿ.ಶ.೧೬೦೦ರಲ್ಲಿ ದೇಮಣ್ಣ ಒಡೆಯ ಎಂಬ ಸ್ವಾಮಿಯ ಶಿಷ್ಯ, ಬಸೆಟ್ಟಿ ಎಂಬ ವರ್ತಕ ಒಂದು ಕೆರೆಯನ್ನು ನಿರ್ಮಿಸಿದನು.[೩೭]

ಕೆರೆ ಕಟ್ಟೆ ನಿರ್ಮಾಣಕ್ಕೆ ಸಂಬಂಧಪಟ್ಟಂತಹ ಶಾಸನಗಳನ್ನು ಗಮನಿಸಿದಾಗ ವರ್ತಕರು ಅಥವಾ ಸೆಟ್ಟಿ ಕುಲದವರು ಮಾಡಿದ ಸಾಮಾಜಿಕ ಸೇವೆಯ ಅರಿವಾಗುತ್ತದೆ. ಪ್ರಜೆಗಳಿಗೆ ಅನುಕೂಲವಾಗಲೆಂದು ರಾಜರಂತೆ ಇವರೂ ನೀರಿನ ಸೌಕರ್ಯಕ್ಕಾಗಿ ಮಾಡಿದ ಕಲ್ಯಾಣಕರ ಕಾರ್ಯಗಳು ಶ್ಲಾಘನೀಯವಾಗಿವೆ.

೩.೨.೧. ಬಾವಿ–ಕೊಳ–ಅರವಟ್ಟಿಗೆ ನಿರ್ಮಾಣ–ನಿರ್ವಹಣೆ

ಪ್ರಾಚೀನ ಕರ್ನಾಟಕದಲ್ಲಿ ಲೋಕೋಪಕಾರದ ದೃಷ್ಟಿಯಿಂದ ಬಾವಿ-ಕೊಳ-ಅರವಟ್ಟಿಗೆ ನಿರ್ಮಾಣ-ನಿರ್ವಹಣೆಯ ಬಗ್ಗೆ ರಾಜರು. ಶ್ರೀಮಂತವರ್ಗದವರು, ಅಧಿಕಾರಿಗಳು ಕಾಳಜಿ ವಹಿಸಿ ಕಲ್ಯಾಣಕರ ಕೈಂಕರ್ಯವನ್ನು ಮಾಡುತ್ತಿದ್ದರು. ಬಾವಿ-ಕೊಳ-ಅರವಟ್ಟಿಗೆ ಇವು ಸಾಮಾನ್ಯವಾಗಿ ದೇವಸ್ಥಾನ, ಮಠ, ಸತ್ರಗಳಿಗೆ ಸಮೀಪವಾಗಿರುತ್ತಿದ್ದವು. ಕೆಲವು ಸಲ ಪ್ರತ್ಯೇಕ ಅರವಟ್ಟಿಗೆಗಳು ದಾರಿಯ ಮರಗಳ ನೆರಳಲ್ಲಿ ಇರುತ್ತಿದ್ದವು. ರಾಜರು, ಶ್ರೀಮಂತರವರ್ಗದವರು, ಅಧಿಕಾರಿಗಳು ಮತ್ತು ವರ್ತಕರು ಜನರ ಕಲ್ಯಾಣಕ್ಕಾಗಿ, ದಾರಿ ಹೋಕರಿಗಾಗಿ ಅಲ್ಲಲ್ಲಿ ಬಾವಿ-ಕೊಳಗಳ ನಿರ್ಮಾಣ ಮಾಡುತ್ತಿದ್ದರಲ್ಲದೆ, ಅರವಟ್ಟಿಗೆಗಳನ್ನು ಇಟ್ಟು ಜನರಿಗೆ ನೀರಿನ ಅನುಕೂಲವಾಗುವಂತೆ ಮಾಡುತ್ತಿದ್ದರು. ಸೆಟ್ಟಿ ಕುಲದವರು ಇಂತಹ ಕಲ್ಯಾಣಕರ ಕೆಲಸ ಗಳನ್ನು ಮಾಡಲು ಹಿಂದೆ ಬೀಳುತ್ತಿರಲಿಲ್ಲ. ಬಾವಿ ಕೊಳಗಳ ನಿರ್ಮಾಣ-ನಿರ್ವಹಣೆಯು ಅವರ ಉದಾರತೆಗೆ, ಜನಪರ ಹಿತಕ್ಕೆ ಸಾಕ್ಷಿಯಾಗಿದೆ.

ಸೋಗಿಯ ಶಾಸನದಲ್ಲಿ ಕೃಷ್ಣದೇವರಾಯನ ಸೈನ್ಯಾಧಿಕಾರಿಯಾದ ಇಮ್ಮಡಿ ಬಸವಪ್ಪ ವೊಡೆಯರ ಆಜ್ಞೆಯಂತೆ ಕೊಟ್ಟೂರಿನ ಪ್ರಧಾನಿ ಅರುಹತಿಂಮಣನಾಯಕನು ಕೃಷ್ಣದೇವರಾಯನಿಗೆ

ಪುಣ್ಯ ಪ್ರಾಪ್ತಿಯಾಗಲೆಂದು ಸೋಗೆ ಗ್ರಾಮದಲ್ಲಿ ದನಕರುಗಳಿಗೆ ಅರವಟ್ಟಿಗೆಯನ್ನು ನಿರ್ಮಿಸಿ ಅದಕ್ಕೆ ನೀರಿನ ಸರಬರಾಜಿಗಾಗಿ ಒಂದು ಏತವನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಡಣಾಯಕರಪುರವನ್ನು ದಾನವಾಗಿ ನೀಡಿದ್ದಾನೆ.[೩೮] ಅನೇಕ ಅರಸರು ದಾರಿಯಲ್ಲಿ ಓಡಾಡುವ ಜನರ ಬಾಯಾರಿಕೆಯನ್ನು ಹಿಂಗಿಸಲು ಅಲ್ಲಲ್ಲಿ ನೀರಿನ ಅರವಟ್ಟಿಗೆಗಳನ್ನು ಸ್ಥಾಪಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಬಾವಿ, ಕೆರೆ, ಅರವಟಿಗೆಗಳ ನಿರ್ಮಾಣ ಶ್ರೇಷ್ಠವಾದ ಕಾರ್ಯವಾಗಿತ್ತು. ದಾನಗಳಲ್ಲೇ ಶ್ರೇಷ್ಠವಾದ ದಾನ ಉದಕದ ದಾನವೆಂದು ಶಾಸನಗಳು, ಕಾವ್ಯಗಳು ವರ್ಣಿಸಿವೆ. ಈ ಶಾಸನದ ವಿಶೇಷವೆಂದರೆ ಮೂಕ ಪ್ರಾಣಿಗಳಾದ ಪಶುಗಳಿಗೂ ನೀರಿನ ಆಸರೆಯನ್ನು ಒದಗಿಸಿರುವುದು ದಾನಿಯ ಹೃದಯವಂತಿಕೆಯನ್ನು ತೋರಿಸುತ್ತದೆ.

ಗದಗಿನ ವೀರನಾರಾಯಣ ಗುಡಿ ಪ್ರಾಕಾರದ ಶಾಸನದಲ್ಲಿ ಬಾಗಿಲನಾಗಿನಾಯ್ಕನ ಮಗ ನಯನಪ್ಪನಾಯಕರು ಪರ್ವತವೊಡೆಯನೆಂಬುವನಿಗೆ ಅರವಟ್ಟಿಗೆ ನಿರ್ವಹಣೆಗಾಗಿ ಭೂಮಿ ದಾನ ನೀಡಿರುವನು. ಗದುಗಿನ ಸೀಮೆಯಲ್ಲಿದ್ದ ಬಟ್ಟಕೆರೆ ಮತ್ತು ಬೆನಕನಕೊಪ್ಪದ ನಡುವೆಯಿದ್ದ ತ್ರಿಯಂಬಕದೇವರಿಗೆ ಹಾಗೂ ಗದುಗಿನ ತೇರುಬೀದಿ ಒಳಗಿನ ಕೋಟೆ ಮುಂದೆ ಒಂದು ಅರವಟ್ಟಿಗೆ ಹೀಗೆ ಒಟ್ಟು ಎರಡು ಅರವಟ್ಟಿಗೆಗಳನ್ನು ನಿರ್ಮಿಸಿ ಅವುಗಳಿಗೆ ನೀರನ್ನು ಹಾಕಿಕೊಂಡು ಸೇವೆ ಮಾಡಲು ಹತ್ತು ಕೊಳಗ ಹೊಲವನ್ನು ಪರ್ವತವೊಡೆಯನಿಗೆ ದಾನವಾಗಿ ನೀಡಲಾಗಿದೆ. ಬಟ್ಟಕೆರೆಯೆಂದರೆ ಈಗಿನ ಬೆಟಗೇರಿ ಮತ್ತು ಈಗಿನ ಬೆನಕನಕೊಪ್ಪ ಎಂಬ ಗ್ರಾಮಗಳಾಗಿವೆ.[೩೯]

ಅಹಮದ್‌ಖಾನ್ ಧರ್ಮಶಾಲೆಯ ಪಶ್ಚಿಮಕ್ಕಿರುವ ಶಾಸನದ ಪ್ರಕಾರ, ಶಾಸನವು ದೇವರಿಪಲ್ಲಿಯ ಮುಮ್ಮಡಿಸೆಟ್ಟಿ ಎಂಬುವವನಿಗೆ ಪುಣ್ಯವಾಗಲಿಯೆಂದು ಬಾವಿ ಮತ್ತು ತೋಟವನ್ನು ತಮ್ಮಡಿನಂಜೆ ದೇವರ ನಿರಾಸಿಮಟ(ಠ)ಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನವು ಈ ಕೆಳಗಿನಂತಿದೆ.

೧ ವಿಕಾರಿ ಸಂವತ್ಸರ ಆಶ್ವೀಜ ಬ ೧೦

೨ ಸೋಮವಾರನ ಶ್ರೀಮತು ದೇವರಿಪಲ್ಲಿ

೩ ಮುಮಡಿಸೆಟಿ ಪುಣ್ಯಮುಗಾನು ಬಾವಿ

೪ ನಿ ತೋಂಟನು ತಮಿಡಿ ನಂಜೆದೇವರ ನಿರಾ

೫ ಸಿಮಟ(ನಿ)ಕಿ ದಾರಪೋಸಿನ ಬುಮಿ ಬಾವಿ

೬ ಯಿ ಧರ್ಮಕಿ ತಪಿನವಾನಿಕಿ ನೋಟಿ

೭ ಕಿ ಗಾಡಿದಿ ಸಿಸಿನ ಧಂಕಲು ಪುಲ್ಲಾನಕ ಪದಂ

೮ ಅನ ॥(೩)[೪೦]

ವಿಜಯನಗರದ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಶಾಲಿವಾಹನ ಶಕ ೧೪೬೦. ವಿಳಂಬಿ ಸಂವತ್ಸರ ಚೈತ್ರ ಶು.೫, ಮಂಗಳವಾರ ಎಂದು ತೇದಿಯಿದೆ. ಅದು ಕ್ರಿ.ಶ.೧೫೩೮ ಮಾರ್ಚ್ ೫, ಮಂಗಳವಾರಕ್ಕೆ ಸರಿಹೊಂದುತ್ತದೆ. ಲೇಪಾಕ್ಷಿ ನಂದಿಲಕ್ಕಿ ಸೆಟ್ಟಿ ಮುದ್ದಮಾಂಬೆಯರ ಮಗ ಪೆನುಗೊಂಡೆಯ ವಿರಪಂಣಯ್ಯನ ತಮ್ಮ ವೀರಣನಾಯಕನು ಹರುಹೆ ಲಖ್ಖಿಣಾಪುರದ ಮಹಾಲಕ್ಷ್ಮೀ ದೇವರಿಗೆ ಪೂಜೆ ಮೊದಲಾದವುಗಳಿಗೆ, ದೊರೆಯು ಲೇಪಾಕ್ಷಿಯ ವೀರೇಶ್ವರ ಪಾಪವಿನಾಶದೇವ, ರಾಘವೇಶ್ವರ ದೇವರುಗಳಿಗೆ ದತ್ತಿಯಾಗಿ ಕೊಟ್ಟಿದ್ದ, ಅಚ್ಯುತರಾಯಪುರವೆಂಬ ಪ್ರತಿನಾಮವಿದ್ದ ಮೊದೆಯಕ್ಕೆ ಉತ್ತರ ಭಾಗದಲ್ಲಿ ತಲಪರಿಗೆಯನ್ನು ತೆಗೆಸಿ, ಹೊಸ ತುಂಗಭದ್ರೆಯೆಂಬ ಹೆಸರುಳ್ಳ ಕಾಲುವೆಯನ್ನು ಮಾಡಿಸುತ್ತಾನೆಂದೂ, ಆ ಕಾಲುವೆಯ ನೀರು ಹರಿದು ಬೆಳೆಯುವ ಗದ್ದೆಯನ್ನು ದತ್ತಿಯಾಗಿ ಕೊಡಿಸುತ್ತಾನೆಂದೂ ಇದರಲ್ಲಿ ದಾಖಲಿಸಿದೆ.

೧ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನಶಕವ

೨ ಶಾಖ ಶ್ದು ೭ ಸೋಮವಾರದಲು ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ದಕ್ಷಿ....

೩ ಶ್ರೀಕಾವೇರಿಕಪಿಲಾಸಂಗಮ ಪಂಚಕ್ಲೋಶ ಷಟ್ಕೂಲ ಮಧ್ಯ ಭೂಕೈಲಾಸ ಶ್ರೀ....

೪ ಸಾಂನಿಧ್ಯವಾದ ತಿರುಮಕೂಡಲ ಶ್ರೀ ಅಗಸ್ತ್ಯನಾಥದೇವರಿಗೆ ಶ್ರೀಮಂನ್ಮಹಾರಾಜಾಧಿರಾ

೫ ಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಕೃಷ್ಣರಾಯಮಹಾರಾಯರು ಪ್ರಿಥ್ವಿಸಾ

೬ ಜ್ಯಂಗೈಯುತ್ತಿರಲಾಗಿ ರಾಯರ ಮನೆಯ ಬೆವಹಾರಿಗಳು ಬೆಟಪ್ಪ(ಸೆ)ಟಿಯ(ರ)ಂಣಹೊ

೭ ೦ಗಾಣಿ ಸೆಟ್ಟಿಯರ ಮಕ್ಕಳು ಶರಣಪ್ಪಸೆಟ್ಟಿಯರು ಪಾರ್ವತಿದೇವಿಯರಿಗೆ ದೇವಾಲ್ಯವನು ಕಟಿಸಿ

೮ ಮಾಡಿಸಿ ಆ ಪುಣ್ಯ ಕಾಲದಲು ಶ್ರೀ ವೀರಕೃಷ್ಣರಾಯರ ಮಹಾಪ್ರಧಾನರಾವ ಸಾಳುವ ಗೋವಿ

೯ ಜೊಡೆಯರು ನಮಗೆ ಉಂಬಳಿಯಾಗಿ ಕೊಟ್ಟ... ಸೀಮೆಯ ಕೊಳಿ(ಗಾ)ಲದ ಸ್ಥಳದ ಹೊಂನಙಿ(ದ)

೧೦ ಆ ಪಾರ್ವ್ವತಿದೇವಿಯರ ಅಮೃತಪಡಿಗೆ..ಳಿಯ ತಾಕಿನ ಗದೆ ಖ ೧೧ ಗದೆಯನು ಸಹಿರಂಣ್ಯೋ

೧೧ ...ಧಾರಾಪೂರ್ವ್ವಕವಾಗಿ ಹಾ(ಹಾ)ಕಿಕೊಟ್ಟ ಬಾಗಿಯ ಗದ್ದೆ ಚತುಸೀಮೆಯ ಸ್ಥಳದ ವಿವರ ಹಾದಿಯಿಂ ಪಡು

೧೨ ...ದ ಕಡೆಯಿಂ ಬಡಗಲು ಹಿರಿಯಕೆಜೆಯಿಂ ಮೂಡಲು ಕಾಲುವೆಯಿಂ ತೆಂಕಲು ಅಂತು

೧೩ ಸ ಖ ೧೧ ಗುಳ ಗದ್ದೆ ಮೂಗೂರಸ್ಥಳದ ಹೊಸಪುರದ ಗ್ರಾಮದಲ್ಲಿ ಗ ೧೫

೧೪ ......ಗದೆಯ ಮಾಡಿ

೧೫ ಅಮ್ರುತಪಡಿ ಅವಸರ.. ಅ....

೧೬ .....ಮುಟ್ಟುವ ಕಟ್ಟಳೆ......

೧೭ ....ದಾನ ಪಾಲನಯೋ ಮಧ್ಯೇ ದಾನಶ್ರೀಯೋನೃಪಾಲನಂ ದಾನಾ.....

೧೮ ...ವಾಪ್ನೋತಿ ಪಾಲನಾದಚ್ಯುತಂ ಪದಂ ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ

೧೯ ...ಸ್ವದತ್ತಂ ನಿಷ್ಫಲಂ ಭವೇತ್॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುಂಧರಾಂ....

೨೦ ಹಸ್ರಾಣಿ ವ್ರಿಷ್ಟಾವಿಯಾಂ ಜಾಯತೇ ಕ್ರಿಮಿಃ॥

ಮೇಲಿನ ಈ ಶಾಸನವು ವಿಜಯನಗರದ ರಾಜ ಕೃಷ್ಣರಾಯನ ಕಾಲದ ಶಾಸನವಿದು. ಈ ರಾಜನ ಅಧಿಕಾರಾವಧಿಯಲ್ಲಿದ್ದ ಪ್ರಸಿದ್ಧ ವರ್ತಕರಾದ ಹೊಂಗಾಣಿ ಸೆಟ್ಟಿಯ ಮಕ್ಕಳಾದ ಶರಣಪ್ಪಸೆಟ್ಟಿ ಮತ್ತು ಬೆಟ್ಟಪ್ಪಸೆಟ್ಟಿಯರು, ಅಗಸ್ತ್ಯನಾಥ ದೇವಾಲಯದಲ್ಲಿ ಪಾರ್ವತೀ ದೇವಿಯ ಗುಡಿಯನ್ನು ಕಟ್ಟಿರುವರು. ಇವರು ಪಾರ್ವತಿದೇವಿಯ ಅಮೃತಪಡಿಗೆ, ಮಹಾಪ್ರಧಾನರಾದ ಸಾಲುವ ಗೋವಿಂದರಾಜ ಒಡೆಯರಿಂದ ಉಂಬಳಿಯಾಗಿ ಪಡೆದ

ಗದ್ದೆ, ಹಿರಿಯ ಕೆರೆ ಕಾಲುವೆಯನ್ನು ದಾನವಾಗಿ ನೀಡಿರುವರು. ಈ ಶಾಸನದಿಂದ ಸೆಟ್ಟಿ ಕುಲದವರ ಉದಾರತೆಯನ್ನು ಅರಿಯಬಹುದು. ತಮಗೆ ಉಂಬಳಿಯಾಗಿ ದೊರೆತುದನ್ನು ಅನುಗಾಲ ದೇವರ ಸೇವೆಗೆ ಸೇರುವಂತೆ ಮಾಡಿದ್ದು ಸೆಟ್ಟಿ ಕುಲದವರ ಔದಾರ್ಯತೆಗೆ ಸಾಕ್ಷಿಯಾಗಿದೆ.[೪೧]

ಉಭಯ ನಾನಾದೇಶಿಯ(ವ್ಯಾಪಾರ ಸಂಘದ) ಪ್ರಮುಖನಾದ ಮಹಾದೇವಣ್ಣನೆಂಬಾತನು ಅರಸನ ಅನುಮತಿಯನ್ನು ಪಡೆದು ಗ್ರಾಮವೊಂದನ್ನು ಲಕ್ಷ್ಮೀಪುರವಾಗಿ ಪರಿವರ್ತಿಸಿ ಕಾಲುವೆಯನ್ನು ತೋಡಿಸಿದ. ಮಾವನೂರು ಮತ್ತು ಅಲ್ಲಾಳ ಪಟ್ಟಣ ಮುಂತಾದ ಗ್ರಾಮಗಳಿಗೆ ಸೇರಿದ ಜಮೀನಿನಲ್ಲಿ ಈ ಕಾಲುವೆ ಸಾಗುವುದರಿಂದ ಕಾಲುವೆಯ ಎರಡೂ ಪಾರ್ಶ್ವಗಳಲ್ಲಿ ಕಲ್ಲು ಕೂರಿಸಿ ಕಟ್ಟಬೇಕೆಂದು ಆಜ್ಞೆ ನೀಡಿರಬೇಕೆಂದು ಕಾಣುತ್ತದೆ. ಪ್ರಧಾನ ಸೋವಪ್ಪ ಗ್ರಾಮಾಧಿಕಾರಿಗಳ ಜೊತೆಗೂಡಿ ಕಾಲುವೆಯನ್ನು ಪರಿಶೀಲಿಸಿದನು ಹಾಗೂ ತನಗೆ ಸೇರಿದ ಸ್ವಲ್ಪ ಭೂಭಾಗವನ್ನು ಬಿಟ್ಟುಕೊಟ್ಟು ಬದಲಾಗಿ ಕಾಲುವೆಯ ಕೆಳಗಣ ಕೆಲ ಪ್ರದೇಶವನ್ನು ಪಡೆದ. ಇದರಲ್ಲಿ ಹೇಳಿರುವ ವ್ಯವಹಾರಗಳು ಸ್ವಲ್ಪ ಸಂಕೀರ್ಣವಾಗಿದ್ದು, ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಹೊಸ ಗ್ರಾಮವೊಂದು ರೂಪುಗೊಂಡು, ಅಲ್ಲಿನ ಭೂಪ್ರದೇಶದ ನೀರಿನ ಅನುಕೂಲಕ್ಕಾಗಿ ಕಾಲುವೆಯೊಂದು ನಿರ್ಮಿತವಾಯಿತೆಂದು ಭಾವಿಸಬಹುದೇನೋ.[೪೨] ವಿಜಯನಗರ ಅರಸರ ಶಾಸನಗಳಲ್ಲಿ ನೀರಾವರಿಗೆ ಸಂಬಂಧಿಸಿದ ಅನೇಕ ಉಲ್ಲೇಖಗಳು ದೊರೆಯುತ್ತವೆ.

ಕನಕಗಿರಿ ಗೋಪುರದ ತಳಭಾಗದ ಶಾಸನದಲ್ಲಿ ಈ ಬಗ್ಗೆ ಸ್ಪಷ್ಟವಾದ ಉಲ್ಲೇಖವಿದೆ. ಒಂದನೆಯ ಹರಿಹರ ಮತ್ತು ಅವನ ತಮ್ಮ ಬುಕ್ಕರಾಯನು ಸೇರಿ ತುಂಗಭದ್ರಾ ನದಿಗೆ ಅಣಕಟ್ಟುಗಳನ್ನು ಕಟ್ಟಿಸಿ, ಅದರಿಂದ ನೀರನ್ನು ಪಡೆದು ವ್ಯವಸಾಯಕ್ಕೆ ಬಳಸಿದನೆಂಬ ವಿಷಯವಿದೆ. ಅಂದರೆ ತುಂಗಭದ್ರೆಯಿಂದ ನೀರನ್ನು ತಂದು ವ್ಯವಸಾಯಕ್ಕೆ ಬಳಸುವ ಕಾರ್ಯ ಇವರ ಕಾಲಕ್ಕೇ ನಡೆದಿತ್ತು. ತುರ್ತಾ ಕಾಲುವೆಯನ್ನು ಸೀಳುವಾಗ ಹರವಿಗೆ ಅಡ್ಡ ಬಂದ ಅನೇಕ ಕಲ್ಲುಗಳನ್ನು ಸೀಳಿ ಸಮಮಟ್ಟ ಕಾಯ್ದುಕೊಂಡಿರುವುದು ಇವರ ಕಾಲದ ಜಲತಂತ್ರಕ್ಕೆ ಸಾಕ್ಷಿ. ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ ಬರುವ ಪದ್ಯ 'ಕೆಜೆಯಂಕಟ್ಟಿಸು, ಬಾವಿಯಂಸವೆಸು...' ಬರುವ ಪದ್ಯ ನೀರಾವರಿಯ ಮಟ್ಟಿಗೆ ಅತಿಶಯೋಕ್ತಿಯಲ್ಲ. ವಿಜಯನಗರದ ಶಾಸನಗಳಲ್ಲಿ ಅನೇಕ ಕೆರೆ ಕಟ್ಟೆಗಳ ಉಲ್ಲೇಖಗಳು ಬರುತ್ತವೆ. ಇವೆಲ್ಲಾ

ವಿಜಯನಗರದ ಅರಸರು ನೀರಾವರಿಗೆ ನೀಡಿದ್ದ ಆದ್ಯತೆಯನ್ನು ಸೂಚಿಸುತ್ತದೆ. ನೀರಾವರಿಯಲ್ಲದೆ ನೀರಿನ ಅರವಟ್ಟಿಗೆಗಳ ಉಲ್ಲೇಖವೂ ಬಂದಿದೆ. 'ಚಲಂದ್ರ' ಎಂಬುದು ದಾರಿ ಹೋಕರಿಗಾಗಿ ಕಲ್ಲಿನಲ್ಲಿ ನೀರಿನ ಅರವಟ್ಟಿಗೆ, ಹಂಪೆಯಲ್ಲಿ ಇಂತಹವು ಅಲ್ಲಲ್ಲಿ ಇದ್ದವು. ಈ ವಿಷಯವನ್ನು ಅವಲೋಕಿಸಿದಾಗ ವಿಜಯನಗರದ ಅರಸರು ನೀರಾವರಿಗೆ ನೀಡಿದ ಮಹತ್ವ ತಿಳಿಯದೇ ಇರದು. ದೇವರಾಯ ಮಹಾರಾಯನ ಸೇವಕನಾದ ಕಟಿಗೆಯ ಆಹಮುದಖಾನನು ರಾಜನಿಗೆ ಧರ್ಮವಾಗಬೇಕೆಂದು ಧರ್ಮಸಾಲೆ ಮತ್ತು ಬಾವಿಯನ್ನು ಕಟ್ಟಿಸಿದ ಉಲ್ಲೇಖವಿದೆ.

ಶಾಸನವು ದೇವರಿಪಲ್ಲಿಯ ಮುಮ್ಮಡಿಸೆಟ್ಟಿ ಎಂಬುವವನಿಗೆ ಪುಣ್ಯವಾಗಲಿಯೆಂದು ಬಾವಿ ಮತ್ತು ತೋಟವನ್ನು ತಮ್ಮಡಿನಂಜೆದೇವರ ನಿರಾಸಿಮಟ(ಠ)ಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಪಾಂಡವಪುರ ೧೯ ಮತ್ತು ೧೬೩ ವಿರೂಪಾಕ್ಷನ ಎರಡು ಶಾಸನಗಳು. ಮೊದಲನೆಯದು ಸೀತಾಪುರದ ಶಾಸನ ಇದರ ಕಾಲ ೧೪೬೭ರ ಆಗಸ್ಟ್ ೨೨. ಇದರಲ್ಲಿ ಇದಕ್ಕೂ ಮೊದಲು ಕ್ರಿ.ಶ.೧೪೫೫ ಆಗಸ್ಟ್ ೧೪ರಂದು ಮಾಡಲಾದ ದಾನದ ಪ್ರಸ್ತಾಪವಿದೆ. ಶಾಸನದಲ್ಲಿ ಸ್ವಾರಸ್ಯಕರವಾದ ವ್ಯವಹಾರವೊಂದನ್ನು ಹೇಳಲಾಗಿದೆ. ನಾಗಮಂಗಲದ ಸಿಂಗಣ್ಣವೊಡೆಯರ ಮಗ ದೇವರಾಜನು ಕಾವೇರಿ ನದಿಗೆ ಹೊಸದಾಗಿ ಒಂದು ಕಾಲುವೆಯನ್ನು ತೋಡಿಸಿದಾಗ ಹರಹು ಗ್ರಾಮದ ಮಹಾಜನರು ತಮ್ಮ ಗ್ರಾಮದವರೆಗೂ ಆ ಕಾಲುವೆಯನ್ನು ತೋಡಿಸಿಕೊಡಬೇಕೆಂದು ಬಯಸಿದರು. ಆತ ಇದಕ್ಕೆ ಒಪ್ಪಿ ಕಾಲುವೆಯನ್ನು ತನ್ನ ವೆಚ್ಚದಲ್ಲಿಯೇ ತೋಡಿಸಿಕೊಟ್ಟನೆಂಬುದು ಸ್ಪಷ್ಟ.

ಕೃಷ್ಣದೇವರಾಯನ ಶಾಸನಗಳಲ್ಲಿ ಕೆರೆ ಅಥವಾ ಬಾವಿಯ ವಿಷಯವನ್ನೇ ನೇರವಾಗಿ ಉಲ್ಲೇಖಿಸುವ ಪ್ರಥಮ ಶಾಸನ ಕ್ರಿ.ಶ.೧೫೦೯ರದ್ದಾಗಿದೆ. ಕೃಷ್ಣದೇವರಾಯನ ಸೇನಾಧಿಪತಿಯಾದ ವೀರಣನಾಯ್ಕರ ಪ್ರಧಾನನಾದ ನರಸರಾಜನೆಂಬುವನು ಈಗಿನ ಗೂಳ್ಯ ಎಂಬ ಗ್ರಾಮದಲ್ಲಿ ವಿರೂಪಾಕ್ಷದೇವರ ಗುಡಿಯ ಗರ್ಭಗೃಹ, ಸುಖನಾಸಿ, ರಂಗಮಂಟಪವನ್ನು ಕಟ್ಟಿಸಿ, ಬಾವಿಯನ್ನು ತೋಡಿಸಿ ಅದರ ಬಳಿ ಮಾವಿನ ತೋಪನ್ನು ನಿರ್ಮಿಸಿ ದಾನವನ್ನು ಬಿಟ್ಟಿರುವನು. ದೇವರಸೇವೆಗೂ ಮತ್ತು ಮಾವಿನತೋಪಿನ ಆರೈಕೆಗೂ ಹೀಗೆ ಎರಡೂ ಕಾರ್ಯಗಳಿಗೂ ಬಾವಿಯನ್ನು ತೋಡಿಸಿದ್ದಾನೆ.[೪೩] ಈ ರೀತಿಯಾಗಿ ರಾಜರು ಬಾವಿಯನ್ನು ತೋಡಿ ಜನರಿಗೆ ನೀರಿನ ಸೌಲಭ್ಯ ಒದಗಿಸಿದಂತೆ ಕೊಳ, ಅರವಟ್ಟಿಗೆಗಳ ಕಡೆಗೂ ಗಮನ ಹರಿಸಿದುದು ಅವರ ಔದಾರ್ಯತೆಯ ಪ್ರತೀಕ. ಅರವಟಿಗೆಯನ್ನು ಈ ರೀತಿಯಾಗಿ

ಅರ್ಥೈಸಬಹುದು. 'ಅರೆ' ಎಂದರೆ ಧರ್ಮ 'ವಾಟಿಕಾ' ಎಂದರೆ 'ಸ್ಥಳ' ಅಂದರೆ ಧರ್ಮದ ಸ್ಥಳವೆಂದರ್ಥ. 'ಅರಚ್ಚಾಲೈ' ಎಂಬುದಾಗಿ ತಮಿಳು ಪದವಿದೆ. ಧರ್ಮದ ಸ್ಥಳದಲ್ಲಿ ಧರ್ಮಕಾರ್ಯವಾದ ಬಾಯಾರಿಕೆ ಇಂಗಿಸಿಕೊಳ್ಳಲು ಅರವಟ್ಟಿಗೆ ಅವಶ್ಯ. ಪ್ರಯಾಣಿಕರಿಗೆ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ದಾರಿಗಳ ಪಕ್ಕದಲ್ಲಿ ಅರವಟ್ಟಿಗೆಗಳು ಇರುತ್ತಿದ್ದವು. ಇಂತಹ ಅರವಟ್ಟಿಗೆಗಳು ಕಾಣಸಿಗುತ್ತವೆ. ಅರವಾಟಿಕಾ, ಅರವಂಟಿಕೆಯಾಗಿದೆ.

ಬಹುತೇಕ ಪ್ರಾಚೀನ ಕಾವ್ಯಗಳು ಹಾದಿಬದಿಯ ಅರವಂಟಿಕೆ ಮತ್ತು ಅಲ್ಲಿ ನೀರೆರೆಯುವ ಯುವತಿಯರನ್ನು ವರ್ಣಿಸಿವೆ. ರಾಣಿ ಸ್ನಾನಗೃಹದಿಂದ ೧/೨ ಕಿ.ಮೀ ದೂರದಲ್ಲಿ ಹಂಪಿಗೆ ಹೋಗುವ ರಸ್ತೆಯ ಬಲಪಕ್ಕದಲ್ಲಿ ಒಂದು ಅರವಟ್ಟಿಗೆ ಇದೆ. ಈ ಅರವಟ್ಟಿಗೆಯು ರಾಜರ ಔದಾರ್ಯತೆ ಸಂಕೇತವೆಂಬಂತೆ ಇದೆ. ಕ್ರಿ.ಶ.೧೫೩೯ರ ಶಾಸನ ನಾರಸಿಮಠದ ನಂಜದೇವನೆಂಬ ಗುರುವಿನ ಹೆಸರಿನಲ್ಲಿ ದೇವರಪಲ್ಲಿ ಮುಮ್ಮಡಿಸೆಟ್ಟಿ ಎಂಬ ವರ್ತಕನು ಬಾವಿಯನ್ನು ದಾನ ಮಾಡಿದ ಉಲ್ಲೇಖವಿದೆ.[೪೪] ವಿರುಪಾಕ್ಷ ತೇರುಬೀದಿಯಿಂದ ಮಾತಂಗ ಪರ್ವತಕ್ಕೆ ಹೋಗುವ ದಾರಿ (ಮೆಟ್ಟಿಲುಗಳ ಬಳಿ)ಯಲ್ಲಿ ಪ್ರಾಕೃತಿಕ ಗುಹೆಯಲ್ಲಿ ನೀರಿನ ಬಾವಿಯೊಂದಿದ್ದು ಇಲ್ಲಿರುವ ಶಾಸನ ಉಲ್ಲೇಖಿಸುವಂತೆ "ಅಕ್ಕಮಹಾದೇವಿಯರ ಬಾವಿ, ಕೆಳಬಾವಿ, ಗಂಗಾಧರ ದೇವರ ಪ್ರತಿಷ್ಠೆ' ಎಂದಿದೆ. ಈ ಬಾವಿಯಲ್ಲಿ ಎಲ್ಲಾ ಕಾಲದಲ್ಲಿಯೂ ನೀರಿನ ಸಂಗ್ರಹವಿದ್ದು, ತಂಪಾಗಿರುವುದು.[೪೫] ಹೀಗೆ ಬಾವಿಗಳು ಅರವಟಿಗೆಗಳು ಜನರಿಗೆ ನೀರನ್ನೊದಗಿಸುವ ತಾಣಗಳಾಗಿದ್ದವು.

ಪ್ರಾಚೀನ ಕಾಲದಲ್ಲಿ ತೀವ್ರಗತಿಯ ಸಂಚಾರ ಸಾಧನಗಳು ಇಲ್ಲದೆ ಇದ್ದಾಗ ಪ್ರಯಾಣಿಕರು ಕಾಲ್ನಡಿಗೆಯಿಂದಲೇ ಪ್ರಯಾಣಿಸುವುದು ಅನಿವಾರ್ಯವಾಗಿತ್ತು. ಇದರ ಜೊತೆ ಜೊತೆಯಾಗಿ ಎತ್ತಿನ ಬಂಡಿಗಳು ಕ್ರಮೇಣ ಅಸ್ತಿತ್ವಕ್ಕೆ ಬಂದವು. ಪ್ರಯಾಣಿಕರು ಪ್ರಯಾಣಿಸುವಾಗ ಬಾಯಾರಿಕೆ ನೀಗಿಸಲು ಅರಸ ಇಲ್ಲವೆ ಅಧಿಕಾರಿ ವರ್ಗದವರು ಅರವಟ್ಟಿಗೆಯನ್ನು ನಿರ್ಮಿಸುತ್ತಿದ್ದರು. ಕ್ರಿ.ಶ.೧೫೧೯ರ ವಿಜಯನಗರ ಅರಸ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಅರವಟ್ಟಿಗೆ ಮಾನ್ಯದ ಹೊಲದ ಧರ್ಮಶಾಸನದಲ್ಲಿ[೪೬] ಗದುಗಿನ ವೀರನಾರಾಯಣ ತೇರುಬೀದಿಯ ಒಳಗಣ ಕೋಟೆಯ ಮುಂದೆ ಒಂದು ಅರವಟ್ಟಿಗೆ ಬೆಟಗೇರಿ ಮತ್ತು ಬೆನಕೊಪ್ಪ ಗ್ರಾಮಗಳು ನಡುವಿನ ಉಭಯ ಮಾರ್ಗದ ದಾರಿಯಲ್ಲಿ ಒಂದು ಅರವಟ್ಟಿಗೆ ಇದೆ. ಕೆಲವು ಅರವಟ್ಟಿಗೆಗಳು ದೇವಾಲಯದ ಮಠಗಳಿಗೆ

ಹೊಂದಿಕೊಂಡಿರದಿದ್ದರೂ, ಇವು ರಸ್ತೆಯ ಬದಿಯಲ್ಲಿದ್ದು, ಪ್ರಯಾಣಿಕರ ತೃಷೆ ಹಿಂಗಿಸುತ್ತಿದ್ದವು. ಇವುಗಳನ್ನು ಧರ್ಮಸ್ಥಾನಗಳೆಂದೂ ಇವುಗಳನ್ನು ನಡೆಸುವುದು ಸತ್ಕಾರ್ಯಗಳಲ್ಲಿ ಒಂದು ಎಂದು ತಿಳಿಯಲಾಗಿತ್ತು.

೩.೨. ಆಡಳಿತ

೩.೨.೧. ಪಟ್ಟಣಸ್ವಾಮಿಗಳು

ಕತ್ತಿ, ಕುದುರಿ, ಅಕ್ಕಿ, ಗೋದಿ, ರೊಟ್ಟಿ, ಹುಗ್ಗಿ, ಮೆಣಸಿನಕಾಯಿ ಇವು ನಮ್ಮ ಅಡ್ಡ ಹೆಸರಿನ ಕೆಲವು ಮಾದರಿಗಳು ಪಾಟೀಲ-ಹಿರೇಮಠ-ಉಪಾಧ್ಯೆ-ಜಮಾದಾರ - ಪೋಲಿಸ್ ಗೌಡರ ಎಂಬ ವೃತ್ತಿಗಳೂ, ಜತ್ತಿ, ಕಲಬುರ್ಗಿ, ಕಡಿದಾಳ ಇತ್ಯಾದಿ ಗ್ರಾಮನಾಮಗಳೂ ನಮ್ಮ ಅಡ್ಡ ಹೆಸರುಗಳಾಗಿವೆ. ಕಲ್ಯಾಣದಲ್ಲಿ ಗಡಿಯಾರ ಮಠ ಅಡ್ಡ ಹೆಸರಿನ ಒಂದು ವೀರಶೈವ ಮಠವಿದೆ. ಹೀಗೆ ಮೇಲುನೋಟಕ್ಕೆ ವಿಚಿತ್ರವಾಗಿ, ಒಂದಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ಈ ಅಡ್ಡ ಹೆಸರುಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ಬಿಚ್ಚಿ ನೋಡಿದರೆ ಇವುಗಳ ಹಿಂದೆ ಒಂದು ಇತಿಹಾಸ, ಒಂದು ಅರ್ಥ ಮಿಂಚುತ್ತದೆ. ಹೀಗಾಗಿ ಇಂದು ವಿದ್ವಾಂಸರು ಇತಿಹಾಸ ರಚನೆಯ ಆಧಾರ ಸಾಮಗ್ರಿಯಾಗಿ ಅಡ್ಡ ಹೆಸರುಗಳನ್ನು ಬಳಸಿಕೊಳ್ಳುತ್ತಲಿದ್ದಾರೆ. ಹೀಗೆ ಬಳಸಿಕೊಂಡು, ನಮ್ಮ ಪ್ರಾಚೀನ ವ್ಯಾಪಾರ ವ್ಯವಸ್ಥೆಯ ಸ್ವರೂಪ, ಇತಿಹಾಸಗಳನ್ನು ಕಟ್ಟುವಲ್ಲಿ ನೆರವಾಗುವ ಒಂದು ಅಡ್ಡ ಹೆಸರು, ಪಟ್ಟಣಶೆಟ್ಟಿ ಅಥವಾ ಪಟ್ಟಣಸ್ವಾಮಿ.

ಶೆಟ್ಟಿ ಎಂಬ ಅಡ್ಡ ಹೆಸರು ಇಂದು ವೈಶ್ಯ, ಬಂಟ, ವೀರಶೈವರಲ್ಲಿ ಕಂಡುಬರುತ್ತಿದ್ದರೂ ಪಟ್ಟಣಶೆಟ್ಟಿ ಮಾತ್ರ ಕೇವಲ ವೀರಶೈವ ಕುಟುಂಬಗಳ ಅಡ್ಡ ಹೆಸರಾಗಿದೆ. ಈ ಹೆಸರಿನ ಮನೆತನಗಳು ಇಲ್ಲಿ ವಿಪುಲ ಸಂಖ್ಯೆಯಲ್ಲಿ ಸಿಗುವುದರಿಂದ, ಇದು ವೀರಶೈವ ಸಮಾಜದ ಬಹುಭಾಗವನ್ನು ವ್ಯಾಪಿಸಿರುವ, ಅಷ್ಟೇ ಪ್ರಾಚೀನವಾಗಿರುವ ಕುಟುಂಬ ವರ್ಗವೆಂದು ಹೇಳಬಹುದು.

ಪಟ್ಟಣಶೆಟ್ಟಿ ಹೆಸರನ್ನು ಅರ್ಥೈಸಲು ಈವರೆಗೆ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಇದು ಶಾಸನಗಳಲ್ಲಿ ಸಿಗುವ ಪಟ್ಟಣಸ್ವಾಮಿ ಎಂಬುದರ ಸಮಾನ ಪದವೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಪಟ್ಟಣಸ್ವಾಮಿಯ ಕಾರ್ಯ ಸ್ವರೂಪವನ್ನು ಕುರಿತು, ಈತನು ನಗರದ ವ್ಯಾಪಾರಿ ಸಮೂಹದ ಮುಖ್ಯಸ್ಥನೆಂದು ಕೆಲವರು ಹೇಳಿದರೆ, ಇನ್ನು ಕೆಲವರು ಈಗಿನ

ಮೇಯರ್ ನಂತೆ ಪಟ್ಟಣದ ಸಮಗ್ರ ಅಧಿಕಾರಿಯೆಂದೂ ಊಹಿಸಿದ್ದಾರೆ. ಆದರೆ ಇತ್ತೀಚಿನ ವಿದ್ವಾಂಸರು ನಡೆಸಿದ ಶೋಧನೆಗಳಿಂದಾಗಿ ಈತನ ಬಗ್ಗೆ ಕೆಲವು ನಿರ್ದಿಷ್ಟ ಮಾತುಗಳನ್ನು ಹೇಳಲು ಸಾಧ್ಯವಾಗಿದೆ.

ಪ್ರಾಚೀನ ಕಾಲದಲ್ಲಿ ಸಂತೆಯಿಂದಾಗಿ ಒಂದು ಊರು ಪಟ್ಟಣವೆನಿಸಿಕೊಳ್ಳುತ್ತಿದ್ದಿತು. ಗ್ರಾಮವೊಂದರಲ್ಲಿ ಸಂತೆಯನ್ನು ಸಂಘಟಿಸಲು ಒಬ್ಬ ವರ್ತಕ ಮುಂದಾಗುತ್ತಿದ್ದನು. ಇದಕ್ಕೆ ಸರ್ಕಾರದ ಒಪ್ಪಿಗೆ ಬೇಕಾಗುತ್ತಿತ್ತು. ಇದಲ್ಲದೆ ಪ್ರತಿ ಸಂತೆಗೆ ಇಲ್ಲವೆ ಪ್ರತಿವರ್ಷಕ್ಕೆ ಇಂತಿಷ್ಟು ಹಣವನ್ನು ಸರ್ಕಾರಕ್ಕೆ ಕೊಡುವ ಕರಾರಿನ ಮೇಲೆ ಒಂದು ಊರಲ್ಲಿ ಸಂತೆ ಸಂಘಟಿಸುವ ಹೊಣೆಯನ್ನು ಈತ ಹೊರುತ್ತಿದ್ದನು. ಅಂದರೆ ಸಂತೆಯನ್ನು ಕಾಂಟ್ರಾಕ್ಟ್ ಹಿಡಿಯುತ್ತಿದ್ದನು. ಸಂತೆಯಲ್ಲಿ ಗ್ರಾಹಕರಿಂದ, ವ್ಯಾಪಾರಿಗಳಿಂದ ಹಣ, ಧಾನ್ಯ ಇತ್ಯಾದಿ. ರೂಪದಲ್ಲಿ ಸಂಗ್ರಹಿಸುತ್ತಿದ್ದ ಸುಂಕದಲ್ಲಿ ಸರ್ಕಾರಕ್ಕೆ ಕೆಲವು ಪಾಲು ಹೋಗಿ, ಮಿಕ್ಕುದು ಇವನಿಗೆ ಉಳಿಯುತ್ತಿತ್ತು.

ಸಂತೆಯನ್ನು ದೊಡ್ಡದಾಗಿ ಸಂಘಟಿಸಿದಷ್ಟು ಈತನ ಉಳಿತಾಯ ದೊಡ್ಡದಾಗುತ್ತಿತ್ತು. ಹೀಗಾಗಿ ಇವನು ಸಂತೆಗೆ ಬರುವ ವ್ಯಾಪಾರಿಗಳಿಗೂ ಗ್ರಾಹಕರಿಗೂ ಮಳಿಗೆ ಕಟ್ಟಿಸುವುದು. ಮರಗಳನ್ನು ನೆಡುವುದು, ಬಾವಿ ತೋಡುವುದು ಮೊದಲಾದ ಸೌಕರ್ಯಗಳನ್ನು ಒದಗಿಸುತ್ತಿದ್ದನು. ಹೇಗೆ ಸಂತೆಯನ್ನು ಅಂದರೆ ಪಟ್ಟಣವನ್ನು ರೂಪಿಸುವ, ನಿಯಂತ್ರಿಸುವ, ಪ್ರಭಾವಶಾಲಿ ಶೆಟ್ಟಿಯಾಗಿರುವ ಇವನನ್ನು ಪಟ್ಟಣಶೆಟ್ಟಿ ಎಂದು ಕರೆಯುತ್ತಿದ್ದರು. ಆದುದರಿಂದ ಪಟ್ಟಣಶೆಟ್ಟಿಯೆಂದರೆ ಸಂತೆಯಶೆಟ್ಟಿ ಎಂದೇ ಅರ್ಥ. ಮಿಕ್ಕ ಶೆಟ್ಟಿಗಳಿಂದ ಈತನು ಸಂತೆಯ ಸಂಘಟನೆಯ ಕಾರ್ಯದಿಂದಾಗಿ ಭಿನ್ನವೆನಿಸುತ್ತಿದ್ದನು.

"ಶೆಟ್ಟಿ ಇಳಿದಲ್ಲಿ ಪಟ್ಟಣ" ಎಂಬುದೊಂದು ಗಾದೆ ಇಲ್ಲಿ ಪಟ್ಟಣವೆಂದರೆ ಈಗಿನ ಅರ್ಥದ ನಗರ(city) ಅಲ್ಲ. ಏಕೆಂದರೆ ಶೆಟ್ಟಿಗೂ ಒಂದು ನಗರ ರೂಪುಗೊಳ್ಳುವುದಕ್ಕೂ ಏನು ಸಂಬಂಧ? ಆದುದರಿಂದ "ಶೆಟ್ಟಿ ಇಳಿದಲ್ಲಿ ಪಟ್ಟಣ"ವೆಂದರೆ, "ಶೆಟ್ಟಿ ಇಳಿದಲ್ಲಿ ಸಂತೆ"ಯೆಂದೇ ಅರ್ಥ. ಸಂತೆಯ ಚತುರನಾಗಿರುವುದರಿಂದ, ಈತನು ಇಳಿದಲ್ಲಿ ಸಂತೆಯನ್ನೇ ರೂಪಿಸುವನೆಂಬ ಅರ್ಥ.

"ಶೆಟ್ಟಿ ಸಿಂಗಾರಾಗೋದರಾಗ ಪಟ್ಟಣ ಹಾಳಾಯಿತು" ಎಂಬುದು ಇನ್ನೊಂದು ಗಾದೆ. ಶೆಟ್ಟಿಯು ನಗರವನ್ನು ರಕ್ಷಿಸುವ ಅಂದರೆ ನಾಶವಾಗದಂತೆ ನೋಡಿಕೊಳ್ಳುವ ಅಧಿಕಾರಿಯಲ್ಲ.

ಹೀಗಿರುವಾಗ ಅವನು ಸಿಂಗಾರ ಆಗುವುದರೊಳಗಾಗಿ ನಗರ(city) ಹಾಳಾಯಿತೆಂಬ ಮಾತಿಗೆ ಏನು ಅರ್ಥ? ಎಂಬ ಸಂದೇಹ ಹುಟ್ಟುತ್ತದೆ. ಕಾರಣ ಇಲ್ಲಿಯೂ ಪಟ್ಟಣವೆಂದರೆ ಸಂತೆಯೆಂದೇ ಅರ್ಥ ಹೇಳಬೇಕು. ಸಂತೆಯನ್ನು ಸಂಘಟಿಸಬೇಕಾದ ಶೆಟ್ಟಿಯೇ ಸಿಂಗಾರ ಮಾಡಿಕೊಳ್ಳುತ್ತ ಮನೆಯಲ್ಲಿ ಉಳಿದರೆ, ಸಂತೆ ಮುಗಿದೇ ಹೋಗುತ್ತದೆ ಎಂದು ಇಲ್ಲಿಯ ಅಭಿಪ್ರಾಯ. ವರ್ತಕರಲ್ಲಿಯೇ ಕೆಲವರು ಪಟ್ಟಣಸ್ವಾಮಿಗಳೆಂದು ಕರೆಯಲ್ಪಡುತ್ತಿದ್ದರು. ಪಟ್ಟಣಗಳ ಆಡಳಿತವನ್ನು ಪಟ್ಟಣಸ್ವಾಮಿಗಳು ನೋಡಿಕೊಳ್ಳುತ್ತಿದ್ದರು. ಪಟ್ಟಣಸ್ವಾಮಿಗಳ ಕಾರ್ಯದಕ್ಷತೆಯಿಂದಾಗಿ ಪಟ್ಟಣಗಳ ಆರ್ಥಿಕ ಚಟುವಟಿಕೆಗಳು ದಿನದಿಂದ ದಿನಕ್ಕೆ ಬೆಳೆಯುತ್ತ ಬಂದವು. ಪಟ್ಟಣದ ಆಡಳಿತದಲ್ಲಿ ಪಟ್ಟಣಸ್ವಾಮಿಗಳು ಪ್ರಮುಖರಾಗಿ ಕಂಡುಬರುತ್ತಿದ್ದರು. ಅನೆಗೊಂದಿಯ ಶಾಸನದಲ್ಲಿ, ಪಟ್ಟಣಸ್ವಾಮಿಗಳ ಬಗ್ಗೆ ಬಂದಿರುವ ಉಲ್ಲೇಖ ಈ ರೀತಿಯದಾಗಿದೆ.

> ಅವಧಾರಿಸಿ ಸ್ವಾಮಿಗಳಿರಾ । ಚೆಲವಲಂಕೊಂಡಾ
> ಡುವ ಸ್ವಾಮಿಗಳವಧಾರಿಸಿ । ಬಲುಹು ಕೊಂಡಾಡುವ ಸ್ವಾಮಿಗಳಧಾ(ಧಿ)
> ರಿಸಿ ಸ್ವಾಮಿಂಬು ಸೆಟ್ಟಿಗಳ (ವ) ಧಾರಿಸಿ । ಪಸಂಬೆ ಸೆಟ್ಟಿ ಸ್ವಾಮಿಗಳ
> (ವಧಾ) ರಿಸಿ ಕೊಂಕಣ ಸಧಾರ ಸಂತಪ್ಪಾಸ್ಪ (ಸ್ವಾ)ಮಿಗಳ ವಧಾರಿಸಿ। ವೇಲು

ಪಟ್ಟಣಸ್ವಾಮಿಗಳವಧಾರಿಸಿ ಎನ್ನುವ ಉಲ್ಲೇಖವಿದೆ.[೪೭] ಇದರಿಂದ ಪಟ್ಟಣ ಪಟ್ಟಣಸ್ವಾಮಿ ಊರಿನ ವ್ಯಾಪಾರಸ್ಥನಾಗಿದ್ದನು. ಪಟ್ಟಣಗಳು ವ್ಯಾಪಾರ ಕೇಂದ್ರ್ರಗಳಾಗಿರುವುದರಿಂದ ಅಲ್ಲಿನ ಪ್ರತಿಯೊಂದು ಕಾರ್ಯದ ವರ್ತಕರ ಪ್ರಭಾವವನ್ನು ಅಲ್ಲಿನ ಶಾಸನಗಳಿಂದ ತಿಳಿಯಬಹುದು. ವಿವಿಧ ವೃತ್ತಿ ವ್ಯಾಪಾರಗಳನ್ನು ಕೈಗೊಂಡ ಪಟ್ಟಣಸ್ವಾಮಿಗಳು ತಮ್ಮದೇ ಆದ ಸಂಘಸಂಸ್ಥೆಗಳನ್ನು ಹೊಂದಿ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದಾಗ ಮತ್ತು ವಿವಿಧ ವರ್ಗದವರೊಂದಿಗೆ ದಾನ ಮತ್ತು ಪ್ರತಿಪಾಲನೆ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ನಾನಾ ದೇಶಿಗಳು ಸಾಸ್ಸಿರ್ವರು, ತಂಬುಲಿಗರು, ಸೆಟ್ಟಿಗಳು, ಸ್ವಾಮಿಗಳು ಐನೂರ್ವರು ಗೌಡಸ್ವಾಮಿಗಳು ವಡ್ಡವ್ಯವಹಾರಿಗಳು ಏಕಸ್ಥರಾಗಿ ದತ್ತಿ ಬಿಟ್ಟಿರುವುದು ಮತ್ತು ಅವರೆಲ್ಲ ಒಂದೆಡೆ ಸೇರಿ ನಿರ್ಧರಿಸಿದ ಸ್ಥಳ ದಿನಗಳಲ್ಲಿ ನೆರೆಯುತ್ತಿದ್ದ ವರ್ತಕರ ಪರಸ್ಪರ ಸಹಕಾರ ಸಹಬಾಳ್ವೆ ಎದ್ದು ಕಾಣುತ್ತದೆ. ಇವರಲ್ಲಿ ದೊಡ್ಡ ಪ್ರಮಾಣದ ವರ್ತಕರು

ವ್ಯಾಪಾರವನ್ನು ಕೈಗೊಂಡ ಸ್ಥಿತಿವಂತರು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಪಟ್ಟಣಗಳ ವರ್ತಕರಲ್ಲಿಯೇ ಮುಖ್ಯಸ್ಥನೊಬ್ಬನಿದ್ದು ಅವರನ್ನು ಪಟ್ಟಣಸ್ವಾಮಿ ಎಂದು ಕರೆಯಲಾಗುತ್ತಿತ್ತು. ಪಟ್ಟಣಸ್ವಾಮಿಗಳೂ ಸಹ ದೇವರಿಗೆ, ದೇವಾಲಯಕ್ಕೆ ದಾನ ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ಸದಾಶಿವರಾಯನು ವಿಜಯನಗರವನ್ನು ಆಳುತ್ತಿದ್ದಾಗ ಆನೆಗೊಂದಿಗೆ ಸಲ್ಲುವ ಕೆಳವಡಿನಾಡಿನ ರವುಡುಕುಂದೆಯ ಸೀಮೆಗೆ ಸೇರುವ ತುಂಗಭದ್ರಾ ತೀರದ ಮುಕ್ಕುಂದಕ್ಕೆ ವರದಾಜಂಮ ಪುರವೆಂಬ ಪ್ರತಿನಾಮವಿತ್ತೆಂದು ತಿಳಿಸುತ್ತದೆ. ಇದು ಅಚ್ಯುತದೇವರಾಯನ ರಾಣಿಯ ಹೆಸರಾಗಿದೆ. ಇದು ಆ ಕಾಲಕ್ಕೆ ಸರ್ವಮಾನ್ಯವುಳ್ಳ ಅಗ್ರಹಾರವಾಗಿತ್ತು. ಶಾಸನ ಮುಂದುವರೆದು ಈ ವರದಾಜಂಮಪುರ ಅಗ್ರಹಾರದ ಮಹಾಜನರು, ಗೌಡ, ಸೇನಬೋವ, ಗಣಾಚಾರಿ, ಸೆಟಿ, ಪಟ್ಟಣಸ್ವಾಮಿ ಮತ್ತು ಕೆಲವು ಬೋವುಗಳು (ಹೆಸರುಗಳಿವೆ) ಸೇರಿ ಶಾಸನ ಒರೆಸಿ ಕೊಟ್ಟಂತೆ ಹೇಳಿದೆ. ದಾನದ ವಿವರಗಳು ಸ್ಪಷ್ಟವಾಗಿಲ್ಲ.[೪೮]

'ಪಟ್ಟಣಸ್ವಾಮಿ' ಎನ್ನುವುದು ಒಂದು ಸ್ಥಾನ ಅಥವಾ ಹುದ್ದೆ. ಯಾವುದೇ ವಿನಿಮಯ ವರ್ತಕ ಪ್ರಕಾರದವನು ಈ ಪಟ್ಟಣಸ್ವಾಮಿ ಸ್ಥಾನವನ್ನು ಅಲಂಕರಿಸಬಹುದಾಗಿತ್ತು. ಆಯಾ ಪ್ರದೇಶದ ಸಾಮಂತರು ಸ್ವತಂತ್ರವಾಗಿಯೂ ಗೌಡ, ಪ್ರಭು, ವರ್ತಕರೊಂದಿಗೆ ಕೂಡಿಯೂ ಪಟ್ಟಣಸ್ವಾಮಿತನವನ್ನು ವರ್ತಕರಿಗೆ ನೀಡುವುದರೊಂದಿಗೆ ಕರವಿನಾಯಿತಿಯಿಂದ ಹೊಲ, ಮನೆ, ಎತ್ತು ಮತ್ತು ಇತರ ಸೌಕರ್ಯ ದಯಪಾಲಿಸುತ್ತಿದ್ದುದನ್ನು 'ಜುಂಜುವೋಬೆಯ ನಾಯ್ಕರ ಕುಮಾರ ಚಿತವೊಯ್ಯನಾಯ್ಕರು ಪಟ್ಟಣಸ್ವಾಮಿ ನಾಚಿಸೆಟ್ಟಿಯ ಮಗ ಬುಡಪಸೆಟ್ಟಿಗೆ ಪಟ್ಟಣಸ್ವಾಮಿ ತನವನ್ನು ಕೊಟ್ಟು ಆತನ ಮನೆಗೆ ತೊ...ತುಮದು ಉಸುರ ತಯಿವತು ೫೦ ಯತ್ತು ಮನೆ ಹತ್ತು ೧೦ ಕೊಳಗ ಗದ್ದೆ ೧೦ ಆತ್ತು ಕೊಳಯೊಲವನು ಮಾನ್ಯವನು ಕೊ.... ಎಂದು ಶಾಸನವೊಂದು ತಿಳಿಸುತ್ತದೆ.[೪೯] ಜುಂಜುವೋಬೆಯ ನಾಯಕನ ಮಗ ಚಿಕ್ಕತಿಮ್ಮಯ ನಾಯಕನು ಮೊರಸುನಾಡ ಪ್ರಭು ಚೊಕ್ಕದೇವ, ವಡ್ಡವ್ಯವಹಾರಿ, ಉಭಯ ನಾನಾದೇಶಿಯರೊಂದಿಗೆ ಸೇರಿ ಪಳೆಯಪ್ಪನಿಗೆ ಪಟ್ಟಣಸ್ವಾಮಿತನವನ್ನು ನೀಡಿರುವನು.[೫೦] ಪಟ್ಟಣಸ್ವಾಮಿತನ ಕೊಡುವುದೆಂದರೆ ಸಂತೆ ಮಾಡಿಸುವ, ಪಟ್ಟಣ ಕಟ್ಟಿಸುವ ಅಧಿಕಾರ ನೀಡುವುದೆಂದರ್ಥ. ಪಟ್ಟಣಸ್ವಾಮಿಗೆ ಕೊಟ್ಟ ತೆರಿಗೆಯಿಲ್ಲದ ಮನೆ, ಹೊಲ ಇತ್ಯಾದಿಗಳೇ ಅವನು ಮಾಡುವ ಕಾರ್ಯಕ್ಕೆ ನೀಡುವ ಸಂಭಾವನೆ ಆಗಿರಬೇಕು.

ಸಾಮಾನ್ಯವಾಗಿ ಒಂದು ಪಟ್ಟಣಕ್ಕೆ ಯಾವಾಗಲೂ ಒಬ್ಬರೇ ಪಟ್ಟಣಸ್ವಾಮಿ ಇರುತ್ತಿದ್ದ. ಆದರೆ ಪಟ್ಟಣ ದೊಡ್ಡದಾಗಿದ್ದರೆ ಕೆಲವೊಮ್ಮೆ ಒಬ್ಬನಿಗಿಂತ ಹೆಚ್ಚು ಜನ ಪಟ್ಟಣಸ್ವಾಮಿಗಳಿರುತ್ತಿದ್ದರು. "ಪಟ್ಟಣಸ್ವಾಮಿ ಹನುಮಂತಸೆಟ್ಟಿಯುಂ, ಬಂಮ್ಮಿಸೆಟ್ಟಿಯುಂ, ಮೇಚಿಸೆಟ್ಟಿಯುಂ ಪಟ್ಟಣಸ್ವಾಮಿತನಂಗೈಯ್ಸುತ್ತಂ ಸುಖದಿನಿರೆ,[೫೧] "ಶ್ರೀಮದ್ರಾಜಧಾನಿ ಬಲಿಪುರದ ಪಟ್ಟಣಸ್ವಾಮಿ ಮಾಳಿಸೆಟ್ಟಿಯರುಂ ಪಟ್ಟಣಸ್ವಾಮಿ ಮೇಚಿಸೆಟ್ಟಿಯರುಂ"[೫೨] ಎಂಬ ಶಾಸನೋಲ್ಲೇಖಗಳಿಂದ ಬಳ್ಳಿಗಾವೆಯಲ್ಲಿ ಕ್ರಿ.ಶ.೧೦೯೮ರಲ್ಲಿ ಮೂವರು, ಕ್ರಿ.ಶ.೧೧೮೧ರಲ್ಲಿ ಇಬ್ಬರು ಪಟ್ಟಣಸ್ವಾಮಿಗಳಾಗಿದ್ದರೆಂದು ಗೊತ್ತಾಗುವುದು. ಪಟ್ಟಣಸ್ವಾಮಿ ಸ್ಥಾನ ಅನುವಂಶಿಕವಾದುದು.[೫೩] ಸಂತೆ, ಪೇಟೆ, ಪಟ್ಟಣಗಳ ನಿರ್ಮಾಣ ಯೋಜನೆ ನಾಯಕ, ಗೌಡ, ಸಾಮಂತರದು, ಅವುಗಳ ಸಂಯೋಜನೆ, ಕಾರ್ಯಾಚರಣೆಗಳ ಕರ್ತವ್ಯ ಪಟ್ಟಣಸ್ವಾಮಿಯರ ದಾಗಿದ್ದಿತು. ಪಟ್ಟಣಸ್ವಾಮಿಯರು ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ರಾಜ-ಪ್ರಜೆ-ವರ್ತಕರ ಮಧ್ಯದ ಮಹತ್ವದ ಕೊಂಡಿಯಾಗಿರುತ್ತಿದ್ದರು.

ವಿಜಯನಗರ ಕಾಲದ ವರದರಾಜಮ್ಮನ ಪೇಟೆಯು ಆರ್ಥಿಕವಾಗಿ, ಹಂಪೆಯ ಇತರ ಬಜಾರುಗಳಷ್ಟೇ ಮಹತ್ವ ಹೊಂದಿದ್ದಿತು. ಇಲ್ಲಿಯೂ ಕೂಡ ವಿವಿಧೆಡೆಗಳಿಂದ ತಂದಂತಹ ವಸ್ತುಗಳ ವ್ಯಾಪಾರ ನಡೆಯುತ್ತಿದ್ದಿತು. ವರದರಾಜಮ್ಮನ ಪಟ್ಟಣವನ್ನು ನೋಡಿಕೊಳ್ಳಲು ಪಟ್ಟಣಸ್ವಾಮಿಯೊಬ್ಬನನ್ನು ನೇಮಿಸಲಾಗಿತ್ತು. ಇವನನ್ನು ಸೆಟ್ಟಿ ಪಟ್ಟಣಸ್ವಾಮಿಯೆಂದು ಕರೆಯಲಾಗಿದೆ.[೮] ಇವರು ಪಟ್ಟಣದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದುದಲ್ಲದೆ, ವರದರಾಜಮ್ಮನ ಪೇಟೆಯ ಮೇಲೆಯೂ ತಮ್ಮ ಹಿಡಿತವನ್ನು ಇರಿಸಿಕೊಂಡಿದ್ದರು. ಪೇಟೆಗೆ ಬರುತ್ತಿದ್ದ ವ್ಯಾಪಾರ ವಸ್ತುಗಳ ಮೇಲಿನ ತೆರಿಗೆಯನ್ನು ವಸೂಲಿ ಮಾಡುವ ಕಾರ್ಯವೂ ಇವರದೇ ಆಗಿದ್ದಿತು. ಇದರಿಂದ ಸೆಟ್ಟಿ-ವ್ಯಾಪಾರಿಗಳು ಇಲ್ಲಿ ಹೆಚ್ಚು ವಾಸವಾಗಿದ್ದುದೂ ಗೊತ್ತಾಗುತ್ತದೆ.

ಹಂಪೆಯ ಕಡಲೆಕಾಳು ಗಣಪನ ದೇವಾಲಯದ ಪಶ್ಚಿಮಕ್ಕೆ ಮತ್ತು ಹಂಪಿ-ಕಡ್ಡಿರಾಂಪುರದ ರಸ್ತೆ ಉತ್ತರಕ್ಕಿರುವ ಗುಂಡಿನ ಮೇಲಿರುವ ಶಾಸನದಲ್ಲಿ ಸ್ಪಷ್ಟವಾಗಿ ಕಾಲದ ಉಲ್ಲೇಖವಿಲ್ಲ. ಸುಮಾರು ೧೫-೧೬ನೆಯ ಶತಮಾನದ್ದಿರಬಹುದು. ಪಟ್ಟಣಸ್ವಾಮಿ ಚಿನಿಸೆಟ್ಟಿಯು ಚೆನ್ನವಡೆಯ, ಬಸವಣ್ಣವೊಡೆಯ, ಪರುವತದೇವರು ಕಂಚಿಗೆ ದಾನ ನೀಡಿದಂತೆ ತಿಳಿಸುತ್ತದೆ. ಇದರಲ್ಲಿ ಕಾಲದ ಉಲ್ಲೇಖವಿಲ್ಲ.[೫೫] ಅಕ್ಕ ತಂಗಿಯರ ಗುಂಡಿನ ಪಶ್ಚಿಮಕ್ಕೆ ಶಂಕರದೇವರ

ಬಾಗಿಲಲ್ಲಿ ಹಾಳು ದೇವಾಲಯದ ಕಂಬವೊಂದರಲ್ಲಿ ದೊರೆತ ಶಾಸನವು ಪಟ್ಟಣಸ್ವಾಮಿಗಳು ದಾನವನ್ನು ನೀಡಿದುದನ್ನು ತಿಳಿಸುತ್ತದೆ. ಪಟ್ಟಣಸ್ವಾಮಿಗಳು ಮಲ್ಲಿಕಾರ್ಜುನ ದೇವರಿಗೆ ದೀಪವನ್ನು ಉರಿಸುವುದಕ್ಕಾಗಿ ಒಂದು ಅಂಗಡಿ ಮನೆಯನ್ನು ದಾನ ಮಾಡಿದುದನ್ನು ಉಲ್ಲೇಖಿಸಿದೆ.[೫೬] ವಿಜಯನಗರದ ವೀರ ಬುಕ್ಕಣ್ಣ ಒಡೆಯರ ಮಗ ಕಂಪಣ್ಣ ಒಡೆಯರು ರಾಜ್ಯಭಾರ ಮಾಡುತ್ತಿರುವಾಗ, ಪಟ್ಟಣಸ್ವಾಮಿಗಳು, ಸೆಟ್ಟಿಗಳು, ನಾನಾದೇಸಿಗಳು ಸೇರಿ ಮಲ್ಲಿನಾಥದೇವರ ದೇವಾಲಯಕ್ಕೆ ಸಲ್ಲಿಸಬೇಕೆಂಬ ಉಲ್ಲೇಖ ಒಳಗೊಂಡಿದೆ. ಈ ಶಾಸನದ ಕಾಲ ಕ್ರಿ.ಶ.೧೩೬೬.[೫೭]

ಕನಕದಾಸರ ಮೋಹನತರಂಗಿಣಿಯಲ್ಲಿ ಹೇಳಿರುವ ವ್ಯಾಪಾರ ಮತ್ತು ವರ್ತಕರ ವಿಚಾರದಲ್ಲಿ ಪಟ್ಟಣಸ್ವಾಮಿಗಳ ಉಲ್ಲೇಖ ನೋಡಿದರೆ, ಪಟ್ಟಣಸ್ವಾಮಿಗಳ ಮಹತ್ವ ಯಾವ ಮಟ್ಟದಲ್ಲಿತ್ತೆನ್ನುವ ಅರಿವಾಗದೇ ಇರದು. ದೇಶ ವಿದೇಶಗಳೊಂದಿಗೆ ಹಡಗುಗಳಲ್ಲಿ ವ್ಯಾಪಾರ ನಡೆಸುತ್ತಿದ್ದ ಆ ನಗರದ ವರ್ತಕರ ಸಂಪತ್ತು ಕುಬೇರನಿಗೂ ಸಹ ಕೊಡುವಷ್ಟಿತ್ತೆಂದು ಕನಕದಾಸರು ಹೇಳುತ್ತಾರೆ. ಅಂಗಡಿ ಬೀದಿಗಳಲ್ಲಿ ಇಂಥಹ ವರ್ತಕರು ಧನ ಕನಕರಾಶಿಯ ನಡುವೆ ಕುಳಿತಿರುತ್ತಿದ್ದರಂತೆ. ನಗರದ ಬೇರೆ ಬೇರೆ ಬಡಾವಣೆಗಳ ಆಡಳಿತವು ಸೆಟ್ಟಿ, ಪಟ್ಟಣಸ್ವಾಮಿಗಳೆಂಬ ನಗರಾಧ್ಯಕ್ಷರುಗಳ ಅಧೀನದಲ್ಲಿತ್ತು.[೫೮] ಇವರಿಗೆ ತಳವಾರರೆಂಬ ರಕ್ಷಣಾದಳದ ನೆರವೂ ಇತ್ತು.[೫೯]

ಕ್ರಿ.ಶ.೧೫೧೩ ಕೃಷ್ಣದೇವರಾಯನ ಶಾಸನವೊಂದು ಮುದಲಾಪುರವನ್ನು(ಇಂದಿನ ಹೊಸಪೇಟೆಗೆ ಹೊಂದಿಕೊಂಡಿರುವ ಮುದ್ಲಾಪುರ) ತಿರುಮಲದೇವಿಯರ ಪಟ್ಟಣದ ಮಾಗಣೆಗೆ ಸೇರಿಸಿ ಹಂಪೆಯ ಕೃಷ್ಣಸ್ವಾಮಿ ದೇವರಿಗೆ ಸಮರ್ಪಿಸಿದನೆಂದು ತಿಳಿಯುತ್ತದೆ.[೬೦] ಮುದಲಾಪುರವು ಮೊದಲಿಗೆ ಹೊಸೂರಿನ ಮಾಗಣಿಗೆ ಸೇರಿತ್ತು(ಮಾಗಣೆ ಎಂದರೆ ವಿಜಯನಗರ ಕಾಲದಲ್ಲಿನ ಆಡಳಿತದ ಸಣ್ಣ ಘಟಕವನ್ನು ಸೂಚಿಸುವ ಪದವಾಗಿದೆ). ಮುದಲಾಪುರದ ಅಯ್ಯಾವಳಿ ಮುಖ್ಯವಾದ ತಿರುಮಲಾದೇವಿಯರ ಪಟ್ಟಣದ ಸೆಟ್ಟಿ ಪಟ್ಟಣಸ್ವಾಮಿಗಳ ಸಮ್ಮುಖದಲ್ಲಿ ಪ್ರಧಾನ ತಿರುಮಲರಾಜನ ಪ್ರತಿನಿಧಿಯಾದ ಅಬ್ಬರಾಜ ತಿಮ್ಮಪ್ಪನು ಕೆಲವು ಗ್ರಾಮಗಳ ಮೂಲವೀಸವನ್ನು ಅಲ್ಲಿಯ ತಿರುವೆಂಗಳನಾಥ ದೇವರಿಗೆ ಎತ್ತಿ ಬಿಡುತ್ತಾನೆಂದು ಹೇಳುತ್ತದೆ.[೧೫] ಅಚ್ಯುತದೇವ ಮಹಾರಾಯರು ವಿಜಯನಗರವನ್ನು ಆಳುತ್ತಿರುವಾಗ, ಅಂದರೆ ಕ್ರಿ.ಶ.೧೫೩೬ರ ಶಾಸನವಿದು. ಪ್ರಧಾನ ತಿರುಮಲರಾಜನ ಕಾರ್ಯ

ಕರ್ತನಾದ ಅಬ್ಬರಾಜ ತಿಮ್ಮಪನು ತಿರುಮಲದೇವಿಯರ ಪಟ್ಟಣ, ವರದರಾಜಮ್ಮನ ಪಟ್ಟಣ ಮತ್ತು ಕೃಷ್ಣಪುರದ ಸೆಟ್ಟಿ ಪಟ್ಟಣಸ್ವಾಮಿಗಳ ಒಪ್ಪಿಗೆ ಪಡೆದು ತಿರುಮಲದೇವಿಯರ ಪಟ್ಟಣದ ತಿರುವೆಂಗಳನಾಥ ದೇವರ ಸೇವೆಗೆ ಮೂಲವೀಸ(ತೆರಿಗೆ)ವನ್ನು ದಾನ ಮಾಡಿದನೆಂದು ತಿಳಿಸುತ್ತದೆ.[೬೩] ಈ ಶಾಸನದ ಪ್ರಕಾರ ಪಟ್ಟಣಸ್ವಾಮಿಗಳ ಸ್ಥಾನಮಾನ ಅರಿವಾಗದೇ ಇರದು. ಮೂಲವೀಸವನ್ನು ದಾನ ಮಾಡಲು ಪಟ್ಟಣಸ್ವಾಮಿಗಳ ಅಪ್ಪಣೆ ಪಡೆದಂತೆ ಈ ಶಾಸನದಲ್ಲಿ ತಿಳಿಯುತ್ತದೆ.

ಪ್ರಧಾನ ತಿರುಮಲರಾಜನ ಕಾರ್ಯಕರ್ತನಾದ ಅಬ್ಬರಾಜ ತಿಮ್ಮಪನು ಪಟ್ಟಣಸ್ವಾಮಿಯ ಅಪ್ಪಣೆಯ ಮೇರೆಗೆ ತಿರುವೆಂಗಳನಾಥನಿಗೆ ಮೂಲವೀಸವನ್ನು ದಾನ ಮಾಡಿದನೆಂದರೆ, ಪಟ್ಟಣಸ್ವಾಮಿಗಳ ಪ್ರಾಮುಖ್ಯತೆ ಈ ಶಾಸನದಿಂದ ತಿಳಿಯುತ್ತದೆ. ಕ್ರಿ.ಶ.೧೫೩೮ರ ಶಾಸನದಲ್ಲಿ, ಪೆನುಗೊಂಡೆಯ ವಿರುಪಣ್ಣ ನಾಯಕನ ಸಹೋದರನಾದ ವೀರಣ್ಣನಾಯಕನು, ಲಕ್ಕಣಪುರದಲ್ಲಿ ಪ್ರತಿ ಶುಕ್ರವಾರ ನಡೆಯುವ ಸಂತೆಯ ಸಂದರ್ಭದಲ್ಲಿ ಸಂಗ್ರಹಿಸಲಾದ ಕಂದಾಯವನ್ನು ಊರಿನ ಸೆಟ್ಟಿಗಳು ಮತ್ತು ಪಟ್ಟಣಸ್ವಾಮಿಗಳ ಸಮ್ಮುಖದಲ್ಲಿ ಮಹಾಲಕ್ಷ್ಮೀ ದೇವರ ಸೇವೆಗಾಗಿ ನೀಡಿದನು.[೬೩] ಪಟ್ಟಣಸ್ವಾಮಿಗಳ ಮಹತ್ವವನ್ನು ತಿಳಿಸುವ ಈ ಶಾಸನಗಳನ್ನು ಅವಲೋಕಿಸಿದಾಗ, ವರ್ತಕ ಸಂಘದ ಪ್ರಮುಖನನ್ನು ಪಟ್ಟಣಸ್ವಾಮಿ ಎಂದು ಕರೆಯುತ್ತಿದ್ದುದರ ಮಹತ್ವ ತಿಳಿದುಬರುತ್ತದೆ. ಬಣಜಿಗರಲ್ಲಿ ಪ್ರಮುಖನಾದವನನ್ನು ಪಟ್ಟಣಸ್ವಾಮಿ ಎನ್ನುತ್ತಿದ್ದರು.

ಪಟ್ಟಣಸ್ವಾಮಿಗಳು ವರ್ತಕರಲ್ಲಿ ಅತಿ ಶ್ರೀಮಂತನೂ ಪ್ರಭಾವಶಾಲಿಯೂ ಆಗಿದ್ದಿರಬೇಕು. ರಾಜನು ತನಗೆ ವಿವೇಕಿ ಎಂದು ಕಂಡುಬಂದ ವ್ಯಕ್ತಿಗೆ ಪಟ್ಟಣಸ್ವಾಮಿಯ ಪಟ್ಟವನ್ನು ಕೊಡುತ್ತಿದ್ದಿರಬೇಕು. ಇನ್ನು ಕೆಲವೆಡೆ ಅರಸನು ಪಟ್ಟಕ್ಕೆ ಬಂದಾಗ ಇವನಿಗೂ ಪಟ್ಟ ಕಟ್ಟಲಾಗುತ್ತಿತ್ತು. ದೇಶದ ವ್ಯಾಪಾರವು ಇವನ ಅಧೀನವಾಗಿರುತ್ತಿದ್ದು, ನಾಡಿನಲ್ಲಿಯ ಬಣಜಿಗರು ಇವನ ಹದ್ದು ಬಂದಿಯಲ್ಲಿ ತಮ್ಮ ವ್ಯಾಪಾರವನ್ನು ನಡೆಸುತ್ತಿದ್ದರು. ಅಲ್ಲದೇ ವರ್ತಕ ಸಂಘಗಳಿಗೆ ಒಳ್ಳೆಯ ಹೆಸರು ಪಡೆದ ವ್ಯಕ್ತಿಗಳು ಅಧ್ಯಕ್ಷರಾಗಿರುತ್ತಿದ್ದರು. ಇವರನ್ನು ಸೆಟ್ಟಿ ಪಟ್ಟಣಸ್ವಾಮಿಗಳೆಂದು ಕರೆಯುತ್ತಿದ್ದರು. ಅಹೋಬಲದ ಒಂದು ಶಾಸನವು[೬೪] ದೇವಾಲಯದ ಕೆಲವು ಅಗತ್ಯಗಳನ್ನು ಒಂದು ವರ್ತಕ ಸಂಘವು ಪೂರೈಸಿದುದನ್ನು ಹೇಳುತ್ತದೆ. ಆ ಸಂಘದ ಸದಸ್ಯರು ವಾಸವೀ ಕನ್ಯೆಯ ಭಕ್ತರಾಗಿದ್ದರು. ಅವರ ಮುಂದಾಳುಗಳಾಗಿದ್ದ ೧೫೦ ಜನರಿಗೆ ಪುಣ್ಯವಾಗಲೆಂದು ಈ ಧರ್ಮಕಾರ್ಯವನ್ನು

ಮಾಡಲಾಯಿತು. ಸಂಘದ ಅಧ್ಯಕ್ಷನೇ ಅದರ ಕಾರ್ಯನಿರ್ವಾಹಕನೂ ಆಗಿರುತ್ತಿದ್ದನು. ಸಂಘವು ಸಾಮಾನ್ಯವಾಗಿ ದೇವಾಲಯದಲ್ಲಿ ಸಭೆ ಸೇರಿ ಕಲಾಪಗಳನ್ನು ನಡೆಸುತ್ತಿದ್ದಿತು. ಸದಸ್ಯರ ನಡುವೆ ಅಹಿತಕರ ಸ್ಪರ್ಧೆಯನ್ನು ತಪ್ಪಿಸುವುದು, ಶಿಸ್ತಿನ ಕೆಲವು ನಿಯಮಗಳನ್ನು ಜಾರಿಗೆ ತರುವುದು, ಸದಸ್ಯರ ಸಮಾನ ಹಿತಾಸಕ್ತಿಗಳನ್ನು ಕಾಪಾಡುವುದು ಇದಕ್ಕಾಗಿ ಸಂಘವು ಶ್ರಮಿಸುತ್ತಿದ್ದಿತು. ಈ ಸಂಘದ ಮುಖ್ಯಸ್ಥರಾಗಿದ್ದ ಪಟ್ಟಣಸ್ವಾಮಿಗಳು ಈ ದಿಸೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ವರ್ತಕ ಸಂಘಗಳ ಪ್ರಮುಖರಾಗಿರುವ ಪಟ್ಟಣಸ್ವಾಮಿಗಳು ನ್ಯಾಯಾಧಿಕಾರವನ್ನು ಹೊಂದಿರುತ್ತಿದ್ದರು. ಮೊಕದ್ದಮೆಗಳನ್ನು ವಿಚಾರಣೆ ಮಾಡಿ ವ್ಯಾಜ್ಯ ಪರಿಹಾರ ಮಾಡುತ್ತಿದ್ದರು. ಅಪರಾಧಿಗಳಿಗೆ ಶಿಕ್ಷೆ ವಿಧಿಸುತ್ತಿದ್ದರು. ಇಂಥ ಅಧಿಕಾರ ವರ್ತಕ ಸಂಘಗಳಿಗೂ ಇರುತ್ತಿತ್ತು.

ಅನಂತಪುರ ಜಿಲ್ಲೆಯ ಕದಿರೆಯ ಒಂದು ಶಾಸನವು ನರಸಿಂಹದೇವರ ದೇವಸ್ಥಾನದಲ್ಲಿ ಸಭೆ ಸೇರಿದ ವರ್ತಕ ಸಂಘ ಮತ್ತು ಮುಖ್ಯಸ್ಥರಾದ ಪಟ್ಟಣಸ್ವಾಮಿಗಳು ಅಸ್ಪೃಶ್ಯರಾದ ಮಾಲರು ಮತ್ತು ಮಾದಿಗರಿಗೂ ಸ್ಥಳೀಯ ರೈತರಿಗೂ ಉಂಟಾಗಿದ್ದ ವ್ಯಾಜ್ಯವನ್ನು ಹೇಗೆ ಪರಿಹರಿಸಿತು ಎಂಬುದನ್ನು ವರ್ಣಿಸುತ್ತದೆ. ಮಾಲರಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ದೊರಕಿತು. ವಿವಾಹ ಸಂದರ್ಭಗಳಲ್ಲಿ ಚಪ್ಪರ ಹಾಕುವ ಕೆಲಸಕ್ಕೆ ಮಾದಿಗರಿಗೆ ಅನುಮತಿಯನ್ನು ನೀಡಲಾಯಿತು.[೬೫]

ವಿಜಯನಗರದ ಬುಕ್ಕರಾಯನ ಕಾಲದ ಕ್ರಿ.ಶ.೧೩೬೩ರ ಶಾಸನವು ಹೀಗಿದೆ. ಬುಕ್ಕಮಹಾರಾಯರ ಕುಮಾರ ವಿರುಪಂಣ ಒಡೆಯರು ಮಲೆ ರಾಜ್ಯವನ್ನಾಳುತ್ತಿರುವಾಗ, ಅಲ್ಲಿರುವ ಆಚಾರಿಯರು ಸೂರಿಗಳ ನಡುವೆ ಪಾರ್ಶ್ವದೇವರ ಸೀಮಾ ಸಂಬಂಧಕ್ಕೆ ವ್ಯಾಜ್ಯ ನಡೆಯಿತು. ಆಗ ಪಟ್ಟಣಸ್ವಾಮಿಗಳ ಸಮ್ಮುಖದಲ್ಲಿ ನ್ಯಾಯ ಬಗೆಹರಿಸಿದರು.[೬೬] ವಿಜಯನಗರ ರಾಜ ಇಮ್ಮಡಿ ಹರಿಹರರಾಯನ(ಹರಿಹರ II) ಕಾಲದ ಶಾಸನದಲ್ಲಿ ಜನ್ನರಸ ಒಡೆಯರು ಅರಗದ ರಾಜ್ಯವನ್ನು ಪಾಲಿಸುತ್ತಿರುವಾಗ, ಚಿಕ್ಕಹಳ್ಳಿಯ ಬೊಮ್ಮೆಗೌಡನು ಅರಗದ ಪಟ್ಟಣಸ್ವಾಮಿ, ಸೇನಬೋವ, ಮಣಿಸೆಟ್ಟಿಯರು ಕದಳಿಯ ನಾಗಿಸೆಟ್ಟಿಯರ ಸಮ್ಮುಖದಲ್ಲಿ ಭೂಮಿಯನ್ನು ದಾನವಾಗಿ ಕೊಟ್ಟನು. ಈ ಶಾಸನದ ಕಾಲ ಕ್ರಿ.ಶ.೧೪೦೧[೬೭]

ಪಟ್ಟಣಸ್ವಾಮಿಗಳ ಮಹತ್ವತೆಯನ್ನು ಒಳಗೊಂಡ ಕ್ರಿ.ಶ.೧೫೨೫ರ ಕೃಷ್ಣದೇವರಾಯನ ಕಾಲದ ಶಾಸನವು ಹೀಗಿದೆ.[೬೮]

೧ ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೪೪೬ನೆಯ ಮೇಲೆ ಸಲುವ ತಾರಣ ಸಂವತ್ಸರದ ಮಾಘ ಶು ೭ ಸೋಲು ಶ್ರೀಮನ್ಮಹಾ

೨ ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಶ್ರೀ ವೀರ ಕೃಷ್ಣದೇವರಾಯ ಮಹಾರಾಯರು ಪೃಥ್ವೀ ರಾಜ್ಯಂಗೆಯಿಉತ್ತಂ ಯಿರಲು ಶ್ರೀಮತು ಧಾರಾಸುರದ ಲಿಂಗರಸರು

೩ ಭಂಡಾರವಾಡಕೆ ಸಲುವ ಮೂಡನಾಡ ಮೊದಲ ಗ್ರಾಮ ವೆಲುಪಡಿಗೆಯ ಸ್ತಳದ ವೊಳಗಣ ಕ್ರುಷ್ಣರಾಯಪುರದ ಪೇಂಠೆಯ ಗೌಡ ಸೇನಬೋವರ ಸೆಟ್ಟಿ ಪಟ್ಟಣಸ್ವಾಮಿ ನಾನಾ ಪ್ರಜೆಗಳಿಗೆ ನಾನಾ ದೇಶ.

೪ ದ ಸೆಟಿ ಪಟ್ಟಣಸ್ವಾಮಿ ನಾನಾ ಪ್ರಜೆಗೂ ಮಾಡಿಕೊಟ್ಟ ಶಿಲಾಶಾಸನದ ಕ್ರಮವೆಂತೆಂದರೆ ನಂಮ ಕ್ರುಷ್ಣರಾಯದೇವ ಮಹಾರಾಯರುಗಳ ಹೆಸರಲಿ ಕಟ್ಟಿದ ಪೇಟೆಯಲಿ ಬಂದು ಇಹ

೫ ವೊಕ್ಕಲುಗಳಿಗೆ ಮೂಱುವರುಷ ಸರ್ವಮಾನ್ಯ ಮೂಱುವರುಷದ ಮೇಲೆ ಗಾಣ ೧ಕ್ಕೆ ವರುಷ ೧ಕ್ಕೆ ಗಾಣದ ವೊಕ್ಕಲು ವೊಂದು ವರಹ ವರುಷ ೧ಕೆ ಮಗ್ಗ ೧ಕೆ ೩ ಅಂಗಡಿ ೧ಕೆ ಮಗ್ಗ ಹತ್ತಕೆ

೬ ವೊಂದಱ ಮಾನ್ಯ ಚೆಲುವಾಂನ ಬಿನುಗುಗಳಿಗೆ ನಾನಾ ಜಾತಿಯ ಪೊಕ್ಕಲುಗಳಿಗೆ ವರುಷ ೧ಕೆ ಯಾ ಮರಿಯಾದೇಲು ಕೊಂಬೆಲು ಯಿಪ್ಪಲ್ಲದೆತಪ್ಪಿದರೆ ಕ್ರುಷ್ಣದೇವ

೭ ಮಹಾರಾಯರ ಪಾದದ ಆಣೆಗೆ ತಪ್ಪಿದವರು ಮುಂದೆ ಆವಾನಾನೊಬ್ಬ ಬಂದರೆ ಊ ಯಿ ಮರಿಯಾದೆಯಲು ನಡೆಸಿಕೊಡದೆ ಇದರೆ ಕ್ರಷ್ಣದೇವಮಹಾರಾಯರ ಪಾದದ ಆ

೮ ಣೆ ತಂಮ ತಂಮ ಸುಕ್ರುತವನು ಅನ್ಯ ಜಾತಿಗಳಿಗೆ ಕೊಟ್ಟ ದೋಷಕೆ ಹೋಗಲುಳ್ಳವರು ಎಂದು ಮಾಡಿಕೊಟ್ಟ ಶಿಲಾಶಾಸನ

ಕೃಷ್ಣದೇವರಾಯನು ಆಳುತ್ತಿರುವಾಗ ಧಾರಾಸುರದ ಅಂಗರಸರು ಭಂಡಾರವಾಡಕ್ಕೆ ಸಲ್ಲುವ ಮೂಡನಾಡ ಮೊದಲ ಗ್ರಾಮವಾದ ವೆಲುಪಡಿಗೆಯಲ್ಲಿ ಕೃಷ್ಣರಾಯಪುರ ಪೇಟೆಯನ್ನು ಕಟ್ಟಿಸಿ ಅಲ್ಲಿಗೆ ಬರುವ ನಾನಾ ದೇಶದ ಸೆಟಿ, ಪಟ್ಟಣಸ್ವಾಮಿ, ನಾನಾ ಪ್ರಜೆಗಳಿಗೆ ಮೂರು ವರ್ಷ ಸುಂಕವನ್ನು ವಿನಾಯಿತಿ ನೀಡುತ್ತಾನೆ. ಮೂರು ವರ್ಷದ ನಂತರ ಗಾಣ,

ಗಾಣದವೊಕ್ಕಲು, ಮಗ್ಗ, ಅಂಗಡಿ, ಚೆಲುವಾಂನ ಬಿನುಗುಗಳಿಗೆ ನಾನಾ ಜಾತಿವೊಕ್ಕಲುಗಳಿಗೆ ವರ್ಷಕ್ಕೆ ಇಂತಿಷ್ಟು ಹಣವೆಂದು ನಿಗದಿ ಮಾಡಲಾಗಿದೆ. ಇದು ತೆಲುಗು ಶಾಸನವಾಗಿದ್ದರೂ, ಪಟ್ಟಣಸ್ವಾಮಿಗಳ ಮಹತ್ವವನ್ನು ತೋರಿಸಿಕೊಡುವುದಲ್ಲದೆ, ಆಂಧ್ರದಲ್ಲೂ ಪಟ್ಟಣ ಸ್ವಾಮಿಗಳ ಬಗ್ಗೆ ತಿಳಿಯಬಹುದು. ಕ್ರಿ.ಶ.೧೪೨೬ರ ಶಾಸನದಲ್ಲಿ ಪಟ್ಟಣಸ್ವಾಮಿಯ ಬಗ್ಗೆ ಇದೆ.

೧ ಪರಾಭವ ಸಂವತ್ಸರದ ಆಶ್ವೀಜಸುದ್ದ ೫ ಲೂ ಶ್ರೀಮನ್ಮಹಾಮಂಡಲೇಶ್ವರು ಶ್ರೀವೀರವಿಜಯವೊ

೨ ಡೆಯರ ಕುಮಾರನಾದ ದೇವರಾಯವೊಡೆಯರವರ... ಜಂಜ ಮೋಬೆಯನಾಯ್ಕರ ಕುಮಾ

೩ ರ ಚಿಕ್ಕವೊಬಯ್ಯನಾಯ್ಕರು ಪಟ್ಟಣಸ್ವಾಮಿ ನಾಚಿಸೆಟ್ಟಿಯ ಮಗ ಬುಡಪಸೆಟ್ಟಿಗೆ ಪಟ್ಟಣ

೪ ಸ್ವಾಮಿತನವನು ಕೊಟ್ಟು ಆತನ ಮನೆಗೆ ತೊ... ತುಮದ ಉಸುರತಯಿವ

೫ ತು ೫೦ ಯತ್ತು ಮನೆಹತ್ತು ೧೦ ಕೊಳಗ ಗದ್ದೆ ೧೦ ಅತ್ತು ಕೊಳಯೊಲವನು ಮಾನ್ಯ

೬ ವನು ಕೊ... ಸುಖದಿಂಯಿಹುವರು ಯಿದಕ್ಕೆ ಆರುತಪ್ಪಿದಡೆ ತಂಮ ಗುಜು

೭ ಗಂಗೆತಡಿ ಕಪಿಲೆಯ ಕೊಂದ ಪಾಪದಲಿ ವೋವರು ಯಿರಿಯಮಗ

೮ .....ಪಾಪದಲಿ ವೋವರು ನಾಯ್ಕರ ವೊಪ್ಪ ಶ್ರೀ ಚೆನಕೇಶವರು ತಂ

೯ .....ಬರಹಾ ॥ ಪಾಪೋಜನು ಮಾಡಿದನು ॥ ಆರ್ಕ್

ಮಹಾಮಂಡಳೇಶ್ವರನಾದ ವೀರವಿಜಯವೊಡೆಯರ ಕುಮಾರ ದೇವರಾಯವೊಡೆಯರು ಆಳುತ್ತಿರುವಾಗ ವೋಬೆಯ ನಾಯ್ಕರ ಮಗ ಚಿಕ್ಕವೊಬಯ್ಯ ನಾಯ್ಕರು ಪಟ್ಟಣಸ್ವಾಮಿಯಾದ ನಾಚಿಸೆಟ್ಟಿಯ ಮಗ ಬುಂಡಪಸೆಟ್ಟಿಗೆ ಪಟ್ಟಣ ಸೆಟ್ಟಿತನವನ್ನು ಕೊಟ್ಟು ಅನೇಕ ಮಾನ್ಯವನ್ನು ನೀಡಿದ ವಿಷಯ ಶಾಸನದಲ್ಲಿದೆ. ಪಟ್ಟಣಸ್ವಾಮಿಯಾಗಿದ್ದ ನಾಚಿಸೆಟ್ಟಿಯು ಬಹುಶಃ ಮಡಿದಾಗ ಅವರ ಮಗನಿಗೆ ಆ ಪಟ್ಟಣಸ್ವಾಮಿ ಪಟ್ಟವನ್ನು ಕಟ್ಟಿರಬೇಕು. ಶಾಸನದ ಕೊನೆಯಲ್ಲಿ ಪಾಪೋಜನು ಮಾಡಿದನು ಎಂದು ಉಲ್ಲೇಖವಿದೆ. ಈ ಶಾಸನದ ಮುಖಾಂತರ ಪಟ್ಟಣಸ್ವಾಮಿ ಪಟ್ಟವು ಅನುವಂಶಿಕವಾಗಿ ಬರುತ್ತಿತ್ತೆಂಬ ಅಂಶ ತಿಳಿದುಬರುತ್ತದೆ.

ವಿಜಯನಗರದ ದೊರೆ ಸದಾಶಿವರಾಯ ಮಹಾರಾಯನ ಆಳ್ವಿಕೆಯಲ್ಲಿ ಕ್ರಿ.ಶ.೧೫೫೬ರ ಶಾಸನದ ಪ್ರಕಾರ ಮಹಾಮಂಡಳೇಶ್ವರ ರಾಮರಾಜು ತಿರುಮಲರಾಜಯ್ಯ ದೇವ ಮಹಾ

ಅರಸುಗಳ ನಿರೂಪದಿಂದ ಮಹಾನಾಯಕಾಚಾರ್ಯ ನಿಡುಗಲ್ಲಿನ ತಿಮ್ಮಣನಾಯಕರು ನಿಡುಗಲ್ಲ ಸೀಮೆಯ ಸೇನಬೋವಗೌಡ ಪ್ರಜೆಗಳು, ಸೆಟ್ಟಿ ಪಟ್ಟಣಸ್ವಾಮಿಗಳು, ಗುತ್ತಿ ತಿರುಮಲರಾಜಯ್ಯ ಹಾಗೂ ಕೆಂಚಪನಾಯಕರನ್ನು ಮುಂದಿಟ್ಟುಕೊಂಡು ಪೆಯಿಲಬಂಡೆಯ ತಿರುವೇಂಗಳನಾಥ ದೇವರ ಸೇವೆಗೆ ನಿಡುಗಲ್ಲರಾಜ್ಯದ ತುಮುಕುಂಟೆ ಗ್ರಾಮವನ್ನು ದತ್ತಿಯಾಗಿ ನೀಡಿದ್ದನ್ನು ಇದು ದಾಖಲಿಸುತ್ತದೆ.[೭೦] ಈ ಶಾಸನದಿಂದ ಪಟ್ಟಣಸ್ವಾಮಿಗಳಿಗಿರುವ ಉನ್ನತ ಸ್ಥಾನದ ಬಗ್ಗೆ ಅರಿವಾಗುತ್ತದೆ.

ವಿಜಯನಗರದ ದೊರೆ ಕೃಷ್ಣದೇವರಾಯ ಮಹಾರಾಯನ ಆಳ್ವಿಕೆಯ ಕಾಲದ ಇದು ೧೫೨೫ರ ಕಾಲದ ಶಾಸನವಾಗಿದೆ. ಇದು ಧಾರಾಸುರದ ಲಿಂಗರಸರ, ಕೃಷ್ಣರಾಯಪುರ ಎಂಬ ಹೆಸರಿರುವ ವೆಲುಪಡಿಗೆಯ ಸೆಟ್ಟಿ, ಪಟ್ಟಣಸ್ವಾಮಿ, ನಾನಾ ಪ್ರಜೆಗಳಿಗೆ ಮಾಡಿಕೊಟ್ಟ ಶಿಲಾಶಾಸನ. ಕೃಷ್ಣರಾಯ ಮಹಾರಾಯನ ಹೆಸರಿನಲ್ಲಿ ಕಟ್ಟಿದ ಪೇಟೆಯಲ್ಲಿ ಬಂದಿರುವ ಒಕ್ಕಲುಗಳಿಗೆ ಮೂರುವರ್ಷ ಸರ್ವಮಾನ್ಯವಾಗಿ, ಅನಂತರ ಗಾಣವೊಂದಕ್ಕೆ ೧ ವರಹ, ಒಂದು ಅಂಗಡಿಗೆ ಮೂರು ಪಣ ಒಂದು ಮಗ್ಗಕ್ಕೆ ಮೂರು ಪಣ ಹತ್ತು ಮಗ್ಗಗಳಿದ್ದರೆ, ಒಂದು ಮಗ್ಗವನ್ನು ಮಾನ್ಯವಾಗಿ, ಬಿನುಗು ವಸ್ತುಗಳಿಗೆ ಒಂದು ಪಣ ಹೀಗೆ ಪ್ರತಿ ವರ್ಷದಲ್ಲೂ ಸಂಗ್ರಹವಾಗಬೇಕು ಎಂದು ಶಾಸನದಲ್ಲಿ ವಿಧಿಸಿದೆ.[೭೧] ವಿಜಯನಗರ ಅರಸ ಇಮ್ಮಡಿ ಹರಿಹರರಾಯನ ಕುಮಾರ ದೇವರಾಯನ ಕಾಲದ ಶಾಸನವೊಂದು, ತಿಳಿಸುವ ಪ್ರಕಾರ, ಸಾಜಿರಿ ನಾಗಿನಾಯಕನ ಮಗ ಹಿರಿಯ ಪೆಮ್ಮೆಯನಾಯಕ ಹಾಗೂ ಪಟ್ಟಣಸ್ವಾಮಿ ಹಾಮ್ಮಿಸೆಟ್ಟಿಯ ಮಗ ಕರಡಿಸೆಟ್ಟಿಯವರು ಕುಂಟೆಯೊಂದನ್ನು ನಿರ್ಮಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.[೭೨]

ವಿಜಯನಗರದ ಕಾಲದಲ್ಲಿನ ಸಂತೆಗೆ ನೇರವಾಗಿ ಸಂಬಂಧಪಟ್ಟಂತಹ ಕೆಲವು ಶಾಸನಗಳಲ್ಲಿ ಪಟ್ಟಣಸ್ವಾಮಿಯ ಮಹತ್ವವನ್ನು ತಿಳಿಸುವಂತಹ ಕೆಲವು ಶಾಸನಗಳು ಹೀಗಿವೆ. ಬೆಂಗಳೂರು ಆನೇಕಲ್ ತಾಲೂಕಿನ ಎರಡನೇ ದೇವರಾಯನ ೧೪೨೭ ಶಾಸನ, ಸರ್ಜಾಪುರದ ೧೪೦೮ರ ಶಾಸನ ಮತ್ತು ಮಾಯಾಸಂದ್ರದ ೧೪೧೨ರ ಶಾಸನಗಳು ಸಂತೆಯನ್ನು ಕುರಿತಂತೆ ಅನೇಕ ಮಾಹಿತಿ ನೀಡುವವು. ಅಂದರೆ ಸಂತೆ ನಡೆಸುವವರಿಗೆ ಉಚಿತ ಭೂಮಿ, ಪಟ್ಟಣಸ್ವಾಮಿ ಎಂಬ ಬಿರುದು, ವಡ್ಡ ವ್ಯವಹಾರಿ ಮತ್ತು ಉಭಯ ನಾನಾದೇಶೀಯರಿಗೆ ಹಲವು ವರ್ಷಗಳವರೆಗೆ ವಿವಿಧ ಸುಂಕಗಳಲ್ಲಿ ರಿಯಾಯಿತಿ

ಮುಂತಾದವುಗಳು. ಅನೇಕಲ್ ತಾಲೂಕಿನ ಸೋಮಗೊಂಡನ ಹಳ್ಳಿಯಲ್ಲಿ ೧೪೧೨ರಲ್ಲಿ ಸಂತೆ ಪ್ರಾರಂಭ ಮಾಡಿ ಸ್ಥಳದ ಇಬ್ಬರು ಸಹೋದರರಿಗೆ ಪಟ್ಟಣಸ್ವಾಮಿಗಳನ್ನಾಗಿ ನೀರಾವರಿ ಭೂಮಿಯನ್ನು ಸಂತೆ ನಡೆಸುವ ಸಲುವಾಗಿ ಜಹಗೀರು ಹಾಕಿಕೊಟ್ಟಿರುವ ವಿಷಯ ಶಾಸನದಿಂದ ತಿಳಿಯುವುದು. ಈ ಶಾಸನಗಳ ಆಧಾರದಿಂದ, ವ್ಯಾಪಾರ ವ್ಯವಹಾರಗಳಲ್ಲಿ ಪಟ್ಟಣಸ್ವಾಮಿಗಳ ಸ್ಥಾನದ ಪ್ರಾಮುಖ್ಯತೆಯ ಅರಿವಾಗುವುದು.

ಇಮ್ಮಡಿ ಹರಿಹರನ ಮಹಾಪ್ರಧಾನಿ ಗುಂಡಪ್ಪ ದಂಡನಾಯಕನ ಆಳ್ವಿಕೆಗೆ ಸೇರಿದ್ದುದು ಕೆಳಲೆನಾಡಿನ ಮುಖ್ಯ ಸ್ಥಳ ಹಿರಿಯ ಮಳಲೂರು. ಆ ಸ್ಥಳದ ಚತುಸ್ಸೀಮೆಯೊಳಗಿನ ಹಿರಿಯೂರು ವಿಜಯದಂಣಾಯಕ ಪಟ್ಟಣದ ಹೊರಪಟ್ಟಣಗಿರಿಯಲ್ಲಿ ಮಹಾಮುಖ್ಯ ವಡ್ಡ ವ್ಯವಹಾರಿ ಆಗಿದ್ದವನು ಸಿಂಧವಕುಲದ ಪಟ್ಟಣಸ್ವಾಮಿ ಕೇತಿಸೆಟ್ಟಿ, ಅವನ ಮಗ ಕಾಳಿಕಪ್ಪ ಶೆಟ್ಟಿಗೆ ಹದಿನೆಂಟು ಸೀಮೆಯ ವ್ಯವಹಾರವನ್ನು ಸಂಸ್ತಾ ಶಾಸನ ಮಾಡಿ ಅಂದರೆ ಲಿಖಿತ ರಾಜಶಾಸನ ಹೊರಡಿಸಿ ನೀಡಲಾದ ವಿಷಯವಿದೆ. ಚೆನ್ನಪಟ್ಟಣದ ಹೋಬಳಿಗೆ ಸೇರಿದ ಹರೂರುವಿನಲ್ಲಿ ಈ ಶಾಸನವಿದೆ. ಕ್ರಿ.ಶ.೧೩೫೯ರ ಶಾಸನವನ್ನು ಗಮನಿಸಿದರೆ ಹರೂರು ಹಿಂದೆ ಹಿರಿಯೂರು ವಿಜಯದ ದಂಣಾಯಕ ಪಟ್ಟಣವೆನಿಸಿ ಆರ್ಥಿಕ ವ್ಯವಹಾರಗಳಿಗೆ ಮುಖ್ಯ ನೆಲೆಯಾಗಿತ್ತು. ಕೆಳಲೆನಾಡಿನ ಮುಖ್ಯ ವ್ಯಾಪಾರ ಸ್ಥಳವಾಗಿತ್ತು. ನಗರೀಕರಣಗೊಂಡಿತ್ತು ಎಂದು ತಿಳಿಯುತ್ತದೆ. ಸಂಸ್ತಾ ಶಾಸನ ನೀಡಿರುವ ಕಾರಣ ೧ನೇ ವರ್ಗದ ಅಮರನಾಯಕರ ಅಧೀನದಲ್ಲಿ ಪಟ್ಟಣಸ್ವಾಮಿಗಳೂ ಪಾಳೆಯಪಟ್ಟಿನ ಆರ್ಥಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸೂಚನೆ ಒದಗುತ್ತದೆ. ಒಂದು ರೀತಿಯಲ್ಲಿ ಪಾಳೆಯಪಟ್ಟಿನ ವಿತ್ತ ಸಚಿವರಂತೆ ಅವರಿದ್ದರೆನ್ನಬಹುದು. ಇದರಿಂದ ಸಮಾಜದಲ್ಲಿ ಪಟ್ಟಣಸ್ವಾಮಿಗಳ ಸ್ಥಾನಮಾನದ ಅರಿವಾಗುವುದು.

ಕ್ರಿ.ಶ.೧೫೬೧ರ ಶಾಸನದ ಪ್ರಕಾರ, ಸದಾಶಿವ ರಾಜನು ಆಳುತ್ತಿರುವ ಕಾಲದಲ್ಲಿ, ಮಹಾಮಂಡಳೇಶ್ವರರಾದ ತಿರುಮಲರಾಜು ರಾಮರಾಜಯ್ಯದೇವನು ಸೇನಭೋವಗೌಡ ಮತ್ತು ಪಟ್ಟಣಸ್ವಾಮಿಗಳ ಅನುಮತಿ ಪಡೆದು, ಕಲ್ಲಿನಾಥ ದೇವರಿಗೆ ಮಾಡಿದ ದಾನದ ವಿವರವನ್ನು ಈ ಶಾಸನವು ಒಳಗೊಂಡಿದೆ. ಎರಡು ಹಳ್ಳಿಗಳ ಕಂದಾಯವನ್ನು ಕಲ್ಲಿನಾಥ ದೇವರಿಗೆ ರಾಮರಾಜಯ್ಯನು ಸಮರ್ಪಿಸಿದ ಮಾಹಿತಿ ಈ ಶಾಸನದಲ್ಲಿದೆ.[೭೩] ಈ ಶಾಸನದ ಪ್ರಕಾರ ಪಟ್ಟಣಸ್ವಾಮಿಗಳ ಅನುಮತಿ ಎಷ್ಟು ಮಹತ್ವ ಎನ್ನುವುದು ಅರ್ಥವಾಗುತ್ತದೆ. ಸಮಾಜದಲ್ಲಿ ನಡೆಯುವ ಕಲ್ಯಾಣಕರ ಕಾರ್ಯಗಳಿಗೆ ಪಟ್ಟಣಸ್ವಾಮಿಗಳ ಅನುಮತಿ ಅವಶ್ಯಕವಾಗಿತ್ತು.

ವಿಜಯನಗರವನ್ನು ಅಚ್ಯುತದೇವ ಮಹಾರಾಯರು ಆಳುತ್ತಿರುವಾಗ, ಇವರಿಗೆ ಒಳ್ಳೆಯದಾಗಬೇಕೆಂದು, ಪ್ರಧಾನ ತಿರುಮಲರಾಜ ಮತ್ತು ಅಬ್ಬರಾಜ ತಿಮ್ಮಪ್ಪ ಇವರುಗಳು, ಗೌರೇಶ್ವರ ಗಣೇಶ್ವರ ಪಾದ ಪದ್ಮಾರಾಧಕರಾದ ಮತ್ತು ಅಯ್ಯಾವಳಿಯ ಮುಖ್ಯರಾದ ತಿರುಮಲದೇವಿಯರ ಪಟ್ಟಣದ ಸೆಟಿ ಪಟ್ಟಣಸ್ವಾಮಿಗಳಿಗೂ, ವರದರಾಜ ಪಟ್ಟಣದ ಪಟ್ಟಣಸ್ವಾಮಿಗಳಿಗೂ, ಕೃಷ್ಣಾಪುರದ ಸೆಟ್ಟಿ ಪಟ್ಟಣಸ್ವಾಮಿಗಳಿಗೂ ಭಿನ್ನಹ ಮಾಡಿಕೊಂಡು ತಿರುಮಲದೇವರ ಪಟ್ಟಣದ ತಿರುವೆಂಗಳನಾಥ ದೇವರ ಅಮೃತಪಡಿಗೆ ಮತ್ತು ದೀಪಾರಾಧನೆಗೆ ಮೂಲವೀಸವನ್ನು ನೀಡಿದರು.[೭೪]

ಸದಾಶಿವರಾಯ ಮಹಾರಾಯರು ರಾಜ್ಯವಾಳುವ ಕಾಲದಲ್ಲಿನ ಈ ಶಾಸನವು ಪಟ್ಟಣಸ್ವಾಮಿಗಳ ಉನ್ನತಿಯನ್ನು ಎತ್ತಿ ಹಿಡಿಯುತ್ತದೆ. ಈ ಶಾಸನದ ಕಾಲ ಕ್ರಿ.ಶ.೧೫೪೫[೭೫] ಮಹಾಮಂಡಳೇಶ್ವರ ಕೊಟಗಾರ ರಾಮರಾಜವೊಡೆಯರ ಮೊಮ್ಮಕ್ಕಳು ಅಳಿಯ ಲಿಂಗರಾಜ ದೇವರು ರಾಮರಾಜ ವೊಡೆಯರ ತಂದೆಗೆ ಪುಣ್ಯವಾಗಬೇಕೆಂದು ಕುರುಗೋಡು ಬಸ್ತಿಯ ಜನದೇವರಿಗೆ ಭೂಮಿಯನ್ನು ದಾನ ಮಾಡುವರು. ಈ ದಾನವನ್ನು ಸೇನಬೋವ ಮತ್ತು ಪಟ್ಟಣಸ್ವಾಮಿಗಳ ಅಪ್ಪಣೆ ಮೇರೆಗೆ ಮಾಡಿದರು. ಈ ಶಾಸನದಿಂದ ವಿಜಯನಗರ ಕಾಲದಲ್ಲಿ ಜನರಿಗೆ ತಂದೆ ತಾಯಿಗಳ ಬಗ್ಗೆ ಇದ್ದ ಆದರ, ಪ್ರೀತಿ ವ್ಯಕ್ತವಾಗುತ್ತದೆ.

ವರ್ತಕರ ಅಧಿಕಾರ ಸ್ಥಾನದಲ್ಲಿ ಪಟ್ಟಣಸ್ವಾಮಿಗಳ ಪಾತ್ರ ಹಿರಿದಾಗಿದೆ. ಪಟ್ಟಣಸ್ವಾಮಿಗಳಲ್ಲಿ ಕೆಲವರು ವೈಷ್ಣವ, ಜೈನ, ಶೈವ ಮತೀಯರೂ ಇರುವುದನ್ನು ಶಾಸನಗಳಿಂದ ತಿಳಿಯಬಹುದಾಗಿದೆ. ಬಸರೂರ ಶಾಸನದ ಕೋಟಿಯಣ್ಣ ಸೆಟ್ಟಿ[೭೬] ಕಾಮಗೆರೆ ಶಾಸನದ ಮಾಂಬಳ್ಳಿ, ಮೋಡಹಳ್ಳಿ, ಕೊಂಗಪಟ್ಟಣದ ಸಮಸ್ತ ನಾನಾದೇಶಿ, ದುಗ್ಗಿಯರಗೌಡ, ಪಟ್ಟಣಸ್ವಾಮಿ, ನಾಲ್ಕು ನಾಡು ನಕರರು[೭೭] ಸಕಲೇಶ್ವರ, ಮಲ್ಲಿನಾಥ ಮತ್ತು ಗವರೇಶ್ವರ ದೇವಾಲಯಗಳಿಗೆ ಧರ್ಮಶಾಸನ ಹೊರಡಿಸಿರುವರು.

ಪ್ರೌಢದೇವರಾಯರ ಕಾಲದಲ್ಲಿನ ಕ್ರಿ.ಶ.೧೪೩೦ರ ಈ ಶಾಸನದಲ್ಲಿ ಲಕ್ಕಂಣ ವೊಡೆಯರು ಆಳುತ್ತಿದ್ದ ಮುಳಬಾಗಿಲು ರಾಜ್ಯದ ತೇಕಲನಾಡಿನ ಜುಂಜಿರುಗಣಂಗಳಿಗೆ ಸಲ್ಲುವ ಮರಗಳಲು(ಈಗಿನ ಮರಗಲ್ಲು) ಗ್ರಾಮದ ಹಲವು ಪಾಂಚಾಳರು ಸೇರಿಕೊಂಡು ಸಂತೆಯನ್ನು ಕಟ್ಟಿಸಿ ಅದರ ಸಂಬಂಧ ಆ ಸಂತೆಯ ಪಟ್ಟಣಸ್ವಾಮಿಯಾದ ಚಿಯಿಯ ಬಸ್ಸಿಸೆಟ್ಟಿಗೆ ಭೂಮಿಯನ್ನು ಮತ್ತು ಕೆಲವು ತೆರಿಗೆಗಳನ್ನು ಮಾನ್ಯವಾಗಿ ಬಿಡಲಾಗಿದೆ.

ಸಂತೆಯಲ್ಲಿ ಕುದುರೆಯನ್ನು ಕೊಂಡಾಗ, ಮಾರಿದಾಗ ಕಬ್ಬಿಣಕೆಲಸ, ಮರಕೆಲಸ, ಅಕ್ಕಸಾಲೆ, ಅಗಸ, ನಾವಿಂದ, ಹೊಲೆಯ ಮುಂತಾದವರೂ ಮಾನ್ಯವನ್ನು ಸಲ್ಲಿಸಬೇಕು ಎಂದು ಶಾಸನದಲ್ಲಿ ಕಟ್ಟಳೆ ವಿಧಿಸಿದೆ.[೭೮]

೩.೨.೨. ನ್ಯಾಯದಾನ(ನ್ಯಾಯತೀರ್ಮಾನ)

ಮಾನವ ಜನಾಂಗವನ್ನು ರೂಪಿಸಿದ ಹಲವಾರು ಅಂಶಗಳಲ್ಲಿ ವರ್ತಕರು ಮತ್ತು ವರ್ತಕ ಸಂಘಗಳು ಮುಖ್ಯವೆನಿಸಿವೆ. ವೈಯಕ್ತಿಕವಾಗಿ, ಸಾಂಘಿಕವಾಗಿ ಈ ವರ್ತಕರು ಕೈಗೊಂಡ ವ್ಯಾಪಾರ ವೃತ್ತಿಯಿಂದ ಸಮಾಜದ ಜೀವನಸ್ಥಿತಿ-ನಾಡಿನ ಆರ್ಥಿಕ ಪರಿಸ್ಥಿತಿಗಳು ಒಂದು ಆಕಾರ ಪಡೆಯುತ್ತವೆ. ಭಾರತೀಯ ಹಿನ್ನೆಲೆಯಲ್ಲಿ ಹೇಳುವುದಾದರೆ ವರ್ತಕರ ಪ್ರಥಮ ಉಲ್ಲೇಖ ವೈದಿಕ ಸಾಹಿತ್ಯದಷ್ಟು ಪೂರ್ವದಲ್ಲಿಯೇ ಲಭಿಸುವುದುಂಟು, "ವೃತ್ತಿಗೆ", ಮಾನವ ಇತಿಹಾಸದಷ್ಟು ಪ್ರಾಚೀನತೆಯಿದೆ. ವ್ಯಕ್ತಿಯ ಜೀವನಾಧಾರ, ವೃತ್ತಿ. ವೃತ್ತಿಯಿಲ್ಲದೆ ಬಾಳುವುದು, ಬದುಕುವುದು ಮಾನವನಿಗೆ ಕಷ್ಟ ಸಾಧ್ಯ. ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಕೊಳ್ಳುವುದು ಅವನಿಗೆ ಅನಿವಾರ್ಯ, ಅಗತ್ಯವೆನಿಸಿದ್ದಿತು. ಆರಂಭದಲ್ಲಿ ಈ ವೃತ್ತಿಗಳೆಲ್ಲ ಅನುವಂಶಿಕವಾಗಿದ್ದವು. ಅಲ್ಲದೆ ಜಾತಿವಾಚಿ, ಧರ್ಮವಾಚಿಗಳಾಗಿರದೆ ವೃತ್ತಿವಾಚಿಗಳೆನಿಸಿದ್ದವು. ಕ್ರಮೇಣ ಇವು ಜಾತಿನಿಷ್ಠ, ಜನಾಂಗನಿಷ್ಠ, ಪ್ರದೇಶನಿಷ್ಠಗಳಾಗಿಯೂ ಮತ್ತು ವರ್ಗನಿಷ್ಠವಾಗಿಯೂ ಬೆಳೆದು ಬಂದವು. ವ್ಯಕ್ತಿ, ಶ್ರಮಜೀವಿಯೂ ವೃತ್ತಿ ಜೀವಿಯೂ ಆದುದರಿಂದ ಶ್ರಮ ಮತ್ತು ವೃತ್ತಿಗಳು ಅವನ ಬದುಕಿನಲ್ಲಿ ಬೆಲೆಯುಳ್ಳ ಅಂಶಗಳಾಗಿವೆ. ಇವು ಒಂದಕ್ಕೊಂದು ಪೂರಕವಾಗಿಯೂ ಪ್ರೇರಕವಾಗಿಯೂ ನಿಂತು ಅವನ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸಿವೆ. ಪ್ರತಿಯೊಂದು ವೃತ್ತಿಗೂ ಶ್ರಮವೇ ಮೂಲ. ಆದುದರಿಂದ ಶ್ರಮವಿಲ್ಲದೇ ವೃತ್ತಿಗಳೇ ಇಲ್ಲವೆಂದು ಹೇಳಬಹುದು. ಹೀಗೆ ಶ್ರಮವಹಿಸಿ ದುಡಿಯುತ್ತಿರುವ ವರ್ತಕ ವರ್ಗವೆಂದು ಪರಿಗಣಿಸುವ ಸೆಟ್ಟಿಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ರಾಜಕೀಯ, ಧಾರ್ಮಿಕ, ಆರ್ಥಿಕ ಹೀಗೆ ಇವರು ಸೇವೆ ಸಲ್ಲಿಸದ ಕ್ಷೇತ್ರವಿಲ್ಲ. ಪ್ರಸ್ತುತ ಈ ಭಾಗದಲ್ಲಿ ನ್ಯಾಯ ತೀರ್ಮಾನಕಾರರಾಗಿ ಸೆಟ್ಟಿಗಳು ಸಲ್ಲಿಸಿದ ಸೇವೆಯನ್ನು ಸ್ಮರಿಸೋಣ.

'ನ್ಯಾಯ' ಎನ್ನುವ ಪದ ವಿಶಾಲ ಮತ್ತು ಪವಿತ್ರವಾದುದು. ನ್ಯಾಯದ ಆಧಾರದ ಮೇಲೆಯೇ ಜಗತ್ತು ನಿಂತಿದೆ. ನಿಷ್ಪಕ್ಷಪಾತವಾದ ನ್ಯಾಯವನ್ನು ಒದಗಿಸಲು ಅಪಾರ

ಅನುಭವದ ಅವಶ್ಯಕತೆಯಿದೆ. ನ್ಯಾಯವು ಕಟ್ಟಿಗೆಯಲ್ಲಿರುವ ಉರುವಲಿನಂತೆ, ಹಾಲಿನಲ್ಲಿರುವ ಬೆಣ್ಣೆಯಂತೆ, ಹುಡುಕಿ ತೆಗೆಯಬೇಕು. ನ್ಯಾಯದ ಮುತ್ತು ದಯೆಯ ಹೃದಯದಲ್ಲಿದೆಯೆಂದು ಹೇಳುವುದುಂಟು. ಮೆತ್ತನೆಯ ಗಾದೆಯ ಮೇಲೆ ಮಲಗುವವರ ಮತ್ತು ಬರಿ ನೆಲದ ಮೇಲೆ ಮಲಗುವವರ ಕನಸುಗಳಲ್ಲಿ ಯಾವ ಅಂತರವೂ ಇಲ್ಲವೆಂದ ಮೇಲೆ ನ್ಯಾಯ ಪ್ರಭುವಿನ ನ್ಯಾಯಾಲಯದಲ್ಲಿ ಪೂರ್ಣ ವಿಶ್ವಾಸದ ಮೇಲೆ ನಿಂತಿರುತ್ತದೆ. ಇಂಥ ಪವಿತ್ರವಾದ ನ್ಯಾಯ ತೀರ್ಮಾನಕಾರರಾಗಿ ಸೆಟ್ಟಿ ಕುಲದವರು ವಹಿಸಿದ ಪಾತ್ರದ ಬಗ್ಗೆ ಅವಲೋಕಿಸೋಣ.

ವರ್ತಕರಿಗೆ ದೇಶದಲ್ಲಿ ಸಂಭವಿಸುವ ಧರ್ಮ ವ್ಯಾಜ್ಯ ಬಗೆಹರಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಅಧಿಕಾರವಿದ್ದಿತು. ಈ ಅಧಿಕಾರವನ್ನು ಸೆಟ್ಟಿಗಳಿಗೆ ಅಥವಾ ವರ್ತಕರಿಗೆ ರಾಜನು ನೀಡುತ್ತಿದ್ದ. ವಿಜಯನಗರದ ಅರಸು ಹರಿಹರ ಇಂಥ ಅಧಿಕಾರವನ್ನು ವರ್ತಕರಿಗೆ ನೀಡಿದುದು ಉಲ್ಲೇಖಾರ್ಹವೆನಿಸಿದೆ.[೭೯] ತಿರುಮ ಹಡವಳ ಹಾಗೂ ಬೆಮ್ಮಸೆಟ್ಟಿಯರನ್ನು ಕೊಂದ ಬಸರೂರ ನಕರದವರ ವಿರುದ್ಧ ಬಸರೂರ ಪಡುವಕೇರಿಯ ಹಲರು ಸೆಟ್ಟಿಕಾರರು ವಿಚಾರಣೆ ನಡೆಸಿ, ಆಲೂರ ಸಕಲೇಶ್ವರ ದೇವಾಲಯದ ಮಹಾ ದೇವರಿಗೆ ಅಪರಾಧ ಪ್ರಾಯಶ್ಚಿತ್ತಕ್ಕಾಗಿ ಹಣ, ಸುವರ್ಣ ದಾನ ನೀಡಬೇಕೆಂದು ತೀರ್ಪು ನೀಡಿರುವರು. ಅಷ್ಟೇ ಅಲ್ಲದೆ ತಾವು ನೀಡಿರುವ ತೀರ್ಪು ಕಾರ್ಯಗತಗೊಳ್ಳುವಂತೆಯೂ ಲಕ್ಷ್ಯ ವಹಿಸಿರುವರು.[೮೦]

ಧಾನ್ಯ, ಸಕ್ಕರೆಯ ಹಂಚಿಕೆ-ಮಾರಾಟದ ವಿಷಯದಲ್ಲಿ ಬಾರಕೂರ ಚೌಳಿಯ ಕೇರಿಯವರಿಗೂ ಮೂರುಕೇರಿಯವರಿಗೂ ವೈಮನಸ್ಸು ಹುಟ್ಟಿ, ವ್ಯವಹಾರ ಕೆಟ್ಟು ಹೋಗಿದ್ದಿತು. ಜಗಳ ಸಂಭವಿಸುವ ಪರಿಸ್ಥಿತಿಯೂ ಇದ್ದಿತು. ಇದನ್ನು ತಿಳಿದ ಚಂಡರಸ ಒಡೆಯನು ಎರಡೂ ಕೇರಿಯವರನ್ನು ತನ್ನಲ್ಲಿಗೆ ಕರೆಸಿ ವ್ಯಾಜ್ಯ ತಿದ್ದಿ, ಬುದ್ಧಿ ಹೇಳಿ ಒಡಂಬಡಿಸಿದ. ಆಗ ಎರಡೂ ಕೇರಿಯವರು ಚಂಡರಸನ ಸನ್ನಿಧಾನದಲ್ಲಿ "ನಂಮ ಎರಡೂ ಕೇರಿಯವರೂ ನಂಮೊಳಗೆ ನಾವು ಸಂವಾದ ಹುಟ್ಟಿದರೆ ಸಮಯ ಸಂಕೇತದ ಮೇಲೆ ಆಡಿ ಮಾಡಿಕೊಂಬೆಉ ಕೈದುವ ಹಿಡಿದು ಕಾದ ಸಲ್ಲದು. ನಂಮ ಎರಡೂ ಕೇರಿಯವರೂ ಆಡುವಂಥಾ ಬೆವಹಾರವನೂ ನಂಮೊಳಗೆ ನಾಉ ವಂಚನೆಯಿಲ್ಲದೆ ವೊತ್ತಂ ಬಲ್ಲವ ಮಾಡದೆ ಸರಿಯಾಗಿ ಬೆವಹಾರವನೂ ಆಡುವೆವು[೮೧] ಎಂದು ಕಟ್ಟಳೆ ಬರೆಸಿಕೊಂಡರು. ಈ ಕಟ್ಟಳೆ ಮೀರಿದವರು ಗಂಗೆ, ವಾರಣಾಸಿ, ವಿಶ್ವನಾಥ ದೇವರ ಸನ್ನಿಧಾನದಲ್ಲಿ, ಸೂರ್ಯ, ಚಂದ್ರಗ್ರಹಣಗಳಲ್ಲಿ ಸಾವಿರ ಸಂಖ್ಯೆಯ ಆಕಳು, ಬ್ರಾಹ್ಮಣರನ್ನು ವಧಿಸಿದ ದೋಷಕ್ಕೂ, ಲಿಂಗ

ಕಿತ್ತ ಪಾಪಕ್ಕೂ ಗುರಿಯಾಗುವರಲ್ಲದೆ, ಅರಮನೆಗೆ ದಂಡವನ್ನೂ ತೆತ್ತಬೇಕಾಗುವುದೆಂಬ ಎಚ್ಚರಿಕೆಯನ್ನು ಸಾರಿದರು. ಹೀಗೆ ತಮ್ಮೊಳಗೆ ನ್ಯಾಯವನ್ನು ಬಗೆಹರಿಸಿಕೊಳ್ಳುತ್ತಿದ್ದರು.

ಕ್ರಿ.ಶ.೧೪೪೯ ಕೋಟೆ ನಾಯಕನ ಹಳ್ಳಿ ಬನಶಂಕರಿ ದೇಗುಲದ ಶಾಸನವು (ತಿ.ಪ.೮೬) ಬಾಳು ತಪ್ಪಿದ ಹೆಣ್ಣು ಮಗಳು ೪೦ ವರಹ ತಪ್ಪು ಕಾಣಿಕೆ ಕಟ್ಟಿದರೆ ಕುಲಕ್ಕೆ ತೆಗೆದು ಕೊಳ್ಳಬಹುದು. ಕ್ರಿ.ಶ.೧೬೦೦ರ ಹೊನ್ನುವಳ್ಳಿ ಲಕ್ಷ್ಮೀಕಾಂತ ದೇಗುಲದ ಶಾಸನವು (ತಿ.೧೩೦) ಬಾಳು ತಪ್ಪಿದವಳ ಮಕ್ಕಳು ದೇಗುಲ ಪೂಜಾರಿಗಳ ಮನೆತನದವರಲ್ಲದಿದ್ದರೆ ಅಂತ ಮಕ್ಕಳು ಪೂಜಾರಿಗಳಿಗೆ ಅರ್ಹರಲ್ಲ. ಇಂಥ ನಿಯಮಗಳನ್ನು ಅನೇಕ ಶೆಟ್ಟಿಗಳು ಸೇರಿ ರಚಿಸಿದ್ದರು. ಧಾರ್ಮಿಕ ನಾಯಕರು ಯಾವ ಮಹಿಳೆಯನ್ನು ಚಂಚಲ ಚಿತ್ತರು ಎಂದು ಘೋಷಿಸುತ್ತಿದ್ದರೋ ಅವರನ್ನು ಸಾರ್ವಜನಿಕವಾಗಿ ಮಾರಾಟ ಮಾಡಲಾಗುತ್ತಿತ್ತು. ಬ್ರಾಹ್ಮಣ ಹಾಗೂ ಕೋಮಟಿ ಸ್ತ್ರೀಯರನ್ನು ಜಾತಿ ಬಹಿಷ್ಕಾರ ಮಾಡಿ ಓಡಿಸಲಾಗುತ್ತಿತ್ತು. ಹಾಗೂ ಅವರ ತೋಳ ಮೇಲೆ ಸೂಳೆಯರೆಂಬ ಹಚ್ಚೆಯನ್ನು ಹಾಕಲಾಗುತ್ತಿತ್ತು.[೮೨] ಈ ರೀತಿಯಾಗಿ ಶಿಕ್ಷೆ ಕೊಡುವ ಅಧಿಕಾರಿಗಳು ವರ್ತಕ ಸಮುದಾಯದ ಸೆಟ್ಟಿಗಳು ನ್ಯಾಯ ತೀರ್ಮಾನ ಕೊಡುತ್ತಿದ್ದರು.

ದಾಯಾದಿ ಕಲಹವನ್ನು ಸೆಟ್ಟಿ ಕುಲದವರು ಪರಿಹರಿಸಿರುವ ಕ್ರಿ.ಶ.೧೪೩೧ರ ವಿಜಯನಗರದ ದೇವರಾಯನ ಕಾಲದ ಶಾಸನದಲ್ಲಿ ಮಹಾಪ್ರಧಾನಿ ತಿಪ್ಪಂಣ ಒಡೆಯರು ಹೊಂನಪುರದ ರಾಜಧಾನಿಯಿಂದ ಹಲುವೆ, ತುಳು, ಕೊಂಕಣ ರಾಜ್ಯಗಳನ್ನು ಆಳುತ್ತಿರುತ್ತಾನೆ. ಇವನ ಅವಧಿಯಲ್ಲಿ ಸೋಮತಾರಕ್ಕುರರಿಗೂ ಮತ್ತು ಬೊಂಮಿಸೆಟ್ಟಿಯ ಅಳಿಯ ಹೊಸಗೇರಿಯ ಬೀರಂಣನಾಯಕ ಹಾಗೂ ಅವನ ಅಳಿಯ ಬೊಂಮಂಣ ನಾಯಕರಿಗೂ ದಾಯಾದಿ ಕಲಹವನ್ನು ಪರಿಹರಿಸಿ ವೊಡಂಬಡಿಕೆಯನ್ನು ಮಾಡಿ ವಿಷಯವನ್ನು ಈ ಶಾಸನವು ತಿಳಿಸುತ್ತದೆ.[೮೩] ಕ್ರಿ.ಶ.೧೪೧೧ರ ಸೀಮಂತೂರಿನ ಜನಾರ್ಧನ ದೇವಸ್ಥಾನದ ಎದುರು ಇರುವ ಶಾಸನ. ಇದರಂತೆ ಕೋಟ್ಯಾನ ಹೆಗ್ಗಡೆ ಸಹೋದರ ರಾಚಿಸೆಟ್ಟಿ ಮತ್ತು ಹರಿಸೆಟ್ಟರು ತಮ್ಮ ತಮ್ಮೊಳಗಿನ ಕೃಷಿ ಭೂಮಿಯ ಗಡಿ ವಿವಾದಗಳನ್ನು ಜನಾರ್ಧನ ದೇವರ ಸಮ್ಮುಖದಲ್ಲಿ ತೀರ್ಮಾನಿಸಿಕೊಂಡರು.[೮೪] ಬಾರಕೂರಿನ ಮೂಡುಕೇರಿ ಸೋಮನಾಥ ದೇವಾಲಯದಲ್ಲಿ ವಸಂತ ಶೆಟ್ಟರಿಂದ ಪತ್ತೆಯಾದ ತಾಮ್ರಶಾಸನವು ಪಿತ್ರಾರ್ಜಿತ ಆಸ್ತಿಯನ್ನು ಕುಟುಂಬದವರು ಪಾಲು ಮಾಡಿಕೊಂಡ ವಿವರ ತಿಳಿಸುತ್ತದೆ. ೧೫ನೇ ಶತಮಾನಕ್ಕೆ ಸರಿ ಹೊಂದುವ ಈ ತಾಮ್ರಶಾಸನ ಉಂಗುಪಳ್ಳಿ ಮುಕ್ಕಾಲಟ್ಟಿ ಕುಂಜರಣ್ಣ ಮತ್ತು ಆಲಂಜ

ಚಾಂತಾರದ ಮಧ್ಯಸ್ಥರಾದ ಈಶ್ವರ ಸಮ್ಮುಖದಲ್ಲಿ ಬೊಮಣ್ಣ ಸೆಟ್ಟಿಯ ಮಗ ರುದ್ರಪ್ಪಸೆಟ್ಟಿ, ಜೋಗಾರು ಯೆಕ್ಕಿಸೆಟ್ಟಿಯರು, ಹೆದ್ದಾರಿಯ ಮಂಗಿ ಸೆಟ್ಟಿಯ ಮಗ ಮಾದಪ್ಪ ಸೆಟ್ಟಿ ವಿಠಲಸೆಟ್ಟಿಯ ಮಗ ನಾಗಪ್ಪ ಸೆಟ್ಟಿ ಇವರುಗಳು ತಮ್ಮ ಆಸ್ತಿಯನ್ನು ಪಾಲುಮಾಡಿಕೊಂಡರು. ತಮ್ಮ ತಮ್ಮಲ್ಲಿ ಉಂಟಾದ ವ್ಯಾಜ್ಯಗಳಿಗೆ ತಾವೇ ನ್ಯಾಯ ತೀರ್ಮಾನ ಮಾಡಿಕೊಳ್ಳುತ್ತಿದ್ದರೆಂಬ ಅಂಶ ಈ ಶಾಸನದಿಂದ ತಿಳಿಯುತ್ತದೆ.

ಬುಕ್ಕರಾಯನ ಶಾಸನ ಕ್ರಿ.ಶ.೧೩೬೮

೧ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ॥ ಷಾಷಾಂಡಸಾಗರ ಮಹಾ-

೨ ವಾಮುಖಾಗ್ನಿ ಶ್ರೀರಂಗರಾಜಚರಣಾಂಬುಜಮೂಲದಾಸ ಶ್ರೀವಿಷ್ಣು

೩ ಲೋಕಮಣಿ ಮಂಟಪಮಾರ್ಗ್ಗದಾಯೀ ರಾಮಾನುಜೋ ವಿಜಯತೇ ಯತಿ-

೪ ರಾಜರಾಜ ॥ ಶತವರ್ಷ ೧೨೯೦ನೆಯ ಕೀಲಕ ಸಂವತ್ಸರದ ಭಾದ್ರಪ-

೫ ದ ಶು ೧೦ ಬ್ಬ ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಅರಿರಾಯ ವಿಭಾಡ ಭಾ

೬ ಷೆಗೆತಪ್ಪುವರಾಯರಗಂಡ ಶ್ರೀ ವೀರಬುಕ್ಕರಾಯನು ಪ್ರಿಥ್ವೀರಾ-

೭ ಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾದ ವಾದಲ್ಲಿ ಆ

೮ ನೆಯಗೊಂದಿ ಹೊಸಪಟ್ಟಣ ಪೆನುಗೊಂಡೆ ಕಲ್ಲೆಹದಪಟ್ಟಣ ವೊಳಗಾದ ಸ-

೯ ಮಸ್ತನಾಡ ಭವ್ಯಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅಂನ್ಯಾಯ

೧೦ ಗಳನೂ ಬಿಂನಹಂ ಮಾಡಲಾಗಿ ಕೋವಿಲ್ ತಿರುಮಲೆ ಪೆರುಮಾಳ್ ಕೋವಿಲ್ ತಿರುನಾ

೧೧ ರಾಯಣಪುರ ಮುಖ್ಯವಾದ ಸಕಳಾಚಾರ್ಯರೂ ಸಕಳ ಸಮಇ ಗಳೂ ಸಕಳ ಸಾ

೧೨ ತ್ವಿಕರೂ ವೋಷ್ಟಿಕರು ತಿರುಪಣಿ ತಿರುಪಿಡಿ ತಂಣ್ಣೀರವರು ನಾಲ್ವತ್ತೆಂಟು ಜನಂಗ

೧೩ ಳು ಸಾವಂತ ಬೋವಕ್ಕಳುತಿರಿಕುಲಜಾಂಬುವಕುಲವೊಳಗಾದ ಹದಿನೆಂಟುನಾ

೧೪ ಡ ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವ ದರ್ಶನಕ್ಕೆಊ ಜೈನ ದರ್ಶನಕ್ಕೆ

೧೫ ಭೇದವಿಲ್ಲವೆಂದು ರಾಯನು ವೈಷ್ಣವರ ಕೈಯ್ಯಲು ಜೈನರ ಕೈವಿಡಿದು ಕೊಟ್ಟು ಯೀ ಜೈ-

೧೬ ನ ದರ್ಶನಕ್ಕೆ ಪೂರ್ವಮರಿಯಾದೆಯಲು ಪಂಚಮಹಾ ವಾದ್ಯಂಗಳೂ ಕಳಶಲು ಸ-

೧೭ ಲುಉದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿ ವೃದ್ಧಿಯಾದರೂ ವೈಷ್ಣವ

೧೮ ಹಾನಿವೃದ್ಧಿಯಾಗಿ ಪಾಲಿಸುವರು ಯೀ ಮರ್ಯಾದೆಯಲು ಯಲ್ಲಾರಾಜ್ಯ ದೊಳಗುಳ್ಳ-

೧೯ ತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು ಚಂದ್ರಾರ್ಕ್ಕ ಸ್ಥಾಯಿ-

೨೦ ಯಾಗಿ ವೈಷ್ಣ ಸಮಯಲು ಜೈನದರ್ಶನ ರಕ್ಷಿಸಿಕೊಂಡು ಬಹೆಉ ವೈಷ್ಣವರೂ ಜೈ

೨೧ ನರೂ ವೊಂದು ಭೇದವಾಗಿ ಕಾಣಲಾಗದು ಶ್ರೀ ತಿರುಮಲೆಯ ತಾತಯ್ಯಂಗಳು

೨೨ ಸಮಸ್ತರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳಗುಳದ ತೀರ್ಥ್ಥದಲ್ಲಿ ವೈಷ್ಣವ

೨೩ ಅಂಗರಕ್ಷಗೋಸುಕ ಸಮಸ್ತರಾಜ್ಯದೊಳುಗುಳ್ಳಂತಹ ಜೈನ(ರು) ಬಾಗಿಲುಗಟ್ಟಳೆ

೨೪ ಯಾಗಿ ಮನೆಮನೆಗೆ ವರ್ಷಕ್ಕೆ ೧ ಹಣ ಕೊಟ್ಟು ಆ ಯೆತ್ತಿದ ಹೊಂನ್ನಿಂಗೆ ದೇವರ

೨೫ ಅಂಗರಕ್ಷೆಗೆ ಯಿಪ್ಪತ್ತಾಳನೂ ಸಂತವಿಟ್ಟು ಮಿಕ್ಕ ಹೊಂನ್ನಿಂಗೆ ಜೀರ್ಣ್ನಜಿ-

೨೬ ನಾಲಯಂಗಳಿಗೆ ಸೊದೆಯನಿಕೂದು ಯಿ ಮರಿಯಾದೆಯಲು ಚಂದ್ರರ್ಕ್ಕ-

೨೭ ರುಳ್ಳನಂ ತಪ್ಪಲೀಯದೆ ವರ್ಷ ವರ್ಷಕ್ಕೆ ಕೊಟ್ಟು ಕೀರ್ತಿಯನೂ ಪುಣ್ಯಂವನೂ ಉಪಾ-

೨೮ ಜಿರ್ಸಿಕೊಂಬುದು ಯಿ ಮಾಡಿದ ಕಟ್ಟಳೆಯನು ಅವನೊಬ್ಬನು ಮೀಱುದವನು ರಾ-

೨೯ ಜದ್ರೋಹಿ ಸಂಘ ಸಮುದಾಯಕ್ಕೆ ದ್ರೋಹಿ ತಪಸ್ವಿಯಾಗಲಿ ಗ್ರಾಮಿಣಿ ಯಾಗಲಿ ಯಿ

೩೦ ಧರ್ಮ್ಮವ ಕೆಡ್ಸಿದರಾದಡೆ ಗಂಗೆಯ ತಡಿಯಲಿ ಕಪಿಲೆಯನೂ ಬ್ರಾಹ್ಮಣನನೂ ಕೊಂ-

೩೧ ದ ಪಾಪದಲ್ಲಿ ಹೋಹರು ॥ಶ್ಲೋ॥ ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂ-

೩೨ ಧರಾ ಷಷ್ಟಿವರ್ಷ ಸಹಸ್ರಾಣಿ ಮಿ(ವಿ)ಷ್ಟಾಯಾಂ ಜಾಯತೇ ಕ್ರಿಮಿ॥

ಮೇಲ್ಭಾಗದಲ್ಲಿ

೨೨ ಕಲ್ಲೆಹದ ಹವ್ವಿಸೆಟ್ಟಿಯ ಸುಪುತ್ರ ಬಸುವಿಸೆಟ್ಟಿ ಬುಕ್ಕರಾಯರಿಗೆ ಬಿಂ ನ ಹಂ ಮಾಡಿ ತಿರುಮಲೆಯ ತಾತಯ್ಯಂ

೨೪ ಗಳ ಬಿಜಯಂಗೈಸಿ ತರಂದು ಜೀರ್ಣ್ಣೋದ್ಧಾರವ ಮಾಡಿಸಿದರು ಉಭಯ
ಸಮಯಉೂ ಕೂಡಿ ಬುಸುವಿಸೆಟ್ಟಿಯರಿಗೆ ಸಂಘ

೨೫ ನಾಯ್ಕಪಟ್ಟವ ಕಟ್ಟಿದರು

ಈ ಶಾಸನದ ಕಾಲ ಕ್ರಿ.ಶ.೧೩೬೮. ಶ್ರವಣ ಬೆಳಗೊಳದ ಭಂಡಾರ ಬಸದಿಯ ಪೂರ್ವ ಭಾಗದಲ್ಲಿ ಈ ಶಾಸನವನ್ನು ನಿಲ್ಲಿಸಿದೆ. ಈ ಶಾಸನಕ್ಕಿಂತಲೂ ಪೂರ್ವದಲ್ಲಿ ಹಾಕಿಸಿದ ಶಾಸನ ಮಾಗಡಿ ತಾಲೂಕಿನ ಕಲ್ಯ ಗ್ರಾಮದಲ್ಲಿದೆ. ಇದು ಶ್ರವಣಬೆಳಗೊಳದ ಶಾಸನಕ್ಕಿಂತಲೂ ಚಿಕ್ಕದಾಗಿದೆ. ಈ ಶಾಸನದ ಮುಂದುವರಿದ ರೂಪವೇ ಶ್ರವಣ ಬೆಳಗೊಳದ ಪ್ರಸ್ತುತ ಶಾಸನ. ಈ ಶಾಸನವನ್ನು ಹಾಕಿಸಿದ ಅರಸ ವಿಜಯನಗರದ ಸಂಗಮ ವಂಶದ ಅರಸ ಬುಕ್ಕರಾಯ, ಈ ಶಾಸನದ ಉದ್ದೇಶ ವೈಷ್ಣವ ಮತ್ತು ಜೈನ ಧರ್ಮಗಳ ನಡುವೆ ನಡೆದ ಸಂಘರ್ಷವನ್ನು ತಿಳಿಗೊಳಿಸಿ ಸಂಧಾನ ಮಾಡಿದ ವಿಷಯವನ್ನು ತಿಳಿಸುವುದು. ಈ ಕಾರಣಕ್ಕೆ ಕರ್ನಾಟಕದ ಧರ್ಮಸಮನ್ವಯದ ವಿಷಯವನ್ನು ತಿಳಿಸುತ್ತಿದ್ದರೂ ಅರಸರು ವೈಷ್ಣವ ಪಕ್ಷಪಾತಿಯೆಂಬುದಾಗಿ ತಿಳಿದುಬರುತ್ತದೆ. ಈ ವಿಷಯವನ್ನು ನಂತರ ನೋಡೋಣ.

ಕ್ರಿ.ಶ.೧೨೯೪ರಲ್ಲಿ ಮುಸ್ಲಿಂ ದೊರೆ ಅಲ್ಲಾವುದ್ದೀನನ ದಾಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಆಗ ದಕ್ಷಿಣ ಭಾರತದಲ್ಲಿ ಪ್ರಬಲವಾಗಿದ್ದ ರಾಜ್ಯಗಳು ಎರಡು ಮಾತ್ರ. ಒಂದು ಹೊಯ್ಸಳ ಸಾಮ್ರಾಜ್ಯ, ಎರಡು ದೇವಗಿರಿಯ ಯಾದವ ಸಾಮ್ರಾಜ್ಯ. ಓರಂಗಲ್ಲಿನ ಕಾಕತೀಯರೂ ಇವರ ಜೊತೆಗಿದ್ದರು. ಈ ಮೂರು ರಾಜ್ಯಗಳು ಪರಕೀಯರ ದಾಳಿಗೆ ಒಳಗಾದವು. ಇದೇ ಸಮಯದಲ್ಲಿಯೇ ಹಂಪೆಯ ಬಳಿಯ ಕುಮ್ಮಟದುರ್ಗದ ಪಾಳೆಯಗಾರರೂ ಇವರ ದಾಳಿಗೆ ಒಳಗಾದರು. 'ಕುಮಾರ ರಾಮನ ಸಾಂಗತ್ಯ' ಇದಕ್ಕೆ ಆಧಾರವಾಗಿದೆ.

ಕ್ರಿ.ಶ.೧೩೩೬ರ ಸುಮಾರಿಗೆ ಹಂಪೆಯಲ್ಲಿ ಹಕ್ಕ-ಬುಕ್ಕರು ಈ ದಾಳಿಯ ಪರಿಣಾಮವನ್ನೆದುರಿಸಲು ಸ್ವಂತವಾದ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು. ಇದರ ಸ್ಥಾಪನೆಯ ಉದ್ದೇಶವೇ ಮುಸಲ್ಮಾನರಿಂದ ದೇಶವನ್ನು ರಕ್ಷಿಸುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಬುಕ್ಕನು ಎರಡು ಪ್ರಬಲ ಧರ್ಮಗಳಾದ ಜೈನ ಮತ್ತು ವೈಷ್ಣವ ಧರ್ಮದ ನಡುವೆ ಸಮನ್ವಯಕ್ಕೆ ಪ್ರಯತ್ನಿಸಿದ್ದು ಅರ್ಥಪೂರ್ಣವಾಗಿದೆ. ಬುಕ್ಕನು ಕ್ರಿ.ಶ.೧೩೫೭ ರಿಂದ ೧೩೭೭ರವರೆಗೆ ಅರಸನಾಗಿದ್ದನು. ಇವರ ಸೊಸೆ ಬರೆದಿರುವ 'ಮಧುರ ವಿಜಯ' ಕೃತಿಯಲ್ಲಿ

ಇವನು ಕೃಷ್ಣನ ಅವತಾರವೆಂದೂ, ಪ್ರಪಂಚವು ಮ್ಲೇಚ್ಛರಿಂದ ತುಂಬಿದಾಗ, ಪ್ರಪಂಚವನ್ನು ಅವರಿಂದ ಬಿಡುಗಡೆ ಮಾಡಲು ಕೃಷ್ಣನು, ಬುಕ್ಕರಾಯ ರೂಪದಲ್ಲಿ ಅವತರಿಸಿದನೆಂದು ಸಾಹಿತ್ಯದಲ್ಲಿ ವರ್ಣನೆಯಿದೆ. 'ದಕ್ಷಿಣ ಭಾರತದಲ್ಲಿ ಬುಕ್ಕನ ಶ್ರವಣಬೆಳಗೊಳದ ಶಾಸನ ಹೋಲುವಂತಹ ಇನ್ನೊಂದು ಶಾಸನವಿಲ್ಲ' ಎಂದು ಹೆರಾಸ್ ಹೇಳುತ್ತಾನೆ.

ಈ ಶಾಸನದಲ್ಲಿ ಸೂಚಿತವಾಗಿರುವ ಮತಗಳ ಘರ್ಷಣೆ ಕರ್ನಾಟಕಕ್ಕೆ ಹೊಸತೇನೂ ಅಲ್ಲ. ಬೇರೆ ಬೇರೆ ಕಡೆಗಳಲ್ಲಿ ಮತ ಸಂಘರ್ಷಗಳು ನಡೆದಿವೆ. ಕ್ರಿ.ಶ.೧೬೩೮ರ ಬೇಲೂರು ತಾಲೂಕಿನ ಬಸ್ತಿಹಳ್ಳಿಯ ಪಾರ್ಶ್ವನಾಥ ಬಸದಿಯ ಬಳಿಯ ಶಾಸನದಲ್ಲಿ ಹುಚ್ಚಪ್ಪ ದೇವರು ಎಂಬುದನ್ನು ಲಿಂಗಮುದ್ರೆಯನ್ನು ಹಾಕಲಾಗಿ ಅಂದರೆ ಶಿವಲಿಂಗವನ್ನು ಪ್ರತಿಷ್ಠಾಪಿಸಲು ಮುಂದಾದಾಗ ಜೈನ ಮುಖಂಡರು ವೀರಶೈವ ಮುಖಂಡರಿಗೆ ಮನವಿ ಮಾಡಿಕೊಂಡು ಆ ಬಸದಿಯನ್ನು ಮತ್ತೆ ಹಿಂದಕ್ಕೆ ಪಡೆದ ವಿಷಯವಿದೆ.

ಸಂಪ್ರದಾಯದಂತೆ ಶಾಸನ ಸ್ವಸ್ತಿ ಎಂದು ಪ್ರಾರಂಭವಾಗುತ್ತದೆ. ಶ್ರೀರಂಗರಾಜ(ವಿಷ್ಣು) ಚರಣ ಕಮಲದ ಮೂಲ ದಾಸ ರಾಮಾನುಜನಿಗೆ ಶ್ರೇಯಸ್ಸಾಗಲಿ, ಶ್ರೀ ವೀರಬುಕ್ಕರಾಯನು ರಾಜ್ಯವನ್ನು ಆಳುತ್ತಿರುವಾಗ ಜೈನರಿಗೂ ವೈಷ್ಣವರಿಗೂ ಜಗಳವಾಯಿತು. ಈ ಜಗಳಕ್ಕೆ ಕಾರಣವೇನೆಂದು ಈ ಶಾಸನವಾಗಲಿ ಅಥವಾ ಕಲ್ಯದ ಶಾಸನವಾಗಲಿ ಏನನ್ನೂ ತಿಳಿಸುವುದಿಲ್ಲ.

ಆನೆಗೊಂದಿ ವಿಜಯನಗರ, ಪೆನುಗೊಂಡೆ, ಕಲ್ಯದ ಜೈನರು ಆ ಬುಕ್ಕರಾಯನಿಗೆ ವೈಷ್ಣವರು ಮಾಡುತ್ತಿರುವ ಅನ್ಯಾಯವನ್ನು ತಿಳಿಸುತ್ತಾರೆ. ಕಲ್ಯದ ಶಾಸನದಲ್ಲಿ ವೈಷ್ಣವರು ಅನ್ಯಾಯದಿಂದ ಜೈನರನ್ನು ಕೊಲ್ಲುತ್ತಿದ್ದರೆಂದು ಹೇಳಿದೆ. ಆಗ ಬುಕ್ಕರಾಯನು ಶ್ರೀರಂಗಪುರು, ತಿರುಪತಿ, ಕಂಚಿ, ಮೇಲುಕೋಟೆಯಿಂದ ಸಾತ್ವಿಗಳನ್ನು, ವೋಷ್ಟಿಕರನ್ನು, ಸಾಧುಗಳನ್ನು, ತಿರುಪಾಣಿ, ತಿರುವಡಿ (ವಿಷ್ಣು ದೇವಾಲಯಗಳಲ್ಲಿ ನೀರು ಸರಬರಾಜು ಮಾಡುವವನು) ನಾಲ್ವತ್ತೆಂಟು ಜನಗಳು, ತರುಕುಲ, ಜಾಂಬವ ಕುಲ(ಹರಿಜನರು) ಹದಿನೆಂಟು ನಾಡ ಶ್ರೀ ವೈಷ್ಣವರನ್ನು ಕರೆದು ಜೈನರಿಗೂ ವೈಷ್ಣವರಿಗೂ ಭೇದವಿಲ್ಲ ಎಂದು ಹೇಳಿ ಎರಡೂ ಧರ್ಮದವರ ಕೈಗಳನ್ನು ಹಿಡಿಸಿ ಪಂಚಮಹಾ ವಾದ್ಯಗಳನ್ನು, ಕಲಶಗಳನ್ನು ಮೊಳಗಿಸಿದರು. ಜೈನ ಮತದವರಿಗೆ ಹಾನಿಯಾದರೆ ವೈಷ್ಣವರಿಗೂ ಹಾನಿಯಾದಂತೆ ಎಂದು ಹೇಳಿ ಇಬ್ಬರನ್ನೂ ಒಂದು ಮಾಡಿ ಶಾಸನವನ್ನು ಹಾಕಿಸಿದನು.

ವೈಷ್ಣವರು ಜೈನರು ಒಂದೇ. ಅವರಲ್ಲಿ ಭೇದವಿಲ್ಲದೆ ಒಂದಾಗಿ ಬಾಳಲಿ ಎಂದಿದೆ. ತಿರುಮಲೆಯ ತಾತಯ್ಯಗಳು (ವೈಷ್ಣವ ಗುರು) ಸಮಸ್ತ ಭಕ್ತರ ಒಪ್ಪಿಗೆಯಿಂದ ಶ್ರವಣಬೆಳಗೊಳದಲ್ಲಿ ವೈಷ್ಣವರ ರಕ್ಷೆಗೋಸ್ಕರ ಸಮಸ್ತ ರಾಜ್ಯದ ಜೈನರು ಮನೆಯೊಂದಕ್ಕೆ ವರ್ಷಕ್ಕೆ ಒಂದು ಹಣ ಕೊಡಬೇಕೆಂದು, ಆ ರೀತಿ ಸಂಗ್ರಹವಾದ ಹಣದಲ್ಲಿ ವೈಷ್ಣವ ದೇವರ ರಕ್ಷಣೆಗೆ ಇಪ್ಪತ್ತು ಆಳುಗಳನ್ನು ನೇಮಿಸಿಕೊಳ್ಳಬೇಕು. ಮಿಕ್ಕ ಹಣದಲ್ಲಿ ಹಾಳಾದ ಬಸದಿಗಳನ್ನು ಸರಿ ಮಾಡಿಸ ಬೇಕು. ಈ ಕಟ್ಟಳೆಯನ್ನು ಪಾಲಿಸಿಕೊಂಡು ಬಂದು ಕೀರ್ತಿಯನ್ನು ಪುಣ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ನಿಯಮ ಮಾಡುತ್ತಾರೆ. ಈ ನಿಯಮವನ್ನು ಯಾರೂ ಮೀರಬಾರದು. ಹಾಗೆ ಮೀರಿದವರು ರಾಜದ್ರೋಹಿ, ಧರ್ಮಗುಂಪಿಗೆ ದ್ರೋಹಿ, ತಪಸ್ವಿಯಾಗಲಿ, ಹಳ್ಳಿಯವರಾಗಲಿ ಈ ನಿಯಮವನ್ನು ಹಾಳು ಮಾಡಿದರೆ (ಮೀರಿದರೆ) ಗಂಗೆಯ ನದಿ ಬಳಿ ಹಸುಗಳನ್ನು, ಬ್ರಾಹ್ಮಣರನ್ನು ಕೊಂದ ಪಾಪ ಬರುತ್ತದೆ ಎಂದು ಶಾಸನ ಹೇಳಿದೆ. ಇದೇ ಸಮಯದಲ್ಲಿ ಕಲ್ಯದ ಹರ್ವ್ವಿಸೆಟ್ಟಿಯ ಸುಪುತ್ರ ಬಸುವಿಸೆಟ್ಟಿಯು ಬುಕ್ಕರಾಯರಿಗೆ ವಿನಂತಿಸಿಕೊಂಡು ತಿರುಮಲೆ ತಾತಯ್ಯನವರ ಸನ್ನಿಧಿಯಲ್ಲಿ ಈ ಸಂಧಾನ ಮಾಡಿಸುತ್ತಾನೆ. ಇದರಿಂದ ಎರಡೂ ಧರ್ಮದವರೂ ಸೇರಿ ಬಸುವಿ ಸೆಟ್ಟಿಗೆ ಸಂಘನಾಯ್ಕ ಪಟ್ಟವನ್ನು(ಮುಖಂಡ ಪಟ್ಟ) ಕಟ್ಟುವರು.

ಹೀಗೆ ವೈಷ್ಣವ ಧರ್ಮ ಮತ್ತು ಜೈನಧರ್ಮಗಳು ಯಾವ ರೀತಿ ತಮ್ಮ ಸಂಘರ್ಷವನ್ನು ಸಂಧಾನ ರೂಪದಿಂದ ಪರಿಹರಿಸಿಕೊಂಡರೆಂದು ತಿಳಿದುಬರುತ್ತದೆ. ಆದರೆ ಈ ಶಾಸನದಲ್ಲಿ ಮತ್ತೊಂದು ಅಂಶವನ್ನು ಮನಗಾಣಬಹುದು. ಇಲ್ಲಿ ಅನ್ಯಾಯವಾಗಿದೆಯೆಂದು ದೂರು ಕೊಟ್ಟವರು ಜೈನರು. ವೈಷ್ಣವರಿಂದ ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾದವರು ಇವರು. ಅರಸನು ಇವರ ಮನವಿಯಂತೆ ಸಂಧಾನ ಮಾಡಿದರೂ ಕೂಡ ಅವನು ವೈಷ್ಣವ ಪಕ್ಷಪಾತಿಯಾಗಿದ್ದನೆಂದು ತಿಳಿಯುತ್ತದೆ. ಏಕೆಂದರೆ ಇಲ್ಲಿ ಹಣ ಸಂಗ್ರಹಿಸಿ ಕೊಡುವವರು ಜೈನರು. ಮನೆಮನೆಗೆ ಬಂದು ಹೊನ್ನನ್ನು ಸಂಗ್ರಹಿಸಿ ಕೊಡಬೇಕೆಂದು ತಿರುಮಲೆ ತಾತಯ್ಯ ಕಟ್ಟಳೆ ವಿಧಿಸುವರು. ಈ ಹಣದ ಹೆಚ್ಚಿನ ಉಪಯೋಗವಾಗುವುದು ವೈಷ್ಣವ ದೇವಾಲಯಗಳ ಅಂಗರಕ್ಷಕ ಪಡೆಗೆ. ಮಿಕ್ಕ ಹಣದಲ್ಲಿ ಜೈನರ ಬಸದಿಗಳ ಜೀರ್ಣೋದ್ಧಾರ ಮತ್ತು ಇದೇ ಅವಧಿಯಲ್ಲಿ ಸಂಘ ನಾಯಕನ ಪಟ್ಟ ವೈಷ್ಣವ ಬಸದಿ ಸೆಟ್ಟಿಯ ಪಾಲಾಗುತ್ತದೆ. ಇಲ್ಲಿ ಬಹುಸಂಖ್ಯಾತರು ಅಲ್ಪಸಂಖ್ಯಾತ ಸಮುದಾಯದ ಮೇಲೆ ಹೇಗೆ ವ್ಯವಸ್ಥಿತವಾಗಿ ಹಿಡಿತ

ಹೊಂದುತ್ತಿದ್ದರೆಂದು ತಿಳಿಯುತ್ತದೆ. ಈ ಕಾಲಕ್ಕಾಗಲೆ ಅಲ್ಪಸಂಖ್ಯಾತರಾಗಿದ್ದ ಜೈನ ಧರ್ಮೀಯರು ತಮ್ಮ ಉಳಿವಿಗೆ ಹೇಗೆ ರಾಜಿ ಮಾಡಿಕೊಳ್ಳುತ್ತಿದ್ದರೆಂಬ ಅಂಶ ಇದರಿಂದ ತಿಳಿದುಬರುತ್ತದೆ. ಅಧಿಕಾರಶಾಹಿವರ್ಗ ಬಹುಸಂಖ್ಯಾತರ ಪರವಾಗಿಯೇ ಯಾವತ್ತೂ ಇರುತ್ತಿತ್ತೆಂದು ಈ ಶಾಸನದಿಂದ ದೃಢಪಡುತ್ತದೆ.

ವ್ಯವಹಾರ ಮತ್ತು ವಾಸಿಸುವ ಕೇರಿಯ ಸೀಮಾ ಸಂಬಂಧದ ತಂಟೆಯಲ್ಲಿ ವರ್ತಕರು ಘರ್ಷಣೆಗೆ ಇಳಿಯುತ್ತಿದ್ದರು. ಆದರೆ ಅದು ಹಿಂಸಾಚಾರಕ್ಕೆ ತಿರುಗದಂತೆ ಎಚ್ಚರವಹಿಸಿ, ತಮ್ಮ ತಮ್ಮಲ್ಲಿ ಇಲ್ಲವೆ ಅರಸು-ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಿದ್ದರು. ಬಸರೂರ ಮೂಡಕೇರಿಯ ಹಲರು, ಸೆಟ್ಟಿಕಾರರು ಹಾಗೂ ಪಡುವಕೇರಿಯ ಹಲರು, ಸೆಟ್ಟಿಕಾರರಲ್ಲಿ ಉದ್ಭವಿಸಿದ ಕೇರಿಯ ಸೀಮಾತಂಟೆಯನ್ನು ತಮ್ಮ ತಮ್ಮಲ್ಲಿಯೇ ಬಿಡಿಸಿಕೊಂಡಿದ್ದಾರೆ.

ಈ ಸಂಗತಿ ತಿಳಿಸುವ ಬಸರೂರ ಶಾಸನದಲ್ಲಿ[೮೫] ಕೇರಿಯ ಸೀಮಾ ನಿರ್ಣಯದ ವಿವರ ಹೀಗಿದೆ. “ರಾಮಸೆಟ್ಟಿಯ ಮನೆಯಿಂದ ಮೂಡಣ ಎರಡು ಮನೆಯನು ಸರಿಭಾಗಿಯಾಗಿ ಹಂಚಿದಲ್ಲಿ ಮೂಡಣ ಮನೆಯನು ಮೂಡಕೇರಿ ಹಲರು ಬಾಳುವರು; ಪಡುವಣ ಮನೆಯ ಪಡುವಕೇರಿ ಯೀಸರಸೆಟಿಯರ ಮೊಮ್ಮಗ ದೇಉರಸೆಟಿ ಬಾಳುವನು. ಆ ಮನೆಯ ಕಲವಿತ್ತಿಲಿಂದ ತೆಂಕಲು ಮೂರುಕೋಲು ನೆಲನ ನೀರು ಹರಿವ ಓಣಿಯಾಗಿರಿಸುವರು. ಆ ಓಣಿಯಿಂ ತೆಂಕವರದೆಡಹನ ಗಣಪಿಸೆಟಿ ತೋಟದ ಚತುಸ್ಸೀಮೆ ಮೂಡ ಎತ್ತಿದ ಅಗಳಿಂ ಪಡುವ ತೆಂಕದೇವಿಯ ದೇವಾಲಯದ ಗಡಿಯಿಂದ ಬಡಗ ಪಡುವ ನಾರಣಸೆಟ್ಟಿ ಕಂಚಯಸೆಟಿಗಳ ಗಿಡಯಿಂ ಮೂಡ ಬಡಗ ನೀರ ಹರಿವ ಓಣಿಯಿಂ ತೆಂಕ ಯಿಂತೀ ಚತುಸ್ಸೀಮೆಯಿಂದೊಳಗಣ ತೋಟವನು ಸರಿಭಾಗಿಯಾಗಿ ಹಂಚಿಕೊಂಡು ಮೂಡಣ ಭಾಗಿಯ ತೋಟವ ಮೂಡಕೇರಿ ಹಲರು ಬಾಳುವರು. ಪಡವಣಭಾಗಿಯ ತೋಟವ ಪಡುವ ಕೇರಿಯಲಿ ಗಣಸಿಸೆಟ್ಟಿ ಬಾಳುವನು. ಬಸ್ತಿಯಿಂದ ಪಡುವಲು ಪೂರ್ವದಲು ನಡವ ಉಭಯ ಮಾರ್ಗದ ಹಾದಿಗೆಯಿಕ್ಕಿದ ತೋರಣ ಗಲ್ಲಿನೊಳಗಣ ಪ್ರಮಾಣನಲಿ ಹಾದಿಯನು ಮೂಡಕೇರಿಯ ಹಲರು ತಮಗೆ ಬಂದ ಮನೆಯ ಒಳಗೆ ಆ ಮನೆಯ ಹಿತ್ತಿಲ, ನೀರ ಓಣಿ ಪರ್ಯಂತ ಮುನ್ನಿನ ಪ್ರಮಾಣಿನಲು ಪಡುವಲ ದಾರಿಯ ಬಿಟ್ಟು ಮೂಡಕಡೆಯಲು ಮೂಡಣ ತೋರಣಗಲ್ಲಿಂ ಪಡುವಲ ಮೂಡಕೇರಿಯ ಹಲರು ಮನೆಯ ಕಟ್ಟಿ ಬಾಳುವರು. ಆ ಮನೆಯ ತಲವಿತ್ತಲ ನೀರ ಓಣಿಯಿಂ ತೆಂಕಣ ತೋಟವನು

ಸರಿಭಾಗಿಯಾಗಿ ಹಚ್ಚಿಕೊಂಡಲ್ಲಿ ಮೂಡಕೇರಿಯ ಹಲರು ತಮ್ಮ ಭಾಗಿಗೆ ಬಂದ ಮೂಢಭಾಗೆಯ ತಮ್ಮ ನೆಲನ ಒಳಗೆ ಪಡುವ ಕಡೆಯಲಿ ಮೂಡ ಪಡುವ ಹನ್ನೆರಡು ಕೋಲಗಲದ ಪ್ರಮಾಣಿನಲು ಹಾದಿಯ ಬಿಟ್ಟು ಮೂಡಣ ನೆಲವನು ಮೂಡಕೇರಿಯ ಹಲರು ಬಾಳುವರು.

ಆ ಹಾದಿ ಎಂಬುದು ತೆಂಕ ಬಡಗ ಸುದೇಶಿ ಪರದೇಶಿಗಳು ನಡವ ಉಭಯ ಮಾರ್ಗ್ಗದ(ವ). ದೇವಿಯ ಹಬ್ಬದ ಆದಿ ಅಯನಕೆ ಕುಜೆಯನು ಅಡುಕೆಯ ಮರನು ಮೂಡಕೇರಿಯ ಹಲರು ಅ ಹಾದಿಯಲು ಮೆಜೆಸಿಕೊಂಡು ಹೋಹರಲ್ಲದೇ ಪಡುವಕೇರಿಯ ಹಲರು ಕುಜೆಯನ್ನು ಅಡಕೆಯ ಮರನು ದೇವಿಯ ದೇವಾಲ್ಯಕೆ ಆ ಹಾದಿಯಲು ಮೆಜೆಸಿ ಕೊಂಡು ಹೋಗಸಲ್ಲದು. ಅಲ್ಲಿಂ ಮುಂದಣ ಹಾದಿಯ ವಿವರ-ದೇವಿಯ ದೇವಾಲ್ಯದ ಮೂಡಣ ಬಾಗಿಲ ಸರಿತಕ್ಕೆ ಆ ಬಾಗಿಲಿಂದ ಬಡಗಲು ಹಿಂದೆ ಇರ್‍ಸಿದ ಹಾದಿಯ ಹನ್ನೆರಡು ಕೋಲಗಲದ ಪ್ರಮಾಣಿಸಲು ಅಗಳು ಪರ್ಯಂತರ ಉಭಯ ಮಾರ್ಗ್ಗದ ಹಾದಿಯ ನಿರ್‍ಸಿವರು. ಮೂಡಕೇರಿ ಪಡುವಕೇರಿ ಸಂತವಾಗಿ ಮೂಡಕೇರಿ ಮನೆಯ ಕಟ್ಟಿ ಬಕ್ಕಲಾದ ಬಳಿಕ ದೇವ್ಯಿ ದೇವಾಲ್ಯದ ತೆಂಕಣ ಮಡಿಲ ಸರಿತದಿಂದ ಬಡಗಣ ಅಗಳನೂ ಪಡುವಕೇರ್‍ಯಿ ಹಲರು ತುಂಬಿಸಿಕೊಡುವರು। ಮತ್ತಂ ದೇವಿಯ ದೇವಾಲ್ಯದ ಮೂಡಬಾಗಿಲ ಸರಿತಕ್ಕೆ(ಕ್ಕಿ) ಅಗಳನೊಡದು ಅಗಳಿಂದ ಹೆಜಿಗೆ ಮೂಡ ಮೂವತ್ತೈದು ಕೋಲು ನೆಲವ ಬಿಟ್ಟು ತೆಂಕ ಮುಂತಾಗಿ ಹೆದ್ದಾರ್‍ಯಿ ಸಾಲಮಾಉ ಪರಿಯಂತರ ಉಭಯ ಮಾರ್ಗ ಹಾದಿಯನಿರಿಸಿದ ಕೈಯನೆತ್ತಿ ಬಾಳುವರು. ಆ ಸಾಲ ಮಾವಿನ ಬಡಗ ಕಡಿಂದ ಬಡಗ ಎಂಟುಕೋಲು ನೆಲಗುಳಿಉ ಮೂಡ ಮುಂತಾಗಿ ಧರೆಯನೆತ್ತಿಕೊಂಡು ಹೋಗಿ ತಮ್ಮಣ ಕೊಂಗ ತೋಡಿಸಿದ ಕೆಜೆಯ ಮೂಡಣ ದಡಸಹಿತ ಮತ್ತಂ ನೀರು ಹರಿವ ಬಚ್ಚಲ ಮೂಡಣ ದಡ ಸಹಿತ ತಮ್ಮಣ ಕೊಂಗನ ಗಡಿ ಪರ್ಯಂತರ ಮೂಡಣ ನೆಲವನು ಮೂಡಕೇರಿಯ ಹಲರು ಬಾಳುವರು. ಮತ್ತಂ ಬಾಲಗುಂಡಿಯ ಹಿತ್ತಿಲ ಚತುಸೀಮೆಯ ವಿವರ-ಮೂಡಲು ಅಗಳಿಂದ ಪಡುವಲು ತೆಂಕಲು ಸೆಟುವಾಡಿ ಯೀವರ ಸೆಟಿಯ ಗಡಿಯಿಂದ ಬಡಗಲು ಪಡುವಲು ಮಾಧವಸ್ವಾಮಿ ಅಯ್ಯನವರ ಕೈಯಲು ಕೊಂಡ ಹೊಸಕೇರ್‍ಯಿವರ ತಲಹಿತ್ತಲ ಗಡಿಯಿಂ ಮೂಡಲು ಬಡಗ ಕೋಲು ನೇಣನಿಕ್ಕಿ ಸರಿ ಭಾಗಿಯಾಗಿ ಹಂಚಿದಲಿ ಆ ಹಸಿಗೆಯ ಒಳಗೆ ಮೂಡಣ ಭಾಗಿ ಸಹಿತ ಮೂಡಣ ನೆಲವನು ಮೂಡಕೇರ್‍ಯಿ ಹಲರು ಬಾಳುವರು. ಪಡುವಣ

ಭಾಗಿಯ ದೇಉಸೆಟಿಯ ಮಗ ಬೀರಣ ಸೆಟಿ ನಾರಾಣಸೆಟಿಯ ಮಗ ಅಲ್ಲುಸೆಟಿಗಳು ಬಾಳುವರು. ಮತ್ತಂ ಬೀದಿಯ ಬಾಗಿಲ ಗದೆಯ ಗಡಿಯಿಂದ ಮೂಡಣ ನೆಲ ಹಿತ್ತಲು ತೋಟವನು ಮೂಡಕೇರ್‍ಯಿ ಹಲರು ಮುಟ್ಟಿಸಸಲ್ಲದು. ಮೂಡಕೇರಿ ಅವಿತಥಾವಾದಲ್ಲಿ ಪಡುವಕೇರ್‍ಯಿ ಹಲರು ಅಧೀನವಾಗಿ ಕಟ್ಟಿದ ಬೆವಹಾರದ ಲಾಭಲಬ್ದಿಯರು ಎರಡು ಕೇರ್‍ಯಿಲು ಕೊಳಸಲ್ಲದು" ಹೀಗೆ ಎರಡೂ ಕೇರಿಯವರು ಒಡಂಬಟ್ಟು ಶಾಸನ ಪ್ರಮಾಣಿನ ಮೂಲಕ ಜಗಳವನ್ನು ಇತ್ಯರ್ಥಗೊಳಿಸಿಕೊಂಡರು. ದೇವಾಲಯದ ಪೂರ್ವಕಟ್ಟಳೆ, ಮರ್ಯಾದೆ, ಉತ್ಸವ ಪ್ರಸಂಗದಲ್ಲಿ ಬಳಸುವ ಹಾದಿಯ ಹಕ್ಕುಗಳನ್ನಿಲ್ಲಿ ಅವಶ್ಯ ಲಕ್ಷಿಸಬೇಕು.

ನಾಡಿನ ಅಧಿಕಾರಿಗಳು ತಮಗೆ ಬೇಡವಾದ ವರ್ತಕರ ಹಾಗೂ ವರ್ತಕ ಸಂಘದ ಸಮಯ ಸಂಕೇತಗಳನ್ನು ರದ್ದುಗೊಳಿಸುತ್ತಿದ್ದರು. ವರ್ತಕರ ಅಧಿಕಾರ ವ್ಯಾಪ್ತಿಯಲ್ಲಿರುವ ಗ್ರಾಮಗಳ ಮೇಲೆ ದಾಳಿ ಮಾಡಿ ನಾಶಪಡಿಸುತ್ತಿದ್ದರು. ಆಗ ಚಕ್ರವರ್ತಿ ಮಧ್ಯ ಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದನು. ಹೀಗೆ ವರ್ತಕರು ಅಧಿಕಾರಿಗಳ ಉಪಟಳಕ್ಕೆ ಆಗಾಗ ತುತ್ತಾಗುತ್ತಿದ್ದುದರ ಉದಾಹರಣೆಯೊಂದು ಹೀಗಿದೆ; ಬಾರಕೂರ ರಾಜ್ಯದ ರಾಜ್ಯಪಾಲ ಮಹಾಬಳೇಶ್ವರ ಒಡೆಯ ಬಾರಕೂರ ಹತ್ತುಕೇರಿಯ ನಕರ, ಹಂಜಮಾನರಸೆಟ್ಟಿತನದ 'ಅನ್ಯಮಾನ್ಯ ಸಮಯ ಸಂಕೇತ'ಗಳನ್ನು ರದ್ದುಪಡಿಸಿದನು. ಸ್ಥಾನಪತಿ ಚಿಕ್ಕಣ್ಣನು ಈ ಸುದ್ಧಿಯನ್ನು ಚಕ್ರವರ್ತಿಗೆ ವಿವರಿಸಿದ. ಆಮೇಲೆ ಚಕ್ರವರ್ತಿ ಇಮ್ಮಡಿ ಬುಕ್ಕರಾಯನ ಆಜ್ಞೆಯ ಮೇರೆಗೆ ಪ್ರಧಾನ ಬಾಚಣ್ಣ ಒಡೆಯ ಬಾರಕೂರಿಗೆ ಹೋಗಿ ವಿಚಾರಣೆ ನಡೆಸಿ ಮಹಾಬಳದೇವನ ಅಸಭ್ಯ ವರ್ತನೆಯನ್ನು ಖಂಡಿಸಿದನಲ್ಲದೆ ನಕರ, ಹಂಜಮಾನದವರ ಪೂರ್ವದ ಸ್ಥಾನಮಾನ, ಸಮಯ ಸಂಕೇತಗಳನ್ನು ಪುನಃ ಕೊಡಿಸಿದ ಮತ್ತು ಅನುಭವಿಸಿದ ಕಷ್ಟ ಪರಿಹಾರಕ್ಕಾಗಿ ಅವರಿಗೆ ಭೂದಾನ ಮಾಡಿದ.[೮೬]

೩.೨.೩. ಇನ್ನಿತರ ದಾನ

ಸೆಟ್ಟಿ ಕುಲದವರು ಮಾಡಿದ ದಾನಧರ್ಮಗಳನ್ನು ದೇವಾಲಯ, ಅದರಲ್ಲೂ ಶೈವ ದೇವಾಲಯ, ವೈಷ್ಣವ ದೇವಾಲಯಗಳು, ಬಸದಿಗಳ ನಿರ್ಮಾಣ ನಿರ್ವಹಣೆಯ ಬಗ್ಗೆ ನೋಡಿದ್ದೇವೆ. ಸೆಟ್ಟಿಯರ ದಾನ ಧರ್ಮಗಳು ಇಷ್ಟಕ್ಕೆ ಸೀಮಿತವಾಗದೆ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಮಠ ಮಾನ್ಯಗಳಿಗೂ ಇವರು ನೀಡಿದ ಕೊಡುಗೆ

ಅಮೋಘವಾಗಿದೆ. ಕೊಡುಗೆಗಳನ್ನು ಇನ್ನಿತರ ದಾನಗಳು ಎನ್ನುವ ಉಪಪಠ್ಯದಲ್ಲಿ ನಾನು ಬಿಂಬಿಸಲು ಪ್ರಯತ್ನಿಸುತ್ತಿರುವೆನು. ಇದರಲ್ಲಿ ಸೆಟ್ಟಿಕುಲದವರು ರಾಜ, ರಾಣಿ, ಪ್ರಜೆ, ತಂದೆ, ತಾಯಿ, ಗುರು, ಸಮಾಜ, ನಾಡಿಗೆ ಒಳ್ಳೆಯದಾಗಲೆಂದು ದಾನ ಮಾಡಿರುವರು. ಇಂಥ ದಾನಗಳನ್ನು ಇಲ್ಲಿ ವಿವರಿಸಲಾಗಿದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಇವರ ಸೇವೆ ಅರ್ಪಿತವಾಗಿದೆ ಎನ್ನುವುದು ತಿಳಿದುಬರುತ್ತದೆ. ಈ ದಿಸೆಯಲ್ಲಿ ಸೆಟ್ಟಿ ಕುಲದವರು ಕೈಗೊಂಡ ಕಾರ್ಯಗಳು ಹೀಗಿವೆ.

ಕ್ರಿ.ಶ.೧೫೧೫ರ ಅವಧಿಯ ಮಲೆಬೆನ್ನೂರು ಶಾಸನದಲ್ಲಿ ಕೃಷ್ಣದೇವರಾಯನ ನಿರೂಪದಿಂದ ಶ್ರೀವೀರಭದ್ರ ಮಹಾರಾಯನು ಅರಸನಿಗೆ ಮತ್ತು ತನ್ನ ತಂದೆ ಪ್ರತಾಪರುದ್ರನಿಗೆ ಧರ್ಮವಾಗಲಿಯೆಂದು ಮಲೆಬೆನ್ನೂರು ಮತ್ತು ಲಿಂಗದಹಳ್ಳಿ ಸೀಮೆಯ ಮದುವೆ ಸುಂಕವನ್ನು ರದ್ದುಪಡಿಸಿರುವ ವಿಷಯವಿದೆ. ಈ ಮದುವೆಯ ಸುಂಕವನ್ನು ಅರಮನೆಗೆ ಸಲ್ಲಿಸುತ್ತಿದ್ದರೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಧರ್ಮಕ್ಕೆ ಬೆನ್ನೂರು, ಕೂಲಂಬಿ, ಕುಂಬಲೂರು, ನಿಟ್ಟೂರ ಗ್ರಾಮಗಳ ಶೆಟ್ಟರು, ಗಾವುಂಡರು ಸಹಕರಿಸಿದರೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೮೭]

ಈ ಮೇಲಿನ ಶಾಸನದ ಕಾಲದ್ದೇ ಇನ್ನೊಂದು ಶಾಸನದಲ್ಲಿ ಅಂದರೆ ಕ್ರಿ.ಶ.೧೫೧೫ ಡಿಸೆಂಬರ್ ೧೦ರ ಶಾಸನದ ಪ್ರಕಾರ ಕೃಷ್ಣರಾಯನ ಕೈಕೆಳಗಿನ ಅಧಿಕಾರಿಯಾದ ಸಾಳುವ ಗೋವಿಂದರಾಜ್ಯಯ್ಯನವರ ನಿರೂಪದಿಂದ ಅಧಿಕಾರಿಯೊಬ್ಬನು ದೊಡ್ಡಣ್ಣ ಸೆಟ್ಟರಿಗೆ ಮನೆಯ ನಿವೇಶನವನ್ನು ಅರಮನೆಗೆ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಬೇರೆ ಮನೆಯನ್ನು ದಾನವಾಗಿ ನೀಡಿದ ವಿಷಯವಿದೆ. ನಂಜೇದೇಪನೆಂಬುವನು ತೆರಿಗೆ ತೆರಲಾರದೆ ನಿವೇಶನದ ಪತ್ರವನ್ನು ಅರಮನೆಗೆ ಒಪ್ಪಿಸಿದನೆಂದು ಶಾಸನದಲ್ಲಿದ್ದು ಈ ನಿವೇಶನವು ಕರಸ್ಥಳದ ಬಸವಪವೊಡೆಯರ ಮನೆಯ ಬಳಿಯಿತ್ತೆಂದು ತಿಳಿದುಬರುತ್ತದೆ. ಹಿಂತಿರುಗಿಸಿದ ನಿವೇಶನಕ್ಕೆ ಪ್ರತಿಯಾಗಿ ಹತ್ತು ಅಂಕಣ ಜಾಗವನ್ನು ಕೊಡಲಾಗಿದೆ.[೮೮] ಕ್ರಿ.ಶ.೧೫೧೪ರ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ ಬಾರಕೂರ ರಾಜ್ಯವನ್ನು ಪಾಲಿಸುತ್ತಿದ್ದ ಅರಸನು ಬ್ರಾಹ್ಮಣರ ಭೋಜನಕ್ಕಾಗಿ ಹಲವು ಕಡೆ ಭೂಮಿದಾನ ಮತ್ತು ಅಕ್ಕಿಮೂಟೆಗಳನ್ನು ನೀಡಿದ ವಿವರವಿದೆ. ಶಂಕರಲಿಂಗಸೆಟ್ಟಿ, ಬೊಪ್ಪಪುರ ಹೆಸರುಗಳ ಉಲ್ಲೇಖವಿದೆ.[೮೯]

ಕ್ರಿ.ಶ.೧೪೦೬ರ ಶಾಸನವು ವ್ಯಾಪಾರಿ ರಾಮಿಸೆಟ್ಟಿಯ ಮಗ ಚಿಂಮಿಸೆಟ್ಟಿಯೆಂಬುವವನು ಸ್ವರ್ಗಸ್ಥನಾದ ವಿಷಯವನ್ನು ತಿಳಿಸುತ್ತದೆ. ಈ ಶಾಸನವನ್ನು ಸಾಯಿಸೆಟ್ಟಿ ಎಂಬುವವರು ಬರೆಸಿರುವರು.[೯೦] ಕ್ರಿ.ಶ.೧೪೨೯ರ ಶಾಸನದ ಪ್ರಕಾರ ಇಮ್ಮಡಿ ದೇವರಾಯನ ಕಾಲದಲ್ಲಿ ಪೆನುಗೊಂಡೆ ರಾಜ್ಯದ ಚೊಲಿಸೆಟ್ಟಿಹಳ್ಳಿಯನ್ನು ತ್ರೈಂಬಕಪುರವಾಗಿ ಪರಿವರ್ತಿಸಿ ಕಾಶ್ಯಪಗೋತ್ರದ ಯಜುಶಾಲೆಯ ಶ್ರೀ ಕ್ರಿಯಾಶಕ್ತಿ ಗುರುಗಳಿಗೆ ಒಂದು ವೃತ್ತಿದಾನ ನೀಡಿದ ವಿವರವಿದೆ.[೯೧] ಕ್ರಿ.ಶ.೧೪೩೩ರ ಪ್ರತಾಪ ದೇವರಾಯನ ಕಾಲದ ಈ ಶಾಸನದಲ್ಲಿ ದಾನ ನೀಡಿದ ಬಗ್ಗೆ ವಿವರಣೆಯಿದೆ.[೯೨] ಪ್ರತಾಪದೇವರಾಯನ ನಿರೂಪದಿಂದ ದೇವರಾಜವೊಡೆಯರು ಮಂಗಳೂರು ರಾಜ್ಯವನ್ನು ಪರಿಪಾಲಿಸುತ್ತಿರುತ್ತಾರೆ.

ಇವನ ಪ್ರಧಾನಿಯಾದ ದೇವರ್ಯ್ಯರು, ಇವನ ತಮ್ಮನಾದ ಬಿದಿರೆಯ ಅರಸ ತಿಂಮರ್ಯ್ಯರೂ ಸೇರಿಕೊಂಡು ಕಾಂತಾರದ ಬಡಗಣ ಮಠದ ಗುರುಗಳಾದ ರಾಜರಾಜೇಶ್ವರ ತೀರ್ಥ ಶ್ರೀಪಾದಂಗಳ ಭಿಕ್ಷಾಸ್ವಾಸ್ಥೆಗೆ ಕಾಂತಾರದ ನಾಡೊಳಗಿನ ಸಾಲಿಯ ಬಳಿಯ ಕೆಲವು ಗದ್ದೆಯ ಭಾಗಗಳನ್ನು ದಾನವಾಗಿ ನೀಡುವರು. ಸುಳಿಕಾಂಡುವಿನ ಅಳಿಯ ಪೀಲುಮಠ ದೇವರುಸೆಟ್ಟಿಯ ಬ್ರಹ್ಮದಾಯ ಮೂಲದ ಭೂಮಿ, ವುಳ್ಳಿರಡಿಯೆಂಬ ಬೆಟ್ಟಿನ ಗದ್ದೆ, ಸಗರೆಯೆಂಬ ಬಾಗಿಲಗದ್ದೆ, ಬಯಲೊಳಗೆ ಮಳೆಮರನೆಂಬ ಗದ್ದೆ, ವಿಕ್ರಾಂತವೆಂಬ ಗದ್ದೆ, ಕಳಯಿತಥೆ ಎಂಬ ಗದ್ದೆ, ಬಿಪ್ಪಿತಮರು ಎಂಬ ಗದ್ದೆಯ ಬೆಟ್ಟು, ಒಟ್ಟು ೧೭ ಮೂಡೆ ಗದ್ದೆಯನ್ನು ಮತ್ತು ಅದಕ್ಕೆ ಸಲ್ಲುವ ಮನೆ, ಬಾವಿ, ತೋಟ, ತೆಂಗಿನ ಮರ, ಹಲಸಿನ ಮರ ಮುಂತಾದವುಗಳ ಸಹಿತ ದಾನ ನೀಡಲಾಗಿದೆ.

ಇದರ ಜೊತೆಗೆ ಅನೇಕ ಹೊನ್ನುಗಳನ್ನೂ ದಾನ ನೀಡಲಾಗಿದೆ. ಈ ಶಾಸನವನ್ನು ಬರೆದವರು ದೇವರಸ ಮತ್ತು ತಿಂಮರ್ಸರು. ಅಂದರೆ ದಾನವನ್ನು ಅಧಿಕಾರಿಗಳೇ ಶಾಸನವನ್ನು ರಚಿಸಿರುವುದು ಇಲ್ಲಿನ ವಿಶೇಷವಾಗಿದೆ. ಈ ದಾನಕ್ಕೆ ಕಾಂತ್ತಾರದ ಹದಿನಾರರ ಕಟ್ಟಳೆಯರ ವಚನವೇ ಸಾಕ್ಷಿಯೆಂದೂ ಶಾಸನದಲ್ಲಿ ತಿಳಿಸಿದೆ.

ವೀರಗಲ್ಲಿನ ಬಗ್ಗೆ ತಿಳಿಸುವ ಈ ಶಾಸನವು ಕ್ರಿ.ಶ.೧೪೩೭ರ ಕಾಲದ್ದು. ಶ್ರೀ ವೀರಪ್ರತಾಪ ದೇವಮಹಾರಾಯರ ಅವಧಿಯಲ್ಲಿ ಕೆಳಲೆನಾಡಿನ ಮಳಲೂರು ಪಟ್ಟಣದ ಗಾವುಂಡ ದೊಡ್ಡಸೆಟ್ಟಿಯರ ಮಗ ತಿರುಮಲೆಯನು ಹೊಂಗನೂರಿನ ಊರ ಕಾಳಗದಲ್ಲಿ ಹೋರಾಡಿ

ಮಡಿಯುತ್ತಾನೆ. ಇವನ ಅಣ್ಣಂದಿರು ಈ ವೀರಗಲ್ಲನ್ನು ನಿಲ್ಲಿಸುವರು.[೯೩] ಇದೇ ರಾಜನ ಕಾಲದ ಇನ್ನೊಂದು ಶಾಸನವು ದಾನದ ಬಗ್ಗೆ ತಿಳಿಸುತ್ತದೆ.

೧ ಸ್ವಸ್ತಿ ಶ್ರೀ ಶಕವರುಷ ಸಾವಿರದ

೨ ಮೂನೂಱೈಯಿವತವೊಂಭತನೆ

೩ ಯ ಸರ್ವಜಿತು ಸಂವತ್ಸರದ ಭಾದ್ರಪದ

೪ ಸಾ ೧೦ ಸೋ ಶ್ರೀಮರ್ಮಮಹಾರಾಜಾಧಿರಾಜ ರಾ

೫ ಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ..

೬ ಯರಕಜಗಿಯ ಅಮರನಾಯಕರು ಜಾಲದ ಭೀಮ

೭ ಸೆಟ್ಟಿಯರಿಗೆ ಕೊಟ್ಟ ಕೊಡಗಿ ನಿಮಗೆ ಮುಂದೆ ದಾರಪೂ

೮ ರ್ವ್ವದಲು ಸಂದುಬಹ ಗದ್ದೆ ಮೂಘಂ

೯ ಡುಗ ಹೊಲ ಮೂವತ್ತು ಕೊಳಗವನು ಕೊ

೧೦ ಟ್ಟೆವಾಗಿ ಯಿ ಕೊಡಗೆಯ ಭೂಮಿ ಚಂದ್ರಾ

೧೧ ರ್ಕ್ಕರುಳ್ಳಂನಬರ ಸುಖದಿಂ ಭೋಗಿಸುದು ವೊ

೧೨ ಪ್ಪ ಶ್ರೀ ಅಮರಗುಂಡದೇವರು ಮಂಗಳ ಮಹಾ[೯೪]

ಈ ಶಾಸನವು ೧೩೪೭ಕ್ಕೆ ಸಮನಾಗುತ್ತದೆ. ಪ್ರತಾಪದೇವ ಮಹಾರಾಯರ ಅಮರ ನಾಯಕರು ಜಾಲದ ಭೀಮಸೆಟ್ಟಿಯರಿಗೆ ಭೂಮಿಯನ್ನು ದಾನ ನೀಡಿದ ವಿವರವಿದೆ.

ತಿಂಮ್ಮಣ್ಣವೊಡೆಯರು ಕ್ರಿ.ಶ.೧೪೪೨, ಅಕ್ಟೋಬರ್ ನಿಂದ ಕ್ರಿ.ಶ.೧೪೪೪ ಡಿಸೆಂಬರ್ ವರೆಗೆ ಬಾರಕೂರನ್ನು ಆಳುತ್ತಿರುತ್ತಾನೆ. ಬಾರಕೂರು,[೯೫] ಕೊಕ್ಕರಣೆ[೯೬], ಹೇರೂರು,[೯೭] ಬಸರೂರ್[೯೮] ಶಾಸನಗಳಲ್ಲಿ ಇವನ ಬಗ್ಗೆ ಮಾಹಿತಿಯಿದೆ. ವ್ಯಾಪಾರದ ವಿಷಯಕ್ಕೆ ಸೆಟ್ಟಿಕಾರರ ಎರಡು ಗುಂಪುಗಳ ನಡುವೆ ಕಲಹವಾಗಿ, ಬೆಂಮಸೆಟ್ಟಿಯನ್ನು ಕೊಲೆ ಮಾಡುವರು. ಇದಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಆ ಕುಟುಂಬದವರಿಗೆ ಮತ್ತು ದೇವರಿಗೆ ದಾನ ಬಿಟ್ಟ ಪ್ರಸಂಗ ತಿಮ್ಮಣ್ಣವೊಡೆಯರ ಅವಧಿಯಲ್ಲಿ ನಡೆದಿದೆ.[೯೯] ಹೇರೂರಿನ ಶಾಸನವು ಇವರನ್ನು ತಿಪ್ಪಣ್ಣವೊಡೆಯ ಎಂದು ನಮೂದಿಸಿದೆ.

ಕ್ರಿ.ಶ.೧೪೪೯ರ ಶಾಸನೋಕ್ತ ವಿಚಾರದಂತೆ ಪ್ರೌಢದೇವರಾಯನ ಮರಣದ ವಾರ್ತೆಯನ್ನು ಕೇಳಿದ ಹಿರಿಯಕೆರೆ ಊರ ಹಲಾಯದಕೇರಿಯ ಸಿರುಮಿಸೆಟ್ಟಿಯರು ಕೊಡಕಣಿಗೆ ಬಂದ ರಾಮಯಿದೇವರ ಸನ್ನಿಧಿಯಲ್ಲಿ ಮರಣ ಹೊಂದಿದಾಗ ಅವರ ಮಕ್ಕಳು ಅಲ್ಲಿನ ಛತ್ರಕ್ಕೆ ತಾವರಿಗೆ ಕೆರಿಯ ಮತ್ತು ಬೋಗಾವೆಯ ಬಳಿ ಭೂಮಿಯನ್ನು ದಾನ ಬಿಟ್ಟಿರುವ ಉಲ್ಲೇಖವಿದೆ.[೧೦೦] ಕ್ರಿ.ಶ.೧೪೩೧ ಶಾಸನದಲ್ಲಿ ಕೊಡಲಿಯಲ್ಲಿ ರಾಯಂಣ್ಣ ಒಡೆಯನು ಒಂದು ಅನ್ನಛತ್ರವನ್ನು ನಿರ್ಮಿಸಿದ್ದು ಅದಕ್ಕೆ ನಾಗರೀಕರು ಸೇರಿ ದಣ್ಣಾಯಕ ಪುರದ ಉತ್ಪತ್ತಿಯನ್ನು ದಾನ ನೀಡಿದ್ದಾರೆ.[೧೦೧]

ಕ್ರಿ.ಶ.೧೪೩೧ರ ಶಾಸನದಲ್ಲಿ ಅಲ್ಲಿನ ಮಠದ ಗಂಗಾಧರಪುರಿ ಶ್ರೀಪಾದಂಗಳು ಪ್ರೌಢದೇವರಾಯರ ಹೆಸರಿನಲ್ಲಿ ನಾರಾಯಣ ದೇವರ ಛತ್ರದ ಸೇವೆಗಾಗಿ ರಾಮಭಟ್ಟ ಎಂಬುವವನಿಗೆ 'ಬುಕ್ಕರಾಯಪುರ'ವನ್ನೇ ದಾನ ನೀಡಿರುವ ಸಂಗತಿ ತಿಳಿಯಬಹುದು.[೧೦೨] ಈ ರೀತಿ ವಿಜಯನಗರ ಕಾಲದ ಅನ್ನ ಛತ್ರಗಳಿಗೆ ಅಂದಿನ ರಾಜನು, ಮಹಾಪ್ರಧಾನರು, ವರ್ತಕರು, ಮಠದ ಶ್ರೀಗಳು ಹಲವಾರು ದವಸ-ಧಾನ್ಯಗಳನ್ನು, ಹಣವನ್ನು ಹೊಲಗದ್ದೆ, ಗ್ರಾಮ-ಪುರಗಳನ್ನು ದಾನ ನೀಡಿರುವ ಸಂಗತಿಯನ್ನು ಶಾಸನಗಳು ದಾಖಲಿಸುತ್ತವೆ.

ಕ್ರಿ.ಶ.೧೫೩೭ರಲ್ಲಿ ಬಾಬುಸೆಟ್ಟಿಯು ಸಿಂದಗಟ್ಟನ ಬಳಕೇರಿಯಲ್ಲಿ ಕಲ್ಲಿನ ಮಸೀದಿಯೊಂದನ್ನು ಕಟ್ಟಿಸಿದನು. ಅದಕ್ಕೆ ರಂಗೈನಾಯಕನು ಶಿವಪುರ ಗ್ರಾಮವನ್ನು ಹಬೀಬನ ಒಂದು ಮನೆಯನ್ನು ೧೪ ಗದ್ಯಾಣಗಳು ಹಾಗೂ ಅದರ ಮೇಲಿನ ಕಾಣಿಕೆಯನ್ನು ಸರ್ವಮಾನ್ಯವಾಗಿ ಬಿಟ್ಟನು. ಸಾಮಾನ್ಯವಾಗಿ ಪ್ರಜೆಗಳು ತಮ್ಮದಲ್ಲದ ಇತರ ಧರ್ಮವನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು ಎಂಬುದಕ್ಕೆ ಈ ಶಾಸನ ನಿದರ್ಶನ.[೧೦೩]

ವಿಜಯನಗರದ ದೊರೆ ಅಚ್ಯುತರಾಯ ಮಹಾರಾಯನ ಆಳ್ವಿಕೆಯ ಕಾಲದಲ್ಲಿನ ಇದರಲ್ಲಿ ಶಾಲಿವಾಹನ ಶಕ ೧೪೫೩, ಖರ ಸಂವತ್ಸರ, ಮಾಘ ಬಹುಳ ೧೪ ಶಿವರಾತ್ರಿ ಎಂದು ತೇದಿಯಿದೆ. ಅದು ಕ್ರಿ.ಶ.೧೫೩೨, ಫೆಬ್ರವರಿ ೩, ಸೋಮವಾರಕ್ಕೆ ಸರಿ ಹೊಂದುತ್ತದೆ. ದೊರೆಯ ಯೆಲ್ಲಪ್ಪಣ್ಣನಿಗೆ ಕೊಟ್ಟಿದ್ದ ಉರವಕೊಂಡೆ ಸೀಮೆಯ ಕರೂರ ವಜ್ರ ಭಂಡಾರಕ್ಕೆ ಮುತ್ತಿನ ಲಕಿಮಿಸೆಟ್ಟಿಯರ ಮಗ ಲಕಮಿಸೆಟ್ಟಿಯು ಕರ್ತನಾಗಿದ್ದ. ಇವನು ಪೊಲಕಿಯ ಪುರುಷೋತ್ತಮ ಭಟ್ಟರ ಮಗ ಕೊಂಡಜ್ಯೋಶ್ಯನಿಗೆ ಗಡೇಕಲ್ಲಿನಲ್ಲಿ ಹೊಲವನ್ನು ಸರ್ವಮಾನ್ಯವಾಗಿ

ಕೊಡುತ್ತಾನೆ. ಕಂತ್ರಿಕೆಯ ಸಿರಿಭಟ್ಟರ ಮಗ ಭೂಸಿಭಟ್ಟರಿಗೂ ಭೂಮಿದತ್ತಿಯನ್ನು ಕೊಡುತ್ತಾನೆ ಎಂದೂ ಇದರಲ್ಲಿ ದಾಖಲಿಸಿದೆ.[೧೦೪]

ಬೇಲೂರಿನ ಎರಡನೇ ಹರಿಹರನ ಕಾಲದ ಶಾಸನವು ಸಾಲುಮೂಲೆ ಬಣಜಿಗ ವರ್ತಕರ ದೊಡ್ಡದೊಂದು ಸಭೆಯನ್ನು ದಾಖಲಿಸುತ್ತದೆ. ಅವರನ್ನು ಅವಲಂಬಿಸಿದ್ದ ಹೊಲೆಯರು, ನಖರ ಪರಿವಾರದವರು, ಮುಮ್ಮಡಿದಂಡರು, ಪಟ್ಟಣಸೆಟ್ಟಿಗಳು, ಬಿಲ್ಲರು ಇವರುಗಳನ್ನೊಳಗೊಂಡ ಆ ಮಹಾಸಭೆಯು ವಿಜಯನಗರ ಪಟ್ಟಣದಲ್ಲಿ ಕ್ರಿ.ಶ.೧೩೮೫ರಲ್ಲಿ ನಡೆಯಿತು. ಇದಕ್ಕೆ ಅಧ್ಯಕ್ಷನಾಗಿದ್ದವನು ವಿಜಯನಗರ ಸರ್ಕಾರದಲ್ಲಿ ತೆರಿಗೆಗಳ ಮೇಲ್ವಿಚಾರಕ ಅಧಿಕಾರಿಯಾಗಿದ್ದ ಮುದ್ದೆಯ ದಣ್ಣಾಯಕನೆಂಬುವನು. ಸಭೆಯ ಉದ್ದೇಶ, ಸಾಲುಮೂಲೆ ಬಣಜಿಗರ ಸಂಗ್ರಹಿಸಿ ವಿಜಯನಗರ ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಯ ದರವನ್ನು ನಿಗದಿಪಡಿಸುವುದು ಈ ವಿಷಯವಾಗಿ ವಿಸ್ತಾರವಾಗಿ ಚರ್ಚೆ ನಡೆಸಿದ ಮೇಲೆ ಸಾಲು ಮೂಲೆ ಬಣಜಿಗರು ಒಪ್ಪಂದ ಮಾಡಿಕೊಂಡರು. ಔಷಧಿಗಳು, ಧಾನ್ಯಗಳು, ಪ್ರಾಣಿಗಳು, ಪೇಶ್ವೆಯರು ಅಥವಾ ದಾಸಿಯರ ಮೇಲೆ ಕೊಡಬೇಕಾದ ತೆರಿಗೆಯನ್ನು ನಿರ್ಧರಿಸಿದರು. ತೆರಿಗೆಯ ವಿಭಾಗದಲ್ಲಿ ಅತ್ಯುನ್ನತ ಅಧಿಕಾರಿಯಾಗಿದ್ದ ಮುದ್ದೆಯ ದಣ್ಣಾಯಕನಿಗೆ ಪೃಥ್ವೀಸೆಟ್ಟಿತನ ಬಿರುದನ್ನು ನೀಡಿ ಗೌರವಿಸಿದನು. ಸರ್ಕಾರದ ಅತ್ಯುನ್ನತ ಅಧಿಕಾರಕ್ಕೆ ಅವರು ಸೂಚಿಸುವ ಮರ್ಯಾದೆಯ ಕುರುಹಾಗಿತ್ತು.[೧೦೫]

ಸೊರಬ ತಾಲೂಕು ಶಿವಮೊಗ್ಗ ಜಿಲ್ಲೆಯ ಕೊಡಕನಿಯ ಕ್ರಿ.ಶ.೧೪೪೯ರ ಈ ಶಾಸನದಲ್ಲಿ ಚಂದ್ರಗುತ್ತಿಯ ೧೮ ಕಂಪಣವನ್ನು ಪೃಥ್ವೀಸೆಟ್ಟಿ ಆಳುತ್ತಿದ್ದನು. ಹಿರಿಯಕೆರೆ ಊರ ಹಲಾಯದ ಕೇರಿಯ ಸಿರುಮಿಸೆಟ್ಟಿಯವರು ದೇವರಾಯ ಮಹಾರಾಯರು ನಿಧನರಾದರೆಂಬ ಸುದ್ದಿಯನ್ನು ಕೇಳಿ ಕೊಡಕಣಿಸಿದರೆಂದು ಶಾಸನ ತಿಳಿಸುತ್ತದೆ. ಇವನ ಮಕ್ಕಳಾದ ವೀರಿಸೆಟ್ಟಿ, ಮಲ್ಲಿಸೆಟ್ಟಿ ಮತ್ತು ಹೊನ್ನಿಸೆಟ್ಟಿಯರು ಶಕವರ್ಷ ೧೩೭೧ ಶುಕ್ಲ ಸಂವತ್ಸರದ ಜೇಷ್ಟ ಶು.೧೧ ಮಂಗಳವಾರ ಅನುರಾಧ ನಕ್ಷತ್ರ ಶೋಭನ ಯೋಗ ವೃಷಭ ಲಗ್ನದಲ್ಲಿ ವೃಷಭನ ಮೂರ್ತಿಯನ್ನು ಪ್ರತಿಷ್ಠಾಪಿಸಿ ದಾನ ದತ್ತಿಗಳನ್ನು ಬಿಡುವರು.

ಮಂಗಳೂರು ರಾಜ್ಯಕ್ಕೆ ಎರಡನೆಯ ಹರಿಹರನ ಕಾಲದಲ್ಲಿ ಎರಡು ಬಾರಿ ರಾಜ್ಯಪಾಲನಾಗಿ ಆಯ್ಕೆಯಾದ ಕ್ರಿ.ಶ.೧೪೩೦ರ ಮೂಡಬಿದರೆಯ ಶಾಸನವು[೧೦೬] ದಕ್ಷಿಣ ಕನ್ನಡದ ತುಂಡರಸ ಮನೆತನದಲ್ಲಿ ಒಂದಾದ ಚೌಟ ಮನೆತನದ ವಿಕ್ರುಚಾಟನ ಪ್ರಸ್ತಾಪ ಮಾಡುತ್ತದೆ. ಮಂಗರಸ ಒಡೆಯನು ಮಂಗಳೂರನ್ನು ಆಳುತ್ತಿದ್ದಾಗ ಬಿದಿರೆಯ ಸ್ಥಳಕ್ಕೆ

ಮಂಜಣ ಅಧಿಕಾರಿಗಳೆಂಬ ಪ್ರತ್ಯೇಕ ಆಡಳಿತಗಾರನಿದ್ದು ಆ ಊರು ದಕ್ಷಿಣ ಕನ್ನಡದ ಪ್ರಮುಖ ಸ್ಥಳಗಳಲ್ಲಿ ಒಂದಾಗಿತ್ತೆನ್ನಬಹುದು. ಮೇಲೆ ತಿಳಿಸಿದ ಶಾಸನದಲ್ಲಿ ಬಿದಿರೆಯ ಗುರುಗಳ ಬಸ್ತಿಯ ಚಂಡೋಗ ಪಾರ್ಶ್ವದೇವರ ಪೂಜಾದಿ ಸೇವೆಗಳಿಗಾಗಿ ಐವರು ಹೊರಹಿನವರು, ನಾಲ್ವರು ಬಲ್ಲಾಳುಗಳ ಸಮ್ಮತಿಯೊಂದಿಗೆ ಕೇಶವಸೆಟ್ಟಿಯ ಮಗ ಮೈಂದನು ಹೊಲಗಳನ್ನು, ನಂದಾದೀವಿಗೆಗೆ ಎಣ್ಣೆ, ನಾಲ್ಕು ಕಠಾರಿ ಅಂಕುಶ ಗದ್ಯಾಣಗಳನ್ನು ದಾನವಾಗಿ ನೀಡಿದ ವಿವರಗಳಿವೆ. ಯಾವುದೇ ಸಮಸ್ಯೆಗಳೆದುರಾದರೂ ಈ ಶಾಸನದ ಕ್ರಮದಂತೆ ನಡೆಯತಕ್ಕದ್ದೆಂದೂ ವಿಧಸಲಾಗಿದೆ. ಈ ಎಲ್ಲಾ ದಾನಗಳನ್ನು ದೇವರಿಗೇ ಬಳಸಬೇಕು. ದೇವಾಲಯಕ್ಕೆ ದಾನವಾಗಿ ನೀಡಲಾದ ಈ ಸ್ಥಳದಲ್ಲಿ ಬೇರೆ ದೇವಾಲಯ ಕಟ್ಟಕೂಡದು ಎಂಬೆಲ್ಲ ನಿರ್ಬಂಧಗಳೂ ಶಾಸನದಲ್ಲಿ ಶಾಪಾಶಯದ ಬೆದರಿಕೆ ಜೊತೆಯಲ್ಲೇ ಇವೆ.

೩.೨.೪. ಶೆಟ್ಟಿ ಕುಲದ ನ್ಯೂನತೆಗಳು

ಸೆಟ್ಟಿ ಕುಲದವರ ಗುಣಗಳನ್ನು ಶಾಸನಗಳು ಹಾಡಿ ಹೊಗಳಿವೆ. ಇವರು ಮಾಡಿರುವ ದಾನ ಧರ್ಮಗಳು ಶ್ಲಾಘನೀಯ. ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ವ್ಯಾಪಾರಿಗಳು ಸತ್ಕಾರ್ಯ, ಸದ್ಧರ್ಮಗಳಿಗಾಗಿ ವಿನಿಯೋಗಿಸಿದ್ದಾರೆ. ಆದರೂ ಅತಿ ವಿರಳವಾಗಿ ಶಾಸನದಲ್ಲಿ ಇವರ ಪ್ರಶಾಂತ ಜೀವನದ ವಿರುದ್ಧ ಮುಖ ಅಂತಃಕಲಹ, ವ್ಯವಹಾರ ಹಾಗೂ ವಾಸ ಮಾಡುವ ಕೇರಿಗಳ ಸೀಮಾತಂಟೆಗಾಗಿ ಅವರು ತಮ್ಮ ತಮ್ಮಲ್ಲಿ ಜಗಳವಾಡಿರುವುದು ತಿಳಿದುಬರುತ್ತದೆ. ವೈಯಕ್ತಿಕ ದ್ವೇಷಗಳಿಂದ ಒಬ್ಬರನ್ನೊಬ್ಬರು ಕೊಂದಿದ್ದಾರೆ, ಕೊಲ್ಲಿಸಿದ್ದಾರೆ. ಇದಲ್ಲದೆ ತಮಗೆ ಬೇಡವಾದ ವರ್ತಕರ ಮೇಲೆ ದಾಳಿ ಮಾಡಿರುವರು. ಸರಕುಗಳ ಮೇಲೆ ಹೇರಿದ ಅಧಿಕ ತೆರಿಗೆಯ ವಿರುದ್ಧ ಇವರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಈ ರೀತಿಯ ನ್ಯೂನತೆಗಳು ತುಂಬಾ ಕಡಿಮೆ. ಈ ದಿಸೆಯಲ್ಲಿ ಸೆಟ್ಟಿಗಳು ಮಾಡಿರುವ ಕೆಲವು ಸಮಾಜಘಾತುಕ ಕೆಲಸಗಳು ಸೆಟ್ಟಿ ಕುಲಕ್ಕೆ ಕಪ್ಪು ಚುಕ್ಕೆಯಂತಿವೆ. ಆದರೂ ಇವರು ಮಾಡಿದ ಕಲ್ಯಾಣಕರ ಕಾರ್ಯಗಳು ತುಂಬಿ ತುಳುಕುವಷ್ಟಿರುವಾಗ, ಅಹಿತಕರ ಕೆಲಸಗಳು ಅಲ್ಪಸ್ವಲ್ಪವಿರುವುದರಿಂದ ಅವು ಗಣನೆಗೆ ಬರುವುದಿಲ್ಲ. ಆದರೂ ಕೆಲವು ನ್ಯೂನತೆಗಳನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ.

ಬಾರಕೂರಿನ ಚೌಳಿಯಕೇರಿಯ ಲಾಯದಕೇರಿಯ ಮಲ್ಲಿಸೆಟ್ಟಿಯು ಬ್ರಹ್ಮದೇವಸೆಟ್ಟಿಯ ಅಣ್ಣ ಮೂಗಿನ ಮಲ್ಲಿಸೆಟ್ಟಿಯನ್ನು ಕೊಂದನು. ಮುಂದೆ ಈ ಕೊನೆಯನೆತ್ತುವುದಕ್ಕಾಗಿ

ಕಬ್ಬೂರಲ್ಲಿ ಕಾಳಗ ನಡೆದು ಮಲ್ಲಿಸೆಟ್ಟಿಯ ಮಗ ಸಾವಣ್ಣ ಕೊಲ್ಲಲ್ಪಟ್ಟ ವಿಷಯವನ್ನು ದೇವಿಹೊಸೂರ ಶಾಸನಗಳು ವಿವರಿಸುತ್ತವೆ.[೧೦೭]

ಕ್ರಿ.ಶ.೧೪೩೦ರ ಒಂದು ಶಾಸನವು ಪ್ರೌಢದೇವರಾಯನ ಕಾಲದ್ದು. ಮಹಾಪ್ರಧಾನಿಯಾದ ಚಂಡರಸವೊಡೆಯರು ಬಾರಕೂರು ತುಳುರಾಜ್ಯವನ್ನು ಆಳುತ್ತಿರುತ್ತಾರೆ. ಈ ಸಮಯದಲ್ಲಿ ಬಾರಕೂರು ಹತ್ತು ಕೇರಿಯ ಒಳಗಣ ಚೌಳಿಯಕೇರಿ ಮತ್ತು ಮೂಡುಕೇರಿಯ ವ್ಯಾಪಾರಿಗಳ ನಡುವೆ ವ್ಯವಹಾರದ ವಿಷಯವಾಗಿ ಮನಸ್ತಾಪವಾಗುತ್ತದೆ. ಇದನ್ನು ಅರಿತ ಪ್ರಧಾನಿ ಎರಡೂ ಕೇರಿಯ ಮುಖಂಡರನ್ನು ಕರೆಯಿಸಿ ಅವರಿಬ್ಬರಿಗೂ ಸಂಧಾನ ಮಾಡಿಸಲು ಪ್ರಯತ್ನಿಸುತ್ತಾನೆ. ಮತ್ತೊಮ್ಮೆ ಮನಸ್ತಾಪವಾಗದ ಹಾಗೆ ಅನೇಕ ಕಟ್ಟಳೆಗಳನ್ನು ಮಾಡಿ ಎರಡು ಕೇರಿಯವರು ಅದರಂತೆ ನಡೆದುಕೊಳ್ಳಬೇಕೆಂದು ಸೂಚಿಸುತ್ತಾನೆ. ಘಟ್ಟದ ಮೇಲಿನ ರಸ್ತೆಯ ಮೂಲಕ ಬಂದ ಗೋಧಿ, ಕಡಲೆ, ಅಕ್ಕಿ, ಉದ್ದು, ಹೆಸರು, ಎಳ್ಳು, ಕಬ್ಬು, ನಜಬಲ್ಲಯ, ಶುಂಠಿ, ತುಪ್ಪ, ಬೆಲ್ಲ, ಸಂಬಾರ ಪದಾರ್ಥಗಳು, ದ್ವಿದಳ ಧಾನ್ಯದ ಹೊರೆ, ತಲೆ ಹೊರೆಯಲ್ಲಿ ಬಂಚ ಸಾಮಾನುಗಳನ್ನು(ಆಮದು ಮಾಡಿಕೊಂಡ ಸಾಮಾನುಗಳು) ಎರಡೂ ಕೇರಿಯವರು ಸರಿಯಾಗಿ ಹಂಚಿಕೊಂಡು ತಮ್ಮ ತಮ್ಮ ಕೇರಿಯಲ್ಲಿ ವ್ಯಾಪಾರ ನಡೆಸಬೇಕು ಎಂಬ ಕಟ್ಟಳೆಯನ್ನು ವಿಧಿಸಿದೆ. ಈ ಸಮಯದಲ್ಲಿ ಸಕ್ಕರೆ ಮಾರಾಟಕ್ಕೆ ಸಂಬಂಧಪಟ್ಟಂತೆ ವಿಶೇಷವಾಗಿ ಕಟ್ಟಳೆಯನ್ನು ರೂಪಿಸಲಾಯಿತು.

ಚೌಳೀಯಕೇರಿ ಮತ್ತು ಮೂಡುಕೇರಿಯ ಸೆಟ್ಟಿಗಳು ಎತ್ತಿನಗಾಡಿಯಲ್ಲಿ ಮತ್ತು ತಲೆಯಲ್ಲಿ ಹೊರೆಸಿಕೊಂಡು ಬಂದ, ಬೇರೆ ದೇಶದವರು(ಹಂಜಮಾನದವರು ಮತ್ತು ಹೊರ ರಾಜ್ಯದವರು) ಗಾಡಿಯಲ್ಲಿ ಮತ್ತು ತಲೆಯ ಹೊರೆಯಲ್ಲಿ ತಂದ ಸಕ್ಕರೆಯನ್ನು ದಾಸ್ತಾನು ಮಾಡಲು ಎರಡು ಗಾಣ ಗೊಟ್ಟಗೆಯಷ್ಟು ಜಾಗವನ್ನು ನಿರ್ಧರಿಸಿ ಅಲ್ಲಿ ಉತ್ತರಕ್ಕೆ ಬಾಗಿಲಿರುವ ಮಳಿಗೆಯನ್ನು ಕಟ್ಟಿಸುತ್ತಾರೆ. ಆ ಮಳಿಗೆಯಲ್ಲಿ ಸಕ್ಕರೆಯನ್ನು ದಾಸ್ತಾನು ಇಟ್ಟು ಅದನ್ನು ಮಾರಬೇಕೆಂದಾಗ ಎರಡೂ ಕೇರಿಯವರು ಕೂಡಿ ಅದರ ಬೆಲೆಯನ್ನು ನಿರ್ಧರಿಸಿ ಮಾರಾಟ ಮಾಡಬೇಕು. ಮಾರಾಟವಾಗದೆ ಉಳಿದ ಸಕ್ಕರೆಯನ್ನು ಯಾರೂ ಕೂಡ ತಮ್ಮ ಕೇರಿಗಳಿಗೆ ಒಯ್ಯದೆ ದಾಸ್ತಾನು ಮಳಿಗೆಯಲ್ಲೇ ಇಟ್ಟು ಮುಂದೆ ಮಾರಬೇಕು ಎಂದು ಕಟ್ಟಳೆ ವಿಧಿಸಲಾಗಿದೆ. ಮೂಡುಕೇರಿಯವರು ಮಾತ್ರ ನೂಲಿನ ಸೀರೆಯನ್ನು ಮಾರಾಟ ಮಾಡಬೇಕು. ಮಿಕ್ಕ ವಸ್ತುಗಳ ಮಾರಾಟವನ್ನು ಎರಡೂ ಕೇರಿಯವರು ಸಮನಾಗಿ

ಮಾಡಬೇಕು. ಎರಡೂ ಕೇರಿಯಲ್ಲಿ ಏನಾದರೂ ಜಗಳವಾದರೆ ಧರ್ಮದ ಆಧಾರದಲ್ಲಿ ಸರಿ ಮಾಡಿಕೊಳ್ಳುತ್ತೇವೆ. ಆಯುಧಗಳನ್ನು ಹಿಡಿದು ಹೋರಾಡುವುದಿಲ್ಲ ಎಂದು ಇಬ್ಬರಿಂದಲೂ ಒಡಂಬಡಿಕೆಯನ್ನು ಮಾಡಿಸಿ ಬರೆಯಿಸಿಕೊಳ್ಳಲಾಗಿದೆ. ಇದಕ್ಕೇನಾದರೂ ತಪ್ಪಿದರೆ ಅರಮನೆಗೆ ಹನ್ನೆರಡು ಸಾವಿರ ಹೊನ್ನನ್ನು ದಂಡವಾಗಿ (ತಪ್ಪು ವರಹ) ಕೊಡುತ್ತೇವೆಂದು ಎಲ್ಲರಿಂದಲೂ ಒಪ್ಪಿಗೆ ಪಡೆಯಲಾಗಿದೆ.[೧೦೮]

೩.೩. ಇತರ ಕೊಡುಗೆ: ಮಹಿಳೆಯರು

ಪುರುಷ ಮತ್ತು ಸ್ತ್ರೀ, ಸಮಾಜದ ಅವಶ್ಯ ಮತ್ತು ಅನಿವಾರ್ಯ ಘಟಕಗಳು, ನಾಣ್ಯದ ಎರಡು ಮುಖಗಳಂತೆ ವಿರುದ್ಧವೆಂದರೂ ಇವು ಪರಸ್ಪರ ಪೂರಕವಾದುವು. ಪುರುಷನಿಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ ಸ್ತ್ರೀ ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ನಡೆದು ಬಂದ ವಿಷಯ ಮನುಕುಲದ ಚರಿತ್ರೆಯಲ್ಲಿ ಅರ್ಧಭಾಗವನ್ನು ವ್ಯಾಪಿಸಿದೆ. ಅದಕ್ಕಾಗಿಯೇ "ಸ್ತ್ರೀ ಬಾಳಿನ ಧಾರ್ಮಿಕತೆಯನ್ನು ಪಾವಿತ್ರತೆಯನ್ನು ರಕ್ಷಿಸುವ ರಕ್ಷಣಾಧಿಕಾರಿ" ಎಂದಿರುವ ಗಾಂಧೀಜಿಯವರ ಮಾತು ಅಕ್ಷರಶಃ ಸತ್ಯವಾಗಿದೆ. "ಪ್ರತಿಯೊಂದು ಯಶಸ್ಸಿನ ಹಿಂದೆಯೂ ಒಬ್ಬ ಹೆಣ್ಣು ಇದ್ದೇ ಇರುತ್ತಾಳೆ" ಎನ್ನುವ ಗಾದೆ ಮಾತಿನಲ್ಲಿ ಸ್ತ್ರೀಯರ ಮಹತ್ವ ಅಡಗಿದೆ. ಭಾರತ ಉದ್ದಕ್ಕೂ ಬಾಳಿದುದು ಬರ್ಬರ ಬದುಕನ್ನಲ್ಲ; ನಾಗರಿಕ ಬದುಕನ್ನು ಸುಸಂಸ್ಕೃತ ಬದುಕನ್ನು. ಈ ಬದುಕಿನ ಪ್ರಥಮ ನೆಲೆ ವೇದಗಳು. ವೇದಕಾಲ ಮಹಿಳೆಯ ಪಾಲಿಗೆ ಸರ್ವತೋಮುಖ ಅಭಿವೃದ್ಧಿಯ ಸಮಯವೆನಿಸಿದ್ದಿತು.

ಸ್ವತಂತ್ರ ಜೀವನ, ವಿಶಾಲದೃಷ್ಟಿಕೋನ, ತತ್ವಜ್ಞಾನದಂತಹ ಗಂಭೀರ ವಿಷಯದ ಅಧ್ಯಯನಗಳಿಗೆ ಆಕೆ ಪುರುಷ ಸಮಾನ ಸ್ಥಾನವನ್ನು ಪಡೆದಿದ್ದಳು. ಜಿಜ್ಞಾಸುಗಳ ದಿವ್ಯಜ್ಞಾನದ ಬೆಳಕಿನಲ್ಲಿ ಮಂತ್ರರಚನೆ ಮಾಡಿ ಮಂತ್ರದಷ್ಟಾರಳೂ, ತಾತ್ವಿಕ ವಿಷಯದ ಪ್ರತಿಪಾದಕಳಾಗಿ ತತ್ವಜ್ಞಾನಿಯೂ ಎನಿಸಿಕೊಂಡಿದ್ದಳು.

ಈ ತರುವಾಯದ ಪುರಾಣ-ಇತಿಹಾಸಗಳ ಕಾಲ. ಮಹಿಳೆಯರ ಪಾಲಿಗೆ ಕತ್ತಲು ಯುಗ. ಈಗ ಸ್ವಾತಂತ್ರ್ಯ ಸಮಾನತೆಗಳ ಕೊರತೆ, ಶಿಕ್ಷಣ-ಸಂಸ್ಕಾರಗಳ ಕೊರತೆಗಳು ಮಹಿಳೆಯ ಮಟ್ಟವನ್ನು ಅವನತಿಗೊಳಿಸಿದವು. ರಾಮಾಯಣ ಮಹಾಭಾರತಗಳ ಕಾಲದಲ್ಲಿ ಕಂಡುಬರುವ ಈ ದೀನಸ್ಥಿತಿ ಮುಂದೆ ಜೈನ ಬೌದ್ಧ ಧರ್ಮದ ಕಾಲಕ್ಕೆ ಕೊಂಚ ದೂರವಾಗಿ, ಕಂತಿ, ಶ್ರಾವಕಿ, ಯೋಗಿನಿ, ಕುಸಳಿಯರ ಹೆಸರಿನಲ್ಲಿ ಸ್ತ್ರೀ ಮತ್ತೆ ಪ್ರಕಟವಾಗತೊಡಗಿದಳು.

ಆದರೆ ಮುಂದೆ ಬಂದ ಸ್ಮೃತಿಕಾರರು ಮತ್ತೆ ಈ ಪರಿಸರವನ್ನು ಬಿಗಿಗೊಳಿಸಿ ಸ್ತ್ರೀ-ಪುರುಷರೆಂಬ ತಾರತಮ್ಯವನ್ನು ಹೆಚ್ಚಿಸಿ ಸ್ತ್ರೀ ಸಮಾಜವನ್ನು ಅಧಃಪತನಗೊಳಿಸಿದರು. "ಮಹಿಳೆಯರು ಪೂಜೆಗೊಳ್ಳುವಲ್ಲಿ ದೇವತೆಗಳು ವಾಸಿಸುತ್ತಾರೆ" ಎಂಬ ಮನುಮಹರ್ಷಿ "ನಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದೂ ಸಾರುವುದು ಸಮಯ ಸಾಧಕ ಪುರುಷ ಧ್ವನಿಯೆಂದೇ ಹೇಳಬೇಕು. ಈ ಧೋರಣೆ ಕ್ರಿಸ್ತಶಕದ ಆರಂಭಕಾಲದಲ್ಲಿಯೂ ಮುಂದುವರಿಯಿತು. ಈಗ ಪ್ರಾರಂಭವಾದ ಪರಮತೀಯರ-ಪರಕೀಯರ ಆಗಮನ, ಭಾರತೀಯ ಸಂಸ್ಕೃತಿಯ ಮೇಲೆ ಸಾಕಷ್ಟು ಪರಿಣಾಮ ಬೀರಿದುದಿಂದಾಗಿ ಭಾರತೀಯ ಮಹಿಳೆ ಹಲವು ಸ್ಥಿತ್ಯಂತರಗಳನ್ನು ಪಡೆದಿರಬಹುದಾದರೂ ಅದಕ್ಕೆ ಸ್ಪಷ್ಟ ಉಲ್ಲೇಖಗಳಿಲ್ಲ. ಇಲ್ಲಿಂದ ಮುಂದೆ ನಡೆದು ಬಂದುದನ್ನು ತಿಳಿಸುವ ಮುಖ್ಯ ಆಕರಗಳೆಂದರೆ ಕಾವ್ಯ ಮತ್ತು ಶಾಸನಗಳು. ದೇಶದ ಪ್ರಜೆಗಳ ಇತಿಹಾಸ ಮತ್ತು ಮೌಲ್ಯಗಳನ್ನು ಅರಿಯುವಲ್ಲಿ ಕಾವ್ಯಗಳಿಗಿಂತ ಶಾಸನಗಳು ಹೆಚ್ಚು ಉಪಯುಕ್ತವೆನಿಸುತ್ತವೆ. ಆದುದರಿಂದ ಯಾವುದೇ ಜನಾಂಗದ ಮುಖ್ಯ ಭಾಗವಾಗಿರುವ ಮಹಿಳಾ ಸಮಾಜ ನಡೆದು ಬಂದ ದಾರಿಯನ್ನು ಶಾಸನಗಳು ವಿಶ್ವಾಸಾರ್ಹ ರೀತಿಯಲ್ಲಿ ವ್ಯಕ್ತಪಡಿಸಿವೆಯೆಂದೇ ಹೇಳಬೇಕು.

ಮಹಿಳೆ ಪ್ರಥಮವಾಗಿ ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ ಇದೊಂದು ಸೀಮಿತ ಕ್ಷೇತ್ರ. ಪತಿ, ಮಕ್ಕಳು ಮತ್ತು ಬಂಧು ಬಳಗದ ಯೋಗಕ್ಷೇಮದೊಂದಿಗೆ ಸಮಾಜದಲ್ಲಿ ವಿಶಿಷ್ಟ ಸ್ಥಾನಮಾನ ಕಾಯ್ದುಕೊಳ್ಳುವುದು ಈ ಕ್ಷೇತ್ರದ ಗುರಿ. ಆದರೆ ಮಹಿಳೆಯರು ಈ ಸೀಮಿತ ಪರಿಸರವನ್ನೂ ಮೀರಿ ಜೀವನದಲ್ಲಿ ಹೆಚ್ಚಿನದನ್ನು ಸಾಧಿಸಬೇಕೆಂಬ ಲವಲವಿಕೆಯುಳ್ಳವರಾಗಿರುತ್ತಾರೆ. ಇವರಲ್ಲಿ ಕೆಲವು ಮಹಿಳೆಯರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದವರಾದರೆ ಇನ್ನು ಕೆಲವರು ಸ್ವಕಾರ್ಯ ಬಲದಿಂದ ಪ್ರಾಮುಖ್ಯತೆ ಪಡೆದವರು. ಹೀಗಾಗಿ ಪ್ರಾಚೀನ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಭಾಗಿಗಳಾದ ಮಹಿಳೆಯರನ್ನು ಸ್ಥಾನ ಪ್ರಾಮುಖ್ಯತೆಯಿಂದ ಗುರುತಿಸಬಹುದು. ಅದಕ್ಕೆ ಹೇಳುವುದುಂಟು 'ನೀರಿದ್ದರೆ ಊರು ಚೆಂದ, ನಾರಿ ಇದ್ದರೆ ಮನೆ ಚೆಂದ."

ಪ್ರಭುವರ್ಗದ ಮಹಿಳೆಯರು ರಾಜನೊಂದಿಗೆ ಸುಖ ಸಂಕಥಾ ವಿನೋದದಿಂದ ಬಾಳುವಲ್ಲಿ, ಸ್ವತಂತ್ರ ಆಡಳಿತ ನಡೆಸುವಲ್ಲಿ, ಯುದ್ಧ ವೀರಮರಣದಂತಹ ಸಾಹಸಕಾರ್ಯಗಳನ್ನು ನಿರ್ವಹಿಸುವಲ್ಲಿ ತಮ್ಮ ಅಗ್ಗಳಿಕೆಯನ್ನು ಮೆರೆದುದುಂಟು. ಅನ್ನ, ಅರಿವೆ, ಆಶ್ರಯದಂತಹ

ಭೌತಿಕ ಸಂತೃಪ್ತಿಯನ್ನು ಪಡೆದ ಇವರು ಪ್ರಜೆಗಳ ಸುಖ ದುಃಖಗಳನ್ನು ವಿಚಾರಿಸಿ ಲೋಕಹಿತಕಾರ್ಯಗಳನ್ನು ಕೈಕೊಂಡುದುಂಟು. ಸಾಮಾನ್ಯ ವರ್ಗದ ಮಹಿಳೆಯರು ಗೃಹಿಣಿಯ ಬದುಕಿನಲ್ಲಿ ತೊಡಗಿಕೊಂಡರೂ ಉನ್ನತ ವರ್ಗದ ಮಹಿಳೆಯಂತೆ ಸಂಸಾರ ರಂಗಕ್ಕೆ ಹೊರತಾದ ರಂಗಗಳಲ್ಲಿ ತೊಡಗುವ ಪ್ರಸಂಗಗಳೂ ಅವರಿಗೆ ಪ್ರಾಪ್ತವಾದವು. ಉನ್ನತ ವರ್ಗದ ಮಹಿಳೆಯರಂತೆ ಇವರು ವರ್ಣನಾಪರ ಚೌಕಟ್ಟಿನಲ್ಲಿಯ ಗೊಂಬೆಗಳಂತೆ ಕಂಡುಬರದೆ ಜೀವದುಂಬಿ ಸಂಚರಿಸಿದ ಹಾಗೆ ಭಾಸವಾಗುತ್ತಾರೆ. ಯುದ್ಧ ತುರುಗೋಳ, ಪೆಣ್ಬುಯಲ್ ಈ ಎರೆವೆಸದಂತಹ ಗಂಡಾಂತರ ಪ್ರಸಂಗಗಳಲ್ಲಿ ಕೈಸೆರೆ ಹೋದ, ಹೋರಾಡಿದ, ದೇವಕಾರ್ಯಗಳಿಗೆ ತಮ್ಮನ್ನು ಮೀಸಲಾಗಿಟ್ಟ ಒಡೆಯ ಅಥವಾ ಒಡತಿಗೆ ತಮ್ಮ ಪ್ರಾಣವನ್ನು ಬಲಿದಾನಗೈದ ಈ ಸಾಮಾನ್ಯ ಮಹಿಳಾ ವರ್ಗ ಶಾಸನಗಳಲ್ಲಿ ಆಗಾಗ ಕಂಡುಬರುವುದುಂಟು.

ಪ್ರಾಚೀನ ಕಾಲದಲ್ಲಿ ಮಹಿಳಾ ವರ್ಗಕ್ಕೆ ದೊರೆತ ಈ ಅವಕಾಶಗಳು ಅವರನ್ನು ದೊಡ್ಡವರನ್ನಾಗಿ ಮಾಡದೇ ಹೋದರೂ ಸಮಾಜದಲ್ಲಿ ಅವರನ್ನು ತ್ಯಾಜ್ಯವಾಗಿ ಕಂಡ ಯಾವ ಉದಾಹರಣೆಗಳೂ ನಮ್ಮ ಶಾಸನಗಳಲ್ಲಿ ಕಂಡುಬರುವುದಿಲ್ಲ. ಇಂಥ ಅಭ್ಯಾಸದಿಂದ ನಮ್ಮ ಮಹಿಳಾ ಸಮಾಜದ ಸಾಧನೆ ಮತ್ತು ಸಮಾಜದಲ್ಲಿ ಅವರು ಹಾಕಿಕೊಂಡ ಪರಿಮಿತಿಗಳ ಸ್ವರೂಪ ತಿಳಿದುಬರುತ್ತದೆ. ಒಂದು ಕಾಲಕ್ಕೆ ಅವರು ಕಣ್ಣೆದುರಿಗಿಟ್ಟುಕೊಂಡಿದ್ದ ಆದರ್ಶ, ಮೌಲ್ಯ, ನಂಬಿಕೆಗಳು ಇಂದಿನ ಕಾಲದ ಮಹಿಳಾ ವರ್ಗಕ್ಕೆ ಕುರುಹಾಗಿ ಅರ್ಥಹೀನ ವಾಗಿ ಕಾಣಿಸಬಹುದು. ಆದರೆ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ, ಬದಲಾಗಲೇಬೇಕಾದ ಮೌಲ್ಯಗಳು ಆಯಾಕಾಲದ ಮಹತ್ವಪೂರ್ಣ ಘಟಕಗಳಾಗಿರುತ್ತವೆಯೆಂಬ ದೃಷ್ಟಿಯಿಂದ ಅವರು ಅಂಗೀಕರಿಸಿದ್ದ ಆತ್ಮಬಲಿದಾನ, ಸತಿಪದ್ಧತಿಗಳನ್ನು ನೋಡಬೇಕು. ಹೀಗಾಗಿ ಅವರು ಹಾಕಿಕೊಂಡ ಆದರ್ಶ, ಜೀವನದಲ್ಲಿ ಬದುಕಿದ ಮೌಲ್ಯ, ಅನುಸರಿಸಿದ ನಂಬಿಕೆಗಳು ನಮಗೆ, ನಮ್ಮ ಮುಂದಿನ ಜನಾಂಗಕ್ಕೆ ಬಾಳ ಬುತ್ತಿಯಾಗಿ ನಿಲ್ಲುತ್ತವೆಯೆಂದೇ ಹೇಳಬೇಕು.

ಇಮ್ಮಡಿ ಪುಲಿಕೇಶಿಯ ಸೊಸೆ ವಿಜಯಭಟ್ಟಾರಿಕೆ, ದಾನಚಿಂತಾಮಣಿ, ಅತ್ತಿಮಬ್ಬೆ, ಜಯಸಿಂಹನ ರಾಣಿ ಸುಗ್ಗಲೆ, ಹೊಯ್ಸಳ ರಾಣಿ ಶಾಂತಲೆ, ಈಕೆಯ ತಾಯಿ ಮಾಚಿಕಬ್ಬೆ, ಕುವರಲಕ್ಷ್ಮನ ಮಡದಿ ಸುಗ್ಗಲೆ, ಸಕಲಶಾಸ್ತ್ರ ಪ್ರಸಿದ್ಧಿ ಪಡೆದ ಸಾವಿನಿಮ್ಮಡಿ, ವೆಣ್ಣಲಸೆಟ್ಟಿಕಲ್ವೆ ಕದಂಬ ಜಯಕೇಸಿಯ ರಾಣಿ ಮೈಳಲದೇವಿ, ನಾಳ್ಗಾವುಂಡಿ ಜಕ್ಕಿಯಬ್ಬೆಯರಂಥ ಅನೇಕ ಸ್ತ್ರೀಯರು ಶಾಸನಗಳ ಮೂಲಕ ನಮ್ಮ ಇತಿಹಾಸದ ಬೆಲೆಯುಳ್ಳ ಘಟಕವಾಗಿ ಕಾಣಿಸಿ

ಕೊಳ್ಳುತ್ತಾರೆ. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಅಲ್ಲಿಯ ನದಿ ಬೆಟ್ಟಗಳಲ್ಲ; ಗಣಿ ಅರಣ್ಯಗಳಲ್ಲ, ಅಲ್ಲಿಯ ಜನತೆ, ಅವರ ಜೀವನ ವಿಧಾನಗಳು ನಿರ್ವಹಿಸಿದ ಸಾಧನೆಗಳು. ಈ ದೃಷ್ಟಿಯಿಂದ ಈ ಸ್ತ್ರೀಯರು ಇಂದಿನ ನಮ್ಮ ಬಾಳಿಗೆ ಒಂದು ಶ್ರೀಮಂತ ಪರಂಪರೆಯ ಕೊಂಡಿಗಳಾಗಿ ಕಂಡುಬರುತ್ತಾರೆ.

ಕುಟುಂಬ, ಯಾವುದೇ ಸಮಾಜದ ಮೂಲ ಮತ್ತು ಮುಖ್ಯ ಘಟಕ. ಇಂಥ ಹಲವು ಕುಟುಂಬಗಳೇ ಸೇರಿ ಒಂದು ಸಮಾಜವಾಗುವುದರಿಂದ ಸಮಾಜವೆನ್ನುವುದು ಕುಟುಂಬದ ದೊಡ್ಡ ರೂಪ, ಕುಟುಂಬವೆನ್ನುವುದು ಸಮಾಜದ ಸಣ್ಣರೂಪವೆಂದು ಹೇಳಬೇಕಾಗುತ್ತದೆ. ಅಂದರೆ ಕುಟುಂಬ ಮತ್ತು ಸಮಾಜಗಳಲ್ಲಿರುವುದು ಗಾತ್ರ ವ್ಯತ್ಯಾಸವೇ ಹೊರತು, ಗುಣ ವ್ಯತ್ಯಾಸವಲ್ಲ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಭಾರತೀಯ ಕುಟುಂಬದ ಮುಖ್ಯ ಲಕ್ಷಣ ಕೂಡಿ ಬಾಳುವುದು. ದೊಡ್ಡ ಬದುಕನ್ನು ಬಾಳುವುದು. ಹೀಗಾಗಿ ಅಂಥ ಬಾಳಿಗೋಸುಗ ಗೃಹಸ್ಥ ಗೃಹಿಣಿಯರು ಸಿದ್ಧರಾಗಿರಬೇಕಿದ್ದಿತು. ಕುಲಪುತ್ರ ಹುಟ್ಟಿದ ಮನೆಯೊಂದರ ಜ್ಯೋತಿಯನ್ನು ಬೆಳಗಿದರೆ, ಕುಲಪುತ್ರಿ ಬೆಳಗುವುದು ಹುಟ್ಟಿದ ಮತ್ತು ಕೊಟ್ಟ ಮನೆಗಳ ಜ್ಯೋತಿಯನ್ನು. ಇದನ್ನು ಮನಗಂಡ ಪ್ರಾಚೀನ ಕರ್ನಾಟಕದ ಸ್ತ್ರೀಯರು ಗೃಹಿಣಿತ್ವಕ್ಕೆ ಹೆಚ್ಚಿನ ಮಹತ್ವ ನೀಡಿದುದು ಕಂಡುಬರುತ್ತದೆ. ಗೃಹಿಣಿಯ ದೈನಂದಿನ ಆಚರಣೆಯ ಬಗೆಗೆ ಶಾಸನಗಳು ಮೌನವಾಗಿದ್ದರೂ

ಪರಮಪದಾರ್ಥ ನಿರ್ಣಯಮನಾಂತ ವಿದಗ್ಧತೆ ದುರ್ನಯಂಗಳೊಳ್
ಪರಿಚಯಮೆಂದು ಮಿಲ್ಲದತಿ ಮುಗ್ಧತೆ ತನ್ನಿನಿಯಂಗೆ ಚಿತ್ತದೊಳ್
ಪಿರಿದನುರಾಗಮಂ ಪಡೆವ ರೂಪು ವಿನೇಯಜನಾಂತರಂಗದೊಳ್
ನಿರುಪಮಭಕ್ತಿಯಂ ಪಡೆವ ಪೆಂಪು ಲಕ್ಷ್ಮಲೆಗೆಂದುಮನ್ವಿತಂ॥

ಎಂಬ ಗಂಗಾರಾಜನ ಸತಿ ಲಕ್ಷ್ಮಲೆಯ ಗುಣಮಹತ್ವವನ್ನು ತಿಳಿಸುವ ಪದ್ಯ ಗೃಹಿಣಿಯೊಬ್ಬಳ ಆದರ್ಶ ಭಾವನೆಗಳನ್ನು ಪ್ರತಿನಿಧಿಸುತ್ತದೆ.[೧೯]

ದೇವಸ್ಥಾನ ನಿರ್ಮಾಣದಂತಹ ದೊಡ್ಡಮೊತ್ತದ ದಾನಕಾರ್ಯವನ್ನು ಪ್ರಭುವರ್ಗ ಕೈಕೊಂಡರೆ ದೇವ ಪೂಜೆ ಪುರಸ್ಕಾರ, ದೇವಾಲಯ ಜೀರ್ಣೋದ್ಧಾರ, ನಂದಾದೀವಿಗೆಗಳಿಗೆ ದಾನ ನೀಡಿದವರು ಸಾಮಾನ್ಯ ವರ್ಗದವರು. ಹೀಗಾಗಿ ಇಲ್ಲಿ ಒಬ್ಬರು ಸಂಸ್ಥಾಪಕರಾಗಿ

ಕಂಡರೆ, ಇನ್ನೊಬ್ಬರು ವ್ಯವಸ್ಥಾಪಕರಾಗಿ ತೋರುತ್ತಾರೆ. ಇವರು ಬಿಟ್ಟುಕೊಡುವ ದತ್ತಿಯ ಮೊತ್ತವನ್ನು ರಕ್ಷಿಸಿಕೊಂಡು ಹೋಗುವ ಆಚಾರ್ಯವರ್ಗದ ಅವಶ್ಯಕತೆ ಮೇಲುವರ್ಗದ ದತ್ತಿ ಸಂದರ್ಭದಂತೆ ಇಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. "ಕೊಟ್ಟ ದಾನವನ್ನು ಕಾಪಾಡಿದವರು ದಾತಾರರಪ್ಪರು" ಎಂಬ ನೀತಿ ಮಾತು ಈ ದಾನಗಳ ಹಿಂದೆ ಪ್ರತಿಧ್ವನಿಸುತ್ತದೆ. ಈ ದಾನದಲ್ಲಿ ಸಮಾವೇಶವಾದವರು ಸೆಟ್ಟಿಗಳಂತಹ ಶ್ರೀಮಂತವರ್ಗದ, ಗಾವುಂಡುಗಳಂತಹ ಅಧಿಕಾರಿವರ್ಗದ ಮತ್ತು ಇತರ ಸಾಮಾನ್ಯವರ್ಗದ ಸ್ತ್ರೀ ಪುರುಷರು, ಆರ್ಥಿಕ ಸಂತೃಪ್ತಿಯ ಈ ಗಾವುಂಡ ಸೆಟ್ಟಿ ಕುಟುಂಬಗಳ ಒಲವು ಸಹಜವಾಗಿ ಧರ್ಮಮುಖವಾಗಿದೆ. ಇಲ್ಲಿ ತಮ್ಮ ಪರಿಸರದ ಹಿತದೃಷ್ಟಿಯೇ ಪ್ರಧಾನ. ಈ ವರ್ಗದ ಹೆಣ್ಣು ಮಕ್ಕಳೂ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮೂಹಿಕ ದಾನ ಕಾರ್ಯಗಳನ್ನು ನಿರ್ವಹಿಸಿರುವರು.

ವಿಜಯನಗರದ ಇತಿಹಾಸದ ಬಗ್ಗೆ ವಿಶಿಷ್ಟ ರೀತಿಯ ಬೆಳಕು ಚೆಲ್ಲಲು ಇಂದು ನಮ್ಮ ಮುಂದೆ ಅನೇಕ ಸಾಹಿತ್ಯಾಧಾರಗಳು ಹಾಗೂ ದೇವಾಲಯಗಳು ತೆರೆದ ಪುಸ್ತಕಗಳಂತೆ ಕಂಗೊಳಿಸುತ್ತಿವೆ. ಅವುಗಳ ಸಹಾಯದಿಂದ ಅಂದಿನ ಕಾಲದಲ್ಲಿ ಸ್ತ್ರೀಯರ ಸ್ಥಾನ ಹಾಗೂ ಅವರು ಆಸ್ಥಾನದಲ್ಲಿ ಹಾಗೂ ಸಮಾಜದಲ್ಲಿ ಬದುಕುತ್ತಿದ್ದ ಸ್ಥಿತಿಗತಿಯ ಬಗ್ಗೆ ತಿಳಿಯಲು ಸಹಕಾರಿಯಾಗಿದೆ ಎನ್ನಬಹುದು.

ಕರ್ನಾಟಕದ ಪ್ರಾಚೀನ ಇತಿಹಾಸವನ್ನು ಗಮನಿಸಿದರೆ ಅದು ಗಂಗರ ಕಾಲದಿಂದ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಇಕ್ಕೇರಿ ಅರಸರು, ಮೈಸೂರು ಒಡೆಯರವರೆಗೂ ಮಹಿಳೆಯರು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ರಾಜರ ಅನುಪಸ್ಥಿತಿಯಲ್ಲಿ ರಾಣಿಯರೇ ಆಳ್ವಿಕೆ ನಡೆಸಿರುವುದಕ್ಕೆ ಅನೇಕ ಆಧಾರಗಳಿವೆ. ಕೃಷ್ಣದೇವರಾಯನು ತನ್ನ ರಾಣಿಯಾದ ಜಗನಮೋಹಿನಿಗೆ ಆಂಧ್ರಪ್ರದೇಶದ ಉಸ್ತುವಾರಿಯನ್ನು ವಹಿಸಿದುದು ಕಂಡುಬರುತ್ತದೆ. ಅಂದಿನ ಕಾಲದ ಮಹಿಳೆಯರು ಗೃಹಿಣಿಯರಾಗಿ, ಯುದ್ಧದ ಸಮಯದಲ್ಲಿ ಹೋರಾಟಗಾರ್ತಿಯರಾಗಿ, ವ್ಯಾಪಾರಗಾರ್ತಿಯರಾಗಿ, ಕುಸ್ತಿ ಮಾಡುವವಳಾಗಿ, ಕವಯತ್ರಿಯರಾಗಿ, ಸಾಹಿತಿಗಳಾಗಿ, ಆಡಳಿತಾಧಿಕಾರಿಗಳಾಗಿ, ರಾಣಿಯರ ಸಖಿಯರಾಗಿ, ಕೃಷಿಕರಾಗಿ, ಸಂಸಾರದ ಭಾರ ಹೊರುವವರಾಗಿ ಇದ್ದದ್ದು ಕಂಡುಬರುತ್ತದೆ.

ಸಂಗಮ ಅರಸರ ಮಲ್ಲಿಕಾರ್ಜುನನ ಅವಧಿಯ ಶಾಸನವೊಂದರ ಪ್ರಕಾರ ನಾಗಮಂಗಲದ ಪ್ರಭು ಮಹಪ್ರಧಾನಿ ತಿಮ್ಮಣ್ಣದಂಡನಾಯಕರ ಪತ್ನಿಯಾದ ರಂಗಾಂಬಿಕೆಯು

ಮೇಲುಕೋಟೆಯ ಚೆಲುವನಾರಾಯಣರಿಗೆ ಆಭರಣಗಳು, ಬೆಳ್ಳಿಯ ಪಲ್ಲಕ್ಕಿ ಮತ್ತು ಕೆರೆಯೊಂದನ್ನು ಕಟ್ಟಿಸಿ ದಾನವಾಗಿ ನೀಡುವಳು. ಪಾಳುಬಿದ್ದ ನಿವೇಶನವನ್ನು ಕೊಂಡು ತನ್ನ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿ ಅದರಲ್ಲಿ ೨೪ ಜನ ಬ್ರಾಹ್ಮಣರ ಭೋಜನಕ್ಕೆ ಮತ್ತು ಆ ಸ್ಥಳವನ್ನು ರಾಮಾನುಜಕೂಟ ವನ್ನಾಗಿ ಪರಿವರ್ತಿಸಲು ಗ್ರಾಮಗಳನ್ನು ಮತ್ತು ಹಣವನ್ನು ದಾನವಾಗಿ ನೀಡಿರುವಳು.[೧೧೦] ಹೀಗೆ ರಾಜವಂಶದ ಮಹಿಳೆಯರು ಮಾಡಿದ ದಾನಧರ್ಮಗಳೂ ಸಾಮಾನ್ಯವರ್ಗದ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದವು. ಸೆಟ್ಟಿ ಕುಲದ ಮಹಿಳೆಯರ ದಾನ ಧರ್ಮಗಳ ಬಗ್ಗೆ ನೋಡೋಣ.

ಕಾಲದ ಉಲ್ಲೇಖವಿಲ್ಲದ ಒಂದು ತೆಲುಗು ಶಾಸನದಲ್ಲಿ ಭೋಜಸೆಟ್ಟಿಯ ಮಗ ಸಿರಿಗಿ ಸೆಟ್ಟಿಯ ಹೆಂಡತಿ ಮಾಟಮ್ಮಳು ಹಂಪೆಯ ಉಯ್ಯಾಲೆಗಾಗಿ ಕಂಬ ನಿಲ್ಲಿಸಿದ್ದನ್ನು ತಿಳಿಸುತ್ತದೆ.[೧೧೧] ಚಕ್ರವರ್ತಿ ಮಲ್ಲಿಕಾರ್ಜುನನ ಕಾಲಕ್ಕೆ ಸಂಬಂಧಪಟ್ಟ ದೊಡ್ಡ ಕೆರೆಯ ಮನೆಯ ಬಳಿ ದೊರೆತಿರುವ ಕ್ರಿ.ಶ.೧೪೫೦ ಏಪ್ರಿಲ್ ೨೪ ಶುಕ್ರವಾರಕ್ಕೆ ಸೇರುವ ಒಂದು ಶಾಸನವು ಕೋಟಿಯಕನಾಯಕಿತಿಯು ಮಠವೊಂದಕ್ಕೆ ಮಾಡಿದ ಧರ್ಮದ ವಿವರ ನೀಡುತ್ತದೆ.[೧೧೨] ಚಕ್ರವರ್ತಿ ಮಲ್ಲಿಕಾರ್ಜುನನ ಆಜ್ಞೆ ಮೇರೆಗೆ ಲಿಂಗಪ್ಪವೊಡೆಯನು ಆಗ ಬಾರಕೂರು ರಾಜ್ಯಪಾಲನಾಗಿ ಕಾರ್ಯನಿರ್ವಹಿಸಿದ್ದ. ಆಗ ನಂಡುಹಳಿಯ ಉಲಿನರುಳೆಯರ ಬಳಿಯ ಕೋಟಿಯಕನಾಯಕಿತಿ ಮತ್ತು ಆಕೆಯ ಮಗ ಮೆರವಣ್ಣಸೆಟ್ಟಿಯರು ತಾವು ನಡೆಸಿಕೊಂಡು ಬರುತ್ತಿದ್ದ ಮಠಕ್ಕೆ ಭೂಮಿ ಮತ್ತು ಹೊನ್ನಿನ ದಾನ ಮಾಡಿದರು. ಇದರ ಆದಾಯದಿಂದ ಮಠದಲ್ಲಿ ನಿತ್ಯ ಪೂಜೆ, ವಿಶೇಷ ದಿನಗಳ ಪೂಜೆ ಮತ್ತು ಬ್ರಾಹ್ಮಣರ ಭೋಜನಗಳಿಗೆ ವ್ಯವಸ್ಥೆ ಮಾಡಲಾಯಿತು.

ಕೋಟಿಯಕ ನಾಯಕಿತಿಯು ಭೂಮಿ ಅದಕ್ಕೂ ಮಿಗಿಲಾಗಿ ಹಣ ಸಂಬಂಧದ ಭಾರಿ ಆರ್ಥಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದಂತೆ ಕಾಣುತ್ತದೆ. ಬಸರೂರು ಪಡುವಕೇರಿಯ ಹಲವು ಸೆಟ್ಟಿಕಾರರು ಈಕೆಯಿಂದ ೨೦೦ ಹೊನ್ನು ಕಾಟಿಗದ್ಯಾಣವನ್ನು ಸಾಲವಾಗಿ ಪಡೆದಿದ್ದರು. ಇದಕ್ಕೆ ತೆರಬೇಕಾದ ಬಡ್ಡಿಯ ಹಣಕ್ಕೆ ಹದಿಮೂರು ಮುಡಿ ಅಕ್ಕಿ ಕೊಡಬೇಕೆಂದು ನಿರ್ಧರಿಸಿ ಅದರಲ್ಲಿ ವಾರ್ಷಿಕ ೧೦ ಮುಡಿಯನ್ನು ಮಠಕ್ಕೆ ಕೊಡುವಂತೆ ಮಾಡಿದಳು.[೧೧೩] ಇದಲ್ಲದೆ ಅನ್ಯಮೂಲಗಳಿಂದಲೂ ಮಠಕ್ಕೆ ವರಮಾನ ಬರುವಂತೆ ಮಾಡಿದಳು. ಇದು ಒಟ್ಟು ಅಕ್ಕಿ ರೂಪದಲ್ಲಿ ವಾರ್ಷಿಕ ೯೯ ಮುಡಿ ಎಂದು ಶಾಸನ

ಹೇಳುತ್ತದೆ.[೧೧೪] ಈ ಮಠದಲ್ಲಿ ಪ್ರತಿ ದ್ವಾದಶಿ ಮತ್ತು ಅಮವಾಸ್ಯೆಯಂದು ದೋಸೆ ಮಾಡುವ ರೂಢಿ ಇತ್ತೆಂದು ಶಾಸನದಿಂದ ತಿಳಿದುಬರುತ್ತದೆ. ದೋಸೆಯ ಉದ್ದಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿದ್ದನ್ನು ಇಲ್ಲಿ ಕಾಣುತ್ತೇವೆ.[೧೧೫] ಪ್ರಾಯಶಃ ಈ ಮಠ "ಕೋಟೆಯ ನಾಯಕಿತಿಯ ಮಠ" ಎಂದೇ ಹೆಸರಾಗಿತ್ತು. ಹಲರು ಸೆಟ್ಟಿಕಾರರು ಕೊಂಡ ಸಾಲದ ಬಗ್ಗೆ ಹೇಳುವಾಗ "ಶಾಸನದಲ್ಲಿ ಕಾಟಿಗ ೨೦೦ ಅಕ್ಷರದಲು ಯಿಂನೂರು ಹೊನು ಯಿ ಹೊನ್ನಿಂಗೆ ಬಡ್ಡಿ ಪ್ರತಿವರುಷಣ ೧ಕ್ಕೆ ನಾಲ್ವಂಡೆಯಲು ಅಕ್ಕಿ ಮುಡಿ ೧೩ ಒಳಗೆ ಮುದೆಸೆಟಿಯ ಧರ್ಮಕ್ಕೆ ಅಕ್ಕಿ ಮುಡೆ ೩ ನುಳಿಯೆ ಕೋಟಿಯಕನಾಯಕಿಯ ಮಟಕೆ ನಡಸುವ ಅಕಿ ಮು ೧೦" ಎಂದಿದೆ.[೧೧೬]

ಬಸರೂರು ಒಂದು ಅತ್ಯಂತ ಪ್ರಮುಖವಾದ ಬಂದರು ಮತ್ತು ವಾಣಿಜ್ಯ ಕೇಂದ್ರವಾಗಿದ್ದರಿಂದ ಇದರ ರಕ್ಷಣೆಗೆ ವಿಜಯನಗರ ಚಕ್ರವರ್ತಿಗಳು ನೇರ ಆಳ್ವಿಕೆಯ ಸೂಕ್ತ ವ್ಯವಸ್ಥೆ ಮಾಡಿದ್ದರು. ಊರು ಕೋಟೆಯಿಂದ ರಕ್ಷಿಸಲ್ಪಟ್ಟಿತ್ತು. ಅದನ್ನು ನೋಡಿಕೊಳ್ಳಲು ನಾಯಕ ದಳಪತಿಗಳ ವ್ಯವಸ್ಥೆ ಇತ್ತು ಎಂಬ ವಿಚಾರ ಇಲ್ಲಿ ಪರೋಕ್ಷವಾಗಿ ಬೆಳಕಿಗೆ ಬಂದಿದೆ. ಸಹಜವಾಗಿಯೇ ನಾಯಕ ಮನೆತನಕ್ಕೆ ಹಲವಾರು ರೀತಿಯ ಜವಾಬ್ದಾರಿ ಕರ್ತವ್ಯಗಳು ಇದ್ದುವು. ಕೋಟಿಯ ನಾಯಕಿ ಇಲ್ಲಿ ಒಂದು ರೀತಿಯ ಜವಾಬ್ದಾರಿಯನ್ನು ಪ್ರಕಟಿಸಿದ್ದಾಳೆ. ಈಕೆಯ ಹೆಸರು ಬೇರೆ ಇದ್ದಿರಬಹುದು. ಆದರೆ ರೂಢಿನಾಮವೇ ಅಂಕಿತನಾಮವಾಗಿದೆ. ಒಟ್ಟಿನಲ್ಲಿ ಈಕೆ ತನ್ನ ಅಂತಸ್ತು, ಅಧಿಕಾರಗಳಿಗೆ ತಕ್ಕುದಾದ ರೀತಿಯಲ್ಲಿ ಮಠವನ್ನು ಮೇಲೆತ್ತಿ ಅದು ಇತ್ತೋಪ್ಯತಿಶಯವಾಗಿ ನಡೆಯುವಂತೆ ಮಾಡಿದಳು. ಈಕೆಯ ಗುಣ ನಿಜಕ್ಕೂ ಮೆಚ್ಚುವಂತಹುದು.

ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಬಸರೂರ ಪಡುವ ಕೇರಿಯ ಜೋಕಿಸೆಟ್ಟಿಯ ಮಗಳು ಮತ್ತು ನಾರಣಸೆಟ್ಟಿಯ ಹೆಂಡತಿಯೂ ಆದ ತಿರುಮಕ್ಕಿ ಸೆಟ್ಟಿತಿಯು ಪಡುವ ಕೇರಿಯಲ್ಲೊಂದು ಮಠವನ್ನು ಕಟ್ಟಿಸಿ ಅದಕ್ಕೆ ಕ್ರಿ.ಶ.೧೫೧೯ ಅಕ್ಟೋಬರ್ ೨೫ ಮಂಗಳವಾರದಂದು ಭೂಮಿ ಹಾಗೂ ಒಂದು ನೂರು ದೊಡ್ಡ ವರಹವನ್ನು ದಾನ ಮಾಡಿದಳು. ದಾನದ ವಿವರಗಳು ಸಾಲ, ಮೈಸಾಲ ಅವುಗಳ ಬಡ್ಡಿ, ತೆರಿಗೆ ಮತ್ತು ಭೂವ್ಯವಹಾರಗಳ ವಿಚಾರ ಶಾಸನದಲ್ಲಿದೆ. ಮೂವತ್ತು ಸಾಲು ಬರಹ ಇರುವ ಈ ಶಾಸನ ಅಪೂರ್ಣವಾಗೇ ಉಳಿದಂತಿದೆ.[೧೧೭] ವಿಜಯನಪ್ಪವೊಡೆಯ ಆಗ ಬಾರಕೂರಿನ ರಾಜ್ಯಪಾಲನಾಗಿದ್ದ.

ಬಸರೂರು ಮಹಾಲಿಂಗ ದೇವಸ್ಥಾನದಲ್ಲಿರುವ ಒಂದು ಶಿಲಾಶಾಸನ ಕ್ರಿ.ಶ.೧೫೨೮ ಅಕ್ಟೋಬರ್ ೧೪ ಬುಧವಾರಕ್ಕೆ ಸೇರಿದ್ದ[೧೧೮] ಚಕ್ರವರ್ತಿ ಕೃಷ್ಣರಾಯ ಮಹಾರಾಯನ ಆಡಳಿತವನ್ನು ಪ್ರಸ್ತಾಪಿಸಿ ಆಗ ಬಾರಕೂರಿನ ರಾಜ್ಯಪಾಲನಾಗಿ ಆರಗದ ಅಳಿಯ ತಿಮ್ಮಣ್ಣವೊಡೆಯ ಕಾರ್ಯನಿರ್ವಹಿಸಿದ್ದ ಎಂದು ತಿಳಿಸುತ್ತದೆ. ಆ ಸಂದರ್ಭದಲ್ಲಿ ಸೋಮಣ್ಣ ಸೆಟ್ಟಿಯ ಮಗ ಶಂಕರ ಸೆಟ್ಟಿಯು ಬಸರೂರು ಪಡುವ ಕೇಯ್ರ್ಯಾ ನಖರೇಶ್ವರ ಶ್ರೀ ಮಹಾಲಿಂಗದೇವರ ಬದಗಟ್ಟಿನಲ್ಲಿ ಮಠವನ್ನೂ ಕಟ್ಟಿಸಿದ. ಈ ಮಠದ ಸ್ವಾಸ್ಥೆಗೆ ಶಂಕರ ಸೆಟ್ಟಿಯ ಹಿರಿಯ ಹೆಂಡತಿಯ ಮಗ ಮಲ್ಲಪಸೆಟಿ, ಎರಡನೆಯ ಹೆಂಡತಿ ಸಂಕಮ್ಮ ನಾಯಕಿತಿ ಮತ್ತು ಆಕೆಯ ಸೋದರಿ ದೇಕು ಅಡೆಯಿತಿ ಯಿರು ಭೂಮಿ ಹಾಗೂ ಹೊಂನಿನ ದಾನಗಳನ್ನು ಮಾಡಿದರು. ನಂದಾ ದೀಪ ಉರಿಸುವುದಕ್ಕಾಗಿ ಒಂದು ತೋಟವನ್ನು ದಾನ ಮಾಡಿದರು. ಶಾಸನದಲ್ಲಿ ಈ ಬಗ್ಗೆ ವಿವರ ಇದೆ.[೧೧೯] ಇಲ್ಲಿ ಮಾಡಿರುವ ಹೊಂನಿನ ದಾನವನ್ನು ಭೂವ್ಯವಹಾರಗಳಲ್ಲಿ ಮೂಲಧನವಾಗಿ ಉಪಯೋಗಿಸಿ ನಾನಾ ರೀತಿಯ ಸಾಲಗಳನ್ನು ಕೊಟ್ಟು ಅದರಿಂದ ಬರುವ ಬಡ್ಡಿಯ ಹಣಕ್ಕಾಗಿ ಅಂದಿನ ಮೌಲ್ಯಕ್ಕೆ ಅಕ್ಕಿ ಪ್ರಮಾಣವನ್ನು ನಿಗದಿಪಡಿಸಿ ಅದನ್ನು ಮಠಕ್ಕೆ ಕೊಡುವುದೆಂದು ಆದೇಶಿಸಲಾಯಿತು.

ಕಾರಿಕಾಲಮ್ಮೆಯ ರಗಳೆಯ ವಿವಿಧ ಹಂತಗಳನ್ನು ಪರಿಶೀಲನೆ ಮಾಡುವ ಮೂಲಕ ಹರಿಹರನು ಚಿತ್ರಿಸಿರುವ ಆಕೆಯ ಸ್ತ್ರೀ ಶಕ್ತಿಯ ಸ್ವರೂಪವನ್ನು ಅರಿಯಬಹುದು. ಕಾರಿಕಾಲಮ್ಮೆ ಕಾರಿಕಲ್ ಎಂಬ ಊರಿನ ಮಾಣಿಕಶೆಟ್ಟಿ ಮಡದಿ. ಆಕೆಯ ಪತಿ ವ್ಯಾಪಾರಿ ವಂಶದ ಕುಲಕ್ಕೆ ಸೇರಿದವನು. ತನ್ನ ಕುಲಪರಂಪರೆಯಿಂದಾಗಿ ಆತ ವ್ಯವಹಾರ ಪರಿಣತಿಯಲ್ಲಿ ಸಿದ್ಧಹಸ್ತ. ಇಂಥ ವ್ಯವಹಾರಿ ಗಂಡನನ್ನು ಪಡೆದಿರುವ ಕಾರಿಕಾಲಮ್ಮೆ ಅರಿವಿನ ಹಾದಿಯ ಹಂಬಲ ಹೊತ್ತವಳು. ತನ್ನ ಸಾಂಸಾರಿಕ ವ್ಯವಹಾರಗಳಿಗೆ, ಕೌಟುಂಬಿಕ ವ್ಯವಹಾರಗಳಿಗೆ ಧಕ್ಕೆ ಉಂಟಾಗದ ಹಾಗೆ ಕಾರಿಕಾಲಮ್ಮೆ ಅರಿವಿನ ಸಾಧನೆಯಲ್ಲಿ ತೊಡಗಿಕೊಂಡವಳು. ಹಾಗಾಗಿ ಭಕ್ತಿ ಮಾರ್ಗದಲ್ಲಿ ಆಕೆ ಜ್ಞಾನ ಸಾಧನೆ ಮಾಡಿರುವುದು ಅವಳನ್ನು ಬಿಟ್ಟು ಉಳಿದವರಿಗೆ ತಿಳಿದಿಲ್ಲ. ಕಾರಿಕಾಲಮ್ಮೆ ಒಬ್ಬ ಗುಪ್ತ ಸಾಧಕಿಯಾಗುವಲ್ಲಿ ಆಕೆಯ ಕುಟುಂಬದ ಸಂಸಾರದ ಮಾನಸಿಕ ಪರಿಸರವೇ ಕಾರಣವಾಗಿದೆ ಎಂದು ಹರಿಹರ ಚಿತ್ರಿಸಿದ್ದಾನೆ.

ತಿರುಮಕ್ಕ ರಾವಲತಿಯು ಮಕ್ಕಳಿಲ್ಲದಿದ್ದರೂ ಶ್ರೇಷ್ಠದಾನಿಯಾಗಿದ್ದಳು. ತಮ್ಮ ಹತ್ತಿರವಿದ್ದ ಚಿನ್ನವನ್ನು ತನ್ನ ತಾತನಾದ ಶಂಕರಶೆಟ್ಟಿಯು ಮಠವೊಂದನ್ನು ಕಟ್ಟಿಸುವುದಕ್ಕಾಗಿ

ಸಹಾಯ ಮಾಡಿದಳು. ಅದರೊಂದಿಗೆ ಜಮೀನನ್ನು ನೀಡಿದಳು.[೧೨೦] ಹಾಗೆಯೇ ಏಪ್ರಿಲ್ ೧೧ನೇ ಭಾನುವಾರ ಕ್ರಿ.ಶ.೧೫೨೦ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾಸ್ರೂರಿನಲ್ಲಿ ನಕರೇಶ್ವರ ದೇವರ ಸೇವೆಗಾಗಿ ಕಾಣಿಕೆಯನ್ನು ನೀಡಿದಳು.[೧೨೧] ಶಂಕರಶೆಟ್ಟಿಯ ಎರಡನೇ ಹೆಂಡತಿಯಾದ ಸಂಕಮ್ಮ ನಾಯಕಿತ್ತಿಯು ತನ್ನ ಮಲಮಗನಾದ ಮಲ್ಲಪ್ಪಶೆಟ್ಟಿ ಮತ್ತು ಅವಳ ಕಿರಿಯ ಸಹೋದರಿ ದೇಕು ಅದೇ ಮಿತಿಯೊಂದಿಗೆ ಅವಳ ಗಂಡ ಕಟ್ಟಿಸಿದ ಮಠಗಳ ನಿರ್ವಹಣೆಯ ಉದ್ದೇಶದಿಂದಾಗಿ ಅಕ್ಟೋಬರ್ ೧೪ನೇ ಬುಧವಾರ ಕ್ರಿ.ಶ.೧೫೨೮ರಲ್ಲಿ ಭೂಮಿಯನ್ನು ನೀಡಿದಳು.[೧೨೨] ಲಕ್ಕಿಶೆಟ್ಟಿಯ ಹೆಂಡತಿಯಾದ ಲಿಂಗಮ್ಮಳು ತನ್ನ ಮಗ ಲಿಂಗಯ್ಯನು ಸಕಲೈಶ್ವರ್ಯವನ್ನು ಹೊಂದಲೆಂದು ಪ್ರಾರ್ಥನೆಯಿಂದ ಕಾಳಿದೇವ ದೇವರಿಗೆ ಪೂಜೆ ಹಾಗೂ ಸೇವೆಗಾಗಿ ಭತ್ತ ಮತ್ತು ಚಿನ್ನವನ್ನು ದಾನ ಮಾಡಿದಳು. ಹಾಗೂ ದೇವಸ್ಥಾನದ ಮುಖ್ಯಸ್ಥನಿಗೆ ಡಿಸೆಂಬರ್ ೨೩ ಮಂಗಳವಾರ ಕ್ರಿ.ಶ.೧೫೫೦ರಂದು ದೇವರಸಿಜಿಯ ಎಂಬ ಕೊಡುಗೆಯನ್ನು ನೀಡಿದಳು.[೧೨೩] ೧೩೮೭ರಲ್ಲಿ ಹರಿಹರನ ಆಳ್ವಿಕೆಯಲ್ಲಿ ಬೋಮಕ್ಕಳು ತನ್ನ ಮಲೆಯಂದೂರಿನ ಜಾದವರ ಚೇಲಿ ಬಯಾಚಿಶೆಟ್ಟಿಯ ಸಾವಿನೊಂದಿಗೆ ಮಹಾಸತಿಯಾದಳು ಎಂದು ಒಂದು ಶಾಸನದಲ್ಲಿ ಉಲ್ಲೇಖವಿದೆ.[೧೨೪] ಅಭಿರಾಯ ಕಾಮಾಕ್ಷಿ ಅಥವಾ ಅತುಕುರಿಮೊಲ್ಲ ಇವಳು ಪ್ರಸಿದ್ಧ ಕವಯಿತ್ರಿಯರಲ್ಲಿ ಒಬ್ಬಳು.

ಅಭಿರಾಮ ಕಾಮಾಕ್ಷಿಯ ಸಹೋದರನಾದ ಸ್ವಯಂಭುವು ಒಂದನೇ ಅರುಣಗಿರಿನಾಥನ ಅಳಿಯ. ಇವನು ಅಭಿನವ ರಾಮಾಭ್ಯುದಯವನ್ನು ಮೋಹಕವಾದ ಕವಿತೆಗಳಲ್ಲಿ ರಚಿಸಿದನು. ಇದರಲ್ಲಿ ೨೪ ಕಾವ್ಯದ ಅಧ್ಯಾಯಗಳಿವೆ. ಹಾಗೂ ಇದು ರಾಮಾಯಣದ ಕಥೆಯನ್ನು ನಿರೂಪಿಸುತ್ತದೆ. ಇದೇ ಕಾಲದಲ್ಲಿ ಬರೆದ ಇನ್ನೊಂದು ಕೃತಿಯಾದ ರಾಮಾಭ್ಯುದಯದಿಂದ ಪ್ರತ್ಯೇಕಿಸಲು ಇದನ್ನು "ಅಭಿನವ ರಾಮಾಭ್ಯುದಯ ಮೊಲ್ಲ" ಎಂದು ಕರೆಯಲಾಗಿದೆ. ಈ ಕವಯಿತ್ರಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದವಳು. ಪೆನ್ನಾರ್ ನದಿಯ ಎಡದಂಡೆಯ ಮೇಲಿನ ನೆಲ್ಲೂರಿನ ಉತ್ತರಕ್ಕೆ ಐದು ಮೈಲು ದೂರದಲ್ಲಿರುವ ಗೋಪವರಂ (ಈಗಿನ ಪಡುಗುಪಾಡು)ನಲ್ಲಿದ್ದ ಒಬ್ಬ ಕುಂಬಾರ ಕೇಶವಶೆಟ್ಟಿಯ ಮಗಳಾಗಿದ್ದಳು. ಇವಳು ಬದುಕಿದ ಕಾಲವು ನಿರ್ದಿಷ್ಟವಾಗಿ ತಿಳಿಯದೇ ಇದ್ದರೂ ಇವಳು ಕೃಷ್ಣದೇವರಾಯನ ಕಾಲ ಅಥವಾ ಅದಕ್ಕೂ ಮುನ್ನ ಪ್ರವರ್ಧಮಾನಕ್ಕೆ ಬಂದಿದ್ದಳು ಎಂಬುದರಲ್ಲಿ ಯಾವುದೇ ಅನಿಶ್ಚಿತತೆಯಿಲ್ಲ. ಮೊಲ್ಲಳ ರಾಮಾಯಣಂ ಗಾತ್ರದಲ್ಲಿ ಬಹಳ ಚಿಕ್ಕದಾದರೂ ಇದೊಂದು ಉತ್ತಮ ಸಾಹಿತ್ಯಕ

ಗುಣಗಳನ್ನು ಮೈಗೂಡಿಸಿಕೊಂಡಿರುವ ಶ್ರೇಷ್ಟ ಕೃತಿ. ಮೊಲ್ಲಳು ಬಹಳ ಸತ್ವವುಳ್ಳ ಬರಹಗಾರಳು.[೧೨೪]

ಕ್ರಿ.ಶ.೧೫೨೦ರ ಏಪ್ರಿಲ್ ೧ರ ಶಾಸನದ ಕಾಲಾವಧಿಯಲ್ಲಿ ಕೃಷ್ಣದೇವರಾಯನು ಆಳುತ್ತಿರುವಾಗ ಇವರ ನಿರೂಪದಿಂದ ಬಾರಕೂರು ರಾಜ್ಯವನ್ನು ವಿಜಯಪ್ಪವೊಡೆಯನು ಆಳುತ್ತಿರುತ್ತಾನೆ. ಸೆಟ್ಟಿವಾಡಿಯ ಅಲ್ಲುಸೆಟ್ಟಿಯ ಮಗ ಸಂಕರಸೆಟ್ಟಿಯು ತನ್ನ ಮೊಮ್ಮಗಳಾದ ತಿರುಮಕ್ಕರಾವುತಿಗೆ ಮಕ್ಕಳಿಲ್ಲದ ಸಂಬಂಧ ಆಕೆಯ ಸ್ವತ್ತಿನ ಬಂಗಾರದಲ್ಲಿ ಒಂದು ಮಠವನ್ನು ಕಟ್ಟಿ ಅದರ ನಿರ್ವಹಣೆಗೆ ಗದ್ದೆ, ವರಹಗಳನ್ನು ದಾನವಾಗಿ ನೀಡುವನು. ಬ್ರಾಹ್ಮಣರ ಊಟಕ್ಕೆ ಅಕ್ಕಿ ಮುಡಿಗಳನ್ನು ದಾನವಾಗಿ ನೀಡಲಾಗಿದೆ. ಮಠಕ್ಕೆ ಮಾತ್ರವಲ್ಲದೆ ನಖರೇಶ್ವರ ಮಹಾದೇವಾಲಯಕ್ಕೆ ರಾಮನವಮಿಯ ಸೇವೆಗೆಂದೂ ದಾನ ನೀಡಲಾಗಿದೆ.

ವಿಜಯನಗರದ ಅರಸರ ಕಾಲದಲ್ಲಿದ್ದಂತೆ ಹೊಯ್ಸಳ, ಚಾಲುಕ್ಯ ಮುಂತಾದ ರಾಮಮನೆತನಗಳ ಸ್ತ್ರೀಯರೂ ದಾನ ಧರ್ಮಾದಿಗಳಿಂದ ಪ್ರಸಿದ್ಧರಾಗಿದ್ದರು. ಹೊಯ್ಸಳ ವಿಷ್ಣುವರ್ಧನನ ಹೆಂಡತಿಯಾದ ಶಾಂತಲೆಯು ನೃತ್ಯಕಲೆಯಲ್ಲಿ ನಿಷ್ಣಾತಳಾಗಿದ್ದಳು. ಚಾಲುಕ್ಯ ಜಯಸಿಂಹನ ಸಹೋದರಿಯಾದ ಅಕ್ಕಾದೇವಿಯು ಪಟ್ಟದಕಲ್ಲಿನ ಸುತ್ತುಮುತ್ತಲಿನ ಪ್ರದೇಶವಾಗಿದ್ದ ಕಿಸುಕಾಡು-೭೦ನ್ನು ಆಳುತ್ತಿದ್ದಳು. ಅತಿಮಬ್ಬೆಯು, ಜೈನಧರ್ಮ ಪತಾಕೆಯಾಗಿದ್ದಳು. ಅವಳು ೧೫೦೦ ಬಸದಿಗಳನ್ನು ಕಟ್ಟಿಸಿದಳು. ಅವುಗಳಲ್ಲಿ ಸುವರ್ಣ ಕಲಶದಿಂದ ಕೂಡಿದ ಲಕ್ಕುಂಡಿಯ ಜೈನ ಬಸದಿಯು ಕಳಶದಂತೆ ಶೋಭಿಸುತ್ತಿತ್ತು.ಅತ್ತಿಮಬ್ಬೆಯು ದಾನಚಿಂತಾಮಣಿಯೂ, ಪವಾಡ ಸ್ತ್ರೀಯೂ ಆಗಿದ್ದಳು. ಅವಳು ಪೊನ್ನ ವಿರಚಿತ ಶಾಂತಿ ಪುರಾಣದ ೧೦೦೦ ಪ್ರತಿಗಳನ್ನು ಮಾಡಿಸಿ ಹಂಚಿದ್ದಳು. ಇದು ಅವಳಲ್ಲಿದ್ದ ಜೈನಧರ್ಮ ಶ್ರದ್ಧೆಯನ್ನು ಎತ್ತಿ ತೋರಿಸುತ್ತದೆ. ಈ ದಿಸೆಯಲ್ಲಿ ದೇಕಬ್ಬೆ ಮತ್ತು ಗುಂಡುಮಬ್ಬೆಯನ್ನು ನೆನೆಯಬಹುದು.

ವಿದ್ಯಾನಗರಿಯಲ್ಲಿ ಸದಾಶಿವರಾಯನು ಆಳುತ್ತಿದ್ದಾಗ, ಹಡಪದ ಬಯ್ಯಪನಾಯಕನ ಮಗ ಕೃಷ್ಣಪ್ಪನಾಯಕನು ಕೋಗಳಿಯ ಬಳಿಯ ಕೊಟ್ಟೂರನ್ನು, ೩೨೦೦೦ದ ಸೀಮೆಯನ್ನೂ ಪಾಲಿಸುತ್ತಿದ್ದಾಗ, ಇವನ ಸಾಮಂತ ಹಳವಿನಾಯಕನು ಬಾಗಳಿಯನ್ನು ಆಳುತ್ತಿದ್ದಾಗ, ಬಾಗುಳಿಯ ಪಟ್ಟಣಸ್ವಾಮಿಯಾದ ಲಕ್ಕಿಸೆಟ್ಟಿಯ ಹೆಂಡತಿ ಲಿಂಗಮ್ಮಳು ತನ್ನ ಮಗ ಲಿಂಗಯ್ಯನಿಗೆ ಶುಭವಾಗಲೆಂದು ಕಲಿದೇವರಿಗೆ ರಾತ್ರಿ ನೈವೇದ್ಯಕ್ಕೆಂದು ಸ್ಥಾನಿಕ ದೇವರಾಸಿಜೀಯನ

ಕೈಯಲಿ ದಾನ ನೀಡುತ್ತಾಳೆ. ಲಿಂಗಮ್ಮಳು ಕಲಿದೇವತೆಗೆ ನಮಸ್ಕಾರ ಮಾಡಿ ತಮ್ಮ ಮಕ್ಕಳು ಪತಿ ಲಿಂಗಿಸೆಟ್ಟಿಯರು ಸುಖವಾಗಿರಲೆಂದು ಕಲಿದೇವಸ್ವಾಮಿಗೆ ರಾತ್ರಿ ನೈವೇದ್ಯಕ್ಕಂ ನಡವಂತಾಗಿಯೆ ತನ್ನ ಕೈಯಿಂದ ದಾನ ನೀಡಿದಳು.[೧೨೬]

ಪ್ರಾಚೀನ ಕರ್ನಾಟಕದ ವೃತ್ತಿ ವ್ಯಾಪಾರದಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಪ್ರಾಚೀನ ಕಾಲದ ವರ್ತಕ ಶ್ರೇಣಿಗಳಾದ ಮುಮ್ಮರಿದಂಡ, ಗವಱ, ಗಾತ್ರಿಗ, ಬೀರ, ಬೀರವಣಿಗೆ, ಸೆಟ್ಟಿ, ಸೆಟ್ಟಿಗುತ್ತ, ವೇಳೆರಾಜಿ ಮುಂತಾದ ಪಂಗಡಗಳಿದ್ದವು. ಇದರಂತೆ ಚಿಕ್ಕ ವ್ಯಾಪಾರಿಕೆ ಮಾಡಿಕೊಂಡ ಮಹಿಳೆಯರ ಮೇಲಿನ ಪಂಗಡಕ್ಕೆ ಸಂಬಂಧಿಸಿದ್ದರೂ ತಮ್ಮದೇ ಆದ ಪುಟ್ಟ ಜಗತ್ತನ್ನು ನಿರ್ಮಾಣ ಮಾಡಿಕೊಂಡು ಸಮಾಜದ ಸ್ವಾಸ್ಥ್ಯ, ಆರ್ಥಿಕ ಸಂತೃಪ್ತಿ ಕಾಯ್ದುಕೊಂಡು ಬಂದುದು ಗಮನಾರ್ಹ. ವ್ಯಾಪಾರೋದ್ದಿಮೆ, ಕೈಗಾರಿಕೆ, ವೃತ್ತಿ ಸಂಘಗಳಲ್ಲಿ ಸೆಟ್ಟಿ ಮನೆತನದ ಮಹಿಳೆಯರು ಶ್ರೀಮಂತ ವರ್ಗದ ಗಾವುಂಡಗಳಂತಹ ಅಧಿಕಾರವರ್ಗದ ಮತ್ತು ಇತರ ಸಾಮಾನ್ಯ ವ್ಯಾಪಾರಿ ವರ್ಗದ ಗಾವುಂಡುಗಳಂತಹ ಅಧಿಕಾರವರ್ಗದ ಮತ್ತು ಇತರ ಸಾಮಾನ್ಯ ವ್ಯಾಪಾರಿ ವರ್ಗದ ಮಹಿಳೆಯರು ಚಿಕ್ಕಪುಟ್ಟ ವ್ಯಾಪಾರದ ಕಡೆಗೆ ಒಲವು ಉಳ್ಳವರಾಗಿದ್ದರು.

ಕ್ರಿ.ಶ.೧೫ನೆಯ ಶತಮಾನದ ಸೀಮಂತೂರಿನ ಶಾಸನವು[೧೨೭] ಕೋಟಿಯಣ್ಣ ಹೆಗ್ಗಡೆ ಬಾಚಸೆಟ್ಟಿಯ ಸಹೋದರ ಹರಿಹರ ಸೆಟ್ಟಿ ಎಂಬಾತ ಗಡಿಗಳ ಎಲ್ಲೆಯ ಮೇಲಿನ ನಿಯಂತ್ರಣ ವನ್ನು ಗಟ್ಟಿಗೊಳಿಸಿದುದರ ದಾಖಲೆಯಾಗಿದೆ. ಈ ಕೋಟಿಯಣ್ಣ ಹೆಗ್ಗಡೆಯು ಕಾಂಚ ಹೆಗ್ಗಡೆಯ ಬಳಿಕ ಸಾವಂತ ಮನೆತನದಿಂದ ಆಳಿದವನಿರಬೇಕು. ಕ್ರಿ.ಶ.೧೫೪೩ರ ಪಡುವ ಪಣಂಬೂರಿನ ಶಾಸನ, ಈ ಮನೆತನದ ಕಿನ್ನಿಕ ಸಾವಂತ ಮತ್ತು ಅವನ ಅಳಿಯ ದುಗಣ್ಣ ಸಾವಂತರನ್ನು ಹೆಸರಿಸುತ್ತದೆ. ಅನಂತತೀರ್ಥೇಶ್ವರನ ಪೂಜಾದಿ ಕಾರ್ಯಗಳಿಗಾಗಿ ದುಗಣ್ಣ ಸಾವಂತನ ಸಹೋದರಿ ಚೆನ್ನಮ್ಮದೇವಿಯು ಭೂದಾನ ನೀಡಿದುದನ್ನೂ ದುಗಣ್ಣ ಸಾವಂತನು ವ್ರತ ಕೈಗೊಂಡುದನ್ನು ಈ ಶಾಸನದಿಂದ ತಿಳಿಯಬಹುದಾಗಿದೆ.

ಮಹಾಪ್ರಧಾನ ಗೋಪರಸ ಒಡೆಯ(ಕ್ರಿ.ಶ.೧೩೬೬-೭೩) ಇವರು ಮಹಾಪ್ರಧಾನ ಮಲೆಯ ದಂಡನಾಯಕನ ಬಳಿಕ ಬಾರಕೂರು ರಾಜ್ಯವನ್ನಾಳಲು ಆಯ್ಕೆಯಾದ ರಾಜ್ಯಪಾಲ. ಈತನ ಕಾಲದಲ್ಲಿ ಕ್ರಿ.ಶ.೧೩೭೨ರ ಬಾರಕೂರಿನ ಸೋಮನಾಥೇಶ್ವರ ದೇವಾಲಯದ ಶಾಸನ[೧೨೮]ವೊಂದು ದಾನದ ವಿವರ ಒದಗಿಸುತ್ತದೆ. ಅಮಿತಕ್ಕ ಎಂಬಾಕೆ ಸೋಮಯ್ಯ ದೇವರಿಗೆ ೯೦ ಮೂಡೆ

ಭತ್ತವನ್ನು, ಮೇಲು ವೆಚ್ಚಕ್ಕಾಗಿ ಭೂಮಿಯೊಂದನ್ನು ಖರೀದಿಸಿ, ೫ ಮಂದಿ ಬ್ರಾಹ್ಮಣರಿಗೆ ಭತ್ರ ನಡೆಯುವಂತೆ ೩ ಸೆಟ್ಟಿಕಾರರು ಮತ್ತು ೧೫೦ ಪ್ರಜೆಗಳ ಸಮಕ್ಷಮ ಧಾರೆಯೆರೆದಳು. ಇದನ್ನು ಅನುಜಾನವಾಗಿ ನಡೆಸಿಕೊಂಡು ಬರತಕ್ಕದ್ದೆಂದು ರಾಜ್ಯಪಾಲ ಗೋಪರಸ ಒಡೆಯರ ಸ್ವಹಸ್ತದ ವೊಪ್ಪ ಸಾಕ್ಷಿಯನ್ನು ಪಡೆಯಲಾಯಿತು.[೧೨೯]

ಮಹಾಪ್ರಧಾನ ಬೊಮ್ಮರಸ ಒಡೆಯ ಬಾರಕೂರಿನ ರಾಜ್ಯವನ್ನು ಪಾಲಿಸುತ್ತಿರುವಾಗ, (ಕ್ರಿ.ಶ.೧೩೭೭-೧೩೮೧) ಮಹಿಳೆಯೊಬ್ಬಳು ನೀಡಿದ ದಾನವನ್ನು ತಿಳಿಸುವ ಶಾಸನವಿದು.[೧೩೦] ಸೋಮನಾಥ ದೇವರ ಸೇವೆಗಾಗಿ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ರಾಮಂಣ ಸೆಟ್ಟಿಯ ಹೆಂಡತಿ ನಾಗವ್ವೆ ಎಂಬಾಕೆ ಸೋಮಯ್ಯದೇವರ ರುದ್ರಪೂಜೆಗೆ ಮತ್ತು ೩ ಮಂದಿ ಬ್ರಾಹ್ಮಣರ ಭೋಜನ ಸಲುವಾಗಿ ೩೦ ಗದ್ಯಾಣಗಳನ್ನು ದಾನ ಮಾಡಿದಳು. ಅಲ್ಲದೇ ಅದೇ ದೇವರ ತುಪ್ಪದ ದೀವಿಗೆ, ಪಂಚಾಮೃತ ಇತ್ಯಾದಿ ಹಲವು ಸೇವೆಗಳಿಗಾಗಿ ಗದ್ಯಾಣಗಳನ್ನು ದಾನ ನೀಡಿದಳು. ಈ ದಾನವನ್ನು ಪಡೆದುಕೊಂಡು ದೇವರ ನಿಗದಿತ ಸೇವೆಗಳು ಸಾಂಗವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆ ಮಣೆಗಾರಕೇರಿಯ ಮೂವರು ಸೆಟ್ಟಿಕಾರರು ಮತ್ತು ಸಮಸ್ತ ಹಲರದ್ದಾಗಿದೆ.

ಬಾರಕೂರಿನ ಮಾರ್ಕಂಡೇಶ್ವರ ದೇವಾಲಯವನ್ನು ದ್ವಾದಶಿ ಮತ್ತು ರುದ್ರಪೂಜೆಯಂದು ಬ್ರಾಹ್ಮಣ ಭೋಜನಕ್ಕಾಗಿ ತಂಗಾಯಿ ಸೆಟ್ಟೇತಿ ಎಂಬಾಕೆ ಭೂದಾನ ನೀಡಿದಳು.[೧೩೧] ಮೂಡಬಿದರೆ ತ್ರಿಭುವನ ಚೂಡಾಮಣಿ ಚೈತ್ಯಾಲಯದಲ್ಲಿ ನಗಿರೆ ಭೈರವ ರಾಜನ ರಾಣಿ ನಾಗಲದೇವಿಯು ಮಾನಸ್ತಂಭವನ್ನು ಮಾಡಿಸಿದಳು.[೧೩೨] ಅದೇ ಬಸದಿಯ ಮೂಲ ಮಂಟಪವನ್ನು ಊರಿನ ಜಿನಭಕ್ತೆರಲ್ಲಿ ಕಾಂತು ಸೆಟ್ಟಿತಿ, ಕರ್ಪೂರು ಸೆಟ್ಟಿತಿ, ಬಾಲೆಮುದ್ದು ಸೆಟ್ಟಿತಿ ಎಂಬ ಮಹಿಳೆಯರೂ ಸೇರಿದ್ದರು.[೧೩೩] ಈ ಬಸದಿಯ ಚಂದ್ರನಾಥ ಸ್ವಾಮಿಗಳ ಮಧ್ಯಾಹ್ನದ ನೈವೇದ್ಯಕ್ಕೆ ಓಣಿ ನೇಮಣ ಸೆಟ್ಟಿ ಮತ್ತವನ ಸಹೋದರಿಯರು ದಾನ ನೀಡಿದ್ದರು.[೧೩೪] ಕಾಂತಿಸೆಟ್ಟಿ ಮಾಣಿಕಸೆಟ್ಟಿಯರ ಸೊಸೆ ಮುನಿಯಕ್ಕ ಎಂಬಾಕೆ ತೀರ್ಥಂಕರ ಚಂದ್ರನಾಥಸ್ವಾಮಿಗಳ ನಿತ್ಯ ಹಾಲಧಾರೆಗೆ ಗದ್ಯಾಣ ನೀಡಿದ್ದಳು.[೧೩೫] ಬಾರಕೂರಿನ ಸೋಮನಾಥ ದೇವಾಲಯಕ್ಕೆ ಅಜಿಲ ಸೆಟಿಯರ ಮಠದಲ್ಲಿ ನಾಗಮ ಸೆಟ್ಟಿತಿ ಎಂಬಾಕೆ ತನ್ನ ಪರಿವಾರದೊಂದಿಗೆ ದಾನ ನೀಡಿದಳು.[೧೩೬] ಸಂಕಮ ಸೆಟಿತಿ ಎಂಬಾಕೆ ತನ್ನ ಕುಟುಂಬದವರೊಂದಿಗೆ ಮಠ ಕಟ್ಟಿಸಿ ಭೂದಾನ ನೀಡಿದಳು.[೧೩೭] ಆನೆಗೊಂದಿಯ ಶಾಸನವೊಂದರಲ್ಲಿ ಹೊನ್ನಹಟ್ಟಿಯ

ಸಯಿತೆಯ ಮಗಳು ಸೊಯಿಸೆಟ್ಟಿಯು ನಿಸಿಧಿಯಾದಳೆಂದು ಉಲ್ಲೇಖಿಸಿದೆ. ಆನೆಗೊಂದಿ ಶಾಸನವೊಂದರಲ್ಲಿ ಭಯಿರಿಸೆಟ್ಟಿಯ ಮಗ ನಾಗಿಸೆಟ್ಟಿಯು ಹೆಂಡತಿ ತಿಮಾಯಿ ತನ್ನ ಗಂಡ ಸತ್ತಾಗ ಕಿಚ್ಚು ಹಾಯ್ದು ಸತ್ತಳೆಂದು ತಿಳಿಸುತ್ತದೆ. ಹುಮಗದ ಸೋವಿಸೆಟ್ಟಿಯ ಸೊಸೆ ಸುವಿಯಕ್ಕ ನಿಸಿಧಿಯಾದಳೆಂದು ತಿಳಿಸುತ್ತದೆ.[೧೩೮]

ಈ ಮೇಲಿನ ಶಾಸನಗಳಿಂದ ವಿಜಯನಗರ ಕಾಲದಲ್ಲಿ ಸ್ತ್ರೀಯರು ವಹಿಸಿದ ಪಾತ್ರ ಅವರ ಮಹತ್ವದ ಬಗ್ಗೆ ತಿಳಿಯಬಹುದಾಗಿದೆ. ಶಾಸನಗಳು ನೀಡುವ ಉಪಯುಕ್ತ ಮಾಹಿತಿಯಿಂದ ವಿಜಯನಗರ ಕಾಲದ ಸಂಸ್ಕೃತಿ, ಶಿಕ್ಷಣ ಪದ್ಧತಿ, ಆಡಳಿತ ಪದ್ಧತಿ, ಲೋಕೋಪಯೋಗಿ ಕಾರ್ಯಗಳು, ದೇವಾಲಯಗಳ ವಿವರ, ಯುದ್ಧ ಬಲಿದಾನದ ವಿವರಗಳನ್ನು ತಿಳಿಯಬಹುದಾಗಿದೆ. ಬಳ್ಳಾರಿ ಜಿಲ್ಲೆಯ ಜನರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಭಾವನೆಯು ಕ್ರಿ.ಶ.೧೪೧೧ರ ಹಂಪಿಯ ಲಕ್ಷ್ಮೀಧರ ಅಮಾತ್ಯನ ಶಾಸನದಲ್ಲಿ ಮಾರ್ದನಿಯಾಗಿ ಮೂಡಿದೆ.

"ಕೆಱಿಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗ್ಗಱಿವಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆರದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ"

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೊಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನದಲ್ಲಿ ಸಿಕ್ಕಿ ತೊಳಲಾಡುತ್ತಿರುವ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯದ ಹಸ್ತ ಚಾಚು, ನಂಬಿದವರಿಗೆ ಆಶ್ರಯಕೊಡು, ಸತ್ಪುರುಷರನ್ನು ಸಜ್ಜನರನ್ನು ರಕ್ಷಿಸು ಎಂದು ಕಿವಿಯಲ್ಲಿ ಹೇಳುತ್ತಾ ಹಾಲುಣಿಸುತ್ತಿದ್ದಳು ಎಂಬ ಮಾತಿನಿಂದ, ಸಂಸ್ಕೃತಿವಂತರಾಗಿ ವ್ಯಕ್ತಿಗಳು ಬಾಳಲು ತಾಯಂದಿರು ಯಾವ ಮಟ್ಟಿಗೆ ಒಳ್ಳೆಯ ಗುಣಗಳನ್ನು ಧಾರೆಯೆರೆದು ಪೋಷಿಸುತ್ತಿದ್ದರು ಎಂಬುದು ವ್ಯಕ್ತವಾಗಿದೆ. ಆ ಕಾಲದ ಮಹಿಳೆಯರ ಸ್ಥಾನಮಾನವನ್ನು ಅರಿಯಲು ಈ ಶಾಸನವೊಂದೇ ಸಾಕು.

ಗೇರುಸೊಪ್ಪೆಯ ನಗಿರೆ ದೇಶವೆಂಬ ಲಲನೆಯ ಮುಖಕ್ಕೆ ಕಾಂತಿಮತ್ತಾಗಿರುವ ಗೇರುಸೊಪ್ಪೆ ಎಂಬ ನಗರದಲ್ಲಿ ಜಿನ ಮಂದಿರಗಳು, ಅವುಗಳಿಗೆ ಗೋಪುರಗಳನ್ನು ನಿರ್ಮಿಸಿ,

ದಾನಗಳನ್ನು ಹೇರಳವಾಗಿ ನೀಡಿ ಕೃತಾರ್ಥರಾದ ಸೆಟ್ಟಿ ಸಮುದಾಯ ಯೋಜಣಸೆಟ್ಟಿಯನ್ನು ಹೊಗಳುತ್ತ ಆರಂಭವಾಗುತ್ತದೆ. ಅಂತಹ ಪತಿಗೆ ತಕ್ಕ ಪತ್ನಿಯಾದ ಮಾಣಿಕಸೆಟ್ಟಿಯ ಪುತ್ರಿಯಾದ ರಾಮಕ್ಕ ಸಕಲ ಜೀವರಾಶಿಯ ಮೇಲೆ ದಯೆವುಳ್ಳವಳೂ ಸಾಧ್ವಿಯೂ, ಪತಿ ಭಕ್ತಿಗೆ ಹೆಸರಾದ ಸಕಲ ಗುಣ ಸಂಪನ್ನೆಯಾಗಿದ್ದಳೆಂದು ಈ ದಾಖಲೆಯಲ್ಲಿ ವರ್ಣಿಸಿದೆ. ಲೌಕಿಕ ಜೀವನದಂತೆಯೇ ಧಾರ್ಮಿಕ ಜೀವನದಲ್ಲೂ ತನ್ನ ಗುಣಾತಿಶಯದಿಂದ ಮುನಿಗಳ ಸೇವೆಯನ್ನು ವಿನಯ, ಭಯಗಳಿಂದ ಮಾ ಸ್ವಸಂತೋಷ ಹೊಂದಿದವಳು. ಈ ರಾಮಕ್ಕಳ ಪೂರ್ವಜರ ಕುರಿತು ಶಾಸನವು ವಿವರವಾಗಿ ತಿಳಿಸುತ್ತದೆ. ಅವರು ಹುಲಿಗೆರೆಯ ಹಂದಿಗುಳ ದಲ್ಲಿ ಚಂದ್ರನಾಥಸ್ವಾಮಿ ಚೈತ್ಯಾಲಯದಲ್ಲಿ ಪೂಜಾದಿ ಧಾರ್ಮಿಕ ಕಾರ್ಯಗಳಿಗೆಂದು ಬಿಟ್ಟ ದತ್ತಿ ಮತ್ತು ಹಾಕಿಸಿದ ಶಾಸನದ ಉಲ್ಲೇಖ ಮಾಡುತ್ತದೆ ಈ ದಾಖಲೆ. ರಾಮಕ್ಕಳ ತಂದೆ ತಾಯಿ ಮಾಣಿಕಸೆಟ್ಟಿ ಮತ್ತು ನಾಗವ್ವೆ, ಶಾಸನದಲ್ಲಿ ಮಾಣಿಕಸೆಟ್ಟಿ ಎಂಬ ಹೆಸರಿನ ಉಲ್ಲೇಖ ಕೆಲವು ತಲೆಮಾರುಗಳಲ್ಲಿ ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಗೂಳ್ಯ, ೨೮೯ ಕ್ರಿ.ಶ.೧೫೮೯

೨. ಸಂ.೧೨೦, ಮೇಲುಕೋಟೆ ಕ್ರಿ.ಶ.೧೫೮೯

೩. ಎ.ಕ.೬, ಪಾಂಡವಪುರ ೧೮೯, ಮೇಲುಕೋಟೆ. ಕ್ರಿ.ಶ.೧೪೫೮

೪. ಎ.ಕ.೬, ಪಾಂಡವಪುರ ೧೩೫, ಮೇಲುಕೋಟೆ, ಕ್ರಿ.ಶ.೧೫೮೯

೫. ಎ.ಕ.೧೦, ಅರಸೀಕೆರೆ ೨೮೦ ತಿಮ್ಮನಹಳ್ಳಿ, ಕ್ರಿ.ಶ.೧೪೩೨

೬. ಎ.ಕ.೫, ತಿ.ನರಸೀಪುರ ೨೬, ತಿರುಮಕೂಡಲು

೭. ಎ.ಕ.೧೩, ತೀರ್ಥಹಳ್ಳಿ ೧೨೭, ಕೆಸರೆ

೮. ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು, ಶಾಸನ ಸಂಖ್ಯೆ ೨೫೦, ೧೫೧೩

೯. ಅದೇ, ೨೫೧, ಕ್ರಿ.ಶ.೧೩೩೬

೧೦. ಅದೇ, ೨೫೭, ಕ್ರಿ.ಶ.೧೫೨೧

೧೧. ಅದೇ, ೪೩, ಕ್ರಿ.ಶ.೧೫೪೪

೧೨. ಅದೇ, ಸಂ.೨೯, ಹೊಟ್ಟಿಗನ ಹೊಸಹಳ್ಳಿ, ಕ್ರಿ.ಶ.೧೫೧೩

೧೩. ಕೃಷ್ಣದೇವರಾಯನ ಶಾಸನಗಳು, ಎ.ಕ೯ ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆ, ಹೊಟ್ಟಿಗನ ಹೊಸಹಳ್ಳಿ ಶಾ.ಸಂ.೪೦

೧೪. ಕ.ವಿ.ವಿ.ಶಾ.ಸಂ.೧ ಶಾ.ಸಂ.೯೧, ಹೊಸಪೇಟೆ(ತಾ), ಬಳ್ಳಾರಿ ಜಿಲ್ಲೆ, ನಾಗೇನಹಳ್ಳಿ

೧೫. ಮೇಲುಕೋಟೆ ಪಾಂಡವಪುರ ತಾಲೂಕು, ಮಂಡ್ಯ ಜಿಲ್ಲೆ, ಶಾ.ಸಂ.೧೨೨(ಕೃ.ದೇ.ರಾ.ನ ಶಾ.ಗಳು)

೧೬. ಹಂಪಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಶಾ.ಸಂ.೧೩೯(SII.I-೨೫೦, ಕ.ವಿ.ಶಾ. ಸಂ.೩-೨೫೭, ಕ್ರಿ.ಶ.೧೫೨೧)

೧೭. ಕೌಟಿಲ್ಯನ ಅರ್ಥಶಾಸ್ತ್ರ ೧, ೩೫ ಋ ೯೩೨

೧೮. ಎ.ಕ.೧೦, ಶಾ.ಸಂ.೨೮೫, ಕ್ರಿ.ಶ.೧೪೨೯, ೨೮೦ ತಿಮ್ಮನಹಳ್ಳಿ, ಕ್ರಿ.ಶ.೧೪೩೨

೧೯. ಎ.ಕ.೧೦, ಶಾ.ಸಂ.೩೭, ಅರಸೀಕೆರೆ, ಕ್ರಿ.ಶ.೧೨೨೩

೨೦. ಎ.ಕ.೧೦, ಶಾ.ಸಂ.೧೬೬, ತಳಲೂರು ಕ್ರಿ.ಶ.೧೨೨೦

೨೧. ಪ್ರೌಢದೇವರಾಯನ ಶಾಸನಗಳು, ಸಂ.೮೩ ತಿಮ್ಮನಹಳ್ಳಿ, ಕ್ರಿ.ಶ.೧೪೩೨

೨೨. ಚನ್ನಪಟ್ಟಣ ತಾಲೂಕು ಕೃಷ್ಣಾಪುರ, ಶಾ.ಸಂ.೧೪೭, ಕ್ರಿ.ಶ.೧೩೩೮(ಪ್ರೌ.ದೇ.ರಾ.ನ. ಶಾಸನಗಳು)

೨೩. ಕ.ವಿ.ವಿ.ಶಾ.ಸಂ.೧, ಬಳ್ಳಾರಿ ಜಿಲ್ಲೆ ಹರಪನಹಳ್ಳಿ, ನೀಲಗುಂದ ಶಾ.ಸಂ.೮೩

೨೪. ಎಆರ್‌ಐಇ ೧೯೭೧-೭೨/ಬಿ ೧೯೬

೨೫. ಎಆರ್‌ಐಇ ೧೯೭೧-೭೨/ಬಿ ೧೯೩

೨೬. ಎಆರ್‌ಐಇ ೧೯೭೧-೭೨/ಬಿ ೧೯೫೫-೫೬/ಬಿ ೩೧೦

೨೭. ಎ.ಕ.ಸಂ.೭, ನಾಗಮಂಗಲ ೮(ಪರಿಷ್ಕೃತ ಆವೃತ್ತಿ) (ತಮಿಳುನಾಡಿನ ಕ.ಶಾ.ಗಳು)

೨೮. ವಿಜಯನಗರದ ಕೆರೆಗಳು, ವಿಜಯನಗರ ಸಾಂಸ್ಕೃತಿಕ ಅಧ್ಯಯನ, ಪು.೮೨

೨೯. ಶಾಸನಗಳಲ್ಲಿ ಕಂಡಂತೆ ವಿಜಯನಗರ, ಪಟ್ಟಣದ ನೀರಿನ ವ್ಯವಸ್ಥೆ, ೧೯೯೬, ಚನ್ನಬಸಪ್ಪ ಎಸ್.ಪಾಟೀಲ್, ವಿ.ನ.ಅಧ್ಯಯನ ಸಂಪುಟ ೧, ಪು.೮೨, ಮೈಸೂರು

೩೦. ವಿಜಯನಗರ ಅಧ್ಯಯನ ಸಂಪುಟ, ಪು.೬೩, ಮೈಸೂರು

೩೧. ಅದೇ, ಪು.೬೩

೩೨. ಎಆರ್‌ಐಇ ೧೯೭೧-೭೨, ಬಿ ೧೯೬ ಪು.೧೫೦

೩೩. ಎಸ್.ಐ.ಐ.ಸಂ.೯, ಭಾಗ ೨, ಸಂಖ್ಯೆ ೬೨೦

೩೪. ಟಿ.ಟಿ.ಡಿ.ಐ.ಸಂ.II ೯೭, ಪು.೨೦೪

೩೫. ಇಐ ೧೨, ತಿಪಟೂರು, ೬೭೦, ಪು.೧೫೭

೩೬. ಎಪಿಗ್ರಾಫಿಯಾ ಕರ್ನಾಟಿಕಾ ಸಂ.XVII ಎಂ.ಆರ್.೧೨೨, ಪು.೧೧೯

೩೭. ಅದೇ, XI ಎಂ.ಕೆ. ೧೫, ಪು.೨೫೦

೩೮. ಕ.ವಿ.ವಿ.ಶಾ.ಸಂ.೧, ಹಡಗಲಿ(೧೦೬), ಕೃ.ದೇ.ಶಾ.(ಡಾ.ಡಿ.ವಿ.ಪರಮಶಿವಮೂರ್ತಿ) ಸಂ.೮೭, ಸೋಗಿ, ಕ್ರಿ.ಶ.೧೫೧೬

೩೯. ಎಸ್.ಐ.ಐ.XVII-೨೮೦ ಕ್ರಿ.ಶ.೧೫೪೯, ಕೃ.ದೇ.ಶಾ.(ಡಾ.ವಿ.ಪರಮಶಿವಮೂರ್ತಿ), ಶಾ.ಸಂ.೧೨೧, ಗದಗ, ಕ್ರಿ.ಶ.೧೫೪೯

೪೦. ವಿ.ಪಿ.ಆರ್.ನಂ.೯೮, ೧೯೮೪-೮೭, ವಿ.ಶಾ.೨೭೬, ೧೫೩೯, ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು, ಶಾ.ಸಂ.೩೪೨

೪೧. ಎ.ಕ.೫, ತಿರುಮಕೂಡಲು(ತಿ.ನರಸೀಪುರ), ಶಾ.ಸಂ.೨೬, ಪು.೪೨೪

೪೨. ಎ.ಕ.೮, ಅರಕಲಗೂಡು (ರುದ್ರಪಟ್ಟಣ), ಶಾ.ಸಂ.೧೦೭

೪೩. ಕೃ.ದೇ.ಶಾ.ಗಳು(ಡಾ.ಡಿ.ವಿ.ಪರಮಶಿವಮೂರ್ತಿ) ಗೂಳ್ಯ, ೨೮೬, ಕ್ರಿ.ಶ.೧೫೪೯

೪೪. ವಿಪಿಆರ್ ೧೮೬-೧೮೭, ಸಂ.೧೯

೪೫. ವಿಪಿಆರ್ ೧೯೮೩-೮೪, ಸಂ.೩೭,೩೮. ಐಕೆ ಸಂ.೧, ೧೯೯೬, ಸಂ.೨-೨೨೪

೪೬. ಎಸ್.ಐ.ಐ.೧೮, ಶಾ.ಸಂ.೨೮೦, ಗದಗ್, ಕ್ರಿ.ಶ.೧೫೯

೪೭. ಕ.ವಿ.ವಿ.ಶಾ.ಸಂ.೩, ಗಂಗಾವತಿ(ತಾ) ೧೦೨

೪೮. ಕ.ವಿ.ವಿ.ಶಾ.ಸಂ.೭, ರಾಯಚೂರು ಜಿಲ್ಲೆ, ಶಾ.ಸಂ.೧೪, ಸಿಂಧನೂರು ಕ್ರಿ.ಶ.೧೫೫೬

೪೯. ಎ.ಕ.X ಬೌರಿಂಗಪೇಟ ೮೩, ಕಸಬೆ (ಸು.ಶ.೧೫)

೫೦. ಎ.ಕ.IX ಅನೇಕಲ್ಲ ೬೪, ಮಾಸ್ತೇನಹಳ್ಳಿ, ಕ್ರಿ.ಶ.೧೪೨೭

೫೧. ಎ.ಕ.VII ಶಿಕಾರಿಪುರ ೧೦೬, ಬಳ್ಳಿಗಾವೆ ಕ್ರಿ.ಶ.೧೨೯೮

೫೨. ಎ.ಕ.VII, ಶಿಕಾರಿಪುರ ೧೧೯, ಬಳ್ಳಿಗಾವೆ ಕ್ರಿ.ಶ.೧೧೮೧

೫೩. ಎ.ಕ.IX ಕಾನಕಾನಹಳ್ಳಿ ೬ ಗಾನಾಳುಕೊಪ್ಪ, ಕ್ರಿ.ಶ.೧೧೮೧

೫೪. ಎ.ಆರ್.ಎಸ್.ಐ.ಇ. ಸಂ.೭೩೦

೫೫. ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು ಪು.೬೪, ಶಾ.ಸಂ.೭೨

೫೬. ಕ.ವಿ.ವಿಶಾ.ಸಂ.೩, ಹಂಪಿ ಶಾಸನಗಳು, ಪು.೧೯೦, ಶಾ.ಸಂ.೨೪೮

೫೭. ಎ.ಕ.ಸಂ.೪, ಶಾ.ಸಂ.೫೧, ಪು.೪೩೬, ಕ್ರಿ.ಶ.೧೩೬೬

೫೮. ಎಸ್ಐಐ.XI(ii) ಸಂ.೫೭೩

೫೯. ಎಸ್ಐಐ.XI(ii) ಸಂ.೫೩೬

೬೦. ಎಸ್ಐಐ Vol.IV ಶಾ.ಸಂ.೨೫೫, ಕ್ರಿ.ಶ.೧೫೧೩

೬೧. ಎಸ್ಐಐ VOl.X ಭಾಗ ೨, ಸಂಖ್ಯೆ ೫೭೩, ಕ್ರಿ.ಶ.೧೫೩೫ ಹೊಸಪೇಟೆ

೬೨. ಎಸ್ಐಐ Vol.IX ಸಂ.೫೭೩

೬೩. ಎಸ್ಐಐ IX ಭಾಗ II ಸಂ.೫೮೪, ಕ್ರಿ.ಶ.೧೫೩೮

೬೪. ಟೋಪೋಗ್ರಾಫಿಕಲ್ ಲಿಸ್ಟ್ ಸಂ.೧, ೫೭, ಅನಂತಪುರ ಜಿಲ್ಲೆ, S.M ಸಂ.೯, ೬೧೮)

೬೫. ಎಸ್ಐಐ IX.೫೩, ಎಆರ್ಎಸ್ಐಇ, ೧೯೨೨. ೧೬. ೨೪

೬೬. ಎ.ಕ.ಸಂ.೧೩, ಶಾ.ಸಂ.೨೯. ಕ್ರಿ.ಶ.೧೩೬೩

೬೭. ಎ.ಕ.ಸಂ.೧೮೩ ತೀರ್ಥಹಳ್ಳಿ (ಬಿಕ್ಕಹಳ್ಳಿ) ಕ್ರಿ.ಶ.೧೪೦೧, ಪು.೫೦೧

೬೮. ಎಸ್‌ಐಐ IX.II.೫೧೬, ಅ.ಪ್ರಕ.ಶಾ.೫/೧-೧೬೪ ಕ್ರಿ.ಶ.೧೫೨೫, ಜನವರಿ ೩೦, ಮೇಲ್ಲುಮಡಗು ಅನಂತಪುರ ಜಿಲ್ಲೆ, (ಗುತ್ತಿ ತಾಲೂಕು)

೬೯. ಎ.ಕ.X. ಬಂಗಾರಪೇಟೆ-೮೩(ಪ್ರೌಡದೇವರಾಯನ ಶಾಸನಗಳು, ಶಾ.ಸಂ.೨೪) ಪು.೪೯, ಕ್ರಿ.ಶ.೧೪೨೬

೭೦. ಎಆರ್ ಸಂ.೧, ೧೯೧೭; ಎ.ಕ.XII ಸಂ.೩೧; ಎಸ್‌ಐಐ IX ಭಾಗ II ಸಂ.೬೬೫) ಕ್ರಿ.ಶ.೧೫೫೬, ಪೈಲಬಂಡ

೭೧. ಎಆರ್ ಸಂ. ಬಿ.೪೫೦, ೧೯೨೦; ಎಸ್‌ಐಐ IX ಭಾಗ. II ಪು.೫೧೬

೭೨. ಕ.ವಿ.ವಿ.ಶಾ.ಸಂ.೪(ಆಂಧ್ರಪ್ರದೇಶದ.ಕ.ಶಾ.ಗಳು.೮೧)

೭೩. ಎಆರ್ ಸಂ.೭೩೯, ೧೯೧೯ ಪು.೬೭೨, ಆಲೂರು ತಾಲೂಕು

೭೪. ಎಆರ್ ಸಂ.೬೮೧, ೧೯೨೨ ಪು,.೫೭೩, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

೭೫. ಎಆರ್ ಸಂ.೬೩, ೧೯೦೪, ಪು.೬೧೮ ಬಳ್ಳಾರಿ ತಾಲೂಕು, ಬಳ್ಳಾರಿ ಜಿಲ್ಲೆ

೭೬. ಎಸ್‌ಐಐ.I-ii ೪೪೮ ಬಸರೂರ (ತಾ) ಕುಂದಾಪುರ, ಕ್ರಿ.ಶ.೧೪೪೨

೭೭. ಎ.ಕ.IV ಕೊಳ್ಳೇಗಾಲ ೫೭, ಕಾಮಗೆರೆ, ಕ್ರಿ.ಶ.೧೩೬೬

೭೮. ಎ.ಕ.X ಬಂಗಾರಪೇಟೆ ೭೨, ಕ್ರಿ.ಶ.೧೪೩೦(ಪ್ರೌ.ದೇ.ಶಾ.ಪು.೧೨೦, ಶಾ.ಸ.೫೭, ಮರಗಲ್ಲು)

೭೯. ಎ.ಕ.XII ಶಿರಾ ೭೬, ಎಲಿಯೂರ ಕ್ರಿ.ಶ.೧೩೭೯

೮೦. ಎಸ್‌ಐಐ I-ii ೪೫೦ ಬಸರೂರ(ತಾ) ಕುಂದಾಪುರ, ಕ್ರಿ.ಶ.೧೪೪೪

೮೧. ಎಸ್‌ಐಐVII ೩೪೦ ಬಾರಕೂರ (ತಾ) ಉಡುಪಿ, ಕ್ರಿ.ಶ.೧೪೩೦

೮೨. ಎ.ಕ.ಸಂ.೫, ಬೇಲೂರು ೭೫, ಪು.೬೨-೬೩

೮೩. ಕ.ಇ.ಗಿ-೬೭ ಜೂಗ ಅಂಕೋಲ(ತಾ), ಉ.ಕ.ಜಿಲ್ಲೆ, ೧೪೩೧(ಪ್ರೌ.ದೇ.ರಾ.ಶಾ)

೮೪. ಅರಿಸೌ.ಇಂ.ಎ.೧೯೩೧, ನಂ.೩೩೯

೮೫. ಎಸ್‌ಐಐ I-ii ೪೫೭ ಬಸರೂರ(ತಾ) ಕುಂದಾಪುರ(ಕ್ರಿ.ಶ.೧೪೫೫)

೮೬. ತುಳುನಾಡಿನ ಇತಿಹಾಸ, ಪು.೮೭

೮೭. ಕ.ವಿ.ವಿ.ಶಾ.ಸಂ.೭೫, ಮಲೆಬೆನ್ನೂರು, ಕ್ರಿ.ಶ.೧೫೧೫

೮೮. ಎ.ಕ.೪, ಚಾಮ-೧೬೨, ಕ್ರಿ.ಶ.೧೫೧೫, ಡಿ ೧೦

೮೯. ಎಸ್.ಐ.ಐ.XXVII. ೧೬೩, ಕ್ರಿ.ಶ.೧೫೧೪, ಉಡುಪಿ(ಹೊಸಾಳ)

೯೦. ವಿಪಿಆರ್.ಸಂ.೭೫, ೧೯೮೬-೮೭ ವಿಶಾ ೨೭೧, ಕ್ರಿ.ಶ.೧೪೦೬

೯೧. ಸಂ.೪೫ ಚೋಳೇನಹಳ್ಳಿ, ಕ್ರಿ.ಶ.೧೪೨೯(ಪ್ರೌಢ ದೇವರಾಯನ ಶಾಸನಗಳು)

೯೨. ಎಸ್.ಐ.ಐ.VII ೨೩೯, ಕ್ರಿ.ಶ.೧೪೩೩, ಕಾಂತಾವರ ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೯೩. ಎ.ಕ.IX, ಚನ್ನಪಟ್ಟಣ ೧೪೭, ಕ್ರಿ.ಶ.೧೪೩೭(ಪ್ರೌ.ದೇ.ಶಾ.ಪು.೨೮೬) ಶಾ.ಸಂ.೧೩೬, ಮಳೂರ, ಚ.ಪಟ್ಟಣ ತಾಲೂಕು, ಬೆಂಗಳೂರು ಗ್ರಾಮಾಂತರ

೯೪. ಎ.ಕ.IX ದೊಡ್ಡ ಜಾಲದೇವನಹಳ್ಳಿ ೫೬(ಪ್ರೌ.ದೇ.ಶಾ.ಪು.೨೯೦, ಕ್ರಿ.ಶ.೧೪೩೭, ಶಾ.ಸಂ. ೧೩೯)

೯೫. ಸಂ.೧೬೮, ಬಾರಕೂರು, ಕ್ರಿ.ಶ.೧೪೪೨(ಪ್ರೌ.ದೇ.ರಾ.ಪು.೨೮)

೯೬. ಸಂ.೧೭೧, ಕೊಕ್ಕರಣೆ ಕ್ರಿ.ಶ.೧೪೪೩(ಪ್ರೌ.ದೇ.ರಾ.ಪು.೨೮)

೯೭. ಸಂ.೧೭೩, ಹೇರೂರು ಕ್ರಿ.ಶ.೧೪೪೪(ಪ್ರೌ.ದೇ.ರಾ.ಪು.೨೮)

೯೮. ನಂ.೧೭೪, ಬಸರೂರು ಕ್ರಿ.ಶ.೧೪೪೪(ಪ್ರೌ.ದೇ.ರಾ.ಪು.೨೮)

೯೯. ಸಂ.೧೭೭, ಬಸರೂರು ಕ್ರಿ.ಶ.೧೪೪೪(ಪ್ರೌ.ದೇ.ರಾ.ಪು.೨೮)

೧೦೦. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ೨೦೦೭, ಸಂ.೧೯೩, ಪು.೩೯೪

೧೦೧. ಅದೇ, ಸಂಖ್ಯೆ ೬೭, ಪು.೧೪೭

೧೦೨. ಅದೇ, ಸಂಖ್ಯೆ ೭೩ ಪು.೧೬೩

೧೦೩. ಎ.ಕ.VI (ಕೃಪೇ.೯೨)

೧೦೪. ಎಸ್.ಐ.ಐ.IX.ಭಾಗ.೫೪೪

೧೦೫. ಎ.ಕ.೫, ಬೇಲೂರು ೭೫, ಕ್ರಿ.ಶ.೧೩೮೨

೧೦೬. ಎಸ್.ಐ.ಐ.ಸಂ.VII.No.೨೨೯/ ಎಆರ್.ಸಂ.೫೫, ೧೯೦೧

೧೦೭. ಎಸ್.ಐ.ಐ.XVIII.೨೭೫, ದೇವಿ ಹೊಸೂರ ತಾಲೂಕು, ಹಾವೇರಿ ಕ್ರಿ.ಶ.೧೪೦೨

೧೦೮. ಎಸ್.ಐ.ಐ.VII ೩೦೯, ಬಾರಕೂರು ಉಡುಪಿ ತಾಲೂಕು, ೧೪೩೦(ಪ್ರಾದೇ.ಶಾ.ಪು.೧೨೫, ಶಾ.ಸ.೫೯)

೧೦೯. ಎ.ಕ.II., ಶ್ರವಣಬೆಳಗೊಳ, ೧೨೮, ಕ್ರಿ.ಶ.೧೧೨೧

೧೧೦. ಎ.ಕ.೬, ಪಾಂಡವಪುರ ೧೭೪, ಮೇಲುಕೋಟೆ, ಕ್ರಿ.ಶ.೧೪೫೮೩. ಹಂ.ಶಾ.ಸಂ.೧೯

೧೧೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ ಶಾಸನಗಳು, ಸಂಪುಟ ೯

೧೧೨. ವಿಜಯನಗರ ಅಧ್ಯಯನ ಸಂಪುಟ ೨, ಪು.೩೪೬

೧೧೩. ವಿಜಯನಗರ ಅಧ್ಯಯನ ಸಂಪುಟ ೨, ಪು.೩೪೬

೧೧೪. ವಿಜಯನಗರ ಅಧ್ಯಯನ ಸಂಪುಟ ೨, ಪು.೩೪೬

೧೧೫. ವಿಜಯನಗರ ಅಧ್ಯಯನ ಸಂಪುಟ ೨, ಪು.೩೪೬

೧೧೬. ವಿಜಯನಗರ ಅಧ್ಯಯನ ಸಂಪುಟ ೨, ಪು.೩೪೭

೧೧೭. ಎಸ್.ಐ.ಐ.I-II-೫೧೧, ಕ್ರಿ.ಶ.೧೫೫೯

೧೧೮. ಎಸ್.ಐ.ಐ.I-II-೫೧೧, ಪು.೩೪೯ ರಿಂದ ೩೫೦

೧೧೯. ಎಸ್.ಐ.ಐ.I-II-೫೧೧, ಪು.೩೫೦

೧೨೦. ಅ.ರಿ.ಸೌ.ಇಂ.ಎ.೧೯೩೯, ಪು.೪೦

೧೨೧. ಎಸ್.ಐ.ಐ.೯ ಭಾಗ II, ನಂ.೫೨೫

೧೨೨. ತಿ.ತಿ.ಇ. ೩ ನಂ, ೫೨೫

೧೨೩. ಎಸ್.ಐ.ಐ. ಶಾ.ಸಂ.೬೪೦

೧೨೪. ಎಂಐಆರ್ ೧೯೪೦, ಪು.೧೯೫

೧೨೫. ಅಯ್ಯಂಗಾರ್ ಎಸ್.ಕೆ., ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ ಇ.ಅಂ.೨೭, ಪು.೩೨೫

೧೨೬. ಕ.ವಿ.ವಿ.ಶಾ.ಸಂ.೧, ಬಳ್ಳಾರಿ ಜಿಲ್ಲೆ, ಶಾ.ಸಂ.೧೨೦, ಪು.೫೮೪

೧೨೭. ಎಂಐಆರ್ ಸಂ.೩೩೯, ೧೯೩೦-೩೧

೧೨೮. ಎಸ್.ಐ.ಐ.ಸಂ.VII ಸಂ.೩೫೮ ಕ್ರಿ.ಶ.೧೩೭೨/ ಎಆರ್.ಸಂ.೩೮೧ ೧೯೨೭, ೧೬೧,೧೯೦೧

೧೨೯. ಎಸ್.ಐ.ಐ.ಸಂ.VII ಸಂ.೨೫೮(ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ)

೧೩೦. ಎಸ್.ಐ.ಐ.ಸಂ.VII ಸಂ.೩೫೨/ಎಆರ್.ಸಂ.೧೫೫, ೧೯೦೧

೧೩೧. ಎಸ್.ಐ.ಐ.ಸಂ.VII ಸಂ.೩೫೯/ಎಆರ್.ಸಂ.೧೫೮, ೧೯೦೧

೧೩೨. ಎಸ್.ಐ.ಐ.ಸಂ.VII ಸಂ.೨೦೨

೧೩೩. ಅದೇ, ೧೯೭

೧೩೪. ಅದೇ, ೨೦೦

೧೩೫. ಅದೇ, ೨೦೧

೧೩೬. ಅದೇ, ೩೩೩

೧೩೭. ಅದೇ, ೩೭೫

೧೩೮. ಕ.ವಿ.ವಿ.ಶಾ.ಸಂ.೨, ಗಂಗಾವತಿ, ತಾಲೂಕು ೫೧

ಅಧ್ಯಾಯ ನಾಲ್ಕು

ಧಾರ್ಮಿಕ ಕೊಡುಗೆ

ಅಧ್ಯಾಯ ನಾಲ್ಕು

ಧಾರ್ಮಿಕ ಕೊಡುಗೆ

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಒಂದು ಭಾಗವಾಗಿ ಕರ್ನಾಟಕದ ರಾಜಕೀಯದಲ್ಲಾದ ಎಲ್ಲಾ ಸ್ಥಿತ್ಯಂತರಗಳೂ ಧಾರ್ಮಿಕ ಸ್ಥಿತ್ಯಂತರಕ್ಕೆ ಕಾರಣವಾಗಿರುವುದನ್ನು ಇಲ್ಲಿನ ಶಾಸನಗಳು ತಿಳಿಸಿಕೊಡುತ್ತವೆ. ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಅರಸುವಂಶಗಳ ಆಳ್ವಿಕೆಗೆ ಒಳಗಾದ ಈ ಪ್ರದೇಶದಲ್ಲಿ (ವಿಜಯನಗರ) ವಿವಿಧ ಮತ ಸಮುದಾಯಗಳ ಹಾಗೂ ಪಂಥ ಪಂಗಡಗಳ ನಡುವೆ ಪರಸ್ಪರ ಸಾಂಸ್ಕೃತಿಕ ಪ್ರಭಾವ, ಪ್ರಸಾರ, ಸಂಘರ್ಷ ಮತ್ತು ಸಮನ್ವಯ ಜರುಗಿದೆ. ವಿವಿಧ ಧರ್ಮ, ಜಾತಿ, ಆಚಾರ, ವಿಚಾರಗಳು, ಜೀವನ ಮೌಲ್ಯಗಳು ಮತ್ತು ಸಂಪ್ರದಾಯಗಳು ಏಕಕಾಲಕ್ಕೆ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ವಿಜಯನಗರ ಶಾಸನಗಳನ್ನು ಗಮನಿಸಿದಾಗ ಪ್ರತಿಯೊಂದು ಧರ್ಮವು ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಧಾರ್ಮಿಕ ಸಂಸ್ಥೆಗಳಾದ ದೇವಾಲಯ ಬಸದಿ ಮಠಮಾನ್ಯಗಳನ್ನು ಹೆಚ್ಚಿಸಿಕೊಂಡು

ದಾನದತ್ತಿಗಳನ್ನು ಪಡೆಯಲು ಪೈಪೋಟಿ ನಡೆಸಿದಂತೆ ಕಂಡುಬರುತ್ತದೆ. ವಿಜಯನಗರದ ಅರಸರುಗಳು ಧರ್ಮ ಸಹಿಷ್ಣುರಾಗಿದ್ದರು. ವಿವಿಧ ಧರ್ಮಗಳಿಗೆ ರಾಜಾಶ್ರಯ ನೀಡಿದ್ದರು. ವಿಜಯನಗರದ ರಾಜರುಗಳಂತೆಯೇ, ರಾಜ್ಯದಲ್ಲಿರುವ ಶ್ರೀಮಂತರು, ವರ್ತಕರು ಕೂಡ ಧಾರ್ಮಿಕ ಕಾರ್ಯದಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ವರ್ತಕರು ವ್ಯಾಪಾರದಿಂದ ಸಂಚಯಿಸಿದ ಹಣವನ್ನು ಧಾರ್ಮಿಕ ಕಾರ್ಯಗಳಿಗೂ ವಿನಿಯೋಗಿಸಿದರು. ಭೌತಿಕ ಜೀವನವೇ ಶ್ರೇಷ್ಠವೆಂದು ಬಗೆಯದೆ ಧಾರ್ಮಿಕ ಬದುಕು ನಡೆಸಿದರು. ಶೆಟ್ಟಿ ಕುಲದವರು ಕೈಗೊಂಡ ಧಾರ್ಮಿಕ ಕಾರ್ಯಗಳಿಗೆ ಅಂದಂದಿನ ಯುಗ ಪರಿಸರವೂ ಪ್ರೇರಣೆ, ಪ್ರೋತ್ಸಾಹ ನೀಡಿದೆ. ಅಲ್ಲದೆ ಮಹಾಪ್ರಧಾನ, ಮಹಾಮಂಡಲೇಶ್ವರ, ದಂಡನಾಯಕ, ಗೌಡ ಮೊದಲಾದವರು ಧಾರ್ಮಿಕ ಕಾರ್ಯಗಳ ಪ್ರೋತ್ಸಾಹ ಮತ್ತು ಉತ್ತೇಜನಗಳಿಗಾಗಿ ವರ್ತಕರಿಗೆ ಹಲವು ರೀತಿಯ ದತ್ತಿಗಳನ್ನು ಕೊಟ್ಟಿದ್ದಾರೆ.[೧]

ಈ ಹಿನ್ನೆಲೆಯಲ್ಲಿ ಜೈನ, ಶೈವ, ವೈಷ್ಣವ ಇತ್ಯಾದಿ ವರ್ತಕರು ನಿರ್ವಹಿಸಿದ ಸರ್ವ ಧಾರ್ಮಿಕ ಕಾರ್ಯಗಳನ್ನು ಶಾಸನಗಳಿಂದ ತಿಳಿಯಬಹುದು. ವಿವಿಧ ಮತದ ವ್ಯಾಪಾರಿಗಳು ಕೈಗೊಂಡ ದೇವಾಲಯ, ದೀಪ ಮಾಲೆ ಕಂಬ, ಮಂಟಪ, ಸುಖನಾಶಿ, ಮಠ, ಅನ್ನಛತ್ರ, ಕೆರೆಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಮೊದಲಾದ ಕಾರ್ಯಗಳ ವಿವರಗಳನ್ನಿಲ್ಲಿ ಶಾಸನದ ಆಧಾರದಿಂದ ತಿಳಿಯಬಹುದು. ದೇವಾಲಯ ಕಟ್ಟಿಸುವುದರಿಂದ ಪುಣ್ಯ ಲಭಿಸುವುದೆಂಬ ಭಾವನೆ ವರ್ತಕರಲ್ಲಿತ್ತು. ಈ ಪುಣ್ಯ ಭಾವನೆಯಿಂದ ನಾಡಿನಲ್ಲಿ ಸಾವಿರಾರು ದೇವಾಲಯಗಳು ತಲೆಯೆತ್ತಿ ನಿಂತಿವೆ. ತಮಗೆ ಆಶ್ರಯ ನೀಡಿದ ರಾಜರ ಶ್ರೇಯೋಭಿವೃದ್ಧಿಗಾಗಿ ವಿಗ್ರಹ, ಲಿಂಗ ಪ್ರತಿಷ್ಠಾಪನೆಯಂತಹ ಕಾರ್ಯಗಳನ್ನು ವರ್ತಕರು ನಡೆಸಿಕೊಂಡು ಬಂದಿದ್ದಾರೆ. ಸೆಟ್ಟಿ ಕುಲದವರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇವು ಸ್ವಮತಾಭಿಮಾನ ಹಾಗೂ ಪರಮತ ಪುರಸ್ಕಾರಗಳಿಂದ ಕೂಡಿರುತ್ತವೆ. ವೈಯಕ್ತಿಕ ಧಾರ್ಮಿಕ ಕಾರ್ಯಗಳಿಗಿಂತ ಸಾಮೂಹಿಕ ಧಾರ್ಮಿಕ ಕಾರ್ಯಗಳೇ ಅಧಿಕ.

ಮತ, ವರ್ಗ, ವರ್ಣ, ವಯಸ್ಸುಗಳ ತಾರತಮ್ಯವಿಲ್ಲದೆ ಶೆಟ್ಟಿ ಕುಲದವರು ದೇವಾಲಯದ ವಿವಿಧ ಕಾರ್ಯಗಳಿಗೆ ಅಧಿಕ ದತ್ತಿ ನೀಡಿದ್ದಾರೆ. ನಿರ್ಮಾಣ, ಪ್ರತಿಷ್ಠಾಪನಾ ಕಾರ್ಯ ಕೈಗೊಂಡಿದ್ದಾರೆ. ಇದರಿಂದ ವರ್ತಕರ ಧಾರ್ಮಿಕ ನಿಷ್ಠೆ, ಭಕ್ತಿ ಭಾವ, ತ್ಯಾಗಗುಣ,

ಸಮಾಜದಲ್ಲಿ ಹೊಂದಿದ್ದ ಸ್ಥಾನಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದ ವಿವಿಧ ವರ್ಗದ ವ್ಯಕ್ತಿ ಸಂಘ-ಸಂಸ್ಥೆಗಳೊಂದಿಗೆ ಇಟ್ಟುಕೊಂಡ ಮಧುರ ಬಾಂಧವ್ಯ, ಸಹಕಾರ, ತೋರಿದ ಶ್ರದ್ಧೆ, ವಹಿಸಿದ ಪ್ರಾಮಾಣಿಕತೆ ಗಮನಾರ್ಹ. ಧಾರ್ಮಿಕ ಕಾರ್ಯ ಪ್ರಸಂಗಗಳಲ್ಲಿ ಕಂಡುಬರುವ ಇವರ ಸಂಘಟನೆ, ಒಲವು, ಒಗ್ಗಟ್ಟು, ಸಾಮೂಹಿಕ ಜವಾಬ್ದಾರಿ ಹಾಗೂ ಸಾಮೂಹಿಕ ಬದುಕು ನಿಜಕ್ಕೂ ಅನುಕರಣೀಯ, ಆದರ್ಶಮಯವೆನಿಸಿದೆ.

ಪುಣ್ಯಕಾರ್ಯಗಳನ್ನು ಪೂರೈಸುವುದು ಸಮಾಜದ ಆದ್ಯ ಕರ್ತವ್ಯವೆಂಬ ಭಾವನೆಯಿಂದ ಸಮಾಜದ ಪ್ರಧಾನ ಘಟಕವಾದ ವರ್ತಕರು ಕಾರ್ಯಪ್ರವೃತ್ತವಾದುದರಿಂದ ವೈದಿಕ, ಜೈನ, ಶೈವ ದೇವಾಲಯ ನಿರ್ಮಾಣ: ದೀಪಮಾಲೆ ಕಂಬ ಮಂಟಪ, ಸುಕನಾಶಿ, ಮಠ-ಅನ್ನಛತ್ರ, ಕೆರೆ, ಜೀರ್ಣೋದ್ಧಾರ, ವಿಗ್ರಹ-ಲಿಂಗ ಪ್ರತಿಷ್ಠಾಪನಾ ಮೊದಲಾದ ರಚನಾತ್ಮಕ ಕಾರ್ಯಗಳು ನಿರಂತರ ನಡೆದುಬಂದವು. ದೇವಾಲಯದ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಚೈತ್ರ ಪರ್ವ, ಪವಿತ್ರ ಪರ್ವ, ಪಂಚಪರ್ವ ನಂದಾದೀವಿಗೆ, ಧೂಪ, ಗಂಧ, ಪುಷ್ಪ, ತಾಂಬೂಲ, ನೈವೇದ್ಯ, ಅಮೃತಪಡಿ, ಪಂಚಾಮೃತ ಅಭಿಷೇಕ, ಖಂಡಸ್ಫುಟಿತ, ಜೀರ್ಣೋದ್ಧಾರ, ರಂಗಭೋಗ, ರಥೋತ್ಸವ, ನಂದೀಶ್ವರ, ಅಷ್ಟಮಿ, ಜೀವದಯಾಷ್ಟಮಿ, ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳ ಆಹಾರ, ಬಟ್ಟೆ, ಬ್ರಾಹ್ಮಣ ಭೋಜನ ಸಾರಣಿ, ರಂಗೋಲಿ ಮತ್ತು ಪುರಾಣ ಮೊದಲಾದ ಮಂಗಲಕಾರ್ಯ ಹಾಗೂ ಕೆರೆ ಹೂದೋಟ ಸತ್ರಗಳು ಸಾಂಗವಾಗಿ ಸಾಗಲು ಭೂಮಿ ಹಣ ಸುವರ್ಣ ಸಂತೆಯ ಅಥವಾ ಸಂತೆ ಸುಂಕ ಮುಂತಾದವುಗಳಿಗೆ ಧರ್ಮ ಕಾರ್ಯವೆಂದು ಬಗೆದು ಸೆಟ್ಟಿ ಕುಲದವರು ಮನಃಪೂರ್ತಿಯಿಂದ ದಾನ ಮಾಡಿದ್ದಾರೆ.

ಇದಲ್ಲದೆ ದೇವಾಲಯ ಕಟ್ಟಿದ ಶಿಲ್ಪಿಗಳನ್ನು ಗೌರವದಿಂದ ಪ್ರೋತ್ಸಾಹಿಸಿ, ಜೀವನೋಪಾಯಕ್ಕಾಗಿ ಅವರಿಗೆ ದತ್ತಿ ನೀಡಿದ್ದಾರೆ. ಧಾರ್ಮಿಕ ಕಾರ್ಯ ಮಾಡಿದ ವ್ಯಕ್ತಿಗಳ ಬಗೆಗೆ ಅಪಾರವಾದ ಗೌರವ ತಾಳಿದ್ದಾರೆ. ವ್ಯಕ್ತಿ, ಸತ್ರ, ಕೆರೆ ಮುಂತಾದವುಗಳಿಗೆ ನೀಡಿದ ದಾನಗಳಿಗಿಂತ ದೇವಾಲಯಗಳಿಗೆ ಅದರಲ್ಲಿಯೂ ದೇವಾಲಯಗಳ ನಿರ್ಮಾಣಕ್ಕಾಗಿ ನೀಡಿದ ದಾನಗಳೇ ಹೆಚ್ಚಾಗಿವೆ. ಈ ದಾನಗಳು ಹಣದ ರೂಪದಲ್ಲಿರುವುದು ಅತ್ಯಲ್ಪವಾದರೆ ವಸ್ತುಗಳ ರೂಪದಲ್ಲಿರುವುದು ಅಧಿಕವಾಗಿವೆ. ಕೆಲವು ಸೆಟ್ಟಿ ಕುಲದವರು ಹಣ ಕೊಟ್ಟು ಬೇರೆಯವರಿಂದ ಕೊಂಡ ಭೂಮಿಯನ್ನು ದತ್ತಿಯಾಗಿ ಕೊಟ್ಟರೆ, ಇನ್ನು ಕೆಲವರು ಸ್ವಂತ ಭೂಮಿಯನ್ನೇ

ದಾನವಾಗಿ ಬಿಟ್ಟಿದ್ದಾರೆ. ಒಟ್ಟಿನಲ್ಲಿ ಸೆಟ್ಟಿ ಕುಲದವರು ಮಾಡಿರುವ ಧಾರ್ಮಿಕ ಕಾರ್ಯಗಳು ಕಳಶಪ್ರಾಯವಾಗಿವೆಯೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

೪.೧. ದೇವಾಲಯ ನಿರ್ಮಾಣ ನಿರ್ವಹಣೆ

ದೇವಾಲಯಗಳ ಕಾರ್ಯಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಕಾರ್ಯವು ಸಮಾಜದ ಮೇಲಿದ್ದಿತು. ಹೀಗಾಗಿ ಸಮಾಜದ ಸರ್ವಮತೀಯರೂ ಸಕಲ ವರ್ಗದವರೂ ಕಾಲಕಾಲಕ್ಕೆ ಅನೇಕ ದಾನಗಳನ್ನು ನೀಡುತ್ತ, ಅವುಗಳನ್ನು ಮುಂದುವರಿಸಿಕೊಂಡು ಬಂದರು. ಇವರಲ್ಲಿ ಶೆಟ್ಟಿ ಕುಲದವರು ನೀಡಿದ ದಾನಗಳು ನಮಗೆ ಪ್ರಸ್ತುತವೆನಿಸುತ್ತವೆ. ವಡ್ಡವ್ಯವಹಾರಿ ಹಾಗೂ ಸೆಟ್ಟಿಯರೇ ಅಧಿಕ ಸಂಖ್ಯೆಯಲ್ಲಿ ದತ್ತಿ ಬಿಟ್ಟಿರುವುದು ಸಮಗ್ರ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಸೆಟ್ಟಿಯರ ಮಕ್ಕಳು ತಮ್ಮ ತಂದೆಯ ಹೆಸರಿನಲ್ಲಿ ಕಟ್ಟಿಸಿದ ದೇವಾಲಯಕ್ಕೆ ತಾವೇ ದಾನ ನೀಡಿದ್ದಾರೆ. ಹೀಗೆ ದಾನ ಕೊಟ್ಟರೆ ತಮ್ಮ ತಂದೆಯ ಪುಣ್ಯಾಭಿವೃದ್ಧಿಯಾಗುವುದೆಂಬ ನಂಬಿಕೆ ವರ್ತಕರದ್ದಾಗಿರಬೇಕು. ಕರ್ನಾಟಕದಲ್ಲಿ ಸಮಾಜದ ವಿವಿಧ ವರ್ಗ, ವರ್ಣ, ವಯಸ್ಸು ಮತದವರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ದೇವಾಲಯ-ವ್ಯಕ್ತಿಗಳಿಗೆ ದತ್ತಿ ಬಿಟ್ಟಿದ್ದಾರೆ. ಸೆಟ್ಟಿ ಕುಲದವರು ಮತ್ತು ಅವರೇ ಕಟ್ಟಿಕೊಂಡ ಸಂಘಸಂಸ್ಥೆಗಳಿಂದ ದೇವಾಲಯ, ದೇವ ಕಾರ್ಯಗಳಿಗಾಗಿ ಹಲವು ರೂಪದ ದಾನ ನೀಡಿದುದು ತಿಳಿದುಬರುತ್ತದೆ.

ತಿಪ್ಪಿಸೆಟ್ಟಿಯ ಮಗ ಗಂಧದ ತಿಪ್ಪಿಸೆಟ್ಟಿ ಅಚ್ಯುತರಾಯನಿಗೆ ಪುಣ್ಯವಾಗಲೆಂದು ವಿಠ್ಠಲ ದೇವಾಲಯದ ಆವರಣದ ಬಡಗಣದಲ್ಲಿರುವ ನಾಲ್ಕು ಅಂಕಣದೊಳಗೆ ೧೨ ಆಳ್ವಾರ್ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನು.[೨] ಐಚಿಸೆಟ್ಟಿ ಲಕ್ಕುಂಡಿಯಲ್ಲಿ ಅಭಿನವ ಪ್ರಸನ್ನ ಕೇಶವ ದೇವಾಲಯ[೩] ಕೈಹಣ ಸೆಟ್ಟಿ[೪] ಚಟ್ಟಿಸೆಟಿ[೫] ವಡ್ಡ ವ್ಯವಹಾರಿ, ಚೌಡಿಸೆಟ್ಟಿಯರು[೬] ಮುತ್ತಗೆಯಲ್ಲಿ ಚೆನ್ನಕೇಶವ, ಪ್ರಸನ್ನ ಕೇಶವ, ಲಕ್ಷ್ಮೀನರಸಿಂಹ ದೇವಾಲಯಗಳನ್ನು ಕಟ್ಟಿಸಿದರು. ಅಂಗಡಿಯ ಮಲ್ಲಿಸೆಟ್ಟಿ, ಗೋರ್ಕಾಮಸೆಟ್ಟಿ, ಗಂಗಿಸೆಟ್ಟಿಯರು ಕಿಱುಸಂಪಗಾವಿಯಲ್ಲಿ ಬಸದಿ ಕಟ್ಟಿಸಿದ ಸಂಗತಿ ಬಸ್ತಿಹಳಿ[೭] ಗೋಲಹಳಿ[೮] ಶಾಸನದಲ್ಲಿವೆ. ಕರ್ನಾಟಕದಾದ್ಯಂತ ಈ ಸೆಟ್ಟಿ ಕುಲದವರ ದಾನ ಧರ್ಮ, ದೇವಾಲಯಗಳ ನಿರ್ಮಾಣ, ನಿರ್ವಹಣೆಯು ಅಗ್ರಪಂಕ್ತಿಯಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈಗ ನಾವು ಸೆಟ್ಟಿಕುಲದವರು ಬಸದಿ, ಶೈವ ಮತ್ತು ವೈಷ್ಣವ

ದೇವಾಲಯಗಳನ್ನು ನಿರ್ಮಿಸಿರುವ ವಿಷಯವನ್ನು ಶಾಸನಗಳ ಆಧಾರದಿಂದ ಪರ್ಯಾಲೋಚಿಸೋಣ.

೪.೧.೧. ಬಸದಿಗಳು

ಜೈನರ ದೇವಾಲಯಗಳಿಗೆ ಬಸದಿಗಳೆಂದು ಕರೆಯುತ್ತಾರೆ. ಜೈನಮತದ ವರ್ತಕರು ದೇವಾಲಯ-ಕಂಬ-ಮಂಟಪ-ದೀಪಮಾಲೆಕಂಬ-ಮಠ-ಅನ್ನಛತ್ರ-ಕೆರೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರದಂಥ ರಚನಾತ್ಮಕ ಕಾರ್ಯ ಪೂರೈಸಿದ್ದಾರೆ. ವಿಗ್ರಹ-ಲಿಂಗ ಪ್ರತಿಷ್ಠಾಪನೆಯಂಥ ಪರಮಪುಣ್ಯ ಕೆಲಸಗಳನ್ನು ಕೈಗೊಂಡಿದ್ದಾರೆ. ದೇವಾಲಯಗಳ ಚೈತ್ರ-ಪವಿತ್ರ ಪರ್ವ ಖಂಡಸ್ಫುಟಿತ ಜೀರ್ಣೋದ್ಧಾರ, ಅಂಗಭೋಗ, ರಂಗಭೋಗ ಮುಂತಾದ ಕಾರ್ಯಗಳಿಗೆ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ದಾನ ಮಾಡಿದ್ದಾರೆ. ಜೈನ ವರ್ತಕರಲ್ಲಿ ಸೀರೆಯ ಕಾಳಿಸೆಟ್ಟಿಯ ಹೆಸರು ನೆನೆಯುವಂತಹದು. ವೈಶ್ಯ ಕುಲದ ಶಂಕರಸೆಟ್ಟಿ ತಂದೆ ಗುಣವೀರ ಸಿದ್ಧಾಂತದೇವ, ತಂದೆಯ ಗುರು ದೂಚಿಸೆಟ್ಟಿ, ಚಂದಿಸೆಟ್ಟಿ, ಮಲ್ಲಿಸೆಟ್ಟಿ, ನೇಮಿಸೆಟ್ಟಿಯರು ಈ ಸೀರೆಯ ಕಾಳಿಸೆಟ್ಟಿಯ ಮಕ್ಕಳು. ಕಾಳಿಸೆಟ್ಟಿಯು ಧಾರ್ಮಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಬೆಳೆದವರು.

ಜೈನರ ದೇವಾಲಯಗಳಾದ ಬಸದಿಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ಜೈನರ ಭಕ್ತಿ-ಭಾವದ ಪ್ರತೀಕವಾಗಿವೆ. ವಿಜಯನಗರದ ಅರಸರು ಬಸದಿಗಳ ನಿರ್ಮಾಣಕ್ಕೆ ಆಸಕ್ತಿ ವಹಿಸಿರುವ ಉಲ್ಲೇಖಗಳಿವೆ. ಅರಸರಲ್ಲದೇ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇವರಲ್ಲಿ ಸೆಟ್ಟಿ ಕುಲದವರು ಮುಂಚೂಣಿಯಲ್ಲಿರುವರು. ಜೈನ ನಕರರು ಶ್ರವಣಬೆಳ್ಗೊಳ ಶಾಸನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರಿಗೆ 'ಭವ್ಯನಕರ' (ಭವ್ಯಃ ಜಿನಭಕ್ತ)[೯] ಮಾಣಿಕ್ಯನಕರ[೧೦] ಎಂಬ ಪದಗಳನ್ನು ಬಳಸಲಾಗಿದೆ. ಜಿನ ಇವರ ಆರಾಧ್ಯ ದೈವ, ಈ ದೈವದ ಹೆಸರಿನಲ್ಲಿರುವುದು. 'ನಕರ ಜಿನಾಲಯ'.

ಜೈನ ಸನ್ಯಾಸಿಗಳು ಮಳೆಗಾಲದ ನಾಲ್ಕು ತಿಂಗಳು ಹೊರತು ಉಳಿದ ಕಾಲದಲ್ಲೆಲ್ಲಾ ವಿಹರಿಸುತ್ತಿರಬೇಕೆಂಬ ನಿಯಮವಿದ್ದರೂ, ಕ್ರಮೇಣ ಈ ನಿಯಮ ಸಡಿಲಗೊಂಡು ಮುನಿಗಳು ಬಸದಿಗಳಲ್ಲಿ ವಾಸಿಸಲಾರಂಭಿಸಿದರು. ಜೈನ ದೇವಾಲಯಗಳನ್ನು ಬಸದಿ (ಸಂ.ವಸತಿ)ಗಳೆಂದು ಕರೆಯುವುದಕ್ಕೆ ಕಾರಣ ಇದೇ ಇರಬಹುದು. ಈ ದೇವಸ್ಥಾನಗಳನ್ನು

'ಬಸದಿ'[೧೧] 'ಕೊಯಿಲ್ ವಸದಿ'[೧೨] ಎಂದು, 'ಚೈತ್ಯಾಲಯ'[೧೩] ಚೇದಿಯ[೧೪](<ಚೈತ್ಯ) ಎಂದು, 'ಜಿನಾಗಾರ' ಎಂದು ಮುಂತಾಗಿ ಶಾಸನಗಳಲ್ಲಿ ಕರೆಯಲಾಗಿದೆ. ಈ ಬಸದಿಗಳು ಜಿನಮುನಿಗಳ ವಾಸಗೃಹಗಳೂ ಆಗಿದ್ದವು. ದೇವಗೃಹಗಳು ಆಗಿದ್ದುವು. ಇವುಗಳನ್ನು ಜಿನಭಕ್ತಿಯಿಂದ ಮಾಡಿಸುತ್ತಿದ್ದುದಲ್ಲದೆ, ಇವುಗಳ ನಿರ್ಮಾಣದಿಂದ ರಾಜನ, ರಾಷ್ಟ್ರದ(ಪ್ರಜೆಗಳ) ಯಶಸ್ಸೂ, ಐಶ್ವರ್ಯವೂ ವೃದ್ಧಿಯಾಗುತ್ತವೆ ಎಂದು ನಂಬಿಕೆಯಿತ್ತು.[೧೫] ಕದಂಬರ ಮೃಗೇಶವರ್ಮನು ತನ್ನ ವಿಜಯಗಳ ನಂತರ, ತನ್ನ ತಂದೆಯ ಜ್ಞಾಪಕಾರ್ಥವಾಗಿ ಪಲಾಶಿಕಾ ನಗರದಲ್ಲಿ ಜಿನಾಲಯವನ್ನು ಕಟ್ಟಿಸುತ್ತಾನೆ.[೧೬] ಮಂತ್ರಿ ಚಾವುಂಡರಾಯನ ಮಗ ಜಿನದೇವಣ್ಣನು ಜಿನಗೃಹವನ್ನು 'ಒಲವಿಂ' ಎಂದರೆ ಧರ್ಮ ಪ್ರೇಮದಿಂದ ಪ್ರೇರಿತನಾಗಿ ಮಾಡಿಸುತ್ತಾನೆ.[೧೭]

ಚಾಳುಕ್ಯರಾಜ ತ್ರಿಭುವನಮಲ್ಲದೇವನ ರಾಣಿ ಜಾಕಲದೇವಿಯು ತನ್ನ ಆಳಿಕೆಯ ಊರಾದ ಇಂಗುಣಿಗೆಯಲ್ಲಿ, ಜಿನಗೃಹಗಳನ್ನು ಮಾಡಿಸುವುದಾದರೆ ಹೀಗೆ ಮಾಡಿಸಬೇಕು ಎನ್ನುವಮತೆ 'ಪರಿಶೋಭೆಗೆ ತಾಯ್ಮನೆಯಾಗೆ ಭಕ್ತಿಯಿಂ' ಮಾಡಿಸುತ್ತಾಳೆ.[೧೮] ಮತ್ತವುರದಲ್ಲಿ ಬಸದಿಯು ಬೆಟ್ಟದ ಮೇಲಿದ್ದುದನ್ನು ಕಂಡು ಹೊಯ್ಸಳ ದೊರೆ ವಿನಯಾದಿತ್ಯನು 'ಅಲ್ಲಿದ್ದರೆ ಯಾರಾದರೂ ಕದಿಯುವುದಿಲ್ಲವೇ?' ಎಂದು ಊರಿನವರನ್ನು ಪ್ರಶ್ನಿಸಿದಾಗ ಆ ಊರಿನ ಮಾಣಿಕಸೆಟ್ಟಿ ಎಲ್ಲರ ಪ್ರತಿನಿಧಿಯಾಗಿ ನಿಂತು- "ನೀವು ಈ ಊರಲ್ಲಿ ಬಸದಿ ಕಟ್ಟಿಸಿಕೊಡಿ; ನಾವೋ ಬಡವರು, ಏನು ತಾನೇ ಕಟ್ಟಿಸಿಯೇವು! ನಿಮ್ಮ ಐಶ್ವರ್ಯಕ್ಕೆ ಮಿತಿಯಿದೆಯೆ? ಮಲೆಗಳ ರಾಜರುಗಳ ಹತ್ತಿರ ಭತ್ತ ಎಷ್ಟಿದೆಯೋ ಅಷ್ಟಿದೆ ನಿಮ್ಮ ಹತ್ತಿರ ಹಣ" ಎಂದಾಗ ರಾಜರು ಆ ವಾಕ್ಚಾತುರ್ಯಕ್ಕೆ ಮೆಚ್ಚಿ, ನಕ್ಕು, ಊರಲ್ಲಿ ಬಸದಿ ಕಟ್ಟಿಸಿ ಅದಕ್ಕೆ ಬೇಕಾದ ಭೂಮಿಗಳನ್ನು, ತೆರಿಗೆಗಳನ್ನೂ ಬಿಡುತ್ತಾರೆ.[೧೯] ಅನೇಕ ಬಸದಿಗಳ ನಿರ್ಮಾಪಕನಾದ ಬೊಪ್ಪದೇವ(ಜಿನಭಕ್ತ ಗಂಗರಾಜನ ಮಗ) ತನ್ನ "ಕನ್ನಂವಸದಿ"(=ಮೊದಲ ಬಸದಿ?)ಯನ್ನು ಮಾಡಿಸಿದ ವಿಷಯವು ಶಾಸನವೊಂದರಲ್ಲಿದೆ[೨೦](ಇದು ನಾಗಮಂಗಲ ತಾಲ್ಲೂಕು ಕಂಬದ ಹಳ್ಳಿ ಗ್ರಾಮದ ಶಾಂತೀಶ್ವರ ಬಸದಿಯ ಶಾಸನ).

ಈ ಬಸದಿಗಳಿಗೆ ತೀರ್ಥಂಕರರ ಹೆಸರುಗಳ ಜೊತೆಗೆ ಕಟ್ಟಿಸಿದವರ ಹೆಸರುಗಳನ್ನೂ ಇಡುತ್ತಿದ್ದರು(ಜೈನ ದೇವಸ್ಥಾನಗಳಲ್ಲಂತೂ ಇದು ಬಹು ಸಾಮಾನ್ಯ). ಶ್ರವಣಬೆಳಗೊಳದ ಬಸದಿಗೆ ಬೊಪ್ಪಣ ಚೈತ್ಯಾಲಯವೆಂಬ ಮತ್ತೊಂದು ಹೆಸರಿತ್ತು.[೨೧] ವಿಷ್ಣುವರ್ಧನನ

ರಾಣಿಯಾದ ಶಾಂತಲೆಯು 'ಶಾಂತಿ ಜಿನೇಂದ್ರಬಿಂಬ'[೨೨]ವನ್ನು (ಶಾಂತಿನಾಥನು ತೀರ್ಥಂಕರರಲ್ಲಿ ಒಬ್ಬ) ಮಾಡಿಸಿದ್ದಾಳೆ. ನಿರವದ್ಯಯ್ಯ ಎಂಬಾತ ನಿರವದ್ಯ ಜಿನಾಲಯವನ್ನು ಮಾಡಿಸಿದ್ದಾನೆ.[೨೩]

ಕ್ರಿ.ಶ.೧೧೬೮ರಲ್ಲಿ ಬಂದೂರಿನ ವಿಭುದೈಕ ಬಾಂಧವನೆಂದು ಪ್ರಸಿದ್ಧವಾಗಿದ್ದ ಬೆಳ್ಳಿಯ ದಾಸಿಸೆಟ್ಟಿಯು ದೋರಸಮುದ್ರದಲ್ಲಿ ಹೊಯ್ಸಳ ಜಿನಾಲಯವನ್ನು ಮಾಡಿಸಿದ್ದಾನೆ. ಆ ಜಿನಾಲಯಕ್ಕೆ ಬಂದೂರನ್ನು ದಾಸಿಸೆಟ್ಟಿಯ ಸೋದರಳಿಯಂದಿರು ದಾನ ಬಿಡುತ್ತಾರೆ. ಆ ಬಂದೂರಿನಲ್ಲಿ ವಾಸು ಪೂಜ್ಯ ವ್ರತೀಂದ್ರ ಶಿಷ್ಯ ಪುಷ್ಪಸೇನದೇವ ಬಸದಿಯನ್ನು ಮಾಡಿಸುತ್ತಾರೆ. ದಾಸಿಸೆಟ್ಟಿಯ ಸೋದರಳಿಯಂದಿರು ಬಂದೂರಿನ ಹೆಗ್ಗಡೆಗಳಾದ ಮಾದಿರಾಜನು ಸಂಕರಶೆಟ್ಟಿಯು ಪಾರ್ಶ್ವನಾಥನ ಪ್ರತಿಮೆಯನ್ನು ಮಾಡಿಸಿಕೊಟ್ಟಿದ್ದಾರೆ. ಆ ಬಸದಿಗೆ ತಳವೃತ್ತಿಯನ್ನು, ಬಸದಿ ಯಲ್ಲಿದ್ದ ಋಷಿಯ ಆಹಾರದಾನಕ್ಕೆ ಇತರೆ ವಿಧಿಗಳಿಗೆ ಅಪಾರ ಭೂಮಿ ತೋಟ ಕಳವತ್ತವನ್ನು, ಸುಂಕದ ಹೆಗ್ಗಡೆಗಳು ನಂದಾದೀವಿಗೆಗೆ ಕೈಗಾಣವೊಂದನ್ನು ಬಿಟ್ಟ ವಿವರ ಗಳಿವೆ.[೨೪] ವಾಸುಪೂಜ್ಯ ವ್ರತೀಂದ್ರರ ಗುಡ್ಡನಾದ ಸಿರಿವಂತ ವ್ಯಾಪಾರಿ ಬೆಳ್ಳಿಯ ದಾಸಿಸೆಟ್ಟಿಯು ದಾನ ಧರ್ಮಕಾರ್ಯಗಳಿಂದ ವಿಭುದೈಕ ಬಾಂಧವನೆಂದು ಹೆಸರು ಪಡೆದು ಧರ್ಮದಿಂದ "ಪರದುಗೆಯ್ದು ಅರ್ಥವನ್ನು ನ್ಯಾಯದಿಂದ ಪಡೆದು ದೇವತಾ ಪೂಜೆಗೆ ಬಸದಿಗೆ ಶಿಷ್ಟೇಷ್ಟದಾನಕ್ಕೆ ನಿತ್ಯವೂ ಕೊಡುತ್ತಿದ್ದು, ಅವನ ಭಾಗ್ಯವೇ ತವನಿಧಿಯಾಗಿ ಬೆಳೆಯಿತೆಂದು ಹೇಳಲಾಗಿದೆ. ಬಸದಿ ನಿರ್ಮಿಸುವ ಅವನ ಸಿರಿತನ, ಅಲ್ಲಿನ ಅಧಿಕಾರ, ಧರ್ಮ ಅರ್ಥದೊಂದಿಗಿನ(ವ್ಯಾಪಾರ) ಅವನ ಸಂಬಂಧವನ್ನು ಗಮನಿಸಬಹುದು.

ಅರಸೀಕೆರೆಯಲ್ಲಿ ನಖರ ಜಿನಾಲಯವಿದ್ದು ಯಾಪನೀಯ ಸಂಘದ ಏಕ್ಕೋಟಿ ಜಿನಾಲಯವಾಗಿತ್ತು. ಜೈನ ಸಮಾಜದ ಎಲ್ಲ ಬಸದಿಗಳಲ್ಲಿ ಶ್ರಾವಕರೆಲ್ಲರಿಗೂ ಪ್ರವೇಶವಿತ್ತಾದರೂ ಬಹುಶಃ ಜಿನಮುನಿಗಳೆಂದು ಕಟ್ಟಿಸಿದ್ದ ಅಥವಾ ಅವರಿಗೆ ಸೇರಿರುವ ಬಸದಿಗಳಲ್ಲಿ ಶ್ರಾವಕರಿಗೆ ಹೆಚ್ಚಿನ ಸ್ವಾತಂತ್ರ್ಯವಿದ್ದಿರಲಾರದು. ಮತಾಂತರಗೊಂಡಿದ್ದ ವರ್ತಕರನ್ನು ಮೂಲತಃ ಜೈನರಾದವರು ಅಲಕ್ಷಿಸಿದ್ದಿರಬೇಕು. ಇದರಿಂದಾಗಿ ವರ್ತಕರು ಸಾಮಾನ್ಯವಾಗಿ ವ್ಯಾಪಾರಕ್ಕೆಂದು ಹೋಗುತ್ತಿದ್ದ ಕೇಂದ್ರ ಸ್ಥಳಗಳಲ್ಲಿ ತಮ್ಮ ದಿನನಿತ್ಯದ ಶ್ರಾವಕರ ವಿಧಿಗಳನ್ನು ಆಚರಿಸಲು ಅನುಕೂಲವಾಗುವಂತೆ ನಕರ ಜಿನಾಲಯಗಳನ್ನು ನಿರ್ಮಿಸಿಕೊಂಡಿದ್ದರೆಂದೂ, ನಕರ ಜಿನಾಲಯಗಳಲ್ಲಿ ಜಿನಪೂಜೆಗಾಗಿ ಪೂಜಕರ ವ್ಯವಸ್ಥೆಯು ಇತ್ತೆಂದು... ಈ ಬಸದಿಗಳಿಗೆ ಸಂಬಂಧಿಸಿದ ಶಾಸನಗಳು ಯಾಪನೀಯ ಸಂಘದ ಗುರುಗಳನ್ನು ಅಥವಾ ಬಲಾತ್ಕಾರ ಗಣದ ಜಿನಮುನಿಗಳನ್ನು

ಉಲ್ಲೇಖಿಸಿರುತ್ತವೆಂಬ ಸೂಕ್ಷ್ಮ ವಿಚಾರವನ್ನು ಡಾ.ವಸಂತಲಕ್ಷ್ಮಿಯವರು ಗುರುತಿಸಿದ್ದಾರೆ.[೨೫] ಇದು ಜೈನ ಸಮಾಜದಲ್ಲಿದ್ದ ಮಡಿವಂತಿಕೆಯನ್ನೂ ಸಮಾಜಮುಖಿಯಾಗುವತ್ತ ಹೊರಟು ಜೈನಧರ್ಮವು ಅಪಾರ ಸಂಖ್ಯೆಯ ಸಿರಿವಂತ ವರ್ತಕ ಸಮೂಹವನ್ನು ಆಕರ್ಷಿಸಿ ಆರ್ಥಿಕ ಕ್ಷೇತ್ರದಲ್ಲಿ ಸ್ವಾಮ್ಯವನ್ನು ಪಡೆಯಲು ಸಾಮಾನ್ಯ ಜನರನ್ನು ಒಲಿಸಿಕೊಳ್ಳಲು ತನ್ನ ತತ್ವ ಆಚರಣೆಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿರುವುದನ್ನು ಹೇಳುತ್ತದೆ.

ಜೈನ ಧರ್ಮವು ವಿಜಯನಗರದ ಕಾಲದ ಆರಂಭದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಹೊಂದಿತ್ತು. ರಾಜಧಾನಿಯಿಂದ ವಿಜಯನಗರದಲ್ಲಿ ಎರಡು ಕಡೆ ತನ್ನ ಅವಶೇಷಗಳನ್ನು ಉಳಿಸಿದೆ. ಗಾಣಗಿತ್ತಿ ಬಸದಿ, ಇನ್ನೊಂದು ಆನೆಸಾಲಿನ ಹಿಂಭಾಗ ಬಸದಿಗಳು ಇವರ ಇರುವಿಕೆಯನ್ನು ತಿಳಿಸುತ್ತವೆ. ಹರಿಹರನ ಮಂತ್ರಿ ದಂಡನಾಯಕನಾಗಿದ್ದು, ಇರುಗುಪ್ಪ ಗಾಣಿಗಿತ್ತಿ ಬಸದಿಯನ್ನು ಕಟ್ಟಿಸಿದರೆ, ಎರಡನೇ ದೇವರಾಯನು ಆನೆ ಸಾಲೆ ಹಿಂಭಾಗದ ಬಸದಿಯನ್ನು ಕಟ್ಟಿಸಿದ್ದಾನೆ.

ವಿಜಯನಗರದ ರಾಜನಾದ ಪ್ರೌಢದೇವರಾಯರ ಆಜ್ಞಾಧಾರಕರಾದ ಗಣಪಣ್ಣೊಡೆಯರು ಮಂಗಳೂರು ರಾಜ್ಯವನ್ನು ಆಳುತ್ತಿದ್ದಾಗ ತ್ರಿಭುವನ ಚೂಡಾಮಣಿ ಚೈತ್ಯಾಲಯದ ಮುಖಮಂಟಪವನ್ನು ಭವ್ಯಜನಂಗಳು ಮಾಡಿಸುವರು. ಆ ಭವ್ಯ ಜನಂಗಳಾದ ಚಳಸೆಟ್ಟಿ, ಸೇನಾಪತಿ, ತಂಞನೆ ದೇವತಿಸೆಟ್ಟಿ, ಬೆಟ್ಟಕೇರಿಯ ಶಾಂತಿಸೆಟ್ಟಿ, ಮಡೆ ಕಾಂತುಸೆಟ್ಟಿ, ಎಡಮ್ಮೆಂದಿ ಸೆಟ್ಟಿ, ಬಾಣಸಿಮ್ಮೆಂದಿಸಟ್ಟಿ, ಆಳ್ವ ನಾರಾಣಸೆಟ್ಟಿ, ಕುಡೆಲು ಉತ್ತಮಸೆಟ್ಟಿ, ಹೆಗ್ಗಡೆ ದೇವರು ಸೆಟ್ಟಿಯರಿಗೆ ಇಂತಿಷ್ಟು ಭಾಗ ಎಂದು ಶಾಸನ ಉಲ್ಲೇಖಿಸಿದೆ. ಆ ಮುಖ ಮಂಟಪವನ್ನು ಸಕಲ ಜನ ಮನೋನಯನಾಭಿರಾಮಮು ಮತ್ಸಾಶ್ಚರ್ಯಕರ ಮುಮಪ್ಪಂತು ಮಾಡಿಸಿದರಾ" ಎಂದಿದೆ.[೨೬]

ಕೃಷ್ಣದೇವರಾಯನು ರಾಜ್ಯವಾಳುವಾಗ ಮಂಗಳೂರಿನ ಬಾರಕೂರು ರಾಜ್ಯವನ್ನು ರತ್ನಪ್ಪವೊಡೆಯರು ಆಳುತ್ತಿರುತ್ತಾರೆ. ಇವನನ್ನು ಶಾಸನದಲ್ಲಿ ಮಹಾಭಾಗಧೇಯ ತದಾಜ್ಞಾಧಾರ, ಸಪ್ತಸಪ್ತತಿ ದುರ್ಗಾಧೀಶ್ವರ, ಮೇದಿನೀ ಮೀಸರಗಂಡ, ಭೈಚದಂಡಾಧಿಪ ಗೋತ್ರ ಗಗನ ಮಂಡಲ ಮೊರ್ತ್ತಂಡ ಮಂಡಲ, ಜೈನ ಪರಮಾಗಮೋದ್ಧರಣದತ್ತಾವದಾನ, ಸಮ್ಯಕ್ತಗುಣ ರತ್ನಭೂಷಣ ಭೂಷಿತನೆಂದು ಹೊಗಳಲಾಗಿದೆ. ಇವನ ಅವಧಿಯಲ್ಲಿ ಅಭಿನವ ಚಾರುಕೀರ್ತಿ

ಪಂಡಿತ ದೇವರುಗಳ ನಿರೂಪದಿಂದ ಮುನಿಭದ್ರ ದೇವರುಗಳು ಜೈನಾಗಮನ ಮಹತ್ವವನ್ನು ಉಪದೇಶ ಮಾಡಿದಾಗ ಇದನ್ನು ಕೇಳಿದ ಬಿದಿರೆಯ ಎಂಟು ಮಂದಿ ಸೆಟ್ಟಿಕಾರರು, ನಾಲ್ವರು ಯಳಮೆಗಳು ಮತ್ತು ಸಮಸ್ತರು ಕೂಡಿ ಪ್ರತಿನಿತ್ಯ ಜಿನಶಾಸ್ತ್ರ ನಡೆಸಬೇಕೆಂದು ಶಾಸ್ತ್ರದಾನವಾಗಿ ೬೬೦ ದೊಡ್ಡ ವರಹಗಳನ್ನು ಕೊಟ್ಟು ತಾಮ್ರಪತ್ರ ಬರೆಸಿ, ಪಾರ್ಶ್ವನಾಥ ದೇವರ ಭಂಡಾರಕ್ಕೆ ನೀಡುತ್ತಾರೆ. ಇಲ್ಲಿ ಅನೇಕ ಸೆಟ್ಟಿಯರು ದಾನ ನೀಡಿದ ವಿವರವಿದೆ. ಅಲ್ಲದೆ ಬೇರೆ ಬೇರೆ ಸ್ಥಳಗಳಿಂದ ಬಂದ ಗೇಣಿಯ ಅಕ್ಕಿಯಿಂದ ೧೦೦ ವರಹ, ಬಡ್ಡಿಯಿಂದ ಬರುವ ೨೫ ಅಕ್ಕಿಯ ಮೂಡೆಗಳನ್ನು ಸಿದ್ಧಾಂತದ ನಿತ್ಯಪೂಜೆಗೆ ದಾನ ನೀಡಿ, ಮಿಕ್ಕ ೫೬೦ ವರಹ ಬಡ್ಡಿಯ ಗೇಣಿಯ ಅಕ್ಕಿಯನ್ನು ಶಾಸ್ತ್ರದಾನಕ್ಕಾಗಿ ದಾನವಾಗಿ ನೀಡಲಾಗಿದೆ. ಪ್ರಾಚೀನ ಕಾಲದ ಸೆಟ್ಟಿಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹೇಗೆ ಮುಂದುವರಿದಿದ್ದರೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೨೭]

ವಿಜಯನಗರದ ಅರಸರಿಗೆ ನೇರವಾಗಿ ಸಂಬಂಧಿಸುವ ಶಾಸನಗಳು ಕೊಡಗು ಜಿಲ್ಲೆಯಲ್ಲಿ ವಿಶೇಷವಾಗಿ ಕಂಡು ಬಂದಿಲ್ಲವಾದರೂ, ಅವರ ಅಧಿಕಾರ ಪ್ರಭಾವಕ್ಕೆ ಒಳಪಟ್ಟಿತ್ತೆಂಬುದು ಸ್ಪಷ್ಟ. ಮುಳ್ಳೂರು ಬಸದಿಗಳ ಆವರಣದಲ್ಲಿರುವ ಕ್ರಿ.ಶ.೧೩೯೦ನೆಯ ವರ್ಷದ ಶಾಸನ(ನಂ.೭೫)ವು ರಾಜಾಧಿರಾಜ ಕೊಂಗಾಳ್ವನು ತನ್ನ ತಾಯಿ ಪೋಚಬ್ಬರಸಿಯ ಪುಣ್ಯಾರ್ಥವಾಗಿ ನೀಡಿದ ದತ್ತಿಯ ವಿಷಯವನ್ನು ಮೂಲ ದಾಖಲೆಗಳಿಂದ ಓದಿಸಿ ತಿಳಿದ ಇಮ್ಮಡಿ ಹರಿಹರನು ಅದನ್ನು ಪುನರ್ದತ್ತಿ ಮಾಡಿದನು. ಗೋಪಾಲರೆಡ್ಡಿ ನಾಯಕನೆಂಬ ಅಧಿಕಾರಿಯ ಧೈರ್ಯ, ಸಾಹಸಗಳನ್ನು ಗುಂಡಪ್ಪ ದಂಡನಾಯಕನಿಂದ ತಿಳಿದ ದೊರೆಯು ಮೆಚ್ಚುಗೆಯಾಗಿ ಅವನಿಗೆ ಮುಳ್ಳೂರು ನಾಡನ್ನು ನೀಡಿದನು. ಕುಮಾರನ ಹಳ್ಳಿ ಮತ್ತು ಕಾರಗೋಡು ಗ್ರಾಮಗಳನ್ನು ಕ್ರಮವಾಗಿ ಭೀಮಾಪುರ ಮತ್ತು ಅಣ್ಣಾಂಗಪುರಗಳೆಂದು ನಾಮಕರಣ ಮಾಡಿ ಪಾರ್ಶ್ವನಾಥ ದೇವರಿಗೆ ದಾನ ಮಾಡಿದನೆಂಬ ವಿವರಗಳನ್ನು ಒಳಗೊಂಡಿದೆ.[೨೮] ಇದು ವಿಜಯನಗರ ರಾಜನಾದ ಎರಡನೇ ಹರಿಹರನ ಕಾಲಕ್ಕೆ ಸಂಬಂಧಪಟ್ಟಿದ್ದು.

ತೀರ್ಥಹಳ್ಳಿಯ ೨೧೫ರ ಶಾಸನದಲ್ಲಿ, ಮೇಳಿಗೆಯ ಬೊಮ್ಮಿಸೆಟ್ಟಿಯು ಅನಂತತೀರ್ಥಂಕರ ಬಸದಿಯನ್ನು ಕಟ್ಟಿಸಿದನು. ಅವನ ಮೊಮ್ಮಗ ಬೊಮ್ಮಣಸೆಟ್ಟಿ ಮತ್ತು ಸ್ಥಳದ ಇತರರು ಅದನ್ನು ಕಲ್ಲಿನಲ್ಲಿ ಕಟ್ಟಿಸಿಕೊಟ್ಟರು. ವೆಂಕಟಪತಿಯು ಪೆನುಗೊಂಡೆಯಿಂದ ರಾಜ್ಯವಾಳುತ್ತಿದ್ದ. ದೇವರ ಸೇವೆಗಾಗಿ ದಾನವೊಂದನ್ನು ನೀಡಲಾಯಿತು.[೨೯]

ಕ್ರಿ.ಶ.೧೫೧೧ರ ನಾಗಮಂಗಲದ ಆನೆಯ ಶಾಸನವು ಅನಾದಿ ಅಗ್ರಹಾರ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರವಾದ ನಾಗಮಂಗಲದ ವೀರಭದ್ರ ದೇವಾಲಯದ ರಂಗಮಂಟಪದ ಮುಂಭಾಗದಲ್ಲಿ ಗಂಧಗೋಡಿ ಮಂಟಪವನ್ನು ಕಟ್ಟಿಸಿದ ವಿಷಯವನ್ನು ದಾಖಲು ಮಾಡಿದೆ. ಈ ಗಂಧಗೋಡಿ ಮಂಟಪವು ಬಹುಶಃ ರಂಗಮಂಟಪದೊಳಗಿನ ಗಂಧದ ಮಂಟಪವಾಗಿದ್ದು, ದೇವರ ಉತ್ಸವ ಮೂರ್ತಿಗಳನ್ನು ಇಲ್ಲಿ ಕೂಡಿಸುತ್ತಿದ್ದಿರಬಹುದು. ದಾನಿಯಾದ ಹೊನ್ನಿಸೆಟ್ಟಿಯು ಅಕ್ಕನ ಚೆನ್ನಸೆಟ್ಟಿಯ ಮಗನಾಗಿದ್ದು, ಅರಮನೆಯ ಬೇಹಾರಿಯಾಗಿದ್ದನು. ಈ ಶಾಸನವು ಕೃಷ್ಣದೇವರಾಯನ ಕಾಲದ್ದಾಗಿದೆ. ಈ ಶಾಸನವನ್ನು ಬರೆದವರು ವೀರಾಚಾರಿ[೩೦] ಮೂಲಸಂಘ, ದೇಸಿಗಣ, ಪೊಸ್ತಕಗಚ್ಛ, ಕೊಂಡ ಕುಂದಾನ್ವಯದ ಚಂದ್ರಕೀರ್ತಿ ಭಟ್ಟಾರಕರ ಶಿಷ್ಯ ಬೆಂಚಿಸೆಟ್ಟಿಯ ಪತ್ನಿ ಬೋಚಿಕಬ್ಬೆಯ ಗೊಮ್ಮಣ ಪಾರ್ಶ್ವಜಿನಮೂರ್ತಿಯನ್ನು ಮಾಡಿಸಿದ ಳೆಂದು ಇದರಲ್ಲಿ ಹೇಳಿದೆ. ಈ ಶಾಸನವು ೧೨ನೇ ಶತಮಾನದ ಕನ್ನಡ ಲಿಪಿಯಲ್ಲಿದೆ.[೩೧]

ಮಾನ್ವಿ ತಾಲೂಕಿನ ದದ್ದಲದಲ್ಲಿ ದೊರೆತ ಶಾಸನದ ಮೂಲಕ ಮಾಕಿಸೆಟ್ಟಿಯು ಪೊನ್ನಾಪಾಳಿನಲ್ಲಿ(ಈಗಿನ ಪದ್ದಲಿ ಪನ್ನೂರು) ಗಿರಿಕೋಟಿಮಲ್ಲ ಎಂಬ ಜಿನಾಲಯವನ್ನು ಕಟ್ಟಿಸಿ ದಾನವನ್ನು ಬಿಡುತ್ತಾನೆ.

ಈಗ ಅಲ್ಲಿ ಯಾವ ಅವಶೇಷಗಳು ಕಂಡುಬರುವುದಿಲ್ಲ. ಜೈನ ಸನ್ಯಾಸಿಗಳು ಮಳೆಗಾಲದ ೪ ತಿಂಗಳ ಹೊರತು ಉಳಿದ ಕಾಲದಲ್ಲೆಲ್ಲಾ ವಿಹರಿಸುತ್ತಿರಬೇಕೆಂಬ ನಿಯಮ ವಿದ್ದರೂ ಕ್ರಮೇಣ ಈ ನಿಯಮ ಸಡಿಲಗೊಂಡು ಮುನಿಗಳು ಬಸದಿಗಳಲ್ಲಿ ವಾಸಿಸಲಾರಂಭಿಸಿ ದರು. ಜೈನ ದೇವಾಲಯಗಳನ್ನು ಬಸದಿ (ವಸತಿ)ಗಳೆಂದು ಕರೆಯುವುದಕ್ಕೆ ಈ ಅಂಶ ಕಾರಣವಾಗಿರಬಹುದು. ಈ ದೇವಸ್ಥಾನಗಳನ್ನು 'ಬಸದಿ' ಎಂದು ಚೈತ್ಯಾಲಯ, ಚೇದಿಯ(ಚೈತ್ಯ) ಎಂದು ಜಿನಗಾರ ಎಂದು ಮುಂತಾಗಿ ಶಾಸನಗಳಲ್ಲಿ ಕರೆಯಲಾಗಿದೆ.

ಗ್ರಾಮಗಳ ಲೆಕ್ಕಪತ್ರಗಳನ್ನು ಸೇನಬೋವರು ನೋಡಿಕೊಳ್ಳುತ್ತಿದ್ದರು. ವಿದ್ಯಾವಂತರಾದ ಇವರು ಪ್ರತಿಯೊಂದು ಗ್ರಾಮದಲ್ಲಿರುತ್ತಿದ್ದರು. ಗ್ರಾಮದ ಆಡಳಿತ ವಿಷಯದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದರು. ಗ್ರಾಮದ ಆಡಳಿತ ವಿಷಯದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದರು. ಕೆಲವೊಮ್ಮೆ ಶಾಸನಗಳನ್ನು ಬರೆಯುತ್ತಿದ್ದರು. ಇಂತವರ ಉಲ್ಲೇಖಗಳು ಗಂಗಾವತಿ ಶಾಸನದಲ್ಲಿ ಕಂಡುಬರುತ್ತವೆ. ಹಿರೇಜಂತಗಲ್ ಶಾಸನವೊಂದರಲ್ಲಿ(ಕ್ರಿ.ಶ.೧೫, ಕಾರ್ತಿಕ ೩)

"ತೃಟಿತ.... ರಗಿದ, ಸೇನಭೊವ ನರಸಪ್ಪ
ಯ್ಯವರಲು..... ಮಗ.... ವಗಣಗರಯೆ
ಜಿನಬೋವ...... ಸಂಕಣಯಿ......ಚೆನ್ನಯಮಗ......
ಸೆಟ್ಟರ ಸತಿಗೆ ......ದನೂರು ಹನಿಸೆಟ್ಟಿ.....
ಯಮ್ಮವಿದಸಿ ಅಂಣ ಮೊ...... ಎಂದು ಉಲ್ಲೇಖವಿದೆ.[೩೨]

ಮಧ್ಯ ಕರ್ನಾಟಕದಲ್ಲಿ ಶೆಟ್ಟಿ ಬಣಜಿಗ ಮೊದಲಾದವರು ವರ್ತಕರ ಶ್ರೇಣಿಯ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದರು. ಆನೆಗೊಂದಿ ಶಾಸನವೊಂದರಲ್ಲಿ ಮೂಲಸಂಘ ದೇಸಿಗಣದ ನರೇಂದ್ರಸೇನ ಪ್ರಿಯಶಿಷ್ಯ ಹಾನಿಯ ಲಕ್ಕಿಸೆಟ್ಟಿಯ ಮಗ ಗೋಪಿ ಶೆಟ್ಟಿ ನಿಸಿಧಿಯಾದನು ಎಂದು ಉಲ್ಲೇಖವಿದೆ.[೩೩] ವಿಜಯನಗರದ ೨ನೆಯ ದೇವರಾಯನ ಮಗ ವಿರೂಪಾಕ್ಷನ ಕಾಲದಲ್ಲಿ ದಕ್ಷಿಣ ಕನ್ನಡದ ಮೂಡಬಿದರೆಯ ಶಾಸನವೊಂದು(೧೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ ೧೯೨೭, ಪು.೧೫೭) ಬಾರಕೂರು ರಾಜ್ಯದ ವಿಟ್ಟರಸರು ಆಳುವ ಕಾಲಕ್ಕೆ ಎಂಟು ಮಂದಿ ಶೆಟ್ಟಿಗಾರರು ಬಿದರೆಯ ಜೈನಮಂದಿರಕ್ಕೆ ದತ್ತಿಯನ್ನು ಕೊಟ್ಟಿದ್ದನ್ನು ಹೇಳುತ್ತದೆ. ಇಲ್ಲಿ ಹೇಳಿದ ಶೆಟ್ಟಿಗಾರರ ದಾನಧರ್ಮಗಳ ವಿಚಾರವು, ಅನೇಕ ವರ್ತಕರು ಕೊಡ ಮಾಡಿದ ಇಂತಹ ದತ್ತಿ ಕಾಣಿಕೆಗಳ ಉಲ್ಲೇಖಗಳಲ್ಲಿ ಒಂದು ದೂರದ ಮಾರ್ವಾರ (ರಾಜಸ್ಥಾನ)ದಿಂದ ಸಹ ವ್ಯಾಪಾರಸ್ಥರು ಬಂದು ಶ್ರವಣಬೆಳಗೊಳದಲ್ಲಿ ಪ್ರತಿಮೆಗಳನ್ನು ಸ್ಥಾಪಿಸಿ, ಜಿನಮಂದಿರಗಳನ್ನು ಕಟ್ಟಿಸಿ ಅವುಗಳಿಗೆ ದತ್ತಿಗಳನ್ನು ಏರ್ಪಡಿಸಿದ ಎಷ್ಟೋ ಉದಾಹರಣೆಗಳಿರುವುವು.[೩೪]

ಕನಕದಾಸರ ಮೋಹನ ತರಂಗಿಣಿಯಲ್ಲಿ ದೇಶಾಧಿಪ ಕೃಷ್ಣರಾಯನ ದ್ವಾರಕಾನಗರದ ವರ್ಣನೆ ಬರುತ್ತದೆ.[೩೫] ಇದನ್ನು ಬರೆದಾಗ ಕನಕದಾಸರು ವಿಜಯನಗರವನ್ನೇ ಕುರಿತು ಹೇಳಿದಂತೆ ಕಾಣಿಸುತ್ತದೆ. ದೇಶ ವಿದೇಶಗಳೊಂದಿಗೆ ಹಡಗುಗಳಲ್ಲಿ ವ್ಯಾಪಾರ ನಡೆಸುತ್ತಿದ್ದ ಆ ನಗರದ ವರ್ತಕರ ಸಂಪತ್ತು ಕುಬೇರನಿಗೂ ಸಹ ಕೊಡುವಷ್ಟಿತ್ತೆಂದು ಕನಕದಾಸರು ಹೇಳುತ್ತಾರೆ. ಅಂಗಡಿ ಬೀದಿಗಳಲ್ಲಿ ಇಂಥಹ ವರ್ತಕರು ಧನ ಕನಕರಾಶಿಯ ನಡುವೆ ಕುಳಿತಿರುತ್ತಿದ್ದರಂತೆ. ನಗರದ ಬೇರೆ ಬೇರೆ ಬಡಾವಣೆಗಳ ಆಡಳಿತವು ಸೆಟ್ಟಿ, ಪಟ್ಟಣಸ್ವಾಮಿಗಳೆಂಬ ನಗರಾಧ್ಯಕ್ಷರುಗಳ ಅಧೀನದಲ್ಲಿತ್ತು.[೩೬] ಇವರಿಗೆ ತಳವಾರರೆಂಬ ರಕ್ಷಣಾದಳದ ನೆರವೂ

ಇತ್ತು.[೩೭] ಅರಮನೆಯ ಒಳಗೆ ಪುರುಷರು ಮಾಡಬಹುದಾದ ಕಾರ್ಯಗಳನ್ನೆಲ್ಲ ಸ್ತ್ರೀಯರೂ ಮಾಡಬಲ್ಲವರಾಗಿದ್ದರು. ಕತ್ತಿ, ಗುರಾಣಿಗಳನ್ನು ಹಿಡಿದು ಕಾದಾಡಬಲ್ಲರು. ಮಲ್ಲಯುದ್ಧವನ್ನು ಮಾಡಬಲ್ಲರು. ಅರಮನೆಯ ಒಳಗಿನ ಎಲ್ಲ ವ್ಯವಹಾರಗಳ ಲೆಕ್ಕ ಪತ್ರವನ್ನೂ ಇಡಬಲ್ಲರು, ಅಷ್ಟೇ ಅಲ್ಲ ಎಲ್ಲ ಸಂಗತಿಗಳ ವಿವರಗಳನ್ನೂ ಗಮನಿಸಿ, ಅಂಥದ್ದೇ ರೀತಿಯ ವ್ಯವಹಾರಗಳೊಂದಿಗೆ ತುಲನೆ ಮಾಡಬಲ್ಲವರಾಗಿದ್ದರು[೩೮] ಎಂದು ಪಾಯಸ್ ಮತ್ತು ನೂನಿಜ್ ಹೇಳುತ್ತಾರೆ.

ಅರಮನೆಯ ಒಳಗೆ ಈ ರೀತಿಯ ಕಾರ್ಯದಕ್ಷತೆಯನ್ನು ಪ್ರಕಟಿಸಿದ ಸ್ತ್ರೀಯರ ವಿಷಯ ಶಾಸನಗಳಲ್ಲಿ ದೊರೆಯುತ್ತದೆ. ಪ್ರೌಢದೇವರಾಯನ ಅರಮನೆಯಲ್ಲಿ ಹೊನ್ನಮ್ಮಳೆಂಬ ವರದಿಗಾರಳು ಇದ್ದಳು.[೩೯] ಅಚ್ಯುತರಾಯನ ಕಾಲದಲ್ಲಿ ಇದೇ ರೀತಿಯ ಕಾರ್ಯನಿರ್ವಹಣೆ ಮಾಡಿದವಳು ತಿರುಮಲ್ಲಮ್ಮ, ೧೫೪೪ರ ಅಂಜನಗಿರಿ ಶಾಸನದಲ್ಲಿ (ಮಡಿಕೇರಿ ತಾಲೂಕು ೧೯) ಇದರ ಸೂಚನೆ ಸಿಗುತ್ತದೆ. ಅಲ್ಲಿನ ಬಸದಿಗೆ (ಕೇರಳದ) ಕಣ್ಣಾನೂರಿನ ಕಾಮಸೆಟ್ಟಿ ಹಾಗೂ 'ಅಸುಂಡಿ ಅರಸ' ದಾನ ನೀಡಿದ ಉಲ್ಲೇಖ ಹೇಳಿದೆ. ಕ್ರಿ.ಶ.೧೫೭೯ರ ಹೆಗ್ಗಡೆ ಗ್ರಾಮದ ಶಾಸನವು ಚಿ.ನಾ.೨೨, ಮಹಾಮಂಡಳೇಶ್ವರ ಶ್ರೀಪತಿರಾಜನ ಮಗ ರಾಜ್ಯಯ್ಯದೇವ ಮಹಾ ಅರಸುವಿನ ಮಗನಾದ ವಲ್ಲಭದೇವ ಮಗರನಾಡ ಅರಸುವು ಮಗನಾದ ಹೊಯ್ಸಳ ರಾಜ್ಯಕ್ಕೆ ಸಲುವ ಬೂದಿಹಾಳ ಸೀಮೆಯಲ್ಲಿನ ಜಿನ ಬಸದಿಗೆ, ಹೆಗ್ಗೆಟ್ಟೆಯ ಬಸ್ತಿಗಿದ್ದ ಮಾನ್ಯದ ಜೀರ್ಣೋದ್ಧಾರ ಕ್ರಮವಾಗಿ ಭೂದಾನ ನೀಡಿದ ವಿಷಯ ಹೇಳುತ್ತದೆ. ಈ ಬಗ್ಗೆ ಗುತ್ತಿಗೆ ಹರಿಹರ ಸೂರಯ್ಯನ ಮಗ ಚಿಂನವರದ ಗೋವಿಂದಸೆಟ್ಟಿ ಹೆಗ್ಗೆಜೆಬಸ್ತಿಯ ದೇವರ ಮಾನ್ಯವನ್ನು ಪಾಲಿಸಬೇಕೆಂದು ಬಿನ್ನಹ ಮಾಡಿಕೊಂಡಿದ್ದ.[೪೦]

ಧರ್ಮಸ್ಥಳದ ಮಂಜೂಷಾ ವಸ್ತುಸಂಗ್ರಹಾಲಯದಲ್ಲಿನ ಶಾಸನದಲ್ಲಿ ಚೆನ್ನದೇವಿ ಮತ್ತು ಭೈರಾದೇವಿಯ ಆಳ್ವಿಕೆಯನ್ನು ತಿಳಿಸುತ್ತದೆ. ಇನ್ನೊಂದು ಶಾಸನ, ಚೆನ್ನಾದೇವಿ ಕ್ರಿ.ಶ.೧೫೮೮ರವರೆಗೆ ಆಳ್ವಿಕೆ ಮಾಡಿದ್ದನ್ನು ತಿಳಿಸುತ್ತದೆ.[೪೧] ಇವರ ಮಂತ್ರಿಯಾದ ದೇವಿಯಸೆಟ್ಟಿಯ ಮಗ ಹೊನ್ನಾವರ ದಲ್ಲಿ ಶಾಂತೀಶ್ವರ ಬಸದಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಈ ರಾಜರ ಪರಂಪರೆಯನ್ನು ಹೇಳುವುದಲ್ಲದೆ ಇವರು ಕದಂಬಾನ್ವಯವರೆಂದೂ... ಮತ್ತು ಶ್ರೀ ಶಂಕರಾಂಬೆ, ಇವರ ಮಕ್ಕಳು ಮಲ್ಲಿಯಾರ, ಸಾಳ್ವೇಂದ್ರ ದೇವ ಮತ್ತು ಶ್ರೀಗುರರಾಯ ಒಡೆಯರೆಂದು ಶಾಸನ ತಿಳಿಸುತ್ತದೆ.

ಕ್ರಿ.ಶ.೧೩೬೮ಕ್ಕೆ ಸೇರಿದ ಬುಕ್ಕರಾಯನ ಶಾಸನ[೪೨] ವಿಶಿಷ್ಟವಾದದ್ದು, ಭವ್ಯರೆಂದು ಉಲ್ಲೇಖಿತರಾಗಿರುವ ಜೈನರು, ಭಕ್ತರೆಂದು ಕರೆಯಲಾಗಿರುವ ಶ್ರೀವೈಷ್ಣವರ ನಡುವೆ ಧಾರ್ಮಿಕ ಘರ್ಷಣೆಯಾಗಿ ಕೆಲವು ಪಟ್ಟಣಗಳಲ್ಲಿ ಜೈನ ಬಸದಿಗಳು ಜೈನರ ಮೇಲೆ ಹಲ್ಲೆಯಾಗಿ ಜೈನರು ಶ್ರೀವೈಷ್ಣವರ ಅನ್ಯಾಯಗಳ ಬಗ್ಗೆ ರಾಜನಲ್ಲಿ ದೂರಿತ್ತಾಗ, ರಾಜನು ಎರಡು ಧರ್ಮೀಯರನ್ನು ಕರೆಯಿಸಿ ಒಂದುಗೂಡಿಸಿದಾಗ, ಕೋವಿಲ್ ತಿರುಮಲೆ, ಪೆರುಮಾಳ್ ಕೋವಿಲ್ ತಿರುನಾರಾಯಣಪುರ ಮುಖ್ಯವಾದ ನಕಳಾಚಾರ್ಯರು ಸಾತ್ತ್ವಿಕರು ವೈಷ್ಣವ ದೇವಾಲಯದಲ್ಲಿರುವ ತಿರುಪಣಿಯವರು(ದೇವಸ್ಥಾನದ ಸೇವೆ ಮಾಡುವವರು) ತಿರುವಡಿಯವರು (ದೇವರ ಶ್ರೀಪಾದವನ್ನು ನಿರ್ವಹಿಸುವರು) ಮೋಷ್ಟಿತರು(ಮುಷ್ಟಿ ಧಾನ್ಯವನ್ನು ದಾನವಾಗಿ) ಪಡೆದು ಅದರಿಂದ ಜೀವಿಸುವವರು, ತಣ್ಣೀರವರು(ದೇವರ ಸೇವೆಗೆ ಮಡಿಯಿಂದ ನೀರು ತರುವವರು) ಸಾವಂತ ಬೋವಕ್ಕಳು (ಪಲ್ಲಕ್ಕಿ ಹೊರುವವರು) ತಿರುತುಲ ಆದಿ ಜಾಂಬುಲದವರು (ಅಸ್ಪೃಶ್ಯರು) ನಲವತ್ತೆಂಟು ಜನಗಳು ಸೇರಿದರೆಂದು ಹೇಳುವಾಗ ಎಲ್ಲಿಯೂ ಜೈನ ಬಸದಿಗಳ ಪರಿವಾರದವರನ್ನು ಉಲ್ಲೇಖಿಸುವುದೇ ಇಲ್ಲ. ಇಲ್ಲಿ ಶ್ರೀ ವೈಷ್ಣವ ದೇವಾಲಯಗಳ ಸಿಬ್ಬಂದಿಯು ವಿಜೃಂಭಿಸಿರುವುದನ್ನು ಕಾಣಬಹುದು. ನಂತರ ಶಾಸನದ ಕೊನೆಯಲ್ಲಿ, ಕಳ್ಳೆಹದೆ ಹರ್ಪ್ಪಸೆಟ್ಟಿಯ ಸುಪುತ್ರ ಬುಸುವಿ ಶೆಟ್ಟಿಯು ದೊರೆ ಬುಕ್ಕರಾಯನಿಗೆ ಮನವಿ ಮಾಡಿಕೊಂಡು ತಿರುಮಲೆ ತಾತಯ್ಯನವರನ್ನು ಬೆಳಗೊಳಕ್ಕೆ 'ವಿಜಯಂಗೈಸಿ ಕರೆತಂದು' ಬಸದಿಯ ಜೀರ್ಣೋದ್ಧಾರ ಮಾಡಿಸಿದರು. ಉಭಯ ಸಮಯದವರೂ ಸೇರಿ ಬಸುವಿ ಸೆಟ್ಟಿಯವರಿಗೆ ನಾಯ್ಕ ಪಟ್ಟವ ಕಟ್ಟಿದರು.

ಕ್ರಿ.ಶ.೧೫೪೪ರ ಅಂಜನಗಿರಿ ಶಾಸನದಲ್ಲಿ[೪೩] ನಂಜರಾಯಪಟ್ಟಣಕ್ಕೆ ಸಲ್ಲುವ ಬೆಮ್ಮತ್ತಿ ಬೂತನಹಳ್ಳಿ ಮಲಗನಕೆರೆಯ ಸಮಸ್ತಹಲರು, ಹನಸೋಗೆಯ ಆದಿಶ್ರೀ ಅವ್ವಗಲು, ಭುಜಬಲಿ ಶ್ರೀ ಅವ್ವಗಳು, ಶಾಂತಿತೀರ್ಥೇಶ್ವರ, ಅನಂತನಾಥಸ್ವಾಮಿ ಬಸದಿಯ ಗರ್ಭಗೃಹದ ಕಲುಗೆಲಸಕ್ಕೆ ತಮ್ಮ ಗುರುಚಾರು ಕೀರ್ತಿ ಪಂಡಿತದೇವನಿಗೆ ಹೊನ್ನು ೩೦ ಗದ್ಯಾಣ ದಾನ ಮಾಡಿದ ಸಂಗತಿ ಇದೆ. ಇಲ್ಲಿ ಆಳುತ್ತಿದ್ದ ದೊರೆಯ ಹೆಸರಿಲ್ಲದಿದ್ದರೂ ನಂಜರಾಯಪಟ್ಟಣ ಪ್ರದೇಶದ ಜನತೆಯ ಪ್ರಸ್ತಾಪವಿರಲಾಗಿ, ಆ ಕಾಲದ ದೊರೆ ಶ್ರೀಮನ್ಮಹಾ ಮಂಡಲೇಶ್ವರ ಚಂಗಾಳ್ವ ಶ್ರೀಕಂಠ ಅರಸುವೇ ಆಗುತ್ತಾನೆ. ಅಂಜನಗಿರಿ ಶಾಂತೀಶ್ವರ ಬಸದಿಗೆ ಬಿದಿರೆಯ ಸೀತಾಳಮಳಿಗೆಯ ಸಮಸ್ತ ಹಲರು ಕಂನಡಿಗ ಹಲರು, ನಾನಾದೇಸಿಯ ಹಲರು ಮಾಡಿದ

ಧರ್ಮ; ಹಾರುವ ಸೆಟ್ಟಿಯ ವಿಜೆಯಣ ಶೆಟ್ಟಿ, ಕಂಣನೂರ ದೇವರರಮಶೆಟ್ಟಿ, ಅಸುಂಡಿ ಅರಸ ಮುಂತಾದವರ ಉಲ್ಲೇಖ ಬರುವುದರಿಂದ ವಿವಿಧ ನೆಲೆಯ ಜಿನಧರ್ಮಿಗಳು ಇಲ್ಲಿ ದಾನಿಗಳಾಗಿದ್ದರು. ಕೊಡಗಿನ ಈ ಬಸದಿ ಪ್ರಸಿದ್ಧವಾಗಿತ್ತು.

ಆನೆಗೊಂದಿಯಲ್ಲಿ ಗವಿರಂಗನಾಥ ದೇವಾಲಯ ಬಳಿಯಲ್ಲಿರುವ ಶಾಸನವು ಬಾಚಣಯನ ನಿಷಿಧಿಯನ್ನು ತಿಳಿಸುವುದು. ಶ್ರೀ ಧರ್ಮಭೂಷಣ ಭಟ್ಟಾರಕರ ಪ್ರಿಯದ ಗುಡ್ಡುಗಳು ಬೂಚಂಣ್ಣನ ನಿಸಿಧಿಗೆ ಮಂಗಳ ಮಹಾ ಎಂದಿರುವುದು.[೪೪] ಈ ಶಾಸನದ ಕಾಲ ೧೩೭೧, ಬಟ್ಟರ ಬಾಚಣಯನು ತುಂಗಭದ್ರಾತೀರದ ವಿರೂಪಾಕ್ಷದಲ್ಲಿ ಪರಮ ಪದವಿಯ ನೈದನೆಂದು ಅರುವನಹಳ್ಳಿಯ ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಪುಷ್ಠೀಕರಿಸುತ್ತದೆ. ಗವಿರಂಗನಾಥ ದೇವಾಲಯದ ಬಳಿಯಲ್ಲಿ ಇರುವ ನಿಸಿದಿಗಳಲ್ಲಿರುವ ಒಂದು ನಿಸಿದಿ ಶಾಸನ ಕ್ರಿ.ಶ.೧೩೬೬ರ ಕಾಲದ್ದಾಗಿದ್ದು, ಹಾನಿಯಾದ ಲಕ್ಕಿಸೆಟ್ಟಿಯರ ಮಕ್ಕಳು ಹಾನಿಯಾದ ಗೋಪಿಸೆಟ್ಟಿಯರ ನಿಸಿದಿಯಾಗಿದೆ.

ಗವಿರಂಗನಾಥ ದೇವಾಲಯದ ಭಾಗವು ಜೈನ ಮುನಿಗಳ ಕೇಂದ್ರವಾಗಿರಬಹುದು. ಕಾರಣ ಹನ್ನೆರಡು ಜೈನ ಶಾಸನಗಳು ಗುಹೆಗಳು ಈ ಸ್ಥಳದಲ್ಲಿರುವುದು ಈ ಭಾಗದಲ್ಲಿ ಜೈನ ಕೇಂದ್ರವಿದ್ದ ಕುರುವುಗಳಾಗಿವೆ.[೪೫] ಮೂಲ ಸಂಘದ ಬಲಾತ್ಕಾರ ಗಣಕ್ಕೆ ಸೇರಿದ ಬೊಮ್ಮಿಸೆಟ್ಟಿ ಮಗ ಸಾತಿಸೆಟ್ಟಿಯೆಂಬುವವನು ಪುಷ್ಪದಂತ ತೀರ್ಥಂಕರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದನೆಂದೂ ಹೇಳಿದೆ.[೪೬] ಕ್ರಿ.ಶ.೧೩ನೆಯ ಶತಮಾನಕ್ಕೆ ಸೇರಬಹುದಾದ ಯಲಬುರ್ಗದ ಶಾಸನದ ಪ್ರಕಾರ ಯುದ್ಧಗಳ ಸಮಯದಲ್ಲಿ ಮುಮ್ಮಡಿಸಿಂಗನು ಬಸದಿಗಳನ್ನು ಹಾಳು ಮಾಡಿರಬಹುದು. ಈ ಬಸದಿಯ ಪಾರ್ಶ್ವನಾಥನ ಬಿಂಬವನ್ನು ಮಿಂಡುಗುದ್ದಲಿಯ ಕೇತಿಸೆಟ್ಟಿ ಮಾಡಿಸಿದ. ವೈಶ್ಯ ಜೇಮಿಸೆಟ್ಟಿಯ ಮಗಳು ರಾಜವ್ವೆ ಕುಂಥುನಾಥ ತೀರ್ಥಂಕರನನ್ನು ಪ್ರತಿಷ್ಠೆ ಮಾಡಿಸಿದುದನ್ನು ಉಲ್ಲೇಖಿಸುತ್ತದೆ.[೪೭]

ಮೂಡಬಿದಿರೆಯ ತ್ರಿಭುವನ ಚೂಡಾಮಣಿ ಚೈತ್ಯಾಲಯದ ಶಾಸನವು ಕ್ರಿ.ಶ.೧೪೩೦ ವಿಜಯನಗರದ ಅರಸು ದೇವರಾಜ ಒಡೆಯರು ಚಾರುಕೀರ್ತಿ ಪಂಡಿತಯತಿಗಳಿಗೆ ಚೈತ್ಯಾಲಯ ನಿರ್ಮಿಸಲೆಂದೇ ನೀಡಿದ ಕ್ಷೇತ್ರದಲ್ಲಿ ವೇಣುಪುರದ ಎಂಟು ಪ್ರಜೆ ಸೆಟ್ಟಿಕಾರರು, ನಾಲ್ವರು ಎಳಮೆಗಳು, ಶಾಲಕಿನಾಡ ಅರುವರು ಬಲ್ಲಾಳರ ಸಹಾಯದಿಂದ ಮಹಾ

ಚೈತ್ಯಾಲಯವನ್ನು ನಿರ್ಮಿಸುತ್ತಾರೆ. ಈ ಚೈತ್ಯಕ್ಕೆ ಆ ಊರಿನ ಸಮಸ್ತ ಹಲರು ಸೇರಿ ಕಂಚಿನ ಚಂದ್ರಪ್ರಭಾನಾಥನ ಪ್ರತಿಮೆಯನ್ನು ಮಾಡಿಸಿಕೊಟ್ಟರೆಂದು ಶಾಸನ ತಿಳಿಸುತ್ತದೆ.[೪೮] ಇದರಂತೆ, ದೇಶಿಗಣದ ಪನಸೋಗೆ ಬಳಿಯ ಲಲಿತಕೀರ್ತಿ ಪಂಡಿತರ ಉಪದೇಶದಂತೆ ಸೋಮ ಕುಲದ ವೀರ ಪಾಂಡ್ಯರಸನು ಕಾರ್ಕಳದ ಪ್ರಸಿದ್ಧವಾದ ಬಾಹುಬಲಿಯ ಮೂರ್ತಿಯನ್ನು ಮಾಡಿಸಿದ್ದನ್ನು ಅಲ್ಲಿಯ ಶಾಸನ ದಾಖಲಿಸಿದೆ.[೪೯]

ಸುಮಾರು ೧೫-೧೬ನೇ ಶತಮಾನದ ಹೊತ್ತಿಗೆ ಈ ಪ್ರದೇಶದಲ್ಲಿ ಜೈನ ಮತವು ಜನಪ್ರಿಯ ಮತವಾಗಿ ಪರಿಣಮಿಸಿತ್ತು. ಬಸದಿಗಳು ಕೇವಲ ಪೂಜಾಗೃಹಗಳಾಗಿರದೇ ಸಾಮಾಜಿಕ ಸಂಸ್ಥೆಯಾಗಿ ಮಾರ್ಪಟ್ಟಿತ್ತೆಂದು ಶಾಸನಗಳು ಸಾರಿ ಹೇಳುತ್ತಿವೆ. ಕ್ರಿ.ಶ.೧೪೫೭ರ ಹಿರಿಯಂಗಡಿಯ ನೇಮಿನಾಥ ಬಸದಿ ಶಾಸನವು ಆ ಬಸದಿಯ ವೈಭವವನ್ನು ತೆರೆದಿಟ್ಟಿದೆ. ಅಭಿನವ ಪಾಂಡ್ಯದೇವ ಒಡೆಯರ ಕಾರುಣ್ಯದಿಂದ ಸಂಜಿಸೆಟ್ಟಿಯು ಪಾಂಡ್ಯದೇವರ ಹೆಸರಿನಲ್ಲಿ ಕಾರ್ತಿಕ ಶುದ್ಧ ಪಾಡ್ಯದಂದು ದೇವರಿಗೆ ಪೂಜೆ, ಅಭಿಷೇಕ ನಡೆಸಲೆಂದು ದಾನ ಬಿಟ್ಟಿದ್ದಾನೆ. ಈ ದಾನ ಶಾಸನದಲ್ಲಿ ಒಟ್ಟು ದೇವಸ್ವವಾಗಿ ೨೪ ಖಂಡುಗ ಭೂಮಿಯನ್ನು ಬಿಟ್ಟಿದ್ದು ಅದರ ಬಳಕೆಯನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

ಅಭಿಷೇಕ, ಪೂಜೆಗಾಗಿ ಖಂಡುಗ-೪

ನಿತ್ಯ ಹಾಲಧಾರೆಗೆ ಖಂಡಗ-೧೨

ಪಾರ್ಶ್ವದೇವರ ಹೂದೂಟಕ್ಕೆ, ತೋಟಿಗನಿಗೆ-೧ಗದ್ದೆ

ಗುಮ್ಮಟ ದೇವರ ಅಮೃತ ಪಡಿಗೆ ಊರಿನ ಸಿದ್ಧಾಯವನ್ನು ಬಿಟ್ಟರೆಂದು ತಿಳಿಯುತ್ತದೆ. ಇದರಿಂದ ಆ ಬಸ್ತಿಯ ಪರಿಸರದಲ್ಲಿದ್ದ ಜಿನಮಂದಿಗಳಲ್ಲೆಲ್ಲ ಪೂಜೆ ನಡೆಯುತ್ತಿತ್ತೆಂದು ತಿಳಿಯಬಹುದು.

ಕ್ರಿ.ಶ.೧೪೭೭ರಲ್ಲಿ ಮೂಡಬಿದರೆಯ ಎಂಟು ಪ್ರಜೆ ಸೆಟ್ಟಿಕಾರರು ನಾಲ್ವರು ಎಳಮೆಗಳು, ಸಮಸ್ತ ಹಲರು ಸೇರಿ ಚಾರುಕೀರ್ತಿ ಪಂಡಿತದೇವರ ಆದೇಶದಂತೆ ತ್ರಿಭುವನ ಚೂಡಾಮಣಿ ಚೈತ್ಯಾಲಯದ ನಡುವಣ ನೆಲೆಯ ಎರಡು ಗಂಧಕುಟಿಗಳನ್ನು ಮಾಡಿಸಿದರು ಅಲ್ಲಿಯ ದೇವರಿಗೂ ನಿತ್ಯ ನೈಮಿತ್ತಿಕ ಪೂಜೆಗಳೂ ನಡೆಯಲೆಂದು ಎರಡು ಗದ್ದೆಯನ್ನು, ೪೦೦ ಸಣ್ಣ ಪ್ರತಾಪಗಳನ್ನು ಚಿಟ್ಟವಾಡಿಯ ಕೇಚಿಯದೇವರು ಬಿಟ್ಟರೆಂದು ತಿಳಿಯುತ್ತದೆ.[೫೦] ಮೂಡುಬಿದಿರೆಯ

ಕ್ರಿ.ಶ.೧೩೪೯ರ ಶಾಸನವೊಂದು ವೀರ ಹರಿಹರರಾಯನ ಅಧಿಕಾರಿಯಾಗಿದ್ದ ಮಂಜಣ್ಣನು, ವುದಿಯರ ನೆಲೆ ತಂತ್ರಿ ಕೇಶವಸೆಟ್ಟಿಯ ಮಗ ಮೈಂದನನು ಮೂರು ಗದ್ದೆಗಳನ್ನು ಬ್ರಹ್ಮದಾಯವಾಗಿ, ಕರೆ, ಮರಫಲಸಹಿತ ಬಿಡುತ್ತಾರೆ. ಇದನ್ನು ನಾಲ್ವರು ಬಲ್ಲಾಳಗಳ ಸಂಮತದಿಂದ ಚಂಡೋಗ್ರ ಪಾರ್ಶ್ವದೇವರಿಗೆ ದೇವಸ್ವವಾಗಿಸುತ್ತಾರೆ. ಇದರ ಅರ್ಚನ ವೃತ್ತಿಯಿಂದ ದೇವರಿಗೆ ರಂಗಭೋಗ ನಡೆಸಲು ತಿಳಿಸಿದ್ದು, ಚಾತುರ್ಮಾಸದ ೪ ತಿಂಗಳಿಗೆ ಕರ್ಣಪಾಳಿಕೆ ೨ಕ್ಕೆ ತೆಂಗಿನ ಎಣ್ಣೆ ಹಾಡ ೨; ರೆಂಕ ಮೆಲಂಟರಾದ ಮುದಿಯರಿಗೆ, ಕಾಪಾಳಿಂಗೆ ಪ್ರತಿ ವರುಷ ೧ಕ್ಕೆ ಕಂದಾಯ ೨ರಂತೆ ಗದ್ಯಾಣಗಳನ್ನು ಬಿಟ್ಟರೆಂದು ಶಾಸನ ತಿಳಿಸಿದೆ.[೫೧]

ಗುರುಬಸದಿಯ ಗರ್ಭಗೃಹದ ಎದುರಿನ ಗದ್ದಿಗೆ ಮಂಟಪವನ್ನು ಕ್ರಿ.ಶ.೧೫೩೮ರಲ್ಲಿ ಕಾಜವ ಚೋಳ ಸೆಟ್ಟಿ ಎಂಬಾತ ಮಾಡಿಸಿದ[೫೨] ಮೂಡುಬಿದಿರೆಯಲ್ಲಿ ಕಂಡುಬರುವ ಬಹುಸಂಖ್ಯೆಯ ಶಾಸನಗಳಲ್ಲಿ ಗುರುಬಸದಿಗೆ ನೀಡಲಾದ ದಾನಗಳ ಉಲ್ಲೇಖವಿರುವುದನ್ನು ಕಂಡಾಗ ಈ ಬಸದಿಯ ಪ್ರಾಮುಖ್ಯ ಮತ್ತು ಜನಪ್ರಿಯತೆ ಸ್ಪಷ್ಟವಾಗುತ್ತದೆ. ತುಳುನಾಡಿನ ಕೆಲವು ಜೈನ ಶಾಸನಗಳಲ್ಲಿ ಸೆಟ್ಟಿಯವರು ಬಸದಿಗಳಿಗೆ ಸಂಬಂಧಪಟ್ಟಂತೆ ಕೈಗೊಂಡ ಕಲ್ಯಾಣಕರ ಕಾರ್ಯಗಳನ್ನು ಇಲ್ಲಿ ಉಲ್ಲೇಖಿಸುವುದು ಸಮಂಜವೆನಿಸುತ್ತದೆ. ವಿಜಯನಗರದ ಶಾಸನಗಳಲ್ಲಿರುವ ಸೆಟ್ಟಿಗಳ ಉದಾರತೆಯಂತೆ ತುಳುನಾಡಿನ ಜೈನ ಶಾಸನಗಳಲ್ಲೂ ಉಲ್ಲೇಖಗಳಿವೆ. ಶಾಸನವು ನೀಡುವ ಮಾಹಿತಿಯಂತೆ ಕ್ರಿ.ಶ.೧೪೦೧ರಲ್ಲಿ ಬೆಟ್ಟಕೇರಿಯ ಕೋಟಿಸೆಟ್ಟಿ ಎಂಬಾತ ಕೋಟಿಸೆಟ್ಟಿ ಬಸದಿಯನ್ನು ನಿರ್ಮಿಸಿರುವನು.[೫೩]

ದೇರಮ್ಮ ಸೆಟ್ಟಿ ಬಸದಿಯು ಬಡಶ್ರಾವಕನೊಬ್ಬನಿಂದ ನಿರ್ಮಿಸಲ್ಪಟ್ಟಿತೆಂಬ ಐತಿಹ್ಯವಿದ್ದರೂ ಅದರ ಭವ್ಯತೆಯನ್ನು ಗಮನಿಸಿದಾಗ ಹಾಗೆನಿಸುವುದಿಲ್ಲ. ಪಡುಬಸದಿಯ ಜೀರ್ಣೋದ್ಧಾರದ ವಿವರಗಳನ್ನೊಳಗೊಂಡ ಕ್ರಿ.ಶ.೧೬೦೫ರ ಶಾಸನದಲ್ಲಿ ಮೂಲತಃ ಕಾಜವ ದೇರಮ್ಮ ಸೆಟ್ಟಿ ಎಂಬಾತನ ಕುಟುಂಬದವರು ಪಡುಬಸದಿಯನ್ನು ಕಟ್ಟಿಸಿದವರು ಎಂಬ ಉಲ್ಲೇಖವಿದೆ.[೫೪]

ಈ ರೀತಿಯಾಗಿ ಧಾರ್ಮಿಕ ಕ್ಷೇತ್ರದಲ್ಲಿ ಜೈನರ ಕೊಡುಗೆ ಅಗಾಧವಾಗಿದೆ. ಕೆಲವೊಂದು ಸಲ ಸಂಕಷ್ಟದಲ್ಲಿ ಸಿಲುಕಿದ್ದು ಉಂಟು. ಮಧ್ಯಕಾಲೀನ ಕರ್ನಾಟಕದಲ್ಲಿ ಜೈನ ಧರ್ಮೀಯರ ಬಹುಸಂಖ್ಯೆಯ ಪ್ರದೇಶವಾದ ಕರಾವಳಿ ಕರ್ನಾಟಕದಲ್ಲೂ ಇವರಿಗೆ ಕಷ್ಟ ತಪ್ಪಿರಲಿಲ್ಲ. ಇದಕ್ಕೆ

ಪ್ರತ್ಯಕ್ಷ ಸಾಕ್ಷಿಯೆಂಬಂತೆ ಮೂಡಬಿದರೆಯ ಶಾಸನವೊಂದು ಜೈನರಿಗೆ ಒದಗಿದ ಕಷ್ಟವನ್ನು ಮತ್ತು ಅದು ನಿವಾರಣೆಯಾದ ಬಗೆಯನ್ನು ತಿಳಿಸುತ್ತಿದೆ.

ಕೃಷ್ಣದೇವರಾಯನ ಅವಧಿಯಲ್ಲಿ ಮಂಗಳೂರು ಮತ್ತು ಬಾರಕೂರು ನಾಡನ್ನು ರತ್ನಪ್ಪವೊಡೆಯರು ಆಳುತ್ತಿರುತ್ತಾನೆ. ಇವರ ಅವಧಿಯಲ್ಲಿ ಅಂಣಸೇನಬೋವ ಮತ್ತು ಸಾವಿರದವರು ಕೂಡಿಕೊಂಡು ಮೂಡಬಿದರೆಯ ಜೈನ ಮಠಾಧೀಶರಾದ ಅಭಿನವ ಚಾರುಕೀರ್ತಿಪಂಡಿತದೇವರ ಸಮ್ಮುಖದಲ್ಲಿ ಸೆಟ್ಟಿಕುಲದವರಿಗೆ, ಜೈನ ಮುಖಂಡರಿಗೆ ಮತ್ತು ಜೈನ ವ್ಯಾಪಾರಿಗಳಿಗೆ ತಪ್ಪೊಪ್ಪಿಗೆಯ ತಾಮ್ರಶಾಸನವನ್ನು ಬರೆದುಕೊಡುತ್ತಾರೆ. ಅವರು ಮಾಡಿದ್ದ ತಪ್ಪೇನೆಂದರೆ ಅಂಣಸೇನಬೋವನ ಕಡೆಯವರು ದಾಸುಸೆಟ್ಟಿ ಮತ್ತು ಅಡ್ಡಣೆ, ಬಾಲ್ಯಮ್ಮ ಸೆಟ್ಟಿಯ ಮನೆಯ ಸಕಲ ವಸ್ತುಗಳನ್ನು ಜಪ್ತಿ ಮಾಡುತ್ತಾರೆ. ಆ ಮನೆಯ ಬಾಗಿಲುಗಳನ್ನು ಕಲ್ಲುಗಳಿಂದ ಮುಚ್ಚಿಸುತ್ತಾನೆ. ಯಾವ ಕಾರಣಕ್ಕೆ ಹೀಗೆ ಜಪ್ತಿ ಮಾಡಿದರೆಂದು ಶಾಸನದಲ್ಲಿ ತಿಳಿಸುವುದಿಲ್ಲ. ಇದರಿಂದ ಹೆದರಿದ ಜೈನ ಮತದವರು ಬಸದಿಗಳ ಬಾಗಿಲುಗಳನ್ನು ಮುಚ್ಚಿ, ಮನೆಗಳನ್ನು ಮುಚ್ಚಿ, ಊರಿನಿಂದ ವಲಸೆ ಹೋಗುವರು. ಇದರಿಂದ ವ್ಯವಹಾರಕ್ಕೆ ತೊಂದರೆಯಾದಾಗ ಕಂಗಾಲಾದ ಅಂಣಸೇನ ಬೋವನು ಪಶ್ಚಾತ್ತಾಪಪಟ್ಟು ಜಪ್ತಿ ಮಾಡಿದ್ದ ವಸ್ತುಗಳನ್ನು ಹಿಂದಕ್ಕೆ ಕೊಡಿಸಿದ್ದಲ್ಲದೆ ಬಸದಿಗಳ ಬಾಗಿಲುಗಳನ್ನು ತೆಗೆಯಿಸಿ, ಆ ಬಸದಿಗಳ ಪೂಜೆ ಪುನಸ್ಕಾರಕ್ಕೆ ಕಾಣಿಕೆಗಳನ್ನು ಕೊಡುತ್ತಾನೆ.

ಅಲ್ಲದೆ ಇನ್ನು ಮುಂದೆ ನಾವು ನಿಮ್ಮ ಸಮಾಜದವರ ವಿಷಯಕ್ಕೆ ತಲೆಹಾಕುವುದಿಲ್ಲ, ನಿಮ್ಮ ಮನೆಯ ಬಾಗಿಲುಗಳಿಗೆ ಕಲ್ಲುಗಳನ್ನು ಅಡ್ಡ ಇಡುವುದಿಲ್ಲವೆಂದು ಪ್ರಮಾಣ ಮಾಡಿ ಸಂತೈಸುತ್ತಾರೆ. ಶಾಸನದ ಕೊನೆಯಲ್ಲಿ ಸೋಮನಾಥನಿಗೆ ಆಣೆ ಮಾಡಿ ಹೇಳಿರುವುದರಿಂದ, ಮೂಡಬಿದರೆಯ ಶೈವರು ಜೈನ ಧರ್ಮೀಯರಿಗೆ ತೊಂದರೆ ನೀಡಿರಬೇಕೆಂದು ಅನಂತರ ಪಶ್ಚಾತ್ತಾಪ ಪಟ್ಟು ತಪ್ಪನ್ನು ತಿದ್ದಿಕೊಂಡರೆಂದೂ ಈ ಶಾಸನದಿಂದ ತಿಳಿದುಬರುತ್ತದೆ.[೫೫]

ಪೆನುಗೊಂಡೆಯ ವೆಂಕಟಪತಿ ಮತ್ತು ವೆಂಕಟಾದ್ರಿ ನಾಯಕರ ಕಾಲದಲ್ಲಿ ನೇಮಾಂಬ ಸೆಟ್ಟಿಯ ಮಕ್ಕಳೂ ಬೊಂಮಿಸೆಟ್ಟಿಯ ಮೊಮ್ಮಕ್ಕಳಾದ ಬೊಮಣಸೆಟ್ಟಿ, ಪದುಮಣಸೆಟ್ಟಿ, ಚಂದಣಸೆಟ್ಟಿ, ಮಣಿಕಸೆಟ್ಟಿ ಮತ್ತು ಅಂದಣ ಸೆಟ್ಟಿಯರು ತಮ್ಮ ತಾತ ಬೊಮಣಸೆಟ್ಟಿ ಕಟ್ಟಿಸಿದ ಬಸದಿಯನ್ನು ಶಿಲಾಮಯವಾಗಿ ಕಟ್ಟಿಸಿದರು.[೫೬] ಈ ಬಸದಿಯ ನಿರ್ವಹಣೆಗೆ ದಾನ ದತ್ತಿಗಳನ್ನು ಕೊಟ್ಟ ಉಲ್ಲೇಖ ಈ ಶಾಸನದಲ್ಲಿದೆ. ಕ್ರಿ.ಶ.೧೫೫೦ರ ಒಂದು ಶಾಸನವು ಅಂಬು

ಅಣ್ಣ ಶ್ರೇಷಿವಿಯ ಹೆಂಡತಿಯಾದ ದೇವರಸಿಗೆ ಅವಳಿ ಮಕ್ಕಳು ಹುಟ್ಟುವರು. ಅವರಿಗೆ ಪದ್ಮರಸಿ ಹಾಗೂ ದೇವರಸಿ ಎಂದು ಹೆಸರಿಡುವರು. ಈ ಅವಳಿ ಹೆಣ್ಣು ಮಕ್ಕಳು ಹುಟ್ಟಿದಾಗ ಅಂಬು ಅಣ್ಣಶ್ರೇಷ್ಠಿಯು ನೇಮೀಶ್ವರ ಚೈತ್ಯಾಲಯದ ಮುಂದಿರುವ ಕಂಬದ ಮೇಲೆ ಗಂಟೆಯೊಂದನ್ನು ಕಟ್ಟಿಸಿದನು. ಹಾಗೆಯೇ ಅದರ ಮೇಲೆ ಚಿನ್ನದ ಕಳಸವೊಂದನ್ನು ಜೋಡಿಸಿದನು.[೫೭]

ಸದಾಶಿವರಾಯ ಮಹಾರಾಯರ ಕಾಲದ ಈ ಶಾಸನವು ಕ್ರಿ.ಶ.೧೫೪೫ರ ಸೋಮ ವಾರಕ್ಕೆ ಸರಿಹೊಂದುತ್ತದೆ. ಮಹಾಮಂಡಳೇಶ್ವರ ಕೊಟಗಾರ ರಾಮರಾಜವೊಡೆಯರ ಮೊಮ್ಮಕ್ಕಳು, ಅಳಿಯ ಲಿಂಗರಾಜ ದೇವನ ಅಣ್ಣನಾದ ರಾಮರಾಜಯ್ಯನು ತನ್ನ ತಂದೆ ಮಲ್ಲರಾಜ ಒಡೆಯರಿಗೆ ಪುಣ್ಯವಾಗಲಿ ಎಂದು ಕುಜುಗೋಡ ಜಿನದೇವರ ಅಮೃತಪಡಿ ನೈವೇದ್ಯಕ್ಕೆ ಭೂಮಿಯನ್ನು ದಾನವಾಗಿ ಕೊಟ್ಟ, ಈ ದಾನವನ್ನು ಗೌಡ, ಸೇನಬೋವ ಹಾಗೂ ಪಟ್ಟಣಸ್ವಾಮಿಯವರು ಸೇರಿ ಕೊಡಲಾಗಿದೆ, ಅಲ್ಲದೆ ಫಾಲ್ಗುಣ, ಶು.೮ ಸೋಮವಾರಕ್ಕೆ ಸರಿ ಹೊಂದುವ ಕ್ರಿ.ಶ.೪-೨-೧೫೪೬ರ ಸೋಮವಾರದ ಮತ್ತೊಂದು ಶಾಸನದಲ್ಲಿ ಮೂಲಸಂಘ ಬಲಾತ್ಕಾರ ಗಣಕ್ಕೆ ಸೇರಿದ ಸೂರಿಯಪ್ಪಸೆಟ್ಟಿಯ ಮಗ ಗೊಮಿಸೆಟ್ಟಿಯ ಹಾಗೂ ಪದ್ಮರಸಪಂಡಿತರು ಸೇರಿ ದಾನ ಮಾಡಿರುವರು.[೫೮]

ಮೂಡಬಿದರೆಯ ಚೆಂನಕ್ಕ ಬಾಣಂತಿತಿಯರ ಮಗ ಅಂಣಸಾಮಂತ ಹೆಗ್ಗಡೆಯು ಚೈತ್ಯಾಲಯಕ್ಕೆ ದಾನ ನೀಡಿದ.[೫೯] ಇದಲ್ಲದೆ, ಇಂತಹ ವ್ಯಕ್ತಿಯ ಅಳಿಯ ಇಂಥವನು ದಾನ ನೀಡಿದ ಎಂಬುದಾಗಿ ಶಾಸನಗಳಲ್ಲಿ ಉಲ್ಲೇಖ ಸಿಗುತ್ತವೆ. ಉದಾಹರಣೆಗೆ, ಕ್ರಿ.ಶ.೧೪೩೩ರ ಎರಡನೆಯ ದೇವರಾಯನ ಕಾಂತಾವರದ ಶಾಸನ[೬೦] ದಲ್ಲಿ ಸುಳುಕಾಂತುವಿನ ಅಳಿಯ ಪೀಲುಮಠ ದೇವರು ಸೆಟ್ಟಿ ಎಂಬಾತ ಬ್ರಹ್ಮದಾಯದ ಭೂಮಿ ಹೊಂದಿದ್ದ ಎಂದಿದೆ. ಕ್ರಿ.ಶ.೧೪೩೮ರ ಕೆರವಸೆ ಶಾಸನದಲ್ಲಿ[೬೧] ಅಲ್ಲಿನ ಬಸದಿಗೆ ಚೆಂಡಾರಿಕರ ಅಳಿಯ ಕೋಟಿಕೊಂಡೆ ಭೂದಾನ ನೀಡಿದನೆಂದಿದೆ. ಮೂಡುಬಿದುರೆಯ ಜೈನ ಶಾಸನ[೬೨]ವೊಂದರಲ್ಲಿ ಅಲ್ಲಿಯ ತ್ರಿಭುವನತಿಲಕ ಚೈತ್ಯಾಲಯದ ಎರಡನೆಯ ನೆಲೆಯನ್ನು ಹನ್ನೆರಡು ಭಾಗಗಳಾಗಿ ನಿರ್ಮಿಸಿದ ಜಿನ ಭಕ್ತರಲ್ಲಿ ಅನೇಕರ ಹೆಸರುಗಳು ಅವರ ಮಾವಂದಿರ ಹೆಸರಿನೊಂದಿಗೆ ಕಂಡುಬರುತ್ತದೆ.

ಎರಡನೆಯ ದೇವರಾಯನ ಇನ್ನೊಂದು ದಾಖಲೆ[೬೩]ಯಲ್ಲಿ ದಾನದ ಸಾಕ್ಷಿಯಾಗಿ ಸಿಂಗಾಳುವನ ಅಳಿಯ ಅಂಣಪ್ಪಾಳುವ ಕಂಡುಬರುತ್ತಾನೆ. ತ್ರಿಭುವನ ಚೂಡಾಮಣಿ

ಚೈತ್ಯಾಲಯದ ಮುಖಮಂಟಪ ನಿರ್ಮಾಣದಲ್ಲಿ ಭಾಗವಹಿಸಿದವರು ವೈಶ್ಯ ವರ್ಗದವರು.[೬೪] ಇಂತಹ ಇನ್ನೂ ಅನೇಕ ದಾಖಲೆಗಳು ಸಿಗುತ್ತವೆ. ಮೂಡಬಿದುರೆಯ ಚೈತ್ಯಾಲಯಕ್ಕೆ ಒಂದು ಕುಟುಂಬದ ಸಹೋದರ(ಎಡ ಬಿಮ್ಮುಸೆಟ್ಟಿಯ ಅಳಿಯ) ಮತ್ತು ಸಹೋದರಿಯರು ದಾನ ನೀಡಿದರು.[೬೫] ಕಿನ್ನಿಕ ಸಾಮಂತನ ಅಳಿಯ ದುಗ್ಗಣ್ಣ ಸಾಮಂತನು ತನ್ನ ಅಕ್ಕ ಚೆಂನಮದೇವಿಯ ಅನುಮತಿ ಪಡೆದು ಭೂದಾನ ನೀಡಿದ.[೬೬]

ಮೂಡಬಿದುರೆಯಲ್ಲಿ ಸ್ಥಾಪನೆಗೊಂಡ ತ್ರಿಭುವನ ಚೂಡಾಮಣಿ ಚೈತ್ಯಾಲಯದ ನಿರ್ಮಾಣದಲ್ಲಿ ಅಲ್ಲಿನ ಸಮಸ್ತ ಹಲರು(ವರ್ತಕರ ಸಂಘ) ನಿರ್ವಹಿಸಿದ ಪಾತ್ರವನ್ನು ಅಲ್ಲಿನ ದಾಖಲೆ ವರ್ಣಿಸುತ್ತದೆ. ಅವರು ಶ್ರೀ ಚಂದ್ರಪ್ರಭ ತೀರ್ಥಂಕರರ ಕಂಚಿನ ಪ್ರತಿಮೆ ಮಾಡಿಸಿ ಪ್ರತಿಷ್ಠೆ ಮಾಡಿಸಿದರು.[೬೭] ಈ ಬಗೆಯ ಪ್ರಸಂಗಗಳಲ್ಲಿ ದಾನಿಗಳಾಗಿ ವರ್ತಕ ಸಂಘಗಳು ಕಂಡುಬರುತ್ತವೆ. ಶಾಸನವೊಂದರಲ್ಲಿ ಬಿದಿರೆಯ ಹಲರು, ಸೆಟ್ಟಿಕಾರರು ಎಳೆಮೆಗೊಳಗಾದವರಿಂದ ನಿರ್ಮಾಣಗೊಂಡ ಬಸದಿಯ ಗಂಧಕುಟಿಯ ಪೂಜೆ ನಡೆಸುವ ಪೂಜಾರಿಗೆ ಹಲರು ಮನೆಯೊಂದನ್ನು ದಾನ ನೀಡಿದರು.[೬೮] ಇನ್ನು ಕೆಲವು ದಾಖಲೆಗಳಲ್ಲಿ ದಾನ ನೀಡುವವರು ಈ ವರ್ತಕ ಸಂಘಗಳ ಸಮಕ್ಷಮ ಅವರ ಒಪ್ಪಿಗೆ ಪಡೆದು ಸಲ್ಲಿಸುತ್ತಿದ್ದುದು ತಿಳಿದು ಬರುತ್ತದೆ.[೬೯] ಬುಕ್ಕರಾಯನ ಕಾಲದಲ್ಲಿ ಮಾಯಣ ಮತ್ತು ಮೊಕಪ್ಪ ಇವರು ದೇವಮಾಂಬೆ, ಹೊಳ್ಳರಾಜರ ಮಕ್ಕಳು. ಇವರು ವೈಶ್ಯ, ಬಳೆಗಾರ ಕುಟುಂಬದವರು. ಇವರು ಲಕ್ಷ್ಮೀಸೇನ ಭಟ್ಟಾರಕರ ನಿಸಿಧಿಯನ್ನು ನಿಲ್ಲಿಸಿದ್ದಾರೆ. ಲಕ್ಷ್ಮೀಸೇನ ಭಟ್ಟಾರಕರ ಬಗ್ಗೆ ಈ ಮಾಹಿತಿಯಿದೆ.[೭೦]

ವೀರಸೇನ

।

ಜಿನಸೇನ

।

ಗುಣಭದ್ರ

।

ಸುರಸೇನಾ

।

ದೇವೇಂದ್ರಸೇನಾ

।

ಕುಮಾರಸೇನಾ

ಹರಿಸೇನಾ ಪ್ರಭಾಕರಸೇನಾ

ಲಕ್ಷ್ಮೀಸೇನಾ ಮಾದಣಸೇನಾ

ಅಚ್ಯುತರಾಯನ ಕಾಲದಲ್ಲಿ, ಗಂಧದ ತಿಪ್ಪಿಸೆಟ್ಟಿಯು ರಾಜನಿಗೆ ಪುಣ್ಯವಾಗಲೆಂದು ತಿರುಕ್ಕಚ್ಚಿನಂಬಿ ಸಹಿತ ೧೨ ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಅವುಗಳ ಪೂಜೆಗೆ ಚಿನ್ನದ ಕಾಣಿಕೆಯನ್ನು ಕೊಟ್ಟನು.[೨೧] ಈ ಶಾಸನವು ಕ್ರಿ.ಶ.೧೫೩೪ರ ಕಾಲದ್ದಾಗಿದೆ. ಈ ಶಾಸನದಿಂದ ಪ್ರಜೆಗಳು ರಾಜನ ಬಗ್ಗೆ ಇಟ್ಟಿರುವ ಅಭಿಮಾನದ ಬಗ್ಗೆ ಅರ್ಥವಾಗುತ್ತದೆ. ರಾಜನ ಶ್ರೇಯೋಭಿವೃದ್ಧಿಗಾಗಿ ಹಾಕಿಸಿರುವ ಈ ಶಾಸನವು ಅಚ್ಯುತರಾಯನ ಬಗ್ಗೆ ಪ್ರಜೆಗಳಿಗಿರುವ ಪ್ರೀತಿಯ ಸಂಕೇತವಾಗಿದೆ.

ಕ್ರಿ.ಶ.೧೪೫೧ರಲ್ಲಿ ನಿರ್ಮಾಣಗೊಂಡ ಬಸದಿಯ ಮುಖಮಂಟಪವನ್ನು ವೇಣುಪುರ (ಮೂಡಬಿದರೆಗೆ ಶಾಸನಗಳಲ್ಲಿರುವ ಹೆಸರು) ವ್ಯಾಪಾರಿ ಸಮುದಾಯದ ಗೃಹಸ್ಥರು ನಿರ್ಮಿಸಿ ಕೊಟ್ಟ ವಿವರ ಮತ್ತು ಅದರ ನಿರ್ಮಾಣ ಕಾರ್ಯದಲ್ಲಿ ಭಾಗಿಗಳಾದ ವ್ಯಕ್ತಿಗಳ ಹೆಸರಿನಿಂದ ತುಂಬಿದೆ.[೨೨] ಮೂಡಬಿದಿರೆಯ ಹಿರೇ ಬಸದಿಯ ಆವರಣದೊಳಗೆ ನಿಸಿಧಿ ಶಾಸನವೊಂದಿದ್ದು, ಅದರಲ್ಲಿ ಉತ್ತಮ ಸೆಟ್ಟಿಯು ಸಮಾಧಿ ವಿಧಿಯಿಂದ ಮುಡುಪಿ ಸ್ವರ್ಗಸ್ಥನಾದಂತೆ ತಿಳಿಯುತ್ತದೆ[೨೩] ಅಲ್ಲಿಯ ಕೋಟಿಸೆಟ್ಟಿ ಬಸದಿಯ ಶಿಲಾಫಲಕದಲ್ಲಿ ಕೋಟಿಸೆಟ್ಟಿಯೆಂಬುವನು, ಬಸದಿಯ ಬಾಗಿಲುವಾಡ, ಪರಿಸೂತ್ರಗಳನ್ನು ಮಾಡಿಸಿದ ಬಳಿಕ, ಅನಂತಸುಖವನ್ನು ಬಯಸಿ, ಸಲ್ಲೇಖನವನ್ನು ಸ್ವೀಕರಿಸಿದಂತೆ ಹೇಳಲಾಗಿದೆ.[೨೪]

ಮೂಡಬಿದರೆಯಲ್ಲಿ ಹಿಂದೆ ವ್ಯಾಪಾರ ವೃತ್ತಿಯನ್ನು ನಡೆಸುತ್ತಿದ್ದ ಅನೇಕ ಶ್ರಾವಕರು ಸಮಾಧಿ ಮರಣದಿಂಥ ಮಡಿದ ತರುವಾಯ, ಅವರ ಸ್ಮಾರಕವಾಗಿ ನಿರ್ಮಿಸಿರುವ 'ಮುಡಿಂಜ' ಅಥವಾ 'ಮುಡಿಜ' ಹೆಸರಿನ ವಿಶಿಷ್ಟ ರೀತಿಯ ರಚನೆಗಳು ಇಂದಿಗೂ ಕಂಡುಬರುತ್ತಿವೆ.[೨೫] ಮೂಡಬಿದರೆಯ ಮೂರು ಮುಡಿಜಗಳಲ್ಲಿ ಕಾಲದ ಉಲ್ಲೇಖವಿಲ್ಲವಾದರೂ ಅವು ವಿಜಯನಗರ ಕಾಲದವಾಗಿರಬೇಕೆಂದು ಊಹಿಸಬಹುದಾಗಿದೆ. ಇದರಲ್ಲಿ ಮೊದಲನೆಯದು ಬ್ರಹ್ಮಚಾರಿ ಮಡೆದೇವರು ಸೆಟ್ಟಿಯರಿಗೆ ಕಟ್ಟಿಸಿದ ಮುಡಿಂಜವೆಂದು ಉಲ್ಲೇಖಿಸಿದರೆ,

ಎರಡನೆಯದು ಚಾರುಕೀರ್ತಿ ಪಂಡಿತ ಅಯ್ಯಗಳ ಶಿಷ್ಯರಾದ ವರ್ಧಮಾನ ಅಣ್ಣಗಳ ಗುಡ್ಡು(ಶಿಷ್ಯ) ಬಾಗಿಸೆಟ್ಟಿ ಬಳಿಯ ಯಳವೆಯ ಸೆಟ್ಟಿ ಕಾಂತಣಸೆಟ್ಟಿ ಕಟ್ಟಿಸಿದ ಮುಡಿಜ ಎಂದಿದೆ. ಇಲ್ಲಿ ಜೈನ ವ್ಯಾಪಾರಿ ಸಮುದಾಯದಲ್ಲಿ ಪ್ರಚಲಿತವಿದ್ದ 'ಬಳಿ'ಯ ಪ್ರಸ್ತಾಪವಿದೆ. ಮೂರನೆಯದು ಭಾಷೆ ಸಂಸ್ಕೃತವಾಗಿದ್ದು ಲಿಪಿ ಮಾತ್ರ ಕನ್ನಡವಾಗಿದೆ. ದೇಶಿ ಗಣದ ಪ್ರಭೆಂದುಯತಿಯ ಪ್ರಸ್ತಾಪ ಮಾಡುವ ಇದು ಬಹುಶಃ ಅವರಿಗಾಗಿ ಶಿಷ್ಯರು ಕಟ್ಟಿಸಿದ ಮುಡಿಜವಾಗಿರಬೇಕು.

ಶೈವ, ವೈಷ್ಣವ ಮತಗಳು ಪ್ರಬಲವಾಗಿದ್ದ ತುಳುನಾಡಿನಲ್ಲಿ ಜೈನಮತಕ್ಕೆ ಲಭಿಸಿದ ಪ್ರೋತ್ಸಾಹವು ಅಸಂಖ್ಯಾತ ಬಸದಿಗಳು, ಜೈನ ಮಠಗಳ ರೂಪದಲ್ಲಿವೆ. ಆದರೆ ಈ ಧರ್ಮವು ಸೂಚಿಸಿದ ಸಲ್ಲೇಖನ ವ್ರತದ ಮೂಲಕ ಸಮಾಧಿ ಮರಣವು ಅಷ್ಟು ತೀವ್ರತರದಲ್ಲಿ ಜನರನ್ನು ಪ್ರಭಾವಿಸಿದಂತೆ ತೋರುವುದಿಲ್ಲ. ಕರ್ನಾಟಕದ ಶ್ರವಣಬೆಳಗೊಳ ಮೊದಲಾದೆಡೆ ದೊರೆತಷ್ಟು ಪ್ರಮಾಣದಲ್ಲಿ ನಿಸಿಧಿ ಕಲ್ಲುಗಳು ತುಳುನಾಡಿನಲ್ಲಿ ದೊರೆತಿಲ್ಲ. ಪ್ರಾಯಶಃ ಇದಕ್ಕೆ ಕಾರಣ ಇಲ್ಲಿನ ಸ್ಥಳೀಯರು ಮೂಲತಃ ಶೈವರು ಅಥವಾ ವೈಷ್ಣವರು ಇಲ್ಲವೇ ಜೈನ ಮತಕ್ಕೆ ಮತಾಂತರ ಹೊಂದಿದವರಾಗಿದ್ದುದು ಅವರು ಜೈನ ಮತದ ಗುಣಾತ್ಮಕ ಅಂಶಗಳನ್ನು ಬೆಂಬಲಿಸಿ, ಗೌರವಿಸಿ ತಮ್ಮ ಧರ್ಮ ಸಮನ್ವಯ ಗುಣವನ್ನು ಮೆರೆದರು. ಹೀಗಾಗಿ ಇಲ್ಲಿ ದೊರೆಕಿದ ನಿಸಿಧಿ ಶಾಸನಗಳಲ್ಲಿ ಹೆಚ್ಚಿನವು ಸ್ಥಳೀಯರಲ್ಲದ ರಾಜ ಮನೆತನಗಳ ಶ್ರೇಷ್ಠಿ ಸಮುದಾಯದ ಮಂದಿ ಇಲ್ಲಿನವರೇ ಆಗಿ ಹೋದ ವ್ಯಕ್ತಿಗಳಿಗೆ ಸಂಬಂಧಿಸಿವೆ. ಅವರಲ್ಲಿ ಜೈನ ಮತದ ವಿಭಿನ್ನ ಪರಂಪರೆ ಗಳಿಗೆ ಸೇರಿದ ಮುನಿಗಳು, ರಾಜಮನೆತನದ ಮತ್ತು ಶೆಟ್ಟಿ ಸಮುದಾಯದ ಪುರುಷರು ಮತ್ತು ಮಹಿಳೆಯರು ಮುಖ್ಯವಾಗಿರುವವರು.

೪.೧.೧. ಶೈವ ದೇವಾಲಯಗಳು

ಭಾರತೀಯರಿಗೆ ದೇವಸ್ಥಾನಗಳ ಬಗೆಗಿರುವ ನಂಬಿಕೆ, ಭಕ್ತಿ ವಿಶಿಷ್ಟವಾಗಿದೆ. ಯಾವುದೇ ಒಂದು ರಾಜವಂಶ ಹೊಸದಾಗಿ ಸ್ಥಾಪನೆ ಮಾಡಿದಾಗ ಮೊಟ್ಟ ಮೊದಲ ಬಾರಿಗೆ ಅವರು ಕೈಗೊಳ್ಳುವ ಮೊದಲ ಕೆಲಸ ದೇವಾಲಯ ನಿರ್ಮಾಣ ಇಲ್ಲವೇ ಈಗಾಗಲೇ ಅಸ್ತಿತ್ವದಲ್ಲಿದ್ದ ದೇವಾಲಯದ ಮಠಮಾನ್ಯಗಳಿಗೆ ದಾನದತ್ತಿಗಳನ್ನು ಕೊಡುವುದು. ಅದು ಅವರ ಆದ್ಯ ಕರ್ತವ್ಯವೆಂದು ತಿಳಿದುಕೊಂಡಿದ್ದರು. ಸಾಮಾನ್ಯ ಜನರಲ್ಲಿ ತಾವು ಧರ್ಮಾ

ವಲಂಬಿಗಳೆಂಬ ಭಾವನೆ ಮೂಡಿಸಿ ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನಸಾಮಾನ್ಯರ ಬೆಂಬಲ ಪಡೆಯಲು ಮಾಡಿದ ಪ್ರಯತ್ನದ ಫಲವೇ ದೇವಾಲಯಗಳು.

ಪ್ರಾಚೀನ ಕಾಲ ದಿಂದಲೂ ದೇವಾಲಯಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ ಎನಿಸಿವೆ. ಸಾರ್ವಜನಿಕರ ಬದುಕಿನಲ್ಲಿ ಮಹತ್ತರ ಪಾತ್ರವಹಿಸಿದ ದೇವಾಲಯಗಳು ವಿದ್ಯಾಕೇಂದ್ರಗಳಾಗಿ, ಅನ್ನಸತ್ರಗಳಾಗಿ, ಧಾರ್ಮಿಕ ಸಂಸ್ಥೆಗಳಾಗಿ, ಸಂಗೀತ, ನೃತ್ಯ ಕಲೆಗಳ ಬೆಳವಣಿಗೆಗೆ ಆಸರೆ ಯಾಗಿ ಸಾರ್ವಜನಿಕ ಬದುಕಿನೊಂದಿಗೆ ಹಾಸು ಹೊಕ್ಕಾಗಿವೆ. ಬೇರೆ ಬೇರೆ ಧರ್ಮಗಳ ಮತಗಳ ಆಚರಣೆಗೆ ಅನುಗುಣವಾಗಿ ವಿಭಿನ್ನ ಹೆಸರುಗಳಿಂದ ಸೃಷ್ಟಿಯಾಗಿವೆ. ಧರ್ಮದ ಹೆಸರಿನಲ್ಲಿ ಮೂರ್ತಿಯೊಂದನ್ನು ಸ್ಥಾಪಿಸಿ ಅದಕ್ಕೊಂದು ನೆಲೆ ನೀಡಿ, ಸಾರ್ವಜನಿಕರು ಧಾರ್ಮಿಕ ಕಾರ್ಯಗಳಿಗಾಗಿ ಸಮಾವೇಶಗೊಳ್ಳುವ ಸ್ಥಳದಲ್ಲಿ ನಿರ್ಮಿಸಿದ ಕಟ್ಟಡಗಳೇ ದೇವಾಲಯಗಳು. ವಿಜಯನಗರದ ಕಾಲದಲ್ಲಿ ಬೇರೆ ಬೇರೆ ಧರ್ಮಗಳ ದೇವಾಲಯಗಳು ಕಂಡುಬರುತ್ತವೆ.

ದೇವಾಲಯಗಳ ಉಗಮವು ಸಿಂಧೂ ನಾಗರಿಕತೆಯಿಂದ ಆರಂಭಗೊಂಡಿರ ಬೇಕೆಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ದೇವಾಲಯಗಳ ನಿರ್ಮಾಣದ ಕಾರ್ಯಕ್ಕೆ ಮತ್ತು ನಿರ್ವಹಣೆಗೆ ದಾನ-ದತ್ತಿಗಳನ್ನು ನೀಡುವಲ್ಲಿ ಸಮಾಜದ ಎಲ್ಲ ವರ್ಗದ ಜನರು ಪಾಲ್ಗೊಳ್ಳುತ್ತಿದ್ದ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ಸಾಮಾನ್ಯನೊಬ್ಬನು ದೇವಾಲಯವನ್ನು ಕಟ್ಟಿಸುವಷ್ಟು ಆರ್ಥಿಕವಾಗಿ ಸಾಮರ್ಥ್ಯವಿಲ್ಲದಿದ್ದರೂ ತನಗೆ ಬರುವ ಕನಿಷ್ಠ ಆದಾಯದಲ್ಲಿ ಸ್ವಲ್ಪ ಭಾಗವನ್ನು ದಾನಗಳಿಗಾಗಿ ವಿನಿಯೋಗಿಸುತ್ತಿದ್ದ ಅಂಶ ವಿಜಯನಗರದ ಶಾಸನಗಳಲ್ಲಿ ಕಂಡುಬರುತ್ತದೆ. ದೇವಾಲಯದ ನಿರ್ಮಾಣ ಹಾಗೂ ನಿರ್ವಹಣೆಯ ಕಾರ್ಯದಲ್ಲಿ ಶ್ರೀಮಂತ ಬಡವನೆಂಬ ಭೇದಭಾವವಿರಲಿಲ್ಲ. ಇದಕ್ಕೆ ಹಲವಾರು ಉದಾಹರಣೆಗಳು ಸಾಕ್ಷಿಯಾಗಿವೆ.

ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮವೆಂದರೆ ಶೈವಧರ್ಮ. ಈ ವಿಷಯಕ್ಕೆ ಶಾಸನಗಳಲ್ಲಿ ಯಾವ ಆಧಾರಗಳೂ ಇಲ್ಲ ಶೈವಧರ್ಮ ಭಾರತದಲ್ಲಿ ಅಷ್ಟೇ ಅಲ್ಲದೆ ಪೌರಸ್ತ್ಯ ದೇಶಗಳಲ್ಲಿಯೂ ಇತ್ತೆಂದು ತಿಳಿದುಬರುತ್ತದೆ. ಇಂತಹ ಶೈವ ಧರ್ಮದಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತದೆ. ಸಿಂಧೂ ಸಂಸ್ಕೃತಿಯ ಪಶುಪತಿ, ನಂದಿ, ನಾಟ್ಯ ವಿಗ್ರಹ

ಇವೆಲ್ಲವೂ ಶಾಸನಗಳಲ್ಲಿಲ್ಲದಿದ್ದರೂ ಶೈವಶಿಲ್ಪಗಳೆಂದು ಹೇಳಬಹುದು. ಇಲ್ಲಿನ ಶಿವಲಿಂಗ, ಗಡ್ಡದಾರಿಯಾದ ಯೋಗಿಯ ಮೂರ್ತಿಗಳು ಈ ವಿಷಯಕ್ಕೆ ಹೆಚ್ಚು ಪುಷ್ಟಿಯನ್ನು ನೀಡುತ್ತದೆ. ಕರ್ನಾಟಕದ ಅರಸು ಮನೆತನಗಳಾದ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ಮುಂತಾದ ಅರಸು ಮನೆತನಗಳು ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದವು. ದಕ್ಷಿಣದಲ್ಲಿ ಚೋಳ, ಚೇರ, ಪಾಂಡ್ಯ, ಪಲ್ಲವ ದೊರೆಗಳು ಶೈವಧರ್ಮಾವಲಂಬಿಗಳಾಗಿ ಶೈವ ಧರ್ಮಕ್ಕೆ ಭದ್ರ ಬುನಾದಿ ಹಾಕಿದರು. ಚೋಳ ಪಲ್ಲವರಂತೂ ಕಟ್ಟಾ ಶೈವಭಕ್ತರಾಗಿದ್ದರು.

ವೀರಶೈವ ಧರ್ಮವು ಶೈವಧರ್ಮದ ಪ್ರಮುಖವಾದ ಭಾಗವಾಗಿದೆ. ಶಿವಸಂಸ್ಕೃತಿಯ ಬೇರುಗಳಿಂದ ಸತ್ವಪೂರ್ಣ ರಸವನ್ನು ಹೀರಿ ಧಾರ್ಮಿಕ ರಂಗದಲ್ಲಿನ ಜಡತ್ವವನ್ನು ಸಮರ್ಥವಾಗಿ ಹೋಗಲಾಡಿಸಿ ಇಂದಿಗೂ ವೀರಶೈವಧರ್ಮ ಪ್ರಮುಖ ಧರ್ಮವಾಗಿ ಬೆಳೆದಿದೆ. ವಿಜಯ ನಗರದ ಅರಸರು ಹಿಂದೂ ಧರ್ಮದ ಲಕ್ಷಣವಾದ ಪರಮತ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡು ಅನ್ಯ ಮತೀಯರಾದ ಕ್ರೈಸ್ತ, ಇಸ್ಲಾಂ ಧರ್ಮೀಯರಿಗೆ ತಮ್ಮ ಸಾಮ್ರಾಜ್ಯದಲ್ಲಿ ಆಶ್ರಯ ಕೊಟ್ಟು ಸಲುಹಿದರು. ಸೇನೆಯಲ್ಲಿ ಮುಸಲ್ಮಾನರನ್ನು ಸೇರಿಸಿಕೊಂಡಿದ್ದರು. ಸಾಮ್ರಾಜ್ಯದ ವಿವಿದೆಡೆಗಳಲ್ಲೂ ದೇವಸ್ಥಾನಗಳಲ್ಲದೆ ಮಸೀದಿಗಳೂ ಇಗರ್ಜಿಗಳು ಇದ್ದವು. ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶವಿದ್ದ ವಿಜಯನಗರದಲ್ಲಿ ಅರಸರು ಹಿಂದೂ ಸಾಧು-ಸಂತರನ್ನು, ಕ್ರೈಸ್ತ ಪಾದ್ರಿಗಳನ್ನು ಮತ್ತು ಇಸ್ಲಾಂ ಪೀರ್‌ಗಳನ್ನು ಸಮಾನ ಗೌರವ ಗಳಿಂದ ಕಾಣುತ್ತಿದ್ದರು. ಹಂಪೆಯಲ್ಲಿ ಹಿಂದೂ ದೇವಾಲಯವಲ್ಲದೆ, ಜೈನ ಬಸದಿಗಳನ್ನು ಕಾಣಬಹುದು.

ಕಾರ್ಕಳ ಮತ್ತು ವೇಣೂರಿನ ಬಾಹುಬಲಿ ವಿಗ್ರಹಗಳು ಈ ಕಾಲದ ರಚನೆ. ಬೇರೆ ಬೇರೆ ಸಂಪ್ರದಾಯದ ವಿದ್ವಾಂಸರು, ಸಾಧು-ಸಂತರು, ಕವಿಗಳು ವಿಜಯನಗರದಲ್ಲಿದ್ದರು. ವಿಜಯನಗರದ ಶೈವ ಇಲ್ಲವೆ ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದು ಪಂಥ ಭೇದಕ್ಕೆ ಅವಕಾಶವಿರಲಿಲ್ಲ. ಹಲವಾರು ಶಿವ ಮತ್ತು ವೈಷ್ಣವ ದೇವಾಲಯಗಳು ಕಟ್ಟಲ್ಪಟ್ಟವು. ವಿಜಯನಗರವು ಸರ್ವಧರ್ಮ ಸಮನ್ವಯವನ್ನು ಸಾಧಿಸಿತು. ವಿಜಯನಗರದಲ್ಲಿ ಮತೀಯ ಸ್ವಾತಂತ್ರ್ಯವಿದ್ದು ಇದೊಂದು ಜಾತ್ಯಾತೀತ ರಾಜ್ಯ ಎನಿಸಿತ್ತು. ವಿಜಯನಗರದ ಅರಸರು ಶೈವರಾಗಿದ್ದರೂ ವರಾಹವು ಅವರ ರಾಜ್ಯ ಚಿಹ್ನೆಯಾಗಿತ್ತು. ಶಿವ ಮತ್ತು ವಿಷ್ಣುವಿನ ದೇವಾಲಯಗಳನ್ನು ಕಟ್ಟಲಾಯಿತು. ಪ್ರಸ್ತುತ ಈ ಅಧ್ಯಾಯದಲ್ಲಿ ಶೈವ ದೇವಾಲಯಗಳನ್ನು

ಉಲ್ಲೇಖಿಸಬೇಕಾಗಿದೆ. ಶೈವ ದೇವಾಲಯಕ್ಕೆ ಶೆಟ್ಟಿ ಕುಲದವರು ಕೊಟ್ಟ ಕೊಡುಗೆಗಳನ್ನು, ಶೈವ ದೇವಾಲಯಗಳನ್ನು ಸ್ಥಾಪಿಸಿರುವ ಬಗ್ಗೆ ಒಟ್ಟಾರೆ ಹೇಳುವುದಾದರೆ ಶೈವ ದೇವಾಲಯಗಳಿಗೆ ಸೆಟ್ಟಿ ಕುಲದವರ ಕಾಣಿಕೆಗಳನ್ನು ಈ ಅಧ್ಯಾಯದಲ್ಲಿ ಅವಲೋಕಿಸೋಣ.

ವಿಜಯನಗರದ ದೊರೆ ಸದಾಶಿವ ಮಹಾರಾಯನ ಆಳ್ವಿಕೆಯ ಕಾಲದಲ್ಲಿನ ಈ ಶಾಸನದಲ್ಲಿ, ಸಿರಿಯಪನಾಯಕಅಯ್ಯನವರ ಕಾರ್ಯಕರ್ತರಾದ ಗುಂಡಮರಸಯ್ಯನವರು, ದೊರೆಯ ದಳವಾಯಿ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು, ಕೊಟನೂರಿನ ಚೌಡೇಶ್ವರಿ ದೇವಾಲಯದ ನಾಲ್ಕು ಮಂದಿ ಜೇಡ ಒಕ್ಕಲಿಗರಿಗೆ, ಅರಮನೆಗೆ ಕೊಡಬೇಕಾದ ಬಿಟ್ಟಿ(ಬಿ) ರಾಡ, ಮೊದಲಾದ ಸುಂಕಗಳನ್ನು ಸರ್ವಮಾನ್ಯವಾಗಿ ಬಿಡುತ್ತಾರೆಂದು ಇದರಲ್ಲಿ ದಾಖಲಿಸಿದೆ. ಆ ಒಕ್ಕಲುಗಳ ಹೆಸರುಗಳನ್ನು ಶಾಸನದ ಕಲ್ಲಿನ ಹಿಂಭಾಗದಲ್ಲಿ ಉಲ್ಲೇಖಿಸಿದೆ. ಉಲ್ಲೇಖ ಈ ಕೆಳಗಿನಂತಿದೆ.

೨೬ ಚ ಉ

೨೭ ಡೇಶ್ವರಿ ಊ

೨೮ ಳಿಗದ ವೊಕಲು

೨೯ ತಿಪಸೆಟಿ ಚಿಕಯ

೩೦ ನ ಮಗ ತಿಂಮಯನೂ

೩೧ ಚಿಲೂಮತೂರ ದೇವಿ

೩೨ ಸೆಟಿ ಮಗ ಬಸವಪ

೩೩ ಬೆಳಿ ಬರಲ (ಕಿರಿ)ತಿ

೩೪ ಪಸೆಟ್ಟಿ ಮಗ ರಾಮ

೩೫ ಸೆಟಿ.....

೩೬ ಕೊಟನೂರ.....

೩೭ ವೊಳ.....

ಈ ಶಾಸನವನ್ನು ನೋಡಿದಾಗ ಸೆಟ್ಟಿ ಕುಲದ ಒಕ್ಕಲುಗಳು ಪರೋಕ್ಷವಾಗಿಯಾದರೂ ಈ ದೇವಾಲಯದ ನಿರ್ಮಾಣಕ್ಕೆ ಸಹಾಯ ಮಾಡಿರಬೇಕು ಎನ್ನಿಸದೇ ಇರದು.[೭೬] ಈ ಶಾಸನದ ಕಾಲ ಕ್ರಿ.ಶ.೧೫೫೦ ವಿಜಯನಗರದ ದೊರೆ ಅಚ್ಯುತರಾಯನ ಕಾಲದಲ್ಲಿ ರಚಿತವಾಗಿರುವ ಇದರಲ್ಲಿ ಸಂಸ್ಕೃತ ಪದ್ಯಗಳಲ್ಲಿ ವಿಜಯನಗರದ ದೊರೆಗಳಲ್ಲಿ ವಂಶವೃಕ್ಷವನ್ನು ಕೊಟ್ಟ ನಂತರ, ನಂದಿಲಕ್ಕಿ ಸೆಟ್ಟಿ ಮುದ್ದಮಾಂಬೆಯರ ಮಗ ವಿರಪಣ್ಣನ ಬೇಡಿಕೆಯಂತೆ ದೊರೆಯು ಅಚ್ಯುತೇಂದ್ರಪುರ ಎಂಬ ಪ್ರತಿನಾಮದ ಚೆಲಿವಿಂಡ್ಲ ಗ್ರಾಮವನ್ನು ವಿರೂಪಾಕ್ಷನ ಸನ್ನಿಧಿಯಲ್ಲಿ ಲೇಪಾಕ್ಷಿಯ ವೀರಭದ್ರ, ರಘುನಾಥ ಮತ್ತು ಪಾಪವಿನಾಶ ದೇವರ ಸೇವೆಗೆಂದು ದತ್ತಿ ಹಾಕಿ ಕೊಡುತ್ತಾನೆ ಎಂದು ಇದರಲ್ಲಿ ದಾಖಲಿಸಿದೆ.[೭೭]

ಈ ಶಾಸನದ ಪ್ರಕಾರ ನಂದಿಲಕ್ಕಿ ಸೆಟ್ಟಿ ಮುದ್ದಮಾಂಬೆಯರ ಮಗ ವಿರಪಣ್ಣನ ಬೇಡಿಕೆಯಂತೆ ದೊರೆಯು ವಿರುಪಾಕ್ಷನ ಸನ್ನಿಧಿಗೆ ಕೊಟ್ಟಿರುವ ಊರಿನ ದಾನವನ್ನು ನೋಡಿದರೆ, ರಾಜರು ಸಾಮಾನ್ಯ ಜನರ ಮಾತುಗಳಿಗೂ ಗಮನಕೊಟ್ಟು ಕಲ್ಯಾಣಕರ ಕಾರ್ಯಗಳನ್ನು ಮಾಡುತ್ತಿದ್ದರೆಂಬುದಕ್ಕೆ ಈ ಶಾಸನವು ಸಾಕ್ಷಿಯಾಗಿದೆ. ಇದೇ ರೀತಿಯಾಗಿ, ಇನ್ನೊಂದು ಶಾಸನದಲ್ಲಿ ಅಂದರೆ ವಿಜಯನಗರದ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯಲ್ಲಿ ಲೇಪಾಕ್ಷಿಯ ಪಾಪ ವಿನಾಶ, ವೀರೇಶ, ರಂಗನಾಥ ದೇವರಿಗೆ ಸೇವೆಗಾಗಿ ಕಂಚಾಕರಹಳ್ಳಿಯನ್ನು ಕೊಟ್ಟು ತಾಮ್ರ ಶಾಸನವನ್ನು ಹಾಕಿಸಿ ದತ್ತಿಯಾಗಿ ಕೊಟ್ಟರೆಂದು ಅದನ್ನು ನಂದಿಲೆಕ್ಕಿ ಸೆಟ್ಟಿಯ ಮಗ ಪೆನುಗೊಂಡೆಯ ವಿರುಪಣ್ಣನ ಸೇವೆ ಎಂದು ಇದೆ.[೭೮] ಇದನ್ನು ಗಮನಿಸಿದಾಗ ನಂದಿಲೆಕ್ಕಿ ಸೆಟ್ಟಿಯ ಮಗ ವಿರುಪಣ್ಣನ ಉದಾರತೆ, ದೇವರ ಬಗ್ಗೆ ಇರುವ ಅಪಾರವಾದ ಭಕ್ತಿ ಇದರಲ್ಲಿ ಹೊರಹೊಮ್ಮಿದೆ. ವಿರುಪಣ್ಣನ ಭಕ್ತಿಯನ್ನು ತೋರುವ ಈ ಶಾಸನ ನಿಜಕ್ಕೂ ಶ್ಲಾಘನೀಯವಾದುದು. ವಿರುಪಂಣಯ್ಯನ ಆಸ್ತಿಕತೆಗೆ ಸಾಕ್ಷಿಯಾಗಿರುವ ಇನ್ನೊಂದು ಶಾಸನ ವಿಜಯನಗರದ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯ ಕಾಲದ್ದು.

ಈ ಶಾಸನದ ಕಾಲ ಕ್ರಿ.ಶ.೧೫೩೮, ಪೆನುಗೊಂಡೆಯ ವಿರಪಂಣಯ್ಯನು ಕೆಲವು ಮಂದಿ ಬ್ರಾಹ್ಮಣರಿಂದ ದೇವರಾಯಪುರ ಎಂಬ ಪ್ರತಿನಾಮವಿದ್ದ ಚಿಕ್ಕನಂದಿಚೆರುವು ಗ್ರಾಮದ ಚತುರ್ಥಾಂಶವನ್ನು ಕೊಂಡು, ಲೇಪಾಕ್ಷಿಯ ವೀರಭದ್ರದೇವರ ಸೇವೆಗಾಗಿ ದತ್ತಿಕೊಡುತ್ತಾನೆ. ಗ್ರಾಮವನ್ನು ಪ್ರೌಢದೇವರಾಯನು, ದೇವರ ಸೋಮಯಾಜಿಗಳು ಎಂಬುವವರಿಗೆ ಹಿಂದೆಯೇ

ಏಕಭೋಗವಾಗಿ ಕೊಟ್ಟಿದ್ದನ್ನು ಇಲ್ಲಿ ದಾಖಲಿಸಿದೆ.[೭೯] ವಿರಪಂಣಯ್ಯನ ದಾನವನ್ನು ತಿಳಿಸುವಂತ ಈ ಶಾಸನ ಅವನ ಅಪಾರ ಭಕ್ತಿಗೆ ಕನ್ನಡಿ ಹಿಡಿದಂತಿದೆ. ಇದೇ ರೀತಿ ಇನ್ನೊಂದು ಶಾಸನದಲ್ಲಿ, ಪೆನುಗೊಂಡೆಯ ವಿರಪಂಣಯ್ಯನು ದೇವರಾಯಪುರ ಎಂದು ಪ್ರತಿನಾಮವಿರುವ ಸದಾಶಿವಪುರ ಗ್ರಾಮದ ಅರ್ಧಭಾಗವನ್ನು ೧೦೮ ಘಟ್ಟಿ ವರಹಗಳನ್ನು ಕೊಟ್ಟುಕೊಂಡು, ಲೇಪಾಕ್ಷಿಯ ವೀರಭದ್ರ ದೇವರ ಸೇವೆಗೆ ದತ್ತಿಯಾಗಿ ಕೊಡುತ್ತಾನೆ. ಈ ಗ್ರಾಮವನ್ನು ಹಿಂದೆಯೇ ಪ್ರೌಢದೇವ ಮಹಾರಾಯನು, ದೇವರಾಯ ಸೋಮಯಾಜಿ ಎಂಬುವವರಿಗೆ ಕೊಡುಗೆ ನೀಡಿರುತ್ತಾನೆ.[೮೦] ಇದೇ ರೀತಿ ಬುಕ್ಕರಾಯನ ಮಗ ವೀರ ಹರಿಹರರಾಯನ ಆಳ್ವಿಕೆಯಲ್ಲಿ. ಪಂಪಾಕ್ಷೇತ್ರದ ನರಸಿಂಹದೇವರ ಪಶ್ಚಿಮಕ್ಕೆ ಕ್ಷೇತ್ರಪಾಲನ ಮತ್ತು ಸಂನಂಜೆನಾಥನ ಸಿವಾಲಯವನ್ನು ಭಯಿರಿಸೆಟ್ಟಿಯ ಮಗ ಸುಂಕದ ಹಿರಿಯತಂಮ ಮತ್ತು ಚಿಕ್ಕ ತಮ್ಮ ಮಾಡಿಸಿದರೆಂದಿದೆ. ಈ ಶಾಸನದ ಕಾಲ ಕ್ರಿ.ಶ.೧೩೮೧[೮೧] ಇನ್ನೊಂದು ಶಾಸನದಲ್ಲಿ ಚಿಮ್ಮುರಿಸೆಟಿಯ ಮಗ ಮಾರಪಸೆಟಿ ೧೦೦ ಪ್ರತಾಪ ಗದ್ಯಾಣವನ್ನು ನೀಡಿ ವ್ರಿತ್ತಿಯನ್ನು ಕೊಂಡು ಬಸವರಾಜ ದೇವರಿಗೆ ದಾನ ಮಾಡಿರುವ ಉಲ್ಲೇಖವಿದೆ.[೮೨]

ಹಂಪಿಯ ಆರಂಭದ ಶಾಸನಗಳು ವಿರೂಪಾಕ್ಷನಿಗೆ ದಾನ ನೀಡಿದ ಉಲ್ಲೇಖಗಳನ್ನು ಮಾಡುತ್ತವೆ. ಇದರ ಜೊತೆಗೆ ಪಂಪಾದೇವಿ, ಭೈರವ, ಬ್ರಹೇಶ್ವರ ಮುಂತಾದ ದೇವರುಗಳಿಗೂ ದಾನ ನೀಡಿದ ಉಲ್ಲೇಖಗಳು ದೊರೆಯುತ್ತವೆ. ಹಂಪಿಯಲ್ಲಿ ಅನೇಕ ಶಿವ ಬ್ರಾಹ್ಮಣರಿದ್ದ ಉಲ್ಲೇಖಗಳಿದ್ದು ಬ್ರಹ್ಮಪುರಿಯಾಗಿದ್ದ ಉಲ್ಲೇಖವಿದೆ. ಹೀಗಾಗಿ ಆರಂಭದಿಂದಲೂ ಶಿವಪಾರಮ್ಯವಿದ್ದುದು ಸ್ಪಷ್ಟವಾಗಿ ತಿಳಿಯುತ್ತದೆ. ವಿರೂಪಾಕ್ಷ ದೇವಾಲಯದ ಸುತ್ತಮುತ್ತ ನಿರ್ಮಿಸಿರುವ ನಿರ್ಮಿತಿಗಳೆಲ್ಲಾ ಶೈವಧರ್ಮದವೇ ಆಗಿವೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಹಂಪೆಯ ಪರಿವರ್ತಿತವಾದ ಮೇಲೆ ಈ ಪ್ರದೇಶದಲ್ಲಿ ಮತ್ತೆ ದೇವಾಲಯ ರಚನೆಗಳು ಆರಂಭವಾಗುತ್ತವೆ. ವಿಜಯನಗರದ ಸಂಗಮ ಅರಸರು ಯಾದವ ವಂಶದವರಾದರೂ ವಿರೂಪಾಕ್ಷ ದೇವಾಲಯಕ್ಕೆ ಅನೇಕ ಸವಲತ್ತುಗಳನ್ನು ಕಲ್ಪಿಸುತ್ತಾರೆ. ದೇವಾಲಯದ ವಿಸ್ತರಣೆಗೆ ಕಾರಣರಾಗುತ್ತಾರೆ. ಮುಂದೆ ಬಂದ ಸಾಳುವ ಮತ್ತು ತುಳುವರು ಸಹ ತಮ್ಮ ಸಾಮ್ರಾಜ್ಯದ ದೈವ ವಿರೂಪಾಕ್ಷನಿಗೆ ಬಹಳಷ್ಟು ದಾನ ದತ್ತಿಗಳನ್ನು ನೀಡಿ ಅದರ ಪೂಜಾಕಾರ್ಯಗಳು ಯಶಸ್ವಿಯಾಗಿ ನಡೆಯುವಂತೆ ಏರ್ಪಾಡು ಮಾಡಿರುತ್ತಾರೆ.

ಇನ್ನೊಂದು ಶಾಸನದಲ್ಲಿ ವಿರುಪಂಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಚೌಳಿಯಕೇರಿಯ ಹರಿಹರಸೆಟ್ಟಿಯರ ತಮ್ಮ ಕೋಟಿಯಂಣಸೆಟ್ಟಿಯರ

ಮಕ್ಕಳು ಪುರುಷಂಣ ಸೆಟ್ಟಿಯರ ತಮ್ಮ ನಾರಾಯಣಸೆಟ್ಟಿ ಕೆಲ್ಲಂಗೆರೆಯ ವಿನಾಯಕ ಗುಡಿಯ ಪಕ್ಕ ಬಾರಕೂರಿನ ಅಧಿಕಾರಿಯಿಂದ ಭೂಮಿಯನ್ನು ಕೊಂಡು ಗುಡಿಗೆ ದಾನವಾಗಿ ನೀಡುತ್ತಾನೆ. ಉತ್ತಾನ ದ್ವಾದಶಿಯಂದು ಭೂಮಿ ನೀಡಿದ ಉಲ್ಲೇಖವಿದೆ. ಈ ಶಾಸನ ಪ್ರೌಢದೇವರಾಯನ ಕಾಲದ್ದು[೮೩] ಪ್ರತಾಪದೇವರಾಯ ವೊಡೆಯರು ರಾಜ್ಯವಾಳುವಾಗ ಪಿರಿಸೆಟ್ಟಿಯ ಕುಮಾರ ಪೋಲಿಸೆಟ್ಟಿ ಸೋಮೇಶ್ವರ ಗುಡಿಯ ಮುಂದೆ ಕಂಬವನ್ನು ನಿಲ್ಲಿಸಿದ ವಿಷಯವಿದೆ.[೮೪] ಬಾರಕೂರು ರಾಜ್ಯವನ್ನು ಆಳುತ್ತಿದ್ದ ನರಸಿಂಹ ದೇವೊಡೆಯರು ಭಂಡಾರಿ ಕಾಂತುಸೆಟ್ಟಿಗೆ ಹೊಸವೊಳಲ ಸೋಮನಾಥ ಗುಡಿಯ ಅನೇಕ ಕಾರ್ಯಗಳಿಗಾಗಿ ಭೂಮಿಯನ್ನು ದಾನ ನೀಡಿದ ವಿವರವಿದೆ. ದೇವರ ನಂದಾದೀಪಕ್ಕಾಗಿ ಎಣ್ಣೆಯನ್ನು, ವರ್ಷಪೂರ್ತಿ ದೇವಸ್ಥಾನದಲ್ಲಿ ಎಪ್ಪತ್ನಾಲ್ಕು ಮಂದಿ, ಬ್ರಾಹ್ಮಣರಿಗೆ ಭೋಜನಕ್ಕಾಗಿ ಗದ್ದೆಯನ್ನು ನೀಡಿದ ವಿವರವಿದೆ.[೮೫]

ಇದೇ ಬಾರಕೂರು ರಾಜ್ಯವನ್ನು ಚಂಡರಸವೊಡೆಯರು ಆಳುವಾಗ ಮೂಡುಕೇರಿಯ ಒಳಗಣ ಅರಿಯಕೇರಿಯ ಸೆಟ್ಟಿಕಾರರು ಮತ್ತು ಸಮಸ್ತರು ಕೂಡಿಕೊಂಡು ಹಲವು ದೇವರುಗಳ ಸೇವೆಗಾಗಿ ಕಂನೇಶವೊಡೆಯರಿಗೆ ದಾನವನ್ನು ನೀಡಿದ ವಿವರವಿದೆ. ವಿನಾಯಕ ದೇವರಿಗೆ ಎರಡು ಹೊತ್ತಿನ ನೈವೇದ್ಯಕ್ಕೆ ಗಂಧ, ಧೂಪ, ಪೂಜಾರಿಗೆ, ಮಾಲೆಯ ಕಟ್ಟುವವರಿಗೆ, ಚೌತಿಯ ಹೋಮಕ್ಕೆ ೪೮ ಬ್ರಾಹ್ಮಣರ ಭೋಜನಕ್ಕೆ ಬ್ರಹ್ಮರು, ನಾಗರಿಗೆ ಹಾಲು, ಬಲಿಪೂಜೆಗೆ, ಅರಿಯಕೇರಿಯ ಹಲವರಿಗೆ ವೀಳ್ಯಕ್ಕಾಗಿ, ಚೌಡೇಶ್ವರಿ ದೇವರಿಗೆ ಏಳು ದಿನದ ಕಥೆಯನ್ನು ಓದಿದವರಿಗೆ, ಪ್ರತಿ ಅಮಾವಾಸ್ಯೆಗೆ ಇಬ್ಬರು ಬ್ರಾಹ್ಮಣರ ಭೋಜನಕ್ಕೆ, ದೀವಳಿಗೆ ಹಬ್ಬಕ್ಕೆ ಕಾಯಿ ತುಪ್ಪ ಮುಂತಾದವನ್ನು ದಾನವಾಗಿ ಬಿಡಲಾಗಿದೆ. ಇದನ್ನು ರಂಗಣ್ಣಸೆಟ್ಟಿಯು ಕಂನೇಶವೊಡೆಯರಿಗೆ ದಾನ ಬಿಟ್ಟಿರುವರು.[೮೬]

ಪ್ರೌಢದೇವರಾಯರ ನಿರೂಪದಂತೆ ಮಹಾಪ್ರಧಾನಿ ಚಂಡರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾರೆ. ಬಸುರೂರ ಪಡುವಕೇರಿಯ ಕಕ್ಕೆಯೆ ಬಳಿಯ ಸೆಟ್ಟಿಕಾರನಾದ ಬಾಳುಸೆಟ್ಟಿಯ ಮಗ ಯೀಸರಸೆಸೆಟ್ಟಿ ಶ್ರೀ ನಖರೇಶ್ವರ ದೇವರಿಗಾಗಿ ಹಲವು ವಿಧದ ದಾನವನ್ನು ನೀಡುವನು. ಪ್ರತಿದಿನ ಪೂಜೆಯಲ್ಲಿ ಊಟ ಮಾಡುವ ಒಬ್ಬ ಬ್ರಾಹ್ಮಣನಿಗೆ, ದ್ವಾದಶಿಗೆ ಇಬ್ಬರು, ಪ್ರದೋಷಕ್ಕೆ ಇಬ್ಬರು, ಅಮಾವಾಸ್ಯೆಗೆ ಇಬ್ಬರು ಬ್ರಾಹ್ಮಣರ ಊಟಕ್ಕೆ ದೇವರ ನಂದಾದೀವಿಗೆಗೆ ಕೆಂಚನಕೆರೆಯೆಂಬ ಗ್ರಾಮವನ್ನು ದಾನ ನೀಡಲಾಗಿದೆ.

ತೋಟವನ್ನು ಮತ್ತು ಹಿತ್ತಲನ್ನೂ ದಾನ ಬಿಡಲಾಗಿದೆ. ನಂದಾದೀವಿಗೆಗೆ ಸಾಕಾಗಿ ಮಿಕ್ಕ ಅಕ್ಕಿಯನ್ನು ಈಶ್ವರ ಸೆಟ್ಟಿಯ ಬಳಿಕ ಮಂಜುಸಾವಂತನ ಕುಟುಂಬದಲ್ಲಿ ದೇವಕ್ಕ ದೇಸಿಂಗ ಸೆಟ್ಟಿ ಕುಟುಂಬದಲ್ಲಿ ಕೋಟಿಯಕ್ಕ, ಬೆಂಮ್ಮಣಾಳುವನ ಕುಟುಂಬದಲ್ಲಿ ಯೀಸರಾಳುವನ ಮಕ್ಕಳು ಈ ಮೂವರೂ ಅನುಭವಿಸಬೇಕು. ಗೋಜರದೆ ಬಳಿಯವರ ಮನೆಯ ಸಮೀಪ ಮನೆಯನ್ನು ಬಾಗಿಯ ಮನೆಯನ್ನು ಮತ್ತು ಹಿತ್ತಲನ್ನು ಕುಪ್ಪಿಸೆಟ್ಟಿಯ ಮಗ ಹರಿಯಪ್ಪಸೆಟ್ಟಿಗೆ ಕೊಡಲಾಗಿದೆ. ಕಡೆಯ ಭಾಗಿಯ ಮನೆಯನ್ನು ಹಿತ್ತಲ ಸಹಿತ ಯೀಸರಸೆಟ್ಟಿಯನ್ನು ಮದುವೆಯಾಗುವ ವಧು ದೇವಕ್ಕಳಿಗೆ ಕನ್ಯಾದಾನವಾಗಿ ಕೊಡುವನು. ಸೋಮವಾರದ ಬೆಂಮಣಸೆಟ್ಟಿಯು ಪ್ರತಿವರುಷ ಈ ಭೂಮಿಯಲ್ಲಿ ಬೆಳೆಯನ್ನು ತೆಗೆದು ಬಾಗೇಡು ಬರಗೇಡು ಎಂದು ಕಾರಣವನ್ನು ಹೇಳದೆ ೧೨ ಮುಡಿ ಅಕ್ಕಿಯನ್ನು ರುದ್ರಪೂಜೆ ಗಾಗಿ ಕೊಡಬೇಕೆಂದು ಹೇಳಿ ಈ ಹೇಳಿಕೆಗೆ ಅನೇಕರು ಒಪ್ಪವನ್ನು ಹಾಕಿದ್ದಾರೆ. ಮುದ್ದಣದೇವ ಮತ್ತು ಪಡುವ ಕೇರಿಯ ಹಲವು ಸೆಟ್ಟಿಕಾರರು ಈ ಧರ್ಮವನ್ನು ಪಾಲಿಸಬೇಕೆಂದು ಶಾಸನದ ಅಂತ್ಯದಲ್ಲಿದೆ.[೮೭]

ಮಹಾಪ್ರಧಾನಿ ಅಂಣಪ್ಪವೊಡೆಯರು ಬಾರಕೂರು ರಾಜ್ಯವನ್ನು ಆಳುವ ಕಾಲದಲ್ಲಿ ಮಣಿಗಾರಕೇರಿಯ ಸೋಮನಾಥದೇವರ ಸೇವೆಗಾಗಿ ಚಿಂನವರದ ನಾಗಣಸೆಟ್ಟರು ಭೂಮಿ ದಾನವನ್ನು ನೀಡಿದ ವಿಷಯವನ್ನು ಶಾಸನ ತಿಳಿಸುತ್ತದೆ. ಮಣೂರದೇವರ ಮಾಧವಯ್ಯನ ಮಕ್ಕಳಾದ ಕೃಷ್ಣ ಮತ್ತು ನಾರಾಯಣ, ಕೃಷ್ಣಮಯ್ಯನ ಮಗ ವಾಸ್ತೇವಮಯ್ಯ ಮಗ ಕೃಷ್ಣಮಯ್ಯರೂ ಕೂಡಿಕೊಂಡು ಒಪ್ಪಿಗೆ ಸೂಚಿಸಿ ಹಲವು ಸ್ಥಳದಲ್ಲಿ ಭತ್ತದ ಮೂಡೆ ಮತ್ತು ಭೂಮಿಯನ್ನು ದಾನವಾಗಿ ನೀಡಿರುವರು. ದಾನದ ಭಾಗ ಸ್ವಲ್ಪ ತ್ರುಟಿತವಾದಂತಿದೆ.[೮೮]

ಮಹಾಪ್ರಧಾನರಾದ ಚಂಡರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಮೊರತಂಕೆಯ ಸನಿಯಮಸೆಟ್ಟಿಯ ಅಳಿಯ ಕೋಟಿಯಂಣಸೆಟ್ಟಿಯು ಬಸರೂರ ಪಡುವ ಕೇರಿಯಲ್ಲಿನ ಮಹಾದೇವದೇವರಿಗೆ ರುದ್ರಪೂಜೆ, ದೀವಳಿಗೆ ಹಬ್ಬದ ರಂಗಪೂಜೆ, ಸಾಣೆಯ ಸಹಸ್ರಕ್ಕೆ ಭೂಮಿಯನ್ನು ಮತ್ತು ತೆಂಗಿನ ತೋಟವನ್ನು, ದಾನ ಬಿಡುವನು. ಸಂಜೋಡಿಯ ಬ್ರಹ್ಮರು ಮತ್ತು ಆತನ ಅಳಿಯಂದಿರ ಪರವಾಗಿ ಕೋಟಿಸೆಟ್ಟಿ ಈ ಧರ್ಮವನ್ನು ನಡೆಸಿ ಕೊಂಡು ಬರಬೇಕು. ಇವನ ಬಳಿಕ ಅವನ ಅಳಿಯಂದಿರು ನಡೆಸಬೇಕು. ಈ ಕೋಟಿಸೆಟ್ಟಿಯ ಕುಟುಂಬವನ್ನು ಪಡುವಕೇರಿಯ ಹಲವು ಸೆಟ್ಟಿಕಾರರು ಪಾಲಿಸಿಕೊಂಡು ಬರಬೇಕು.

ಮೇಲ್ಕಂಡ ದೇವರ ಭೂಮಿಯನ್ನು ಬಿತ್ತುವ ಗೇಣಿಕಾರರು ಕೋಟಿಸೆಟಿ ಕುಟುಂಬಕ್ಕೆ ಕಾಲಕಾಲಕ್ಕೆ ತುಪ್ಪವನ್ನು ಸಲ್ಲಿಸಿಕೊಂಡು ಬರಬೇಕೆಂದು ಶಾಸನದಲ್ಲಿದೆ. ಶಾಸನದ ರಚನೆಕಾರ ಶಂಕರಸ ಬರೆಸಿದವನು ಮೊರತಂಕೆಯ ಕೋಟಿಯಂಣಸೆಟ್ಟಿ.[೮೯]

ದೇವರಾಯನ ಮಹಾಪ್ರಧಾನಿಯಾದ ತಿಂಮಣ, ವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಕುಮಾರ ವೃತ್ತಿಯ ಚಿಂಮಣಂ, ಅಳಿಯ ಗೋವಿಂದ ಸೆಟ್ಟಿಯರು ಶಂಕರನಾರಾಯಣ ದೇವರ ಸೇವೆಗಾಗಿ ಅಕ್ಕಿಮೂಡೆ ಮತ್ತು ಭೂಮಿಯನ್ನು ದಾನ ನೀಡಿದ ವಿವರವಿದೆ.[೯೦] ಪ್ರತಾಪ ದೇವರಾಯ ಮತ್ತು ಪ್ರಧಾನಿ ಲಖಂಣ ದಣ್ಣಾಯಕರ ನಿರೂಪದಿಂದ ತಿಪ್ಪಣ್ಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದನು. ಈ ಅವಧಿಯಲ್ಲಿ ಬೆವಹಾರದ(ವ್ಯಾಪಾರದ) ಹೊಸಬುಸೆಟ್ಟಿಯರು ಹೇರೂರಿನ ಮಹಾದೇವರ ದೇವಾಲಯದಲ್ಲಿ ನಂದಾದೀಪಕ್ಕೆ ಪ್ರತಿದಿವಸ ಇಬ್ಬರು ಬ್ರಾಹ್ಮಣರ ಭೋಜನಕ್ಕೆ ಅಕ್ಕಿ ಮೂಡೆಗಳನ್ನು ಮತ್ತು ೧೬೨ ಕಾಟಿ ಗದ್ಯಾಣಗಳನ್ನು ದಾನವಾಗಿ ಬಿಟ್ಟ ವಿಷಯವಿದೆ. ಹೆರಾಂಜಡ ದೇವರಿಗೂ ದಾನ ನೀಡಿದ್ದು ಆ ದಾನದಿಂದ ಅಮಾವಾಸ್ಯೆಯಲ್ಲಿ ಹಂನೆರಡು ಮಂದಿ ಬ್ರಾಹ್ಮಣರಿಗೆ ಭೋಜನ ನಡೆಸಬೇಕೆಂದು ಸೂಚಿಸಲಾಗಿದೆ.[೯೧]

ದೇವರಾಯ ಮಹಾರಾಯರ ನಿರೂಪದಿಂದ ತಿಂಮಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಬಸರೂರಿನ ಹಲವು ಸೆಟ್ಟಿಕಾರರು ಸೇರಿಕೊಂಡು ಅನ್ಯಂಟರ ಬಳಿಯ ಸಂಕರಸೆಟ್ಟಿಯ ಮಗ ಕುಡೆಯರ ಬಳಿಯ ನಾರಣಸೆಟ್ಟಿಗೆ ಹಾರುನಾಡ ಕೊಂಗಾಳಿಯ ಬಯಲನ್ನು ದಾನವಾಗಿ ನೀಡಿದ ವಿವರವಿದೆ. ಈ ನಾರಾಣಸೆಟ್ಟಿಯು ತನಗೆ ಬಂದ ಭೂಮಿಯ ಹುಟ್ಟುವಳಿ ಭತ್ತವನ್ನು ನಖರೇಶ್ವರ ಮಹಾದೇವರ ಶಾಂತದೇವ ಪೂಜೆಗಾಗಿ ದಾನ ನೀಡುವರು. ನಾರಣಸೆಟ್ಟಿಯ ಕುಟುಂಬದವರು ಶಾಶ್ವತವಾಗಿ ನಡೆಸಿಕೊಡುತ್ತೇವೆಂದು ಈ ದಾನ ನೀಡಿರುವರು. ಇದಕ್ಕೆ ಹಲವು ಸೆಟ್ಟಿಕಾರರು ಒಪ್ಪ ಹಾಕಿರುವರು.[೯೨] ರನ್ನಪ್ಪ ಉಡೆಯರು ಬುಕ್ಕ ಸಾಗರ ಗ್ರಾಮದ ಪ್ರಸಂನ ವಿರೂಪಾಕ್ಷ ದೇವರಿಗೆ ಕೊಟ್ಟ ದಾನದ ವಿವರವಿದೆ.

ಮುಳವಾಯಿ ರಾಜ್ಯದ ಬುಕ್ಕಸಾಗರ ಗ್ರಾಮದ ವಿರೂಪಾಕ್ಷಿ ದೇವರಿಗೆ ಗೌಡರು ಮತ್ತು ಹಲವು ಶೆಟ್ಟಿಗಳು ಕೂಡಿಕೊಂಡು ಕೆರೆಯ ಕೆಳಗಿನ ಗದ್ದೆಯನ್ನು, ತೋಟವನ್ನು ಅದರೊಳಗಿನ

ಅಡಕೆಯ ಮರಗಳನ್ನು ಸರ್ವಮಾನ್ಯವಾಗಿ ದಾನ ನೀಡಿದ ವಿವರವಿದೆ.[೯೩] ಪ್ರತಾಪದೇವರಾಯರ ನಿರೂಪದಿಂದ ತಿಂಮಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾರೆ. ಈ ಅವಧಿಯಲ್ಲಿ ಧರ್ಮ್ಮಪಟ್ಟಣದ ನಖರದವರು ಹೊಂನೆಯ ಹಡವಳರ ಮಗ ಅನ್ನಂಟ್ಟರ ಬಳಿಯ ತಿರುಮಹಡವಳನನ್ನು ಮತ್ತು ಮಾದಸೆಟ್ಟಿಯ ಮಗ ಅತಿಮುದ್ದನ ಬಳಿಯ ಬೆಂಮಸೆಟ್ಟಿಯನ್ನು ಯಾವುದೋ ಕಲಹದಲ್ಲಿ ಕೊಂದು ಹಾಕುತ್ತಾರೆ. ಇದಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಪಡುವಕೇರಿಯ ಹಲವು ಸೆಟ್ಟಿಕಾರರು ಆ ಎರಡು ಕುಟುಂಬದವರಿಗೆ ಧರ್ಮ್ಮಪಟ್ಟಣದ ನಖರದವರಿಗೆ ಬಸರೂರು ಅರಮನೆಯ ಸುಂಕ ಕಾಟಿಗದ್ಯಾಣ ೧೦ ಹೊನ್ನನ್ನು ಪರಿಹಾರವಾಗಿ ಕೊಡಿಸುತ್ತಾರೆ. ಅದರಲ್ಲಿ ಒಂದು ಹೊಂನ್ನನ್ನು ಮಹಾದೇವರ ಒಡಲಿಗೆ ಹೊನ್ನ ಕಳಸ ನಿರ್ಮಾಣಕ್ಕೆ ವಿನಿಯೋಗಿಸಲು ಸೂಚಿಸಲಾಗಿದೆ. ಮೇಲಣ ಆದಾಯದ ಹೊನ್ನನ್ನು ಮಹಾದೇವರ ವಿನಿಯೋಗಕ್ಕೆ ಮಾತ್ರ ಬಳಸಬೇಕು. ಬೇರೆಯದಕ್ಕೆ ಬಳಸಬಾರದೆಂಬ ಕಟ್ಟಳೆಯನ್ನೂ ವಿಧಿಸಲಾಗಿದೆ. ತಾವು ಮಾಡಿದ ತಪ್ಪಿನ ಅರಿವಾಗಿ ಅನ್ಯಾಯಕ್ಕೊಳಗಾದ ಕುಟುಂಬದವರಿಗೆ ಪರಿಹಾರವನ್ನು ಮತ್ತು ಪ್ರಾಯಶ್ಚಿತ್ತ ರೂಪವಾಗಿ ದೇವರಿಗೆ ದಾನವನ್ನು ಬಿಟ್ಟ ಅಂಶವನ್ನು ತಿಳಿಸುವ ಅಪರೂಪದ ಶಾಸನವಿದಾಗಿದೆ. ಯಾವ ಕಾರಣಕ್ಕೆ ಕಲಹವಾಯಿತೆಂಬ ಸೂಚನೆ ಶಾಸನದಲ್ಲಿಲ್ಲ. ಆದರೂ ಬಹುಶಃ ವ್ಯಾಪಾರದ ವಿಷಯಕ್ಕೆ ಸಂಬಂಧಪಟ್ಟಂತೆ ಕಲಹವಾಗಿರಬಹುದು.[೯೪]

ದೇವರಾಯರ ಮಹಾಪ್ರಧಾನಿ ಮಾದಂಣ ದಂಣಾಯಕರ ನಿರೂಪದಿಂದ ಮಹಾಪ್ರಧಾನಿ ಆಚರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ದೇಮಂಣಸೆಟ್ಟಿ ಎಂಬುವನು ಉಪ್ಪುಗುಂದದ ಶ್ರೀ ದುರ್ಗಾಪರಮೇಶ್ವರಿ ದೇವರಿಗೆ ದೇವರಾಯಮಹಾರಾಯನ ಆರೋಗ್ಯ ಸುಧಾರಿಸಲು ಮತ್ತು ನೂರ್ಕಾಲ ಬಾಳಲಿ ಎಂಬ ಆಶ್ರಯದಿಂದ ಪಂಚವಾದ್ಯಕ್ಕೆಂದು ದಾನವನ್ನು ನೀಡುವನು. ದಾನದ ಭೂಮಿಯ ಮೇರೆಯನ್ನು ಶಾಸನದಲ್ಲಿ ವಿವರವಾಗಿ ನೀಡಿದೆ. ಈ ದಾನಕ್ಕೆ ಉಪ್ಪುಗುಂದ ನಾಡಿನ ಎಂಟು ಮಂದಿ ಸಮಸ್ತರ ಒಪ್ಪಿಗೆಯನ್ನು ಸೂಚಿಸಲಾಗಿದೆ. ಶಾಸನ ವನ್ನು ಬರೆಸಿದವನು ಸಂಗಂಣಜೀಯವೊಡೆಯರ ಮಗನಾದ ನಾರಣದೇವರಸ. ಈ ಶಾಸನವನ್ನು ಕೆತ್ತಿದವರು ಭಯರಂಣನಾಯಕರ ಮಗ ಮಲ್ಲಪ್ಪ.[೯೫]

ಈ ಶಾಸನವನ್ನು ನೋಡಿದಾಗ, ಸೆಟ್ಟಿ ಕುಲದವರು ರಾಜರ, ತಮ್ಮ ಒಡೆಯರ ಬಗ್ಗೆ ಇಟ್ಟಿರುವ ಅಭಿಮಾನ ಕಳಕಳಿ ಇಲ್ಲಿ ವ್ಯಕ್ತವಾಗುತ್ತದೆ. ರಾಜರು ಸುಖವಾಗಿದ್ದರೆ ನಾಡಿನ

ಪ್ರಜೆಗಳೂ ಸುಖವಾಗಿರುತ್ತಾರೆಂಬ ಭಾವನೆಯಿಂದ ದೇಮಂಣಸೆಟ್ಟಿ ರಾಜನಿಗೆ ಗುಣವಾಗಲಿ ಎಂದು ದಾನ ನೀಡಿದ ವಿವರವನ್ನು ತಿಳಿಸುವ ಈ ಶಾಸನ ನಿಜಕ್ಕೂ ಶ್ಲಾಘನೀಯ.

ಕ್ರಿ.ಶ.೧೪೪೬ರ ಅವಧಿಯಲ್ಲಿ ಚಂದ್ರಗುತ್ತಿಯ ಹದಿನೆಂಟು ಕಂಪಣವನ್ನು ಪೃಥುವೀ ಸೆಟ್ಟಿ ಆಳುತ್ತಿದ್ದನು. ಹಿರಿಯಕೆರೆ ಊರ ಹಲಾಯದಕೇರಿಯ ಸಿರುಮಿಸೆಟ್ಟಿಯರು ದೇವರಾಯ ಮಹಾರಾಯರು ನಿಧನರಾದರೆಂಬ ಸುದ್ದಿಯನ್ನು ಕೇಳಿ ಕೊಡಕಣಿಗೆ ಬಂದು ಅಲ್ಲಿನ ರಾಮಯಿದೇವರ ಸನ್ನಿಧಿಯಲ್ಲಿ ಪ್ರಾಣವನ್ನು ಅರ್ಪಿಸಿದರೆಂದು ಶಾಸನ ತಿಳಿಸುತ್ತದೆ. ಇವರ ಮಕ್ಕಳಾದ ವೀರಿಸೆಟ್ಟಿ, ಮಲ್ಲಿಸೆಟ್ಟಿ ಮತ್ತು ಹೊನ್ನಿಸೆಟ್ಟಿಯರು ಶಕವರುಷ ೧೩೭೧ ಶುಕ್ಲ ಸಂವತ್ಸರದ ಜೇಷ್ಟ ಶು ೧೧ ಮಂಗಳವಾರ ಅನುರಾಧ ನಕ್ಷತ್ರ ಶೋಭನ ಯೋಗ, ವೃಷಭ ಲಗ್ನದಲ್ಲಿ ವೃಷಭನ ಮೂರ್ತಿಯನ್ನು ಪ್ರತಿಷ್ಠಾಪಿಸಿ ದಾನದತ್ತಿಗಳನ್ನು ಬಿಡುವರು. ಆ ದೇವರ ಅಮೃತಪಡಿ, ನಂದಾದೀಪ, ಐದು ಜನ ಒಡೆಯರ (ಭಕ್ತರ) ಛತ್ರಕ್ಕೆ ತಾವರಿಗೆ ಕೆರೆಯ ಮತ್ತು ಭೋಗಾವೆಯ ಬಳಿ ಭೂಮಿಯನ್ನು ದಾನ ಬಿಡಲಾಗಿದೆ. ರಾಮದೇವರ ಹಾಗೂ ಬಸವರಾಜ ದೇವರ ನಂದಾದೀಪಕ್ಕೆಂದು ದೇವಾಲಯದ ಪೂಜಾರಿಯಾದ ಬೊಂಮಿದೇವನಿಗೆ ಕನ್ಯೆಯನ್ನು ಕೊಟ್ಟು ಮದುವೆಯನ್ನು ಮಾಡಿ ಇವನು ದೇವಾಲಯದ ಪೂಜೆ, ಛತ್ರದ ಉಸ್ತುವಾರಿಯನ್ನು ನಡೆಸಬೇಕೆಂದು ಶಾಸನದಲ್ಲಿ ಹೇಳಿದೆ. ಈ ಸಮಯದಲ್ಲಿ ಸಿರುಮಸೆಟ್ಟಿಯರ ಗುರುಗಳಾದ ಕೋಪುರ ಧೂಪದೊಡೆಯರು ಬಂದಾಗ ಅವರಿಗೂ ಭೂಮಿಯನ್ನು ಅಡಕೆ ಮರಗಳನ್ನು ದಾನವಾಗಿ ನೀಡಲಾಗಿದೆ.

ಈ ಶಾಸನದ ಆಧಾರದಿಂದ ಕ್ರಿ.ಶ.೧೪೪೬, ಫೆಬ್ರವರಿ ೧೮ ಮಂಗಳವಾರದಲ್ಲಿ ದೇವರಾಯಮಹಾರಾಯ ತೀರಿಕೊಂಡನೆಂದೂ, ಇದನ್ನು ಕೇಳಿ ದುಃಖ ತಡೆಯಲಾರದೆ ಇವನ ಕೈ ಕೆಳಗಿನ ಅಧಿಕಾರಿಯಾದ ಸಿರುಮಿಸೆಟ್ಟಿಯರು ಪ್ರಾಣತ್ಯಾಗ ಮಾಡಿ ಕೊಂಡರೆಂದೂ, ಇವನ ಮಕ್ಕಳು ಇವನ ನೆನಪಿಗೆ ಬಸವನ ಮೂರ್ತಿಯನ್ನು ಸ್ಥಾಪಿಸಿ ದಾನದತ್ತಿಗಳನ್ನು ನೀಡಿದರೆಂದು ತಿಳಿಯುತ್ತದೆ.[೯೬]

ಹೀಗೆ ಬಾರಕೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ಈ ದಾನದತ್ತಿಗಳನ್ನು ಶಾಸನದಲ್ಲಿ ನೋಡಿದಾಗ, ದೇವರಾಯನ ಪೂರ್ವ ಕಾಲದಿಂದಲೂ ಬಾರಕೂರು ಒಂದು ಪ್ರಸಿದ್ಧ ಶೈವ ಬ್ರಾಹ್ಮಣರ ಕೇಂದ್ರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಅರಸರ

ಕಾಲದಲ್ಲಿ ಬಾರಕೂರು ಬಹಳ ಪ್ರಸಿದ್ಧವಾದ ರಾಜ್ಯವಾಗಿತ್ತು. ಇಲ್ಲಿನ ವ್ಯಾಪಾರಿಗಳು ಇಡೀ ರಾಜ್ಯದಲ್ಲಿ ಹೆಸರಾಗಿದ್ದರು ಮತ್ತು ಪ್ರಭಾವಶಾಲಿಯಾಗಿದ್ದರು. ಇಮ್ಮಡಿ ದೇವರಾಯನ ಅವಧಿಯಲ್ಲಿಯೂ ಬಾರಕೂರು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲದೆ ಈ ಕಾಲದಲ್ಲಿ ಬಾರಕೂರು ಶುದ್ಧ ಶೈವ ಧರ್ಮದ ಪ್ರಮುಖ ಕೇಂದ್ರವಾಗಿತ್ತೆಂದು ಡಾ.ಕಲಬುರ್ಗಿಯವರು ಹೇಳುತ್ತಾರೆ. ಈ ನಗರದಲ್ಲಿ ಹತ್ತು ಕೇರಿಗಳಿದ್ದವೆಂದೂ ಪ್ರತಿಯೊಂದು ಕೇರಿಯ ವರ್ತಕರೂ ತಮ್ಮ ತಮ್ಮ ಕೇರಿಗಳಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿಕೊಂಡು ಅವಕ್ಕೆ ಯಥೇಚ್ಛವಾಗಿ ದಾನಗಳನ್ನು ನೀಡಿರುವ ವಿವರ ಶಾಸನಗಳಿಂದ ತಿಳಿದುಬರುತ್ತದೆ. ಈಗಲೂ ಸಹ ಈ ದೇವಾಲಯಗಳು ವಿಶಾಲವಾದ ಪ್ರಾಂಗಣ, ಮಂಟಪಗಳು, ಸುಂದರವಾದ ವಿನ್ಯಾಸದಲ್ಲಿರುವುದು ಆಶ್ಚರ್ಯವಾಗಿದೆ. ಇಲ್ಲಿನ ವ್ಯಾಪಾರಿಗಳು ಸ್ಪರ್ಧೆಯ ಮೇಲೆ ದೇವಾಲಯಗಳನ್ನು ನಿರ್ಮಿಸಿದಂತೆ ತೋರುತ್ತದೆ. ಧರ್ಮೋರಕ್ಷತಿ ರಕ್ಷಿತಃ ಎನ್ನುವ ಮಾತು ಜನರ ನರನಾಡಿಗಳಲ್ಲಿ ಮಿಡಿದಿದೆ.

ಕೃಷ್ಣದೇವರಾಯನು ಆಳುತ್ತಿರುವಾಗ ಕಟೆಯ ಬೆದೆಯನಾಯಕನೆಂಬುವನು ಬಿನ್ನಹವನ್ನು ಮಾಡಿಕೊಂಡು ಯಳವಂಜಿನಾಡಿನ ಮಂದರಗೊಂಟೆಯ ಗ್ರಾಮವನ್ನು ಮುಳವಾಯಿಯ ಸೋಮದೇವರಿಗೆ ದಾನವಾಗಿ ಬಿಡುತ್ತಾನೆ. ಕರಣಿಕ ನಾಗರಸೆಟ್ಟಿ ಮತ್ತು ಇತರರೂ ಸೇರಿ ಕೃಷ್ಣರಾಯನಿಗೆ ಬೇಡಿಕೊಂಡು ಸೋಮನಾಥಪುರವನ್ನು ದಾನವಾಗಿ ನೀಡುತ್ತಾರೆ. ಈ ದಾನವನ್ನು ಸೋಮನಾಥನ ಅರ್ಚಕ ಸೋಮಣನಿಗೆ ದಾನವಾಗಿ ಕೊಡಲಾಗಿದೆ.[೯೭]

ಕೃಷ್ಣದೇವರಾಯನ ಕಾಲದಲ್ಲಿ ಚೆನ್ನಮಲ್ಲಿಶೆಟ್ಟಿಯ ಮಗನಾದ ಚಂನಣಸೆಟ್ಟಿಯು ಶಿವಗಂಗೆ ಬೆಟ್ಟದ ಗಂಗಾಧರೇಶ್ವರ ದೇವರ ಪಲ್ಲಕ್ಕಿಯ ಪ್ರದಕ್ಷಿಣ ಪಥವನ್ನು ಮಾಡಿಸಿದ ಉಲ್ಲೇಖವಿದೆ. ವಿಜಯಪುರದ ರಾಮಚಂದ್ರಪಂಡಿತರ ಮಗ ಚಂದರಸ ಪಂಡಿತನ ಪಾರುಪತ್ಯದಲ್ಲಿ ಇದನ್ನು ನಿರ್ಮಿಸಿದಂತೆ ಶಾಸನ ತಿಳಿಸುತ್ತದೆ.[೯೮] ಇದಕ್ಕೆ ಸಂಬಂಧಪಟ್ಟಂತೆ ಶಿವಗಂಗೆಯ ಇನ್ನೊಂದು ಶಾಸನದಲ್ಲಿ ಕೃಷ್ಣದೇವರಾಯನ ಅರಮನೆಯ ಕುದುರೆ ಚನಮಲಿಸೆಟಿಯ ಮಗ ಚಂನಣಸೆಟರು ಶಿವಗಂಗೆಯ ಗಂಗಾಧರ ದೇವರ ಮಜ್ಜನದ ಸೇವೆಗಾಗಿ ಗೋಪುರವನ್ನು ಕಟ್ಟಿಸಿದಂತೆಯೂ ಇದಕ್ಕೆ ವಿಜಯಾಪುರದ ಚಂದ್ರಪಂಡಿತರ ಮಗ ಚಂದರಸರ ನೆರವು ಪಡೆದಿರಬಹುದಾದ ವಿಷಯವನ್ನು ತಿಳಿಸುತ್ತದೆ.[೯೯]

ಕೃಷ್ಣದೇವಮಹಾರಾಯನ ಮನೆಯ ಬೆವಹಾರಿ ಬೆಟಪ್ಪಸೆಟಿಯರ ಅಂಣ ಹೊಂಗಾಣಿ ಸೆಟಿಯರ ಅಂಣ ಹೊಂಗಾಣಿಸೆಟಿಯರ ಮಗ ಶರಣಪ್ಪಸೆಟ್ಟಿಯರು ಪಾರ್ವತಿ ದೇವಿ ಗುಡಿಯನ್ನು ಕಟ್ಟಿಸಿದ ಕೊಳಿಗಾಲದ ಸ್ಥಳದ ಹೊಂನರದ... ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ. ಇಷ್ಟೇ ಅಲ್ಲದೆ ಮೂಗೂರು ಸ್ಥಳದ ಹೊಸಪುರ ಗ್ರಾಮದಲ್ಲಿಯೂ ಭೂಮಿಯನ್ನು ನೀಡಿದ್ದಾನೆ. ಕೃಷ್ಣರಾಯನ ಮಹಾಪ್ರಧಾನಿ ಸಾಳುವ ಗೋವಿಂದರಾಜೊಡೆಯರು ಈ ಗ್ರಾಮವನ್ನು ಸೆಟ್ಟಿ ಕುಟುಂಬದವರಿಗೆ ಉಂಬಳಿಯಾಗಿ ನೀಡಿರುತ್ತಾರೆ.[೧೦೦] ಇಮ್ಮಡಿ ದೇವರಾಯನ ಕಾಲದ ಶಾಸನದಲ್ಲಿ, ಸಂಗಮದೇವ ಮತ್ತು ಸಂಗಾಯಿ ದಂಪತಿಗಳು ಭೂಮಿಯನ್ನು ಖರೀದಿಸಿ, ಅದನ್ನು ಸಿರಿಗೆರೆ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿ, ರಕ್ಷಣೆಗಾಗಿ ಮೂರು ಪಟ್ಟಣದ ಸೆಟ್ಟಿಗಳು ಮತ್ತು ಅರಗದ ಹದಿನೆಂಟು ಕಂಪಣದ ಗೌಡರು ಇರಬೇಕೆಂದು ಶಾಸನದಲ್ಲಿ ಬಪ್ಪ ಹಾಕಿದ ಉಲ್ಲೇಖವಿದೆ.[೧೦೧]

ವಿಜಯನಗರದ ರಾಜ ವೆಂಕಟಪತಿರಾಯನ ಆಳ್ವಿಕೆಯ ಕಾಲದ ಈ ಶಾಸನವು ಹನುಮಂತನ ಗುಡಿ ಕಟ್ಟಿದ ವಿವರವನ್ನು ಒಳಗೊಂಡಿದೆ. ತೆರಕಣಾಂಬಿಯ ಕೆಂಪನರಸಿಂಹಸೆಟ್ಟಿಯರ ಮಗ ನರಸಿಂಹಸೆಟ್ಟರು ತೆರಕಣಾಂಬೆಯ ನಡುಕೇರಿಯಲಿ ನೂತನ ಮಂಟಪವನ್ನು ಕಟ್ಟಿಸಿ ಹನುಮಂತರಾಯನ ಪ್ರತಿಷ್ಠೆಯನ್ನು ಮಾಡಿದರು.[೧೦೨]

ಕ್ರಿ.ಶ.೧೩೭೭ರ ಕೋಟೇಶ್ವರ ಶಾಸನದಲ್ಲಿ ಬೊಮ್ಮರಸನು ಬಾರಕೂರು ರಾಜ್ಯವಾಳುತ್ತಿರುವಾಗ ಮಹಾಪ್ರಧಾನ ಮದ್ದೆದಂಣಾಯಕ ೩ ನಿವೇಶನ ಭೂಮಿ ಖರೀದಿಸಿ ಕೋಟೇಶ್ವರ ದೇವರ ಸೇವೆ, ನೈವೇದ್ಯ ಪ್ರತಿದಿನ ೧೩ ಬ್ರಾಹ್ಮಣರ ಆಹಾರದಾನ ಕ್ಕೋಸ್ಕರ ಇಬ್ಬರು ಸ್ತ್ರೀಯರ ಸಂಬಳಕ್ಕೋಸ್ಕರ ಚಿನ್ನವನ್ನು ದಾನ ನೀಡಿದ ವಿವರವಿದೆ. ಮುದ್ದಯ ದಂಣಾಯಕ ಚಿನ್ನದ ಕೋಲನ್ನು ದೇವಸ್ಥಾನಕ್ಕೆ ಅರ್ಪಿಸಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಅಂದರೆ ಒಂದನೆಯ ಬುಕ್ಕರಾಯನು ವಿಜಯನಗರ ಆಳುತ್ತಿರುವಾಗ ಬಂಟ್ವಾರ ಮೂಡ ಶಾಸನದಲ್ಲಿ ಪಂಡರಿದೇವ ಮಂಗಳೂರು ರಾಜ್ಯವಾಳುತ್ತಿರುವಾಗ ತಿಮಿರೇಶ್ವರ ದೇವರ ಸೇವೆಗೋಸ್ಕರ ಕೆಲವು ನಿವೇಶನ, ಭೂಮಿಯನ್ನು ಕೆಲವು ಸೆಟ್ಟಿಗಳು ದಾನ ನೀಡಿದ ದಾಖಲೆಯಿದೆ. ಬೆಂಗಳೂರಿನ ಬಳಿಯ ಬೇಗೂರಿನ ೧೪೦೨ರ ಶಾಸನವು ನಗರೇಶ್ವರ ದೇವಲಾಯಕ್ಕೆ ವರ್ತಕರು ನೀಡಿದ ದಾನವನ್ನು ವಿವರಿಸುವುದು.

ವಿಜಯನಗರ ಅರಸರ ಕಾಲದಲ್ಲಿ ವರ್ತಕರು ಧರ್ಮ, ಆಜ್ಞೆ, ನಿಯಮ, ಶಾಸನ ಹೊರಡಿಸುವುದು ದೇವಕಾರ್ಯಗಳು ಸಾಂಗವಾಗಿ ಜರುಗಲು ತಾವು ವಿವಿಧ ದಾನಗಳನ್ನು ನೀಡುವುದರೊಂದಿಗೆ ಅವು ನಿರಂತರವಾಗಿ ಮುಂದುವರಿಯಲು, ಜನರ ಧಾರ್ಮಿಕ ಭಾವನೆ ಅಕ್ಷಯವಾಗಿ ಉಳಿಯಲು ಧರ್ಮಶಾಸನವನ್ನು ಹೊರಡಿಸುವ, ದೇವಾಲಯದ ಕಟ್ಟಳೆ, ನಿಯಮಗಳಿಗಾಗಿ ಶಾಸನ ಬರೆಸುವ ಅಧಿಕಾರವನ್ನು ಹೊಂದಿದ್ದರು. ಆಡಳಿತದ ಅನುಕೂಲ, ಅಧಿಕಾರದ ವಿಕೇಂದ್ರೀಕರಣ ದೃಷ್ಟಿಯಿಂದ ಚಕ್ರವರ್ತಿಗಳೇ ಇಂಥ ಅಧಿಕಾರವನ್ನು ವರ್ತಕರಿಗೆ ದಯಪಾಲಿಸುತ್ತಿದ್ದರು. ದಾನ ಪ್ರಧಾನ ಮತ್ತು ಪ್ರತಿಪಾಲನಗಳು ಪುಣ್ಯ ಅಥವಾ ಸ್ವರ್ಗ ಪ್ರಾಪ್ತಿಯ ಪರಮಸಾಧನಗಳು. ಹೀಗಾಗಿ ದಾನಪ್ರಧಾನದ ಮೂಲಕ ಪುಣ್ಯ ಅಥವಾ ಸ್ವರ್ಗ ಪಡೆಯುವ ಧರ್ಮವೀರನ ಸಂಖ್ಯೆ ಅಪಾರವಾಗಿತ್ತು. ಪುಣ್ಯ ಸಂಪ್ರಾಪ್ತಿ ಇಲ್ಲವೆ ಧಾರ್ಮಿಕ ಇಲ್ಲವೆ ಸಾಮಾಜಿಕ ಕರ್ತವ್ಯವೆಂಬ ಭಾವನೆಯಿಂದ ನಾಡಿನ ವಿವಿಧ ವರ್ಗದ ವರ್ತಕರು ವೈಯಕ್ತಿಕವಾಗಿ, ಸಾಮೂಹಿಕವಾಗಿ ಹಾಗೂ ಸಮಾಜದ ವಿವಿಧ ವರ್ಗದ, ವರ್ಣದ ಜನರೊಂದಿಗೆ ಸ್ವದಾನ, ಪರದಾನಗಳ ಪ್ರತಿಪಾಲನ ಕಾರ್ಯ ನೆರವೇರಿಸಿದುದು ಶಾಸನಗಳಿಂದ ವಿಧಿತವಾಗುವುದು.[೧೦೩]

ದೇವಾಲಯ, ದೇವಕಾರ್ಯಗಳನ್ನು ಜೀವಂತವಾಗಿಡಲು, ಧಾರ್ಮಿಕ ಪರಂಪರೆಯನ್ನು ಮುಂದುವರಿಸಲು ಇಂಥ ಪುಣ್ಯ ಕಾರ್ಯಗಳು ಅತ್ಯಂತ ಅವಶ್ಯವೆಂಬುದನ್ನು ಮನಗಂಡ ವರ್ತಕರು ದಾನ ಪ್ರತಿಪಾಲನ ಧರ್ಮವನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬಂದುದು ಸ್ತುತ್ಯಾರ್ಹ. ಹೀಗೆ ವಿಜಯನಗರ ಕಾಲದಲ್ಲಿ ಸೆಟ್ಟಿಗಳು ದೇವಾಲಯದ ದೃಷ್ಟಿಯಲ್ಲಿ ಕೊಡುಗೈ ದಾನಿಗಳಾಗಿದ್ದರು. ಇವರ ದಾನವನ್ನು ತಿಳಿಸುವಂತಹ ಶಾಸನಗಳಿಂದ ಈ ಮಾತು ವಿಧಿತವಾಗುತ್ತದೆ.

ಮಧುಗಿರಿ ತಾಲೂಕು ಮಿಡಿಗೇಶಿ ತಾಮ್ರಶಾಸನವು ಶ್ರೀ ಮಿಡಿಗೇಶಿ ಮಲ್ಲೇಶ್ವರನ ವರದಿಂದ ಉತ್ಪನ್ನರಾದ ಹಿರಿಯರು(ಶೆಟ್ಟನೋಡು) ದೊಡ್ಡಮಲ್ಲಸೆಟ್ಟಿ ಮಲ್ಲೇಶ್ವರಸ್ವಾಮಿ ದೇಗುಲ ಕಟ್ಟಿದ್ದು, ಹೆಣ್ಣು ಮಗಳು ಚಿಕ್ಕಮಲ್ಲಕಳು ಅಗ್ನಿಪ್ರವೇಶ ಮಾಡಿದ್ದು ಆನೆಗೊಂದಿ ಸಂಸ್ಥಾನದವರೇ. ಅವರ ಮೂಲ ಗುರುಗಳು ಎಂದೆಲ್ಲ ಹೇಳಿದೆ. ಈ ಶಾಸನದ ಕಾಲ ಕ್ರಿ.ಶ.೧೬೧೨ ಎಂದಿದೆ.[೧೦೪] ಕ್ರಿ.ಶ.೧೫೨೯ರ ಶಾಸನವು ಕನ್ನಿಸೆಟ್ಟಿ ಪಿಚಾರಿಸೆಟ್ಟ ಮತ್ತು ಇತರರು ವೊಳಕೋಟೆಯ ರೆಂಮುಜೆಡಿಯ ಬಳಿಯ ಮಡುವಿನ ಒಂದು ಖಂಡುಗ ಹೊಲಗದ್ದೆಯನ್ನು

ತೆಗೆದುಕೊಂಡು ಅದರಲ್ಲಿ ರಾಮಚಂದ್ರ ದೇವಸ್ಥಾನದ ಭಾಗವನ್ನು ಕಳೆದು ಉಳಿದ ಭಾಗವನ್ನು ವಿರೂಪಾಕ್ಷದೇವರಿಗೆ ದಾನವಾಗಿ ಕೊಟ್ಟರು ಎಂಬ ವಿಷಯವನ್ನು ದಾಖಲಿಸಿದೆ.[೧೦೫]

ವಿಜಯನಗರ ಸಾಮ್ರಾಜ್ಯದ ಶ್ರೀವೀರಬುಕ್ಕರಾಯ ಆಳುತ್ತಿರುವಾಗ, ಮದ್ದೂರಿನ ಮಹಾಜನಗಳು, ಮಾಯಿಸೆಟ್ಟಿ, ಕೇತಮಲ್ಲಸೆಟ್ಟಿಯರನ್ನೊಳಗೊಂಡ ನಾಡ ಸಮಸ್ತರು ಮತ್ತು ಹಲವು ಸಮಸ್ತ ಪ್ರಜೆಗಳೂ ಸೇರಿ ತಮ್ಮೊಳಗೆ ಒಪ್ಪಂದ ಮಾಡಿಕೊಂಡು ಮದ್ದೂರ ದೇಸಿನಾಥ ದೇವರಿಗೆ ನಿತ್ಯಾಹಾರಕ್ಕಾಗಿ ಮತ್ತು ವೇದಪಾರಾಯಣಕ್ಕಾಗಿ ಗದ್ದೆ, ಹೊಲ, ತೋಟವನ್ನು ಕೊಟ್ಟರು ಎನ್ನುವ ವಿಷಯವನ್ನು ಮದ್ದೂರು ಶಾಸನ ತಿಳಿಸುತ್ತದೆ.[೧೦೬] ಇದೇ ರಾಜನ ಆಳ್ವಿಕೆಯಲ್ಲಿ(ವೀರಬುಕ್ಕರಾಯ) ಕುಮಾರ ಕಂಪಂಣವೊಡೆಯರು ಪೃಥ್ವಿರಾಜ್ಯಂಗೈಯುತ್ತಿರಲು, ಮಾಂಬಳ್ಳಿಯಾದ ಹರಿಹರನಾಥ ಪಟ್ಟಣದ ಶ್ರೀ ವೈದ್ಯನಾಥದೇವರ ದೇವದಾನಕ್ಕೆ ಬಿಟ್ಟ ಧರ್ಮಶಾಸನವಿದು. ಅಂಡಾರಸೆಟ್ಟಿ, ಕಾಳಿಸೆಟ್ಟಿಯರ ತೆಂಗಿನತೋಟ, ಚತುಸೀಮೆಯನು ಮಾರಿಸೆಟ್ಟಿ, ದೇವಣ್ಣ ಸೆಟ್ಟಿಯರು ಕೊಂಡು ವೈದ್ಯನಾಥದೇವರ ಅಮೃತಪಡಿಗೆ, ದೀವಿಗೆಗೆ ತೋಟವನ್ನು ಬಿಟ್ಟಂತಹ ಧರ್ಮಶಾಸನವಿದು.[೧೦೭]

ಶಾಲಿವಾಹನ ಶಕವರ್ಷ ೧೪೫೩ನೆಯ ಖರ, ಜ್ಯೇಷ್ಠ, ಶು.೧ಕ್ಕೆ ಸರಿಯಾಗಿ ಅಚ್ಯುತರಾಯವೊಡೆಯವೊಡೆಯರ ಕಾಲದಲ್ಲಿ ಉಭಯ ನಾನಾದೇಶ ಸೆಟ್ಟಿ ಪಟ್ಟಣಸ್ವಾಮಿಗಳು ಬಿಸಿಲಹಳಿ ಕಣಿವೆಯ ವೀರಭದ್ರದೇವರಿಗೆ ಕೆಲವು ತೆರಿಗೆಗಳನ್ನು ಬಿಟ್ಟ ಉಲ್ಲೇಖ ಈ ಶಾಸನದಲ್ಲಿದೆ.[೧೦೮] ದೇವರಾಯನ ಮಹಾಪ್ರಧಾನಿಯಾದ ಅಂಣಪ್ಪ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವ ಕಾಲದಲ್ಲಿ ಬಸರೂರ ಪಡುವಕೇರಿಯ ಬಳೆಗಾರ ಬಳಬಿಜ್ಜನ ಬೆಂಮಸೆಟ್ಟಿ ನಾರಣಸೆಟ್ಟಿಯು ತನಗೆ ಬ್ರಹ್ಮಾದಾಯದಾಗಿ ಬಂದಿದ್ದ ಕುಂದಾಪುರ ಬಳಿಯ ಕಂದಾಉರದ ಸ್ಥಳದಲ್ಲಿನ ಭೂಮಿಯನ್ನು ಕುಂದೇಶ್ವರ ದೇವರಿಗೆ ಮತ್ತು ಅಲ್ಲಿನ ಒಂದು ಮಠದಲ್ಲಿ ಊಟ ಮಾಡುವ ಒಂಭತ್ತು ಮಂದಿ ಬ್ರಾಹ್ಮಣರಿಗೆ ಮತ್ತು ಮಹಾದೇವರ ಕೆರೆಯ ಸಮೀಪ ಅರಳಿಕಟ್ಟೆಯಲ್ಲಿ ಕುಡಿವ ನೀರನ್ನು ಎರೆಯುವ ಬ್ರಾಹ್ಮಣನಿಗೆ ಅಕ್ಕಿ, ಭತ್ತ ಮತ್ತು ಭೂಮಿಯನ್ನು ದಾನಕೊಟ್ಟ ವಿವರವಿದೆ.[೧೦೯]

ವಿಜಯನಗರ ಅರಸರ ಕಾಲದಲ್ಲಿ ಬಾರಕೂರ ಬಹಳ ಪ್ರಸಿದ್ಧವಾದ ರಾಜ್ಯವಾಗಿತ್ತು. ಇಲ್ಲಿನ ವ್ಯಾಪಾರಿಗಳು ಇಡೀ ರಾಜ್ಯದಲ್ಲಿ ಹೆಸರಾಗಿದ್ದರು ಮತ್ತು ಪ್ರಭಾವಶಾಲಿಯಾಗಿದ್ದರು. ಇಮ್ಮಡಿ ದೇವರಾಯನ ಅವಧಿಯಲ್ಲಿಯೂ ಬಾರಕೂರು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತಲ್ಲದೆ,

ಶುದ್ಧ ಶೈವ ಧರ್ಮದ ಪ್ರಮುಖ ಕೇಂದ್ರವಾಗಿತ್ತೆಂದು ಡಾ.ಕಲಬುರ್ಗಿಯವರು ಹೇಳುತ್ತಾರೆ. ಈ ನಗರದಲ್ಲಿ ೧೦ ಕೇರಿಗಳಿದ್ದವೆಂದೂ ಪ್ರತಿಯೊಂದು ಕೇರಿಯ ವರ್ತಕರೂ ತಮ್ಮ ತಮ್ಮ ಕೇರಿಗಳಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿಕೊಂಡು ಅವಕ್ಕೆ ಯಥೇಚ್ಛವಾಗಿ ದಾನ ಗಳನ್ನು ನೀಡಿರುವ ಉಲ್ಲೇಖ ಅನೇಕ ಶಾಸನಗಳಲ್ಲಿವೆ. ಈಗಲೂ ಸಹ ಈ ದೇವಾಲಯಗಳು ವಿಶಾಲವಾದ ಪ್ರಾಂಗಣ, ಮಂಪಟಗಳು, ಸುಂದರವಾದ ವಿನ್ಯಾಸ ಕುಸುರಿ ಕಲೆಗಳಿಂದ ಕೂಡಿವೆ. ಈ ಮೇಲಿನ ಕೆಲವು ಶಾಸನಗಳಿಂದ ಬಾರಕೂರು ರಾಜ್ಯದ ವರ್ತಕರ ಧಾರ್ಮಿಕ ಮನೋಭಾವನೆಯನ್ನು ಅರಿಯಬಹುದು.

ವಿಜಯನಗರ ಕಾಲದ ಶಾಸನದಲ್ಲಿ ಶ್ರೀ ಗಿರಿಸೆಟ್ಟಿಯ ಮಗ ಚಿಕ್ಕಣ್ಣಸೆಟ್ಟಿಯಿಂದ ಕಂಬವನ್ನು ಸ್ಥಾಪಿಸಿದ ವಿವರ ಸಿಗುತ್ತದೆ. ಈ ಸೆಟ್ಟಿಯರು ಬಸವಣ್ಣ ದೇವಾಲಯದಲ್ಲಿ ಕಂಬವನ್ನು ಸ್ಥಾಪಿಸಿರುವರು.[೧೧೦] ಅಚ್ಯುತದೇವರಾಯನು ವಿಜಯನಗರವನ್ನು ಆಳುತ್ತಿದ್ದಾಗ ವಿಠಲದೇವರ ದೇವಾಲಯದ ಆವರಣದಲ್ಲಿ ಉತ್ತರದಿಕ್ಕಿನಲ್ಲಿ ಕಟ್ಟಿದ್ದ ನಾಲ್ಕು ಅಂಕಣದಲ್ಲಿ ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ವಾಣಿಜ್ಯ ವೈಶ್ಯನಗರದ ಶೆಟ್ಯಣದ ರುಶಿಗೋತ್ರದ ತಿಪ್ಪಿಸೆಟ್ಟಿಯ ಮಗ ಗಂಧದ ತಿಪ್ಪಿಸೆಟ್ಟಿಯು ೧೨ ಆಳ್ವಾರರು ಮತ್ತು ತಿರುಕಂಚಿನಮಬಿಯಾಳ್ವಾರರ ಒಂದು ವಿಗ್ರಹವು ಸೇರಿದಂತೆ ೧೩ ವಿಗ್ರಹಗಳನ್ನು ಪ್ರತಿಷ್ಠೆ ಮಾಡುತ್ತಾನೆ. ಈ ದೇವರುಗಳ ನಿತ್ಯ ನೈವೇದ್ಯ ಮತ್ತು ಹೂವಿನ ದಂಡೆ ಸರಬರಾಜಿನ ವೆಚ್ಚಕ್ಕಾಗಿ ೧೦೦ ವರಹ ಗದ್ಯಾಣಗಳನ್ನು ಪುದುವಟ್ಟಾಗಿ ನೀಡಿರುತ್ತಾನೆ. ಈ ಶಾಸನವು ಈ ಕೆಳಗಿನಂತಿದೆ.

೧ ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೪೫೬ ಜನೆಯ ಜಯಸಂವಛರದ ಶ್ರಾವಣ ಶು ೧೨ ಬು ಲೂ ಶ್ರೀಮತು ಶ್ರೀಮ(೦)ನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀವೀರ ಅಚ್ಯುತದೇವ ಮಹಾರಾಯರು ಪೃಥ್ವೀರಾಜ್ಯಂಗೆಯಿ ಉತ್ತಂ ಯಿರಲು ಶ್ರೀ ವಿಠಲದೇವರ

೨ ಸ್ತಾನದಲು ಆವರಣದ ಒಳಗೆ ಬಡಗಣ ಭಾಗದಲು ಕಟ್ಟಿ ಇದ್ದ ನಾಲ್ಕು ಅಂಕಣದೊಳಗೆ ವಾಣಿಜ್ಯ ವೈಶ್ಯ ನಗರದ ಶೆಟ್ಯಣದ ರುಶಿಗೋತ್ರದ ಅಧಿಕಾರಿಯ ತಿಪ್ಪಿಸೆಟ್ಟರ ಮಗ ಗಂಧದ ತಿಪ್ಪಸೆಟ್ಟಿಯರು ಅಚ್ಚುತರಾಯ ಮಹಾರಾಯರಿಗೆ ಪು(೦)ಣ್ಯವಾಗಬೇಕೂ ಎ೦

೩ ದು ಪ್ರತಿಷ್ಠೆಯ ಮಾಡಿದ ಆಳ್ವಾರದೇವರು ೧೨ ತಿರುಕಚಿನಂಬಿಯಾಳ್ವಾರು ೧ ಉಭಯಂ ದೇವರು ಹದಿಮೂಱು ದೇವರಿಗೆ ನಿತ್ಯದೀಪಾರಾಧನೆ ನೈವೇದ್ಯ ಹೂವಿನ ದಂಡೆಯೂ

ಶ್ರೀವಿಠಲದೇವರ ಅಮ್ರುತಪಡಿಯ ಕಟ್ಟಳೆಯ ವೊಳಗೆ ಸಲುವ ಕಟೆಳೆಗಾಗಿ ಶ್ರೀವಿಠಲ ದೇವರ ಭಂಡಾರಕೆ ಪುಲಿವಟೆ ಆಗಿ ಸಮ

೪ ರ್ಪಿಸಿದ ರೊಕ್ಕ ವರಹ ಗ ೧೦೦ ಉ ವರಹಂನು ಕೊಟ್ಟು ದೇವರ ಗುಡಿಯಲೂ ಮಾಡಿಸಿದ ಪುಲಿವೆಟ್ಟು ಕಟಳೆ ಅಕ್ಕಿಪಡಿ ಹದಿಮೂಱು ಪಡಿಗೆ ಸಲುವ ಪ್ರಸಾದ ಬಟ್ಟಲು ೩೬ ದೀಪಾರಾಧನೆಗೆ ಯೆಂಣೆ ಪಡಿವೊಂದೂ ಅಕ್ಕಿ ಹೂವಿನ ದಂಡೆ ೧೩ ಇ ಕಟ್ಟಳೆ ಪ್ರಮಾಣಿನಲು ದೇವಸ್ತಾನದಲೂ ನಡಸು(ವ)

೫ ಧರ್ಮಕೆ ಆರು ತಪಿದರೂ ಶ್ರೀ ವಿಠಲದೇವರ ಪಾದಕೆ ತಪಿದವರು । ಗೋಹತ್ಯ ಬ್ರಂಹ್ಮಹತ್ಯ ಮಹಾಪಾತಕವ ಮಾಡಿದ ಪಾಪಕೆ ಪೋಗಲುಳವರು ॥ ಶ್ರೀ[೧೧೧]

ಗುಹಾಂತರ ಗಂಗಾಧರೇಶ್ವರ ದೇವಾಲಯ ತುಂಬಾ ವಿಸ್ತಾರವಾಗಿದ್ದು, ಕಾಲ ಕಾಲಕ್ಕೆ ಜೀರ್ಣೋದ್ಧಾರಗೊಂಡಿದೆ. ಗಂಗಾಧರೇಶ್ವರ ದೇವಾಲಯಕ್ಕೆ ಎರಡು ದ್ವಾರ ಬಾಗಿಲಿದ್ದು ಭಕ್ತಾದಿಗಳು ಬೆಟ್ಟದ ಪಾದದಿಂದ ಹತ್ತಿ ಬಂದಾಗ ನೇರವಾಗಿ ಉತ್ತರ ಬಾಗಿಲಿನಿಂದ ಪ್ರವೇಶವಾಗುತ್ತಾರೆ. ಗಂಗಾಧರೇಶ್ವರ ವರ್ಷಕ್ಕೆ ಒಂದು ಸಾರಿ ಗಿರಿಪ್ರದಕ್ಷಿಣೆ ಮಾಡುತ್ತಾನೆ. ಗಂಗಿನಪುರ, ಐಸಂಪಾಳ್ಯ, ಗೌರಪಾಳ್ಯ, ಭದ್ರೀಪಾಳ್ಯದ ಭಕ್ತಾದಿಗಳು ಈ ಗಿರಿಪ್ರದಕ್ಷಿಣೆ ಸೇವೆಯನ್ನು ಮಾಡುತ್ತಾರೆ. ಸುಮಾರು ೨೬೫ ಮಂಟಪಗಳಲ್ಲಿ ಸ್ವಾಮಿಗೆ ಪೂಜೆ ಸಲ್ಲುತ್ತದೆ. ಗಿರಿಪ್ರದಕ್ಷಿಣೆ ಮುಗಿಸಿಕೊಂಡು ತೋಪಿನ ಗಣಪತಿ ಹತ್ತಿರ ಸ್ವಾಮಿಯನ್ನು ಬಿಜಯಂಗೈಸಿ ಸಂಜೆ ಶಿವಗಂಗೆಯ ಮಕ್ಕಳು ಊದುಗಡ್ಡಿ ಹಂಚಿಕೊಂಡು ಹೋಗಿ, ಕರೆದುಕೊಂಡು, "ಕುದುರೆ ವಾಹನ"ದಲ್ಲಿ ಬಂದು ಉತ್ಸವದೊಂದಿಗೆ ರಾತ್ರಿ 'ಅಗಸ್ತ್ಯೇಶ್ವರ ತೀರ್ಥದಲ್ಲಿ' ಗಂಗಾಸ್ನಾನ, ಸಂಪ್ರೋಕ್ಷಣೆ ನಡೆಯುತ್ತದೆ. ಗಂಗಾಧರೇಶ್ವರ ಗುಹೆ ಸೇರುವಾಗ ರಾತ್ರಿ ೧೦ ಗಂಟೆ ಆಗುತ್ತದೆ.

ಗಿರಿಪ್ರದಕ್ಷಿಣೆ ಸೇವೆಗೆ ಶಿವಗಂಗೆ ಪೇಟೆ ಮನೆ ಶೆಟ್ಟರ ವಂಶದವರು ಮಾಡಿಸಿರುವ ಪಲ್ಲಕ್ಕಿ ಬಗ್ಗೆ ಶಾಸನ ಪ್ರಕಟವಾಗಿದ್ದು ಪಲ್ಲಕ್ಕಿ ನಿರ್ಮಾಣದ ಮೇಲ್ವಿಚಾರಣೆ ಮಾಡಿದ ಶಿಲ್ಪಿ ಹೆಸರಿದೆ. ಅಗಸ್ತ್ಯತೀರ್ಥದ ಮುಂಭಾಗ ಗೋಪುರದಲ್ಲಿ ಪೂರ್ವಕಂಬದ ಮೇಲಿರುವ ಶಾಸನ ಸಮಕಾಲೀನದ್ದು. ಅದೇ ದೇವಸ್ಥಾನದ ಮಾಳಿಗೆ ಗುಂಡಿನ ದಕ್ಷಿಣಾಭಿಮುಖದ ಶಾಸನ.[೧೧೨]

೧ ಶುಭಮಸ್ತು ॥ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ

೨ ೧೪೫೦ನೆಯ ಸರ್ವಧಾರಿ ಸಂವತ್ಸರದ ಚೆಯಿತ್ರ ಶ್ರೀಕೃಷ್ಣರಾಯನ ಕಾ

೩ ಲದಲಿ ಚೆಂನಮಲಿಸೆಟಿಯರ ಮಕ್ಕಳು ಚೆಂನಣ ಸೆಟಿಯರು ಮಾಡಿ

೪ ಸಿದ ಪಲ್ಲಕ್ಕಿ ಪ್ರದಕ್ಷಿಣೆ ವಿಜಯಾಪುರದ ರಾಮಚಂದ್ರ ಪಂಡಿತರ

೫ ಮಕ್ಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ಶ್ರೀ ಶ್ರೀ ಶ್ರೀ

ಕ್ರಿ.ಶ.೧೫೨೮ರ ಕಾಲಮಾನದ ಈ ಶಾಸನ ಕರ್ನಾಟಕ ರಾಜ್ಯರಮಾರಮಣ ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಚೈತ್ರ ಬಹಳ ಚನ್ನಮಲ್ಲ ಶೆಟ್ಟರ ಮಕ್ಕಳು ಚನ್ನಶೆಟ್ಟರು ಮಾಡಿಸಿದ ಪಲ್ಲಕ್ಕಿಯ ಪ್ರದಕ್ಷಿಣೆ. ಇಲ್ಲಿ ಪ್ರದಕ್ಷಿಣೆ ಎಂದರೆ (ಗಿರಿ) ಪ್ರದಕ್ಷಿಣೆ, ಸ್ವಾಮಿ ಗಿರಿ ಪ್ರದಕ್ಷಿಣೆ ಮೊದಲಿನಿಂದ ನಡೆದು ಬಂದ ಸೇವೆ ಈ ಸೇವೆಗೆ ವಿಜಯಾಪುರದ ರಾಮಚಂದ್ರ ಪಂಡಿತರ ಮಕ್ಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ಅರ್ಥಾತ್ ಮೇಲ್ವಿಚಾರಣೆಯಲ್ಲಿ ಪಲ್ಲಕ್ಕಿ ಸಿದ್ಧವಾಗಿದೆ. ಈಗ ನಮಗೆ ನೋಡಲು ಆ ಪಲ್ಲಕ್ಕಿ ಉಳಿದಿಲ್ಲ. ಗಂಗಾಧರೇಶ್ವರ ಜಾತ್ರಾ ಸಂದರ್ಭದಲ್ಲಿ ಉಪಯೋಗಿಸುವ ರುದ್ರಾಕ್ಷಿ ಮಂಟಪದ ಮೇಲೆ ಲಿಖಿತವಾಗಿರುವ ಶಾಸನ ಪಾಠದ ಬಗ್ಗೆ ಹೇಳಿದವರು (ನಂಜುಂಡಸ್ವಾಮಿಯವರಿಗೆ) ಶಿವಗಂಗೆ ಶೆಟ್ಟರ ಮನೆತನದವರಾದ ಶ್ರೀ ಲೋಕೇಶ್ವರರು. ಉತ್ಸವ ದಿನ ಬಿಟ್ಟು ಬೇರೆ ದಿನ ಈ ರುದ್ರಾಕ್ಷಿ ಮಂಟಪವನ್ನು ನೋಡಲು ಸಾಧ್ಯವಿಲ್ಲ. ಈ ಮಂಟಪದ ಮೇಲೆ ಈ ಶಾಸನ ಲಿಖಿಸಲ್ಪಟ್ಟಿದೆ.

ಶ್ರೀ ಶಿವಗಂಗೆ ಗಂಗಾಧರೇಶ್ವರ ಸ್ವಾಮಿ

ಯವರ ಸನ್ನಿಧಿಗೆ ಮೈಹಿಶೂರ ಸಂಸ್ಥಾನದ

ಆಳಿದ ಮಹಾಸ್ವಾಮಿ ಚಾಮ

ರಾಜ ಒಡೆಯರ ಧರ್ಮಪತ್ನಿ

ಯಾದ ಚಲುವ ರಾಜಮ್ಮ ರಾಣಿಯವರ

ಸೇವಾರ್ಥ ರುದ್ರಾಕ್ಷಿ ಮಂಟಪಾ

ಸ್ವಬಾನು ಸಂ ಶ್ರಾವಣ ಬ ೭

ಚಕ್ರವರ್ತಿ ಇಮ್ಮಡಿ ದೇವರಾಯನ ಆಜ್ಞೆ ಮೇರೆಗೆ ಮಹಾಪ್ರಧಾನ ಅಣ್ಣಪ್ಪ ಒಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದ ಕಾಲದಲ್ಲಿ ಕಂದಾವರದ ಅಧಿವಾಸದೊಳಗಿನ ಭೂಮಿಯನ್ನು ಬಳೆಗಾರ ಬಳಿಯ ಬಳ ವಿಜ್ಜುನ ಬೆಂದುಸೆಟ್ಟಿ ನಾರಣಸೆಟ್ಟಿ ಮಾಡಿದ ದಾನದ ವಿಷಯವನ್ನು

ಒಂದು ಶಾಸನ ತಿಳಿಸುತ್ತದೆ.[೧೧೩] ಇದರ ಆದಾಯದಲ್ಲಿ ಕುಂದಾಪುರದ ಕುಂದೇಶ್ವರ ದೇವರಿಗೆ ಎರಡು ಮುಡಿಬತ್ತ ಮತ್ತು (ಬಸರೂರಿನ) ಮಠವೊಂದರಲ್ಲಿ ಪ್ರತಿದಿನ ಒಂಭತ್ತು ಮಂದಿ ಬ್ರಾಹ್ಮಣರ ಭೋಜನ ವ್ಯವಸ್ಥೆಗಾಗಿ ನಿರ್ದೇಶಿಸಲಾಯಿತು. ಕ್ರಿ.ಶ.೧೪೩೬ ಸೆಪ್ಟಂಬರ್ ೨೦ ಗುರುವಾರದಂದು ಮಾಡಿದ ಈ ಅಂಕಿತ ಹೊತ್ತ ಶಾಸನ ದೊರೆತಿರುವುದು ಇಲ್ಲಿಯ ದೊಡ್ಡ ಕೆರೆ ಕಟ್ಟೆಯ ದಕ್ಷಿಣದಲ್ಲಿ ಮನೆಯೊಂದರ ಹಿತ್ತಲಿನಲ್ಲಿ.

ಬಸರೂರಿನ ಬರಿಯಪ್ಪ ಎನ್ನುವವರು ಕ್ರಿ.ಶ.೧೪೭೨ರ ವೇಳೆಗೆ ಕಾಶಿಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿಕೊಂಡು ಊರಿಗೆ ಮರಳಿದರು. ಬರುವಾಗ ಜೊತೆಯಲ್ಲಿ ಕಾಶಿ ವಿಶ್ವನಾಥನ ಲಿಂಗವನ್ನು ತಂದರು. ಮಾರ್ಗದಲ್ಲಿ ಲಿಂಗಕ್ಕೆ ದಿನಂ ಪ್ರತಿ ಪಂಚ ಪರ್ವಪೂಜೆ ಸಲ್ಲಿಸುತ್ತಾ ಬಂದರು. ಈ ವಿಚಾರವನ್ನು ತಿಳಿಸುವ ಶಾಸನವೊಂದಿದೆ.[೧೧೪]

ಕ್ರಿ.ಶ.೧೪೭೨ ಆಗಸ್ಟ್ ೨೬, ಬುಧವಾರದ ತೇದಿ ವಿವರವಿರುವ ಈ ಶಾಸನವು ಚಕ್ರವರ್ತಿ ವಿರೂಪಾಕ್ಷನ ಕಾಲದ್ದು. ಆಗ ವಿಠ್ಠರಸವೊಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದ. ಬರಿಯಪ್ಪ ತಂದ ಕಾಶಿ ವಿಶ್ವನಾಥ ಲಿಂಗಕ್ಕೆ (ಒಂದು ಗುಡಿ ನಿರ್ಮಿಸಿ ಅದರ) ಪೂಜಾ ವಿನಿಯೋಗಾರ್ಥ ಎಪ್ಪತ್ತು ಮುಡಿ ಉತ್ಪತ್ತಿ ಭೂದಾನವನ್ನು ಪಡುವ ಕೇರಿಯ ದುಗ್ಗಣಸೆಟ್ಟಿ ಹಾಗೂ ಆತನ ಮೂವರು ಸೋದರಳಿಯಂದಿರು ಕೂಡಿ ಮಾಡಿದರು.[೧೧೫] ಕ್ರಿ.ಶ.೧೫೩೧ ನವೆಂಬರ್ ೯ ಗುರುವಾರಕ್ಕೆ ಸೇರಿದ ಇಲ್ಲಿನ ಶಾಸನವೊಂದು[೧೧೬] ವಿಜಯನಗರ ಚಕ್ರವರ್ತಿಯನ್ನಾಗಲಿ ಮತ್ತು ಬಾರಕೂರಿನ ರಾಜ್ಯಪಾಲನನ್ನಾಗಲಿ ಹೆಸರಿಸುವುದಿಲ್ಲ. ಇದೊಂದು ದಾನಶಾಸನ. ಅಜ್ಜಿಯ ಸದಾನಂದ ಸೆಟ್ಟಿ ಮಹಾಲಿಂಗೇಶ್ವರ (ನಖರೇಶ್ವರ) ದೇವಾಲಯದಲ್ಲಿ ದುರ್ಗಾದೇವಿಯನ್ನು ಪ್ರತಿಷ್ಠಾಪಿಸಿ ಎರಡೂ ದೇವರುಗಳ ಪೂಜೆ, ಉತ್ಸವ ಇತ್ಯಾದಿಗಳಿಗಾಗಿ ನವರಾತ್ರಿ, ಕಾರ್ತಿಕ ವಿಶೇಷ ಪೂಜೆಗಳಿಗಾಗಿ ಬ್ರಾಹ್ಮಣ ಸುವಾಸಿನಿಯರ ಭೋಜನಕ್ಕಾಗಿ ಅಪಾರವಾದ ಭೂಮಿ ಮತ್ತು ಹೊನ್ನಿನ ದಾನಗಳ ವಿಚಾರ ಇಲ್ಲಿದೆ. ಇದರ ಜೊತೆಯಲ್ಲಿ ಅಜ್ಜಿಯ ದೇಉಸೆಟಿಯು 'ಗುಪ್ಪೆಯ ಬಾಲುಗೊಟಗೆ ಜೀರ್ನೋದ್ಧಾರಕೆ' ವರಹ ಗದ್ಯಾಣ ೨೫ನ್ನು ಕೊಟ್ಟಿರುವ ವಿಚಾರವಿದೆ.[೧೧೭]

ಗುಪ್ಪೆಯ ಹಾದಿ ಎಂದು ಹೇಳುವ ಸ್ಥಳವೊಂದು ಬಸರೂರಿನಲ್ಲಿದೆ. ಅಕ್ಕತಂಗಿಯರ ಗುಂಡಿನ ಪಶ್ಚಿಮಕ್ಕೆ ಶಂಕರದೇವರ ಬಾಗಿಲಲ್ಲಿ, ಹಾಳು ದೇವಾಲಯದ ಕಂಬವೊಂದರಲ್ಲಿ

ಇರುವ ಈ ಶಾಸನವು ಮಲ್ಲಿಕಾರ್ಜುನ ದೇವರಿಗೆ ದೀಪವನ್ನು ಉರಿಸುವುದಕ್ಕಾಗಿ ಒಂದು ಅಂಗಡಿ ಮನೆಯನ್ನು ದಾನ ಮಾಡಿದು ದನ್ನು ಉಲ್ಲೇಖಿಸಿದೆ. ಈ ಶಾಸನ ಪಾಠ ಹೀಗಿದೆ.[೧೧೮]

೧ ಮಲಿಕಾರ್ಜುನ ದೇವರ

೨ ದೀಪರಧನೆಗೆ ೧ ಅ(ಂ)ಗಡಿಯ ಮ

೩ ನೆಯವ ಮಡಿದರು

೪ ದೇವರಂಗ

೫ ಡಿಯ ಸೆಟಿ

೬ ಪಟಣಸಮಿ

೭ ಗಳು

ದೇವರಾಯರ ನಿರೂಪದಿಂದ ಬಾರಕೂರು ರಾಜ್ಯವನ್ನು ನರಸಿಂಹ ದೇವವೊಡೆಯರು ಪ್ರತಿಪಾಲಿಸುತ್ತಿರುತ್ತಾರೆ. ಈ ಅವಧಿಯಲ್ಲಿ ಕೋಟೆಯಕೇರಿಯ ಮಾರ್ಕಡೇಶ್ವರ ಸಂನಿಧಿಯಲ್ಲಿ ಹಿಂಗುಳದೇವಿಗುಡಿಗೆ ದಾನ ನೀಡಿದ ವಿಷಯದ ಶಾಸನ ಇದಾಗಿದೆ. ಹಿಂಗುಳದೇವಿಯನ್ನು ಪ್ರತಿಷ್ಠಾಪಿಸಿ ಪಂಚಲಿಂಗದೇವರ ಭಂಡಾರದಿಂದ ಅಕ್ಕಿ ಮೂಡೆಯನ್ನು, ಭೂಮಿ ತೆರಿಗೆ, ಅಂಗಡಿ ತೆರಿಗೆಯನ್ನು ದಾನ ನೀಡಿ ಮಧ್ಯಾಹ್ನದ ಊಟಕ್ಕೆ ಬಳಸಲು ನೀಡಲಾಗಿದೆ. ಹಾಗೆಯೇ ರಾತ್ರಿಯ ಊಟಕ್ಕೂ ದಾನ ನೀಡಿದೆ. ಒಳಮನ್ತ ಒಡೆಯರ ತೋಟದೊಳಗಿನ ಉತ್ಪತ್ತಿಯನ್ನೂ ದೇವರಿಗಾಗಿ ನೀಡಲಾಗಿದ್ದು, ಇದಕ್ಕೆ ತಳುವಪ್ಪರಸ, ಸಂದಗಿರಿಸೆಟಿ, ಸಿರೆಸೆಟಿ ಮತ್ತು ರತುನಸೆಟ್ಟಿಯರು ಒಪ್ಪ ಹಾಕಿರುವರು.[೧೧೯]

ಕೃಷ್ಣರಾಯಮಹಾರಾಯನು ವಿದ್ಯಾನಗರದ ಸಿಂಹಾಸನದಲ್ಲಿ ರಾಜ್ಯವನ್ನಾಳುವ ಕಾಲದಲ್ಲಿ ಕಳಸದ ಯೇಳು ಮಲೆನಾಡಿನ ಒಳಗಿದ್ದ ಹೋರಿನಾಡಿನ ಕಂದಲ ಬಳಿಯ ತಂಮ್ಮಣ್ಣ ಹೆಗ್ಗಡೆಯ ತಮ್ಮ ಮಲ್ಲುಹೆಗ್ಗಡೆಯು ಸೂರಪ್ಪ ಸೇನಬೋವರ ಅಳಿಯನಾದ ರಾಮಚಂದ್ರದೇವನ ಮಗನಾದ ತಿಮ್ಮರಸನಿಗೆ ಗುರುಳಿಕೆ ಬೆದೆಯಮಕ್ಕಿಯ ಗ್ರಾಮವನ್ನು ಕ್ರಯದಾನವಾಗಿ ನೀಡಿರುವನು. ಆ ಗ್ರಾಮದ ನಾಲ್ಕು ದಿಕ್ಕಿನ ಸೀಮೆಯ ವಿವರವನ್ನು ನೀಡಲಾಗಿದೆ. ಈ

ಗ್ರಾಮದಿಂದ ಬರುವ ಆದಾಯದ ಸ್ವಲ್ಪ ಭಾಗವನ್ನು ಶ್ರೀಕಳಸನಾಥ ದೇವರ ಸೇವೆಗಾಗಿ ದಾನ ನೀಡಲಾಗಿದ್ದು, ಗ್ರಾಮದ ಹಲವು ರೀತಿಯ ತೆರಿಗೆಗಳನ್ನು ಈ ಸಮಯದಲ್ಲಿ ಮನ್ನಾ ಮಾಡಲಾಗಿದೆ. ಇದಕ್ಕೆ ಸಾಕ್ಷಿಯಾಗಿ ಅತಿಗೊಡಗೆಯ ಚೌಡಪ್ಪ, ಅಡಕೋಡ ಸಂಣುಹೆಗ್ಗಡೆ, ಮಾವಿನಕೆರೆಯ ದೇವರ ಹೆಬ್ಬಾರ, ಗಂಗೆದೇವರಸ, ವಿರಾಳುಸೆಟ್ಟಿ, ನಂದನಾರಣ ಸೆಟ್ಟಿಯರ ಒಪ್ಪವಿದೆ. ಕೂಚಲದೇವಿ, ಅಡಕೋಡ ಬ್ರಹ್ಮದೇವರ ಉಲ್ಲೇಖವೂ ಇದೆ. ಕೃಷ್ಣದೇವರಾಯರು ಹಾಕಿಸಿದ ಪ್ರಥಮ ಕನ್ನಡ ಶಿಲಾಶಾಸನವೆಂಬ ಹೆಗ್ಗಳಿಕೆ ಈ ಶಾಸನಕ್ಕೆ ಸಲ್ಲುತ್ತದೆ. ಈಗ ಈ ಶಾಸನವಿರುವ ಗದ್ದೆಯನ್ನು ಗುರುಲಕ್ಕಿ ಗದ್ದೆಯೆಂದೇ ಕರೆಯುತ್ತಿರುವುದು ಗಮನಾರ್ಹವಾಗಿದೆ. ಗುರುಳಿಕೆ ಎಂಬ ರೂಪ ಕಾಲಕ್ರಮೇಣ ಜನಗಳ ಬಾಯಲ್ಲಿ ಗುರುಲಕ್ಕಿಯಾಗಿದೆಯೆಂದು ಹೇಳಬಹುದು. ಶಾಸನವನ್ನು ಬರೆದವನು ಸೇನಬೋವ ಹಂಪರಸ.[೧೨೦]

ಶಾಲಿವಾಹನ ಶಕವರ್ಷ ೧೪೫೭ನೆಯ ಮನ್ಮಥ, ವೈಶಾಖ ಶು.೧ಕ್ಕೆ ಸರಿಯಾದ ಕ್ರಿ.ಶ.೩-೪-೧೫೩೫ರಲ್ಲಿ ಅಚ್ಯುತದೇವರಾಯರಿಗೆ ಪುಣ್ಯವಾಗಬೇಕೆಂದು ಪ್ರಧಾನ ತಿರುಮಲರಾಜನ ಕಾರ್ಯಕರ್ತನಾದ ಅಬ್ಬರಾಜು ತಿಂಮಪನು ತಿರುಮಲದೇವಿಯರ ಪಟ್ಟಣ, ವರದರಾಜಂ ಮನಪಟ್ಟಣ, ಕೃಷ್ಣಾಪುರಗಳ ಸೆಟ್ಟಿ ಪಟ್ಟಣಸ್ವಾಮಿಗಳಿಗೆ ಬಿನ್ನಹ ಮಾಡಿಕೊಂಡು ತಿರುಮಲದೇವಿ ಪಟ್ಟಣದ ತಿರುವೆಂಗಳನಾಥದೇವರ ಅಮೃತಪಡಿಗೆ ಮೂಲವೀಸ ಬಿಡಿಸುತ್ತಾನೆ. ಬಿಸಲಹಳ್ಳಿಯ ಕಣಿವೆಯನ್ನು ಹೆಸರಿಸಿದೆ.[೧೨೧]

ಧರ್ಮಪುರಿ ತಾಲೂಕು ಅಧಮಾನ ಕೋಟೆಯ ಕ್ರಿ.ಶ.೧೫೩೦ರ ಅಚ್ಯುತರಾಯನ ಶಾಸನದ "ಶ್ರೀ ಭೈರವದೇವರ ಸಂನಿಧಿಯ ಸಂತೆ ಖಿಲವಾಗಿರಲಾಗಿ, ಪ್ರತಿಹುಟ್ಟಿಸಿ, ಅಳ್ಳು ಅಡಿಕಾಸು ಸಹ ದ್ರವ್ಯ ಮುಖದಿಂ ಬರುವ ಸಂತೆಯಾದಾಯವನ್ನು ದೇವರ ದೀಪಾರಾಧನೆಗೆ" ದತ್ತಿಬಿಟ್ಟಿರುವ ಉಲ್ಲೇಖದಿಂದ ಖಿಲವಾದ ಸಂತೆಗಳನ್ನು ಮತ್ತೆ ಜೀರ್ಣೋದ್ಧಾರ ಮಾಡಿಸುತ್ತಿದ್ದ ವಿಷಯ ಸ್ಪಷ್ಟವಾಗುತ್ತದೆ.[೧೨೨]

ಕೋಗಳಿಯ ವೀರಭದ್ರದೇವರನ್ನು ಕೊಟ್ಟೂರ ತಿಪ್ಪಿಸೆಟ್ಟಿ ಪ್ರತಿಷ್ಠಾಪಿಸಿದ. ಇದರ ನಂದಾದೀಪಕ್ಕಾಗಿ ಮೋಕೆಯ ಬಸೆಟ್ಟಿ, ತಿಪ್ಪಿಸೆಟ್ಟಿ, ಮಾಸಗೆಯ ಗುರುವಾಪ್ಪ, ಮೋದಿನ ಲಿಂಗಿಸೆಟ್ಟಿ ಮೊದಲಾದ ವರ್ತಕರು ದಾನವಾಗಿ ೧ ಹೇರಿಗೆ ೧ ಕಾಸು ಬಿಟ್ಟರು.[೧೨೩] ಕೃಷ್ಣದೇವರಾಯನು ರಾಜ್ಯವಾಳುವಾಗ ಮಲ್ಲಿಶೆಟ್ಟಿಯ ಮಗ ಪರ್ವತ ನಾಯಕನು ತಂದೆ

ತಾಯಿಗೆ ಪುಣ್ಯವಾಗಬೇಕೆಂದು ಬಸವಣ್ಣ ಗುಡಿ ಮುಂದಿನ ದೀಪಸ್ತಂಭವನ್ನು ಮಾಡಿಸಿದಂತೆ ತಿಳಿದುಬರುತ್ತದೆ. ಈ ಶಾಸನದಲ್ಲಿರುವ ವ್ಯಕ್ತಿಗಳ ವಂಶದವರು ಇತ್ತೀಚೆಗೆ ಬಸವಣ್ಣನ ಪ್ರಭಾವಳಿಯನ್ನು ಮಾಡಿಸಿದ್ದು, ಅದರ ಎಡ ಬಲ ಭಾಗದಲ್ಲಿ ಶಾಸನಸ್ಥ ವ್ಯಕ್ತಿಗಳ ಶಿಲ್ಪವನ್ನು ಚಿತ್ರಿಸಿರುವರು. ಇದು ಕ್ರಿ.ಶ.೧೫೧೫ ಮಾರ್ಚ್ ೨೨ ಗುರುವಾರವಾಗುತ್ತದೆ.[೧೨೪]

ಕ್ರಿ.ಶ.೧೩೯೦ರ ಬಾರಕೂರಿನ ದಾಖಲೆಯೊಂದರಲ್ಲಿ ಉಲ್ಲೇಖಗೊಂಡ ಭೂದಾನ ನೀಡಿದ ಬೆಂಮಣಸೆಟ್ಟಿ ಮತ್ತು ಮಾದಸೆಟ್ಟಿಯನ್ನು ಕಂಕಣಿತಿಯ[೧೨೫] ಮಕ್ಕಳು ಎಂದು ದಾಖಲಿಸಿದೆ. ಇಂತಹ ದಾಖಲೆಗಳು ಹಲವು ದೊರಕಿವೆ. ಕೋಟಿಯಕ ಸೆಟ್ಟಿತಿಯ ಮಗ ಕೇಸನ ಮಕಿಯ ತಿರುಮಸೆಟ್ಟಿ ಬಾರಕೂರಿನ ಸೋಮನಾಥ ದೇವರ ದೇವಾಲಯದಲ್ಲಿ ವಿವಿಧ ಸೇವೆಗಳಿಗಾಗಿ ಭೂದಾನ ನೀಡಿದ ದಾಖಲೆಯಿದೆ.[೧೨೬] ಕ್ರಿ.ಶ.೧೩೫೭ರಲ್ಲಿ ಕೋಟೇಶ್ವರ ದೇವರ ಸೇವೆಗಾಗಿ ಮಲೆಯದಣ್ಣಾಯಕನ ಮಂತ್ರಿ ರವಳದೇವನು ಭೂಮಿಯನ್ನು ಖರೀದಿಸಿ ದಾನ ನೀಡಿದ. ಕ್ರಿ.ಶ.೧೩೫೯ರಲ್ಲಿ ಬಾರಕೂರಿನ ತಂಬುಲ ಗೆರೆಯ ಸೋಮನಾಥ ದೇವರ ಸನ್ನಿಧಿಯಲ್ಲಿ ಮಠದ ನಿರ್ಮಾಣ ಮತ್ತು ಅದರ ಖರ್ಚುವೆಚ್ಚಗಳಿಗಾಗಿ ತಕ್ಕ ವ್ಯವಸ್ಥೆ ಮಾಡಲಾಯಿತು. ಕ್ರಿ.ಶ.೧೩೬೦ರಲ್ಲಿ ಮಲೆಯ ದಣ್ಣಾಯಕನು ಬಾರಕೂರು ರಾಜ್ಯವಾಳುವಾಗ ಬಾರಕೂರಿನ ಸೋಮೇಶ್ವರ ದೇವರಿಗೆ ದಾನ ನೀಡಲಾಯಿತು.

ಕ್ರಿ.ಶ.೧೪೪೨ರಲ್ಲಿ ಬಸರೂರು ಪಡುವಕೇರಿಯ ಮಹಾದೇವ ದೇವರ ಸೇವೆಗಾಗಿ ಕೋಟಿಯಣ್ಣ ಸೆಟ್ಟಿ ಎಂಬಾತ ಭೂಕಾಣಿಕೆ ನೀಡಿದ.[೧೨೭] ಮುಂದೆ ಕ್ರಿ.ಶ.೧೪೪೪ರ ವೇಳೆಯ ದಾಖಲೆ[೧೨೮]ಯೊಂದು ಸೆಟ್ಟಿಕಾರರೆಂಬ ವ್ಯಾಪಾರಿ ಸಮುದಾಯದ ಕೆಲಮಂದಿ ನಖರೇಶ್ವರ ದೇವರ ಸೇವೆ, ನೈವೇದ್ಯಗಳಿಗಾಗಿ ಭೂದತ್ತಿ ನೀಡಿದುದನ್ನು ತಿಳಿಸುತ್ತದೆ. ಕ್ರಿ.ಶ.೧೪೪೪ರದೇ ವರ್ಷದಲ್ಲಿ ನಖರರೆಂಬ ವ್ಯಾಪಾರಿ ಸಮುದಾಯದ ವ್ಯಕ್ತಿಗಳು ಮತ್ತು ಸೆಟ್ಟಿಯರ ನಡುವಿನ ರಾಜಿ ವ್ಯವಹಾರದಲ್ಲಿ ಗ್ರಾಮದಲ್ಲಿ ಹೆಚ್ಚಿಸಲಾದ ವಸ್ತು ತೆರಿಗೆಯ ಹತ್ತನೇ ಒಂದು ಭಾಗವನ್ನು ಬಸರೂರಿನ ಮಹಾದೇವ ದೇವಾಲಯದ ಚಿನ್ನದ ಶಿಖರದ ದುರಸ್ತಿ ಮತ್ತು ದೇವರ ಪೂಜೆಗಾಗಿ ಕಡ್ಡಾಯವಾಗಿ ಬಳಸತಕ್ಕುದೆಂದು ತೀರ್ಮಾನಿಸಿದರು.[೧೨೯]

ಕ್ರಿ.ಶ.೧೩೮೦ರಲ್ಲಿ ರಾಜ್ಯಪಾಲರು ಕೊಡಗಿಯ ಶಂಕರನಾರಾಯಣ ದೇವರ ಸೇವೆಗಾಗಿ ದತ್ತಿಯೊಂದನ್ನು ನೀಡಿ, ಆ ಭೂದತ್ತಿಯಿಂದ ಈ ದೇವರ ಸೇವಾ ನಿರ್ವಹಣೆಯ ಎಲ್ಲಾ ಜವಾಬ್ದಾರಿಯೊಂದಿಗೆ ಕಿಮಿಸೆಟ್ಟಿ ಎಂಬಾತನಿಗೆ ವಹಿಸಲಾಯಿತು.[೧೩೦] ಕ್ರಿ.ಶ.ಸುಮಾರು

೧೪೦೦ರ ವೇಳೆಯ ತಾಮ್ರಶಾಸನ[೧೩೧]ವೊಂದರಲ್ಲಿ ಮಟಪಾಡಿಯ ಶ್ರೀ ವೀರಭದ್ರದೇವರು, ಶ್ರೀಮಹಾದೇವರು, ಶ್ರೀಕೃಷ್ಣ ಶ್ರೀಶಂಕರದೇವರು ಒಟ್ಟಾಗಿ ಉಲ್ಲೇಖಿತರಾಗಿದ್ದಾರೆ ಕ್ರಿ.ಶ.೧೪೦೨ರಲ್ಲಿ ಮಾದಾಡಿ ತೊಳಹನು ಶಂಖರ ನಾರಾಯಣ ದೇವರ ಸೇವೆಗೆ ಪ್ರತಿದಿನ ನಿಗದಿತ ಪ್ರಮಾಣದ ಅಕ್ಕಿಯನ್ನು ಕಾಣಿಕೆಯಾಗಿ ನೀಡಿದನು.[೧೩೨] ಮರುವರ್ಷದ ದಾಖಲೆಯೊಂದರಲ್ಲಿ[೧೩೩] ಬ್ರಹ್ಮಾವರದ ಶಂಕರ ನಾರಾಯಣ ದೇವರಿಗೆ ವಿದ್ಯಾರಣ್ಯ ಶ್ರೀಪಾದರ ಶಿಷ್ಯರಾದ ಶಂಕರಾರಣ್ಯ ಶ್ರೀಪಾದರು ದಾನವಿತ್ತುದು ತಿಳಿದುಬರುತ್ತದೆ.

ಕ್ರಿ.ಶ.೧೪೧೭ರ ವಾರಂಬಳ್ಳಿ ಶಾಸನದಲ್ಲಿ[೧೩೪] ಉಲ್ಲೇಖಗೊಂಡ ದಾನಕ್ಕೆ ವಿಷ್ಣುವೋರಂಬಳ್ಳಿ ವಾಸುದೇವ ವೋರಂಬಳ್ಳಿ, ಸೆಟ್ಟಿಕಾರ ರುದ್ರಸೆಟ್ಟಿ ಮತ್ತು ಹರಿಯಪ್ಪ ಸೆಟ್ಟಿ ಎಂಬ ವ್ಯಕ್ತಿಗಳು ಸಾಕ್ಷಿಗಳಾಗಿದ್ದಾರೆ. ದೇವರಾಯ ಮಹಾರಾಯನ ಕಾಲದ ಕ್ರಿ.ಶ.೧೪೪೪ನೇ ಶಾಸನದ ಪ್ರಕಾರ, ಆಮ್ಮಣ್ಣವೊಡೆಯ ಬಾರಕೂರು ರಾಜ್ಯವನ್ನು ಆಳುವಾಗ, ಹಲವಾರ ಸೆಟ್ಟಿಕಾರರು ಬಸರೂರಿನ ಪಡುವಕೇರಿಯ ಭೂಮಿಯನ್ನು ಸಂಕರ ಸೆಟ್ಟಿಯ ಮಗ ನಾರಾಣಸೆಟ್ಟಿಗೆ ಕೊಟ್ಟು, ಆ ಭೂಮಿಯನ್ನು ನಖರೇಶ್ವರ ದೇವರ ಸೇವೆಗೆ ಉಪಯೋಗಿಸಬೇಕು ಎಂದು ಹೇಳಿರುವಲ್ಲಿ, ಸೆಟ್ಟಿಕಾರ ಭಕ್ತಿ, ಶ್ರದ್ಧೆಯ ಮನೋಭಾವ ಅರ್ಥವಾಗುತ್ತದೆ.[೧೩೫] ವಿರೂಪಾಕ್ಷ ಮಹಾರಾಯ ವಿಜಯನಗರ ರಾಜ್ಯವನ್ನು ಆಳುವಾಗ ಕ್ರಿ.ಶ.೧೪೭೨ನೆಯ ವರ್ಷದ ಶಾಸನವಿದು. ವಿಠರಸನು ಬಾರಕೂರು ರಾಜ್ಯವನ್ನು ಆಳುವಾಗ, ನಾಗಣಸೆಟ್ಟಿ, ದೇಉಸೆಟ್ಟಿ, ದುಗ್ಗಣಸೆಟ್ಟಿ ಸಹೋದರರು, ತಿರುಮಲೆನಾಥ ಸೆಟ್ಟರ ಮಗ ಸಿರಿಯಪ್ಪಸೆಟ್ಟಿ ವಾರಾಣಾಸಿಗೆ ಹೋಗಿ ತಂದ ಕಾಶಿ ವಿಶ್ವನಾಥನ ಮೂರ್ತಿಗೆ ಭೂಮಿಯನ್ನು ದಾನ ನೀಡಿದರು. ಅಂದರೆ ವಿಶ್ವನಾಥನ ಪೂಜೆಗಾಗಿ ಭೂಮಿ ನೀಡಿದರು.[೧೩೬]

ಕ್ರಿ.ಶ.೧೫೧೦ರಲ್ಲಿ ಶ್ರೀ ವೀರಪ್ರತಾಪ ಶ್ರೀ ವೀರಭುಜಬಲ ನರಸಿಂಗಮಹಾರಾಯರೂ ವಿಜಯನಗರ ಸಿಂಹಾಸನಾರೂಢರಾಗಿರುವಾಗ, ಇವರ ನಿರೂಪದಿಂದ ಕುರುಗೋಡ ಸೋವಣ ನಾಯಕರ ತಮ್ಮ ಮಲ್ಲಪ್ಪನಾಯಕರು ಬಾರಕೂರ ರಾಜ್ಯವನ್ನು ಆಳುತ್ತಿದ್ದರು. ಬಸರೂರ ಪಡುವಕೇರಿಯ ಮಹಾದೇವರಿಗೆ ಅಮೃತಪಡಿ, ನಂದಾದೀವಿಗೆ, ಅಂಗರಂಗ ವೈಭೋಗಕ್ಕೆ ಹಲರು ಸೆಟ್ಟಿಕಾರರು ಹೊನ್ನನ್ನು ಕಾಣಿಕೆಯಾಗಿ ಮಲ್ಲಪ್ಪವೊಡೆಯರಿಗೆ ಕೊಟ್ಟರು.[೧೩೭] ಕ್ರಿ.ಶ. ೧೫೩೧ರ ಶಾಸನವು ಅಚ್ಯುತದೇವ ಮಹಾರಾಯರು ಆಳುತ್ತಿರುವ ಅವಧಿಯಲ್ಲಿ ಬರೆಸಿದಂತಹುದು. ಕಂಪದೇವರಸ ಅಂಣನವರು ತಿರುಮಲದೇವಿ ಅಮ್ಮನವರ

ಪಟ್ಟಣದ ಗಲುರೇಶ್ವರದೇವರಿಗೆ ಕಡಿಗ ಪೈಯಿರು ಸೇವೆಗಾಗಿ ನೀಡಿದರು. ಈ ದೇವರ ಸೇವೆಗಾಗಿ ವರ್ತಕರೂ ಈ ದಾನದಲ್ಲಿ ಪಾಲುದಾರರಾಗಿದ್ದರು.[೧೩೮] ಇದೇ ಕಾಲದ ಅಂದರೆ ಕ್ರಿ.ಶ.೧೫೩೧ರ ಮತ್ತೊಂದು ಶಾಸನ ಅಚ್ಯುತರಾಯನ ಆಳ್ವಿಕೆಯ ಕಾಲದ್ದು. ಸದಾನಂದಸೆಟ್ಟಿ ಮತ್ತು ದೇವುಸೆಟ್ಟಿಯರು ಮಹಾದೇವ ದೇವರಿಗೆ ಸೇವೆಗೆಂದು ಭೂಮಿ ಮತ್ತು ಹಣವನ್ನು ಕಾಣಿಕೆಯಾಗಿ ನೀಡಿರುವುದನ್ನು ತಿಳಿಸುವ ಶಾಸನವಿದು. ಈ ಶಾಸನವು ಮುಂದುವರೆದು ದೇವಸ್ಥಾನದಲ್ಲಿ ಬ್ರಾಹ್ಮಣರ ಭೋಜನಕ್ಕಾಗಿ ಮತ್ತು ನವರಾತ್ರಿಯ ವೇಳೆಯಲ್ಲಿ ದುರ್ಗಾದೇವಿಯ ಪೂಜೆಗಾಗಿ ಈ ದಾನವನ್ನು ಬಳಸುವಂತೆ ಸದಾನಂದಶೆಟ್ಟಿ ಮತ್ತು ದೇವುಸೆಟ್ಟಿಯರು ಒಪ್ಪ ಹಾಕಿರುವರು.[೧೩೯]

ಈ ಶಾಸನದಲ್ಲಿ ರಾಜನ ಹೆಸರು ಮತ್ತು ಕಾಲವಿಲ್ಲ. ಬಾರಕೂರು ರಾಜ್ಯವನ್ನು ರಾಜರ ಅಪ್ಪಣೆಯಂತೆ ಸದಾಶಿವರಾಯನಾಯಕರು ಆಳುತ್ತಿರುವ ಕಾಲದಲ್ಲಿ ತಿಮ್ಮಣ್ಣಸೆಟ್ಟಿ ಅವರ ಅಣ್ಣ ಚಂಮಣಹೆಗಡೆಯರು ಮಹಾದೇವರ ಪೂಜೆಗಾಗಿ ೩೫೦ ವರಹಗಳನ್ನು ಕಾಣಿಕೆಯಾಗಿ ನೀಡಿದರು.[೧೪೦] ಮಹಾದೇವರ ಗುಡಿ ಪಡುವಕೇರಿಯಲ್ಲಿದೆ. ಶೈವ ದೇವಾಲಯಕ್ಕೆ ನೀಡುವ ದಾನವನ್ನು ತಿಳಿಸುವ ಈ ಶಾಸನಗಳು ಜನರ ಧಾರ್ಮಿಕ ನಂಬಿಕೆಗೆ ಸಾಕ್ಷಿಯಾಗಿವೆ. ಕ್ರಿ.ಶ. ೧೪೩೩ರ ದೇವರಾಯ ಮಹಾರಾಯನ ಕಾಲದ ಈ ಶಾಸನದಲ್ಲಿ, ದೇವರಾಯನ ನಿರೂಪದ ಮೇರೆಗೆ ಮಹಾಪ್ರಧಾನ ಚಂಡರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದರು. ಬಸರೂರ ಪಡುವಕೇರಿಯ ಸೆಟ್ಟಿಕಾರ ಬಾಳುಸೆಟ್ಟಿಯ ಮಗ ಯೀಸರಸೆಟ್ಟಿ ಶ್ರೀ ನಖರೇಶ್ವರ ದೇವರಿಗೆ ಮಾಡಿದ ಧರ್ಮದ ವಿವರವನ್ನು ತಿಳಿಸುವ ಶಾಸನವಿದು. ಯೀಸರಸೆಟ್ಟಿ ನಖರೇಶ್ವರ ದೇವರಿಗೆ ಭೂಮಿಯನ್ನು ದಾನ ಮಾಡಿ, ಅದರ ಆದಾಯದಲ್ಲಿ ದೇವರ ಪೂಜೆ, ನಂದಾದೀವಿಗೆಗೆ ಮತ್ತು ಬ್ರಾಹ್ಮಣರ ಭೋಜನಕ್ಕೆ ಬಳಸುವಂತೆ ಬರೆಸಿದ ಧರ್ಮ ಶಾಸನವಿದು.[೧೪೧]

ಬುಕ್ಕರಾಯನ ಮಗ ವೀರಹರಿಹರರಾಯನ ಕಾಲದ ಕ್ರಿ.ಶ.೧೩೮೬ರ ಶಾಸನವಿದು. ಬಯಿರಿಸೆಟ್ಟಿಯ ಮಗ ಸುಂಕದ ಹಿರಿಯ ತಮ್ಮನು ಪಂಪಾಕ್ಷೇತ್ರದಲ್ಲಿ ನರಸಿಂಹ ದೇವಸ್ಥಾನದ ಪಶ್ಚಿಮ ದಿಕ್ಕಿಗೆ ಕ್ಷೇತ್ರಪಾಲ ಸಂನುಜಿನಾಥರನ್ನು ಪ್ರತಿಷ್ಠಾಪಿಸಿದ್ದನ್ನು ಮತ್ತು ಶಿವಾಲಯವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.[೧೪೨]

ಕ್ರಿ.ಶ.೧೩೯೦ರ ಶಾಸನವು ಬ್ರಾಹ್ಮಣ ಸಂತರ್ಪಣೆ ಮತ್ತು ದೇವಾಲಯದಲ್ಲಿನ ರುದ್ರಪೂಜೆಗಾಗಿ ಬ್ರಹ್ಮದಾಯದ ಬಾಳಿಂದ ಗದ್ದೆಗಳನ್ನು ನೀಡಿದ್ದನ್ನು ತಿಳಿಸುತ್ತದೆ. ಬೆಂಮಣ್ಣ ಸೆಟ್ಟಿ ಮತ್ತು ಅವನ ತಮ್ಮ ಮಾದಸೆಟ್ಟಿ ಎಂಬ ವ್ಯಕ್ತಿಗಳು ಮಣಿಗಾರ ಕೇರಿಯೊಳಗಿನ ಸೋಮಯ್ಯ ದೇವರ ಸನ್ನಿಧಿಯಲ್ಲಿ ರುದ್ರಪೂಜೆ ಮತ್ತು ಬ್ರಾಹ್ಮಣ ಭೋಜನ ನಡೆಯುವ ಸಲುವಾಗಿ ಈ ದಾನ ಮಾಡಿದರು. ಇದಲ್ಲದೆ ಶಿವರಾತ್ರಿ ದೀವಿಗೆಗೆ ಎಣ್ಣೆಯನ್ನು ದಾನ ನೀಡಿದರು. ಇದನ್ನು ರಕ್ಷಿಸುವ ಹೊಣೆ ಮಣಿಗಾರರ ಕೇರಿಯ ಮೂವರು ಸೆಟ್ಟಿಕಾರರದು.[೧೪೩] ದಾನ ಧರ್ಮದ ಜೊತೆ ಜೊತೆಗೆ ರಕ್ಷಣೆಯ ಹೊಣೆಯನ್ನು ಅರಿತ ಸೆಟ್ಟಿಕಾರರು ಶಾಸನದಲ್ಲಿ ವ್ಯಕ್ತವಾದ ದಾನ ಧರ್ಮಗಳ ಪರಿಪಾಲನೆಗೆ ಗಮನ ಕೊಡುತ್ತಿದ್ದರೆನ್ನುವುದು ಈ ಶಾಸನದಿಂದ ತಿಳಿದುಬರುತ್ತದೆ. ಮಹಾಪ್ರಧಾನ ಶಂಕರದೇವ ಒಡೆಯರು ರಾಜ್ಯಪಾಲರಾಗಿ ಕ್ರಿ.ಶ.೧೩೯೪ರಲ್ಲಿ ಆಳುತ್ತಿರುವಾಗ ವಿಜಯನಗರದಲ್ಲಿ ಚಕ್ರವರ್ತಿ ಹರಿಹರರಾಯನಿದ್ದನು. ಕ್ರಿ.ಶ.೧೪೧೨ರ ಶಾಸನದಲ್ಲಿ ನಾಗಮಂಗಲದ ಚಿಕ್ಕಸೆಟ್ಟಿಯು ಬಾರಕೂರಿನ ಸೋಮನಾಥ ದೇವಾಲಯದಲ್ಲಿ ರುದ್ರಪೂಜೆ ಮತ್ತು ಬ್ರಾಹ್ಮಣ ಭೋಜನಕ್ಕಾಗಿ ಭೂದಾನ ಮಾಡಿದ. ಈ ಧರ್ಮವನ್ನು ನಡೆಸಿಕೊಂಡು ಬರುವ ಹೊಣೆ ದೇವರು ಮತ್ತು ಮೂರುಕೇರಿಯ ಹಲರದು.[೧೪೪]

ವಿಜಯನಗರದ ರಾಜ ಒಂದನೆಯ ವಿಜಯರಾಯನ ಆಳ್ವಿಕೆ ಮುಗಿದು ಅವನ ಮಗ ಎರಡನೆಯ ದೇವರಾಯ ಅಧಿಕಾರಕ್ಕೆ ಬಂದಿದ್ದ ಕಾಲವಿದು. ತಂದೆ ಕಾಲದಿಂದಲೇ ಆತ ಉತ್ಸಾಹ ಪೂರ್ಣವಾಗಿ ಆಡಳಿತದಲ್ಲಿ ಸಹಕರಿಸುತ್ತಿದ್ದ. ಕ್ರಿ.ಶ.೧೪೨೫ರ ಬಾರಕೂರ ಶಾಸನ ದಲ್ಲಿ[೧೪೫] ಅಲ್ಲಿನ ಮಾರ್ಕಂಡೇಶ್ವರ ದೇವರ ಸನ್ನಿಧಿಯಲ್ಲಿ ಹಿಂಗುಳಾದೇವಿ ದೇವಾಲಯಕ್ಕೆ ಸೆಟ್ಟಿಕಾರರು ಮತ್ತು ಹಲರು ಕಟ್ಟಳೆಯ ಧರ್ಮವಾಗಿ ಪಂಚಲಿಂಗದೇವರ ಭಂಡಾರದಿಂದ ಅಮೃತಪಡಿ ಮತ್ತು ದೀಪಕ್ಕೆ ಬೇಕಾಗುವ ತೆಂಗಿನೆಣ್ಣೆಯ ಖರ್ಚನ್ನು ಭರಿಸುವುದೆಂದು ದಾಖಲೆಯಿದೆ. ಆ ದೇವಾಲಯದ ಚತುಃಸೀಮೆಯ ವಿವರ, ಅದರ ಗಡಿಯೊಳಗೆ ಬರುವ ನೆಲ, ಮನೆ, ಮಠ ಅಂಗಡಿಗಳ ಮೇಲಿನ ಆರು ವಾರದಲ್ಲಿ ಇಷ್ಟಿಷ್ಟು ಮೊತ್ತವನ್ನು ಮಧ್ಯಾಹ್ನ ರಾತ್ರಿಯ ಉಪಾಹಾರಕ್ಕೆ ಬಳಸಬೇಕೆಂದು ನಿಗಧಿಗೊಳಿಸಲಾಯಿತು. ಅಲ್ಲದೆ, 'ಕಮ್ಮಸೆಟ್ಟಿತಿ' (ಶಾಸನದಲ್ಲಿ ಹೆಸರಿನ ಆರಂಬದ ಎರಡಕ್ಷರ ಗೋಚರಿಸುವುದಿಲ್ಲ) ಪಂಚಲಿಂಗದೇವರ ತುಳಸಿ ಮಂಟಪದ ಕ್ಷೀರಾಬ್ಧಿಯ ಭೂರಿದಾನಕ್ಕೆ ಪ್ರತಿ ವರುಷಕ್ಕೆ ಒಂದು ಗದ್ಯಾಣವೆಂದು ದಾನ ನೀಡಿದ ವಿಚಾರವೂ ಶಾಸನದಲ್ಲಿದೆ.

ಮಹಾಪ್ರಧಾನ ಲಕ್ಕಣ್ಣಒಡೆಯ(೧೪೬೩) ರಾಜ್ಯಪಾಲನಾಗಿದ್ದ ಕಾಲದಲ್ಲಿ ನಾಲ್ವತ್ತ ನಾಡಿನ, ಕೋಟೆಯಕ ಸೆಟ್ಟಿತಿಯ ಮಗ ತಿರುಮಸೆಟ್ಟಿ ಎಂಬಾತ, ಮಹಾಪ್ರಧಾನ ಲಕ್ಕಣ್ಣ ಒಡೆಯರು ಬಾರಕೂರು ರಾಜ್ಯದ ರಾಜ್ಯಪಾನಿ ಆಳುತ್ತಿದ್ದಾಗ, ಬಾರಕೂರಿನ ಸೋಮನಾಥ ದೇವರ ದೇವಾಲಯದಲ್ಲಿ ರುದ್ರಪೂಜೆ ಮತ್ತು ಇಬ್ಬರು ಬ್ರಾಹ್ಮಣರ ಭೋಜನಕ್ಕಾಗಿ ಬ್ರಹ್ಮದಾಯದ ಗದ್ದೆಯನ್ನು ದಾನ ನೀಡಿದ. ಈ ದಾನದ ವಿವರವನ್ನು ತಿಳಿಸುವ ಬಾರಕೂರಿನ ಶಾಸನವು ಕ್ರಿ.ಶ.೧೪೬೩ರದ್ದು.[೧೪೬]

ವಿಠರಸ ಒಡೆಯನು ರಾಜ್ಯಪಾಲನಾಗಿದ್ದ ಕಾಲದಲ್ಲಿ, ವಿಜಯನಗರ ಚಕ್ರವರ್ತಿ ಎರಡನೆಯ ವಿರೂಪಾಕ್ಷನು ಪ್ರೌಢದೇವರಾಯನೆಂಬ ಹೆಸರಿನಿಂದ ಕಂಡುಬರುವ ಶಾಸನವು[೧೪೭] ಬಾರಕೂರಿನದ್ದೇ ಆಗಿದೆ. ತೊನಸೆ (ಈಗಿನ ತೋನ್ಸೆಪಾರು)ಯ ಹರಿಯಪ್ಪ ಸೆಟ್ಟಿಗೆ ಕೋಟಿಯಪ ಸೆಟ್ಟಿ ಎಂಬಾತ ಭೂಮಿಯೊಂದನ್ನು ಬಿಟ್ಟುಕೊಟ್ಟುದಲ್ಲದೆ, ಸೋಮನಾಥ ದೇವರ ಮೊಸರೋಗರದ ನೈವೇದ್ಯಕ್ಕೆ ಹರಿಯಪ್ಪ ಸೆಟ್ಟಿಯು ಆ ಬಾಳಿನ ಉತ್ಪತ್ತಿಯಲ್ಲಿ ೧೦ ಮೂಡೆ ಅಕ್ಕಿಯ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.೧೪೭೩ರ ಬಸರೂರಿನ ಶಾಸನವು[೧೪೮] ಮಹತ್ವದ್ದಾಗಿದೆ. ಕೊಂಡ ರಾಜ ಒಡೆಯರು ರಾಜ್ಯಪಾಲರಾಗಿದ್ದಾಗ, ವಿಠಲಸೆಟ್ಟಿಯ ಮಗ ಹೆಗಡೆ ಬಳಿಯ ಅಂಮಸೆಟ್ಟಿ ಎಂಬಾತ ಬಾರಕೂರ ಮಣಿಗಾರಕೇರಿಯ ಶ್ರೀ ಸೋಮನಾಥದೇವರಿಗೆ ನೀಡಿದ ಬ್ರಹ್ಮದಾಯದ ಭೂಮಿಯ ವಿವರವನ್ನು ಈ ರಾಜ್ಯಪಾಲನ ಕಾಲದ ಶಾಸನ ಹೇಳುವುದು.[೧೪೯]

ವರ್ತಕರು ತಮ್ಮದೇ ಆದ ಸಂಘದಿಂದ ನಖರೇಶ್ವರ ಎಂಬ ದೇವಾಲಯಗಳನ್ನು ಕಟ್ಟಿಸಿದ್ದರು. ಕ್ರಿ.ಶ.೧೪೦೦ರಲ್ಲಿ ಬಸರೂರಿನ ನಖರೇಶ್ವರ ದೇವಾಲಯದ ಎದುರಿನ ನಂದಿಕೇಶ್ವರ ದೇವರ ನೈವೇದ್ಯ ಮತ್ತು ಉಳ್ಳೂರ ದೇವರ ದೇವರ ಸೇವೆಗಾಗಿ ಸುವರ್ಣ ದಾನ ನೀಡಿದರು.[೧೫೦] ಕ್ರಿ.ಶ.೧೪೦೧ರಲ್ಲಿ ಅಲ್ಲಿನ ತುಳುವೇಶ್ವರ ದೇವರ ಸೇವೆ ಮತ್ತು ಬ್ರಾಹ್ಮಣ ಸಂತರ್ಪಣೆಗಾಗಿ ಭೂದಾನ ನೀಡಲಾಯಿತು.[೧೫೧] ಕ್ರಿ.ಶ.೧೪೦೨ರ ಸೋಮೇಶ್ವರ ದೇವಾಲಯ ಬಳಿಯ ಸತ್ರಕ್ಕೆ ಭೂದಾನ ನೀಡಲಾಯಿತು.[೧೫೨] ಕ್ರಿ.ಶ.೧೫೨೭ರ ಶಾಸನದ ಪ್ರಕಾರ ಲಖಿಸೆಟ್ಟಿಯ ಮಗ ಉಜಯನು ದುರ್ಗದ ವೀರಣ್ಣನ ಗುಡಿಯನ್ನು ಕಟ್ಟಿಸಿದುದನ್ನು ಶಾಸನವು ದಾಖಲಿಸುತ್ತದೆ. ಲಖಿಸೆಟ್ಟಿಯು ಕಿಷ್ಕಿಂದ ಪರ್ವತದ ಪ್ರತಿನಾಮವಾದ ಹಸ್ತಿನಾವತಿಯವನೆಂದು ಉಲ್ಲೇಖಿಸಿದೆ. ಆನೆಗುಂದಿಯನ್ನು ಮೊದಲು ರಾಮಚಂದ್ರನ

ಕ್ಷೇತ್ರವಾದ ಕಿಷ್ಕಿಂದ ಪರ್ವತವೆಂದೂ ನಂತರ ಹಸ್ತಿನಾವತಿ ಪಟ್ಟಣವೆಂದೂ ಕರೆಯುತ್ತಿದ್ದುದು ಸ್ಪಷ್ಟವಾಗುತ್ತದೆ. ಶಾಸನದಲ್ಲಿ ಉಲ್ಲೇಖವಾದ ವೀರಣ್ಣ ದೇವರೇ ಈಗ ಅಲ್ಲಿರುವ ವೀರಭದ್ರ ದೇವರನ್ನು ದುರ್ಗದ ವೀರಣ್ಣ, ಅಂದರೆ ಕೋಟೆಯ ವೀರಭದ್ರ ಎಂದು ಕರೆಯಲಾಗಿದೆ. ಈ ಗುಡಿಯ ಮುಂಭಾಗದಲ್ಲಿ ರಾಹುತ ಲಿಂಗಯ್ಯರನ್ನು ಉಲ್ಲೇಖಿಸುವ ಶಾಸನವಿದೆ. ಈ ಶಾಸನದ ಪಾಠ ಈ ಕೆಳಗಿನಂತಿದೆ.

೧ ೦ ಶುಭಮಸ್ತು ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿ

೨ ೦ ವಾಹನ ಶಕ ವರುಷ ೧೪೪೯ನೆಯ

೩ ೦ ಸರ್ವಜಿತು ಸಂವತ್ಸರದ ಕಾರ್ತಿಕ ಶು ೧೧

೪ ೦ ಸೋಮವಾರ ಉತ್ತರಾನಕ್ಷತ್ರದ ಪುಣ್ಯತಿಥಿಯಲು

೫ ೦ ಪಂಚಕೋಶ ಮದ್ಯವಾದ ಕಿಷ್ಕಿಂದ ಪರ್ವತದ ನಾಮವಾ

೬ ೦ ದ ಹಸ್ತಿನಾವತಿಯ ಮಹಾಪಟ್ಟಣದ ಲಖಿ ಸೆಟ್ಟಿಯ

೭ ೦ ರ ಮಕ್ಕಳು ಉಜಯನು ದುರ್ಗದ ವೀರಂಣನ ಗುಡಿಯನು ಕ(ಟಿ)

೮ ೦ ಸಿ ನಮಸ್ಕಾರವ ಮಾಡಿದನು ಮಂಗಳ(ಮಹಾ ಶ್ರೀ ಶ್ರೀ ಶ್ರೀ)[೧೫೩]

ಆನೆಗೊಂದಿಯ ಕೊತ್ತಳ ಮತ್ತು ಶಿವನಪಾದ ಗುಡ್ಡದ ಮಧ್ಯದಲ್ಲಿರುವ ಕೋಟೆಗೋಡೆಯ ಚಿಕ್ಕ ಬಾಗಿಲ ಸಮೀಪದ ಗುಂಡಿನ ಮೇಲೆ ಈ ಶಾಸನವನ್ನು ಶಿವಲಿಂಗದ ಎರಡೂ ಬದಿಗೆ ಬರೆದಿದೆ. ಶಿವಲಿಂಗದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಚಿತ್ರಗಳಿವೆ. ಪಿನ್ನಂಮಮೀಸೆಟಿ ಮಗ ಚಿಕ ಸೆಟಿಗ ವಂಬಸರಯ್ಯ ಮತ್ತು ಸಪರುವಮ ಸಿಹಿ ನೀರ(ಮಧುಕ ಜಲ)ನ್ನು ಎರೆದರೆಂದು ತಿಳಿಸುತ್ತದೆ. ಕೋಟೆಯಲ್ಲಿನ ಚಿಕ್ಕ ಬಾಗಿಲನ್ನು 'ರದಿನಗಿಸೆ' ಎಂದು ಹೆಸರಿನಿಂದ ಕರೆಯಲಾಗಿದೆ.

೧ ರದಿನಗಿಸೆ

೨ ಪಿನ್ನಂಮ ಮೀ

೩ ಸೆಟಿ ಮಗ ಚಿಕ ಸೆಟಿ

೪ ಗ ವಂಬಸರಯಸಪರುವಮನು(ಲಿಂಗದ ಇನ್ನೊಂದು ಬದಿಯಲ್ಲಿ)

೫ ಮಧುಕ ಚಲ

೬ ಯರದರು

ಕ್ರಿ.ಶ.೧೫೨೫ರ ಈ ಶಾಸನವು ಹಳ್ಳಿಯನ್ನು ದಾನವಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ. ಇದು ವಿಜಯನಗರದ ಕೃಷ್ಣದೇವರಾಯನ ಕಾಲದ ಶಾಸನವಾಗಿದೆ. ಬಾಣವಾಡಿಯ ಚೆಂನಿಸೆಟಿಯು ಅರಸನಿಗೆ ಶುಭವಾಗಲಿಯೆಂದು ಶೆಟಿಕೆಜೆ ಸೀಮೆಯ ಪಂಕಜನಹಳ್ಳಿಯ ಮಲ್ಲಿಕಾರ್ಜುನ ದೇವರಿಗೆ ಸಕಲ ಸೇವೆಗಾಗಿ ಪಂಕಜನಹಳ್ಳಿಯನ್ನು ದಾನವಾಗಿ ನೀಡುತ್ತಾನೆ. ಈ ದಾನವನ್ನು ಪಂಪಾಕ್ಷೇತ್ರದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಪುರಧರ್ಮವಾಗಿ ನೀಡಿಲಾಗಿದೆ.[೧೫೪] ಕ್ರಿ.ಶ. ೧೩೮೨ರಲ್ಲಿ ವಿಜಯನಗರದಲ್ಲಿ ಸಭೆ ಸೇರಿದ್ದ ವರ್ತಕರು ಒಟ್ಟಾಗಿ ವಿರೂಪಾಕ್ಷ ದೇವರಿಗೆ ನವರತ್ನಗಳು ಮೆಟ್ಟಿದ ಒಂದು ಅಮೂಲ್ಯವಾದ ಚಾಮರವನ್ನು ಅರ್ಪಿಸಿದರು ಎನ್ನುವ ಅಂಶದಿಂದ ಈ ಸಮುದಾಯದ ಶ್ರೀಮಂತಿಕೆಯ ಸೂಚನೆ ನಮಗೆ ದೊರಕುತ್ತದೆ.[೧೫೫]

೩.೧.೩. ವೈಷ್ಣವ ದೇವಾಲಯ

ಹಂಪೆಯಲ್ಲಿ ಕ್ರಿ.ಶ.೧೩೯೦ರಿಂದಲೇ ಅಂದರೆ ಇಮ್ಮಡಿ ಹರಿಹರನ ಕಾಲದಲ್ಲಿ ತುಂಗ ಭದ್ರೆಯ ತಟದಲ್ಲಿ ವೈಷ್ಣವ ದೇವಾಲಯಗಳ ರಚನೆ ಆರಂಭವಾಗಿರುತ್ತದೆ. ಯಾದವ ವಂಶದವರಾದ ಸಂಗಮರ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವರಿಗೂ ಆಶ್ರಿತರಾಗುತ್ತಾರೆ. ಮುಂದೆ ಹಂಪೆ-ವಿಜಯನಗರ ಎರಡರಲ್ಲೂ ಇವರ ರಚನೆಗಳೇ ಜಾಸ್ತಿಯಾಗುತ್ತವೆ. ಹೀಗಾಗಿ ಸಾಕಷ್ಟು ಸಂಖ್ಯೆಯ ವೈಷ್ಣವರು ಈ ಸಾಮ್ರಾಜ್ಯದ ರಾಜಧಾನಿಗೆ ಬಂದು ನೆಲೆಸಿರಬೇಕು. ನರಸಿಂಹ ದೇವಾಲಯ, ರಾಮಚಂದ್ರ (ಹಜಾರ ರಾಮಚಂದ್ರ) ದೇವಾಲಯಗಳು ಆರಂಭವಾದವು. ನಂತರ ಅಚ್ಯುತ ದೇವರಾಯನ ದೇವಾಲಯ ರಚಿತವಾಯಿತು. ಈ ಕಟ್ಟಡಗಳಲ್ಲೆಲ್ಲಾ ಬೃಹತ್ ರಚನೆಯೆಂದರೆ ವಿಠಲ ದೇವಾಲಯ. ಇಲ್ಲಿನ ವೈಷ್ಣವ ಸಂಪ್ರದಾಯಸ್ಥರು ಬಹುತೇಕ ಅಯೋಬಲದ ಪರಕಾಲ ಮಠಕ್ಕೆ ಸೇರಿದವರು. ಜಾತ್ರದ ಶ್ರೀ ವೈಷ್ಣವರ ಉಲ್ಲೇಖವೂ ಒಂದು ಶಾಸನದಲ್ಲಿ ಬಂದಿದೆ. ಒಟ್ಟಿನಲ್ಲಿ ಶ್ರೀ ವೈಷ್ಣವರ ಪ್ರಭಾವ ವಿಜಯನಗರ ತುಳುವರು ಕಾಲದಲ್ಲಿ ಉಚ್ಛ್ರಾಯದಲ್ಲಿತ್ತು. ಅಚ್ಯುತರಾಯ, ಸದಾಶಿವರಾಯನ ಕಾಲದಲ್ಲಿ ಪರಾಕಾಷ್ಠೆಗೆ ಮುಟ್ಟುತ್ತದೆ. ಅನೇಕ ಪ್ರದೇಶಗಳ ಅಧಿಕಾರಿಗಳು ಶ್ರೀ ವೈಷ್ಣವರೇ ಆಗಿದ್ದರು.

ಮಧ್ವಪಂಥಕ್ಕೆ ಸೇರಿದ ವೈಷ್ಣವರೂ ಹಂಪೆಯಲ್ಲಿದ್ದರು. ಆದರೆ ಅವರ ಪ್ರಭಾವ ಕಡಿಮೆಯೇ. ಕೃಷ್ಣರಾಯನ ಕಾಲದಲ್ಲಿ ವ್ಯಾಸತೀರ್ಥರು ವಿಜಯನಗರದಲ್ಲಿದ್ದರು. ಕೃಷ್ಣದೇವರಾಯನು ಕ್ರಿ.ಶ.೧೫೨೬ರಲ್ಲಿ ಅನೇಕ ಗ್ರಾಮಗಳನ್ನು ಮಾಧ್ವ ಬ್ರಾಹ್ಮಣರಿಗೆ ದಾನ ನೀಡುತ್ತಾನೆ. ಇವನ ಶಿಷ್ಯ ಬ್ರಾಹ್ಮಣ್ಯತೀರ್ಥನ ಉಲ್ಲೇಖವೂ ಈ ಶಾಸನದಲ್ಲಿ ಬಂದಿದೆ. ಶಾಸನವೊಂದರಲ್ಲಿ ಪ್ರಸಾದದ ವಿನಿಯೋಗದ ಪ್ರಸ್ತಾಪ ಬಂದಾಗ ವ್ಯಾಸರಾಜರ ಪಾಲನ್ನು ಉಲ್ಲೇಖಿಸಿದೆ.

ವಿಜಯನಗರ ಅರಸರ ಕಾಲದಲ್ಲಿ ದಾನಕ್ಕೆ ವಿಶೇಷ ಪ್ರೋತ್ಸಾಹವಿತ್ತು. ಇವರ ಕಾಲದಲ್ಲಿ ಮಾಡಿದಷ್ಟು ದಾನವನ್ನು ಅಂದಿನ ಸಮಕಾಲೀನ ದೊರೆಗಳು ಮಾಡಿಲ್ಲವೆಂದೇ ಹೇಳಬಹುದು. ವಿಜಯನಗರದ ಅರಸರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ದೇವಾಲಯ ನಿರ್ಮಾಣ ನಿರ್ವಹಣೆಗೆ ಇವರ ಕಾಲದಲ್ಲಿ ಮಾಡಿದಷ್ಟು ದಾನವನ್ನು ಅಂದಿನ ಸಮಕಾಲೀನ ದೊರೆಗಳು ಮಾಡಿಲ್ಲವೆಂದೇ ಹೇಳಬಹುದು. ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಇವರು ಪ್ರಮುಖವಾದ ದಾನಗಳನ್ನು ನೀಡಿದರು. ಇಂತಹ ದಾನದ ಕ್ರಿಯೆಗಳೇ ವಿಜಯನಗರ ದೊರೆಗಳ ಆಡಳಿತದ ಭದ್ರಬುನಾದಿಗೆ ಕಾರಣವಾಯಿತು. ಕೃಷ್ಣದೇವರಾಯನು ಪ್ರತಿದಿನ ದಾನ ಕಾರ್ಯದಲ್ಲಿ ತೊಡಗುತ್ತಿದ್ದನೆಂದು ತಿಳಿದುಬರುತ್ತದೆ. ಕಾಮಧೇನು, ಕಲ್ಪಕ್ಷಿತಿ, ರುಹತಿಲಕ, ಕಾಂಚನೀ, ಕಾಂಚನಮೇರು, ತುಲಾಪುರುಷ, ಪಂಚಲಾಂಗಲ, ಬ್ರಹ್ಮಾಂಡ ರತ್ನದೇನು, ವಿಶ್ವ ಚಕ್ರಸ್ವರ್ಣಕ್ಷಾ, ಸುವರ್ಣಮೇರು, ಹೇಮಾಶ್ವ, ಹೇಮಗರ್ಭ, ಹಿರಣ್ಯಾಶ್ವ ಮುಂತಾದ ದಾನಗಳು ವಿಜಯನಗರ ಶಾಸನದಲ್ಲಿ ಸಾಮಾನ್ಯವಾಗಿ ಉಲ್ಲೇಖವಾಗಿವೆ. ಅಚ್ಯುತರಾಯನ ಆಳ್ವಿಕೆ ಕಾಲದ ಕೆಲವು ಶಾಸನಗಳಲ್ಲಿ 'ಆನಂದ ನಿಧಿ' ಎಂಬ ದಾನದ ಉಲ್ಲೇಖವಿದೆ. ಕ್ರಿ.ಶ.೧೫೩೯ರ ಗದಗ ಶಾಸನದಲ್ಲಿ ತುಂಗಭದ್ರಾ ನದಿ ತೀರದ ಭಾಸ್ಕರ ಕ್ಷೇತ್ರದ ವಿಠಲದೇವರ ಸನ್ನಿಧಾನದಲ್ಲಿ ವಿಷ್ಣುವಿನ ಭಕ್ತಿಗಾಗಿ ಅಚ್ಯುತರಾಯನು "ಆನಂದ ನಿಧಿ" ದಾನವನ್ನು ಬ್ರಾಹ್ಮಣರಿಗೆ ನೀಡಿದನೆಂದು ತಿಳಿದುಬರುತ್ತದೆ.[೧೫೬]

ಕ್ರಿ.ಶ.೧೫೦೦ರ ನಂತರ ವೈಷ್ಣವ ಧರ್ಮ ಮತ್ತು ಸಂಸ್ಕೃತಿಗೆ ವಿಶೇಷವಾದ ರಾಜಾಶ್ರಯ ದೊರೆಯಲಾಗಿ, ಹಂಪೆಯಲ್ಲಿ ಭವ್ಯ ದೇವಾಲಯಗಳು ನಿರ್ಮಾಣಗೊಂಡವು. ಹಂಪೆಯ ಲಕ್ಷ್ಮೀನರಸಿಂಹ, ಹಜಾರರಾಮ ದೇವಾಲಯ, ಕೃಷ್ಣದೇವಾಲಯ, ಅಚ್ಯುತರಾಯ ದೇವಾಲಯ, ವಿಠಲದೇವಾಲಯ, ಪಟ್ಟಾಭಿರಾಮ ದೇವಾಲಯ, ಅನಂತಶಯನ ಗುಡಿಯ ಅನಂತಶಯನ ದೇವಾಲಯ, ತಿರುಮಲಾದೇವಿಯರ ಪಟ್ಟಣದ ತಿರುವೆಂಗಳನಾಥ ದೇವಾಲಯ(ಹೊಸಪೇಟೆ)

ಮುಂತಾದವು ಪ್ರಮುಖವಾಗಿವೆ. ಹೀಗೆ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ, ವೈಷ್ಣವ ದೇವಾಲಯಗಳ ಸಂಖ್ಯೆಯೇ ಹೆಚ್ಚು. ಈ ಮಾತು ಹಂಪಿಗೂ ಅನ್ವಯಿಸುತ್ತದೆ. ಅದರಲ್ಲೂ ತುಳುವ ಮನೆತನದ ಆಳ್ವಿಕೆ ಕಾಲದಲ್ಲಿ ಬೃಹತ್ ದೇವಾಲಯಗಳು ನಿರ್ಮಾಣಗೊಂಡವು. ಇಲ್ಲಿ ನನ್ನ ಅಧ್ಯಯನದ ಉದ್ದೇಶವಾದ ಸೆಟ್ಟಿ ಕುಲದವರು ವೈಷ್ಣವ ದೇವಾಲಯಗಳ ನಿರ್ಮಾಣ ನಿರ್ವಹಣೆಗೆ ನೀಡಿದ ಅಮೂಲ್ಯ ಕೊಡುಗೆಗಳ ಬಗ್ಗೆ ನೋಡೋಣ.

ಈ ಅನಂತಶಯನಗುಡಿ ಗ್ರಾಮದಿಂದ ತುಸು ಉತ್ತರಕ್ಕೆ ನಡೆದರೆ ನಾಗೇನಹಳ್ಳಿ ಎಂಬ ಚಿಕ್ಕ ಗ್ರಾಮವು ಕಾಣಬರುತ್ತದೆ. ಈ ಗ್ರಾಮವು ಹಿಂದೆ ನಾಗಲಾಪುರವೆಂದು ಪ್ರಸಿದ್ಧಿಯಾಗಿದ್ದು, ಕೃಷ್ಣದೇವರಾಯ ಮಹಾರಾಜನ ತಾಯಿಯಾದ ನಾಗಲಾದೇವಿಯ ಹೆಸರಿನಲ್ಲಿ, ನಾಮಕರಣ ಹೊಂದಿತ್ತು. ಇದೇ ಗ್ರಾಮದಲ್ಲಿ ಈಗಲೂ ಕಾಣಬರುವ ರಂಗನಾಥ ದೇವಾಲಯದಲ್ಲಿ ಒಂದು ಶಿಲಾಶಾಸನವಿದ್ದು ಅದು ಕ್ರಿ.ಶ.೧೫೧೬ರ ಶಾಸನವಾಗಿದೆ. ಈ ಶಾಸನವು ಇನ್ನೂ ತಿಳಿಸುವುದೇನೆಂದರೆ, ಈ ಗ್ರಾಮವು ನಾಗಲಾಪುರವೆಂಬ ಅಗ್ರಹಾರವೆಂದು ತಿಳಿಸುತ್ತಾ, ಈ ಅಗ್ರಹಾರವನ್ನು ರಂಗನಾಥ ದೀಕ್ಷಿತರೆಂಬ ಬ್ರಾಹ್ಮಣರಿಗೆ ದಾನವಾಗಿ ಕೊಡಲ್ಪಟ್ಟಿತ್ತು. ಮತ್ತು ಕೃಷ್ಣದೇವರಾಯ ಮಹಾರಾಯನ ತಾಯಿಯಾದ ನಾಗಲಾದೇವಿಗೆ ಪುಣ್ಯವಾಗಲೆಂದು ದಾನವಾಗಿ ಕೊಡಲ್ಪಟ್ಟಿತ್ತು ತದ ನಂತರ ಆ ರಂಗನಾಥ ದೀಕ್ಷಿತರು ಈ ಅಗ್ರಹಾರದಲ್ಲಿಯೇ ಒಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ನಾಗೇಶ್ವರನೆಂದು ಮತ್ತು ಒಂದು ವಿಷ್ಣುದೇವಾಲಯವನ್ನು ಕಟ್ಟಿಸಿ ಅದಕ್ಕೆ ನಾಗೇಂದ್ರಶಯನ(ರಂಗನಾಥ)ವೆಂದು ನಾಮಕರಣ ಮಾಡಿ, ಕೆಲವು ದತ್ತಿಗಳನ್ನು ಬಿಟ್ಟನು. ಹೀಗೆ ಈ ಉಪನಗರವು, ನಾಗಲಾಪುರವೆಂಬ ಅಗ್ರಹಾರವಾಗಿ ಪ್ರಸಿದ್ಧಿಯಾಗಿತ್ತು.

ಹೊಸಪೇಟೆ ಹಿಂದಿನಿಂದಲೂ ವ್ಯಾಪಾರೀ ಕೇಂದ್ರವಾಗಿ ಮತ್ತು ಕಾಲಗತಿಗನುಗುಣವಾದ ಮಾರ್ಪಾಟುಗಳೊಂದಿಗೆ ಬೆಳೆದು ಬಂದುದಾಗಿರಬೇಕು. ಆದರೆ ಹಿಂದಿನ ಜನ ನಿಬಿಡವಾದ ಉಪನಗರವು ಈಗಿನ ಸಣ್ಣಕ್ಕಿ ವೀರಭದ್ರದೇವರ ಗುಡಿ ಮತ್ತು ಕೋಟೆ ಎಂದು ಕರೆಯಿಸಿಕೊಳ್ಳುವ ಭಾಗಕ್ಕೆ ಸೀಮಿತವಾಗಿದ್ದಿರಬೇಕು. ಅಲ್ಲದೇ ಈ ಉಪನಗರಕ್ಕೆ ತಿರುಮಲಾದೇವಿ ಪಟ್ಟಣವೆಂದು ಕರೆಯಲಾಗುತ್ತಿತ್ತೆಂದು, ಇಲ್ಲಿ ದೊರೆತಿರುವ ಎರಡು ಶಿಲಾಶಾಸನಗಳಿಂದ ವೇದ್ಯವಾಗುತ್ತದೆ. ಇವುಗಳಲ್ಲಿ ಒಂದು ತಿರುವೆಂಗಳನಾಥ ದೇವರಿಗೆ ಮತ್ತೊಂದು ಗೌರೀಶ್ವರ ದೇವರಿಗೆ ಕೊಡಮಾಡಲ್ಪಟ್ಟ ದಾನಗಳನ್ನು ವಿವರಿಸುವಾಗ, ಈ ಉಪನಗರವು ತಿರುಮಲಾದೇವಿ ಅಮ್ಮನವರ ಪಟ್ಟಣವೆಂದು ತಿಳಿಸುತ್ತವೆ. ತಿರುವೆಂಗಳನಾಥ ದೇವರಗುಡಿ ಈಗ ಕಾಣಬರುತ್ತಿಲ್ಲ.

ಮತ್ತು ಈಗಿನ ಸಣ್ಣಕ್ಕಿ ವೀರಭದ್ರ ದೇವರ ಗುಡಿಯು ಮೊದಲಿಗೆ ಗೌರೀಶ್ವರ ದೇವರ ಗುಡಿಯಾಗಿದ್ದಿರಬೇಕು. ಈ ತಿರುಮಲಾದೇವಿಯು ಕೃಷ್ಣದೇವರಾಯ ಮಹಾರಾಜನ ಪಟ್ಟದರಸಿಯಲ್ಲೊಬ್ಬಳಾಗಿದ್ದಳೆಂಬುದು ನಿಸ್ಸಂದೇಹವಾದ ವಿಷಯ, ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮೇಲಿನ ಎರಡೂ ಶಾಸನಗಳಲ್ಲಿ ವ್ಯಾಪಾರೀ ಬಣಗಳಾದ ಶೆಟ್ಟಿ ಪಟ್ಟಣದ ಸ್ವಾಮಿಗಳು (ತಿರುಮಲಾದೇವಿ ಪಟ್ಟಣ, ವರದರಾಜಮ್ಮನ ಪಟ್ಟಣ ಮತ್ತು ಕೃಷ್ಣಪುರ ಶೆಟ್ಟಿ ಪಟ್ಟಣಗಳ ಸ್ವಾಮಿಗಳು ವಣಿಜಕರು) ದಾನಗಳನ್ನು ನೀಡಿದ ಉಲ್ಲೇಖನವಿದೆ.

ಶ್ರೀ ವೀರಪ್ರತಾಪದೇವರಾಯ ಮಹಾರಾಯರು ರಾಜ್ಯವಾಳುವಾಗ, ಮೂವರು ರಾಯರ ಗಂಡು ಹಿರಿಯಕಟ್ಟಿಗೆಯ ಆಮತಿನಾಯಕರ ಮಗನಾದ ಕಟ್ಟಿಗೆಯ ಗುಂಡಪ್ಪನಾಯಕರು ವಿಜಯ ಸೋಮಪುರವೆಂಬ ಹೆಸರಿನ ನುಗ್ಗಿಯ ಹಳ್ಳಿಯ ನಾಡನ್ನು ಆಳುತ್ತಿರುತ್ತಾನೆ. ಇವನ ಅರಮನೆಯ ಅಧಿಕಾರಿ ಥಲಕೆ ಥಲವಾದಿ, ಥಲದಂಕ ಮಲ್ಲ ಯೆಲಹಕನಾಡ ಪ್ರಭು ಜಾಲದಭೀಮಿಸೆಟ್ಟಿಯರ ಮಕ್ಕಳಾದ ಚಿಕ್ಕಭೀಮಂಣನು ಪ್ರಸನ್ನ ಕೇಶವದೇವರು, ನಾರಸಿಂಹ ದೇವರು, ಗೋಪಾಲ ದೇವರುಗಳಿಗೆ ಸಂಪ್ರೋಕ್ಷಣೆಯನ್ನು ಮಾಡಿಸಿದ ವಿಷಯ ಶಾಸನದಲ್ಲಿದೆ. ಅಂದರೆ ಪುನರ್ ಪ್ರತಿಷ್ಠೆಯನ್ನು ಮಾಡಿರಬೇಕು.[೧೫೭] ಈ ಶಾಸನದ ಪಾಠವು ಈ ಕೆಳಗಿನಂತಿದೆ.

೧ ಸ್ವಸ್ತಿ ಶ್ರೀ ಜಯಾಭ್ಯದಯ ಶಕವರುಷ ೧೩೫೬ ಸಂದು ವರ್ತ್ತಮಾನಕೆ ಸಲುವ ಆನಂದ ಸಂವತ್ಸರದ ಮಾಘ ಬ ೫ ಆ ಲು ಶ್ರೀಮಂನ್ಮಹಾರಾಜಾಧಿರಾಜ ರಾಜ ಪರಮೇಶ್ವ

೨ ರ ಶ್ರೀ ವೀರಪ್ರತಾಪದೇವರಾಯ ಮಹಾರಾಯರೂ ವಿಜೆಯಾನಗರಿಯಾ ನೆಲೆವೀಡಿನೊಳೂ ಸುಖರಾಜ್ಯಂಗೆಯಿವಲ್ಲಿ ಶ್ರೀಮಂನ್ಮಹಾ ಮೂವರುರಾಯರ ಗಂಡ ಹಿರಿಯ ಕಟ್ಟಿಗೆಯ

೩ ಆವುತಿಯನಾಯಕರ ಮಕ್ಕಳು ಕಟ್ಟಿಗೆಯ ಗುಂಡಪ್ಪ ನಾಯಕರೂ ವಿಜಯ ಸೋಮನಾಥ ಪುರವಾದ ನುಗ್ಗಿಯಹಳ್ಳಿಯ ನಾಡುನಾಳುವಲ್ಲಿ ಅರಮನೆಯ ಅಧಿಕಾರಿ ತ್ಸಲಕೆತ್ಸಲವಾದಿ ತ್ಸಲದಂ

೪ ಕಮಲ್ಲ ಯೆಲಹಕನಾಡ ಪ್ರಭು ಜಾಲದ ಭೀಮಿಸೆಟ್ಟಿಯರ ಮಕ್ಕಳು ಚಿಕ್ಕ ಭೀಮಂಣನೊ ನುಗ್ಗಿಯ ಹಳ್ಳಿಯ ನಾಡ ಅಧಿಕಾರವನಾಳುವಲ್ಲಿ ಆನಂದ ಸಂವತ್ಸರ ಮಾಘ ಬ ೫ ಆ ಲೂ ಹಸ್ತ ನಕ್ಷತ್ರದಲೂ

೫ ಶ್ರೀ ಪ್ರಸಂನ್ನ ಕೇಶವದೇವರು ನಾರಸಿಂಹದೇವರು ಗೋಪಾಲದೇವರು ಬಿಜಯಂಗೆಯುವ ದೇವರುಗಳಿಗೆ ಸಂಪ್ರೋಕ್ಷಣೆಯನೂ ಮಾಡಿಸಿದನು.

ಒಂದನೇ ಬುಕ್ಕರಾಯನ ಕಾಲದಲ್ಲಿ ಕ್ರಿ.ಶ.೧೩೬೦ರ ಪಾಳ್ಯ ಶಾಸನದಲ್ಲಿ ಸೆಟ್ಟಿಗನ ಪಾಳಯ ಜನಾರ್ಧನ ದೇವರ ಸೇವೆಗೋಸ್ಕರ ಮಣಿಲ ನಾಡೊಳಗಣ ಚೆಂಡನ ಹಳ್ಳಿ ಮೊಗನಾಡೊಳಗಣ ಹರದನೊರಪುರ ಎರಡು ಗ್ರಾಮಗಳನ್ನು ಈಶ್ವರ ದೇವನ ಒಡೆಯನ ಸುಪುತ್ರ ತಿಪ್ಪಣ್ಣವೊಡೆಯನು ದಾನ ನೀಡಿದ ವಿವರವಿದೆ. ಕೃಷ್ಣದೇವರಾಯನು ಆಳುತ್ತಿರುವಾಗ ಇವನ ನಿರೂಪದಿಂದ ಲಕ್ಷುಮೀ ನಾರಾಯಣರ ಮಗ ವಿಠರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ಇವನ ಅವಧಿಯಲ್ಲಿ ಬಸರೂರಿನ ಪಡುವಕೇರಿಯ ತಂಮಿಮುನಿಲ ಸಂಕರಸೆಟ್ಟಿಯ ಮಗನಾದ ಚೆಂನವರದ ನಾರಣಮುನಿಲನು ಮತ್ತು ಕುಪಣಸೆಟಿಯಿಬ್ಬರೂ ಕೂಡಿ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ಮತ್ತು ಅದರ ಮಠಕ್ಕೆ ಅನೇಕ ಕಡೆ ಗದ್ದೆಯನ್ನು ದಾನವಾಗಿ ಬಿಡುವರು. ಭೂಮಿಯನ್ನಷ್ಟೇ ಅಲ್ಲದೇ ಹಣವನ್ನು ದಾನವಾಗಿ ನೀಡಿರುವರು.[೧೫೮]

ಮುಂದಿನ ಈ ಶಾಸನವು ಸದಾ ಶಿವರಾಯನ ಕಾಲದ್ದು. ಈ ರಾಜನ ಆಳ್ವಿಕೆಯಲ್ಲಿ ಕೋದಂಡ ಋಷಿಗೋತ್ರದ ಅಪ್ಪಿಶೆಟ್ಟಿಯ ಮೊಮ್ಮಗನೂ, ಪಾಪಿ ಶೆಟ್ಟಿ ಮತ್ತು ಪಾಟಮ್ಮನ ಮಗನೂ ಆದ ತಿರುಮಳಸೆಟ್ಟಿ ಎಂಬುವವನೂ ಮಾಡಿದ ಸೇವೆಯನ್ನು ತಿಳಿಸುತ್ತದೆ. ಶಾಸನದಲ್ಲಿ ತುಂಗಭದ್ರಾತೀರದ ಚಕ್ರತೀರ್ಥದಲ್ಲಿ ನೆಲೆಸಿರುವ ವೆಂಕಟೇಶ ದೇವರ ಅಷ್ಟಕವಿದ್ದು, ದೇವರು ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ ಮತ್ತು ಕೋದಂಡರಾಮನ ಅವತಾರವೆತ್ತಿ ಮಾಡಿದ ಕಾರ್ಯಗಳನ್ನು ಸ್ತುತಿಸಿದೆ. ಪ್ರತಿ ಪದ್ಯವೂ 'ಶ್ರೀ ಚಕ್ರ ತೀರ್ಥನಿಲಯಂ ಭಜೇ ವೆಂಕಟೇಶಂ' ಎಂದು ಕೊನೆಯಾಗುತ್ತಿದೆ. ಪ್ರತಿ ಪದ್ಯವೂ ದೇವರ ಮತ್ಸ್ಯ, ಕೂರ್ಮ, ವರಹಾ ಅವತಾರಗಳಲ್ಲಿ ಮಾಡಿದ ಕಲ್ಯಾಣಕರ ಕಾರ್ಯಗಳನ್ನು ಹೊಗಳುವ ಶಾಸನ ಪಾಠವಿದೆ.[೧೫೯]

ಹಜಾರರಾಮ ದೇವಾಲಯದ ಬೀದಿಯಲ್ಲಿ ಎರಡು ಅಂತಸ್ತಿನ ಮಂಟಪದ ಮೇಲಿನ ಅಂತಸ್ತಿನ ತೊಲೆಯ ಮೇಲೆ ಇರುವ ಈ ಶಾಸನದಲ್ಲಿ ಮಂಟಪವನ್ನು ರಂಘುನಾಥ ದೇವರಿಗೆಂದು ವರ್ತಕ ಸಮುದಾಯಕ್ಕೆ (ವಾಣಿಜ್ಯ ವೈಶ್ಯನಗರಂ) ಸೇರಿದವರು ಕಟ್ಟಿಸಿದುದರ

ಉಲ್ಲೇಖವಿದೆ. ಕ್ರಿ.ಶ.೧೬ನೆಯ ಶತಮಾನ.[೧೬೦] ವಿಜಯನಗರದ ದೊರೆ ಅಚ್ಯುತದೇವರಾಯನ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಶಾಲಿವಾಹನ ಶಕ ೧೪೫೬, ಜಯಸಂವತ್ಸರ ಶ್ರಾವಣ ಬ ೮ ಕೃಷ್ಣಜಯಂತಿ ಎಂದು ತೇದಿ ಇದೆ. ಅದು ಕ್ರಿ.ಶ.೧೫೩೪ ಆಗಸ್ಟ್ ೧ ಶನಿವಾರಕ್ಕೆ ಸರಿ ಹೊಂದುತ್ತದೆ. ಭಾರದ್ವಾಜ ಗೋತ್ರ, ಕಾತ್ಯಾಯನ ಸೂತ್ರ ಶುಕ್ಲಯ ಜುಶ್ಯಾಖೆಯ ಭಂಡಾರದ ಅಪ್ಪರಸರ ಮಗ ತಿಮ್ಮರಸನು ದೊರೆಯು ತನಗೆ ಮಾಗಣಿ ನಾಯಕತನಕ್ಕೆ ಕೊಟ್ಟಿದ್ದ ಪೆನುಗೊಂಡೆ ರಾಜ್ಯ ರೊದ್ದನಾಡಿನ ಹರುಹೆ ಸ್ಥಳದ ಮಹಾಲಕ್ಷ್ಮೀಪುರ ಎಂದು ಪ್ರತಿನಾಮ ವಿರುವ ಮುತ್ತಕದಹಳ್ಳಿಯನ್ನು ಪೆನುಗೊಂಡೆಯ ವಿರಪ್ಪಣ್ಣಯ್ಯನವರ ಬೋಧನೆಯಂತೆ, ಹರುಹೆ ಲಖ್ಖಣಾಪುರದ ಮಹಾಲಕ್ಷ್ಮೀ ದೇವರಿಗೆ ದತ್ತಿಯಾಗಿ ಕೊಟ್ಟದ್ದನ್ನು ಇದು ದಾಖಲಿಸುತ್ತದೆ. ಈ ಮುತ್ತಕದಹಳ್ಳಿಯನ್ನು ಮಹಾಲಕ್ಷ್ಮೀದೇವರಿಗೆ ಧೂಪ, ದೀಪ ಅಮೃತಪಡಿ ನೈವೇದ್ಯ ನೃತ್ಯ ಸಂಗೀತ ವಾದ್ಯ ಮುಂತಾದ ವೈಭವಗಳಿಗೆ ಮತ್ತು ತಮ್ಮ ಸ್ವಾಮಿ ಅಚ್ಯುತದೇವ ಮಹಾ ರಾಯರಿಗೆ ಪುಣ್ಯವಾಗಬೇಕೆಂದು ಧಾರಾಪೂರ್ವಕವಾಗಿ ಆ ಚಂದ್ರರ್ಕಸ್ಥಾಯಿ ಆಗಿ ದಾರೆಯೆರೆದು ಕೊಟ್ಟಿರುವುದನ್ನು ಈ ಶಾಸನವು ವಿಶದಪಡಿಸುತ್ತದೆ.[೧೬೧]

ಈ ಶಾಸನಕ್ಕೆ ಸಂಬಂಧಪಟ್ಟಂತೆ ಲಕ್ಷ್ಮೀದೇವಿ ದೇವಾಲಯದ ಪ್ರಾಕಾರದ ದಕ್ಷಿಣ ಗೋಡೆಯ ಮೇಲೆ ಈ ಶಾಸನವು ವಿಜಯನಗರ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಸಂ.೯ರ ಕಾಲವೇ ಇದೆ. ಲೇಪಾಕ್ಷಿ ನಂದಿಲಕ್ಕಿಸೆಟ್ಟಿ ಮುದ್ದಮಾಂಬೆಯರ ಮಗ ಪೆನುಗೊಂಡೆಯ ವಿರಪಂಣನ ತಮ್ಮ ವೀರಣನಾಯಕನು ಹರುಹೆ ಲಖ್ಖಣಾಪುರದ ಮಹಾಲಕ್ಷ್ಮೀದೇವಿ ಅಮ್ಮನವರಿಗೆ ಮಾಡಿಸಿದ ಕಟ್ಟಡಗಳನ್ನು ಗುಡಿಗಳನ್ನು ಇದು ದಾಖಲಿಸುತ್ತದೆ. ಮಹಾಲಕ್ಷ್ಮೀ ಅಮ್ಮನವರ ಗುಡಿಯ ಸುತ್ತಲ ಶಿಲಾಪ್ರಕಾರ, ಮೂಡಣಗೋಪುರ, ತೆಂಕಣಗೋಪುರ, ಬಾಗಿಲವಾಡಗಳು, ಅಡಿಗೆಮನೆ, ಮುಂದಣಚಪ್ಪರ, ವೋಲಗದ ಗಾಳಿ ಮಂಟಪ, ತಳ ಚಪ್ಪಟೆ ರಾಮಲಕ್ಷ್ಮಣ ದೇವರಗುಡಿ, ಹನುಮಂತ ದೇವರಗುಡಿ, ಭಯಿರವ ದೇವರಗುಡಿ ಮತ್ತು ವಿಶ್ವೇಶ್ವರನ ಗುಡಿ ಇವು ಮುಂತಾದ ಆ ಚಂದ್ರಾರ್ಕವಾದ ಕಟ್ಟಡಗಳನ್ನು ಮಹಾಲಕ್ಷ್ಮೀ ಅಮ್ಮನವರ ಸೇವೆಗೆ ಆ ಚಂದ್ರಾರ್ಕವಾಗಿ ಕೊಟ್ಟ ದಾನವಿದು.[೧೬೨]

ಈ ಶಾಸನಕ್ಕೆ ಸಂಬಂಧಪಟ್ಟಂತೆ ಅದೇ ದೇವಸ್ಥಾನ ಅಂದರೆ ಲಕ್ಷ್ಮೀದೇವಿ ದೇವಾಲಯದ ಪ್ರಾಕಾರದ ದಕ್ಷಿಣ ಗೋಡೆಯ ಮೇಲೆ ಇರುವ ಈ ಶಾಸನವು

ವಿಜಯನಗರದ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯ ಈ ಶಾಸನದಲ್ಲಿ ಶಾಲಿವಾಹನ ಶಕ ೧೪೫೯, ಹೇಮಳಂಬಿ ಸಂವತ್ಸರ, ಚೈತ್ರ ಶು ೧೫, ಸೋಮವಾರ ಎಂದು ತೇದಿ ಇದ್ದು ಇದು ಕ್ರಿ.ಶ.೧೫೩೭ ಮಾರ್ಚ್ ೨೬, ಸೋಮವಾರಕ್ಕೆ ಸರಿಹೊಂದುತ್ತದೆ. ಲೇಪಾಕ್ಷಿ ನಂದಿಲಕಿಸೆಟ್ಟಿ ಮುದ್ದಮಾಂಬೆಯರ ಮಗ ಪೆನುಗೊಂಡೆಯ ವಿರಪಂಣಯನ ತಮ್ಮ ವೀರಣನಾಯಕನೂ ಪೆನುಗೊಂಡೆ ರಾಜ್ಯ ಹರುಹೆಸ್ಥಲದ ಲಖ್ಖಿಣಾಪುರದ ಮಹಾಲಕ್ಷ್ಮೀದೇವಿ ಅಮ್ಮನವರ ಸೇವೆಗಾಗಿ ನಾನಾ ದೇಶ, ರಾಜ್ಯ ಗ್ರಾಮ ಪರುಷೆಯವರೂ ರೊಖ, ವಸ್ತ್ರ, ಭಂಗಾರ ಮೊದಲಾದ ಕಾಣಿಕೆಗಳನ್ನು ಕೊಟ್ಟರೆಂದು ಇದರಲ್ಲಿ ದಾಖಲಿಸಿದೆ.[೧೬೩] ಮಹಾಲಕ್ಷ್ಮೀ ದೇವಾಲಯದ ಪ್ರಾಕಾರದ ದಕ್ಷಿಣ ಗೋಡೆಯ ಮೇಲೆ ಇರುವ ಶಾಸನದಿಂದ ಈ ವಿಷಯ ಪ್ರಾಪ್ತವಾಗುತ್ತದೆ. ವಿಜಯನಗರದ ದೊರೆ ಅಚ್ಯುತ ದೇವ ಮಹಾರಾಯನ ಆಳ್ವಿಕೆಯ ಈ ಶಾಸನದಲ್ಲಿ ಶಾಲಿವಾಹನ ಶಕ ೧೪೬೦, ವಿಳಂಬಿ ಸಂವತ್ಸರ, ಚೈತ್ರ ಶು.೧೫, ಸ್ಥಿರವಾದ ಎಂದು ತೇದಿ ಇದೆ. ಅದು ಕ್ರಿ.ಶ.೧೫೩೮ ಮಾರ್ಚ್ ೧೫, ಶುಕ್ರವಾರಕ್ಕೆ ಸರಿಹೊಂದುತ್ತದೆ.

ಪೆನುಗೊಂಡೆ ವಿರುಪಂಣಯ್ಯನ ತಮ್ಮ ವೀರಣನಾಯಕನು, ಸಮಸ್ತ ಸೆಟ್ಟಿ ಪಟ್ಟಣಸ್ವಾಮಿಗಳ ಕೈಯಿಂದ ಹರುಹೆ ಲಖ್ಖಿಣಾಪುರದ ಶುಕ್ರವಾರ ಸಂತೆಯಲ್ಲಿ ಬರುವ ಸುಂಕ, ಸುವರ್ಣಾದಾಯ, ಪಸುರಾದಾಯ, ಸರ್ವಾದಾಯವನ್ನು ಪಡೆದು, ಮಹಾಲಕ್ಷ್ಮಿದೇವಿ ಅಮ್ಮನವರಿಗೆ ದತ್ತಿಯಾಗಿ ಕೊಟ್ಟನೆಂದು ಇದರಲ್ಲಿ ದಾಖಲಿಸಿದೆ.[೧೬೪] ಮಹಾಲಕ್ಷ್ಮೀ ದೇವಿಯ ಗುಡಿಗೆ ಕೊಟ್ಟ ದಾನಕ್ಕೆ ಸಂಬಂಧಪಟ್ಟಂತೆ, ವಿಜಯನಗರದ ದೊರೆ ಅಚ್ಯುತದೇವ ಮಹಾರಾಯನ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಶಾಲಿವಾಹನ ಶಕ ೧೪೫೮ ದುರ್ಮುಖಿ ಸಂವತ್ಸರ, ಮಾಘ ಶು ೭, ಬುಧವಾರ, ರಥಸಪ್ತಮಿ ಎಂದು ತೇದಿ ಇದೆ(ಕ್ರಿ.ಶ.೧೫೩೭, ಜನವರಿ ೧೭, ಬುಧವಾರ).

ಪೆನುಗೊಂಡೆಯ ವಿರಪಣ್ಣಯ್ಯನವರ ಬೋಧನೆಯಂತೆ, ಸಾಣೆ ಚಿನ್ನಪ್ಪನಾಯಕನ ಕುಮಾರ ಕೃಷ್ಣಪ್ಪನಾಯಕನು, ದೊರೆಯು ತಮಗೆ ಮಾಗಣಿನಾಯಕ ತನಕ್ಕೆ ಕೊಟ್ಟಿದ್ದ ಪೆನುಗೊಂಡೆ ರಾಜ್ಯ ರೊದ್ದನಾಡಿನ ಗುಯ್ಯಲೂರು ಸೀಮೆಯ ಲಕ್ಷ್ಮೀಸಾಗರವೆಂಬ ಪ್ರತಿನಾಮದ ಗೊರವನಹಳ್ಳಿ ಎಂಬ ಸರ್ವಮಾನ್ಯದ ಅಗ್ರಹಾರವನ್ನು ಹರುಹೆ ಲಖ್ಖಿಣಾಪುರದ ಮಹಾಲಕ್ಷ್ಮೀದೇವಿ ಅಮ್ಮನವರ ಸೇವೆಗೆ ಧಾರೆ ಎರೆದು ಕೊಟ್ಟನೆಂದು ಇದರಲ್ಲಿ ದಾಖಲಿಸಿದೆ.[೧೬೫]

ಕ್ರಿ.ಶ.೧೫೧೨ರಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿನ ಈ ಶಾಸನದಲ್ಲಿ ರಾಮಶೆಟ್ಟಿಪುರದ ಜನಾರ್ಧನ ದೇವರಿಗೆ ಅಂಗರಂಗ ಭೋಗಕ್ಕೆ ಪುಣ್ಯಕಾಲದಲ್ಲಿ ಭೂಮಿ ಯನ್ನು ದಾನ ನೀಡಿದ ವಿವರ ಇದೆ.[೧೬೬] ವಿಜಯನ ನಗರದ ಅರಸ ಎರಡನೆಯ ದೇವರಾಯನ ಕಾಲದಲ್ಲಿ, ಹಿರಿಯ ಕಟ್ಟಿಗೆಯ ಆವುತಿಯನಾಯಕರ ಮಕ್ಕಳು ಕಟ್ಟಿಗೆಯ ಗುಂಡಪ್ಪನಾಯಕರು ಮತ್ತು ವಿಜಯನಗರದ ಸಾಮಂತರಾದ ಇವರ ಆಡಳಿತಾವಧಿಯಲ್ಲಿ ಅರಮನೆಯ ಅಧಿಕಾರಿ ಯೆಲಹಕನಾಡ ಪ್ರಭು ಚೌಲದ ಭೀಮಿಸೆಟ್ಟಿಯರ ಮಕ್ಕಳು ಚಿಕ್ಕಭೀಮಂಣನೂ ಶ್ರೀ ಪ್ರಸಂನ್ನ ಕೇಶವದೇವರು, ನಾರಸಿಂಹ ದೇವರು, ಗೋಪಾಲದೇವರು ಮತ್ತು ಬಿಜಯಂಗೆಯುವ ದೇವರುಗಳಿಗೆ ಸಂಪ್ರೋಕ್ಷಣೆಯನ್ನು ಮಾಡಿಸಿದನು. ಈ ಶಾಸನದ ಕಾಲ ಕ್ರಿ.ಶ.೧೪೩೫[೧೬೭] ಬೇಲೂರಿನ ಕ್ರಿ.ಶ.೧೯೭೮ರ ೧೬೫ನೆಯ ಶಾಸನವು ಗುಂಡಪ ದಂಡನಾಯಕನಿಗೆ ಸಂಬಂಧಿಸಿದೆ. ಮಹಾರಾಜಾಧಿರಾಜ ವೀರಹರಿಹರರಾಯ, ವೀರಬುಕ್ಕರಾಯ ಮತ್ತು ತೆಪ್ಪದ ನಾಗಣ್ಣ ವೊಡೆಯರು ಕೊಟ್ಟ ಧರ್ಮದತ್ತಿಯನ್ನು ಗುಂಡಪದಂಡನಾಯಕನು ಕಾಪಾಡಬೇಕಿತ್ತು. ಈ ದತ್ತಿಯನ್ನು ಬೇಲೂರು ಸುರೇಂದ್ರತೀರ್ಥರ ಮಠಕ್ಕೆ ಕೊಡಲಾಗಿತ್ತು. ಇವರು ಮಾಧ್ವಯತಿಗಳು. ಎರಡನೆಯ ಹರಿಹರನ ಅಣತಿಯಂತೆ, ಗುಂಡಪ್ಪ ದಂಣಾಯಕ ವೊಡೆಯರು ಬೇಲೂರ ಸುರೇಂದ್ರ ತೀರ್ಥ ಶ್ರೀ ಪಾದಂಗಳ ಮಠದ ಶ್ರೀ ರಾಮದೇವರಿಗೆ ಪೂರ್ವದಲ್ಲಿ ಅರಮನೆಯಿಂದ ಶ್ರೀ ರಾಮದೇವರ ಅಮ್ರುತಪಡಿ, ಯತಿಗಳ ಭಿಕ್ಷೆ ದೇವರ ದೀಪ್ತಿಗೆ ಬೇಲೂರ ಮೂಲೆಗಾರ ಚವುಡಪ್ಪ ಬಸವಸೆಟ್ಟಿಗಳ ಬಯಲು ಗದ್ದೆಯನು ತೆಗೆದುಕೊಂಡ ನಿದರ್ಶನವಿದೆ.[೧೬೮]

ಬೇಲೂರಿನ ಇನ್ನೊಂದು ಶಾಸನದಲ್ಲಿ, ಸದಾಶಿವರಾಯನ ಅಧಿರಾಜತ್ವದ ಉಲ್ಲೇಖವಿದ್ದರೂ ರಾಮರಾಜಯ್ಯ ತಿರುಮಲರಾಜಯ್ಯನವರ ನಿರೂಪದ ಮೇರೆಗೆ ಬೇಲೂರಲ್ಲಿ ಸಮಸ್ತ ಹಲರೂ ಮತ್ತು ಪಾಂಚಾಳದವರೂ ತಮ್ಮ ಮಧ್ಯೆ ಬಂದ ವ್ಯಾಜ್ಯವನ್ನು ಬಗೆಹರಿಸಕೊಂಡರು. ಆ ನ್ಯಾಯವನ್ನು ಬಗೆಹರಿಸಲು ಊರಿನ ೮೮ ಜನ ಶ್ರೀ ವೈಷ್ಣವ ಮಹಾಜನಂಗಳು ಮತ್ತು ಇಬ್ಬರು ಅಧಿಕಾರಿಗಳು ಸೇರಿದ್ದರೆಂಬುದು ಗಮನಾರ್ಹ. ಈ ವ್ಯಾಜ್ಯ ಬಗೆಹರಿಸುವಲ್ಲಿ ಮನಬನಸೆಟಿಯರು, ರಾಮರಾಚಯ್ಯ ಮತ್ತು ತಿರುಮಲರಾಜಯ್ಯನವರು ಹಲರು ಮತ್ತು ಪಾಂಚಾಳದವರಿಗೆ ಹೀಗೆ ನ್ಯಾಯವನ್ನು ಬಗೆಹರಿಸಿಕೊಟ್ಟರು. ಬೇಲೂರಿನ ತೆಂಕಣ ವೀದಿಯಿಂದ, ಪಶ್ಚಿಮದ ತೆಂಕಣಕೋಟೆಯ ಚತುರ್ಭೂಮಿಗಳ ಕಲ್ಲನು ಹಾಕಿಸಿಕೊಟ್ಟು,

ನಂತರ ಪಾಂಚಾಳದವರಿಗೆ ಕೇರಿ ಮನೆಗಳಲ್ಲಿ ಮದುವೆ, ಶುಭಕಾರ್ಯ, ಶೋಭನಗಳಿಗೆ ನಡೆಯುವ ಕಾರ್ಯಗಳನ್ನು ನಡೆಸಿಕೊಡಲು ಪಾಂಚಾಳದವರಿಗೆ ನಿರೂಪಿಸಿದರು. ಇದು ಬೇಲೂರಿನ ಚೆನ್ನಿಗರಾಯನ ಗುಡಿಯಲ್ಲಿ ದೇವರ ಸಮ್ಮುಖದಲ್ಲಿ ನಡೆದಿರುವಂತಹುದು.[೧೯] ಸದಾಶಿವರಾಯನ ಕಾಲದ ಇನ್ನೊಂದು ಶಾಸನದಲ್ಲಿ ಚೆಂನಿಗರಾಯನ ಅಮ್ರುತಪಡಿಗೆ ಚೋಗಣಸೆಟ್ಟಿಯ ಮಗ ಚೆಂನಪ್ಪಸೆಟ್ಟಿಗೆ ಕೊಟ್ಟ ಪೇಟೆಯ ಶಾಸನದ ಕ್ರಮದ ಬಗ್ಗೆ ಈ ಶಾಸನವು ತಿಳಿಸುತ್ತದೆ. ಈ ಶಾಸನ ಈ ಕೆಳಗಿನಂತಿದೆ.

೧ ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರಚಾ

೨ ರವೇ ತ್ರಯಿಲೋಕ್ಯನಗರಾರಂಭಮೂಲಸ್ತಂಭಾಯ

೩ ಶಂಭವೇ ಸ್ವಸ್ತಿ ಶ್ರೀ ವಿಜಯಾಭ್ಯುದಯಶಾಲಿ ವಾಹನ ಶಕ

೪ ವೊರುಶ ೧೪೮೩ ನೆಗೆ ಸಂದ ಕಲಿವಿನ ಕ್ರಮ

೫ ವೆಂತೆಂದರೆ ಕಲಿವಿನಕೆ ಸಲುವಾ...

೬ ...ದುಂದುಭಿಸಂವತ್ಸ

೭ ರದ ಭಾದ್ರಪದ ಬ ೧೩ ಲೂ॥

೮ ಶ್ರೀ ಮನ್ಮಹಾಮಂಡಲೇಶ್ವರಾ

೯ ರಾಮರಾಜಯದೇವಮಹಾ ಅರಸು

೧೦ ಗಳ ಮುದ್ರೆಯ ಗೊರಊರ ಹೆ

೧೧ ಬಾರುವರು ಮಾದಿಹಳಿಸೀಮೆ

೧೨ ಯ ಪ್ರಭುಗಳು ಮಾದಿಹಳಿಯ ವೀ

೧೩ ರಪ್ಪ ಗಉಡ ಮೂಲಕಾರ್ತಿವೀರ್ಯ

೧೪ ಶಿಉನಿಪುರದ ಭದ್ರಪ ಹಗಜೆವೀ

೧೫ ರಭದ್ರ ಸುಂಡೆ ಹಳಿ ಗೋವಿಂದ ಸೆಟ್ಟಿ

೧೬ ಚಿಕ್ಕಗದುಬಳಿ ಮಜೆಯಗೊಂಡ ದ

೧೭ ಸಲೂರ ಗಿಡಯ ಬೊಂಮೇನಹಳಿ ಸಿಂಗಾರಿ

೧೮ ಆತ್ತಿಕಾರಿ ಕಲ್ಲನಾಯ್ಯಕ ಮುಂತಾದ ಗ

೧೯ ಉಡುಗಳು ಜೋಗಣಸೆಟ್ಟಿಯ ಮಗ ಚೆಂನ

೨೦ ಪ್ಪ ಸಟ್ಟಿಗೆ ಕೊಟ್ಟ ಪೇಟೆಯ ಶಾಸನದ ಕ್ರಮವೆ

೨೧ ೦ತೆಂದರೆ ಚೆಂನಿಗರಾಯನ ಅಮ್ರುತಪಡಿ

೨೨ ಗೆ ಸಲುವ ಮಾಡಿಹಳಿಯಸ್ತಳದ ಮೂಳೇನ

೨೩ ಹಳಿಯನು ಮಂನ..... ಪೇಟೆಯಾಗಿ ತೊ

೨೪ ಟ್ಟಿವಾಗಿ ಈ ಗ್ರಾಮಕೆ ಪ್ರತಿನಾಮ ಚೆಂನಿಗರಾ

೨೫ ಯಪೇಟೆ ಸರ್ವಸ್ವಾಮ್ಯ ನಿಂನ ಪುತ್ರ ಪ

೨೬ ಉತ್ರಶ. ಮು ಉತ್ತಿಯಾಗಿ ಆ ಚಂದ್ರಾರ್ಕ

೨೭ ಸ್ಥಾಯಿಯಾಗಿ ಅನುಭವಿಸಿಕೊಂಡು ವರು

೨೮ ಶ ೧ಕ್ಕೆ ಚೆಂನಿಗರಾಯನ ಅಮ್ರುತಪಡಿಗೆ

೨೯ ಕಡುಗುತ್ತಿಗೆ ಗಂ ೩೦ ಅಕ್ಷರದಲ್ಲು ಮುವ

೩೦ ತ್ತು ವರಹಮಂ ತೆತ್ತು ಬಹೆ ಯಿಷ್ಟಕ್ಕೆ ಆವ

೩೧ ವ ತಪ್ಪಿದರೆ ಹೆತತಾಯ ಮೈತನವ ಮಾ

೩೨ ಡಿದವನು.... ಉ ಅನ್ಯಾಯವಾಗಿ ಕೊಂ

೩೩ ಡರೆ ಕಾ .....ಲಿಂಗವಂತ ತಪ್ಪಿದ ವಿ

೩೪ ಭೂತ್ತಿ ರುದ್ರಾಕ್ಷೆಗೆ ತಪ್ಪಿದವನು ತಿರನಾ

೩೫ ಮಧಾರಿಯಾದ ವೈಕುಂಟತೀರ್ತಕ್ಕೆ ತ

೩೬ ಪ್ಪಿದವನು ಯಿ ಗ್ರಾಮಕ್ಕೆ ಸುಂಕ ಮಗ್ಗದೆ

೩೭ ಜೆ ಮನೆ ಸಿಧಾಯ ಸರ್ವಮಾನ್ಯಸ್ತಾನ

೩೮ ಮಾನ್ಯ ಪೂರ್ವಮರಿಯಾದ ಲಕ್ಷ ಮಿ

೩೯ ಪತಿಯ ಬರಹ[೧೭೦]

ಕೃಷ್ಣ ದೇವರಾಯನ ಆಳ್ವಿಕೆಯ ಕಾಲದಲ್ಲಿ, ಗುಮ್ಮಳಾಪುರ ವೆಂಕಟರಮಣ ದೇವಾಲಯದ ಸಮೀಪದ ಚಪ್ಪಡಿಯ ಮೇಲೆ ನಾಗಮಂಗಲದ ವೀರಭದ್ರದೇವರ ಪ್ರಿಯ ಪುತ್ರರಾದ ಗುಮ್ಮಳಾಪುರದ ಅಕ್ಕಲಚೆನ್ನಿಸೆಟ್ಟಿ ಎಂಬುವವನನ್ನೂ ಪ್ರತಿಪಾದಿಸುತ್ತದೆ.[೧೭೧] ಈ ಶಾಸನದ ಮೂಲಕ ಅಕ್ಕಲಚೆನ್ನಿಸೆಟ್ಟಿ ವೆಂಕಟರಮಣ ದೇವಾಲಯಕ್ಕೆ ದಾನ ದತ್ತಿಗಳನ್ನು ಕೊಟ್ಟಿರಬೇಕು ಎಂದೆನಿಸುತ್ತದೆ ಶಾಸನವು ಅಪೂರ್ಣವಾಗಿವೆ.

ದೇವಾಲಯಗಳಿಗೆ ಜನರು ತೋರಿದ ವಿಶೇಷ ಆಸಕ್ತಿಯನ್ನು ಈ ಮೇಲಿನ ಶಾಸನಗಳಿಂದ ತಿಳಿಯಬಹುದಾಗಿದೆ. ವಿಶ್ವದ ಎಲ್ಲ ಜನಾಂಗಗಳಲ್ಲಿಯೂ, ದೇವರೊಬ್ಬನಿದ್ದಾನೆ, ಅವನು ಈ ಜಗತ್ತಿನ ಸೃಷ್ಟಿಕರ್ತೃ, ನಿಯಂತೃ, ಅವನ ಒಲವಿನಿಂದ ಸುಖ, ಮುನಿಸಿನಿಂದ ದುಃಖ ಕಷ್ಟ ಕಾರ್ಪಣ್ಯ ಉಂಟಾಗುತ್ತದೆ ಎಂಬ ನಂಬಿಕೆ ಒಂದಿಲ್ಲೊಂದು ರೀತಿಯಲ್ಲಿ ನೆಲೆನಿಂತಿದೆ. ಅಂತಹ ಕರ್ತೃ ತಮಗಾಗಿ ಈ ಲೋಕಕ್ಕೆ ಬಂದಿದ್ದಾನೆಂದು ಪರಿಭಾವಿಸಿ ಅವನನ್ನು ಒಲಿಸಿಕೊಳ್ಳಲು ಅವನಿಗೆ ಬಿಡಾರವನ್ನು ಕಟ್ಟಿ ಅಲ್ಲಿ ಅವನನ್ನು ಕಾಣಲು ನಡೆಸಿದ ಪ್ರಯತ್ನದ ಫಲವೇ ದೇವಾಲಯ.

ವೇದಗಳ ಕಾಲದಲ್ಲಿ ಪ್ರಾಯಶಃ ದೇವಾಲಯಗಳು ಇರಲಿಲ್ಲ. ವೈದಿಕ ಯಜ್ಞಗಳನ್ನು ಮಾಡುತ್ತಿದ್ದ ಯಾಗಶಾಲೆಯೇ ಕಾಲಕ್ರಮೇಣ ಭಕ್ತಿಪಂಥಗಳ ಪ್ರಭಾವದಿಂದ, ವಿಗ್ರಹಾರಾಧನಾ ಪದ್ಧತಿಗೆ ನಾಂದಿಯಾಗಿ ಮುಂದೆ ಯಾಗಶಾಲೆಯೇ ದೇವಾಲಯವಾಗಿ ರೂಪಾಂತರವಾಯಿತೆಂದು ಹೇಳಬಹುದು. ಭಾರತೀಯರು ಧರ್ಮ ಸಂಸ್ಕೃತಿಗಳೆಂಬ ದೀಪವನ್ನು ಜ್ವಲಂತವಾಗಿ ಕಾಪಾಡಿಕೊಂಡು ಬಂದ ದೇವಾಲಯಗಳು, ನಿರ್ವಹಿಸಿರುವ ಪಾತ್ರ ತುಂಬಾ ಹಿರಿದು, ಅವು ಸಮಾಜದ ಐಕ್ಯತೆಗೂ ಶ್ರಮಿಸಿವೆ. ಅಲ್ಲದೆ ನೂರಾರು ಜನರ ಜೀವನೋಪಾಯಕ್ಕೂ ಇಂಬುಕೊಟ್ಟಿದೆ. ಲಲಿತ ಕಲೆಗಳಿಗೆ ಉತ್ತೇಜನ ನೀಡಿದೆ. ವೈದಿಕ ಮತ್ತು ಶಾಸ್ತ್ರೀಯ ಜ್ಞಾನಗಳು ಉಳಿಯಲು ಬೆಳೆಯಲು, ಹರಡಲು ದೇವಾಲಯಗಳು ಸಹಾಯಕ ಮಾಡಿವೆ. ಮನಸ್ತಾಪ ವ್ಯಾಜ್ಯ ವಿವಾದಗಳಲ್ಲಿ ನ್ಯಾಯಾಲಯವಾಗಿಯೂ ತೀರ್ಪನ್ನು ನೀಡಿವೆ. ಇಂತಹ ಹಿನ್ನೆಲೆಯುಳ್ಳ ದೇವಾಲಯಗಳ ರಚನೆ ಜೀರ್ಣೋದ್ಧಾರ ಹಾಗೂ ದೇವರ ಸ್ಥಾಪನೆ,

ಆರಾಧನೆಗೆ ಸಂಬಂಧಿಸಿದಂಥ ವಿವರಗಳನ್ನು ನೀಡುವ ಅನೇಕ ಕನ್ನಡ ಶಾಸನಗಳನ್ನು ಅವಲೋಕಿಸಿದ್ದೇವೆ.

ಇಮ್ಮಡಿ ಹರಿಹರನ ಕಾಲಕ್ಕೆ ಸಂಬಂಧಪಟ್ಟಂತಹ ೧೩೮೨ನೆಯ ಬೇಲೂರಿನ ಶಾಸನದ ಪ್ರಕಾರ, ಹರಿಹರದ ಮಂತ್ರಿ ಮುದ್ದದಂಡೇಶನು ವ್ಯಕ್ತಿತ್ವದಲ್ಲಿ ಸುಮಂತ್ರ ಹಾಗೂ ಯೌಗಂಧರಾಯಣರಂತಿದ್ದು ರಾಜನ ಹಾಗೂ ಪ್ರಜೆಗಳ ಯೋಗಕ್ಷೇಮವನ್ನು ಪ್ರೀತಿಯಿಂದ ನೋಡಿಕೊಂಡು ಆಡಳಿತವನ್ನು ನಡೆಸುತ್ತಿದ್ದನೆಂದು ತಿಳಿಸಿದೆ. ಅದರ ಜೊತೆಗೆ ನಕರರು, ಮುಮ್ಮರಿದಂಡರು ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಪೃಥ್ವಿಸೆಟ್ಟಿಯ ನಿರ್ಣಯದ ಮೇರೆಗೆ ಕೇಶವ ದೇವರಿಗೆ ಸಲ್ಲಬೇಕೆಂದು ಕೇಶವ ದೇವಸ್ಥಾನದ ಕಳಶವನ್ನು ಕಾಂಚನಮಯವಾಗಿ ಉಲ್ಲೇಖಿಸಿದ್ದನ್ನು ಈ ಶಾಸನ ತಿಳಿಸುತ್ತದೆ.[೧೭೨]

ವಿಜಯನಗರದ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಕ್ರಿ.ಶ.೧೩೯೯ನೇ ಇಸ್ವಿಗೆ ಸರಿ ಹೊಂದುವಂತಹ ಈ ಶಾಸನದಲ್ಲಿ ಆನೆಗನಕೆರೆಯ ಶ್ರೀ ಚನ್ನಕೇಶವ ದೇವರ ನಂದಾದೀವಿಗೆಯ ಎಣ್ಣೆಯ ಸಲುವಾಗಿ ಲಖಂಣವೊಡೆಯರ ನಿರೂಪದಂತೆ ರಾಯಿಸೆಟಿಯರು ಊರಿನಲ್ಲಿ ತೆಲ್ಲಿಗರಿಂದ ಬರುವ ಸುಂಕದಲ್ಲಿ ನೀಡಿದರು.[೧೭೩] ಹೀಗೆ ವಿಜಯನಗರ ಕಾಲದಲ್ಲಿ ಮತ್ತು ನಂತರದಲ್ಲೂ ಭಾಗವತ ಮತ್ತು ಕೃಷ್ಣಲೀಲೆ ಹಾಗೂ ಶ್ರೀವೈಷ್ಣವ ಪಂಥಕ್ಕೆ ಸೇರಿದ ಚಿತ್ರಗಳೇ ಹೆಚ್ಚು ಜನಪ್ರಿಯವಾಗಿರುವುದು ಕಂಡುಬರುತ್ತದೆ. ಶ್ರೀಕೃಷ್ಣದೇವರಾಯನ ಕಾಲದಿಂದ ವಿಜಯನಗರದಲ್ಲಿ ಭಾಗವತ/ವೈಷ್ಣವ ಧರ್ಮಕ್ಕೆ ಹೆಚ್ಚಿನ ಒಲವು ದೊರೆತಿರುವುದು ಶಾಸನಗಳಿಂದ ನಾವು ತಿಳಿಯಬಹುದು.

ವಿಜಯನಗರದ ಬುಕ್ಕರಾಯನ ಕಾಲದ ಈ ಶಾಸನವು ಕ್ರಿ.ಶ.೧೩೮೦ರ ಕಾಲದ್ದಾಗಿದೆ. ಮಹಾಪ್ರಧಾನ ಮಲೆಯ ದಂಣಾಯಕ್ಕರು ಕೊಡಗಿಯ ಶಂಕರನಾರಾಯಣ ದೇವರಿಗೆ ಭೂಮಿಯನ್ನು ನೀಡಿ ಅದರ ಜವಾಬ್ದಾರಿಯನ್ನು ಕಿಮ್ಮಿಸೆಟ್ಟಿಗೆ ನೀಡಲಾಯಿತು.[೧೭೪] ಇದರಿಂದ ಸೆಟ್ಟಿಕುಲದವರ ಪ್ರಾಮಾಣಿಕತೆಯನ್ನು ಅರಿಯಬಹುದು. ಕಿಮ್ಮಿಸೆಟ್ಟಿಗೆ ವಹಿಸಿದ ಜವಾಬ್ದಾರಿಯನ್ನು ಗಮನಿಸಿದರೆ ಸೆಟ್ಟಿಗಳ ಪಾತ್ರ ಹಿರಿದಾಗಿತ್ತು ಎನ್ನುವುದು ಅರಿವಾಗುತ್ತದೆ. ಕ್ರಿ.ಶ.೧೫೪೭ರ ಬಸರೂರಿನ ಶಾಸನವ.[೧೭೫] ಅಚ್ಚಪ್ಪ ಒಡೆಯರನ ಆಳ್ವಿಕೆಯದ್ದು. ಸದಾಶಿವರಾಯನು ಆಳುತ್ತಿದ್ದಾಗ ಬಸರೂರಿನಲ್ಲಿ ಸಂತಾನ ಶಂಕರಲಿಂಗಸೆಟ್ಟಿ ಎಂಬಾತ ಧರ್ಮಸತ್ರವೊಂದನ್ನು

ಕಟ್ಟಿ ಅದಕ್ಕೆ ಕೆಲ ಭೂಮಿಗಳನ್ನು ದತ್ತಿಯಾಗಿ ನೀಡಿದ. ಇಷ್ಟಲ್ಲದೆ ವಿಠ್ಠಲದೇವರ ಪೂಜೆಗಾಗಿ ಕೆರೆಯೊಂದನ್ನು ಕಟ್ಟಿಸಿಕೊಟ್ಟ. ಕಾಲಕ್ರಮೇಣ ಆ ಧರ್ಮಛತ್ರವು ಜೀರ್ಣಾವಸ್ಥೆಗೆ ತಲುಪಿತು. ಕುಪ್ಪಣ್ಣ ಸೆಟ್ಟಿ ಉದಿರೆ ಸೂರಿಸೆಟ್ಟಿ ಎಂಬಾತ ಅದನ್ನು ಪುನಃ ಕಟ್ಟಿಸಿದುದಲ್ಲದೆ ಅದಕ್ಕೆ ಭೂಮಿ ಮತ್ತು ಹಣವನ್ನು ದತ್ತಿ ನೀಡಿದ. ಈ ವ್ಯಕ್ತಿಗಳಿಬ್ಬರ ದಾನಗಳಲ್ಲದೆ ಇನ್ನಿತರ ಕೆಲವರು ಅದೇ ಛತ್ರದ ಆಗುಹೋಗು ಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನೀಡಿದ ಮತ್ತೂ ಕೆಲ ದತ್ತಿಗಳು ಶಾಸನದಲ್ಲಿ ಅಡಕವಾಗಿದೆ.

ಶ್ರೀವೀರನರಸಿಂಗ ದೇವರಾಯ ಮಹಾರಾಯರು ವಿಜಯನಗರದ ಸಿಂಹಾಸನದಲ್ಲಿ ಪೃಥ್ವಿರಾಜ್ಯಂಗೈಯುತ್ತಿರುವಾಗ, ಕ್ರಿ.ಶ.೧೫೦೮ರ ಕಾಲದಲ್ಲಿನ ಈ ಶಾಸನವು ವೀರನರಸಿಂಗ ದೇವರಾಯ ಮಹಾರಾಯರ ಕ್ಷೇಮಾಭಿವೃದ್ಧಿಗಾಗಿ ಕೈಗೊಂಡ ಕೈಂಕರ್ಯವನ್ನು ತಿಳಿಸುವ ಶಾಸನವಿದು. ಬಸವರಸವೊಡೆಯರು ಬಸರೂರ ಪಡುವಕೇರಿಯ ತಿರುಮಲದೇವರಿಗೆ ನೈವೇದ್ಯಕ್ಕೆಂದು ಬರೆಸಿಕೊಟ್ಟ ತಾಮ್ರ ಶಾಸನವಿದು. ತಿರುಮಲದೇವರ ನಂದಾದೀಪಕ್ಕಾಗಿ ಆಚಂದ್ರಾರ್ಕವಾಗಿ ನೀಡಿರುವ ಈ ದಾನವನ್ನು ಹಲರು ಸೆಟ್ಟಿಕಾರರು ನಡೆಸಲು ಸಹಾಯ ಮಾಡಿದರು. ಕುಪ್ಸೆಟ್ಟಿಯ ಯೀಸರಸೆಟ್ಟಿಯ ಮಗಳ ಮಕ್ಕಳು, ದುಗ್ಸೆಟಿಯ ನಾರಣಸೆಟಿಯ ಮಗ ಬೆ(ಂ)ಮ್ಮಸೆಟಿ, ತಂಗಕ ಸೆಟಿತಿಯ ಮಗ ಬೆ(ಂ)ಮ್ಮ ಭಂಡಾರಿ, ಲಕುಮ ಸೆಟಿತಿಯ ಮಗಳು ಮಾಂದಮಕ್ರನು ಈ ಮೂವರೂ ತಮ್ಮ ತೋಟದ ಆದಾಯದ ಕೆಲ ಭಾಗವನ್ನು ತಿರುಮಲ ದೇವರಿಗೆ ನೀಡಿದರು.[೧೭೬]

ಹರಪನಹಳ್ಳಿ ತಾಲೂಕು ಬಾಗಳಿ ಕಲ್ಲೇಶ್ವರ ದೇವಾಲಯದ ಶಾಸನವು ೨೩-೧೨-೧೫೫೦ (ಮಂಗಳವಾರ) ಸದಾಶಿವ ಮಹಾರಾಮ ವಿಜಯನಗರಿ ಹಡಪದ ಬಯ್ಯಪನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ಅಮರ ಮಾಗಣಿಯಾಗಿ ಪಾಲಿಸಿದ ಕೋಗಳಿ ಸಲುವ ಕೊಟ್ಟೂರು ಸೀಮೆ ಎಂದಿದೆ. ಬಾಗುಳಿ ಆಡುತ್ತಿದ್ದ ಹಾವಳಿ ನಾಯಕ ಕೊಟ್ಟೂರು ವಲಿಟಲಿಕ್ಕಿ ಶೆಟ್ಟಿ ಲಿಂಗಮ್ಮ ಆತನ ಹೆಂಡತಿ, ಬಾಗಳಿಯ ಪಟ್ಟಣಸ್ವಾಮಿ ಭತ್ತ, ಬಂಗಾರವನ್ನು ಕಲಿ ದೇವರಿಗೆ ಕೊಟ್ಟ ಸಂಗತಿಯಿದೆ. ಸದಾಶಿವರಾಯ ಮಹಾರಾಯರ ೧೧-೧೨-೧೫೫೦(ಬುಧವಾರ) ಹಡಪದ ಕೃಷ್ಣಪ್ಪನಾಯಕರಿಗೆ ಕೊಟ್ಟ ಕೊಟ್ಟೂರ ಸೀಮೆಗೆ ಸಲುವ ಬಾಗುಳಿಯ ಚಾಮಿನಾಯಕರ ಮಗ ಹೆಳವಿ ನಾಯಕರೂ ಬಾಗುಳಿಯ ಕುಮಕರ ಬಸದಿಗೌಂಡನ ಮಗ ಲಿಂಗಗೊಂಡ ಇತರ ವಿವರಗಳಿವೆ ಎಂದಿದೆ.[೧೭೭]

೪.೨. ಮಠಮಾನ್ಯಗಳ ನಿರ್ಮಾಣ ನಿರ್ವಹಣೆ

ಮಠವೆಂದರೆ ಮೂಲತಃ ಮುನಿಗಳ ವಾಸಸ್ಥಾನವೆಂದರ್ಥ. ಸಂಸ್ಕೃತದ ನಿಘಂಟುಕಾರನಾದ ಅಮರಸಿಂಹನು "ಮಠಃ ಛಾತ್ರಾದಿ ನಿಲಯಃ" ಎಂದಿದ್ದಾನೆ. ಅಂದರೆ ವಿದ್ಯಾರ್ಥಿಗಳು ವಾಸಿಸುವ ಸ್ಥಳವೇ ಮಠ. ಇಲ್ಲಿ ಗುರುಗಳು ಶಿಷ್ಯರೂ, ಸನ್ಯಾಸಿಗಳೂ, ಬ್ರಹ್ಮಚಾರಿಗಳೂ ವಾಸ ಮಾಡುತ್ತಿದ್ದರು. ಇಲ್ಲಿ ವಿದ್ಯೆ, ಜ್ಞಾನ, ಮತ, ಧರ್ಮಗಳ ಪ್ರಸಾರ ಕಾರ್ಯ ನಡೆಯುತ್ತಿತ್ತು.[೧೭೮]

ವೇದಗಳ ಕಾಲದಲ್ಲಿ ವನವಾಸಿಗಳಾಗಿದ್ದ ಋಷಿ ಮುನಿಗಳು ತಮ್ಮ ಆಶ್ರಯಗಳಲ್ಲಿ ವಿದ್ಯಾರ್ಥಿಗಳಿಗಾಗಿ ಪರ್ಣಶಾಲೆಗಳನ್ನು ರಚಿಸಿ ಅಲ್ಲಿ ಅವರಿಗೆ ವಿದ್ಯೆ ಕಲಿಸುತ್ತಿದ್ದರು. ಇವೇ ಗುರುಕುಲಗಳು. ಈ ಗುರುಕುಲದ ಪರ್ಯಾಯ ನಾಮವೇ ಮಠ.[೧೭೯] ಪ್ರಾಚೀನ ಭಾರತದಲ್ಲಿ ತತ್ವ ಚಿಂತನೆ ಮತ್ತು ಧರ್ಮಬೋಧನೆ ಅರಣ್ಯಗಳ ನಡುವಿನ ಆಶ್ರಮಗಳಲ್ಲೇ ನಡೆಯುತ್ತಿತ್ತು. ಈ ಮಾದರಿಯ ವಿಧಾನವನ್ನು ಪ್ರಾಚೀನ ಗ್ರೀಸ್‌ನಲ್ಲಿ 'ಜಿಮ್ನಾಶಿಯಂ' ಎಂದು ಕರೆಯಲಾಗುತ್ತಿತ್ತು.[೧೮೦]

'ಮಠ' ಎಂಬ ಪದಕ್ಕೆ ಆಂಗ್ಲ ಭಾಷೆಯಲ್ಲಿ 'Monastery' ಎಂಬ ಪದವಿದೆ. ಇದು ಗ್ರೀಕ್ ಮೂಲದ 'Monachos'ನಿಂದ ಬಂದಿದ್ದು. 'Living alone' ಎಂಬ ಅರ್ಥವನ್ನು ಒಳಗೊಂಡಿದೆ.[೧೮೧] ಏಕಾಂತತೆ' ಅಥವಾ 'ಮುಕ್ತತೆ' ಎಂಬುದೇ ಇದರ ತಾತ್ಪರ್ಯ. 'ಮ್ಯಾಕ್ ಡೊನೆಲ್ 'ರ ಸಂಸ್ಕೃತ ಶಬ್ದಕೋಶದಲ್ಲಿ ಒಬ್ಬ ಸನ್ಯಾಸಿಯ ಇಲ್ಲವೆ ವಿದ್ಯಾರ್ಥಿಯ ಕುಟೀರ. ಒಂದು ಧಾರ್ಮಿಕ ಪಾಠಶಾಲೆ.[೧೮೨] ಎಂದು ವ್ಯಾಖ್ಯಾನಿಸಲಾಗಿದೆ.

'ಶಬ್ದಕಲ್ಪದ್ರುಮ'ದಲ್ಲಿ ಮಠವನ್ನು 'ಆಧ್ಯಾತ್ಮ ಗುರುವೊಬ್ಬನ ನಿವಾಸ ಸ್ಥಾನ; ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಬರುವವರಿಗೆ ಆಶ್ರಯ ಕೊಡುವ ಸ್ಥಾನ' ಎಂದು ವಿವರಿಸಲಾಗಿದೆ.[೧೮೩] ನ್ಯಾಯಾಂಗದ ಪರಿಭಾಷೆಯಲ್ಲಿ ಹೇಳುವುದಾದರೆ ಮಠವು ಸನ್ಯಾಸಿಗಳ ಸಂಸ್ಥೆ, ಒಬ್ಬ ಉನ್ನತ ಅಧಿಕಾರಿ ಇದರ ಅಧ್ಯಕ್ಷನಾಗಿರುತ್ತಾನೆ. ಒಂದು ವಿಶಿಷ್ಟ ಸಂಪ್ರದಾಯದ ಸನ್ಯಾಸಿಗಳ ಉಪಯೋಗ ಹಾಗೂ ಅನುಕೂಲಕ್ಕಾಗಿ ಅದು ಸ್ಥಾಪಿತವಾಗಿರುತ್ತದೆ.[೧೮೪] ಒಟ್ಟಾರೆ ಮಠ ವೆಂದರೆ ಸನ್ಯಾಸಿಗಳು ವಾಸಿಸುವ ಸ್ಥಳ ಅಥವಾ ಕುಟೀರ; ತಪಸ್ಸಿನ ಜ್ಞಾನಾನ್ವೇಷಣೆಯ ಕೇಂದ್ರ, ಕಾಲಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಮಾರ್ಪಟ್ಟು ಮುಂದೆ ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಸಾರ ಮಾಡುವ ಕೇಂದ್ರವಾಗಿ ಬೆಳೆಯಿತು.

ಭಾರತೀಯ ಇತಿಹಾಸದಲ್ಲಿ ಕ್ರಿ.ಪೂ.೫ನೆಯ ಶತಮಾನದಷ್ಟು ಪುರಾತನ ಕಾಲದಿಂದಲೇ ಗುರುಕುಲಗಳಿದ್ದುದಾಗಿ ತಿಳಿದುಬರುತ್ತದೆ. ರಾಮಾಯಣದ ಕಾಲದಲ್ಲಿ ಅನೇಕ ಋಷಿಮುನಿಗಳ ಆಶ್ರಮಗಳು, ತಪೋಕೇಂದ್ರಗಳು ಕರ್ನಾಟಕದಲ್ಲಿದ್ದುವು. ಮುಂದೆ ಪ್ರಾಚೀನ ಕಾಲದ ಬೌದ್ಧ ವಿಹಾರಿಗಳು ಹಾಗೂ ಜೈನ ಬಸದಿಗಳು ಇಂದಿನ ಮಠಗಳ ಸ್ವರೂಪವನ್ನೇ ಹೊಂದಿದ್ದವು.[೧೮೫] ಅಶೋಕನ ಕಾಲ (ಕ್ರಿ.ಪೂ.೩ನೆಯ ಶತಮಾನ)ಕ್ಕಾಗಲೇ ಬೌದ್ಧ ವಿಹಾರಗಳು ಹುಟ್ಟಿದ್ದಿರಬೇಕು.[೧೮೬] ಈ ಹಿನ್ನೆಲೆಯಲ್ಲಿ "ಭಾರತೀಯ ಇತಿಹಾಸದಲ್ಲಿ ಬೌದ್ಧ ಧರ್ಮದ ನವೋದಯ ಕಾಲಕ್ಕೆ ಸನ್ಯಾಸಿ ಮಠಗಳು ಅಸ್ತಿತ್ವದಲ್ಲಿದ್ದ ಬಗೆಗೆ ಸ್ಪಷ್ಟ ಸೂಚನೆಗಳು ದೊರೆಯುತ್ತವೆ. ಮಠ ಇಲ್ಲವೆ ಸನ್ಯಾಸಿಗಳ ನಿವಾಸಕ್ಕೆ ಬೌದ್ಧರು 'ವಿಹಾರ' ಅಥವಾ 'ಸಂಘ' ಎನ್ನುತ್ತಿದ್ದರು ಎಂಬ ಕೆರ್ನಸ್ ಅವರ ಮಾತುಗಳು[೧೮೭] ಮೇಲಿನ ಸೂಚನೆಗೆ ಪೋಷಕವಾಗಿವೆ. ಬೌದ್ಧ ಧರ್ಮದಲ್ಲಿ ಮಠಗಳಿಗೆ ಉನ್ನತವಾದ ಸ್ಥಾನವಿತ್ತು. ಬೌದ್ಧ ಮಠಗಳನ್ನು ವಿಹಾರಗಳೆಂದು ಕರೆಯಲಾಗುತ್ತಿತ್ತು.

ಮಠಗಳ ಇತಿಹಾಸವನ್ನು ಗುರುತಿಸುವಾಗ ಕ್ರಿ.ಶ.೮ನೆಯ ಶತಮಾನವು ಮಹತ್ವದ ಘಟ್ಟವಾಗಿದೆ. ಇದು ಬೌದ್ಧ ಮತ್ತು ಜೈನ ಧರ್ಮಗಳ ವಿರುದ್ಧ ಹಿಂದೂ ಧರ್ಮವು ಪುನರುತ್ಥಾನಗೊಂಡ ಕಾಲ. ಹಿಂದೂ ಧರ್ಮದ ಪರಂಪರೆಯಲ್ಲಿ ಪ್ರಪ್ರಥಮವಾಗಿ ಒಂದು ನಿರ್ದಿಷ್ಟ ಮಾದರಿಯ ಮಠಗಳನ್ನು[೧೮೮] ನಿರ್ಮಾಣ ಮಾಡಿದವರು ಶಂಕರಾಚಾರ್ಯರು.[೧೮೯] ಇತ್ತೀಚೆಗೆ ಭಾರತೀಯ ಮಠಗಳನ್ನು ಕುರಿತು ಅಧ್ಯಯನ ನಡೆಸಿದ Hindu Religious Endowment commission ಪ್ರಕಾರ "ಕೇವಲಾದ್ವೈತ ಸಿದ್ಧಾಂತ ಪ್ರವರ್ತಕರು, ಬೌದ್ಧ ಮತ್ತು ಜೈನ ಧರ್ಮಗಳ ಪ್ರಭಾವವನ್ನು ಬಹುಮಟ್ಟಿಗೆ ಕಡಿಮೆ ಮಾಡಿ ವೇದೋಪನಿಷತ್ ಪ್ರತಿಪಾದಿತ ಧರ್ಮವನ್ನು ಪುನರುತ್ಥಾನಗೊಳಿಸಿದವರೂ ಆದ, ಆದಿಶಂಕರಾಚಾರ್ಯರೇ ಮೊಟ್ಟ ಮೊದಲು ಇಂದಿನ ಮಾದರಿ ಮಠಗಳನ್ನು ಸ್ಥಾಪಿಸಲಾರಂಭಿಸಿದರು."[೧೯೦]

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ ಮತ್ತು ಮಠಗಳಿಗೆ ನಿಕಟವಾದ ಸಂಬಂಧವಿತ್ತು. ಸಾಮಾನ್ಯವಾಗಿ ಇಲ್ಲಿ ದೇವಾಲಯವೇ ಮುಖ್ಯವಾಗಿದ್ದು ಮಠ ಅದರ ಅಂಗವಾಗಿತ್ತು. ಮಠವಿದ್ದುದು ದೇವಾಲಯದ ಮುಖ್ಯಸ್ಥರಾಗಿದ್ದ ಮುನಿ(ಸ್ಥಾನಪತಿ)ಗಳ ವಾಸಸ್ಥಳವಾಗಿ ಮಾತ್ರ.[೧೯೧] ಹೀಗಾಗಿ ಮಠಗಳ ಹೆಸರು ಹೇಳುವಾಗ ದೇವಾಲಯಗಳ ಹೆಸರನ್ನು ಸೂಚಿಸಿಯೇ ಹೇಳಲಾಗುತ್ತಿತ್ತು. ಪ್ರಾಚೀನ ದೇವಾಲಯ ಮಠಗಳು ಏಕಕಾಲದಲ್ಲಿ ಸಮಾಜೋಧಾರ್ಮಿಕ ಸೇವಾ ಕ್ಷೇತ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಸಾಮಾನ್ಯವಾಗಿತ್ತು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಲಾಕುಲೀಶ, ಪಾಶುಪತ, ಕಾಳಾಮುಖ, ಶೈವಮುನಿಗಳು ಸ್ಥಾನಪತಿಗಳಾಗಿದ್ದ ಸಮಯದಲ್ಲಿ ತಾವಿದ್ದ ದೇವಾಲಯಗಳನ್ನೇ ಮಠಗಳನ್ನಾಗಿ ಮಾತ್ರವಲ್ಲದೇ, ಶ್ರೇಷವಿ ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರಗಳನ್ನಾಗಿ ಮಾಡಿದ್ದರು.[೧೯೨] ಸುಮಾರು ೧೧ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಇಂತಹ ಅಪಾರ ಸಂಖ್ಯೆಯ ಶೈವ ಮಠಗಳು ಉತ್ತುಂಗ ಸ್ಥಿತಿಯಲ್ಲಿದ್ದವು. ಈ ಮಧ್ಯೆ ಬಸವಾದಿ ಪ್ರಮಥರ ಉತ್ಕರ್ಷದ ಫಲವಾಗಿ ವೀರಶೈವ ಧರ್ಮದೊಂದಿಗೆ ಸರಿಸಾಟಿಯಾಗಿ ನಿಲ್ಲಲಾಗದ ಬಹುತೇಕ ಶೈವಮಠಗಳು ವೀರಶೈವ ಮಠಗಳಾಗಿ ಪರಿವರ್ತನೆ ಹೊಂದಿದವು.[೧೯೩] ಉದಾಹರಣೆಗೆ ಬೆಳಗಾವಿ ಜಿಲ್ಲೆಯ ಪೂವಲ್ಲಿ(ಹೂಲಿ) ಮಠವು ಹಿಂದೆ ರಾಜ ಮಹಾರಾಜರಿಂದ ಪೂಜಿತರಾಗಿದ್ದ ಶೈವಗುರುಗಳ ಪ್ರಸಿದ್ಧ ಕೇಂದ್ರವಾಗಿತ್ತು. ಕಾಲಾನಂತರದಲ್ಲಿ ಈಗ ಅದು ವೀರಶೈವ ಮಠವಾಗಿ ಪರಿವರ್ತನೆಯಾಗಿದೆ. ಮಠಗಳ ಹಿನ್ನೆಲೆಯನ್ನು ಅವಲೋಕಿಸಿದ ಬಳಿಕ ಮಠಗಳ ನಿರ್ಮಾಣ ನಿರ್ವಹಣೆಯಲ್ಲಿ ಸೆಟ್ಟಿ ಕುಲದ ಪಾತ್ರದ ಬಗ್ಗೆ ಅವಲೋಕಿಸೋಣ.

ಶೆಟ್ಟಿ ಕುಲದವರು ಕೆರೆ ಕಟ್ಟೆ, ಕಾಲುವೆ, ದೇವಸ್ಥಾನ, ಬಸದಿಗಳಿಗೆ ಮಹತ್ತರವಾದ ಪಾತ್ರ ವಹಿಸಿದ್ದಂತೆ ಮಠ-ಮಾನ್ಯಗಳಿಗೂ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಈ ದಿಸೆಯಲ್ಲಿ ಶಾಸನಗಳ ಆಧಾರದಿಂದ ಅವರ ಸೇವೆಯನ್ನು ನೋಡೋಣ. ಕ್ರಿ.ಶ.೧೪೮೭ ಅಕ್ಟೋಬರ್ ೨೧ ಭಾನುವಾರಕ್ಕೆ ಸೇರುವ ಬಸರೂರ "ಪಡುವ ಕೇರಿಯ ಒಳಗೆ ಶ್ರೀ ಮಹಾದೇವರ ಸನ್ನಿಧಿಯಲ್ಲಿ ಪಡುವ ಕೇರಿಯ ಹಲವು ಸೆಟ್ಟಿಕಾಱರಿಗೆ ಗುರುಸ್ತನವಾಗಿದ್ದ ರುದ್ರಾಕ್ಷಿ ಒಡೆಯರು ಮಠವನ್ನು ಕಟ್ಟಿಸಿ" ಎಂದು ಶಾಸನ ಹೇಳುತ್ತದೆ.[೧೯೪] ಈ ಮಠಕ್ಕೆ "ಆ ಚಂದ್ರಾರ್ಕವಾಗಿ ಆ ಮಠದ ಧರ್ಮಕ್ಕೆ ಬರೆಸಿದಂತಾ ಶಿಲಾಶಾಸನದ ವಿವರ[೧೯೫] ತೆಂಗಿನ ತೋಟ, ಹಿತ್ತಿಲು ಇತ್ಯಾದಿಯಾಗಿ ಒಟ್ಟು ೧೯೫ ಗದ್ಯಾಣ ಹೊಂನ ಭುಮಿಯನ್ನು ಅದರ ವಾರ್ಷಿಕ ಉತ್ಪತ್ತಿಯಾಗಿ ಹದಿಮೂರು ಮುಡಿ ಅಕ್ಕಿಯನ್ನು ಮಠಕ್ಕೆ ದಾನ ಮಾಡಲಾಯಿತು. ಇದಲ್ಲದೆ ಎರಡು ಪ್ರತ್ಯೇಕ ಸ್ಥಳಗಳಿಂದ ಒಟ್ಟು ೯೦ ಗದ್ಯಾಣವನ್ನು ದಾನ ಮಾಡಲಾಯಿತು. ಈ ಶಾಸನವು ಚಕ್ರವರ್ತಿ ವಿರುಪಾಕ್ಷನ ಮಗನಾದ ಪ್ರತಾಪರಾಯನು ಸಾಮ್ರಾಜ್ಯವನ್ನು ಆಳುತ್ತಿದ್ದ ಕಾಲವೆಂದು ತಿಳಿಸುತ್ತದೆ.

ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಬಸರೂರ ಪಡುವಕೇರಿಯ ಜೋಕಿಸೆಟ್ಟಿಯ ಮಗಳು ಮತ್ತು ನಾರಣಸೆಟ್ಟಿಯ ಹೆಂಡತಿಯೂ ಆದ ತಿರುಮಕ್ಕಿ ಸೆಟ್ಟಿತಿಯು ಪಡುವ

ಕೇರಿಯಲ್ಲೊಂದು ಮಠವನ್ನು ಕಟ್ಟಿಸಿ ಅದಕ್ಕೆ ಕ್ರಿ.ಶ.೧೫೪೯ ಅಕ್ಟೋಬರ್ ೨೫ ಮಂಗಳವಾರದಂದು ಭೂಮಿ ಹಾಗೂ ಒಂದು ನೂರು ದೊಡ್ಡ ವರಹವನ್ನು ದಾನ ಮಾಡಿದಳು. ದಾನದ ವಿವರಗಳು ಸಾಲ, ಅವುಗಳ ಬಡ್ಡಿ, ತೆರಿಗೆ ಮತ್ತು ಭೂವ್ಯವಹಾರಗಳ ವಿಚಾರ ಶಾಸನದಲ್ಲಿದೆ. ಮೂವತ್ತು ಸಾಲು ಬರಹ ಇರುವ ಈ ಶಾಸನ ಅಪೂರ್ಣವಾಗೇ ಉಳಿದಂತಿದೆ.[೧೯೬] ವಿಜಯನಪ್ಪವೊಡೆಯ ಆಗ ಬಾರಕೂರಿನ ರಾಜ್ಯಪಾಲನಾಗಿದ್ದ. ಸೆಟ್ಟಿವಾಡಿಯ ಅಲ್ಲುಸೆಟ್ಟಿಯ ಮಗ ಸಂಕರಸೆಟ್ಟಿಯು ತನ್ನ ಮೊಮ್ಮಗಳಾದ ತಿರುಮಕ್ಕರಾವುತಿಯು ಮಕ್ಕಳಿಲ್ಲದೆ ಇದ್ದ ಕಾರಣ ಆಕೆಯ ಸಂಪತ್ತಿನಿಂದ ಬಸರೂರ ಪಡುವ ಕೇರಿಯಲ್ಲೊಂದು ಮಠವನ್ನು ಕಟ್ಟಿಸಿ ಅದಕ್ಕೆ ಕ್ರಿ.ಶ.೧೫೨೦ ಏಪ್ರಿಲ್ ೧ ಭಾನುವಾರದಂದು ಭೂಮಿದಾನ ಮಾಡಿದ ಇದರೊಂದಿಗೆ ನಖರೇಶ್ವರ ದೇವರಿಗೂ ಭೂದಾನ ಮಾಡಿದ.[೧೯೭]

ಕೃಷ್ಣದೇವರಾಯನ ಆಡಳಿತ ಕಾಲದಲ್ಲಿ ಲಕ್ಷ್ಮೀನಾರಾಯಣ ಕರಣಿಕನ ಮಗನಾದ ವಿಠ್ಠರಸ ಒಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಸರೂರ ಪಡುವಕೇರಿಯ ಸಂಕರಸೆಟ್ಟಿಯ ಮಗ ಚಿನ್ನವಾರ ನಾರಣ ಮುನಿಲ ಮತ್ತು ಕುಪಣ ಸೆಟ್ಟಿಯರು ಲಕ್ಷ್ಮೀ ನಾರಾಯಣ ದೇವರ ಮಠವನ್ನು ಕಟ್ಟಿಸಿ ಕ್ರಿ.ಶ.೧೫೨೫ರಲ್ಲಿ ಮಠದ ಸ್ವಾಸ್ಥಿಗೆ ಅಪಾರವಾದ ದಾನಗಳನ್ನು ಮಾಡಿದರು.[೧೯೮] ಈ ದಾನದ ಸ್ವರೂಪ ಬಹಳ ರೋಚಕವಾದುದು. ನಾನಾ ಭಾಗಗಳಲ್ಲಿ ಭೂಮಿಯ ಮೇಲೆ ಹಣ ಹೂಡಿಕೆಯನ್ನು ಸಾಲದ ರೂಪದಲ್ಲಿ ಮಾಡಿ ಅದರ ಬಡ್ಡಿಯ ರೂಪವಾಗಿ ನಿಗಧಿತ ಮುಡಿ ಅಕ್ಕಿ ಪ್ರತಿವರ್ಷ ತಾವು ಕಟ್ಟಿಸಿದ ಈ ಮಠಕ್ಕೆ ಸಲ್ಲುವಂತೆ ಈ ದಾನಿಗಳು ಮಾಡಿದರು. ಶಾಸನದಲ್ಲಿ ಈ ಭೂಮಿಗಳ ವಿವರ ಇದೆ. ಶಾನಭೋಗರ ಲೆಕ್ಕ ಒಪ್ಪಿಸಿದಂತಿದೆ. ಇಲ್ಲಿ ವಕ್ಕಣ[೧೯೯] ಬಸರೂರು ಹಲವರ ಕಟ್ಟೆಯ ಸಮೀಪದ ಜಾಗವೊಂದರಲ್ಲಿ ಕ್ರಿ.ಶ.೧೫೪೬ ಅಕ್ಟೋಬರ್ ಸೋಮವಾರಕ್ಕೆ ಸೇರುವ ಶಾಸನ[೨೦೦]ವೊಂದು ದೊರೆತಿದ್ದು, ಇದು ಚಕ್ರವರ್ತಿ ಸದಾಶಿವರಾಯನ ಕಾಲದ್ದಾಗಿದೆ. ಆಗ ಅಚ್ಚವೊಡೆಯ ಬಾರಕೂರಿನ ರಾಜ್ಯಪಾಲನಾಗಿದ್ದ. ಶಾಸನ ದಿನಾಂಕದಂದು ಕುಪ್ಪನ ಸೆಟ್ಟಿ ಮತ್ತು ಉದರೆ ಸೂರಿ ಸೆಟಿಯರು ವಿಠಲದೇವರ ಮಠವನ್ನು ಜೀರ್ಣೋದ್ಧಾರ ಮಾಡಿ ವಿಠಲ ದೇವರ ಸರ್ವಕಾಲದ ಪೂಜಾ ವಿನಿಯೋಗಾರ್ಥ ೧೧೮ ಮುಡಿ ವಾರ್ಷಿಕ ಅಕ್ಕಿ ಉತ್ಪತ್ತಿಯ ಭೂ ಮತ್ತು ಹಿರಣ್ಯ ದಾನಗಳನ್ನು ಮಾಡಿದರು. ಇದಲ್ಲದೆ ಪಡುವಕೇರಿಯ ತಿರುಮಲ ದೇವರಿಗೂ ಇವರು ದಾನ-ಧರ್ಮಗಳನ್ನು ಅದೇ ದಿನದಂದು ಮಾಡಿದರು.[೨೦೧]

ಈ ವಿಠಲದೇವರ ಮಠವನ್ನು ಹಿಂದೆ ಸಂತಾನ ಸಂಕರಸೆಟಿ ಎಂಬುವನು ಕಟ್ಟಿಸಿ ಅದರ ಸ್ವಾಸ್ಥೆಗೆ ತಕ್ಕುದಾದ ರೀತಿಯಲ್ಲಿ ಮುಡಿ ಅಕ್ಕಿ ಉತ್ಪತ್ತಿ ಬರುವಂತೆ ಭೂಮಿ ಮತ್ತು ಹೊನ್ನಿನ ದಾನಗಳನ್ನು ಮಾಡಿದ್ದ. ಆದರೆ ಕಾಲಾನಂತರ ಈ ಧರ್ಮ ನಷ್ಟವಾಗಿ ಸಂತಾನ ಸಂಕರಸೆಟಿಯ ಮಠವು ದುಃಸ್ಥಿತಿಗೆ ಬಂದಾಗ ಕುಪಣಸೆಟಿ ಮತ್ತು ಸೂರಿಸೆಟಿಯೂ ಕೂಡಿ ಅದನ್ನು ಉದ್ಧಾರ ಮಾಡಿದರು ಎಂದು ಶಾಸನ ತಿಳಿಸುತ್ತದೆ.[೨೦೨] ಈ ಮಠದಲ್ಲಿ ಮಾಣಿ ಹೆಗಡೆ ಕುಪಣಸೆಟಿಯು ಇಬ್ಬರು, ಕುಪ್ಪಣ ಸೆಟಿಯಯೊಳು ಮಂದಿಯ ಮತ್ತು ಉದರೆ ಸೂರಿಸೆಟಸಿಯು ಒಬ್ಬರ (ಅಶನಾರ್ಥ) ವ್ಯವಸ್ಥೆಯನ್ನು ಮಾಡಿದರು.[೨೦೩] ಉಳಿದಂತೆ ಇದೂ ಒಂದು ದೀರ್ಘಶಾಸನ. ೭೭ ಸಾಲುಗಳ ಬರಹವಿರುವ ಇದರಲ್ಲಿ ಹೆಚ್ಚಿನ ಭಾಗ ಭೂಗಡಿ ಗುರುತಿಸುವಿಕೆ ಬಡ್ಡಿ ವ್ಯವಹಾರ, ಹಣ ಹೂಡಿಕೆ ಇತ್ಯಾದಿ ವಿವರಗಳನ್ನು ಹೊಂದಿದೆ.

ಇದೇ ರೀತಿಯಲ್ಲಿ ಇನ್ನೊಂದು ಪ್ರಾಚೀನ ಮಠವು ಜೀರ್ಣೋದ್ಧಾರಗೊಂಡ ವಿಷಯವನ್ನು ಸಣ್ಣ ಕೆರೆ ಕಟ್ಟೆ ಬಳಿಯಿರುವ ಬಸರೂರ ಶಾಸನವೊಂದು ತಿಳಿಸುತ್ತದೆ.[೨೦೪] ಈ ಹಿಂದೆ ಹಡಕಳಬಳಿಯ ಕಲ್ಲುಸೆಟ್ಟಿ ಕಟ್ಟಿಸಿದ ಮಠವನ್ನೂ ಅವರ ಸಂತಾನದ ಸಂತಯ ಕಳಿಯ ಚಿಂಮಚ ಸೆಟಿ ಜೀರ್ಣೋದ್ಧಾರ ಮಾಡಿ ಅದರ ಪೋಷಣೆಗಾಗಿ ಭೂಮಿ ಮತ್ತು ಹೊನ್ನಿನ ದಾನಗಳನ್ನು ಮಾಡಿದ ಎಂದು ಕ್ರಿ.ಶ.೧೫೪೮ ಅಕ್ಟೋಬರ್ ೨ ಮಂಗಳವಾರಕ್ಕೆ ಸೇರುವ ಈ ಶಾಸನ ತಿಳಿಸುತ್ತದೆ. ಕಲ್ಲುಸೆಟ್ಟಿ ಯಾವಾಗ ಈ ಮಠಗಳನ್ನು ಕಟ್ಟಿಸಿದ ಮತ್ತು ಅದರ ಸ್ವಾಸ್ಥೆಗೆ ಏನು ದಾನ ಮಾಡಿದ ಎನ್ನುವ ವಿಚಾರಗಳು ಗೊತ್ತಾಗುವುದಿಲ್ಲ. ಈ ಶಾಸನದಲ್ಲಿ ಚಕ್ರವರ್ತಿ ಸದಾಶಿವರಾಯನ ಉಲ್ಲೇಖ ಮಾತ್ರ ಇದೆ. ಬಾರಕೂರಿನ ಅಂದಿನ ರಾಜ್ಯಪಾಲ ಯಾರು ಎಂಬುದು ಗೊತ್ತಾಗುವುದಿಲ್ಲ. ಇಲ್ಲೂ ಸಹ ಭೂ ವಿವರ, ಹಣಕಾಸಿನ ವ್ಯವಹಾರ ಸಾಲ, ಬಡ್ಡಿ, ವ್ಯವಹಾರಗಳು ಮಾಮೂಲಿನಂತಿವೆ. ಒಂದು ಗಮನಿಸಬೇಕಾದ ಅಂಶವೆಂದರೆ "ಸಿಂಗೇರಿ ವೊಡೆಯರ ಮೇಲೆ ಮಯಿಸಾಲದ ವರಹ ಗ ೫ಂಕ್ಕೆ ಬಡಿ ವರಹ ಗ ೫" ಎಂದಿರುವುದು.[೨೦೫]

ಬಸರೂರು ಪಡುವ ಕೇರಿಯಲ್ಲಿ ಮಠವನ್ನು ಕಟ್ಟಿಸುವ ಸಲುವಾಗಿ ಅಲ್ಲಿಯ ಹಲರು ಸೆಟ್ಟಿಕಾರರಿಂದ ಸ್ಥಳವನ್ನು ಖರೀದಿಸಿ ಅಲ್ಲಿ ಮಠ ಮತ್ತು ಛತ್ರದ ನಿರ್ಮಾಣ ಮಾಡಿದ ವಿಷಯ ಇಲ್ಲಿ ಸಣ್ಣ ಕೆರೆ ಕಟ್ಟೆ ಬಳಿ ದೊರೆತಿರುವ ಶಾಸನದಿಂದ ತಿಳಿದುಬರುತ್ತದೆ. ಈ ಸ್ಥಳಕ್ಕೆ ದೊರೆಗಳಾದ ಹೊಳೆಯ ಬಳಿಯವರ ಮಠ, ಬಳಗಾರ ಬಳಿಯವರ ಧರ್ಮದ ಕಟ್ಟೆ ಮತ್ತು ಕಉಡಿಚ ಬಳಿಯವರ ಮಠಗಳಿದ್ದುವು ಎಂದು ಶಾಸನ ತಿಳಿಸುತ್ತದೆ.[೨೦೬] ಈ ಮಠ ಮತ್ತು

ಅದರ ಛತ್ರದ ಸ್ವಾಸ್ಥ್ಯಕ್ಕೆ ಭೂಮಿಯೊಂದನ್ನು ಖರೀದಿಸಿ ದಾನಮಾಡಲಾಯಿತು. ಈ ಧರ್ಮ ಕಾರ್ಯ ಮಾಡಿದಾತ "ತೊಳಹರ ಬಳಿಯ ಅಲ್ಲಾಳ ಸೆಟ್ಟಿಯ ಹೊಸಬು ಸೆಟ್ಟಿಯ ಅಳಿಯ ತಿಂಮಯ್ಯ ಸೆಟ್ಟಿ." ಶಾಸನ ಅಪೂರ್ಣವಾಗಿರುವ ಕಾರಣ ದಾನದ ವಿವರ ಇಲ್ಲ.

ಕ್ರಿ.ಶ.೧೫೫೪ ಅಕ್ಟೋಬರ್ ೨೭, ಶನಿವಾರಕ್ಕೆ ಸೇರುವ ಈ ಶಾಸನವು ಚಕ್ರವರ್ತಿ ಸದಾಶಿವರಾಯನ ಆಳ್ವಿಕೆಯಲ್ಲಿ ಇಡೀ ತುಳು ರಾಜ್ಯವು ಸದಾಶಿವ ನಾಯಕನ ಆಡಳಿತಾಧಿಕಾರಕ್ಕೆ ಒಳಪಟ್ಟಿದ್ದು. ಆಗ ಮಲ್ಲಪ್ಪ ವೊಡೆಯ ಬಾರಕೂರಿನ ರಾಜ್ಯಪಾಲನಾಗಿದ್ದ ಎಂದು ತಿಳಿಸುತ್ತದೆ. ಬಸರೂರ ಪಡುವ ಕೇರಿಯ ಬಳಾಬಳಿಯ ಶಂಕರ ಹ್ರಡು ಪಾಳೆಯ ಮೊಮ್ಮಗ ಕೋಟೀ ಸರಸೆಟ್ಟಿಯು ತನ್ನ ಮಠದ ಛತ್ರಕ್ಕೆ ಕ್ರಿ.ಶ.೧೫೫೫ರಲ್ಲಿ ಮಾಡಿದ ಭೂದಾನದ ವಿಚಾರವನ್ನು ದೇವರ ಕೆರೆ ಬಳಿಯ ಶಾಸನವೊಂದು ತಿಳಿಸುತ್ತದೆ.[೨೦೭] ಶಾಸನ ಅಪೂರ್ಣವಾಗಿದ್ದು, ದಾನದ ವಿವರ ನೀಡುವಲ್ಲಿ ಇಪ್ಪತ್ತಾರನೆಯ ಸಾಲಿನಲ್ಲಿ ಇದ್ದಕ್ಕಿದ್ದಂತೆಯೇ ನಿಂತು ಹೋಗಿದೆ. ಪ್ರಾಯಶಃ ಕೋಟೀಸರ ಸೆಟ್ಟಿಯು ತನ್ನ ಮಠಕ್ಕೆ ಸಾಕಷ್ಟು ಉತ್ಪತ್ತಿಯ ಭೂದಾನವನ್ನು ಮಾಡಿರಬೇಕು. ಆದರೆ ಈತ ಯಾವಾಗ ಮಠವನ್ನು ಕಟ್ಟಿಸಿದ ಎಂದು ಗೊತ್ತಾಗುವುದಿಲ್ಲ. ಶಾಸನದಲ್ಲಿ ಚಕ್ರವರ್ತಿ ಸದಾಶಿವರಾಯನ ನಿರೂಪದಿಂದ ತುಳುರಾಜ್ಯದ ಆಡಳಿತ ನೋಡುತ್ತಿದ್ದ ಸದಾಶಿವರಾಯನು ನಾಯಕನ ಮತ್ತು ಬಾರಕೂರು ರಾಜ್ಯಪಾಲ ಮಲ್ಲಪ್ಪ ವೊಡೆಯನ ಉಲ್ಲೇಖ ಇದೆ.

ಕ್ರಿ.ಶ.೧೬೦೮ ಮಾರ್ಚ್ ೭ ಸೋಮವಾರಕ್ಕೆ ಸೇರುವ ಶಾಸನವೊಂದು ವೆಂಕಟಪತಿರಾಯನ ಆಳ್ವಿಕೆಯನ್ನು ಪ್ರಸ್ತಾಪಿಸಿ ಅಜಿನಾರು ಸಿಂಹಸೆಟ್ಟಿಯರ ಮಗ ತೊಳಹರ ಬಳಿಯ ಅಜ್ಜಿ ನಾರಣ ಸೆಟಿಯುರು ಬಸರೂರ ಪಡುವ ಕೇರಿಯಲ್ಲಿ ತಾನು ಕಟ್ಟಿಸಿದ ಮಠಕ್ಕೆ ಬಿಟ್ಟ ಧರ್ಮದ ವಿಷಯ ತಿಳಿಸುತ್ತದೆ.[೨೦೮] ಒಂದೂನೂರ ಮೂವತ್ತು ಅರ್ಧವರಹ ಗದ್ಯಾಣವನ್ನು ವಿನಿಯೋಗಿಸಿ ವಾರ್ಷಿಕ ಎಪ್ಪತ್ತೊಂದು ಮುಡಿ ಉತ್ಪತ್ತಿಯ ಭೂಮಿಯನ್ನು ಈ ಮಠಕ್ಕೆ ಈತ ದಾನ ಮಾಡಿದ. ಅಕ್ಕಿಯ ಪ್ರಮಾಣವನ್ನು 'ಸಂಣಮುಡಿ ೭೧' ಎಂದು ಶಾಸನ ಉಲ್ಲೇಖಿಸುತ್ತದೆ. ಇದರಲ್ಲಿ ದೇವರ ನೈವೇದ್ಯ, ಪೂಜೆ, ಪರುವ ಪಾಡ್ಯಗಳಲ್ಲಿ ರಂಗಪೂಜೆ ಮತ್ತು ನಿತ್ಯ ಆರು ಜನರಿಗೆ ಛತ್ರದಲ್ಲಿ ಭೋಜನ ವ್ಯವಸ್ಥೆಗಳನ್ನು ನಡೆಸುವುದೊಂದು ಶಾಸನ ಸೂಚಿಸಿದೆ.[೨೦೯]

ಗುಪ್ಪೆಯ ಹಾದಿ ಎಂದು ಹೇಳುವ ಸ್ಥಳವೊಂದು ಬಸರೂರಿನಲ್ಲಿದೆ. ಇಲ್ಲಿ ಮಠವೊಂದು ಇತ್ತು ಎಂಬುದು ಶಾಸನವೊಂದರಿಂದ ತಿಳಿದುಬರುತ್ತದೆ.[೨೧೦] ಇಲ್ಲಿ ಅವಶೇಷ

ಗಳೆಡೆಯಲ್ಲಿ ದೊರೆತ ಈ ಶಾಸನ ಒಂದು ಸ್ತ್ರೀ ವಿಗ್ರಹದ ಹಿಂಬದಿಯಲ್ಲಿ ಬರೆಯಲಾಗಿದೆ. ವಿಗ್ರಹ ತುಂಡಾಗಿದೆ. ಶಾಸನ ಬಹಳಷ್ಟು ಮಾಸಿದೆ. ಇದರಲ್ಲಿ ಮಠವನ್ನು ಸದಾನಂದ ವೊಡೆಯರ ಮಠ ಎಂದು ಹೆಸರಿಸಿದೆ. ಈ ಮಠಕ್ಕೆ ೨೨೦ ಗದ್ಯಾಣಗಳನ್ನು ದಾನ ಮಾಡಲಾಗಿದೆ. ತೇದಿ ವಿವರಗಳ ಅಲಭ್ಯವಾದ ಈ ಶಾಸನವು ಪ್ರಾಯಶಃ ೧೫ನೆಯ ಶತಮಾನಕ್ಕೆ ಸೇರುವಂತಹುದು. ಶಾಸನದ ಕೊನೆಯಲ್ಲಿ 'ಗೋಪಿನಾಥ ದೇವರಿಸಿ' ಎಂದಿರುವುದು ಪ್ರಾಯಶಃ ಈ ಮಠದ ದೇವರನ್ನು ಉಲ್ಲೇಖಿಸಿರುವುದೆಂದು ಕಾಣುತ್ತದೆ. ಈ ಮಠ ಕ್ರಿ.ಶ.೧೫೩೧ರ ವೇಳೆಗೆ ಜೀರ್ಣೋದ್ಧಾರಗೊಂಡಿರುವುದು ಅಜ್ಜಿದೇಲು ಸೆಟ್ಟಿಯ ದಾನದಿಂದ ತಿಳಿಯುತ್ತದೆ.

ಮಹಾಪ್ರಧಾನಿ ಚಂಡರಸವೊಡೆಯರು ಬಾರಕೂರ ರಾಜ್ಯವನ್ನು ಆಳುವಾಗ ಸೋಮಣಸೆಟ್ಟಿ ಎಂಬುವನು ಕುಡಕೂರಿನ ಶ್ರೀಕೋಟಿನಾಥ ದೇವರ ಗುಡಿಯ ಉತ್ತರ ದಿಕ್ಕಿಗೆ ಮಠವನ್ನು ಕಟ್ಟಿಸಿ ಅಲ್ಲಿ ಊಟ ಮಾಡುವ ಬ್ರಾಹ್ಮಣರ ಸೇವಾರ್ಥ ಭೂಮಿಯನ್ನು ಮತ್ತು ಭತ್ತವನ್ನು ದಾನ ನೀಡುವನು. ಈ ಶಾಸನವು ಕ್ರಿ.ಶ.೧೪೩೪, ಮೇ ೩, ಸೋಮವಾರಕ್ಕೆ ಸರಿಯಾಗುತ್ತದೆ.[೨೧೧] ಮಠಕ್ಕೆ ದಾನ ನೀಡಿದ ಈ ಶಾಸನದಿಂದ ಜನರು ಮಠ ಮಾನ್ಯಗಳಿಗೆ ನೀಡುತ್ತಿದ್ದ ಗೌರವ ಭಾವನೆ ವ್ಯಕ್ತವಾಗುತ್ತದೆ.

ಕೃಷ್ಣದೇವರಾಯನು ರಾಜ್ಯವಾಳುವಾಗ ಇವನ ನಿರೂಪದಿಂದ ಲಕ್ಷ್ಮೀನಾರಾಯಣ ಕರಣಿಕರ ಮಗನಾದ ವಿಠರಸವೊಡೆಯನು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ಅಲ್ಲಿನ ಚೌಳಿಯಕೇರಿಯ ಕೆಲ್ಲಂಗೆರೆಯ ವಿನಾಯಕ ದೇವರ ಸನ್ನಿಧಿಯಲ್ಲಿ ಅಂಣಿಸೆಟಿ ಎಂಬುವನು ಚಂದ್ರಗ್ರಹಣದ ಕಾಲದಲ್ಲಿ ಒಂದು ಮಠವನ್ನು ಕಟ್ಟಿಸಿ ಅಲ್ಲಿನ ೬ ಜನ ಬ್ರಾಹ್ಮಣರಿಗೆ ಊಟಕ್ಕೆ ಅನೇಕ ಕಡೆ ಗದ್ದೆ ಮತ್ತು ಅಕ್ಕಿಮೂಡೆಗಳನ್ನು ದಾನವಾಗಿ ನೀಡುತ್ತಾನೆ. ರಾಜಬೀದಿ, ಸಿಂದೂರಗೊಳಿ ರಾಜಬೀದಿ, ಯೀಸರಸೆಟ್ಟಿ ಮಠದ ಗಡಿಯ ಒಳಭಾಗದಲ್ಲಿ ಈ ಮಠವನ್ನು ಕಟ್ಟಿಸಿದಂತೆ ತಿಳಿದುಬರುತ್ತದೆ. ತಂಮ್ಮಣ ಸೆಟ್ಟಿ, ಬೆಳುವ ಗಣ್ಣ ಸೆಟ್ಟಿ, ತ್ತಿರುಮಣಸೆಟಿ, ನಾರುವಣ ಸೆಟಿಯರ ಉಲ್ಲೇಖವಿದೆ.[೨೧೨] ಈ ಶಾಸನವು ಕ್ರಿ.ಶ.೧೫೨೪, ಮಾರ್ಚ್ ೧೫, ಮಂಗಳವಾರಕ್ಕೆ ಸರಿ ಹೊಂದುತ್ತದೆ. ಕೃಷ್ಣದೇವರಾಯನ ಅನುಮತಿಯಿಂದ ಆರಗದ ಅಳಿಯ ತಿಂಮಂಣವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾರೆ. ಈ ಅವಧಿಯಲ್ಲಿ ಮಹಾಲಿಂಗದೇವರ ಆವರಣದಲ್ಲಿ ಮಠವನ್ನು ಕಟ್ಟಿಸಿ ದಾನ ನೀಡುತ್ತಾನೆ. ಇದಕ್ಕೆ ಅವನ

ಸಂತಾನದವರೆಲ್ಲರೂ ತಮ್ಮ ಶಕ್ತ್ಯಾನುಸಾರ ಭೂಮಿಯನ್ನು ದಾನವಾಗಿ ನೀಡುವರು. ಹಿರಿಯತಾಯಿ ಮಗ ಮಲ್ಲಸೆಟ್ಟಿ, ಹೂಲಿಯ ಅಂಣಪ್ಪ ಹೆಬ್ಬಾರನ ಮಕ್ಕಳಾದ ಯೀಶ್ವರ ಹೆಬ್ಬಾರ, ಮಾದಪ್ಪ ಹೆಬ್ಬಾರಗಳು ಭೂಮಿಯನ್ನು ದಾನವಾಗಿ ನೀಡಿದ ವಿವರವಿದೆ. ಇದಕ್ಕೆ ಎಳಉರ ಅಂಣುಸೆಟ್ಟಿ, ತಿಟಿಯ ಶಂಖರನಾರಾಯಣ ಹೆಬ್ಬಾರ, ಸೆಂಣಂಣಭಟ ಕರ್ತ, ಹುಲಿಯ ಭಂಗಾರು ಹೊಣೆಗಾರ, ಮಂಡೆಕಟ್ಟಿನ ಬ್ರಹ್ಮ, ದೊರೆಗಳು ಮೊದಲಾದವರು ವೊಪ್ಪ ಹಾಕಿರುವರು. ಮಲ್ಲಪ್ಪಸೆಟ್ಟಿಯ ಕಿರಿಯ ತಾಯಿ ಸಂಕಮನಾಯಕಿತಿ, ಇವಳ ತಂಗಿ ದೇಕು ಅಡೆಯಿತಿ ಇಬ್ಬರೂ ಕೂಡಿ ತಮ್ಮ ಪಾಲಿಗೆ ಬಂದ ಹಾರನಾಡು, ಹರೆಯಂಗೋಡು ಒಳಗಣ ಭೂಮಿಯನ್ನು ದಾನವಾಗಿ ನೀಡಿರುವರು. ತಲಾಕ ಹೆಗ್ಗಡತಿಯೆಂಬುವಳೂ ದಾನ ನೀಡಿದ್ದಾಳೆ. ಸಂಕರಹೆಗಡೆಯ ಅಳಿಯ ಮಲ್ಲಪ್ಪಸೆಟ್ಟಿಯೂ ದೇವರ ದೀಪಕ್ಕಾಗಿ ತೆಂಗಿನ ತೋಟವನ್ನು ದಾನ ನೀಡಿದ್ದಾನೆ. ಈ ಶಾಸನವನ್ನು ಬರೆದವನು ಶ್ರೀಧರಭಟ್ಟ.[೨೧೩] ಸಂತಾನವಿಲ್ಲದವರ, ಸಂತಾನವಿಲ್ಲದೆ ಮರಣ ಹೊಂದಿದವರ ವಾರಸು ಇಲ್ಲದ ಸಂಪತ್ತನ್ನು ಯಾವ ವರ್ತಕರೂ ಮುಟ್ಟುವ ಹಾಗಿರಲಿಲ್ಲ. ಯಾಕೆಂದರೆ ಅಪುತ್ರಕ ದ್ರವ್ಯ ದೇವಾಲಯದ ಸೊತ್ತು ಎಂಬ ತಿಳುವಳಿಕೆಯಿದ್ದಿತು. ಬಳ್ಳಿಗಾವೆ ಪಟ್ಟಣದ ಬಣಜಿಗ, ಗವರೆ ಮುಂಮರಿದಂಡರ ಅಪುತ್ರಕಧನ ಗವರೇಶ್ವರ ದೇವಾಲಯ, ನಕರರ ಅಪುತ್ರಕಧನ ನಕರೇಶ್ವರ ದೇವಾಲಯಗಳಿಗೆ ಸಂದಾಯವಾದುದನ್ನು ಶಾಸನಗಳು ಹೇಳುತ್ತವೆ.[೨೧೪]

ಸೆಟ್ಟಿವಾಡಿಯ ಅಲ್ಲುಸೆಟ್ಟಿಯ ಮಗ ಶಂಕರಸೆಟ್ಟಿ ತನ್ನ ಮೊಮ್ಮಗಳಾದ ತಿರುಮಕ್ಕರಾವುತಿಗೆ ಸಂತಾನವಿಲ್ಲದುದರಿಂದ ಆಕೆಯ ಸಂಪತ್ತಿನಿಂದ ಮಠ ಕಟ್ಟಿಸಿ, ಭೂದಾನ ನೀಡಿದ ವಿಷಯ ಕಮಾಲಪುರ ಶಾಸನದಲ್ಲಿದೆ.[೨೧೫] ಹೀಗೆ ಶೆಟ್ಟಿ ಕುಲದವಳು ಅಥವಾ ವರ್ತಕರು, ಊರಿಂದೂರಿಗೆ ಬಂದ ಅತಿಥಿ, ಅಧ್ಯಯನ ಮಾಡುವ ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗಾಗಿ ಅನ್ನಛತ್ರ, ಮಠಗಳನ್ನು ಕಟ್ಟಿಸಿದ್ದಾರೆ. ನಾರಣ-ಕುಪಣ ಸೆಟ್ಟಿಯರು ಲಕ್ಷ್ಮೀನಾರಾಯಣ ದೇವಾಲಯದ ಮಠ, ಬಸರೂರ ದುಗ್ಗಣ್ಣಸೆಟ್ಟಿ ಹಾಗೂ ಅವನ ಮೂರು ಜನ ಅಳಿಯಂದಿರು, ಸೋಮಣಸೆಟ್ಟಿ ಮಗ ಶಂಕರಸೆಟ್ಟಿಯರು[೨೧೬] ಕಟ್ಟಿಸಿದ ಮಠ, ಅನ್ನಛತ್ರಗಳು ಉಲ್ಲೇಖಾರ್ಹವೆನಿಸಿವೆ. ಇದಲ್ಲದೆ ನಾರಾಣಸೆಟ್ಟಿಯ ಸತಿಯೂ ಜೋಕಿಸೆಟ್ಟಿಯ ಮಗಳೂ ಆದ ತಿರುಮಕಸೆಟ್ಟಿತಿ ಬಸರೂರ ಪಡುವಕೇರಿಯಲ್ಲಿ ಕಟ್ಟಿಸಿದ ಮಠವನ್ನೂ[೨೧೭] ಗಮನಿಸಬೇಕು. ಎಲ್ಲಾ ದಾನಗಳಿಗಿಂತ ವಿದ್ಯಾದಾನ ಅನ್ನದಾನಗಳೇ ಮಿಗಿಲು ಎಂಬ ತಿಳುವಳಿಕೆಯಿಂದ ವರ್ತಕರು ಈ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಹಂಪೆಯ ವಿರೂಪಾಕ್ಷ ಬಜಾರು ಕೇವಲ ಧಾರ್ಮಿಕ ಆಚರಣೆಗಳ ಮತ್ತು ವ್ಯಾಪಾರಗಳ ಕೇಂದ್ರವಾಗಿರದೆ. ಅನೇಕ ಮಠಗಳು ಅಲ್ಲಿದ್ದವು ಈ ಬಜಾರದಲ್ಲಿ ನಿತ್ಯ ದಾಸೋಹ ಮಾಡುತ್ತಾ ಪಂಪಾಪತಿ ರಥವೀಥಿಯಲ್ಲಿ ನೆಲೆಸಿದ್ದ ಗುರುಮೂರ್ತಿ ಒಂದೊತ್ತಿನಯ್ಯಗಳು, ಅಲ್ಲದೆ ಕ್ರಿಯಾಶಕ್ತಿ ಒಡೆಯತಿರಾಯ, ದಕ್ಷಿಣಾಮೂರ್ತಿ ಯತಿಚಕ್ರವರ್ತಿಗಳ ಉಲ್ಲೇಖವನ್ನು ಲಕ್ಕಣ್ಣ ದಂಡೇಶ ಪ್ರಸ್ತಾಪಿಸಿರುವುದನ್ನು ತಿಳಿಯಬಹುದಾಗಿದೆ.[೨೧೮] ಈ ವಿರೂಪಾಕ್ಷ ಬಜಾರದಲ್ಲೇ ಕೆಲವು ವೀರಶೈವ ಮಠಗಳನ್ನು ಮಂಟಪದ ರೂಪದಲ್ಲಿ ನೋಡಬಹುದಾಗಿದ್ದು, ಕೆಲವೊಂದು ಮಠಗಳಲ್ಲಿ ಎರಡು ಮಹಡಿಯನ್ನು ಕಾಣಬಹುದಾಗಿದೆ.[೨೧೯]

ಮಠಗಳು ಅಂದು ವಿದ್ಯಾದಾನದ ಕೇಂದ್ರಗಳಾಗಿದ್ದವು. ಕನಕದಾಸರು ತಮ್ಮ 'ಮೋಹನ ತರಂಗಿಣಿ'ಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಉಚಿತ ಊಟ-ಬಟ್ಟೆಗಳ ವ್ಯವಸ್ಥೆಯನ್ನು ಮಠಗಳಲ್ಲಿ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸುತ್ತಾರೆ.[೨೨೦] ಒಟ್ಟಾರೆ ವಿರೂಪಾಕ್ಷಪುರ ಕೇವಲ ಪವಿತ್ರ ಧಾರ್ಮಿಕ ಶಿಕ್ಷಣ ವಾಣಿಜ್ಯ ಕೇಂದ್ರವಾಗಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದು, ವಿಜಯನಗರದ ಏಳಿಗೆಗೆ ತನ್ನದೇ ಆದ ವಿಶಿಷ್ಟ ರೀತಿಯ ಕೊಡುಗೆಯನ್ನು ನೀಡಿದೆ. ದೇವಾಲಯಗಳು ವಿದ್ಯಾ ಪ್ರಸಾರಾಂಗದ ಕೇಂದ್ರಗಳಾಗಿದ್ದು, ಪುರಗಳಲ್ಲಿ ಕ್ರಮೇಣ ಅಗ್ರಹಾರಗಳು, ಮಠಗಳು, ಬೆಳೆದುಬಂದವು. ಕೃಷ್ಣಾಪುರ[೨೨೧], ನೆಳಲಹುಣಸೆ[೨೨೨], ನಾಗಲಾದೇವಿಪುರ[೨೨೩], ಕುಮಾರಗಿರಿ[೨೨೪], ಅಗ್ರಹಾರಗಳು ರಾಜಧಾನಿ ವಿಜಯನಗರದಲ್ಲಿ ಬೆಳೆದು ಬಂದಿದ್ದವು. ಕಲಿಯುವ ಮತ್ತು ಕಲಿಸುವ ವಿಚಾರಕ್ಕಾಗಿ ಸಾಮ್ರಾಜ್ಯದ ನಾನ ಭಾಗಗಳಿಂದ ಪಂಡಿತರು ಮತ್ತು ವಿದ್ಯಾರ್ಥಿಗಳು ಒಂದು ವಿವಿಧ ಪುರಗಳಲ್ಲಿ ನೆಲೆಸಿದರು. ರಾಜರು, ಅಧಿಕಾರಿಗಳು, ವರ್ತಕರು ಇಂತಹ ಅಗ್ರಹಾರಗಳ ಬೆಳವಣಿಗೆಗೆ ಉದಾರ ದಾನದತ್ತಿ ಕೊಡುಗೆಗಳನ್ನು ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.[೨೨೫] ಇದು ಸಾಮಾಜಿಕವಾಗಿ ಅಗ್ರಹಾರಗಳ ಸ್ಥಾನಮಾನವನ್ನು ಹೆಚ್ಚಿಸಿದ್ದವು.

ಕನಕದಾಸರು 'ಮೋಹನ ತರಂಗಿಣಿ'ಯಲ್ಲಿ ಇತಿಹಾಸ, ವೇದ, ವೇದಾಂತ, ಆಗಮ, ಗಣಿತ, ಖಗೋಳಶಾಸ್ತ್ರ, ವ್ಯಾಕರಣ, ತರ್ಕ, ಆಯುರ್ವೇದ, ಕಾವ್ಯ, ನಾಟಕ, ಸಂಗೀತಗಳಲ್ಲಿ ಪರಿಣಿತರಾದವರನ್ನು ಶಿಕ್ಷಕರೆಂದು ಅಗ್ರಹಾರಗಳಲ್ಲಿ ನೇಮಕ ಮಾಡುತ್ತಿದ್ದರ ಬಗ್ಗೆ ಗಮನಹರಿಸುತ್ತಾರೆ. ಅಗ್ರಹಾರಗಳಷ್ಟೇ ಮಠಗಳು ಸಹ ವಿದ್ಯಾಪ್ರಸಾರದಲ್ಲಿ ತಮ್ಮನ್ನು

ತೊಡಗಿಸಿಕೊಂಡಿದ್ದವು. ವಿಜಯನಗರದ ಸಾಮ್ರಾಜ್ಯ ಸ್ಥಾಪನಾಪೂರ್ವ ಹಂಪೆ ಶೈವ ವಿದ್ಯಾಕೇಂದ್ರವಾಗಿತ್ತು.[೨೨೬] ಮಠಗಳಲ್ಲಿ ಅಲ್ಲದೆ ದೇವಾಲಯಗಳಲ್ಲೂ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಊಟ ಮತ್ತು ವಸತಿಗಳನ್ನು ಉಚಿತವಾಗಿ ಏರ್ಪಡಿಸಲಾಗಿರುತ್ತಿತ್ತು. ಈ ದಿಸೆಯಲ್ಲಿ ವಿರೂಪಾಕ್ಷ ದೇವಾಲಯದ ಬಗ್ಗೆ ಶಾಸನ ಮಾಹಿತಿ ಸಿಗುತ್ತದೆ.[೨೨೭] ಸಾಮಾನ್ಯವಾಗಿ ಮಠ ದೇವಾಲಯಗಳಲ್ಲಿನ ಶಿಕ್ಷಕರೇ ಜನತೆಗೆ ಧಾರ್ಮಿಕ ಆಚರಣೆಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು. ಮಠಗಳು ಹಾಗೂ ಬಜಾರುಗಳು ಜಾತ್ರೆ ಅಥವಾ ರಥೋತ್ಸವಗಳ ಸಮಯದಲ್ಲಿ ಭಕ್ತಾದಿಗಳು ಮತ್ತು ಯಾತ್ರಾರ್ಥಿಗಳಿಗೆ ಹೀಗೆ ತಂಗುದಾಣಗಳಾಗಿರುತ್ತಿದ್ದವೆಂಬುದನ್ನು ಸಿದ್ದೇಶ್ವರ ಪುರಾಣವು ಹೀಗೆ ವರ್ಣಿಸುತ್ತದೆ. "ಗುಡಿಗಳೊಳು ಗೋಪುರಗಳೊಳು ಮರದ ಬೀದಿಯಂಗಡಿಗಳೊಳು ಮಠಗಳೊಗಾರವೆಗಳೊಳು ಕೆರೆಯತಡಿಗಳೊಳ ಗಡೆಯಿಲ್ಲವೆಂಬಂತೆ ಬೀಡುಗಳ ಬಿಟ್ಟ ಪರಿಸೆಯ ಮನುಜರು.[೨೨೮] ಇದು ಪಾಯೇಸನಿಂದಲೂ ತಿಳಿದುಬರುವ ಅಂಶ.

ವಿಜಯನಗರದ ಹರಿಹರ ಮಹಾರಾಯ ಆಳುತ್ತಿರುವ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ.೧೪೦೦ರಲ್ಲಿ, ರಾಜರ ಅಣತಿಯಂತೆ ಬಸವಣ್ಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಮಾದಂಣಸೆಟ್ಟಿ ಬಸರೂರಿನ ಶೃಂಗೇರಿ ಮಠಕ್ಕೆ ಭೂಮಿಯನ್ನು ಕಾಣಿಕೆಯಾಗಿ ನೀಡಿದನು. ಈ ಮಠದ ಉಸ್ತುವಾರಿ ಸಿಂಗಣಯ್ಯನ ಮಗನಾದ ಚಕ್ರವರ್ತಿ ಉಪಾಧ್ಯಾಯರದ್ದಾಗಿತ್ತು. ಈ ಮಠವು ಬಸರೂರಿನ ನಖರೇಶ್ವರ ದೇವಾಲಯದ ಎದುರಿಗಿರುವ ನಂದಿಕೇಶ್ವರನಿಗೆ ನಿತ್ಯ ನೈವೇದ್ಯಕ್ಕಾಗಿ ವ್ಯವಸ್ಥೆ ಮಾಡಿತ್ತು.[೨೨೯]

ವಿಜಯನಗರ ಸಾಮ್ರಾಜ್ಯವನ್ನು ದೇವರಾಯ ಮಹಾರಾಯರು ಆಳುವ ಅವಧಿಯಲ್ಲಿ, ಬಾರಕೂರ ರಾಜ್ಯವನ್ನು ಮಹಾಪ್ರಧಾನಿ ಅಂಣಪ್ಪ ಒಡೆಯರು ಆಳುತ್ತಿದ್ದರು. ಬಳೆಗಾರ ಬಳಬಿಜ್ಜನ ಬೆಂಮಸೆಟ್ಟಿ ನಾರಾಣಸೆಟ್ಟಿಯರು ಭೂಮಿಯನ್ನು ಬಸರೂರಿನ ಪಡುವಕೇರಿಯಲ್ಲಿರುವ ಮಠಕ್ಕೆ ದಾನ ಮಾಡಿದರು. ಈ ದಾನವು ಮಠದಲ್ಲಿರುವ ಬ್ರಾಹ್ಮಣರ ಭೋಜನಾರ್ಥವಾಗಿ ಮಾಡಿದುದಾಗಿತ್ತು.[೨೩೦] ಹೀಗೆ ವಿಜಯನಗರ ಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ವ್ಯಾಪಾರಸ್ಥರು ಮುನ್ನಡೆ ಸಾಧಿಸಿದುದು ಕಂಡುಬರುತ್ತದೆ. ವಾಣಿಜ್ಯ ಸಂಪರ್ಕ ವಿಸ್ತೃತಗೊಂಡುದರ ಪರಿಣಾಮವಾಗಿ ಇಲ್ಲಿನ ಜನ ಶ್ರೀಮಂತರಾದರು. ಅದರಲ್ಲೂ ವಿಶೇಷವಾಗಿ ವೈಶ್ಯ ಸಮುದಾಯದವರು ಹೇರಳ ಲಾಭಗಳಿಸಿದರು. ಅವರು ತಮ್ಮದೇ ಆದ ದೇವರು,

ದೇವಾಲಯಗಳು, ಸಂಘ-ಸಂಸ್ಥೆಗಳನ್ನು ರಚಿಸಿಕೊಂಡರು. ದೇವಾಲಯಗಳಿಗೆ ಬೇಕಾದಷ್ಟು ದಾನ ದತ್ತಿಗಳನ್ನು ನೀಡಿದರು. ಬ್ರಾಹ್ಮಣ ಸಂತರ್ಪಣೆಗಾಗಿ ಸ್ವತಃ ಮಠ ಕಟ್ಟಿಸಿ ಅನೇಕ ದಾನಗಳನ್ನು ನೀಡಿ ವ್ಯವಸ್ಥೆಗೊಳಿಸಿದರು. ಕ್ರಿ.ಶ.೧೫೧೪ರ ನೀಲಾವರ ಶಾಸನದಲ್ಲಿ.[೨೩೧] ತಂದೆ ರತ್ನಪ್ಪ ಒಡೆಯನಿಂದ ರಾಜ್ಯಪಾಲಗಿರಿಯು ವಿಜಯಪ್ಪ ಒಡೆಯನಿಗೆ ವರ್ಗಾವಣೆಯಾದ ವಿಚಾರವಿದೆ.

ಕ್ರಿ.ಶ.೧೫೨೦ರ ಕುಂದಾಪುರ ನಂದನವನದ ಶಾಸನವು.[೨೩೨] ವೈಜಪ್ಪ ಒಡೆಯನ ಬಗ್ಗೆ ಉಲ್ಲೇಖಿಸುವುದು. ಇದು ಆತನು ಕೆರ್ಗಾಲ ಗ್ರಾಮದಲ್ಲಿ ಭೂಮಿಯೊಂದನ್ನು ದಾನವಾಗಿ ನೀಡಿದ ದಾಖಲೆಯಾಗಿದೆ. ವಿಜಯನಗರ ಕಾಲದ ಶಾಸನಗಳು ಆಗಿನ ವ್ಯಾಪಾರಿ ವರ್ಗವು ಹೊಂದಿದ್ದ ಸಮೃದ್ಧಿಯ ಸೂತಕವಾಗಿವೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಆಚರಿಸಿಕೊಂಡು ಬರುತ್ತಿದ್ದ ಈ ಸಮಾಜದ ಮಹಿಳೆಯರೂ ದಾನ ಕಾರ್ಯಗಳಲ್ಲಿ ಸಹಭಾಗಿಗಳಾಗುತ್ತಿದ್ದುದು ಗಮನಾರ್ಹ ಅಂಶವಾಗಿದೆ.

ಕ್ರಿ.ಶ.೧೫೪೧ರ ವಿಜಯನಗರ ಶ್ರೀರಂಗನ ಆಳ್ವಿಕೆಯ ಬಾರಕೂರು ಶಾಸನ[೨೩೩]ದಲ್ಲಿ ಸಂಕಣನಾಯಕನ ನಿರೂಪದಿಂದ ಈತ ಆಳುತ್ತಿದ್ದುದು ತಿಳಿದುಬರುತ್ತದೆ. ಸೋಮನಾಥ ದೇವರ ಸನ್ನಿಧಾನದಲ್ಲಿ ಈಸ್ವರಣ ಸೆಟ್ಟಿ ಮತ್ತು ಸಂಕಮಸೆಟ್ಟಿ ಎಂಬುವರು ಅಲ್ಲಿಗೆ ನೈಋತ್ಯ ದಿಕ್ಕಿನಲ್ಲಿರುವ ಮಠಕ್ಕೆ ಬ್ರಹ್ಮದಾಯದ ಭೂಮಿಯನ್ನು ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಕೆಳದಿ ಮನೆತನ ಈ ವೇಳೆಗೆ ನಿಧಾನವಾಗಿ ಅಧಿಕಾರ ಗಳಿಸುತ್ತಾ ಬರುತ್ತಿದ್ದರು. ಕೆಳದಿ ಸದಾಶಿವನಾಯಕನ ಮೊಮ್ಮಗ ರಾಮರಾಜನಾಯಕನ ನಿರೂಪದಿಂದ ಅಚ್ಚಪ್ಪ ಒಡೆಯನು ಬಾರಕೂರನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಬಾರಕೂರು ಸೋಮನಾಥ ದೇವರ ದೇವಾಲಯದಲ್ಲಿ ಮಠವೊಂದನ್ನು ಕಟ್ಟಿಸಿ, ಅದಕ್ಕೆ ದಾನ ನೀಡಿದುದಲ್ಲದೆ ಬ್ರಾಹ್ಮಣ ಭೋಜನಕ್ಕಾಗಿ ವ್ಯವಸ್ಥೆ ಮಾಡಿಸಿದವ ನಾರಾಣಸೆಟ್ಟಿ. ಸದಾಶಿವರಾಯನು ತುಳುನಾಡನ್ನು ಕೆಳದಿ ಸದಾಶಿವನಾಯಕನಿಗೆ ಅಮರಮಾಗಣಿ ಯೆಂದು ಬಹುಮಾನವಾಗಿ ಕೊಟ್ಟನು.[೨೩೪]

ವಿಜಯನಗರ ಸಾಮ್ರಾಜ್ಯದ ವಿರುದ್ಧ ದಂಗೆಯೇಳಲು ಕಾಯುತ್ತಿದ್ದ ತುಳುನಾಡಿನ ತುಂಡರಸರಿಗೆ ಸದಾಶಿವರಾಯನ ಆಡಳಿತ, ಆತನ ದುರ್ಬಲತೆ ಧೈರ್ಯ ಕೊಟ್ಟಿತು. ಆದರೆ ಅವನ ಬಲಕ್ಕಿದ್ದ ಸದಾಶಿವನಾಯಕನು ಅವರನ್ನೆಲ್ಲ ಹಿಮ್ಮೆಟ್ಟಿಸಿದ. ಅದಕ್ಕೆ ಪ್ರತಿಫಲವಾಗಿ ತುಳುನಾಡಿನ ಅಧಿಕಾರವನ್ನೇ ಸಾಮ್ರಾಟನು ಸದಾಶಿವನಾಯಕನಿಗೆ ಬಿಟ್ಟುಕೊಟ್ಟನು.

ಮೊದಲಿನಿಂದಲೂ ತುಳುನಾಡು ತನ್ನ ಕಾಲದ ರಾಜ್ಯಪಾಲರನ್ನು ನೇಮಿಸುವ ಅಧಿಕಾರ ಹೊಂದಿದ್ದ ಈತನೇ ಕಲೆಯ ಎಲ್ಲಪ್ಪ ಒಡೆಯನನ್ನು ನೇಮಿಸಿದ.

ಕ್ರಿ.ಶ.೧೫೨೮ರ ಬಸರೂರು ಮಹಾಲಿಂಗೇಶ್ವರ ದೇವಾಲಯದ ಶಾಸನವು[೨೩೫] ಅಳಿಯ ತಿಮ್ಮಣ್ಣ ಒಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿದ್ದನೆಂದು ತಿಳಿಸುವ ದಾಖಲೆಯಾಗಿದೆ. ಸೋವಣ ಸೆಟ್ಟಿಯ ಮಗ ಸಂಕುಸೆಟ್ಟಿ ಎಂಬಾತ ಪಡುವಕೇರಿಯ ನಖರೇಶ್ವರದ ಮಹಾಲಿಂಗದೇವರ ದೇವಾಲಯಧ ಬಳಿಯಲ್ಲಿ ಮಠವೊಂದನ್ನು ಕಟ್ಟಿಸಿದ. ಆ ಮಠಕ್ಕೆ ಸಂಕರಸೆಟ್ಟಿಯ ಹಿರಿಯ(ಮೊದಲ) ಪತ್ನಿಯ ಮಗ ಮಲ್ಲಪ್ಪಸೆಟ್ಟಿ ಎರಡನೆಯ ಪತ್ನಿ ಸುಂಕಮ ನಾಯಕಿತಿ ಮತ್ತು ಆಕೆಯ ಸಹೋದರಿ ದೇಕು ಅಡೆಯಿತ ಎಂಬುವರು ಸೇರಿ ಆ ಮಠದ ಖರ್ಚುವೆಚ್ಚಗಳಿಗಾಗಿ ಕೆಲ ಭೂಮಿಯ ತುಂಡುಗಳನ್ನು ದತ್ತಿ ಬಿಟ್ಟರು.

ಕ್ರಿ.ಶ.೧೫೪೨ರಲ್ಲಿ ಸಂಕು ಹೆಗ್ಗಡೆ ಸ್ಥಾಪಿಸಿದ ಗೋಪಿನಾಥ (ಹೆಗ್ಗಡೆ) ದೇವಾಲಯ ದೊಂದಿಗಿದ್ದ ಮಠದ ದೇವರ ಪೂಜೆಗಾಗಿ ಆತನ ಮನೆತನದ ಶಂಕರಲಿಂಗಸೆಟ್ಟಿ ಮತ್ತು ಮಹಾಲಿಂಗಸೆಟ್ಟಿ ಭೂಮಿಯನ್ನು ದಾನವಾಗಿತ್ತರು. ಪ್ರತಾಪರಾಯ ಮಹಾರಾಯರು ವಿಜಯನಗರ ಸಾಮ್ರಾಜ್ಯದ ಸಿಂಹಾಸನರೂಢನಾಗಿ ಪ್ರತಿಪಾಲಿಸುವಂತಹ ಕಾಲದಲ್ಲಿ, ವಿರೂಪಾಕ್ಷದೇವ ಒಡೆಯರು ಬಾರಕೂರು ರಾಜ್ಯವನ್ನು ಪ್ರತಾಪರಾಯರ ಆಣತಿಯಂತೆ ಆಳುತ್ತಿದ್ದರು. ಕ್ರಿ.ಶ.೧೪೮೨ರ ಶಾಸನವಿದು ಬಸರೂರ ಪಡುವಕೇರಿಯ ಶ್ರೀ ಮಹಾದೇವರ ಸನ್ನಿಧಿಯಲ್ಲಿ ರುದ್ರಾಕ್ಷಿ ಒಡೆಯರು ಮಠವನ್ನು ಕಟ್ಟಿಸಿದರು. ಇವರು ಹಲರು ಸೆಟ್ಟಿಕಾರರಿಗೆ ಗುರುವಾಗಿದ್ದರು. ಈ ಮಠದ ಧರ್ಮಕ್ಕೆ ಆಚಂದ್ರಾರ್ಕವಾಗಿ ಬರೆಸಿದಂತಹ ಶಿಲಾಶಾಸನವಿದು.[೨೩೬]

ಶ್ರೀಮನ್ಮಮಹಾರಾಜಾಧಿ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಕೃಷ್ಣರಾಯ ಮಹಾರಾಯರು ವಿಜಯನಗರದಲ್ಲಿ ದುಷ್ಟ ನಿಗ್ರಹ ಶಿಷ್ಟ ರಕ್ಷಣೆ ಮಾಡುತ್ತಾ ಆಳುತ್ತಿರುವ ಕಾಲದಲ್ಲಿ, ಬಾರಕೂರು ರಾಜ್ಯವನ್ನು ರತ್ನಪ್ಪವೊಡೆಯರ ಮಗನಾದ ವಿಜಯಪ್ಪವೊಡೆಯನು ಆಳುತ್ತಿದ್ದನು. ಪಡುವಕೇರಿಯ ನಾರಾಣಸೆಟ್ಟಿಯ ಹೆಂಡತಿಯೂ ಜೋಕಿಸೆಟ್ಟಿಯ ಮಗಳಾದ ತಿರುಮಕಸೆಟಿತಿಯು ಮಠವನ್ನು ಕಟ್ಟಿಸಿದ ವಿಷಯ ಈ ಶಾಸನ ಒಳಗೊಂಡಿದೆ. ಈ ಮಠವನ್ನು ಬಸರೂರ ಪಡುವಕೇರಿಯಲ್ಲಿ ಕಟ್ಟಿಸಿದಳು. ಮಠದ ನಿರ್ವಹಣೆಗಾಗಿ ಭೂಮಿ ಮತ್ತು ಹೊನ್ನನ್ನು ದಾನ ಮಾಡಿದಳು.[೨೩೭]

ಅಚ್ಯುತದೇವ ಮಹಾರಾಯರು ಸಿಂಹಾಸನಾರೂಢರಾಗಿ ದಕ್ಷತೆಯಿಂದ ರಾಜ್ಯವಾಳುವಾಗ, ತುಳುರಾಜ್ಯದ ಸದಾಶಿವನಾಯಕರು ರಾಜನ ಆಜ್ಞೆಯ ಪ್ರಕಾರ ಮಲ್ಲಪ್ಪವೊಡೆಯರು ಬಾರಕೂರು ರಾಜ್ಯವಾಳುವಾಗ, ತಿಮ್ಮಯ್ಯಸೆಟ್ಟಿ ಇವರು ಹೊಸಬುಸೆಟ್ಟಿಯ ಅಳಿಯರಾಗಿರುವರು. ಇವರು ಮಠವನ್ನು ಕಟ್ಟಿಸಿ, ಅದರ ನಿರ್ವಹಣೆಗಾಗಿ ಭೂಮಿಯನ್ನು ದಾನ ನೀಡಿದರು. ಮಠದ ಹತ್ತಿರದಲ್ಲಿ ಒಂದು ಛತ್ರವನ್ನು ನಿರ್ಮಿಸಿದರು.[೨೩೮] ಕ್ರಿ.ಶ.೧೫೩೮ರ ಶಾಸನವಿದು. ರಾಜಾಧಿರಾಜ ರಾಜಪರಮೇಶ್ವರ ಸದಾಶಿವರಾಯ ಮಹಾರಾಯರು ವಿಜಯನಗರ ರಾಜ್ಯವನ್ನು ಆಳುತ್ತಿರುವಾಗ, ಅವರ ನಿರೂಪದಿಂದ ಸದಾಶಿವನಾಯಕರು ತುಳು ರಾಜ್ಯವನ್ನು ಆಳುತ್ತಿದ್ದರು. ಈ ಕಾಲದಲ್ಲಿ ಬಾರಕೂರು ರಾಜ್ಯವನ್ನು ಯಲ್ಲಪ್ಪವೊಡೆಯರು ಪ್ರತಿಪಾಲಿಸುತ್ತಿದ್ದರು.

ಶ್ರೀ ಕೋಟೇಶ್ವರದೇವರ ಸನ್ನಿಧಿಯಲ್ಲಿ ಬಸರೂರ ಪಡುವಕೇರಿಯ ಗಣಪ ಸೆಟ್ಟಿಯರ ಮಗ ಚಿತುಸೆಟ್ಟಿಯು ಶಿವರಾತ್ರಿಯ ಪುಣ್ಯಕಾಲದಲ್ಲಿ ಮಾಡಿದ ಧರ್ಮಶಾಸನವಿದು. ಚಿತುಸೆಟ್ಟಿಯು ಬಸರೂರಲ್ಲಿ ಮಠವನ್ನು ಕಟ್ಟಿಸಿದನು. ಆ ಮಠದ ಸೇವೆಗಾಗಿ ಭೂಮಿಯನ್ನು ಮತ್ತು ಮಠದಲ್ಲಿರುವ ಉಮಾಮಹೇಶ್ವರ ದೇವರ ಸೇವೆಗಾಗಿಯೂ ಭೂಮಿ ದಾನ ಮಾಡಿ, ದಿನಾಲೂ ೬ ಜನರ ಭೋಜನ ಆಗುವಂತೆ ವ್ಯವಸ್ಥೆ ಆಗಬೇಕೆಂದು ದೇವರ ಸನ್ನಿಧಿಯಲ್ಲಿ ಮಾಡಿದ ಶಾಸನವಿದು[೨೩೯] ಈ ಶಾಸನವು ಕ್ರಿ.ಶ.೧೫೬೮ಕ್ಕೆ ಸರಿ ಹೊಂದುವುದು.

ಶ್ರೀ ವೀರಪ್ರತಾಪ ಮಲ್ಲಿಕಾರ್ಜುನ ಮಹಾರಾಯರು ವಿಜಯನಗರ ಸಾಮ್ರಾಜ್ಯವನ್ನು ಆಳುವಾಗ, ಇವರ ಆಜ್ಞೆಯಂತೆ ಬಾರಕೂರ ರಾಜ್ಯವನ್ನು ಲಿಂಗಪ್ಪವೊಡೆಯರು ಪ್ರತಿಪಾಲಿಸುತ್ತಿದ್ದರು. ಕೋಟೆಯನಾಯಕ ಮತ್ತು ಕೋಟೆಯಕ ನಾಯಕಿತಿಯ ಮಗನಾದ ಮರವಂಣಸೆಟಿ ಪಡುವಕೇರಿಯರಲ್ಲಿ ಬರೆಸಿದ ಶಾಸನವಿದು. ಇದರ ಕಾಲ ೧೩(೭)೩, ದೇವರ ಪೂಜೆಗಾಗಿ ಮತ್ತು ಮಠದಲ್ಲಿರುವ ಬ್ರಾಹ್ಮಣರ ಭೋಜನಕ್ಕಾಗಿ ಭೂಮಿ ಮತ್ತು ಬಂಗಾರವನ್ನು ಮೆರವಂಣಸೆಟಿ ದಾನ ಮಾಡಿದರು.[೨೪೦]

ಮಹಾಪ್ರಧಾನ ಬಾಚರಸ ಒಡೆಯರು ಕ್ರಿ.ಶ.೧೩೭೬ರಲ್ಲಿ ಆಳುತ್ತಿರುವಾಗ, ಹಿಂದಿನ ರಾಜ್ಯಪಾಲರುಗಳ ಆಳ್ವಿಕೆಯ ಕಾಲದ ದಾನ ಶಾಸನಗಳಂತೆ ಈತನ ಕಾಲದಲ್ಲೂ ವರ್ತಕರು, ವರ್ತಕ ಸಂಘಗಳೂ ಕೂಡ ದಾನಿಯೊಂದಿಗೆ ಸೇರಿಕೊಳ್ಳುತ್ತಿದ್ದುದು ತಿಳಿದುಬರುತ್ತದೆ. ಕ್ರಿ.ಶ.೧೩೭೬ಕ್ಕೆ ಸರಿಹೊಂದುವ ಬಾರಕೂರಿನ ಚೌಳಿಯ ಕೇರಿಯ ಶಾಸನವೊಂದು[೨೪೧] ಇದಕ್ಕೆ

ಉದಾಹರಣೆಯಾಗಿದೆ. ಕೆಲ್ಲಂಗೆರೆಯ ವಿನಾಯಕ ದೇವರ ದೇವಾಲಯದಲ್ಲಿ ಪುರಾಣ ಪ್ರವಚನ ನಡೆಯುವ ಸಲುವಾಗಿ ಅರಿಯ ಬಳಿಯ ಬಲ್ಲೆದೇವಸೆಟ್ಟಿ ಎಂಬಾತನ ಅಳಿಯ ಸಿರಾಂಗ ಸೆಟ್ಟಿಯೊಂದಿಗೆ ಚೌಳಿಯಕೇರಿಯ ಸೆಟ್ಟಿಕಾರ ಹಲರು ಒಮ್ಮತದಿಂದ ೧೫ ಮೂಡೆ ಅಕ್ಕಿ ಭೂಮಿಯೊಂದನ್ನು ದಾನ ನೀಡಿದರು. ಇದಲ್ಲದೆ ಸಿಂಗಾರಿ ಸೆಟ್ಟಿಯ ಮಠದಲ್ಲಿ ದಿನವೂ ನಡೆಯುವ ರುದ್ರಪೂಜೆಗಾಗಿ ಮತ್ತು ಸೇವೆಗಾಗಿ ಅಕ್ಕಿಯನ್ನು ದಾನ ಮಾಡಿದ ವಿವರಗಳಿವೆ. ಕೆಂಡದ ಬಸವರಸ ಒಡೆಯರು ರಾಜ್ಯಪಾಲರಾಗಿದ್ದಾಗ, ಕ್ರಿ.ಶ.೧೫೦೩ರ ಬಾರಕೂರು ಶಾಸನದಲ್ಲಿ ದುಗ್ಗಸೆಟ್ಟಿ ಎಂಬಾತ ಕೆಲ್ಲಂಗೆರೆಯ ವಿನಾಯಕ ದೇವರ ಸನ್ನಿಧಿಗೆ ಗೋಪಿನಾಥ ದೇವರ ಸಮಕ್ಷಮ ತಮ್ಮ ಗುರುಗಳಾದ ಪುಣ್ಯ ಶ್ರವಣವೊಡೆಯರ ನಿರೂಪದಿಂದ ಮಠಕ್ಕೆ ನೀಡಿದ ದಾನದ ವಿವರವಿದೆ.[೨೪೨]

ಕ್ರಿ.ಶ.೧೫೦೪ರ ವೀರನರಸಿಂಹನ ಆಳ್ವಿಕೆಯ ಬೈಂದೂರ ಶಾಸನವು[೨೪೩] ದುಗಣಸೆಟ್ಟಿ ಎಂಬಾತ ತಾನೇ ಬೈಂದೂರಿನಲ್ಲಿ ಕಟ್ಟಿಸಿದ ಮಠವೊಂದರಲ್ಲಿ ಆರು ಮಂದಿ ಬ್ರಾಹ್ಮಣರ ನಿತ್ಯ ಭೋಜನಾರ್ಥ ಭೂಮಿಯ ತುಂಡೊಂದನ್ನು ದತ್ತಿಯಾಗಿ ನೀಡಿದುದನ್ನು ತಿಳಿಸುತ್ತದೆ. ಆ ವೇಳೆಗೆ ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಕೆಂಡದ ಬಸವರಸ ಒಡೆಯನು ಆಳುತ್ತಿದ್ದುದು ತಿಳಿದುಬರುತ್ತದೆ. ನಾರಸಿ ಮಠದ ನಂಜದೇವನೆಂಬ ಗುರುವಿಗೆ ದೇವರಪಲ್ಲಿ ಮುಮ್ಮಡಿ ಶೆಟ್ಟಿ ಎಂಬ ವರ್ತಕರು ಭೂಮಿ ಹಾಗೂ ಒಂದು ಬಾವಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇದು ಎರಡನೆಯ ಹರಿಹರ ಆಳುತ್ತಿದ್ದ ಕಾಲ. ಇದು ಒಂದು ತೀರ್ಥದ ಬಳಿ ದೊರೆತಿದೆ.[೨೪೪]

ಕರಣಿಕ ಲಕ್ಷ್ಮೀನಾರಾಯಣನ ಮಗನಾದ ವಿಠರಸವೊಡೆಯನು ಬಾರಕೂರನ್ನು ಆಳುತ್ತಿರುವಾಗ ಅಂದರೆ ಕ್ರಿ.ಶ.೧೫೨೩ ರಿಂದ ೧೫೨೬ ರವರೆಗೆ ಆಳ್ವಿಕೆ ನಡೆಸಿದನು. ಕ್ರಿ.ಶ.೧೫೨೪ರ ಒಂದು ಶಾಸನದ ಪ್ರಕಾರ ವಿಠರಸನ ಆಳ್ವಿಕೆಯ ಅವಧಿಯಲ್ಲಿ ಅಂಣಿಸೆಟಿ ಎಂಬುವವನು ಚೌಳಿಕೇರಿಯ ವಿನಾಯಕ ದೇವಾಲಯದ ಆವರಣದಲ್ಲಿ ಚಂದ್ರಗ್ರಹಣದ ದಿವಸ ಒಂದು ಮಠವನ್ನು ಕಟ್ಟಿಸಿ ಅಲ್ಲಿನ ೬ ಜನ ಬ್ರಾಹ್ಮಣರ ಊಟಕ್ಕೆ ಅನೇಕ ದಾನಗಳನ್ನು ನೀಡಲಾಗಿದೆ.[೨೪೫] ಕ್ರಿ.ಶ.೧೫೧೬ರ ಶಾಸನದಲ್ಲಿ ಗೋಲಕೊಂಡ ತಿಂಮ್ಮನಾಯಕನಿಗೆ ವಿದ್ಯಾನಗರದಲ್ಲಿ ದಳವಾಯಿ ಪಟ್ಟ ಕೊಟ್ಟಾಗ ಪಟ್ಟಣಸೆಟಿ ವೀರಪ್ಪ, ಹೋಳಿನ ಹಂಪಣ್ಣ, ಕಡಬರಾಮಣ್ಣರು ಇದ್ದರೆಂದೂ, ಗೋಲಕೊಂಡೆಯಿಂದ ಬಂದ ತಿಂಮ್ಮನಾಯಕನ ಮಕ್ಕಳಾದ ಚಿಕ್ಕತಿರುಮಲನಾಯಕ

ಮತ್ತು ಹಿರೇತಿರುಮಲನಾಯಕರಿಗೆ ಸ್ಥಳವಿಲ್ಲವೆಂದು ಚಿಂತೆ ಮಾಡಬೇಡಿರೆಂದು ತುರುಗೋಡು ತಾಲ್ಲೂಕಿನ ಯಲ್ಲಾಪುರ, ಗೆಣುತೆಹಾಳು, ದಾಸಾಪುರ ಗ್ರಾಮಗಳನ್ನು ಜಹಗೀರಾಗಿ ಕೊಡುವರು.[೨೪೬]

ಹೀಗೆ ಕರ್ನಾಟಕ ಸಂಸ್ಕೃತಿಯ ಪ್ರವರ್ಧಮಾನಕ್ಕೆ ಮಠಗಳ ಕೊಡುಗೆ ಅಪಾರವಾದುದು. ಆಯಾ ಮತೀಯರು ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಮತ್ತು ಧಾರ್ಮಿಕ ಚಟುವಟಿಕೆಗಳ ತಾಣಗಳನ್ನಾಗಿ ಗುರುತಿಸಲು ಮಠಗಳನ್ನು ರೂಪಿಸಿಕೊಂಡರು. ಇಷ್ಟೇ ಅಲ್ಲದೆ, ಜನರು ವ್ಯಾಜ್ಯ ವ್ಯವಹಾರಗಳನ್ನು ಬಗೆಹರಿಸಿಕೊಳ್ಳಲು ಮಠವನ್ನು ಆಶ್ರಯಿಸುತ್ತಿದ್ದರು. ಈ ಕಾರಣಗಳಿಂದಾಗಿ ಮಠಗಳು ಒಂದು ಸಮಾಜದಲ್ಲಿ ಯಜಮಾನತ್ವದ ಪ್ರತಿನಿಧಿಯಾಗಿದ್ದವು. ಮಧ್ಯಯುಗೀನ ಕರ್ನಾಟಕದಲ್ಲಿ ಮಠ, ದೇವಾಲಯ, ವಿದ್ಯಾಭ್ಯಾಸ ಇವು ಒಂದಕ್ಕೊಂದು ಪೂರಕವಾಗಿದ್ದವು. ಮಠಕ್ಕೆ ದಾನ ನೀಡುವಾಗ ವಿದ್ಯಾದಾನಕ್ಕೆ ಎಂದು ಕೆಲವೊಂದು ಭಾಗವನ್ನು ತೆಗೆದಿರಿಸುತ್ತಿದ್ದರು. ಹಾಗೆಯೇ ದೇವಾಲಯಕ್ಕೆ ದಾನ ನೀಡುವಾಗ ಯತಿಗಳಿಗೆ, ವಿದ್ಯಾರ್ಥಿಗಳಿಗೆ ಎಂದು ಉಲ್ಲೇಖಿಸುತ್ತಿದ್ದರು. ಹೀಗೆ ಮಠಗಳು ಆರಂಭದಿಂದಲೂ ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿವೆ. ಮಠದ ಆಡಳಿತ ನೋಡಿಕೊಳ್ಳುತ್ತಿದ್ದ ಅನೇಕ ಯತಿಗಳು ಬಹು ವಿದ್ಯಾಪಾರಂಗತರಾಗಿದ್ದರು. ಮಠಗಳಿಗೆ ಮಾನ್ಯಗಳನ್ನು ನೀಡುವಾಗ ದಾನ ನೀಡುವ ವ್ಯಕ್ತಿಯ ಇಚ್ಛೆಯಂತೆ ಅದು ಸದುಪಯೋಗವಾಗುವಂತೆ ನೋಡಿಕೊಳ್ಳಬೇಕಾಗಿತ್ತು. ಇದು ದಾನ ನೀಡುವ ವ್ಯಕ್ತಿಯ ಆಸೆಯೂ ಆಗಿತ್ತು. ಇದಕ್ಕಾಗಿ ಆತ ಮಠದ ಮುಖ್ಯಸ್ಥನಾದ ಯತಿಯ ಕಾಲನ್ನು ತೊಳೆದು ದಾನ ನೀಡುತ್ತಿದ್ದ. ಆದರೆ ಪಡೆದ ದಾನವನ್ನು ರಕ್ಷಿಸಬೇಕಾದವರೇ ಅದರ ಕಬಳಿಕೆಗೆ ಮುಂದಾದ ಘಟನೆಗಳು ಕೆಲವೆಡೆ ನಡೆದಿರುವಂತೆ ಶಾಸನಗಳು ವರ್ಣಿಸಿವೆ.

ವಿಜಯನಗರ ಪಟ್ಟಣದಲ್ಲಿ ಅನೇಕ ಮಠಗಳಿದ್ದರೂ ಕೆಲವೇ ಮಠಗಳ ಪ್ರಸ್ತಾಪವಿದೆ. ಬುಕ್ಕ ಸಾಗರದಲ್ಲಿರುವ ಮಠವು ಹಂಪೆ ಸಿಂಹಾಸನದ ಪಂಚ ಮಠಗಳಲ್ಲಿ ಒಂದು ಮಠವೆಂದು ೧೭ನೇ ಶತಮಾನದ ತಾಮ್ರಶಾಸನದಲ್ಲಿ ತಿಳಿಸಲಾಗಿದೆ.[೨೪೭] ಆದರೆ ಉಳಿದ ಮಠಗಳ ಪ್ರಸ್ತಾಪ ಈ ಶಾಸನಗಳಲ್ಲಿ ಇಲ್ಲ. ಇನ್ನುಳಿದ ನಾಲ್ಕು ಮಠಗಳು ಬಹುಶಃ ಹಂಪೆಯಲ್ಲಿಯೇ ಇರಬಹುದು. ವಿರೂಪಕ್ಷ ತೇರುಬೀದಿಯಲ್ಲಿ, ಉತ್ತರ ದಿಕ್ಕಿನ ಸಾಲುಮಂಟಪಗಳ ಮುಂದಿರುವ ಒಂದು ಶಾಸನದಲ್ಲಿ ಮಹಾಮಂತಿನ ಮಠದ ಪ್ರಸ್ತಾಪವಿದೆ.[೨೪೮] ಈ

ಮಠವನ್ನು ಈಗ ಮಹಾಂತಸ್ವಾಮಿ ಮಠವೆಂದು ಕರೆಯುತ್ತಾರೆ. ಇದೇ ಬೀದಿಯ ಕೊನೆಯಲ್ಲಿ ದಕ್ಷಿಣಕ್ಕಿರುವ ಶಾಸನವು ಕರಿಯ ಸಿದ್ಧಪ್ಪನ ಮಠಕ್ಕೆ ಸೇರಿದ ಭೂಮಿಯ ಬಗ್ಗೆ ತಿಳಿಸುತ್ತದೆ.[೨೮೯] ಈ ಶಾಸನದ ದಕ್ಷಿಣಕ್ಕಿರುವ ಮಠವನ್ನು ಕರಿಯಸಿದ್ಧಪ್ಪನ ಮಠವೆಂದು ಗುರುತಿಸಲಾಗಿದೆ.

ರಾಜವಂಶದವರ ವಸತಿ ಸಮುಚ್ಛಯದ ಉತ್ತರಕ್ಕೆ ಬೆಟ್ಟದ ಮೇಲೆ ಪರಮೇಶ್ವರ ಮಠವಿದೆ. ಅಲ್ಲಿರುವ ಗುಹೆಯನ್ನೇ ಕೊರೆದು ಮಠ ಕಟ್ಟಿದ್ದಾರೆ. ಹೀಗೆ ಒಂದೇ ಪೀಠದಲ್ಲಿ ಐದು ಲಿಂಗಗಳನ್ನು ಕೆತ್ತಿ ಮಠದ ಹಿಂಭಾಗದಲ್ಲಿಡಲಾಗಿದೆ. ಮಠದ ಹತ್ತಿರವಿರುವ ಒಂದು ಬಂಡೆಯ ಮೇಲೆ ಈ ಮಠದ ಹೆಸರನ್ನು ಕೆತ್ತಿದ್ದಾರೆ. ಕಂಪ್ಲಿ ಹೊಸಪೇಟೆ ರಸ್ತೆಯ ಪೂರ್ವಕ್ಕೆ ಒಂದು ಮಠವಿದೆ. ದೊಡ್ಡ ಬಂಡೆಯಲ್ಲಿ ಮಠವನ್ನು ಕೊರೆದು ಮುಂದೆ ಕಲ್ಲಿನ ತೊಲೆ ಮತ್ತು ಕಂಬಗಳನ್ನು ಕಟ್ಟಿದ್ದಾರೆ. ಅಲ್ಲಿಯೇ ಒಂದು ಬಂಡೆಯ ಮೇಲಿರುವ ಶಾಸನವು ಈ ಮಠವನ್ನು ಒಬ್ಬ ರಾವುತನು(ಕುದುರೆ ಸವಾರ) ಕಟ್ಟಿದ್ದಾನೆಂದು ತಿಳಿಸುತ್ತದೆ.[೨೫೦]

ಪಂಪಾದೇವಿಯ ದಿಡ್ಡಿಯ ಪೂರ್ವಕ್ಕೆ ಚಿಕ್ಕ ಗುಹೆಯಾಕಾರದಲ್ಲಿರುವ ಗುಹೇಶ್ವರ ಆಶ್ರಯವಿದೆ. ಜನರು ಈ ಆಶ್ರಮಕ್ಕೆ ಬಂದು ನೆಲೆಸಿ ಧ್ಯಾನದಲ್ಲಿ ನಿರತರಾಗಿ, ಜೀವನದ ನಾಲ್ಕು ಮುಖ್ಯ ಗುರಿ ಅಥವಾ ಉದ್ದೇಶಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಮಹತ್ವವನ್ನು ತಿಳಯುತ್ತಿದ್ದರೆಂದು ಆಶ್ರಮದ ಹತ್ತಿರವಿರುವ ಒಂದು ಬಂಡೆಯ ಮೇಲಿರುವ ಶಾಸನ ತಿಳಿಸುತ್ತದೆ.[೨೫೧]

ವಿಜಯನಗರ ಅರಸರ ಕಾಲದಲ್ಲಿ ಬಾರಕೂರು ರಾಜ್ಯವನ್ನು ಹೊನ್ನ ಕಳಸರಾಯನು ಆಳುತ್ತಿರುವಾಗ ಬ್ರಹ್ಮಾವರ ಮೂಡಭಾಗದ ಹಂದಾಡಿಯ ಅಧಿವಾಸದಲ್ಲಿ ಬಾರಕೂರು ಕೋಟಿಕೇರಿಯ ಮಾಬುಸೆಟ್ಟಿಯ ಬಳಿಯ ಹೊಸಬಂಣ ಸೆಟ್ಟಿಯ ಅಳಿಯ ಸಂಕು ಹೆಗ್ಗಡೆ ಪ್ರತಿಷೆಪಿ ಮಾಡಿದ ಶ್ರೀ ಗೋಪಿನಾಥ ದೇವರಿಗೆ ದಿನಚರಿ ನಡೆವ ಹಾಗೆ ಶ್ರೀ ಬಲಿಯ ಖರ್ಚಿಗಾಗಿ ೨೦೦ ಗದ್ಯಾಣಗಳನ್ನು ನೀಡಿದ ವಿವರ ಶಾಸನದಲ್ಲಿದೆ. ಈ ೨೦೦ ಗದ್ಯಾಣಗಳ ಆದಾಯವು ಬ್ರಹ್ಮಾವರದ ಬೇರೆ ಬೇರೆ ಭಾಗಗಳಾದ ಬೆಂಣೆಕುದುರು, ಮಡಪಾಡಿ ಮುಂತಾದ ಪ್ರದೇಶಗಳಿಂದ ಬರುವಂತಾದ್ದು ಎಂದು ವಿಧಿಸಲಾಗಿದೆ. ಈ ಶಾಸನದ ಪ್ರಕಾರ ದೇವಸ್ಥಾನದ ಸ್ಥಾಪಕ ಸಂಕು ಹೆಗ್ಗಡೆಗೆ ಹಂದಾಡಿಯ ಬೆಂಣೊಕುದುರಿನಲ್ಲಿ ಭೂಮಿಯಿದ್ದು,

ಅದರ ಕಂದಾಯದಲ್ಲಿ ೮೦ ಕಾಟಿ ಗದ್ಯಾಣ ದೇವಾಲಯಕ್ಕೆ ಹೋಗಬೇಕೆಂದು ತಿಳಿಸಲಾಗಿದೆ. ಈ ರೀತಿ ಸಂಕು ಹೆಗ್ಗಡೆಯಿಂದ ಸ್ಥಾಪಿಸಲ್ಪಟ್ಟ ದೇವಸ್ಥಾನ ಮುಂದಿನ ರಾಜ್ಯಪಾಲರುಗಳಿಂದ ಹಾಗೂ ಸಂಕು ಹೆಗ್ಗಡೆಯ ಕುಟುಂಬದವರಿಂದ ದಾನ ಧರ್ಮಗಳನ್ನು ಪಡೆಯಿತು. ಹಾಗಾಗಿ ಅದು ಅಂದು ಪ್ರಮುಖ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಯಿತು. ಶಕವರ್ಷ ೧೪೬೪ ರಂದು ಐದನೆಯ ವೆಂಕಟಾದ್ರಿರಾಯನ ಒಂದು ಶಾಸನ ಇದಕ್ಕೆ ಮೊದಲ ಉದಾಹರಣೆ.[೨೫೨]

ಈ ಶಾಸನ ವೆಂಕಟಾದ್ರಿ ರಾಯರು ವಿಜಯನಗರದ ಅರಸನಾಗಿದ್ದಾಗ ಬಾರಕೂರು ರಾಜ್ಯವನ್ನು ಅಚ್ಚಪ್ಪ ಒಡೆಯ ಆಳುತ್ತಿದ್ದ ಕಾಲದ್ದಾಗಿದೆ. ಆಗ ಸಂಕು ಹೆಗ್ಗಡೆ ಕಟ್ಟಿಸಿದ ದೇವಾಲಯದಲ್ಲಿ, ಮಾಬು ಸೆಟ್ಟಿಯ ಬಳಿಯ ಯೀಸರ ಹಡುವಳನ ತಂಮ ಅಂಣು ಹಡುವಳನು ಮಠವನ್ನು ಸ್ಥಾಪಿಸಿ, ನೀಡಿದ ದಾನವನ್ನು ಶಾಸನ ತಿಳಿಸುತ್ತದೆ. ಗ್ರಾಮದವರ ಒಪ್ಪಿಗೆಯಿಂದ ದಾನ ನೀಡಲಾಯಿತೆಂದೂ ಶಾಸನದಲ್ಲಿದೆ. ಅದು ಅಂಣು ಹಡುವಳನು ಮಾಬುಸೆಟ್ಟಿಯ ಮನೆತನದವನೆಂದು ತಿಳಿಸುವುದರಿಂದ, ಅವನು ಮತ್ತ ಸಂಕು ಹೆಗ್ಗಡೆ ಒಂದೇ ಕುಟುಂಬಕ್ಕೆ ಸೇರಿದವರು ಎನ್ನುವುದು ಖಚಿತ. ಈ ಶಾಸನದ ಕಾಲ ೧೪೯೮. ಇನ್ನೊಂದು ಶಾಸನ ಇದೇ ವರ್ಷದಲ್ಲಿ ಬರೆಸಿದ್ದು[೨೫೩] ಅದು ಸಹ ವೆಂಕಟಾದ್ರಿರಾಯ ಹಾಗೂ ಅಚ್ಚಪ್ಪ ಒಡೆಯರನ್ನು ಕ್ರಮವಾಗಿ ರಾಜ ಹಾಗೂ ರಾಜ್ಯಪಾಲರಾಗಿ ಹೆಸರಿಸುತ್ತದೆ. ಸೂರ್ಯಗ್ರಹಣದಂದು ಬ್ರಂಹರ ಗ್ರಾಮದ ಹಂದಾಡಿ ಅಧಿವಾಸದಲ್ಲಿ ಕೋಟೆಕೇರಿಯ ಮಾಬುಸೆಟ್ಟಿ ಬಳಿಯ ಸಂಕು ಹೆಗ್ಗಡೆ ಕಟ್ಟಿಸಿದ ದೇವಾಲಯದಲ್ಲಿ ಸ್ಥಾಪಿಸಿದ ಎರಡು ಮಠದಲ್ಲಿ ದೇವರ ಪೂಜೆಗಾಗಿ ಸಂಕು ಹೆಗ್ಗಡೆ ಮನೆತನದ ಶಂಕರಲಿಂಗ ಶೆಟ್ಟಿ ಭೂಮಿಯನ್ನು ದಾನವಾಗಿ ಇತ್ತನೆಂಬುದು ಈ ಶಾಸನದಲ್ಲಿದೆ.

ಈ ಶಾಸನವು ಮಹಿಳೆಯ ಭೂ ಮಾಲಿಕತ್ವ, ವೈಯಕ್ತಿಕ ಭೂಮಾಲಕತ್ವ ಅಧಿಕಾರಿಯ ಭೂ ಒಡೆತನ ಮುಂತಾದ ವಿಷಯಗಳ ಬಗ್ಗೆ ತಿಳಿಸುತ್ತದೆ. ಇದರಲ್ಲಿ ತಿಳಿಸಲಾಗಿರುವ, ಕಂಮಾಜಿ ಮಾಳ ಬಿತ್ತುವ ಗದ್ದೆ ಎಂಬುದು ಕಂಮಾರನ ಭೂ ಮಾಲಕತ್ವವನ್ನು ಉಲ್ಲೇಖಿಸುತ್ತಾರೆ. ಅದರೊಂದಿಗೆ ಹಂದಾಡಿ ಕೊಳಕೆ ಗದ್ದೆಯ ಉಲ್ಲೇಖ ಮೂರನೆಯ ಬೆಳೆಯ ಬಗ್ಗೆ ತಿಳಿಸುತ್ತದೆ.

ಅಡಿಟಿಪ್ಪಣಿಗಳು

೧. ಎ.ಇ.XVI ಹುಲಗೂರ ತಾಲೂಕು, ಬಂಕಾಪುರ, ಕ್ರಿ.ಶ.೧೨೫೫

೨. ಸೌ.ಇ.ಇ.IX-ii ೫೬೬ ಹಂಪೆ (ತಾ). ಹೊಸಪೇಟೆ ಕ್ರಿ.ಶ.೧೫೩೪

೩. ಅದೇ, XV ೧೩೫ ಲಕ್ಕುಂಡಿ (ತಾ). ಗದಗ ಕ್ರಿ.ಶ.೧೧೭೯

೪. ಅದೇ, ೫೪೫ ಮುತ್ತಗೆ (ತಾ), ಬಾಗೇವಾಡಿ ಕ್ರಿ.ಶ.೧೧೬೫

೫. ಅದೇ, ೧೨೪ ಮುತ್ತಗೆ (ತಾ), „ ಕ್ರಿ.ಶ.೧೧೪೨

೬. ಎ.ಇ.XV ಪು.೩೬ ಮುತ್ತಗೆ (ತಾ) ಬಾಗೇವಾಡಿ ಕ್ರಿ.ಶ.೧೧೮೯

೭. ಎ.ಇ.XV ಬೇಲೂರು ೩೩೪, ಬಸ್ತಿಹಳ್ಳಿ ಕ್ರಿ.ಶ.೧೨೫೭

೮. ಕ.ಇ.ಗಿ ೩೩, ಗೋಲಹಳ್ಳಿ (ತಾ), ಖಾನಾಪುರ ಕ್ರಿ.ಶ.೧೧೭೬

೯. ಎ.ಕ.XV ಬೇಲೂರು ೩೩೪, ಬಸ್ತಿಹಳ್ಳಿ ಕ್ರಿ.ಶ.೧೨೫೭

೧೦. ಎ.ಕ.II ಶ್ರವಣಬೆಳ್ಗೊಳ, ೪೫೬ ಕ್ರಿ.ಶ.೧೨೮೨

೧೧. ಎಂಎಆರ್ ೧೯೩೨ ಪು.೧೭೧, ೧೧೨೪ ಕ್ರಿ.ಶ.

೧೨. ಎಂಎಆರ್ ೧೯೩೨ ಪು.೨೪೦ ಸಿ.೮೨೫ ಕ್ರಿ.ಶ.

೧೩. ಎ.ಕ.II ೧೨೦, ಸಿ.II.೩೮ ಕ್ರಿ.ಶ.

೧೪. ಐ.ಎ XI ಪು.೬೮, ಸಿ.೫೬೦ ಕ್ರಿ.ಶ.

೧೫. ಎಕ IV ಸಂ.೭೬, ೧೧೪೫ ಕ್ರಿ.ಶ.

೧೬. ಐಎ VI ಮು.೨೪, ೫೩೮ ಕ್ರಿ.ಶ.

೧೭. ಎಕ II ೧೨೧ ಸಿ.೯೫ ಕ್ರಿ.ಶ.

೧೮. II SI. ಸಂ.೧, ೧೯೪ ಕ್ರಿ.ಶ.

೧೯. ಎಂಎಆರ್ (೧೯೩೨) ಮು.೧೭೧, ೧೧೨೪ ಕ್ರಿ.ಶ.

೨೦. ಎಂಎಆರ್(೧೯೩೯) ಮು.೧೯೩, c.೧೧೩೦ ಕ್ರಿ.ಶ.

೨೧. ಎಕ II ೧೨೦, C.೧೧೩೮ ಕ್ರಿ.ಶ.

೨೨. ಎಕ II ೧೩೧, ೧೧೨೩ ಕ್ರಿ.ಶ.

೨೩. ಎಕ VI CM ೭೫, ೧೦೬೦ ಕ್ರಿ.ಶ.

೨೪. ಎ.ಕ.೧೦(ಪರಿ) ಶಾ.ಸಂ.೨೬೮, ಬಂದೂರು ಕ್ರಿ.ಶ.೧೧೬೮

೨೫. ವಸಂತಲಕ್ಷ್ಮೀ, ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಪು.೪೦

೨೬. ಎಸ್.ಐ.ಐ.VII ೧೯೭ (ಪ್ರಾದೇ.ಶಾಸನಗಳು, ಡಾ.ಡಿ.ವಿ.ಪರಮಶಿವಮೂರ್ತಿ, ಶಾ.ಸಂ.೫೨)

೨೭. ಎಸ್.ಐ.ಐ.VII, ೨೧೨ ಕ್ರಿ.ಶ.೧೫೧೫(ಕೃ.ದೇ.ಶಾ., ಡಾ.ಡಿ.ವಿ.ಪರಮಶಿವಮೂರ್ತಿ ಶಾ.ಸಂ. ೬೯, ಮೂಡಬಿದಿರೆ)

೨೮. ಎಕ ಕೊಡಗು ಜಿಲ್ಲೆ ಶಾ.ಸಂ.೭೫, ಮುಳ್ಳೂರು ಸೋಮವಾರ ಪೇಟೆ (ತಾ)

೨೯. ಎಕ XIII, ಶಾ.ಸ.೨೧೫, ತೀರ್ಥಹಳ್ಳಿ(ತಾ) ಮೇಳಿಗೆ ೧೬೧೦ ೦ಆ

೩೦. ಎಕ VII ನಾಗಮಮಂಗಲ ಕ್ರಿ.ಶ.೧೫೧೧ ೦ಆ

೩೧. ಕ.ವಿ.ವಿ.ಶಾ.ಸಂ.೫, ಶಾ.ಸಂ.೨೯, ಕರ್ನೂಲು ಜಿಲ್ಲೆ ಆದೋನಿ(ತಾ)

೩೨. ಕ.ವಿ.ವಿ.ಶಾ.ಸಂ.೨, ಗಂಗಾವತಿ(ತಾ) ೧೮ ಶಾ.ಸಂ.

೩೩. ಕ.ವಿ.ವಿ.ಶಾ.ಸಂ.೨, ಗಂಗಾವತಿ(ತಾ) ೧೯, ಶಾ.ಸಂ.

೩೪. ಎ.ಕ.II, ಪು.೧೯೨, ೨೦೩

೩೫. ಎಕ XIII ಕುಣಿಗಲ್ ೩೭(ಪುಟ) ೩೯ ಮತ್ತು ಎಕ VIII ತೀರ್ಥಹಳ್ಳಿ.೭

೩೬. ಎಸ್ಐಐ.XI(ii) ಸಂ.೫೭೩

೩೭. ಎಸ್ಐಐ.XI(ii) ಸಂ.೫೩೬

೩೮. ಪಾಯಸ್ ಪು. ೨೦೪-೪೧ ಮತ್ತು ನ್ಯೂನಿಜ್ ಪು.೩೬೨-೩೬೩

೩೯. ಎಸ್ಐಐ.IX(ii) ಸಂ.೪೫೮

೪೦. ವಿಜಯನಗರ ಅಧ್ಯಯನ ಸಂಪುಟ ೧೦

೪೧. ವಿಜಯನಗರ ಅಧ್ಯಯನ ಸಂಪುಟ ೧೧, ಪು.೧೬೪

೪೨. ಎ.ಕ.೧೧(ಪ.ಆ.೪೭೫)

೪೩. ವಿ.ನ.ಅ., ಸಂಪುಟ ೭

೪೪. ಕ.ವಿ.ವಿ.ಶಾ.ಸಂ.೨, ಗಂಗಾವತಿ ೪೫

೪೫. ಕ್ಯುಜೆಎಂಎಸ್; VIII ಸಂ.೩ ವಿಪಿಆರ್.ಸಂ.೧೭೨, ೧೯೮೬-೮೭, ಐಕೆ.III ಸಂ.II, ಕ.ವಿ.ವಿ. ಶಾ.ಸಂ.೨, ಗಂಗಾವತಿ ನಂ.೪೯

೪೬. ಕ.ವಿ.ವಿ.ಶಾ.ಸಂ.೨, ಕೊಪ್ಪಳ ಜಿಲ್ಲೆ ಶಾ.ಸಂ.೩೫

೪೭. ಎಸ್‌ಐಐ XVIII ಲಕ್ಕುಂಡಿ ಕ್ರಿ.ಶ.೧೩೦೦

೪೮. ತುಳುನಾಡಿನ ಕನ್ನಡ ಶಾಸನಗಳು, ಸಂ.೬೪

೪೯. ತುಳುನಾಡಿನ ಕನ್ನಡ ಶಾಸನಗಳು ಸಂ.೬೮

೫೦. ಅದೇ, ೮೦

೫೧. ಅದೇ, ೫೬

೫೨. ಎಸ್‌ಐಐ ಸಂ..VII.ಸಂ.೨೨೨

೫೩. ಲೋಕನಾಥಶಾಸ್ತ್ರಿ, ವಿ.ಪೂರ್ವೋಕ್ತ, ಪು.೨೮ ಮತ್ತು ಸ್ವತಃ ಪರಿಶೀಲನೆ

೫೪. ಸಂಪ್ರೋಕ್ಷಣ, ಪೂರ್ವೋಕ್ತ

೫೫. ಕೃ.ದೇ.ಶಾಸನಗಳು ಡಾ.ಡಿ.ವಿ.ಪರಮಶಿವಮೂರ್ತಿ(ಸಂ.೧೬, ಮೂಡಬಿದಿರೆ, ಕ್ರಿ.ಶ.೧೫೧೧)

೫೬. ಎಕ ಸಂ.೧೩ ತೀರ್ಥಹಳ್ಳಿ ಶಾ.ಸಂ.೨೧೫, ಪು.೫೭೫, ಕ್ರಿ.ಶ.೧೬೧೦

೫೭. ಎ.ಕ.ಸಂ.೮ ಸೌ.೫೫

೫೮. ಕ.ವಿ.ವಿ.ಶಾ.ಸಂ.೧ ಬಳ್ಳಾರಿ ಜಿಲ್ಲೆ ಶಾ.ಸಂ.೧೫, ಪು.೨೦, ಕ್ರಿ.ಶ.೧೫೪೫

೫೯. ಎಸ್‌ಐಐ ಸಂ.VII.ಸಂ.೧೯೮

೬೦. ಅದೇ, ೨೩೦

೬೧. ತಮಿಳು ನಾಡಿನ ಶಾಸನಗಳು ಸಂ.೧, ಪು.೧೬೮-೧೯೯ ಸಂಪಾದಕರು ಡಾ.ಕೆ.ವಿ.ರಮೇಶ್

೬೨. ಎಸ್‌ಐಐ ಸಂ.೭ ಸಂ.೨೦೪

೬೩. ಎಸ್‌ಐಐ ಸಂ.೭ ಸಂ.೩೩೭

೬೪. ಎಸ್‌ಐಐ ಸಂ.೭ ಸಂ.೧೯೭

೬೫. ಎಸ್‌ಐಐ ಸಂ.೭ ಸಂ.೨೦೦

೬೬. ಎಸ್‌ಐಐ ಸಂ.೭ ಸಂ.೨೬೨

೬೭. ಎಸ್‌ಐಐ ಸಂ.೭ ಸಂ.೨೦೨, ೧೯೬, ೨೦೬, ೩೮೪

೬೮. ಎಸ್‌ಐಐ ಸಂ.೭ ಸಂ.೨೦೯

೬೯. ಎಸ್‌ಐಐ ಸಂ.೭ ಸಂ.೨೦೪, ೧೯೯, ೨೧೨, ೨೬೨, ೨೦೦, ೨೦೫, ೨೧೪, ೨೨೬, ೨೪೪, ೨೬೨, ೨೬೪, ೩೩೯ ಇತ್ಯಾದಿ

೭೦. ಎ.ಕ.೧೨, ಶಾ.ಸಂ.೨೧೨, ಸಕ್ಕರೆ ಪಟ್ಟಣ ನರಸಿಂಹರಾಜಪುರ

೭೧. ಕನ್ನಡ ಶಾಸನಗಳು ಸಂ.೧, ವಿಜಯನಗರದ ಶಾಸನಗಳು ಶಾ.ಸಂ.೧೮೨, ಕ್ರಿ.ಶ.೧೫೩೪

೭೨. ಎಸ್‌ಐಐ ಸಂ.VII.ಸಂ.೧೯೭(ಎಆರ್‌ಸಂ.೨೯, ೧೯೦೧)

೭೩. ಮಹಾವೀರ ಸಂಘ ಮೂಡಬಿದಿರೆ ರಜತ ಮಹೋತ್ಸವ ಸ್ಮರಣ ಸಂಚಿಕೆ, ೧೯೯೨-೯೩

೭೪. ಸ್ವತಃ ಪರಿಶೀಲನೆ

೭೫. ಎಸ್‌ಐಐ ಸಂ.VII.ಸಂ.೨೧೭, ೨೧೮, ೨೧೯

೭೬. ಕ.ವಿ.ವಿ.ಶಾ.ಸಂ.೫, ಕೊಟ್ಟೂರು ಶಾ.ಸಂ.೬, ಕ್ರಿ.ಶ.೧೫೫೦ (ಆಂಧ್ರ ಪ್ರದೇಶದ ಕನ್ನಡ ಶಾಸನಗಳು)

೭೭. ಅದೇ, ೪೧, ಕ್ರಿ.ಶ.೧೫೩೧(ಆಂಧ್ರ ಪ್ರದೇಶದ ಕನ್ನಡ ಶಾಸನಗಳು)

೭೮. ಅದೇ, ೨೪, ಕ್ರಿ.ಶ.೧೫೩೨(ಆಂಧ್ರ ಪ್ರದೇಶದ ಕನ್ನಡ ಶಾಸನಗಳು)

೭೯. ಅದೇ, ೪೩, ಪು.೫೦, ಕ್ರಿ.ಶ.೧೫೩೮

೮೦ ಅದೇ, ೪೪, ಪು.೫೧

೮೧. ಅದೇ, ಸಂ.೩ ಶಾ.ಸಂ.೧೪೭, ಪು.೧೧೮, ಕ್ರಿ.ಶ.೧೩೮೧(ಹಂಪಿ ಶಾಸನಗಳು)

೮೨. ಅದೇ, ೨೨೪, ಪು.೧೭೬(ಹಂಪಿ ಶಾಸನಗಳು)

೮೩. ಪ್ರೌಢದೇವರಾಯನ ಶಾಸನಗಳು, ಚೌಳೀಕೇರಿ ಹೊಸಾಳ ಕಾಲ, ೧೪೨೩, ಪು.೬, ಶಾ.ಸಂ.೪

೮೪. ಪ್ರೌಢದೇವರಾಯನ ಶಾಸನಗಳು, ಗುಬ್ಬಿ, ಕ್ರಿ.ಶ.೧೪೨೬, ಶಾ.ಸಂ.೩೦, ಪು.೬೧

೮೫. ಅದೇ, ಪಸರಲ ಕ್ರಿ.ಶ.೧೪೨೭, ಶಾ.ಸಂ.೩೫, ಪು.೭೪

೮೬. ಅದೇ, ಹೊಸಾಳ ಕ್ರಿ.ಶ.೧೪೩೨, ಶಾ.ಸಂ.೯೯, ಪು.೨೧೬

೮೭. ಅದೇ, ಬಸ್ರೂರು, ಕ್ರಿ.ಶ.೧೪೩೩, ಶಾ.ಸಂ.೧೯೯, ಪು.೨೩೯

೮೮. ಅದೇ, ಬಾರಕೂರು, ಕ್ರಿ.ಶ.೧೪೩೭, ಶಾ.ಸಂ.೧೪೨(ಎಸ್‌ಐಐVII) ಪು.೨೯೮

೮೯. ಅದೇ, ಬಸರೂರು, ಕ್ರಿ.ಶ.೧೪೪೨, ಶಾ.ಸಂ.೧೬೪, ಪು.೩೩೮(ಎಸ್‌ಐಐIX)

೯೦. ಅದೇ, ಕೊಕ್ಕರಣೆ ಕ್ರಿ.ಶ.೧೪೪೩, ಶಾ.ಸಂ.೧೭೧, ಪು.೩೪೭(ಎಸ್‌ಐಐXVII)

೯೧. ಅದೇ, ಹೇರೂರು ೧೪೪೪, ಶಾ.ಸಂ.೧೭೩, ಪು.೩೫(ಎಸ್‌ಐಐ XXVII)

೯೨. ಅದೇ, ಬಸರೂರು ಶಾ.ಸಂ., ೧೭೪ ಪು.೩೫೩(ಕ್ರಿ.ಶ.೧೪೪೪ ಎಸ್‌ಐಐI-I-೪೯)

೯೩. ಅದೇ, ರಾಮಸಾಗರ ಶಾ.ಸಂ.೧೭೫, ಕ್ರಿ.ಶ.೧೪೪೪, ಪು.೩೫೫(ಎ.ಕ.X ಬಂಗಾರಪೇಟೆ ೧೧)

೯೪. ಅದೇ, ಬಸರೂರು ಕ್ರಿ.ಶ.೧೪೪೪, ಶಾ.ಸಂ.೧೭೭, ಪು.೩೫೯(ಎಸ್‌ಐಐIX.II ೪೫೦)

೯೫. ಅದೇ, ಉಪ್ಪುಂದ ಶಾ.ಸಂ.೧೮೪, ಕ್ರಿ.ಶ.೧೪೪೬, ಪು.೩೭೫(ಎಸ್‌ಐಐXXVII.೧೨೩)

೯೬. ಅದೇ, ಕೊಡಕಣಿ ಶಾ.ಸಂ.೧೯೩, ಪು.೩೯೩(ಎ.ಕ.VII ಸೊರಬ-೧೮ ಕ್ರಿ.ಶ.೧೪೪೯)

೯೭. ಕೃಷ್ಣದೇವರಾಯನ ಶಾಸನಗಳು, ಸೋಮೇಶ್ವರ ಪಾಳ್ಯ, ಶಾ.ಸಂ.೧೦೪, ಪು.೨೧೭, ೨೧೮(ಎ.ಕ.XVII, ಮುಳಬಾಗಿಲು-೧೩)

೯೮. ಅದೇ, ಶಿವಗಂಗೆ ಶಾ.ಸಂ.೨೪೦, ಕ್ರಿ.ಶ.೧೫೨೮, ಪು.೪೯೦(ಎ.ಕ.IX, ಬೆಂಗ(ಅನು), ೧೧೬)

೯೯. ಅದೇ, ಶಿವಗಂಗೆ ಶಾ.ಸಂ.೨೫೪, ಕ್ರಿ.ಶ.೧೪೨೮, ಪು.೫೧೫(ಎ.ಕ.IX ಬೆಂಗ(ಅನು)-೭೪

೧೦೦. ಅದೇ, ತಿರುಮಕೂಡಲು ಶಾ.ಸಂ.೨೭೪, ಪು.೫೩೯ (ಎ.ಕ.೫, ತಿ.ನ.೨೬)

೧೦೧. ಎ.ಕ.ಸಂ.೧೩, ಕ್ರಿ.ಶ.೧೪೨೪, ಪು.೩೬೦, ತೀರ್ಥಹಳ್ಳಿ ಶಾ.ಸಂ.೧೧೫

೧೦೨. ಎ.ಕ.ಸಂ.೩ ಶಾ.ಸಂ.೧೫೭, ಗುಂಡ್ಲುಪೇಟೆ(ಪುತ್ತನಪುರ), ಕ್ರಿ.ಶ.೧೬೭೦, ಪು.೧೨೮

೧೦೩. ಎಸ್‌ಐಐ XX ಕಲಕೇರಿ(ತಾ) ಹಾನಗಲ್ಲ, ಕ್ರಿ.ಶ.೧೦೮೮

೧೦೪. ಎ.ಕ.ಸಂ.೧೬, ಅನುಬಂಧ ಸಂಪುಟ ಸಂಪಾದಕರು ಕೆ.ಎ.ನೀಲಕಂಠಶಾಸ್ತ್ರಿ, ಮಧುಗಿರಿ ೧೧೭, ಮಿಡಿಗೇಡಿ ೧೬೧೨

೧೦೫. ಕ.ವಿ.ವಿ.ಶಾ.ಸಂ.೧, ಹೊಸಪೇಟೆ ಸಂಖ್ಯೆ ೩, ಪು.೧೪೦

೧೦೬. ಎ.ಕ.ಸಂ.೪, ಶಾ.ಸಂ.೪೧, ಕ್ರಿ.ಶ.೧೩೮೧, ಮದ್ದೂರು ಪು.೨೯೪ ಯಳಂದೂರು

೧೦೭. ಅದೇ, ೧೫೫, ಕ್ರಿ.ಶ.೧೩೫೯ ಮಾಂಬಳ್ಳಿ(ಯಶಂಪೂರು), ಪು.೩೫೯

೧೦೮. ಕ.ವಿ.ವಿ.ಶಾ.ಸಂ.೧ ಬಳ್ಳಾರಿ ಜಿಲ್ಲೆ, ಕ್ರಿ.ಶ.ಇಲ್ಲ, ಶಾ.ಸಂ.೧೨(ಹೊಸಪೇಟೆ), ಶಕ ೧೪೫೩, ಪು.೧೪೯

೧೦೯. ಎಸ್‌ಐಐ I-I-೪೪೬ ಕ್ರಿ.ಶ.೧೪೩೬(ಪ್ರೌಢದೇವರಾಯನ ಶಾಸನಗಳು, ಬಸರೂರು, ಪು.೨೭೫, ಶಾ.ಸಂ.೧೩೦)

೧೧೦. ಎಆರ್‌ಐಇ ೧ ೯೭೧/೭೨/೧೩/೯೧ ಕಾಲ ೧೭೭೯ ತಮಿಳುನಾಡಿನ ಕನ್ನಡ ಶಾಸನಗಳು

೧೧೧. ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು, ಶಾ.ಸಂ.೧೮೯, ಕ್ರಿ.ಶ.೧೫೩೪, ಪು.೧೪೩, ಕ್ರಿ.ಶ.೧೫೩೪

೧೧೨. ಎ.ಕ.IX ಅನುಬಂಧ, ನೆಲಮಂಗಲ ೧೧೬

೧೧೩. ಎಸ್‌ಐಐ ಸಂ.IX ಭಾಗ II ಸಂಖ್ಯೆ ೪೪೬

೧೧೪. ವಿಜಯನಗರ ಅಧ್ಯಯನ ಸಂಪುಟ ೧೧, ಪು.೩೪೭

೧೧೫. ಅದೇ, ಪು.೩೪೭

೧೧೬. ಅದೇ, ಪು.೩೫೨

೧೧೭. ಅದೇ, ಪು.೩೫೨

೧೧೮. ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು, ಶಾ.ಸಂ.೨೪೮(VPR ಸಂ.೮೨ ಅಥವಾ ೧೯೮೪-೮೭, ವಿಶಾ.೩೦೮)

೧೧೯. ಪ್ರೌಢದೇವರಾಯನ ಶಾಸನಗಳು: ಡಿ.ವಿ.ಪರಮಶಿವಮೂರ್ತಿ, ಶಾ.ಸಂ.೧೨, ಬಾರಕೂರು ೧೪೨೫(ಎಸ್ಐಐVI-೩೮೪)

೧೨೦. ಎ.ಕ.೧೧, ಮೂಡಿ.೧೦೪, ಕ್ರಿ.ಶ.೧೫೨೯, ಕೃಷ್ಣದೇವರಾಯನ ಶಾಸನಗಳು, ಹೊರನಾಡು ಶಾ.ಸಂ.೨

೧೨೧. ಕ.ವಿ.ವಿ.ಶಾ.ಸಂ.೧, ಬಳ್ಳಾರಿ ಜಿಲ್ಲೆ, ಶಾ.ಸಂ.೮, ಪು.೧೪೪(ಎಆರ್ ಸಂ.೬೮೧ of ೧೯೭೭; ಎಸ್ಐಐ IX. ಸಂ. II ಸಂ.೫೭೩)

೧೨೨. ಎಸ್ಐಐ ಸಂ.IX.ಸಂ.೫೩೨

೧೨೩. ಕ.ವಿ.ವಿ.ಶಾ.ಸಂ.೧, ಬಳ್ಳಾರಿ ಜಿಲ್ಲೆ, ಶಾ.ಸಂ.೧೦, ಪು.೨೬೪(ಎಆರ್ ಸಂ.೩೯, ೧೯೦೪)

೧೨೪. ಎ.ಕ.XII, ತುಮಕೂರು ೩, ಕ್ರಿ.ಶ.೧೫೧೫, ಮಾರ್ಚ್ ೨೨

೧೨೫. ಎಸ್ಐಐ ಸಂ.VII.ಸಂ.೩೫೩

೧೨೬. ಎಸ್ಐಐ ಸಂ.VII.ಸಂ.೩೬೧

೧೨೭. ಎಸ್ಐಐ ಸಂ.IX.ಭಾಗ II ಸಂ.೪೪೮

೧೨೮. ಎಸ್ಐಐ ಸಂ.IX.ಭಾಗ II ಸಂ.೪೪೯

೧೨೯. ಎಸ್ಐಐ ಸಂ.IX.ಭಾಗ II ಸಂ.೪೫೦

೧೩೦. ಎಸ್ಐಐ ಸಂ.IX.ಭಾಗ II ಸಂ.೪೮೧

೧೩೧. ಡಾ.ಬಿ.ವಸಂತಶೆಟ್ಟಿ(ಬ್ರಹ್ಮವರದ ಇತಿಹಾಸ ೧೬)

೧೩೨. ಎಸ್ಐಐ ಸಂ.IX ಭಾಗ II ಸಂ.೪೨೫

೧೩೩. ಎಆರ್ಎಸ್ಐಇ ೧೯೨೯-೩೦, ಸಂ.೪೮೬

೧೩೪. ಎಆರ್‌ಎಸ್‌ಐಇ ೧೯೨೯-೩೦ ಸಂ.೬೦೧

೧೩೫. ಎಆರ್ ಸಂ.೪೧೭, ೧೯೨೮, ಸಂ.೪೪೯

೧೩೬. ಎಆರ್ ಸಂ.೪೫೭, ೧೯೨೮, ಸಂ.೪೬೪ ಕ್ರಿ.ಶ.೧೪೭೨

೧೩೭. ಎಆರ್ ಸಂ.೪೧೦, ೧೯೨೮, ಸಂ.೪೨೯(ಬಸರೂರು ಕುಂದಾಪುರ ತಾಲೂಕು) ಕ್ರಿ.ಶ. ೧೪೩೩

೧೩೮. ಎಆರ್ ಸಂ.೬೭೯, ೧೯೨೨ ಸಂ.೫೩೯(ಹೊಸಪೇಟೆ, ಬಳ್ಳಾರಿ ಕ್ರಿ.ಶ.೧೫೩೧)

೧೩೯. ಎಆರ್ ಸಂ.೪೨೪A, ೧೯೨೮ ಸಂ.೫೪೦(ಬಸರೂರು ಕುಂದಾಪುರ ತಾಲೂಕು, ಕ್ರಿ.ಶ. ೧೫೩೧)

೧೪೦. ಎಆರ್ ಸಂ.೪೦೯, ೧೯೨೮ ಸಂ.೬೮೩ ಬಸರೂರು ಕುಂದಾಪುರ ತಾಲೂಕು

೧೪೧. ಎಆರ್ ಸಂ.೪೧೪, ೧೯೨೮ ಸಂ.೪೪೪, ಕ್ರಿ.ಶ.೧೪೩೯

೧೪೨. ಶಾ.ಸಂ.೧೫೨, ಕ್ರಿ.ಶ.೧೩೮, ಕರ್ನಾಟಕ ಶಾಸನಗಳ ಸಂ.೧(ವಿಜಯನಗರ ಶಾಸನಗಳು ಸಂ.ಚನ್ನಬಸಪ್ಪ ಎಸ್.ಪಾಟೀಲ, ವಿನೋದ ಪಾಟೀಲ)

೧೪೩. ಎಸ್‌ಐಐ ಸಂ.VII. ಸಂ.೩೫೩, ಕ್ರಿ.ಶ.೧೩೯೦

೧೪೪. ಎಸ್‌ಐಐ ಸಂ.VII. ಸಂ.೩೫೩, ಕ್ರಿ.ಶ.೧೪೧೨

೧೪೫. ಎಸ್‌ಐಐ ಸಂ.VII. ಸಂ.೩೮೪, ಕ್ರಿ.ಶ.೧೪೨೫

೧೪೬. ಎಸ್‌ಐಐ ಸಂ.VII. ಸಂ.೩೦೧, ಕ್ರಿ.ಶ.೧೪೬೩

೧೪೭. ಎಸ್‌ಐಐ ಸಂ.VII. ಸಂ.೩೫೫, ಕ್ರಿ.ಶ.೧೪೭೨

೧೪೮. ಎಸ್‌ಐಐ IX ಭಾಗ II ಸಂ.೪೬೪, ಕ್ರಿ.ಶ.೧೪೭೩

೧೪೯. ಎಸ್‌ಐಐ ಸಂ.VII. ಸಂ.೩೭೩, ಕ್ರಿ.ಶ.೧೪೬೭

೧೫೦. ಎಸ್‌ಐಐ ಸಂ.IX. ಸಂ.೪೭೩

೧೫೧. ಎಸ್‌ಐಐ ಸಂ.IX. ಸಂ.೪೨೩

೧೫೨. ಎಸ್‌ಐಐ ಸಂ.IX. ಸಂ.೪೨೩

೧೫೩. ಕ.ವಿ.ವಿ.ಶಾ.ಸಂ.೩, ಕೊಪ್ಪಳ ಜಿಲ್ಲೆ, ಗಂಗಾವತಿ, ನಂ.೫೯, ಕ್ರಿ.ಶ.೧೫೨೭

೧೫೪. ಎ.ಕ.XVI, ತುಮಕೂರು ೮೩, ಕ್ರಿ.ಶ.೧೫೨೯

೧೫೫. ಎ.ಕ.೫, ಬೇಲೂರು ೭೫, ಕ್ರಿ.ಶ.೧೩೮೨

೧೫೬. ಗದಗ, ಎಸ್ಐಐ ೧೮ ಶಾ.ಸಂ.೨೮೩, ಕ್ರಿ.ಶ.೧೫೩೯

೧೫೭. ಎ.ಕ.X ಚೆನ್ನರಾಯಪಟ್ಟಣ, ೧೦೩

೧೫೮. ಎಸ್ಐಐ IX.II.೫೧೭, ಕ್ರಿ.ಶ.೧೫೨೫(ಕೃ.ದೇ.ಶಾ.ಗು ಬಸರೂರು ೧೦೩, ಪು.೩೬೫)

೧೫೯. ಎಆರ್ ಸಂ.೭೦೧, ೧೯೨೨; ಎಸ್ಐಐ- XVII. ಸಂ.೨೧೭; ವಿ.ಶಾ.೧೯೬(ಕ.ವಿ.ವಿ.ಶಾ.ಸಂ.೩, ಹಂಪಿ ಶಾ.ಗಳು, ಶಾ.ಸ.೧೩೬, ಕ್ರಿ.ಶ.೧೫೫೬)

೧೬೦. ವಿಪಿಆರ್ ಸಂ.೬೮, ೧೯೮೩-೮೪ ವಿಶಾ ೩೪೦, ೧೬೧೯ Century, (ಕ.ವಿ.ವಿ.ಶಾ.ಸಂ.೩, ಹಂಪಿ ಶಾಸನಗಳು, ಶಾ.ಸಂ.೨೭೫ ಪು.೨೦೬)

೧೬೧. ಎಆರ್ ಸಂ.೭೨, ೧೯೧೨; ಎಸ್ಐಐ IX. ಭಾಗ.II.ಸಂ.೫೬೭(ಕ.ವಿ.ವಿ.ಶಾ.ಸಂ.೫, ಆಂ.ಪ್ರ ಕ.ಶಾ. ಭಾಗ-೧, ಪು.೧೩, ಶಾ.ಸಂ.೧೨)

೧೬೨. ಎಆರ್ ಸಂ.೭೨, ೧೯೧೨; ಎಸ್ಐಐ IX. ಭಾಗ.II ಸಂ.೫೭೮(ಕ.ವಿ.ವಿ.ಶಾ.ಸಂ.೫, ಆಂ.ಪ್ರ ಕ.ಶಾ.ಭಾಗ.೧)

೧೬೩. ಎಆರ್ ಸಂ.೬೯, ೧೯೧೨; ಎಸ್ಐಐ IX. ಭಾಗ.II ಸಂ.೫೯೬(ಕ.ವಿ.ವಿ.ಶಾ.ಸಂ.೫ ಆಂ.ಪ್ರಕ. ಶಾ.ಗಳು, ಭಾಗ-೧, ಕ್ರಿ.ಶ.೧೫೩೭ ಶಾ.ಸ.೮, ಗೊರ್ರೆಪಲ್ಲಿ ಪು.೮)

೧೬೪. ಎಆರ್ ಸಂ.C.೭೦, ೧೯೧೨; ಎಸ್ಐಐ IX. ಭಾಗ.II.ಸಂ.೫೮೪(ಕ.ವಿ.ವಿ.ಶಾ.ಸಂ.೫, ಆಂಧ್ರ ಪ್ರದೇಶ, ದ.ಕ.ಶಾ.ಗಳು-೧, ಪು.೯, ಶಾ.ಸಂ.೯, ಕಾಲ ಕ್ರಿ.ಶ.೧೫೩೮)

೧೬೫. ಎಆರ್ ಸಂ.೭೩, ೧೯೧೨; ಎಸ್ಐಐ IX. ಭಾಗ II ಸಂ.೫೭೭(ಕ.ವಿ.ವಿ.ಶಾ.ಸಂ.೫, ಆಂ.ಪ್ರಕ.ಶಾ.ಗಳು ಕ್ರಿ.ಶ.೧೫೩೭ ಪು.೧೪, ಶಾ.ಸಂ.೧೩)

೧೬೬. ಎ.ಕ.೩, ಶಾ.ಸಂ.೩೦೨, ಪು.೩೭೨, ನಂಜನಗೂಡು (ರಾಮಶೆಟ್ಟಿಪುರ), ಕ್ರಿ.ಶ.೧೫೧೨

೧೬೭. ಎ.ಕ.೧೦, ಚನ್ನರಾಯಪಟ್ಟಣ (ನುಗ್ಗೆಹಳ್ಳಿ) ಶಾ.ಸಂ.೧೦೩, ಪು.೫೪೨

೧೬೮. ಎ.ಕ.೯ ಬೇಲೂರು ಶಾ.ಸಂ.೧೬೫, ಕ್ರಿ.ಶ.೧೩೯೮ ಪು.೧೨೨

೧೬೯. ಎ.ಕ.೯ ಬೇಲೂರು ಶಾ.ಸಂ.೩೮, ಕ್ರಿ.ಶ.೧೫೫೬, ಪು.೨೬

೧೭೦. ಎ.ಕ.೯ ಬೇಲೂರು ಶಾ.ಸಂ.೪೯೨. ಕ್ರಿ.ಶ.೧೫೬೨, ಪು.೪೪೬

೧೭೧. ತಮಿಳು ನಾಡಿನ ಕನ್ನಡ ಶಾಸನಗಳು, ಪು.೧೦೦(ಎಆರ್ಐಇ, ೧೯೭-೭೨/೩.೧೯೪ ಕಾಲ ಕ್ರಿ.ಶ.೧೫೨೭)

೧೭೨. ಎ.ಕ.೯, ಪು.೧೩೮, ಶಾ.ಸಂ.೧೭೧, ಬೇಲೂರು

೧೭೩. ಎ.ಕ.೧೦, ಚನ್ನರಾಯಪಟ್ಟಣ ಶಾ.ಸಂ.೨೯, ಕ್ರಿ.ಶ.೧೪೩೯

೧೭೪. ಎಆರ್ ಸಂ.೪೦೧, ೧೯೨- ಸಂ.೪೧೯, ಕ್ರಿ.ಶ.೧೩೮೦(ಕುಂದಾಪುರ ತಾಲೂಕು ಶಂಕರ ನಾರಾಯಣ ಗುಡಿ ಹತ್ತಿರ)

೧೭೫. ಎಸ್ಐಐ, ಸಂ.IX, ಭಾಗII ಪು.೬೨೦

೧೭೬. ಎಆರ್ ಸಂ.೪೨೩ of ೧೯೨೮ ಸಂ.೪೭೬(ಬಸರೂರು ಕುಂದಾಪುರ ತಾಲೂಕು, ಕ್ರಿ.ಶ. ೧೫೦೬)

೧೭೭. ಎಸ್ಐಐ IX. ಭಾಗ-II, ಪು.೬೩೭, ಸಂ.೬೨೯

೧೭೮. ಕನ್ನಡ ನಿಘಂಟು ಸಂ.೭, ಕ.ಸಾ.ಪರಿಷತ್ತು, ಪು.೬೮೬೦

೧೭೯. ಎಂ.ಜಿ.ನಂಜುಂಡಾರಾಧ್ಯ, 'ಸ್ಮರಣ ಸಂಪುಟ' ಸಂ.ಡಾ.ಎಚ್.ಪಿ.ಮಲ್ಲೇದೇವರು, ಪು.೮೩

೧೮೦. ಪಿ.ವಿ.ಆಚಾರ್ಯ, 'ಮಠಗಳು ಅವು ಏನು ಮಾಡಬಲ್ಲವು ಚಿತ್ರಭ', ಸಂ.ಜಿ.ಎಚ್.ಹನ್ನೆರಡು ಮಠ, ಪು.೫೭೬

೧೮೧. ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕ, ಸಂ.೧೨, ಪು.೩೩೫

೧೮೨. ಡಾ.ಜಿ.ಎಸ್.ಶಿವರುದ್ರಪ್ಪ, "ಕಾಯಕ ಪರಿಣಾಯಿ", ಸಂ.ಶಾಂತರಸ ಮತ್ತು ಚನ್ನಬಸಪ್ಪ, ಪು.೪೬೮

೧೮೩. ಅದೇ

೧೮೪. ಮುಕೇಜಿಯಾ ಬಿ.ಕೆ., 'ದಿ ಹಿಂದೂ ಲಾ ಆಫ್ ರಿಲಿಜಿಯಸ್ ಅಂಡ್ ಚಾರಿಟಬಲ್ ಟ್ರಸ್ಟ್', ಪು.೨೯೩

೧೮೫. ಕನ್ನಡ ವಿಶ್ವಕೋಶ ಸಂಪುಟ ೧೨, ಸಂಪಾದಕ ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪು.೧೦೦೪

೧೮೬. ಆಗ ಅಶೋಕನು ಭೌದ್ಧ ಪ್ರಸಾರಕ್ಕಾಗಿ ಮಹಿಷ ಮಂಡಲಕ್ಕೆ ಧರ್ಮ ಪ್ರಚಾರಕರನ್ನು ಕಳುಹಿಸಿದ್ದುದಾಗಿ ಭೌದ್ಧ ಮೂಲಗಳಿಂದ ತಿಳಿದುಬರುತ್ತದೆ.

೧೮೭. ಕರಣಸ್ ಮ್ಯಾನುಯಲ್ ಆಫ್ ಬುದ್ಧಿಸಂ, ಪು.೮೧

೧೮೮. ಶಂಕರಾಚಾರ್ಯರು ನಾಲ್ಕು ದಿಕ್ಕುಗಳಿಗೆ ನಾಲ್ಕು ಮಠಗಳನ್ನು ಸ್ಥಾಪಿಸಿದ್ದರು. ಪೂರ್ವದಲ್ಲಿ ಪುರಿ, ಪಶ್ಚಿಮ ದ್ವಾರಕ, ಉತ್ತರ ಬದರಿ ಮತ್ತು ದಕ್ಷಿಣದಲ್ಲಿ ಶೃಂಗೇರಿ ಮಠಗಳಿವೆ.

೧೮೯. ಮುಕೇಜಿಯಾ ಬಿ.ಕೆ., 'ದಿ ಹಿಂದೂ ಲಾ ಆಫ್ ರಿಲಿಜಿಯಸ್ ಅಂಡ್ ಚಾರಿಟಬಲ್ ಟ್ರಸ್ಟ್', ಪು.೨೯೬

೧೯೦. ಡಾ.ಬಿ.ವಿ.ಮಲ್ಲಾಪುರ "ವೀರಶೈವ ಮಠಗಳ ಹಿನ್ನೆಲೆ ವಿಶ್ವಪ್ರಭೆ" ಸಂಪಾದಕ ಜಿ.ಎಸ್.ಹನ್ನೆರಡು ಮಠ, ಸಂ.೩, ಪು.೫೦೩-೫೦೪

೧೯೧. ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೮೬-೧೮೭

೧೯೨. ಡಾ.ಬಿ.ವ್ಹಿ.ಮಲ್ಲಾಪುರ, ವೀರಶೈವ ಮಠಗಳ ಹಿನ್ನೆಲೆ ವಿಶ್ವಪ್ರಭೆ ಸಂ.೩, ಸಂಪಾದಕ ಜಿ.ಎಚ್.ಹನ್ನೆರಡು ಮಠ

೧೯೩. ನಂದಿಮಠ ಎಸ್.ಸಿ., ಹ್ಯಾಂಡ್ ಬುಕ್ ಆಫ್ ವೀರಶೈವಿಸಂ, ಪು.೯,೧೦

೧೯೪. ಸೌ.ಇ.ಇ.ಸಂ.೯, ಭಾಗ ೨, ಸಂಖ್ಯೆ ೪೭೩, ಪಾಠ ಸಾಲು ೮-೧೦

೧೯೫. ಅದೇ, ಸಾಲು ೧೦

೧೯೬. ಅದೇ, ಸಾಲು ೫೧೧

೧೯೭. ಅದೇ, ಸಾಲು೫೧೨

೧೯೮. ಅದೇ, ಸಾಲು ೫೧೭

೧೯೯. ಇದೊಂದು ೫೫ ಸಾಲು ಬರಹವಿರುವ ದೊಡ್ಡ ಶಾಸನ ಅಪೂರ್ಣವಾಗಿದೆ. ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ವ್ಯವಹಾರಗಳ ಬಗ್ಗೆ ಮಾಹಿತಿಯಿದೆ.

೨೦೦. ಎಸ್ಐಐ, ಸಂಪುಟ.೯, ಭಾಗ ೨, ಸಂಖ್ಯೆ ೬೨೦

೨೦೧. ಅದೇ, ಸಾಲು ೭೨-೭೪

೨೦೨. ಅದೇ, ಸಾಲು ೨೮-೨೯

೨೦೩. ಅದೇ, ಸಾಲು ೭೦-೭೧

೨೦೪. ಅದೇ, ಸಾಲು ೬೩೨

೨೦೫. ಅದೇ, ಸಂಖ್ಯೆ ೬೩೪ ಶಾ.ಪಾ.ಸಾ.೨೪

೨೦೬. ಅದೇ, ಸಂಖ್ಯೆ, ೬೫೫ ಸಾಲು ೧೦-೧೨

೨೦೭. ಅದೇ, ಸಾಲು ೬೫೯

೨೦೮. ಅದೇ, ಸಾಲು ೬೯೪

೨೦೯. ಅದೇ, ೬೯೪ ಶಾ.ಪಾ.ಸಾ.೪೩-೪೫

೨೧೦. ಈ ಶಾಸನವು ಈಗ ಬಸರೂರು ಶಾರದಾ ಕಾಲೇಜಿನ ವಸ್ತು ಸಂಗ್ರಾಹಲಯದಲ್ಲಿದೆ.

೨೧೧. ಎಸ್‌ಐಐ, ಸಂಪುಟ XXVI-೧೧೧, ಕ್ರಿ.ಶ.೧೪೩೪(ಹಾನೇಹಳ್ಳಿ, ಉಡುಪಿ ಜಿಲ್ಲೆ, ಸೋಮನಾಥ ಗುಡಿಯ ಮುಂಭಾಗದ ಶಿಲಾಶಾಸನ)

೨೧೨. ಎಸ್‌ಐಐ, ಸಂಪುಟ ೭-೩೪೩(ಬಾರಕೂರು, ಉಡುಪಿ ತಾಲೂಕು, ಜಿಲ್ಲೆ, ಚೌಳಿಯಕೇರಿ ಯಲ್ಲಿರುವ ಶಾಸನ)

೨೧೩. ಎಸ್‌ಐಐ, ಸಂಪುಟ ೯, ಭಾಗ ೧೧, ಶಾಸನ ಸಂಖ್ಯೆ ೫೨೫, ಕ್ರಿ.ಶ.೧೫೨೮, ಅಕ್ಟೋಬರ್ ೧೪, ಬುಧವಾರ(ಬಸರೂರು, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ, ಮಹಾ ಲಿಂಗೇಶ್ವರ ದೇವಾಲಯದ ಹೊಸ ಪ್ರಾಕಾರದಲ್ಲಿರುವ ಶಾಸನ.)

೨೧೪. ಎ.ಕ.೭, ಶಿಕಾರಿಪುರ ೧೧೯, ಬಳ್ಳಿಗಾವೆ(ಕ್ರಿ.ಶ.೧೧೮೯)

೨೧೫. ಎಸ್‌ಐಐ, ಸಂಪುಟ ೯-ii ೫೧೨ ಕಮಲಾಪುರ, ತಾಲೂಕು ಹೊಸಪೇಟೆ ಕ್ರಿ.ಶ.೧೫೨-

೨೧೬. ಎಸ್‌ಐಐ, I-II ೫೨೫, ಬಸರೂರ, ಕುಂದಾಪುರ ತಾಲೂಕು, ಕ್ರಿ.ಶ.೧೫೨೮

೨೧೭. ಅದೇ, ೫೧೧ ಬಸರೂರ, ಕುಂದಾಪುರ ತಾಲೂಕು, ಕ್ರಿ.ಶ.೧೫೪೧

೨೧೮. ಹಂಪಿ ವೀರಶೈವ ಮಠಗಳು ಮತ್ತು ಸಾಹಿತ್ಯ ಪರಂಪರೆ, ಕೊಟ್ರಯ್ಯ ಸಿ.ಟಿ.ಎಂ, ಪು.೨೦

೨೧೯. ಕರ್ನಾಟಕ ಜನಜೀವನ, ಕೃಷ್ಣಶರ್ಮಾ ಬಿ., ಪು.೯೦-೯೩

೨೨೦. ಎಸ್‌ಐಐ, ಸಂ.೪, ಸಂಖ್ಯೆ ೨೫೪, ಪು.೪೪

೨೨೧. ಅದೇ, ಸಂಖ್ಯೆ ೨೫೫

೨೨೨. ಅದೇ, ಸಂಖ್ಯೆ ಭಾಗ-II ಸಂ.೫೦೪

೨೨೩. ಅದೇ, ಸಂ.೫೩೩ ಎಸ್‌ಐಐ, ಸಂ.XVI, ಸಂಖ್ಯೆ ೨೬

೨೨೪. ಅದೇ, ಭಾಗ.II ಸಂಖ್ಯೆ ೫೫, ಎಆರ್.ಸಂ.೨೪, ೧೯೦೩

೨೨೫. ಎಸ್‌ಐಐ, ಸಂ.೨೬೦

೨೨೬. ಅದೇ,

೨೨೭. ಸದಾನಂದ ಕನವಳ್ಳಿ(ಅನು) ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.೨೭೪

೨೨೮. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೨೬೮

೨೨೯. ಎಆರ್ ಸಂ.೪೦೮, ೧೯೨೮, ಸಂ.೪೨೩(ಬಸರೂರು ಕುಂದಾಪುರ ತಾಲೂಕು, ಕ್ರಿ.ಶ.೧೪೦೦)

೨೩೦. ಎಆರ್ ಸಂ.೪೩೦, ೧೯೨೮, ಸಂ.೪೪೬ (ಕುಂದಾಪುರ ತಾಲೂಕು, ಬಸರೂರು, ಕ್ರಿ.ಶ.೧೩೫೮)

೨೩೧. ಎಆರ್ ಸಂ.೫೦೩ ೧೯೨-೨೮

೨೩೨. ಎಆರ್ ಸಂ.೩೩೩ ೧೯೫-೫೩, ಅನುಬಂಧ-B

೨೩೩. ಎಸ್‌ಐಐ, ಸಂ.VII ಸಂಖ್ಯೆ ೩೭೫

೨೩೪. ಎಸ್‌ಐಐ, ಸಂ.IX, ಭಾಗ ೨, ಸಂಖ್ಯೆ ೬೭೪

೨೩೫. ಎಸ್‌ಐಐ, ಸಂ.IX, ಭಾಗ ೨, ಸಂಖ್ಯೆ ೫೨೫

೨೩೬. ಎಆರ್ ಸಂ.೩೯೧, ೧೯೨೭, ೧೪೮೭ ಕ್ರಿ.ಶ. ಸಂ.೪೨೩(ಬಸರೂರು, ಕುಂದಾಪುರ ತಾಲೂಕು)

೨೩೭. ಎಆರ್ ಸಂ.೪೨೫, ೧೯೨೮, ಸಂ.೫೧೧, ಕ್ರಿ.ಶ.೧೫೯೧(ಬಸರೂರು, ಕುಂದಾಪುರ ತಾಲೂಕು)

೨೩೮. ಎಆರ್ ಸಂ.೮೮, ೧೯೧೨, ಸಂ.೫೮೭, ಕ್ರಿ.ಶ..೧೫೩೮(ಇಂದುಪುರ ತಾಲೂಕು, ಅನಂಪುರ ಜಿಲ್ಲೆ)

೨೩೯. ಎಆರ್ ಸಂ.೩೮೫, ೧೯೨೭, ಸಂ.೬೨೩(ಕೋಟೇಶ್ವರ ಕುಂದಾಪುರ ತಾಲೂಕು, ಕ್ರಿ.ಶ.೧೫೬೨)

೨೪೦. ಎಆರ್ ಸಂ.೪೨೯, ೧೯೨೮ ಸಂ.೪೫೨, ಕ್ರಿ.ಶ.೧೪೫೦, ಬಸರೂರು

೨೪೧. ಎಸ್ಐಐ VII ಸಂಖ್ಯೆ ೩೪೧/ಎಆರ್ ಸಂ.೧೪-A, ೧೯೦೧, ೧೩೭೬ ಕ್ರಿ.ಶ.

೨೪೨. ಎಸ್ಐಐ VII, ಕ್ರಿ.ಶ.೧೫೦೩, ಬಾರಕೂರು ಶಾಸನ

೪೩. ಎಆರ್ಎಸ್ಐಇ ೧೯೨-೩೦, ಸಂ.೫೪೧, ೧೫೦೮ ೦೮

೨೪೪. ಅದೇ ಸಂ.೯೮, ಪು.೪೮

೨೪೫. ಸಂ.೧೭೭, ಬಾರಕೂರು, ಕ್ರಿ.ಶ.೧೫೨೪(ಕೃಷ್ಣದೇವರಾಯನ ಶಾಸನಗಳು, ಪು.೬೩, ಡಾ. ಡಿ.ವಿ. ಪರಮಶಿವಮೂರ್ತಿ)

೨೪೬. ಎಂಎಆರ್(೧೯೨೫-೨೧) ಕ್ರಿ.ಶ.೧೫೧೬ ಕರಡಿಹಳ್ಳ, ಕೃ.ದೇ.ಶಾ.ಗಳು, ಶಾ.ಸಂ.೮೮, ಪು.೧೭೯

೨೪೭. ಕೊಟ್ರಯ್ಯ ಸಿ.ಟಿ.ಎಂ., 'ಒಂದು ಅಪ್ರಕಟಿತ ತಾಮ್ರಶಾಸನ' ಇನ್ ಹೇಮಕೂಟ, ಪು.೩-೧೬

೨೪೮. ವ್ಹಿ.ಪಿ.ಆರ್, ೧೯೮೪-೮೭, ಸಂ.೩೨

೨೪೯. ಅದೇ, ಸಂ.೩೪

೨೫೦. ಅದೇ, ೧೯೮೪-೮೭, ಸಂ.೧೦೧

೨೫೧. ಅದೇ, ೧೮೮೩-೮೪, ಸಂ.೩೧

೨೫೨. ದಕ್ಷಿಣ ಭಾರತದ ಶಾಸನಗಳು, ಸಂ.೨೭, ಶಾ.ಸಂ.೧೮೬

೨೫೩. ಅದೇ, ಶಾ.ಸಂ.೧೮೫

ಅಧ್ಯಾಯ ಐದು

ಸಮಾಜ ನಿರ್ಮಾಣದಲ್ಲಿ ಸೆಟ್ಟಿ ಕುಲದ ಪಾತ್ರ
ತೌಲನಿಕ ಚರ್ಚೆ

೫.೧. ಹೊಯ್ಸಳರು

೫.೨. ರಾಷ್ಟ್ರಕೂಟರು

೫.೩. ಕಲ್ಯಾಣ ಚಾಲುಕ್ಯರು

೫.೪. ಕಲಚೂರಿಗಳು

೫.೫. ಸೇವುಣರು(ಯಾದವರು)

೫.೬. ಮೈಸೂರಿನ ಒಡೆಯರು

ಅಧ್ಯಾಯ ಐದು

ಸಮಾಜ ನಿರ್ಮಾಣದಲ್ಲಿ ಸೆಟ್ಟಿ ಕುಲದ ಪಾತ್ರ-ತೌಲನಿಕ ಚರ್ಚೆ

ಕುಟುಂಬ ಜೀವಿಗಳಾದ ವರ್ತಕರ ಸಾಮಾಜಿಕ ಜೀವನದಲ್ಲಿ ಕಂಡುಬರುವ ಹಲವಾರು ಸ್ವಾರಸ್ಯಕರ ಸಂಗತಿಗಳು ಶಾಸನಸ್ಥವಾಗಿವೆ. ಸೆಟ್ಟಿಗಳು ತಮ್ಮ ತಮ್ಮ ಮನೆತನ ಹಾಗೂ ಅರಸು ಮನೆತನಗಳಲ್ಲಿ ವಿವಾಹ ಸಂಬಂಧ ಬೆಳೆಸಿದ್ದರು. ಸೆಟ್ಟಿಗಳು ಚಕ್ರವರ್ತಿಗಳಿಂದ ಸತ್ತಿಗೆ, ಚಾಮರ, ಪಲ್ಲಕ್ಕಿಗಳ ಮರ್ಯಾದೆ ಪಡೆದಿದ್ದಾರೆ. ಸೆಟ್ಟಿಗಳ ಅಪುತ್ರ ಕಥನ ದೇವಾಲಯದ ಸೊತ್ತಾಗುತ್ತಿತ್ತು. ಧರ್ಮವ್ಯಾಜ್ಯಗಳನ್ನು ಬಗೆಹರಿಸುವ, ವ್ಯಕ್ತಿಗಳಿಗೆ ಅಭಿದಾನ ಅಥವಾ ಬಿರುದು ನೀಡುವ, ಗೌಡರಿಗೆ ನಾಡ ಹೆಗ್ಗಡೆತನ ಕೊಡುವ, ಧರ್ಮಶಾಸನ, ಆಜ್ಞೆಯ ಶಾಸನ ಹೊರಡಿಸುವ, ಬಾಳು ತಪ್ಪಿದ ಹೆಣ್ಣಿಗೆ ನಿಯಮ ಹಾಕಿಕೊಡುವಂಥ ಅಧಿಕಾರಗಳನ್ನು ಪಡೆದ ಸೆಟ್ಟಿ ಕುಲದವರು ವಿಶೇಷ ಮನ್ನಣೆಗೆ ಭಾಜನರಾಗಿದ್ದಾರೆ. ದೇವಕಾರ್ಯಗಳಿಗೆ ದಾನ ನೀಡುವಾಗ ರಾಜ ಪರಿವಾರ, ಪ್ರಜಾಪರಿವಾರದವರು ವರ್ತಕರ ಸನ್ನಿಧಾನ, ಅನುಮತಿಯನ್ನು

ಪಡೆಯುತ್ತಿದ್ದರು. ಅಂದಿನ ಸಮಾಜದಲ್ಲಿ ದಾನ ಪ್ರಧಾನ, ಪ್ರತಿಪಾಲನೆಗಳಿಂದ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆಯಿದ್ದಿತು. ಹೀಗಾಗಿ ಸೆಟ್ಟಿ ಕುಲದವರು ಸ್ವದಾನ, ಪರದಾನ ಪಾಲನಧರ್ಮವನ್ನು ಚಾಚೂ ತಪ್ಪದೆ ಪಾಲಿಸುತ್ತಾ ಬಂದಿದ್ದಾರೆ.

ಸೆಟ್ಟಿಗಳು ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ಸತ್ಕಾರ್ಯ, ಸದ್ಧರ್ಮಗಳಿಗಾಗಿ ವಿನಿಯೋಗಿಸಿದ್ದಾರೆ. ವೈದಿಕ, ಜೈನ, ಶೈವ ಮತದ ಸೆಟ್ಟಿಗಳು ಮತ-ವರ್ಗ ವರ್ಣ-ವಯಸ್ಸುಗಳ ತಾರತಮ್ಯವಿಲ್ಲದೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದೇವಾಲಯಗಳ ವಿವಿಧ ಕಾರ್ಯಗಳಿಗೆ ನೂರಾರು ಸಂಖ್ಯೆಯ ದಾನಗಳನ್ನೂ ಮಾಡಿದುದು ಅನುಕರಣೀಯ, ಆದರ್ಶನೀಯ. ಇಂಥ ಧಾರ್ಮಿಕ ಕಾರ್ಯ ಪ್ರಸಂಗಗಳಲ್ಲಿ ತೋರಿ ಬರುವ ಸೆಟ್ಟಿಕುಲದವರ ಭಕ್ತಿಭಾವ, ಧಾರ್ಮಿಕ ಶ್ರದ್ಧೆ, ತ್ಯಾಗಗುಣ, ಸ್ವಮತಾಭಿಮಾನ, ಪರಮತ ಪುರಸ್ಕಾರಗಳನ್ನು ಶಾಸನಗಳು ಕೈಯೆತ್ತಿ ಹೇಳುತ್ತವೆ. ಇಂಥಹ ಕಲ್ಯಾಣಕರ ಕಾರ್ಯಗಳನ್ನು ಇದುವರೆಗೂ ವಿವಿಧ ಅಧ್ಯಾಯಗಳಲ್ಲಿ ನೋಡಿದ್ದೇವೆ. ಪ್ರಸ್ತುತ ಈ ಅಧ್ಯಾಯದಲ್ಲಿ ಸೆಟ್ಟಿಕುಲದವರು ಮಾಡಿದ ಒಳ್ಳೆಯ ಕೆಲಸಗಳನ್ನು ಸಮಾಜದಲ್ಲಿ ಇವರು ವಹಿಸಿರುವ ಪಾತ್ರವನ್ನು ತೌಲನಿಕವಾಗಿ ಚರ್ಚಿಸಿ ನೋಡೋಣ.

ಸೆಟ್ಟಿ ಕುಲದವರು ಮಾಡಿರುವ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ಇಂದಿನ ಸಮಾಜಕ್ಕೆ ಮಾದರಿಯಾಗಿವೆ. ಇಂದಿನ ಸೆಟ್ಟಿ ಕುಲದವರು ಶಾಸನಗಳಲ್ಲಿ ಉಲ್ಲೇಖಗೊಂಡ ಸೆಟ್ಟಿಗಳನ್ನು ಆದರ್ಶವಾಗಿಟ್ಟುಕೊಂಡು ಅವರ ಮಾರ್ಗದಲ್ಲಿ ನಡೆಯಬೇಕು.

೫.೧. ಹೊಯ್ಸಳರು

ಹೊಯ್ಸಳರ ವಂಶದ ರಾಜನಾದ ಬಲ್ಲಾಳನ ಕಾಲದಲ್ಲಿ ಅಂದರೆ ೧೨೭೩ರ ಶಾಸನದಲ್ಲಿ[೧] ಪಟ್ಟಣಸ್ವಾಮಿಯ ಉಲ್ಲೇಖವಿದೆ. ಈ ಶಾಸನದಲ್ಲಿ ಹೆಂಮಿಸೆಟ್ಟಿಯರ ಮೊಮ್ಮಗ ಪಟ್ಟಣಸ್ವಾಮಿ ಸಂಕರನು, ಎರಡು ಗದ್ಯಾಣಗಳನ್ನು ಬ್ರಾಹ್ಮಣರ ಭೋಜನಕ್ಕಾಗಿ ದಾನ ಮಾಡಿದನು. ವೈಷ್ಣವರು ಮತ್ತು ಮಹಾಜನರು ಈ ಧರ್ಮವನ್ನು ನಡೆಸಬೇಕೆಂಬುದು ಈ ಶಾಸನದಲ್ಲಿದೆ. ಹೊಯ್ಸಳ ವಿಷ್ಣುವರ್ಧನನು ನಡೆಸಬೇಕೆಂಬುದು ಈ ಶಾಸನದಲ್ಲಿದೆ. ಹೊಯ್ಸಳ ವಿಷ್ಣುವರ್ಧನನು ಆಳುತ್ತಿರುವ ಕಾಲ ಶಾಸನದ ಕಾಲ ೧೧೩೬. ಈ ಶಾಸನದಲ್ಲಿ ವಜ್ರ ವ್ಯಾಪಾರಸ್ಥರು ಮತ್ತು ನಖರರು ಸೇರಿ ಮಣಿಕೇಶ್ವರ ದೇವರಿಗಾಗಿ ಭೂಮಿ,

ಹೂದೋಟವನ್ನು ದಾನ ನೀಡುವರು. ಈ ನಖರರು ದೋರಸಮುದ್ರ, ಬೇಲೂರು ಮತ್ತು ವಿಷ್ಣುಸಮುದ್ರ ಎನ್ನುವ ಮುಖ್ಯ ಪಟ್ಟಣದವರು.[೨] ವಿಷ್ಣುವರ್ಧನನ ಕಾಲದ ಇನ್ನೊಂದು ಶಾಸನದಲ್ಲಿ. ಕಾಲ ಕ್ರಿ.ಶ.೧೧೪೫. ಈ ಶಾಸನವು ದಣ್ಣಾಯಕ ನಾಗಸೆಟ್ಟಿಯು ಹೋರಾಡಿ ಮಡಿದ ವಿಷಯವನ್ನು ತಿಳಿಸುವ ಶಾಸನವಿದು. ಕುದುರೆಯ ದಳದೊಂದಿಗೆ ಹೋರಾಡಿ ಸುರಲೋಕ ಪ್ರಾಪ್ತನಾದನು.[೩] ಹೊಯ್ಸಳ ರಾಜನಾದ ವೀರನರಸಿಂಹ III ನು ರಾಜ್ಯಭಾರ ಮಾಡುತ್ತಿರುವಾಗ, ಶ್ರೀ ಮೂಲಸಂಘ ಬಲಾತ್ಕಾರ ಗಣದ ತ್ರಿಕೂಟ ರತ್ನತ್ರಯದ ಶ್ರೀಶಾಂತಿನಾಥ ದೇವರಿಗೆ ಈ ಶಾಸನವು ಮುಂದುವರೆದು, ತುಪ್ಪ, ಅರಿಶಿನ, ಗಂಧ, ಕರ್ಪೂರ, ಅಕ್ಕಿ, ಹಾಲು ಇವುಗಳನ್ನು ದಿನಂಪ್ರತಿ ಒದಗಿಸುವಂತೆ ಗೋವಿಸೆಟ್ಟಿಯ ಮಗ ಚಿಂನುಪ್ಪ ಒಪ್ಪಿರುವ ಶಾಸನವಿದೆ. ಇಷ್ಟಲ್ಲದೇ ಚಿಂನುಪ್ಪನು ಪಾರ್ಶ್ವತೀರ್ಥಕರರ ಪ್ರತಿಷ್ಠೆ ಮಾಡಿಸಿದನು.[೪]

ಈ ಮೇಲಿನ ಶಾಸನಗಳನ್ನು ತೌಲನಿಕಾತ್ಮವಾಗಿ ಸೆಟ್ಟಿ ಕುಲದ ಪಾತ್ರ ಹೊಯ್ಸಳ ರಾಜದ ಕಾಲದಲ್ಲಿ ಸೆಟ್ಟಿಗಳ ಮಹತ್ವತೆಯನ್ನು ತಿಳಿಸುವಂತವಾಗಿವೆ. ಹೊಯ್ಸಳರ ಕಾಲದ ಅನೇಕ ಪಟ್ಟಣಗಳು ಮಾರುಕಟ್ಟೆಯ ಕೇಂದ್ರಗಳಾಗಿದ್ದವು. ಅಲ್ಲಿನ ನಾಡುಗಳ ಉತ್ಪನ್ನವನ್ನು ಕೊಂಡು ವಿದೇಶೀ ಸರಕುಗಳನ್ನು ಅಲ್ಲಿ ಮಾರುತ್ತಿದ್ದರು. ವರ್ತಕ ಸಂಘಗಳಿದ್ದವು. ಈಗಿನ ನಗರ ಸಭಾಧ್ಯಕ್ಷರೊಂದಿಗೆ ಹೋಲಿಸಬಹುದಾದ 'ಪಟ್ಟಣಸ್ವಾಮಿ' ಎಂಬ ಮುಖಂಡರು ಇದ್ದರು. ಮನೆಗಂದಾಯ, ಮಾರಾಟದ ತೆರಿಗೆ ಹಾಗೂ ಮಾರುಕಟ್ಟೆಗಳಿಗೆ ಸಂಬಂಧಿಸಿದ ನಿಯಾಮಳಿಗಳು ಪಟ್ಟಣಗಳಲ್ಲಿ ಜಾರಿಯಲ್ಲಿದ್ದುವು. ಹೊಯ್ಸಳರ ಕಾಲದಲ್ಲಿ ಕುಟುಂಬವು ಸಮಾಜದ ಆಧಾರ ಸ್ತಂಭವಾಗಿದ್ದಿತು. ವರ್ಣಾಶ್ರಮ ಧರ್ಮವು ಕಟ್ಟುನಿಟ್ಟಾಗಿ ಜಾರಿ ಬಂದಿದ್ದಂತೆ ತೋರುವುದು. ಹೊಳಲ್ಕೆರೆಯ ಶಾಸನವೊಂದರಲ್ಲಿ ವೀರ ಬಣಂಜುಸೆಟ್ಟಿಗುತ್ತರೂ, ಪಟ್ಟಣಸ್ವಾಮಿಯೂ, ದೇವಾಲಯದ ಪೂಜಾರಿಗಳೂ ಮತ್ತು ಹದಿನೆಂಟು ಜಾತಿಯವರೆಲ್ಲರೂ ಸೇರಿ ಮಾರಗೌಡ ಎಂಬುವನನ್ನು ಹೊನ್ನೆಯ ಕೆರೆಯ ನಾಡಹೆಗ್ಗಡೆಯನ್ನಾಗಿ ನೇಮಿಸಿದ ಪ್ರಸ್ತಾಪ ಬಂದಿದೆ.[೫] ಆದ್ದರಿಂದ ಸಮಾಜದಲ್ಲಿ ಅನೇಕ ಜಾತಿಗಳೂ ಉಪಪಂಗಡಗಳೂ ಇದ್ದವೆಂದು ಊಹಿಸಬಹುದು. ಸೆಟ್ಟಿಗಳು ಜನಜೀವನದಲ್ಲಿ ಗಣನೀಯ ಪಾತ್ರವಹಿಸಿದ್ದರು.

ವಾಣಿಜ್ಯ ಬೆಳವಣಿಗೆಯು ಹೊಯ್ಸಳ ರಾಜ್ಯದ ಆರ್ಥಿಕ ವ್ಯವಸ್ಥೆಯ ಬೆನ್ನು ಮೂಳೆಯಂತಿದ್ದಿತು. ವಾಣಿಜ್ಯವು ಮುಖ್ಯವಾಗಿ ಬಣಜಿಗರು ಅಥವಾ ವೀರ ಬಣಜೀ

ಧರ್ಮಕ್ಕೆ ಸೇರಿದವರ ಕೈಯಲ್ಲಿದ್ದಿತೆಂದು ವಿಲಿಯಂ ಕೊಯೆಲ್ ಹೋ ಬರೆದಿದ್ದಾರೆ. ವರ್ತಕರಿಗೆ 'ಸೆಟ್ಟಿ' ಎಂದು ಕರೆಯುತ್ತಿದ್ದರು. ಅವರಿಗೆ 'ಮಹಾವಡ್ಡ ವ್ಯವಹಾರಿ' ಎಂಬ ಬಿರುದೂ ಇದ್ದಿತು. ವರ್ತಕರು ಅಯ್ಯಾಹೊಳೆ ಮತ್ತಿತರ ಪ್ರಮುಖ ಗ್ರಾಮ, ನಗರಗಳಲ್ಲಿ ವಾಸಿಸುತ್ತಿದ್ದರು. ಅವರು ಶ್ರೇಷ್ಠವಾದ ಆನೆಗಳು, ಪಳಗಿದ ಕುದುರೆಗಳು, ದೊಡ್ಡದಾದ ನೀಲಮಣಿಗಳು, ಪಚ್ಚೆ ರತ್ನಗಳು, ವಜ್ರ ವೈಡೂರ್ಯಗಳು, ಪುಷ್ಯರಾಗ, ಕೆಂಪು ಕಲ್ಲುಗಳು, ಹವಳಗಳು, ಸಾಂಬಾರ ತಿನಿಸುಗಳು, ಶ್ರೀಗಂಧ, ಕರ್ಪೂರ, ಕಸ್ತೂರಿ, ಕುಂಕುಮ, ಸುಗಂಧ ದ್ರವ್ಯಗಳೊಂದಿಗೆ ಭೂಮಾರ್ಗ ಹಾಗೂ ಜಲಮಾರ್ಗವಾಗಿ ಸಂಚರಿಸುತ್ತಾ ತಮ್ಮ ಸರಕುಗಳನ್ನು ಒಟ್ಟಾಗಿಯೋ, ಚಿಲ್ಲರೆಯಾಗಿಯೋ ಮಾರುತ್ತಿದ್ದರೆಂದು ಶಾಸನಗಳಿಂದ ಗೊತ್ತಾಗುವುದು. ಧಾನ್ಯ, ವಸ್ತ್ರ, ಒಡವೆ, ಸೌದೆ, ವೀಳ್ಯೆದೆಲೆ, ಎಣ್ಣೆ ಮತ್ತು ಜಾನುವಾರುಗಳ ಮಾರಾಟವೂ ಪ್ರಾಮುಖ್ಯತೆ ಹೊಂದಿದ್ದಿತು. ಪದಾರ್ಥಗಳನ್ನು ಹೊತ್ತು ಮಾರುವವರು ಆಗಲೂ ಇದ್ದರು. ಅರಸೀಕೆರೆಯ ಶಾಸನವೊಂದರಲ್ಲಿ ಬ್ರಾಹ್ಮಣ ವರ್ತಕರು ಸಮುದ್ರದಾಚೆಯಿಂದ ಆನೆ, ಕುದುರೆ ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು ರಾಜರಿಗೆ ಮಾರುತ್ತಿದ್ದ ವೃತ್ತಾಂತವಿದೆ. ವಸ್ತುಗಳ ಹಾಗೂ ಪ್ರಾಣಿಗಳ ಪರೀಕ್ಷೆಯಲ್ಲಿ ಪ್ರವೀಣನಾಗಿದ್ದ ಕೇರಳದ ವರ್ತಕ ದಾಮೋದರ ಸೆಟ್ಟಿಗೆ ಪೊಯ್ಸಳ ರಾಜ್ಯದಲ್ಲಿ ದೊರೆತ ಗೌರವಾದರಗಳನ್ನು ಶಾಸನದ ಮೂಲಕ ತಿಳಿಯಬಹುದು.[೬] ಅವನ ತಮ್ಮನಾದ ಕುಂಜುನಂಬಿಯು ಮುತ್ತು-ರತ್ನಗಳ ಪರೀಕ್ಷೆಯಲ್ಲಿ ನಿಸ್ಸೀಮನಾಗಿದ್ದನಂತೆ ಹೊಯ್ಸಳರ ಕಾಲದಲ್ಲಿಯೂ ವರ್ತಕ ಶ್ರೇಣಿಯೂ ಮಹತ್ವದ ಪಾತ್ರ ವಹಿಸುತ್ತಿತ್ತೆಂದು ಶಾಸನಗಳಿಂದ ತಿಳಿಯಬಹುದು.

ಹೊಯ್ಸಳ ರಾಜನಾದ ಎರಡನೆಯ ನಾರಸಿಂಹದೇವನ ಆಳ್ವಿಕೆಯಲ್ಲಿ ಅಂದರೆ ಕ್ರಿ.ಶ.೧೧೧೭ರಲ್ಲಿ ಹೊಯ್ಸಳಸೆಟ್ಟಿ, ನೇಮಿಸೆಟ್ಟಿಯರ ತಾಯಂದಿರಾದ ಮಾಚಿಕಬ್ಬೆ ಶಾಂತಿಕಬ್ಬೆಯರು ಜಿನಾಲಯ ಮಾಡಿಸಿದ ವಿಷಯ ಶ್ರವಣಬೆಳ್ಗೊಳ ಶಾಸನದಲ್ಲಿದೆ.[೭] ಇಲ್ಲಿ ನಲ್ಲೆಸೆಟ್ಟಿ ದೇಮೇಶ್ವರ, ಕಮ್ಮಟದ ಮಲ್ಲಿಯೋಗಪ್ಪ ಬಾಚೇಶ್ವರ ದೇವಾಲಯಗಳನ್ನು ತಮ್ಮ ತಮ್ಮ ತಂದೆಯ ಹೆಸರಿನಲ್ಲಿ ಕಟ್ಟಿಸಿದ್ದಾರೆ. ಕಟ್ಟಿಸಿದ ದೇವಾಲಯಗಳಿಗೆ ತಮ್ಮ ತಂದೆ-ತಾತಂದಿರ ಹೆಸರಿಡುವುದರಿಂದ ಈ ಲೋಕದಲ್ಲಿ ಇಲ್ಲವೆ ಪರಲೋಕದಲ್ಲಿ ಇರುವ ಅವರ ಪುಣ್ಯ ವರ್ಧಿಸುವುದೆಂಬ ಭಾವನೆಯೇ ಇದಕ್ಕೆ ಕಾರಣವಾಗಿರಬೇಕೆನಿಸು ತ್ತದೆ. ಬಾಚೇಶ್ವರ, ದೇಮೇಶ್ವರ ದೇವಾಲಯಗಳ ಹೆಸರಿನಿಂದ ಕಮ್ಮಟದ ಮಲ್ಲಿಯೋಗಪ್ಪನ ತಂದೆಯ ಹೆಸರು

ಬಾಚಿಸೆಟ್ಟಿಯೆಂದೂ ನಲ್ಲೆಸೆಟ್ಟಿಯ ತಂದೆಯ ಹೆಸರು ದೇಮಿಸೆಟ್ಟಿಯೆಂದೂ ಗುರುತಿಸಲು ಸಾಧ್ಯವಾಗುತ್ತದೆ. ದೇವಾಲಯ ಕಟ್ಟುವುದಕ್ಕಾಗಿ ಕೆಲವೊಂದು ಸಲ ವರ್ತಕರು ರಾಜ ಇಲ್ಲವೆ ಸಾಮಂತನ ಅನುಮತಿ ಪಡೆಯುತ್ತಿದ್ದರು. ಇರಗಿಸೆಟ್ಟಿ ವೀರಭದ್ರದೇವಾಲಯ, ಶರಣಪ್ಪಸೆಟ್ಟಿ ಪಾರ್ವತಿ ಮಂದಿರ, ಪೃಥ್ವಿಸೆಟ್ಟಿ ಹನುಮಂತದೇವರ ಗುಡಿಗಳನ್ನು ಹೀಗೆ ಅನುಮತಿ ಪಡೆದು ಕಟ್ಟಿಸಿದುದನ್ನು ಇಲ್ಲಿ ಲಕ್ಷಿಸಬಹುದು. ಹೀಗೆ ಹೊಯ್ಸಳರ ಕಾಲದಲ್ಲೂ ಸೆಟ್ಟಿಗಳು ಸಮಾಜದ ಪ್ರತಿಷ್ಠಿವಿತ ವರ್ಗದವರಾಗಿದ್ದರು. ರಾಜ್ಯದ ರಾಜ್ಯಭಾರದಲ್ಲಿ ಆಡಳಿತದಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದರು. ವಿಜಯನಗರ ಕಾಲದಲ್ಲಿನ ಸೆಟ್ಟಿಗಳಂತೆ ಹೊಯ್ಸಳರ ಕಾಲದಲ್ಲಿನ ವರ್ತಕರು ಅಥವಾ ಸೆಟ್ಟಿಗಳು ಕಲ್ಯಾಣಕರ, ಸಮಾಜಹಿತ ಕಾರ್ಯಗಳನ್ನು ಮಾಡುತ್ತಿದ್ದರು.

೫.೨. ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಅವಸಾನದ ನಂತರ ಬಂದ ರಾಷ್ಟ್ರಕೂಟರ ಆಳ್ವಿಕೆ ಕಾಲವು ಕರ್ನಾಟಕ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿ ನಿಲ್ಲುತ್ತದೆ. ಪ್ರಾಚೀನ ಕಾಲದಲ್ಲಿ ಹಲವಾರು ರಾಷ್ಟ್ರಕೂಟ ವಂಶಗಳು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ವರ್ಧಿಸಿದವು. ಅವುಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದವರು ಮಳಖೇಡದ ರಾಷ್ಟ್ರಕೂಟರು. ಮಳಖೇಡ ಅಥವಾ ಮಾನ್ಯಖೇಟವು ಈಗಿನ ಗುಲಬರ್ಗಾ ಜಿಲ್ಲೆಯಲ್ಲಿದೆ. ರಾಷ್ಟ್ರಕೂಟರು ವಿಷ್ಣುವಿನ ವಾಹನವಾದ ಆದಿಗರುಡ ಲಾಂಛನವನ್ನು ತಮ್ಮ ವಂಶದ ಲಾಂಛನವನ್ನಾಗಿ ಮಾಡಿಕೊಂಡಿದ್ದರು. ರಾಷ್ಟ್ರಕೂಟ ವಂಶದ ಸ್ಥಾಪಕನಾದ ದಂತಿದುರ್ಗನು ಬಾದಾಮಿ ಚಾಲುಕ್ಯ ದೊರೆ ೨ನೇ ಕೀರ್ತಿವರ್ಮನನ್ನು ಸೋಲಿಸಿ ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಕ್ರಿ.ಶ.-೧೧ನೆಯ ಶತಮಾನದ ಶಾಸನಗಳು ರಾಷ್ಟ್ರಕೂಟರ ಆಳ್ವಿಕೆಯ ಉಲ್ಲೇಖವನ್ನು ತಿಳಿಸುತ್ತವೆ.

ಕ್ರಿ.ಶ.೯ಳಲಕ್ಕೆ ಸರಿಹೊಂದುವ ರಾಷ್ಟ್ರಕೂಟರ ಕಾಲದಲ್ಲಿನ ಈ ಶಾಸನವು ಸೆಟ್ಟಿಗಳು ಮಾಡಿರುವ ಧರ್ಮಕಾರ್ಯವನ್ನು ತಿಳಿಸುತ್ತದೆ.[೮] ಈ ಶಾಸನವು ರಾಷ್ಟ್ರಕೂಟ ವಂಶದ ಶುಭತುಂಗದೇವನ ಆಳ್ವಿಕೆಯನ್ನು ಅವನ ಎಲ್ಲಾ ಬಿರುದುಗಳ ಸಹಿತ ದಾಖಲಿಸಿದೆ. ಅವನು ದಕ್ಷಿಣದಲ್ಲಿ ವಿಜಯನ ಸಾಧಿಸಿ ಆಳುತ್ತಿದ್ದಾಗ ಕೆಲವು ಸೆಟ್ಟಿಗಳು ಕಂದ ಉರದಲ್ಲಿ ಕೀರ್ತಿ ಮಾರ್ತಂಡ ಎಂಬ ಕಾಳಪ್ರಿಯದೇವರ ದೇಗುಲವನ್ನು ನಿರ್ಮಿಸಿದ್ದನ್ನೂ, ಅನಂತರ ಆ

ದೇವರಿಗೆ ಕೆಲವು ತೆರಿಗೆಗಳನ್ನು ದತ್ತಿಯಾಗಿ ಬಿಟ್ಟಿದ್ದನ್ನು ಶಾಸನವು ದಾಖಲಿಸಿದೆ.

ಕ್ರಿ.ಶ.೮೬೯ರ ಶಾಸನದಲ್ಲಿ ಅಂದರೆ ರಾಷ್ಟ್ರಕೂಟ ದೊರೆ ೧ನೇ ಅಮೋಘವರ್ಷನ ಕಾಲದ್ದು.[೯] ಗಾವರವಾಡದ ಮಹಾಜನರಿಗೆ ತುಪ್ಪದ ಮೇಲೆ ತೆರಿಗೆಯನ್ನು ವಿಧಿಸಿದ ಮಾಹಿತಿಯಿದೆ. ಹೀಗೆ ಪ್ರಾಚೀನ ಕಾಲದಲ್ಲಿ ದಾನ ನೀಡುವ ಕ್ರಿಯೆ ಪುಣ್ಯದ ಕೆಲಸ ಎನ್ನುವ ಮನೋಭಾವವಿತ್ತು. ಹೀಗೆ ರಾಷ್ಟ್ರಕೂಟರ ಕಾಲದಲ್ಲಿ ಸೆಟ್ಟಿಗರು, ವರ್ತಕ ಸಂಘದವರು ದಾನ ನೀಡಿರುವ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ಸೆಟ್ಟಿಗಳು ಮಹತ್ತರ ಪಾತ್ರವನ್ನು ನಿರ್ವಹಿಸುವಂತೆ ರಾಷ್ಟ್ರಕೂಟರ ಕಾಲದಲ್ಲೂ ಇವರು ಜನಹಿತ ಕಾರ್ಯಗಳನ್ನು ಮಾಡಿದ್ದಾರೆ.

೫.೩. ಕಲ್ಯಾಣ ಚಾಲುಕ್ಯರು

ಕ್ರಿ.ಶ.೮ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರನ್ನು ಸೋಲಿಸಿ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರನ್ನು ಕ್ರಿ.ಶ.೧೦ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರು ಸೋಲಿಸಿದರು. ರಾಷ್ಟ್ರಕೂಟ ಮನೆತನದ ಕೊನೆಯ ದೊರೆ ೨ನೆಯ ಕರ್ಕನನ್ನು ಸಂಹರಿಸಿ ೨ನೆಯ ತೈಲಪನು ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆಲೂರು ವೆಂಕಟರಾಯರ ಮಾತಿನಲ್ಲಿ ಹೇಳುವುದಾದರೆ "ಈ ಕಲ್ಯಾಣ ಚಾಲುಕ್ಯರ ಕಾಲವೆಂದರೆ ಕರ್ನಾಟಕ ವೈಭವ ಸೂರ್ಯನ ಮಧ್ಯಾಹ್ನ ಕಾಲವು" ಒಂದೆಡೆ ರಾಜಕೀಯ ಸ್ಥಿರತೆ, ಶಾಂತಿ, ಮತ್ತೊಂದೆಡೆ ವಾಸ್ತುಶಿಲ್ಪ, ಕಲೆ, ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಅವಿಚ್ಛಿನ್ನ ಬೆಳವಣಿಗೆ. ಇವುಗಳಿಂದ ಇಂಥ ಸಾಮ್ರಾಜ್ಯವು 'ಹಿಂದೆ' ಇರಲಿಲ್ಲ. ಮುಂದೆ ಇರಲಾರದು ಎಂಬ ವಿಜ್ಞಾನೇಶ್ವರನ ಮಾತಿಗೆ ಮನೆಯಾಯಿತು.[೧೦]

೬ನೇ ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ಇವನ ಸಹೋದರಿ ಅಕ್ಕದೇವಿಯು ಕಿಸುಕಾಡ-೭೦ರಲ್ಲಿ ಆಡಳಿತ ನಡೆಸುವಾಗ ೬ ಜನ ಗಾವುಂಡರಿಂದ, ೮ ಜನ ಶೆಟ್ಟಿಗಳಿಂದ ಕೆಲವು ಆಸ್ತಿಗಳನ್ನು ಗುತ್ತಿಗೆ ತೆಗೆದುಕೊಂಡು ಸ್ಥಳೀಯ ಬ್ರಹ್ಮಪುರಿಯ ಮಹಾಜನರಿಗೆ ದಾನ ನೀಡಿದಳು.[೧೧] ಹೀಗೆ ಈ ಶಾಸನದಲ್ಲಿ ಮಹಿಳೆಯರು ದಾನ ನೀಡಿದ ವಿಷಯ ವಿಶೇಷವಾಗಿದ್ದು, ಸ್ತ್ರೀ ಸಮಾನತೆಯನ್ನು ಗುರುತಿಸುತ್ತದೆ. ೬ನೇ ವಿಕ್ರಮಾದಿತ್ಯನ ಕ್ರಿ.ಶ.೧೦೬೯ರ ಲಕ್ಕುಂಡಿ ಶಾಸನವೊಂದರಲ್ಲಿ ವ್ಯಾಪಾರಿ ಸಂಘದ ಮಹಾಜನರು ಪ್ರತಿಯೊಂದು ಅಂಗಡಿಯಿಂದ ಒಂದು ಸಟ್ಟುಗ ಭತ್ತವನ್ನು ಮರುಳೇಶ್ವರ ದೇವರಿಗೆ ದಾನ ನೀಡಿದರು. ಅದೇ ರೀತಿ

ಶಿವಮಯ್ಯ ಸೆಟ್ಟಿಯ ಮಗ ರೇವಣಯ್ಯ ಸೆಟ್ಟಿ ಮತ್ತು ಮರಳೇಶ್ವರ ದೇವರ ಭಕ್ತನಾದ ನಾಕಿಸೆಟ್ಟಿಯರು ಕೂಡಾ ಪ್ರತಿ ಅಂಗಡಿಯಲ್ಲಿಯ ಒಂದೊಂದು ಸಟ್ಟುಗ ಭತ್ತವನ್ನು ಅದೇ ದೇವರಿಗೆ ದಾನ ನೀಡಿದರು.[೧೨] ಶಾಸನಗಳ ಸಂಖ್ಯಾ ದೃಷ್ಟಿಯಿಂದ ಪ್ರಪಂಚದಲ್ಲಿಯೇ ಅಧಿಕ ಶಾಸನ ಬರೆಯಿಸಿದ ಚಕ್ರವರ್ತಿ ಇವನು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ವಿಷಯಗಳ ವಿಕ್ರಮಾದಿತ್ಯನ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ೬ನೇ ವಿಕ್ರಮಾದಿತ್ಯನು ಕಲ್ಯಾಣ ಚಾಲುಕ್ಯ ದೊರೆಗಳಲ್ಲಿಯೇ ಅತ್ಯಂತ ಬಲಿಷವಿ ಹಾಗೂ ಸುಪ್ರಸಿದ್ಧ ವೀರದೊರೆಯಾಗಿದ್ದನು. ವಿಜ್ಞಾನೇಶ್ವರನು ಸಂಸ್ಕೃತದಲ್ಲಿ ರಚಿಸಿದ 'ಮಿತಾಕ್ಷರ' ಎಂಬ ಧರ್ಮಗ್ರಂಥದಲ್ಲಿ "ಭೂಮಿಯ ಮೇಲೆ ಕಲ್ಯಾಣದಂತಹ ಮತ್ತೊಂದು ನಗರ ಈ ಹಿಂದೆ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಹುಟ್ಟುವುದಿಲ್ಲ. ವಿಕ್ರಮಾದಿತ್ಯನಂಥ ಚಕ್ರವರ್ತಿ ಪ್ರಪಂಚದಲ್ಲಿ ಬೇರೆ ಎಲ್ಲೂ ಇಲ್ಲ.[೧೩]

೪ನೇ ಸೋಮೇಶ್ವರನ (ಕ್ರಿ.ಶ.೧೧೮೫) ಆಳ್ವಿಕೆಯಲ್ಲಿ ವಿಷ್ಣುವರ್ಧನ ಬೀಚಿಶೆಟ್ಟಿಯು ಶಂಕರ ನಾರಾಯಣ ದೇವಭಕ್ತನಾಗಿದ್ದು, ತನ್ನ ಟಂಕಶಾಲೆಯ ವ್ಯವಹಾರಗಳಿಂದ ಬಂದ ಆದಾಯದ ಹಣವನ್ನು ದೇವರ ಆರಾಧನೆಗೆ ನೀಡಿದನು.[೧೪] ಈ ೪ನೇ ಸೋಮೇಶ್ವರನು ಕ್ರಿ.ಶ.೧೧೮೨-೧೧೯೮ರವರೆಗೆ ಚಾಲುಕ್ಯ ವಂಶದ ಕೊನೆಯ ದೊರೆಯಾಗಿ ಆಳಿದನು. ಇವನಿಗೆ 'ತ್ರಿಭೂವನಮಲ್ಲ' 'ಚಾಲುಕ್ಯ ಚಕ್ರವರ್ತಿ', 'ಚಾಲುಕ್ಯ ಪ್ರತಾಪ ಚಕ್ರವತಿ' ಎಂಬ ಬಿರುದುಗಳಿದ್ದವು. ೪ನೇ ಸೋಮೇಶ್ವರನು ಕಪ್ಪೇಶ್ವರ ದೇವರಿಗೆ ಭೂದಾನ ಬಿಟ್ಟ ಉಲ್ಲೇಖವಿದೆ. ಇವನ ಕೊನೆಯ ಕಾಲದಲ್ಲಿ ದೇವಗಿರಿ ಯಾದವರು, ದ್ವಾರಸಮುದ್ರದ ಹೊಯ್ಸಳರು, ಚಾಲುಕ್ಯರ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಇವನು ತನ್ನ ಪೂರ್ವಜರ ಸಾಮ್ರಾಜ್ಯದ ಚಿಕ್ಕ ಭಾಗದ ಮೇಲೆ ಮಾತ್ರ ಸಾರ್ವಭೌಮತ್ವವನ್ನು ಹೊಂದಿದ್ದನು.

೩ನೇ ಸೋಮೇಶ್ವರನ ಶಾಸನವೊಂದರಲ್ಲಿ ಕುರ್ತಕೋಟಿ ಅಗ್ರಹಾರದ ತಳಾರ ಬೊಪ್ಪನಾಯಕನು ನರಸಿಂಹ ದೇವರ ನಂದಾದೀಪಕ್ಕೆ ೨೦೦ ಜನರ ಸಮ್ಮುಖದಲ್ಲಿ ಸುಂಕದಿಂದ ಬಂದ ಆದಾಯವನ್ನು ಸಮರ್ಪಿಸಿದ ಬಗ್ಗೆ ತಿಳಿದುಬರುತ್ತದೆ.[೧೫] ಮುಳಗುಂದ ಶಾಸನದಲ್ಲಿ ರುದ್ರಶಕ್ತಿ ಪಂಡಿತ ಮತ್ತು ಸೋಮೇಶ್ವರ ಪಂಡಿತರ ಶಿಷ್ಯರಾದ ಕೆಲವು ಶೆಟ್ಟಿಗಳು ಅಮೃತರಾಶಿ ಮುನಿಗಳ ಕಾಲನ್ನು ತೊಳೆದು ವಿದುರೇಶ್ವರ ದೇವರ ಪೂಜೆಗಾಗಿ ಮೇತ್ತಿರಿಗೆ ಸುಂಕವನ್ನು ದಾನ ನೀಡಿದರು.[೧೬] ೩ನೇ ಸೋಮೇಶ್ವರನು ೬ನೇ ವಿಕ್ರಮಾದಿತ್ಯನ ನಂತರ

ಬಂದ ೩ನೇ ಸೋಮೇಶ್ವರನು 'ಭೂಲೋಕಮಲ್ಲ', 'ಸರ್ವಜ್ಞ ಚಕ್ರವರ್ತಿ' ಎಂಬ ಬಿರುದುಗಳನ್ನು ಧರಿಸಿದ್ದನು. ಇವನು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳಿದನು. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯ ಘಳಿಗೆಗೆ ದಾನಬಿಟ್ಟ ವಿಷಯ ತಿಳಿದುಬರುತ್ತದೆ. ಇವನು ಸಾಹಿತ್ಯಾಭಿಮಾನಿಯಾಗಿದ್ದು, 'ಮಾನಸೋಲ್ಲಾಸ' ಎಂಬ ಕೃತಿ ರಚಿಸಿದ್ದನು.

ಕ್ರಿ.ಶ.೧೦೯೯ರ ೬ನೇ ವಿಕ್ರಮಾದಿತ್ಯನ ಹನಮನಾಳ ಶಾಸನದಲಿ[೧೭] ಕಿಸುರಾಡು ೭೦ರ ಬಳಿಯ ಬಾಡದ ಆಲಂಗೆಜೆಯ ಸಿಂಗಗಾವುಂಡನು ತುಂಬಲಿಗ ಸಾಸಿರ್ವರಿಗೆ ಅಂದರೆ ವೀಳ್ಯದಲೆ ಮಾರುವ ವ್ಯಾಪಾರಿಗಳ ಸಂಘಕ್ಕೆ ಸಲ್ಲಿಸಿದ ಸೇವೆಗಾಗಿ ಮಲೆಯರ ಸಿಂಗಸೆಟ್ಟಿ, ಕೇತಸೆಟ್ಟಿ, ರೇಚಯಗೇತಿಸೆಟ್ಟಿ, ಗಲ್ಲದ ಕಲೆ ಬಾಚಿಸೆಟ್ಟಿ, ಬಾದಾಮಿಯ ಶೆಟ್ಟಿ, ಹಾವೇರಿಯ ಹಿಚ್ಚಿಸೆಟ್ಟಿ, ತಿಳಿವಳ್ಳಿಯ ಕಲಿಯಮ್ಮಶೆಟಿ, ತಿಳಿವಳ್ಳಿಯ ಮೊತ್ತಕಾರ ಶೆಟ್ಟಿ, ಕಲಿಯ ಕೇತಿಶೆಟ್ಟಿ, ಕೆರವುರ ಎಡವೆಚೆಟ್ಟಶೆಟ್ಟಿ, ಸಿಗ್ಗಾವೆಯ ಭರತಿಶೆಟ್ಟಿ, ನಿಟ್ಟಸಿಂಗಿಯ ಬಬ್ಬುಳ ಸಿಂಶೆಟ್ಟಿ, ತುಚ್ಚಿಂಗೆರೆಯ ಹೊಲ್ಲಿಸೆಟ್ಟಿ, ಹುಳ್ಳಮನ ಸೋವಿಸೆಟ್ಟಿ, ಗಾಜಮಾರ ನಾಗುಲಶೆಟ್ಟಿ, ಚವುಣಯ್ಯ ಶೆಟ್ಟಿ, ಇವರೆಲ್ಲ ಸಿಂಗಗಾವುಂಡನಿಗೆ ವೀಳ್ಯದೆಲೆಯ ಮೇಲಿನ ಮಾರಾಟದ ತೆರಿಗೆಯನ್ನು ನೀಡಿದ ಉಲ್ಲೇಖವಿದೆ.

ಈ ಶಾಸನಗಳಿಂದ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಸೆಟ್ಟಿ ಕುಲದ ಪಾತ್ರವನ್ನು ತಿಳಿಯಬಹುದು. ಶಾಸನಗಳಲ್ಲಿ ಉಕ್ತವಾಗಿರುವ ಸೆಟ್ಟಿಗಳು ಜನಹಿತ ಕಾರ್ಯಗಳಲ್ಲಿ ಸಕ್ರಿಯ ಪಾತ್ರವಹಿಸುತ್ತಿದ್ದರೆಂಬುದು ವಿಧಿತವಾಗುತ್ತದೆ.

೫.೪. ಕಲಚೂರಿಗಳು

ಕಲಚುರಿಗಳು ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಲೀಕರಾಗಿ ಕಲ್ಯಾಣದಲ್ಲಿಯೇ ಕ್ರಿ.ಶ.೧೧೬೨ರಲ್ಲಿ ಸ್ವತಂತ್ರ ದೊರೆಗಳೆಂದು ಘೋಷಿಸಿಕೊಂಡರು. ಕಲಚೂರಿಗಳು ಮಧ್ಯಭಾರತದ ಕಟಚ್ಚುರಿ ಮನೆತನಕ್ಕೆ ಸೇರಿದ ಹೈಹಯ ಕುಲಕ್ಕೆ ಸೇರಿದವರು. ಇವರ ಮೊದಲ ಉಲ್ಲೇಖವು ನೆರೂರು ತಾಮ್ರಶಾಸನಗಳಲ್ಲಿಯೂ ಹಾಗೂ ಮುಗಲೇಶನ ಕ್ರಿ.ಶ.೬೦೨ರ ಮಹಾಕೂಟ ಶಿಲಾಶಾಸನದಲ್ಲಿಯೂ, ಕ್ರಿ.ಶ.೬೪೩ರ ೨ನೇ ಮಲಕೇಶಿಯ ಐಹೊಳೆ ಪ್ರಶಸ್ತಿ ಶಾಸನದಲ್ಲಿಯೂ ಕಂಡುಬರುತ್ತದೆ.[೧೮]

ಕಲ್ಯಾಣ ಚಾಲುಕ್ಯರ ಮಾಂಡಳಿಕನಾಗಿದ್ದ ಬಿಜ್ಜಳನು ಕಲಚುರಿಗಳ ಸ್ವತಂತ್ರ ಆಳ್ವಿಕೆಗೆ

ಅಡಿಪಾಯ ಹಾಕಿದನು. ಇವನು ಚಾಲುಕ್ಯ ಚಕ್ರವರ್ತಿ ೩ನೇ ತೈಲಪನನ್ನು ಕೊಂದು ಸಾರ್ವಭೌಮನೆಂದು ಕ್ರಿ.ಶ.೧೧೫೭ ರಿಂದ ಆಡಳಿತ ನಡೆಸಿದನು. ಬಿಜ್ಜಳನ ಕಾಲದ ಕ್ರಿ.ಶ.೧೧೫೭ಕ್ಕೆ ಸರಿಹೊಂದುವ ಈ ಶಾಸನದಲ್ಲಿ[೧೯] ಬಿಜ್ಜಳನನ್ನು ಅನೇಕ ವಿಶೇಷಣಗಳಿಂದ ಹೊಗಳಿದ್ದು, ಅವನು ತನ್ನ ತಮ್ಮ ಮೈಳುಗಿ ದೇವನೊಂದಿಗೆ ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ. ಚೆಲ್ವರಾಣೆಯ ಕರ್ಬ್ಬಡಿ ಬೀಡಿನಲ್ಲಿದ್ದಾಗ ಕಿರಿಯ ಜಕ್ಕಲಿಗೆಯ ಮಾದಿರಾಜಯ್ಯ ಮತ್ತು ರಾಜಮತಿಯವ್ವೆ ಗೌಂಡರು, ಮಹಾಪೃಥ್ವೀ ಸೆಟ್ಟಿ, ಚಟ್ಟರಸ ಮತ್ತು ಎಂಟು ಹಿಟ್ಟುಗಳು ಒಂದಾಗಿ ಮೂಲಸ್ಥಾನದ ಕಲಿದೇವಸ್ವಾಮಿಗೆ ೨೪ ಮತ್ತರು ಭೂದಾನವನ್ನೂ, ಒಂದು ನಿವೇಶನ, ಒಂದು ಮತ್ತರು ತೋಟವನ್ನು, ಒಂದು ಗಾಣವನ್ನು ನೀಡಿದಂತೆ ತಿಳಿಸುತ್ತದೆ. ಕಲಚೂರಿ ವಂಶದ ರಾಯಮುರಾರಿ ಸೋವಿದೇವನ ೧೧೭೧ರ ಈ ಶಾಸನವು[೨೦] ದಾನವನ್ನು ನೀಡಿದ ವಿಷಯವನ್ನು ತಿಳಿಸುತ್ತದೆ. ಗೊಬ್ಬೂರಿನ ನೀರಕೋಟೆಯಲ್ಲಿ ಚೌಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವದೇವರ ಅಂಗಭೋಗ, ರಂಗಭೋಗ ಮುಂತಾದವಕ್ಕೆ ಹೇರಿಗೆ ೫೦ ಎಲೆಯನ್ನು, ಶಂಕರದೇವ ಲಬ್ಧವರ ಪ್ರಸಾದರಾದ ಬಳ್ಳಿಯ ಸಾಸಿರ್ವರು ಬಿಡುತ್ತಾರೆ. ಈ ಸಾಸಿರ್ವರನ್ನು ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ. ಹಂನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನ ಕೇಶವದೇವರ ಪೂಜಾರ್ಥವಾಗಿ ದಾನ ಬಿಡುತ್ತಾರೆ. ಜತ್ಯಪ್ಪನೆಂಬುವವನು ಎರಡೂ ದೇವರಿಗೆ ನೀರಕೋಟೆಯ ಪಶ್ಚಿಮಕ್ಕೆ ಒಂದು ದೊಡ್ಡ ನಿವೇಶನವನ್ನು ನೀಡುತ್ತಾನೆ. ಊರಿನ ಮಹಾಜನರು ಗೌಡಗೆರೆಯಲ್ಲಿ ಮಾಣಿಕೇಶ್ವರದ ಕೋಲಲ್ಲಿ ನಾಲ್ಕು ಮತ್ತರು ಭೂಮಿಯನ್ನು ನೀಡುತ್ತಾರೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಸೋವಿದೇವನು ತಂದೆಯ ಮರಣದ ನಂತರ ಅಧಿಕಾರಕ್ಕೆ ಬಂದನು. ಕ್ರಿ.ಶ.೧೧೭೪ರ ಬೆಳಹೊಡ ಶಾಸನದಲ್ಲಿ[೨೧] 'ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ, ಮಹಾರಾಜಾಧಿರಾಜ ಕಾಳಂಜರ ಪುರವರಾಧೀಶ್ವರಂ ಕಲಚೂರ್ಯ ಚಕ್ರವರ್ತಿ ರಾಯಮುರಾರಿ ಸೋವಿದೇವ' ಎಂದು ಉಲ್ಲೇಖಿಸಿದೆ. ಈ ಸೋವಿದೇವನ ಕಾಲದ ೧೧೭೪ಕ್ಕೆ ಸರಿ ಹೊಂದುವ ಈ ಶಾಸನದಲ್ಲಿ[೨೨] ನಾನಾದೇಸಿ, ಸೆಟ್ಟಿಗುತ್ತ, ಮುಂಮರಿದಂಡ, ನಖರ, ಅಠವತ್ತೊಕ್ಕಲು ಸೇರಿ ಊರಿನ(ಹೆಸರು ಹಾಳಾಗಿದೆ) ದೇವರಿಗೆ ಕೆಲವು ತೆರಿಗೆಗಳನ್ನು ದಾನ ಬಿಟ್ಟಂತೆ ಉಲ್ಲೇಖವಿದೆ.

ಕಳಚೂರ್ಯ ಚಕ್ರವರ್ತಿ ಅಹವಮಲ್ಲನ ಆಳ್ವಿಕೆಯ ಕ್ರಿ.ಶ.೧೧೮೨ಕ್ಕೆ ಸರಿಹೊಂದುವ ಈ ಶಾಸನದಲ್ಲಿ[೨೩] ದಿಗ್ಗಿಗೆಯಲ್ಲಿ ವೈಷ್ಣವ ಸರ್ವದೇವಸೆಟ್ಟಿ ಮಾಡಿಸಿದ ಮಂಠೆಯದಲ್ಲಿ

ಸರ್ವದೇವಸೆಟ್ಟಿ ಸಮಸ್ತ ನಕರಗಳು ಮತ್ತು ಜಲವಾಡಿಗೆಯ ಪ್ರಭು ನಾರಣದೇವಣ್ಣ ಮುಂತಾದವರಿಗೆ ದೇವರ ಸೇವೆಗಾಗಿ ಭೂದಾನ ನೀಡುತ್ತಾನೆ. ಅಯ್ಯಾವೊಳೆ ೫೦೦ ಸ್ವಾಮಿಗಳು, ಹಿರಿಯ ಬಳಾರನೂರ ನಾನಾದೇಸಿ, ಸೌದರೆ, ಮಿಂಡಗುದ್ದಲಿ ಮುಂತಾದ ವ್ಯಾಪಾರಿಗಳು, ಪ್ರಜೆಗಳು, ತೆಲ್ಲಿಗರು ಸೇರಿ, ಮೇಲೆ ಉಲ್ಲೇಖಿಸಿರುವ ದೇವರುಗಳ ಪ್ರತಿಷ್ಠಾ ಕಾಲದಲ್ಲಿ ಕೆಲವು ಕಾಣಿಕೆಗಳನ್ನು ಬಿಡುತ್ತಾರೆ. ಎಲೆ ವ್ಯಾಪಾರಿಗಳು ಹೇರಿಗೆ ೧೦೦, ಹೊರೆಗೆ ೫೦, ಹೊತ್ತು ಮಾರುವುದಕ್ಕೆ ೨೫ ಎಲೆ ನೀಡುತ್ತಾರೆ. ಮಹಾಜನರು ಅಮೃತಲಿಂಗ ನಕರೇಶ್ವರ ಮತ್ತು ಚನ್ನಕೇಶವ ದೇವರಿಗಾಗಿ, ಮದುವೆ ಕಾಣಿಕೆಯಾಗಿ ಒಂದು ಹಣವನ್ನೂ, ಸೀಮಂತಕ್ಕೆ ಒಂದು ಹಣ, ಪುತ್ತೋತ್ಸವವಾದಲ್ಲಿ ಒಂದು ಹಣ, ಮಗುವಿಗೆ ಮೀಯಿಸಿದಾಗ ಎರಡು ಹಾಗದ ಲೆಕ್ಕದಲ್ಲಿ ದಾನ ನೀಡಿದ್ದರು. ಹರತಿಯ ಮಲ್ಲಿದೇವರಸನು ಪ್ರತಿಷ್ಠಾಪಿತವಾದ ದೇವರುಗಳಿಗೆ ಜಲವಾಡಿಯಲ್ಲಿ ೧೭ ಮತ್ತರು ಮತ್ತು ೪೫೦ ಕಂಬ ಭೂಮಿದಾನ ಮಾಡುತ್ತಾನೆ. ಅಹವಮಲ್ಲನ ಕಾಲದ ಇನ್ನೊಂದು ಶಾಸನವು[೨೪] ಭೂದಾನ ನೀಡಿದ ವಿವರವನ್ನು ಒಳಗೊಂಡಿದೆ. ವೈಷ್ಣವ ರವಿದೇವಸೆಟ್ಟಿ, ವಿರೂಪಾಕ್ಷ ಸೆಟ್ಟಿ, ಬಾಚ್ಚೆಯ, ಪಿನಮಲ್ಲ ಮುಂತಾದವರು ಅಂಕಿಮಗೆರೆಯಲ್ಲಿ ಭೂದಾನ ನೀಡಿದ್ದಾರೆ. ಕಾಲ ಕ್ರಿ.ಶ.೧೧೮೨.

ಕಲಚೂರ್ಯ ರಾಯಮುರಾರಿ ಸೋವಿದೇವನ ಕಾಲದ ಕ್ರಿ.ಶ.೧೧೭೫ರ ಈ ಶಾಸನವು[೨೫] ಹಿರಿಯ ಬಳಗಾರನೂರಿನ ಛಾತ್ರ ಪೆದ್ದಣ್ಣನ ಮೊಮ್ಮಕ್ಕಳ ಶ್ರೀಧರಪೆದ್ದಿ, ನೃಸಿಂಹಗರ್ಭದಾಸಪ್ಪ, ವೈಜನಾಥಪೆದ್ದಿಗಳು ಸೇರಿ ತಮ್ಮ ತಾತ ಪೆದ್ದಣ್ಣನು ದಾನವಾಗಿ ಪಡೆದಿದ್ದ ಭೂಮಿಯಲ್ಲಿ ಒಂದು ಪಾಲನ್ನು ಸಬ್ಬದೇವಸೆಟ್ಟಿಯ ಮಗ ವಡ್ಡವ್ಯವಹಾರಿ ರವಿದೇವಸೆಟ್ಟಿ, ಚೌಡಿಸೆಟ್ಟಿ ಮುಂತಾದವರಿಂದ ಕೊಂಡುಕೊಂಡು ಮಹಾಜನರಿಗೆ ದಾನವಾಗಿ ನೀಡುತ್ತಾರೆ. ಈ ದಾನವನ್ನು ಲಕ್ಷ್ಮೀನಾರಾಯಣ ದೇವರ ಪ್ರತಿಷ್ಠೆಯಾದಾಗ ದೇವರ ಅಂಗಭೋಗ, ರಂಗಭೋಗ, ಚೈತ್ರ, ಪವಿತ್ರ ಮುಂತಾದ ಕಾರ್ಯಗಳಿಗಾಗಿ ವ್ಯಯ ಮಾಡ ಬೇಕೆಂದು ನೀಡಲಾಗಿದೆ. ಇದಲ್ಲದೆ ಬಳಗಾನೂರ ವ್ಯಾಪಾರಿಗಳು ಮದುವೆಯ ಕಾಣಿಕೆಗಳನ್ನು ನೀಡುತ್ತಾರೆ.

ಕಲಚೂರ್ಯ ವಂಶದವರ ಶಾಸನಗಳನ್ನು ನೋಡಿದಾಗ, ವ್ಯಾಪಾರಸ್ಥರು, ಸೆಟ್ಟಿ ಕುಲದವರು ಅನೇಕ ದಾನಧರ್ಮಗಳನ್ನು ಮಾಡಿ ರಾಜನಿಗೆ ರಾಜ್ಯಭಾರದಲ್ಲಿ ಬಲಗೈಯಂತಿದ್ದರು. ವ್ಯಾಪಾರವಲ್ಲದೇ ಸಮಾಜದಲ್ಲಿ ಕಲ್ಯಾಣ ಕಾರ್ಯಗಳನ್ನು ಕೈಗೊಂಡಿದ್ದರು ಎನ್ನುವುದನ್ನು ಈ

ಮೇಲಿನ ಶಾಸನಗಳಿಂದ ತಿಳಿಯಬಹುದು. ಕಲಚೂರ್ಯ ವಂಶದಲ್ಲಿ ಸೆಟ್ಟಿಗಳು, ವಿಜಯನಗರ ಕಾಲದ ಸೆಟ್ಟಿಗಳಂತೆ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದಲ್ಲದೆ, ರಾಜ್ಯದ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆಂದು ತಿಳಿಯಬಹುದು.

೫.೫. ಸೇವುಣರು(ಯಾದವರು)

ಕಲ್ಯಾಣ ಚಾಲುಕ್ಯ ಮತ್ತು ಕಲಚೂರಿ ವಂಶಗಳ ಅವಸಾನವು ಕರ್ನಾಟಕದಲ್ಲಿ ಅನೇಕ ಸಣ್ಣ ಪುಟ್ಟ ರಾಜವಂಶಗಳ ಉಗಮಕ್ಕೆ ದಾರಿಯಾಯಿತು. ಅವುಗಳಲ್ಲಿ ಸೇವುಣರು ಪ್ರಮುಖರು. ಇವರನ್ನು ದೇವಗಿರಿ ಯಾದವರೆಂದೂ ಕರೆಯಲಾಗುತ್ತದೆ. ಇವರು ನೆಲೆಸಿದ ನಾಡಿಗೆ 'ಸೇವುಣ ದೇಶ' ಎಂದು ಕರೆಯಲಾಯಿತು. ಇಂಥ ಸೇವುಣರು ೧೨ನೆಯ ಶತಮಾನದ ಕೊನೆಯಿಂದ ೧೩ ಶತಮಾನದ ಕೊನೆಯವರೆಗೆ ಆಡಳಿತ ನಡೆಸಿದರು. ಒಂದನೇ ಸೇವುಣ ಚಂದ್ರ ಈ ವಂಶದ ಮೊದಲ ದೊರೆ.

ಎರಡನೆಯ ಸಿಂಘಣನು ಸೇವುಣ ಸಂತತಿಯಲ್ಲಿಯೇ ಪ್ರಸಿದ್ಧನಾದ ರಾಜನು. ಈ ರಾಜನ ಕಾಲದ ಕ್ರಿ.ಶ.೧೨೩೩ರ ಲಕ್ಕುಂಡಿ[೨೬] ಶಾಸನದಲ್ಲಿ ಸಿಂಘಣನ ಕಾಲದ ವ್ಯಾಪಾರಿಗಳಿಂದ ಅಲ್ಲಿನ ಮಧುಸೂದನ ದೇವರಿಗೆ ನೀಡಿದ ಸುವರ್ಣದಾನದ ಉಲ್ಲೇಖವಿದೆ.

ಸೇವುಣ(ಯಾದವ) ದೊರೆಯಾದ ಸಿಂಹಣದೇವನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಕರಡಿಕಲ್ಲು ೩೦೦ರ ಬಳಿಯ ಕಂದಗಾಲೆಯನ್ನು ಚಕ್ರಪಾಣಿ ದಂಡನಾಯಕನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನು. ಕಾನೂರುಗಣ, ಮೂಲಸಂಘದ ಸಕಲಚಂದ್ರ ಭಟಾರರ ಶಿಷ್ಯ ನಾಗಸಿರಿಯವ್ವೆ ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ಅಯ್ಯಾವೊಳೆ ೫೦೦ ಸ್ವಾಮಿಗಳು, ಮಹಾಪ್ರಭುಗಳು, ಮುಮ್ಮರಿದಂಡರು, ಗಾತ್ರಿಗರು, ನಾನಾ ದೇಶಿಗಳು ಮುಂತಾದವರು ಕನ್ನಡ ೪೦೦೦ಕ್ಕೆ ಪೇಂಠೆದಾಣವಾದ(ಮಹಾನಾಡು) ಮಳಿಗೆಯ ಮನೆ ಕಂದಗಾಲೆಯಲ್ಲಿ ಸೇರಿ ದೇವರ ಅಂಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಸುಂಕ ಹಾಗೂ ಭೂಮಿಯನ್ನು ದಾನವಾಗಿ ಬಿಡುತ್ತಾರೆ. ಈ ಶಾಸನದ ಕಾಲ ೧೨೨೦. ಈ ಶಾಸನದಲ್ಲಿ ಅಯ್ಯಾವೊಳೆ ೫೦೦ ಸ್ವಾಮಿಗಳನ್ನು ವಿಶೇಷವಾಗಿ ಜೈನಪರವಾದ ವಿಶೇಷಣಗಳಿಂದ ಹೊಗಳಲಾಗಿದೆ.[೨೭]

ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಅವನ ಅಧೀನದಲ್ಲಿದ್ದ ಸರ್ವಾಧಿಕಾರಿ ಮಹಾಪ್ರಧಾನಿ ಬಾಹತ್ತರ ನಿಯೋಗಾಧಿಪತಿ, ಪುರುಷೋತ್ತಮ ನಾಯಕನ

ತಮ್ಮನಾದ ನರೋತ್ತಮದೇವನು ಮತ್ತು ಐದು ಊರುಗಳು ಸೇರಿದ್ದಾಗ ಸುವರ್ಣ ಪುರವರಾಧೀಶ್ವರ, ಶ್ರೀ ಕಪಳೇಶ್ವರದೇವರ ದಿವ್ಯ ಪಾದಾರಾಧಕನಾದ ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳವರು ಯೆರಡ್ಜೈಯ್ಯಣವಾಡಿ ನಾಡ ಸೆಟ್ಟಿಗುತ್ತರಾದ ರೇಚಿಸೆಟ್ಟಿ, ಪದ್ಮಿಸೆಟ್ಟಿ, ಕರಡಿಕಲ್ಲನಾಡ ಸೆಟ್ಟಿಗುತ್ತ ಸೇಗಿಸೆಟ್ಟಿ, ಹಗರಟಿಗೆಯ ಸೆಟ್ಟಿ ಮುಂತಾದವರೆಲ್ಲ ಸೇರಿ ಮಹಾನಾಡಾಗಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸ್ವಯಂಭು ಸಂಕರದೇವರಿಗೆ ದಾನವಾಗಿ ನೀಡುತ್ತಾರೆ. ಚೌಡರಸನೂ ಭೂದಾನವನ್ನು ನೀಡಿದ್ದಾನೆ. ಇದು ಕ್ರಿ.ಶ.೧೨೨೩ರ ಶಾಸನವು[೨೮] ದೇವಗಿರಿ ಯಾದವ ಅರಸ ಸಿಂಹಣನ ಕಾಲದ ಕ್ರಿ.ಶ.೧೨೧೫ಕ್ಕೆ ಸರಿಹೊಂದುವ ಈ ಶಾಸನದ[೨೯] ಆರಂಭದಲ್ಲಿ ಸಿಂಹಣನನ್ನು ಮತ್ತು ಅವನ ದಂಡಾಧಿಪ ದಾಮೋದರ ಎಂಬುವವನನ್ನು ಹೊಗಳಿ ನಂತರ ಮುದುಗಲ್ಲ ವರ್ಣನೆ ಅತಿಶಯವಾಗಿ ಬಂದಿದೆ. ಅದು ಇಂದ್ರನ ಅಮರಾವತಿಗಿಂತಲೂ ಮಿಗಿಲಾಗಿತ್ತೆಂದು ವರ್ಣಿಸುತ್ತದೆ.

ಮುದಗಲ್ಲ ಊರೊಡೆಯರು, ಐಯ್ಯಾವೊಳೆ ಐನೂರ್ವರ್ ಸ್ವಾಮಿಗಳು, ಕುಬೇರನ ವಂಶದವರಾದ ವೈಶ್ಯಕುಲದವರಾದ ಮುದುಗಲ್ಲ ಸಮಸ್ತ ನಖರರುಗಳು, ಕರಡಿಕಲ್ಲು-೩೦೦ರ ಸೆಟ್ಟಿಗುತ್ತ ಸೇಗಿಸೆಟ್ಟಿ, ಸ್ಥಳದ ಸಮಸ್ತ ಮುಂಮರಿದಂಡಗಳು, ಮಹಾಪ್ರಧಾನ ಪರಸಯ್ಯ ದಂಡನಾಯಕ ಎಲ್ಲರೂ ಒಂದೇ ಮನಸ್ಸಿನಿಂದ ತೀರ್ಮಾನಿಸಿ ಚಂದ್ರಗ್ರಹಣದ ದಿವಸ ನಖರೇಶ್ವರ ಮತ್ತು ಪ್ರಸನ್ನ ಚನ್ನಕೇಶವ ದೇವರ ಸೇವೆಗಾಗಿ ಸರ್ವಬಾಧಾ ಪರಿಹಾರವಾಗಿ ನಾನಾ ಕಡೆ ಕೆಲವು ಭೂಮಿಯನ್ನೂ ದೇವರ ದೀಪಕ್ಕೆ ಒಂದು ಗಾಣವನ್ನು ದಾನ ಮಾಡಲಾಗಿದೆ. ಅಲ್ಲದೆ ವೈಶ್ಯರ ಮನೆ ಮದುವೆಯಲ್ಲಿ ಚೌಲದಲ್ಲಿ, ಮೈನೆರೆಯಲ್ಲಿ ಇನ್ನೂ ಮುಂತಾದ ಸಮಯಗಳಲ್ಲಿ ಇಂತಿಷ್ಟು ಹಣವನ್ನು ಕೊಡಬೇಕೆಂದು ನಿಯಮ ಮಾಡಿ ದಾನವನ್ನು ಬಿಡಲಾಗಿದೆ. ಆಗಿನ ಸಮಾಜ ವ್ಯವಸ್ಥೆಯ ಅಧ್ಯಯನಕ್ಕೆ ಈ ಶಾಸನವು ಹೆಚ್ಚು ಉಪಯುಕ್ತವಾಗಿದೆ.

ವಿಜಯನಗರ ಕಾಲದ ಸೆಟ್ಟಿ, ವ್ಯಾಪಾರಿ ವರ್ಗದವರಂತೆ ಸೇವುಣರಲ್ಲೂ(ಯಾದವ) ದೇವಾಲಯದ ನಿರ್ಮಾಣ, ನಿರ್ವಹಣೆಗೆ, ಬೆಳವಣಿಗೆಗೆ, ಜೀರ್ಣೋದ್ಧಾರಕ್ಕೆ, ನಂದಾದೀಪಕ್ಕೆ, ಅಲ್ಲಿನ ಪುರೋಹಿತರಿಗೆ ದಾನ ದತ್ತಿಗಳನ್ನು ನೀಡುತ್ತಿದ್ದರು. ಸಮಾಜದ ಪ್ರತಿಷ್ಠಿತ ವರ್ಗದವರಾದ ಸೆಟ್ಟಿಗಳು ಸಮೂಹವಾಗಿಯೂ ದಾನ ನೀಡುತ್ತಿದ್ದರು. ಕೊಟ್ಟ ದಾನವನ್ನು

ರಕ್ಷಿಸುವಲ್ಲಿ ಇವರದು ಎತ್ತಿದ ಕೈ. ವ್ಯಾಪಾರವನ್ನು ಮಾಡಿ ಅದರ ಲಾಭವನ್ನು ಹೊಂದಿ ಅಷ್ಟರಲ್ಲೇ ತಮ್ಮ ಜೀವಿತವನ್ನು ಸೀಮಿತಗೊಳಿಸದೇ ಸಮಾಜದ ಉನ್ನತಿಗಾಗಿ ಹೆಣಗಾಡಿದ ಅಂಶಗಳು ಶಾಸನದಲ್ಲಿ ಗೊತ್ತಾಗುತ್ತದೆ.

೫.೬. ಮೈಸೂರಿನ ಒಡೆಯರು

ನಮ್ಮ ಕರ್ನಾಟಕದ ಇತಿಹಾಸದಲ್ಲಿ ಮೈಸೂರಿನ ಒಡೆಯರು ಪ್ರಸಿದ್ಧವಾದ ರಾಜರುಗಳು. ಕ್ರಿ.ಶ.೧೩೯೯ರಲ್ಲಿ ಯದುರಾಯರಿಂದ ಈ ವಂಶ ಸ್ಥಾಪನೆಯಾಯಿತು. ಈ ವಂಶವನ್ನು ೨೪ ರಾಜರು ಆಳಿದರು. ಕ್ರಿ.ಶ.೧೫೭೮ರಲ್ಲಿ ರಾಜಾ ಒಡೆಯರ್ ಮೈಸೂರು ಸಂಸ್ಥಾನವನ್ನು ಆಳುವ ಕಾಲದಲ್ಲಿ ಈ ವಂಶ ದೊಡ್ಡ ಸಂಸ್ಥಾನವಾಯಿತು. ಜಗತ್ಪ್ರಸಿದ್ಧ ದಸರಾ ಉತ್ಸವನ್ನು ಪ್ರಾರಂಭ ಮಾಡಿದ ಕೀರ್ತಿ ಮೈಸೂರಿನ ಒಡೆಯರಿಗೆ ಸಲ್ಲುತ್ತದೆ. ಒಡೆಯರ ಕಾಲಕ್ಕೆ ಪ್ರಾರಂಭವಾದ ದಸರಾ ಉತ್ಸವವು ಇಂದಿಗೂ ವಿಜೃಂಭಣೆಯಿಂದ ಆಚರಿಸುತ್ತಿರುವುದು ವಿಶೇಷ. ಈ ಉತ್ಸವದಲ್ಲಿ ಒಡೆಯರ ವಂಶದವರು ಸಕ್ರಿಯವಾಗಿ ಭಾಗವಹಿಸುತ್ತಾರೆ.

೧೭ನೇ ಶತಮಾನಕ್ಕೆ ಸರಿಹೊಂದುವ ದೇವರಾಜ ಒಡೆಯರ ಕಾಲದ ಈ ಶಾಸನವು[೩೦] ದಾನದ ಮಹತ್ವವನ್ನು ತಿಳಿಸುತ್ತದೆ. ಪೆನುಗೊಂಡೆಯ ಸಿಂಹಾಸನಾಧೀಶರಾಗಿದ್ದ ಲಕ್ಷ್ಮೀಸೇನ ಭಟ್ಟಾರಕರ ಆಜ್ಞೆಯಂತೆ, ಮೈಸೂರ ದೇವರಾಜ ಒಡೆಯರು ಕೊಟ್ಟ ಕ್ಷೇತ್ರದಲ್ಲಿ ದೊಡ್ಡಾದಂಣಸೆಟ್ಟರ ಪುತ್ರರಾದ ಸಕ್ಕರೆಸೆಟ್ಟರು ವಿಮಲನಾಥನ ಚೈತ್ಯಾಲಯವನ್ನು ನಿರ್ಮಿಸಿದರು.

ಕ್ರಿ.ಶ.೧೬೩೪ರ ಚಾಮರಾಜ ಒಡೆಯರ ಕಾಲದ ಈ ಶಾಸನವು[೩೧], ಸೆಟ್ಟಿಕುಲದವರು ತಮ್ಮ ತಂದೆ ತಾಯಿಗಳ ಮೇಲೆ ಇಟ್ಟಿರುವ ಭಕ್ತಿಯನ್ನು ಪ್ರತಿಬಿಂಬಿಸುವುದು. ದೇವಸ್ಥಾವನ್ನು ಚಿಗಪಾಯಿಸೆಟ್ಟಿ, ಬೊಂಮಿಸೆಟ್ಟಿ, ಬೈರಸೆಟ್ಟಿ ಮುಂತಾದವರು ಚಾಮರಾಜ ಒಡೆಯರು ಗೊಮ್ಮಟೇಶ್ವರ ಗುಡಿ, ಭೂಮಿಯನ್ನು ಅಡವಿಟ್ಟುಕೊಂಡಿರುವ ಪಾಯಿಸೆಸಟ್ಟಿಯರ ಮಕ್ಕಳಾದ ಚಿಕ್ಕಂಣ ಚಿಗಪಾಯಸೆಟ್ಟಿ, ಬೊಮ್ಮಸೆಟ್ಟಿ, ಬೈರಸೆಟ್ಟಿಯರಿಗೆ ಹೇಳಿ ಕಳಿಸಿ, ಅಡವಿಟ್ಟು ಕೊಂಡಿರುವ ಗುಡಿ, ಭೂಮಿಯನ್ನು ಮುಕ್ತ ಮಾಡಬೇಕೆಂದು ಕೇಳಿದಾಗ ಈ ಸೆಟ್ಟಿಯರು ಚಾರುಕೀರ್ತಿ ಪಂಡಿತರ ಮುಂದೆ ಮುಕ್ತಗೊಳಿಸಿ ಅವರ ತಂದೆ ತಾಯಿಗಳಿಗೆ ಪುಣ್ಯವಾಗಲಿಯೆಂದು ಕೇಳಿಕೊಂಡರು.

ಹೀಗೆ ಪ್ರಮುಖ ವಂಶಗಳನ್ನು ಅಭ್ಯಸಿಸಿದಾಗ, ಈ ಎಲ್ಲಾ ರಾಜನ ಕಾಲದಲ್ಲಿ ಸೆಟ್ಟಿ ಕುಲದವರು ಪ್ರಮುಖ ಪಾತ್ರ ವಹಿಸುತ್ತಿದ್ದರು. ಜನಹಿತ ಕಾರ್ಯಗಳನ್ನು ಕೈಗೊಂಡಿದ್ದರೆಂದು ವಿಧಿತವಾಗುತ್ತದೆ.

ಇತಿಹಾಸದುದ್ದಕ್ಕೂ ಸೆಟ್ಟಿಕುಲದ ವೃತ್ತಿಗಳು ಅನುವಂಶಿಕವಾಗಿದ್ದವು. ಅಲ್ಲದೆ ಜಾತಿವಾಚಿ, ಧರ್ಮವಾಚಿಗಳಾಗಿರದೆ ವೃತ್ತಿವಾಚಿಗಳೆನಿಸಿದ್ದವು. ಕ್ರಮೇಣ ಇವು ಜಾತಿನಿಷವಿ, ಜನಾಂಗನಿಷವಿ, ಪ್ರದೇಶನಿಷವಿಗಳಾಗಿಯೂ ವರ್ಗನಿಷವಿವಾಗಿಯೂ ಬೆಳೆದುಬಂದವು. ಇತ್ತೀಚೆಗಂತೂ ಸೆಟ್ಟಿ ಎನ್ನುವುದು ಜಾತಿವಾಚಕವಾಗಿ ಬೆಳೆದು ಬಂದಿದೆ. ವೀರಶೈವ ಶೆಟ್ಟಿ, ತೆಲುಗು ಶೆಟ್ಟಿಗಳೆಂದು ಜಾತಿ ಸೂಚಕವಾಗಿ ಸೆಟ್ಟಿ ಪದ ಸಂಕುಚಿತವಾಗಿ ತನ್ನ ವ್ಯಾಪ್ತಿಯನ್ನು ಒಳಗೊಂಡಿದೆ.

"ಆರ್ಯವೈಶ್ಯ" ಆಲಂಪಲ್ಲಿ ವಿಷ್ಣು ಭಾರತರವರು ಬರೆದ ಪುಸ್ತಕದ ಆಧಾರದಿಂದ ನನಗೆ ಈ ಕೆಳಗಿನ ಅಂಶಗಳು ತಿಳಿದುಬಂದವು. ಸಾಮ್ರಾಟ್ ಅಶೋಕ, ವಿಕ್ರಮಾದಿತ್ಯ, ಮಹಾತ್ಮಗಾಂಧಿ, ಲಾಲಾ ಲಜಪತರಾಯ್, ಮಹಾರಾಜ ಅಗ್ರಸೇನ, ಶ್ರವಣ ಕುಮಾರ, ಸಂತ ತುಕಾರಂ, ಚಂದ್ರಗುಪ್ತಮೌರ್ಯ ಇವರೆಲ್ಲ ಆರ್ಯ ವೈಶ್ಯರು ಈ ಅಂಶಗಳಿಂದ ಸೆಟ್ಟಿ ಕುಲದವರ ಸ್ಥಾನಮಾನದ ಅರಿವಾಗುವುದು.

ಅಡಿಟಿಪ್ಪಣಿಗಳು

೧. ಎ.ಕ.೯. ಬೇಲೂರು ಶಾ.ಸಂ.೭, ಕ್ರಿ.ಶ.೧೨೭೩

೨. ಎ.ಕ.೯. ಬೇಲೂರು ಶಾ.ಸಂ.೩೨೮, ಕ್ರಿ.ಶ.೧೧೩೬

೩. ಅದೇ, ೧೮೩, ಕ್ರಿ.ಶ.೧೧೪೫

೪. ಅದೇ, ೩೨೩, ೧೩ನೇ ಶತಮಾನ

೫. ಎ.ಕ.೧೧, AK ೧೩೭

೬ ಎ.ಕ.೫ AK ೮೨

೭ ಎ.ಕ.II ಶ್ರವಣಬೆಳ್ಗೊಳ ೧೬೦, ಕ್ರಿ.ಶ.೧೧೧೭

೮. ಜೆ.ಇ.ಎಸ್.ಆಯ್ ಸಂಪುಟ XXIII, ಕ್ರಿ.ಶ.೯೪೮

೯. ಗಾವರವಾಡ ಎಸ್.ಐ.ಐ.೧೧-i, ೧೩, ಪು.೯

೧೦. 'ಕರ್ನಾಟಕ ಕುಲ ಪುರೋಹಿತ ಆಲೂರ ವೆಂಕಟರಾಯರ ಸಮಗ್ರ ಕೃತಿಗಳು', ಸಂ.೧, ಸಂ.ಶ್ರೀನಿವಾಸ ರಿತ್ತಿ ಮತ್ತು ಸುರೇಂದ್ರದಾನಿ, ಪು.೧೯

೧೧. ಸೂಡಿ ಎಸ್.ಐ.ಐ. ೧೧-i ಶಾ.ಸಂ.೫೫, ಪು.೪೬

೧೨. ಲಕ್ಕುಂಡಿ ಇ.ಐ.ii, ಕ್ರಿ.ಶ.೧೦೭೮

೧೩. ೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಡಾ.ಜೆ.ಎಂ.ನಾಗಯ್ಯ, ಪು.೩

೧೪. ಗದಗ, ಎಸ್.ಐ.ಐ.೧೫, ಶಾ.ಸಂ.೬೬, ಪು.೬೬

೧೫. ಕುರ್ತುಕೋಟಿ, ಎಸ್.ಐ.ಐ.೧೫, ಶಾ.ಸಂ.೧೭, ಪು.೧೬

೧೬. ಮುಳುಗುಂದ, ಎಸ್.ಐ.ಐ.೧೧-ii ಶಾ.ಸಂ.೧೯೮, ಪು.೨೫೩

೧೭. ಹನುಮನಾಳ, ಎಸ್.ಐ.ಐ.೧೧, ಶಾ.ಸಂ.೧೪೮, ಪು.೧೮೨

೧೮. ಕರ್ನಾಟಕ ಪರಂಪರೆ ಸಂ.೧, ಪು.೩೪೭

೧೯. ಎಸ್.ಐ.ಐ.XX ೧೩೫, ಕ್ರಿ.ಶ.೧೧೫೭ (ಕ.ವಿ.ವಿ.ಶಾ.ಸಂ.೯, ಬಾಗಲಕೋಟೆ)

೨೦. ಕ.ವಿ.ವಿ.ಶಾ.ಸಂ.೭, ರಾಯಚೂರು ಜಿಲ್ಲೆ, ದೇವದುರ್ಗ, ಕ್ರಿ.ಶ.೧೧೭೧, ಪು.೫೮

೨೧. ಬೆಳಹೋಡ ಎಸ್.ಐ.ಐ.೧೫, ಶಾ.ಸಂ.೧೨೧, ಕ್ರಿ.ಶ.೧೧೭೪

೨೨. ಎಆರ್ ಸಂ.ಬಿ.೮೧೭, ೧೯೬-೬೩; ಐಕೆIV. ಸಂ..೨೯೦(ಕ.ವಿ.ವಿ.ಶಾ.ಸಂ.೭, ರಾಯಚೂರು ಜಿಲ್ಲೆ, ಶಾ.ಸಂ.೧೨೧ ಮಾನ್ವಿ, ಕ್ರಿ.ಶ.೧೧೭೪, ಪು.೩೪೦)

೨೩. ಕ.ವಿ.ವಿ.ಶಾ.ಸಂ.ರಾಯಚೂರು ಜಿಲ್ಲೆ, ಸಿಂಧನೂರು ಶಾ.ಸಂ.೩೮, ಪು.೪೦೦

೨೪. ಅದೇ, ಪು.೪೮೯, ಶಾ.ಸಂ.೪೦, ಕ್ರಿ.ಶ.೧೧೮೨

೨೫. ಅದೇ, ೧೧೭೫

೨೬. ಲಕ್ಕುಂಡಿ ಎಸ್.ಐ.ಐ.೧೫, ಶಾ.ಸಂ.೧೬೭, ಕ್ರಿ.ಶ.೧೨೨೩

೨೭. ಬಿಕೆ ಸಂ.೫೦, ೧೯೨-೨೯; ಎಸ್ಐಐ.XV.೧೬೪ (ಕ.ವಿ.ವಿ.ಶಾ.ಸಂ.೫, ಬಾಗಲಕೋಟೆ ಜಿಲ್ಲೆ, ಪು.೧೩೦)

೨೮. ಕ.ವಿ.ವಿ.ಶಾ.ಸಂ.೭, ರಾಯಚೂರು ಜಿಲ್ಲೆ, ವೀರಗೋಟ, ಕ್ರಿ.ಶ.೧೨೨೩, ಪುಟ.೯೭

೨೯. ಎಚ್‌ಎಎಸ್.XVIII. ಸಂ.೧೭, ಐಕೆ IV. ಸಂ.೧೯೪(ಕ.ವಿ.ವಿ.ಶಾ.ಸಂ.೭, ಲಿಂಗಸೂಗೂರು ಮುದಗಲ್, ಪು.೧೮೨, ಶಾ.ಸಂ.೪೯)

೩೦. ಎ.ಕ.ಸಂ.೭, ನಾಗಮಂಗಲ ಶಾ.ಸಂ.೯೪, (ಬೆಳ್ಳೂರು) ಪು.೯೨

೩೧. ಎ.ಕ. ಶ್ರವಣಬೆಳಗೊಳ, ಪು.೨೦೩, ಶಾ.ಸಂ.೩೫೨, ಕ್ರಿ.ಶ.೧೬೩೪

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

'ಕನ್ನಡ ಶಾಸನಗಳಲ್ಲಿ ಸೆಟ್ಟಿಕುಲ ಎನ್ನುವ ಈ ಮಹಾಪ್ರಬಂಧವು ವಿಜಯನಗರ ಸಾಮ್ರಾಜ್ಯದ ಕಾಲದ ಕನ್ನಡ ಶಾಸನಗಳಲ್ಲಿ ಕಂಡುಬರುವ ಸೆಟ್ಟಿಕುಲದ ಸ್ಥಿತಿಗತಿ, ಅವರ ಸ್ಥಾನಮಾನ ಮತ್ತು ಅವರ ಸಾಮಾಜಿಕ ಕೆಲಸಗಳನ್ನು ತಿಳಿಸುವ ಪ್ರಯತ್ನ ಮಾಡಿದೆ. ಕ್ರಿ.ಶ.೧೩೩೬ ರಿಂದ ೧೫೬೫ರವರೆಗಿನ ವಿಜಯನಗರ ಆಳ್ವಿಕೆಯಲ್ಲಿ ಹಾಕಿಸಿರುವ ಕನ್ನಡ ಶಾಸನಗಳನ್ನು ಆಧರಿಸಿ, ಸೆಟ್ಟಿಕುಲದವರನ್ನು ಮತ್ತು ಅವರು ಮಾಡಿರುವ ಕಲ್ಯಾಣಕರ ಕಾರ್ಯಗಳನ್ನು ಈ ಪ್ರಬಂಧವು ಮುಖ್ಯವಾಗಿ ಚರ್ಚಿಸಿದೆ. ಪ್ರಾಚೀನ ಕರ್ನಾಟಕದ ಧಾರ್ಮಿಕ, ರಾಜಕೀಯ ಕ್ಷೇತ್ರಗಳ ಅಧ್ಯಯನ ವಿಪುಲ ಪ್ರಮಾಣದಲ್ಲಿ ನಡೆದಿದೆ, ನಡೆಯುತ್ತಲಿದೆ. ಆದರೆ ಇಷ್ಟೇ ಮಹತ್ವದ 'ವೈಶ್ಯ' ಚಟುವಟಿಕೆಗಳ ಬಗ್ಗೆ ಈವರೆಗೆ ಹೆಚಿನ ಅಧ್ಯಯನ ನಡೆದಿಲ್ಲವೆಂಬ ಕೊರತೆಯನ್ನು ತುಂಬಿಕೊಡಲು ಇಲ್ಲಿ ಪ್ರಯತ್ನಿಸಿದೆ.

ವಿಜಯನಗರ ಸಾಮ್ರಾಜ್ಯದ ಪ್ರಾರಂಭದಿಂದ ಪತನದವರೆಗೆ ಕಾಲಾವಧಿಯನ್ನು ವ್ಯಾಪಿಸಿದ ಈ ಪ್ರಬಂಧವು ಒಟ್ಟಿನಲ್ಲಿ ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಕರಗಳನ್ನು ಇಲ್ಲಿಯವರೆಗೆ ಈ ಪ್ರದೇಶಕ್ಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳನ್ನು ಕುರಿತಿದೆ. ಈ ಅಧ್ಯಾಯದಲ್ಲಿ, ಕನ್ನಡ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅದರಲ್ಲಿ ಬರುವ ಸೆಟ್ಟಿಕುಲದ ಸಮಾಜಹಿತ ಕೈಂಕರ್ಯಗಳನ್ನು ತಿಳಿಸಬೇಕೆನ್ನುವ ದೃಷ್ಟಿಯಿಂದ, ಸಂಶೋಧನೆ ಮಾಡಿ ಆ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗಿದೆ. ದಾನದಂತಹ ಪುಣ್ಯ ಕಾರ್ಯದಲ್ಲಿ ವರ್ತಕ ವರ್ಗ ಅಥವಾ ಸೆಟ್ಟಿ ಕುಲದವರು ತೊಡಗಿದ್ದರೆನ್ನುವುದನ್ನು ಬಿಂಬಿಸುವ ಉದ್ದೇಶವನ್ನು ಈ ಅಧ್ಯಯನದಲ್ಲಿ ತಿಳಿಸಿಕೊಡಲಾಗಿದೆ. ದಾನದಂತಹ ಮಹಾನ್ ಕೆಲಸದಿಂದ ಮನುಷ್ಯ ಭಾಗ್ಯವಂತನಾಗುತ್ತಾನೆ. ನೂರಾರು ಕೈಗಳಿಂದ ಕೂಡಿಸು, ಅದನ್ನು ಸಾವಿರಾರು ಕೈಗಳಿಂದ ಹಂಚಿಕೊಡು ಎನ್ನುವ ಮಾತಿನಂತೆ ಸೆಟ್ಟಿ ಕುಲದವರು ದಾನ ಧರ್ಮಗಳಲ್ಲಿ ಎತ್ತಿದ ಕೈ ಎನ್ನುವುದನ್ನು ಶಾಸನಗಳ ಮೂಲಕ ತಿಳಿಸಿಕೊಡಲಾಗಿದೆ. ದಾನದ ಹಿತೋಕ್ತಿಗಳನ್ನು ಅರ್ಥ ಮಾಡಿಕೊಂಡಿರುವಂತಹ ಸೆಟ್ಟಿ ಕುಲದವರು ನೀಡಿದ ಯಥೇಚ್ಛ ದಾನಧರ್ಮಗಳನ್ನು ಎಳೆ ಎಳೆಯಾಗಿ ಬಿಡಿಸಿ ಮಹತ್ವತೆಯನ್ನು ತಿಳಿಸಿಕೊಡಲಾಗಿದೆ.

ವಿಜಯನಗರ ಕಾಲದಲ್ಲಿ ಜನರು 'ಯಥಾ ರಾಜ ತಥಾ ಪ್ರಜೆ' ಎನ್ನುವಂತೆ ರಾಜನ ಔದಾರ್ಯ ಗುಣಗಳು ಪ್ರಜೆಗಳಿಗೆ ಒಳ್ಳೆಯ ದಾರಿಯಲ್ಲಿ ಮುನ್ನುಗ್ಗಲು ಪ್ರಚೋದನೆಯನ್ನು ನೀಡುತ್ತಿದ್ದವು. ವಾಣಿಜ್ಯ ಸಂಪರ್ಕ ವಿಸ್ತೃತಗೊಂಡುದರ ಪರಿಣಾಮವಾಗಿ ಇಲ್ಲಿನ ಜನ ಶ್ರೀಮಂತರಾದರು. ಅದರಲ್ಲೂ ವಿಶೇಷವಾಗಿ ಸೆಟ್ಟಿ ಕುಲದವರು ಹೇರಳ ಲಾಭ ಪಡೆದುಕೊಂಡರು. ಅವರು ತಮ್ಮದೇ ಆದ ದೇವರು, ದೇವಾಲಯಗಳು, ಸಂಘಸಂಸ್ಥೆಗಳನ್ನು ರಚಿಸಿಕೊಂಡರು. ಹೆಚ್ಚಿನ ದೇವಾಲಯಗಳಿಗೆ ಬೇಕಾದಷ್ಟು ದಾನ ದತ್ತಿಗಳನ್ನು ನೀಡಿದರು. ಬ್ರಾಹ್ಮಣ ಸಂತರ್ಪಣೆಗಾಗಿ ಸ್ವತಃ ಮಠ ಕಟ್ಟಿಸಿ ಅನೇಕ ದಾನಗಳನ್ನು ನೀಡಿ ವ್ಯವಸ್ಥೆಗೊಳಿಸಿದರು. ಈ ದಿಸೆಯಲ್ಲಿ ಸೆಟ್ಟಿ ಕುಲದವರ ಸೇವೆಯನ್ನು ತಿಳಿಸಿಕೊಡುವ ಉದ್ದೇಶ ಒಳಗೊಂಡಿದೆ.

'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಡಾ.ಬಿ.ಆರ್.ಹಿರೇಮಠರ ಕೃತಿ ಸೆಟ್ಟಿ ಕುಲದವರ ಕೊಡುಗೆಯನ್ನು ತಿಳಿಯಲು ಕೈಪಿಡಿಯಂತಿದೆ. ಪ್ರಾಚೀನ ವಾಣಿಜ್ಯ ಚಲನವಲನಗಳ

ಬಗ್ಗೆ ತಿಳಿಯಲು ಇದು ದಾರಿ ದೀವಿಗೆಯಾಗಿದೆ. ಇದನ್ನು ಆಧಾರವಾಗಿಟ್ಟುಕೊಂಡು ಬಿ.ಆರ್. ಹಿರೇಮಠರು ಪರಿಚಯಿಸಿರುವ ಸೆಟ್ಟಿ ಕುಲದವರ ಮಹಾನ್ ಕಾರ್ಯಗಳನ್ನು ತಿಳಿಸಿಕೊಟ್ಟಿದೆ. ಸುಮಾರು ೫೦೦ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸೆಟ್ಟಿಕುಲದವರ ಕಲ್ಯಾಣಕರ ಕೆಲಸಗಳನ್ನು ಬಿಂಬಿಸಿರುವೆನು. ನಾನು ಸೆಟ್ಟಿ ಕುಲದವಳೇ ಅಂದರೆ ವೈಶ್ಯರ ಕುಲಕ್ಕೇ ಸೇರಿದ ನಾನು ಇಂಥ ಕೆಲಸವನ್ನು ಮಾಡುವುದು ನನ್ನ ಕರ್ತವ್ಯವೆಂದೇ ಭಾವಿಸಿ, ಅದರಂತೆ ಮಾಡಿರುವೆನು. ಸೆಟ್ಟಿಯರು ವ್ಯಾಪಾರವನ್ನು ಮಾತ್ರ ತಮ್ಮ ದೃಷ್ಟಿಯಲ್ಲಿಟ್ಟುಕೊಳ್ಳದೇ ಸಮಗ್ರ ಸಮಾಜದ ಕಲ್ಯಾಣಕ್ಕಾಗಿ ಶ್ರಮವಹಿಸಿದ ಉಲ್ಲೇಖಗಳಿರುವ ಶಾಸನಗಳನ್ನು ಅಧ್ಯಯನಮಾಡಲಾಗಿದೆ.

ಮೊದಲಬಾರಿಗೆ ಇಲ್ಲಿ ವರ್ತಕರ ಜೀವನದ ವಿವಿಧ ಮುಖಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಸೆಟ್ಟಿಗಳ ಧಾರ್ಮಿಕ, ಸಾಮಾಜಿಕ, ವೀರಜೀವನ, ಕೌಟುಂಬಿಕ ಸಂಬಂಧ ಹೊಂದಿದ್ದ ವಿಶಿಷ್ಟ ಅಧಿಕಾರ-ಕರ್ತವ್ಯಗಳನ್ನು ಹೇಳುವುದರೊಂದಿಗೆ ಸೆಟ್ಟಿಗಳ ಹಿರಿಮೆಯನ್ನು ತಿಳಿಸಿಕೊಡಲಾಗಿದೆ. ವೈದಿಕ, ಜೈನ, ವೀರಶೈವ ಮುಂತಾದ ಸೆಟ್ಟಿಗಳು ದೇವಾಲಯ, ಕಂಬ, ಮಂಟಪ, ದೀಪಮಾಲೆ, ಮಠ, ಅನ್ನಸತ್ರ, ಕೆರೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರದಂತಹ ಕಾರ್ಯಗಳಿಗೆ ವೈಯಕ್ತಿಕವಾಗಿ, ಸಾಮೂಹಿಕವಾಗಿ ದಾನ ಮಾಡಿದ್ದನ್ನು ಈ ಪ್ರಬಂಧದಲ್ಲಿ ಗಮನಿಸಲಾಗಿದೆ. ಶಾಸನಗಳಲ್ಲಿ ಪ್ರಕಟವಾಗಿರುವ ಸೆಟ್ಟಿಕುಲದವರ ಕಲ್ಯಾಣ ಕೆಲಸಗಳನ್ನು ಚರ್ಚಿಸಿದೆ.

ಮಹಿಳೆಯು ಪ್ರಥಮವಾಗಿ, ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ. ಇದೊಂದು ಸೀಮಿತ ಕ್ಷೇತ್ರ. ಪತಿ ಮಕ್ಕಳು ಬಂಧುಬಳಗದವರ ಯೋಗಕ್ಷೇಮದೊಂದಿಗೆ ಸಮಾಜದಲ್ಲಿ ವಿಶಿಷ್ಟ ಸ್ಥಾನಮಾನ ಕಾಯ್ದುಕೊಳ್ಳುವುದು ಈ ಕ್ಷೇತ್ರದ ಗುರಿ. ಆದರೆ ಮಹಿಳೆಯರು ಈ ಸೀಮಿತ ಪರಿಸರವನ್ನು ಮೀರಿ ಜೀವನದಲ್ಲಿ ಹೆಚ್ಚಿನದನ್ನು ಸಾಧಿಸಬೇಕೆಂಬ ಲವಲವಿಕೆಯುಳ್ಳವರಾಗಿರುತ್ತಾರೆ. ಕರ್ನಾಟಕದಲ್ಲಿ ಶಾಸನೋಕ್ತ ಮಹಿಳೆಯರ ಇತಿಹಾಸ ಕದಂಬರ ಕಾಲದಿಂದ ಪ್ರಾರಂಭವಾಗುತ್ತದೆ.

ಅಂದಿನಿಂದ ಸಾಮಾನ್ಯವಾಗಿ ಶಾಸನಗಳ ಒಡಲಲ್ಲಿ ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತ ವರ್ಗದ ಮಹಿಳೆಯರು. ಕೆಲವು ಮಹಿಳೆಯರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದವರಾದರೆ ಇನ್ನೂ ಕೆಲವರು ಸ್ವಕಾರ್ಯ ಬಲದಿಂದ ಪ್ರಾಮುಖ್ಯತೆ ಪಡೆದವರು. ಸೆಟ್ಟಿ ಕುಲದ ಮಹಿಳೆಯರು ಮಾಡಿದ ಧಾರ್ಮಿಕ, ಸಾಮಾಜಿಕ ಕಲ್ಯಾಣ

ಕಾರ್ಯಗಳು ಒಳಗೊಂಡಿವೆ. ಇವುಗಳನ್ನು ನನ್ನ ಪ್ರಬಂಧದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದೇನೆ.

ಪಟ್ಟಣಸ್ವಾಮಿ ಎನ್ನುವುದು ಒಂದು ಹುದ್ದೆ ಅಥವಾ ಸ್ಥಾನವಾಗಿದೆ. ಪಟ್ಟಣ ಪ್ರದೇಶದ ಆರ್ಥಿಕ ಚಟುವಟಿಕೆಗಳನ್ನು ಬೆಳೆಸುವಲ್ಲಿ ಪರಿಶ್ರಮವಹಿಸಿ ಕಾರ್ಯ ಮಾಡಿದ್ದಾರೆ. ಪಟ್ಟಣಸ್ವಾಮಿಗಳು ಸಂತೆ, ಪೇಟೆ ಮತ್ತು ಪಟ್ಟಣಗಳ ಸಂಯೋಜನೆ ಹಾಗೂ ಕಾರ್ಯಾಚರಣೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಬಗೆಗೆ ಶಾಸನಗಳು ತಿಳಿಸುವ ಹೊಸ ಸಂಗತಿಗಳು ಮೌಲ್ಯಯುತವಾಗಿವೆ. ಶೆಟ್ಟಿ ಎಂಬ ಅಡ್ಡ ಹೆಸರು ಇಂದು ವೈಶ್ಯ, ಬಂಟ, ವೀರಶೈವರಲ್ಲಿ ಕಂಡುಬರುತ್ತಿದ್ದರೂ ಪಟ್ಟಣಶೆಟ್ಟಿ ಮಾತ್ರ ಕೇವಲ ವೀರಶೈವ ಕುಟುಂಬಗಳ ಅಡ್ಡಹೆಸರಾಗಿದೆ. ಈ ಹೆಸರಿನ ಮನೆತನಗಳು ವಿಪುಲವಾಗಿ ಸಿಗುವುದರಿಂದ, ಇದು ವೀರಶೈವ ಸಮಾಜದ ಬಹುಭಾಗವನ್ನು ವ್ಯಾಪಿಸಿರುವ, ಅಷ್ಟೇ ಪ್ರಾಚೀನವಾಗಿರುವ ಕುಟುಂಬವರ್ಗವೆಂದು ಹೇಳಬಹುದು. ಪ್ರಾಚೀನ ಕಾಲದಲ್ಲಿ ಸಂತೆಯಿಂದಾಗಿ ಒಂದು ಊರು ಪಟ್ಟಣವೆನಿಸಿಕೊಳ್ಳುತ್ತಿದ್ದಿತು. ಗ್ರಾಮವೊಂದರಲ್ಲಿ ಸಂತೆಯನ್ನು ಸಂಘಟಿಸಲು ಒಬ್ಬ ವರ್ತಕ ಮುಂದಾಗುತ್ತಿದ್ದನು. ಇದಕ್ಕೆ ಸರ್ಕಾರದ ಒಪ್ಪಿಗೆ ಬೇಕಾಗುತ್ತಿದ್ದಿತು. ಈ ವರ್ತಕನು ಜನರಿಂದ ಸಂಗ್ರಹಿಸುತ್ತಿದ್ದ ಸುಂಕದಲ್ಲಿ ಸರ್ಕಾರಕ್ಕೆ ಕೆಲವು ಪಾಲು ಕೊಟ್ಟು ಮಿಕ್ಕುದು ತಾನು ಇಟ್ಟುಕೊಳ್ಳುತ್ತಿದ್ದನು. ಇದನ್ನು ಮಾಡುವ ಸೆಟ್ಟಿ ಅಥವಾ ವರ್ತಕನಿಗೆ ಪಟ್ಟಣಸ್ವಾಮಿ ಎನ್ನುತ್ತಿದ್ದರು.

ಶಾಸನಗಳ ಆಧಾರದಿಂದ ಪಟ್ಟಣಸ್ವಾಮಿಗಳು ಮಾಡಿರುವ ಕಲ್ಯಾಣಕರ ಕಾರ್ಯ, ಅವರ ಕರ್ತವ್ಯ, ಸ್ಥಾನಮಾನಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಸಾಮಾನ್ಯವಾಗಿ ಯಾವಾಗಲೂ ಒಬ್ಬನೇ ಪಟ್ಟಣಸ್ವಾಮಿ ಇರುತ್ತಿದ್ದ. ಆದರೆ ಪಟ್ಟಣ ದೊಡ್ಡದಾಗಿದ್ದರೆ ಕೆಲವೊಮ್ಮೆ ಒಬ್ಬನಿಗಿಂತ ಹೆಚ್ಚು ಜನ ಪಟ್ಟಣಸ್ವಾಮಿಗಳಿರುತ್ತಿದ್ದರು. ಕ್ರಿ.ಶ.೧೯೮ರಲ್ಲಿ ಮೂವರು ಕ್ರಿ.ಶ.೧೧೮೧ರಲ್ಲಿ ಇಬ್ಬರು ಪಟ್ಟಣಸ್ವಾಮಿಗಳು ಬಳ್ಳಿಗಾವೆಯಲ್ಲಿ ಇದ್ದರೆಂದು ಶಾಸನೋಲ್ಲೇಖದಿಂದ ತಿಳಿದುಬರುತ್ತದೆ. ಕನಕದಾಸರ ಮೋಹನ ತರಂಗಿಣಿಯಲ್ಲಿ ಹೇಳಿರುವ ವ್ಯಾಪಾರ ಮತ್ತು ವರ್ತಕರ ವಿಚಾರದಲ್ಲಿ ಪಟ್ಟಣಸ್ವಾಮಿಗಳ ಉಲ್ಲೇಖ ನೋಡಿದರೆ, ಪಟ್ಟಣಸ್ವಾಮಿಗಳ ಪ್ರಾಮುಖ್ಯತೆ ಯಾವ ಮಟ್ಟದಲ್ಲಿತ್ತೆನ್ನುವ ಅರಿವಾಗದೇ ಇರದು. ದೇಶ ವಿದೇಶಗಳೊಂದಿಗೆ ಹಡಗುಗಳಲ್ಲಿ ವ್ಯಾಪಾರ ಮಾಡುವ ನಗರದ ವರ್ತಕರ ಸಂಪತ್ತು ಕುಬೇರನಿಗೂ ಸಹ ಕೊಡುವಷ್ಟಿತ್ತೆಂದು ಕನಕದಾಸರು ಹೇಳುತ್ತಾರೆ. ಇಂಥಹ ವರ್ತಕರು ಧನ ಕನಕರಾಶಿಯ

ನಡುವೆ ಕುಳಿತಿರುತ್ತಿದ್ದರಂತೆ. ನಗರದ ಬೇರೆ ಬೇರೆ ಬಡಾವಣೆಗಳ ಆಡಳಿತವು ಸೆಟ್ಟಿ, ಪಟ್ಟಣಸ್ವಾಮಿಗಳೆಂಬ ನಗರಾಧ್ಯಕ್ಷರುಗಳ ಅಧೀನದಲ್ಲಿತ್ತು. ಇವರಿಗೆ ತಳವಾರರೆಂಬ ದಕ್ಷಿಣಾದಳದ ನೆರವೂ ಇತ್ತು. ಇದರಿಂದ ಪಟ್ಟಣಸ್ವಾಮಿಗಳ ಮಹತ್ವ ತಿಳಿಯುತ್ತದೆ. ಹಲವಾರು ಶಾಸನಗಳ ಉಲ್ಲೇಖವನ್ನು ನೀಡುತ್ತಾ, ಪಟ್ಟಣಸ್ವಾಮಿಗಳ ಮಹತ್ವತೆಯನ್ನು ತಿಳಿಸುವ ಕೆಲಸ ಪ್ರಬಂಧದಲ್ಲಿ ಮಾಡಲಾಗಿದೆ.

ಕುಟುಂಬ ಜೀವಿಗಳಾದ ವರ್ತಕರ ಅಥವಾ ಸೆಟ್ಟಿಗಳ ಸಾಮಾಜಿಕ ಜೀವನದಲ್ಲಿ ಕಂಡುಬರುವ ಹಲವಾರು ಸ್ವಾರಸ್ಯಕರ ಸಂಗತಿಗಳು ಶಾಸನಸ್ಥವಾಗಿವೆ. ಇವರು ತಮ್ಮ ತಮ್ಮ ಮನೆತನ ಹಾಗೂ ಅರಸು ಮನೆತನಗಳಲ್ಲಿ ವಿವಾಹ ಸಂಬಂಧ ಬೆಳೆಸಿದ್ದರು. ದತ್ತಕ ಪದ್ಧತಿ, ಸಾಲಪದ್ಧತಿ, ಸೇನಬೋವ ನೇಮಕ, ಮುಡಿಪು ಅರ್ಪಣೆಗಳು ಸೆಟ್ಟಿ ಕುಲದಲ್ಲಿ ರೂಢಿಯಲ್ಲಿದ್ದವು. ಸೆಟ್ಟಿ ಕುಲದವರು ಚಕ್ರವರ್ತಿಗಳಿಂದ ಸತ್ತಿಗೆ, ಚಾಮರ, ಪಲ್ಲಕ್ಕಿಗಳ ಮರ್ಯಾದೆ ಪಡೆದಿದ್ದಾರೆ. ವರ್ತಕರ ಅಥವಾ ಸೆಟ್ಟಿಗಳ ಅಪುತ್ರಕತನ ದೇವಾಲಯದ ಸೊತ್ತಾಗುತ್ತಿತ್ತು. ಧರ್ಮವ್ಯಾಜ್ಯಗಳನ್ನು ಬಗೆಹರಿಸುವ, ವ್ಯಕ್ತಿಗಳಿಗೆ ಅಭಿದಾನ ಅಥವಾ ಬಿರುದು ನೀಡುವ, ಗೌಡರಿಗೆ ನಾಡ ಹೆಗ್ಗಡೆತನ ಕೊಡುವ, ಧರ್ಮಶಾಸನ, ಆಜ್ಞೆಯ ಶಾಸನ ಹೊರಡಿಸುವ, ಬಾಳು ತಪ್ಪಿದ ಹೆಣ್ಣಿಗೆ ನಿಯಮ ಹಾಕಿಕೊಡುವಂಥ ಅಧಿಕಾರಗಳನ್ನು ಪಡೆದ ಸೆಟ್ಟಿಗಳು ವಿಶೇಷ ಮುನ್ನಣೆಗೆ ಭಾಜನರಾಗಿದ್ದಾರೆ. ದೇವಕಾರ್ಯಗಳಿಗೆ ದಾನ ನೀಡುವಾಗ ರಾಜಪರಿವಾರ, ಪ್ರಜಾ ಪರಿವಾರದವರು ಸೆಟ್ಟಿಗಳ ಸನ್ನಿಧಾನ, ಅನುಮತಿ ಪಡೆಯುತ್ತಿದ್ದರು. ಅಂದಿನ ಸಮಾಜದಲ್ಲಿ ದಾನ ಪ್ರಧಾನ, ಪ್ರತಿಪಾಲನೆಗಳಿಂದ ಪುಣ್ಯಪ್ರಾಪ್ತಿಯಾಗುವುದೆಂಬ ನಂಬಿಕೆಯಿದ್ದಿತು.

ಹೀಗಾಗಿ ಸೆಟ್ಟಿಗಳು ಸ್ವದಾನ, ಪರದಾನ ಪಾಲನ ಧರ್ಮವನ್ನು ಚಾಚೂ ತಪ್ಪದೆ ಪಾಲಿಸುತ್ತಾ ಬಂದರು. ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ವ್ಯಾಪಾರಿಗಳು ಸತ್ಕಾರ್ಯ, ಸದ್ಧರ್ಮಗಳಿಗಾಗಿ ವಿನಿಯೋಗಿಸಿದ್ದಾರೆ. ವೈದಿಕ, ಜೈನ, ಶೈವ ಮತದ ಸೆಟ್ಟಿಗಳು ಮತ, ವರ್ಗ, ವರ್ಣ, ವಯಸ್ಸುಗಳ ತಾರತಮ್ಯವಿಲ್ಲದೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದೇವಾಲಯ, ದೀಪಮಾಲೆ ಕಂಬ, ಮಂಟಪ, ಸುಕನಾಶಿ, ಮಠ, ಅನ್ನ-ಸತ್ರ, ಕೆರೆ ನಿರ್ಮಾಣ, ಜೀರ್ಣೋದ್ಧಾರಗಳನ್ನು ಸ್ವಪರ ಶ್ರೇಯೋಭಿವೃದ್ಧಿಗಾಗಿ ವಿಗ್ರಹ, ಲಿಂಗಗಳ ಪ್ರತಿಷ್ಠಾಪನೆಯನ್ನೂ ದೇವಾಲಯಗಳ ವಿವಿಧ ಕಾರ್ಯಗಳಿಗೆ ನೂರಾರು

ಸಂಖ್ಯೆಯ ದಾನಗಳನ್ನು ಮಾಡಿದುದು ಅನುಕರಣೀಯ. ಆದರ್ಶನೀಯ. ಇಂಥ ಧಾರ್ಮಿಕ ಕಾರ್ಯ ಪ್ರಸಂಗಗಳಲ್ಲಿ ತೋರಿ ಬರುವ ಸೆಟ್ಟಿಗಳ ಭಕ್ತಿ ಭಾವ, ಧಾರ್ಮಿಕ ಶ್ರದ್ಧೆ, ತ್ಯಾಗಗುಣ, ಸ್ವಮತಾಭಿಮಾನ, ಪರಮತ ಪುರಸ್ಕಾರಗಳನ್ನು ಶಾಸನಗಳು ಕೈಯೆತ್ತಿ ಹೇಳುತ್ತವೆ ಕಷ್ಟಪಟ್ಟು ದುಡಿದು, ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ವ್ಯಾಪಾರಿಗಳು ಬದುಕನ್ನು ಶ್ರೀಮಂತಗೊಳಿಸಲು ಉಪಯೋಗಿಸಿದರಲ್ಲದೇ, ಬರೀ ಶ್ರೀಮಂತರಾಗಲು ಮಾತ್ರವಲ್ಲ.

ವರ್ತಕರ ಪ್ರಶಾಂತ ಜೀವನದ ವಿರುದ್ಧವಾದ ಮತ್ತೊಂದು ಮುಖ-ಅಂತಃಕಲಹ. ವ್ಯವಹಾರ ಹಾಗೂ ತಾವು ವಾಸಮಾಡುವ ಕೇರಿಗಳ ಸೀಮಾ ತಂಟೆಗಾಗಿ ಅವರು ತಮ್ಮ ತಮ್ಮಲ್ಲಿ ಜಗಳವಾಡಿದ್ದಾರೆ. ವೈಯಕ್ತಿಕ ದ್ವೇಷಗಳಿಂದ ಒಬ್ಬರನ್ನೊಬ್ಬರು ಕೊಂದಿದ್ದಾರೆ, ಕೊಲ್ಲಿಸಿದ್ದಾರೆ. ಇದಲ್ಲದೆ ತಮಗೆ ಬೇಡವಾದ ವರ್ತಕರ ಮೇಲೆ ದಾಳಿ ಮಾಡುವ, ಅವರ ಸಮಯ ಸಂಕೇತಗಳನ್ನು ರದ್ದುಗೊಳಿಸುವ ಅಧಿಕಾರಿಗಳ ದಬ್ಬಾಳಿಕೆಗೆ ತುತ್ತಾಗಿದ್ದಾರೆ. ಸರಕುಗಳ ಮೇಲೆ ಹೇರಿದ ಅಧಿಕ ತೆರಿಗೆಯ ವಿರುದ್ಧ ಇವರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಹೀಗೆ ಸೆಟ್ಟಿಗಳ ಸಾಮಾಜಿಕ ಜೀವನದ ಮೇಲೆ ಶಾಸನಗಳು ಹೊಸ ಬೆಳಕು ಚೆಲ್ಲುತ್ತಿರುವುದೊಂದು ವಿಶೇಷ ಸಂಗತಿ. ಇತಿಹಾಸದುದ್ದಕ್ಕೂ ಸೆಟ್ಟಿಕುಲದ ವ್ಯಕ್ತಿಗಳು ಅನುವಂಶಿಕವಾಗಿದ್ದರು. ಅಲ್ಲದೆ, ಜಾತಿವಾಚಿ, ಧರ್ಮವಾಚಿಗಳಾಗಿರದೆ ವೃತ್ತಿವಾಚಿಗಳೆನಿಸಿದ್ದವು. ಕ್ರಮೇಣ ಇವು ಜಾತಿನಿಷ್ಠೆ, ಜನಾಂಗ ನಿಷ್ಠೆ, ಪ್ರದೇಶ ನಿಷ್ಠೆಗಳಾಗಿಯೂ, ವರ್ಗನಿಷ್ಠವಾಗಿಯೂ ಬೆಳೆದು ಬಂದವು. ವೀರಶೈವ ಶೆಟ್ಟಿ, ತೆಲುಗು ಶೆಟ್ಟಿಗಳೆಂದು ಜಾತಿ ಸೂಚಕವಾಗಿ ಸೆಟ್ಟಿ ಪದ ಸಂಕುಚಿತವಾಗಿ ತನ್ನ ವ್ಯಾಪ್ತಿಯನ್ನು ಒಳಗೊಂಡಿದೆ.

ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಾರೋದ್ಯಮವನ್ನು ಬೆಳೆಸುವಲ್ಲಿ ಅವಿರತವಾಗಿ ದುಡಿದ ಈ ವರ್ತಕರು ಕೆಲವೊಂದು ರಾಜಕೀಯ, ಸಾಮಾಜಿಕ, ಆರ್ಥಿಕ, ಅಧಿಕಾರಗಳನ್ನು ಹಾಗೂ ಹೊಣೆಗಾರಿಕೆಯನ್ನು ಪರಿಪಾಲಿಸುತ್ತಾ ಬಂದಿರುವರು. ಇವರ ಕಾರ್ಯಗಳಿಗೆ ಸೆಟ್ಟಿ ಕುಲದ ಮಹಿಳೆಯರೂ ಸಹಕಾರ ನೀಡಿರುವರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಪುರುಷ ಮತ್ತು ಸ್ತ್ರೀ ಸಮಾಜದ ಅವಶ್ಯ ಮತ್ತು ಅನಿವಾರ್ಯ ಘಟಕಗಳು. ನಾಣ್ಯದ ಎರಡು ಮುಖಗಳಂತೆ. ಪುರುಷನಿಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ ಸ್ತ್ರೀ ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ನಡೆದು ಬಂದ ವಿಷಯ ಮನುಕುಲದ ಚರಿತ್ರೆಯಲ್ಲಿ ಅರ್ಧಭಾಗವನ್ನು ವ್ಯಾಪಿಸಿದೆ. ಸೆಟ್ಟಿ ಕುಲದ ಮಹಿಳೆಯರು

ಮಾಡಿದ ಕಲ್ಯಾಣಕರ ಕಾರ್ಯಗಳು ಇಂದಿನ ಮಹಿಳೆಯರಿಗೆ ಆದರ್ಶವಾಗಿವೆ. ಈ ಸಂಶೋಧನೆಯಲ್ಲಿ ಶಾಸನಗಳ ಉಲ್ಲೇಖದಿಂದ ಬರೆದಿರುವ ಶಾಸನಗಳನ್ನು ಗಮನಿಸಿದಾಗ ಸೆಟ್ಟಿ ಕುಲದ ಮಹಿಳೆಯರ ಮಹಾನ್ ಕಾರ್ಯಗಳು ಇಂದಿನ ಕಾಲದ ಮಹಿಳೆಯರ ಮೇಲೆ ಬೆಳಕು ಚೆಲ್ಲುತ್ತವೆ.

ವಿಜಯನಗರದ ಅರಸರು ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುತ್ತಿದ್ದರು. ವಿಜಯ ನಗರದಲ್ಲಿ ಅರಸರು ಹಿಂದೂ ಸಾಧು-ಸಂತರನ್ನು, ಕ್ರೈಸ್ತ ಪ್ರಾದಿಗಳನ್ನು ಮತ್ತು ಇಸ್ಲಾಂ ಪೀರ್ ಗಳನ್ನು ಸಮಾನ ಗೌರವಗಳಿಂದ ಕಾಣುತ್ತಿದ್ದರು. ಹಂಪೆಯಲ್ಲಿ ಹಿಂದೂ ದೇವಾಲಯವಲ್ಲದೆ, ಜೈನ ಬಸದಿಗಳನ್ನು ಕಾಣಬಹುದು. ಕಾರ್ಕಳ ಮತ್ತು ವೇಣೂರಿನ ಬಾಹುಬಲಿ ವಿಗ್ರಹಗಳು ಈ ಕಾಲದ ರಚನೆ, ಬೇರೆ ಬೇರೆ ಸಂಪ್ರದಾಯದ ವಿದ್ವಾಂಸರು, ಸಾಧು-ಸಂತರು, ಕವಿಗಳು ವಿಜಯನಗರದಲ್ಲಿದ್ದರು. ವಿಜಯನಗರದ ಶೈವ ಇಲ್ಲವೆ ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದು, ಪಂಥ ಭೇದಕ್ಕೆ ಅವಕಾಶವಿರಲಿಲ್ಲ. ಹಲವಾರು ಶಿವ ಮತ್ತು ವೈಷ್ಣವ ದೇವಾಲಯಗಳು ಕಟ್ಟಲ್ಪಟ್ಟವು. ವಿಜಯನಗರವು ಸರ್ವಧರ್ಮ ಸಮನ್ವಯವನ್ನು ಸಾಧಿಸಿತು. ವಿಜಯನಗರದಲ್ಲಿ ಮತೀಯ ಸ್ವಾತಂತ್ರ್ಯವಿದ್ದ ಇದೊಂದು ಜಾತ್ಯಾತೀತ ರಾಜ್ಯ ಎನಿಸಿತ್ತು. ವಿಜಯನಗರದ ಅರಸರು ಶೈವರಾಗಿದ್ದರೂ ವರಾಹವು ಅವರ ರಾಜ್ಯ ಚಿಹ್ನೆಯಾಗಿತ್ತು. ಶಿವ ಮತ್ತು ವಿಷ್ಣುವಿನ ದೇವಾಲಯಗಳನ್ನು ಕಟ್ಟಲಾಯಿತು. ದೇವಾಲಯಗಳ ನಿರ್ಮಾಣ-ನಿರ್ವಹಣೆಯಂತಹ ಮಹಾನ್ ಕಾರ್ಯದಲ್ಲಿ ಸೆಟ್ಟಿ ಕುಲದವರು ವಹಿಸಿದ ಪಾತ್ರ ಅಗಾಧವಾದುದು.

ಪುಣ್ಯಕಾರ್ಯಗಳನ್ನು ಪೂರೈಸುವುದು ಸಮಾಜದ ಆದ್ಯ ಕರ್ತವ್ಯವೆಂಬ ಭಾವನೆಗಳಿಂದ ಸಮಾಜದ ಪ್ರಧಾನ ಘಟಕವಾದ ವರ್ತಕರು ಕಾರ್ಯ ಪ್ರವೃತ್ತವಾದುದುರಿಂದ ವೈದಿಕ, ಜೈನ, ಶೈವ ದೇವಾಲಯ ನಿರ್ಮಾಣ, ದೀಪ ಮಾಲೆ ಕಂಬ, ಮಂಟಪ, ಸುಕನಾಶಿ, ಮಠ-ಅನ್ನಛತ್ರ, ಕೆರೆ, ಜೀರ್ಣೋದ್ದಾರ, ವಿಗ್ರಹ, ಲಿಂಗ ಪ್ರತಿಷ್ಠಾಪನ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಸೆಟ್ಟ ಕುಲದವರು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ದೇವಾಲಯದ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಚೈತ್ರಪರ್ವ, ಪವಿತ್ರ ಪರ್ವ, ಪಂಚಪರ್ವ, ನಂದಾದೀವಿಗೆ, ಧೂಪ, ಗಂಧ, ಪುಷ್ಪ, ತಾಂಬೂಲ, ನೈವೇದ್ಯ, ಅಮೃತಪಡಿ, ಪಂಚಾಮೃತ ಅಭಿಷೇಕ, ಜೀರ್ಣೋದ್ಧಾರ, ರಂಗಭೋಗ, ರಥೋತ್ಸವ, ನಂದೀಶ್ವರ, ಅಷ್ಟಮಿ,

ಜೀವದಯಾಷಷ್ಟಮಿ, ಸ್ಥಾನಚಾರ್ಯ, ತಪೋಧನ, ವಿದ್ಯಾರ್ಥಿಗಳ ಆಹಾರ ಮೊದಲಾದ ಪುಣ್ಯಕಾರ್ಯ ಹಾಗೂ ಕೆರೆ ಹೂದೋಟ ಸತ್ರಗಳು ಸಾಂಗವಾಗಿ ಸಾಗಲು ಭೂಮಿ ಹಣ ಸುವರ್ಣ ಸಂತೆಯ ಅಥವಾ ಸಂತೆ ಸುಂಕ ಮುಂತಾದವುಗಳಿಗೆ ಧರ್ಮಕಾರ್ಯವೆಂದು ಬರೆದು ಸೆಟ್ಟಿ ಕುಲದವರು ಮನಃಪೂರ್ತಿಯಿಂದ ದಾನ ಮಾಡಿದ್ದಾರೆ.

ದೇವಾಲಯ ಕಟ್ಟಿದ ಶಿಲ್ಪಿಗಳನ್ನು ಗೌರವದಿಂದ ಪ್ರೋತ್ಸಾಹಿಸಿ, ಜೀವನೋಪಾಯಕ್ಕಾಗಿ ಅವರಿಗೆ ದತ್ತಿ ನೀಡಿದ್ದಾರೆ. ಧಾರ್ಮಿಕ ಕಾರ್ಯ ಮಾಡಿದ ವ್ಯಕ್ತಿಗಳ ಬಗೆಗೆ ಅಪಾರವಾದ ಗೌರವವನ್ನು ತಾಳಿದ್ದಾರೆ. ವ್ಯಕ್ತಿ, ಸತ್ರ, ಕೆರೆ ಮುಂತಾದವುಗಳಿಗೆ ನೀಡಿದ ದಾನಗಳಿಗಿಂತ ದೇವಾಲಯಗಳಿಗೆ ಅದರಲ್ಲಿಯೂ ದೇವಾಲಯಗಳ ನಿರ್ಮಾಣಕ್ಕಾಗಿ ನೀಡಿದ ದಾನಗಳೇ ಹೆಚ್ಚಾಗಿವೆ. ಈ ದಾನಗಳು ಹಣದ ರೂಪದಲ್ಲಿರುವುದು ಅತ್ಯಲ್ಪವಾದರೆ ವಸ್ತುಗಳ ರೂಪದಲ್ಲಿರುವುದು ಅಧಿಕವಾಗಿದೆ. ಕೆಲವು ಸೆಟ್ಟಿ ಕುಲದವರು ಹಣ ಕೊಟ್ಟು ಬೇರೆಯವರಿಂದ ಕೊಂಡ ಭೂಮಿಯನ್ನು ದತ್ತಿಯಾಗಿ ಕೊಟ್ಟರೆ, ಇನ್ನೂ ಕೆಲವರು ಸ್ವಂತ ಭೂಮಿಯನ್ನೇ ದಾನವಾಗಿ ಬಿಟ್ಟಿದ್ದಾರೆ. ಒಟ್ಟಿನಲ್ಲಿ ಸೆಟ್ಟಿ ಕುಲದವರ ಧಾರ್ಮಿಕ ಕಾರ್ಯಗಳು ಕಳಶಪ್ರಾಯವಾಗಿವೆ.

ದೇವಾಲಯದ ಕಾರ್ಯಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಕಾರ್ಯವು ಸಮಾಜದ ಮೇಲಿದ್ದಿತು. ಹೀಗಾಗಿ ಸಮಾಜದ ಸರ್ವಮತೀಯರೂ, ಸಕಲ ಧರ್ಮದವರೂ ಕಾಲ ಕಾಲಕ್ಕೆ ಅನೇಕ ದಾನಗಳನ್ನು ನೀಡುತ್ತ, ಅವುಗಳನ್ನು ಮುಂದುವರೆಸಿಕೊಂಡು ಬಂದರು. ಇವರಲ್ಲಿ ಸೆಟ್ಟಿ ಕುಲದವರು ನೀಡಿದ ದಾನಗಳು ನಮಗೆ ಪ್ರಸ್ತುತವೆನಿಸುತ್ತವೆ. ವಡ್ಡ ವ್ಯವಹಾರಿ ಹಾಗೂ ಸೆಟ್ಟಿಯರೇ ಅಧಿಕ ಸಂಖ್ಯೆಯಲ್ಲಿ ದಾನ ಬಿಟ್ಟಿರುವುದು ಸಮಗ್ರ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಸೆಟ್ಟಿಯರ ಮಕ್ಕಳು ತಮ್ಮ ತಂದೆಯ ಹೆಸರಿನಲ್ಲಿ ಕಟ್ಟಿಸಿದ ದೇವಾಲಯಕ್ಕೆ ತಾವೇ ದಾನ ನೀಡಿದ್ದಾರೆ.

ಹೀಗೆ ದಾನ ಕೊಟ್ಟರೆ ತಮ್ಮ ತಂದೆ ತಾಯಿಗಳ ಪುಣ್ಯಾಭಿವೃದ್ಧಿಯಾಗುವುದೆಂಬ ನಂಬಿಕೆಯು ಸೆಟ್ಟಿ ಕುಲದವರಲ್ಲಿ ಇತ್ತೆಂದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಸಮಾಜದ ವಿವಿಧ ವರ್ಗ, ವರ್ಣ, ವಯಸ್ಸು ಮತದವರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ದೇವಾಲಯ, ವ್ಯಕ್ತಿಗಳಿಗೆ ದತ್ತಿ ಬಿಟ್ಟಿದ್ದಾರೆ. ಸೆಟ್ಟಿ ಕುಲವರು ಮತ್ತು ಅವರೇ ಕಟ್ಟಿಕೊಂಡ

ಸಂಘ ಸಂಸ್ಥೆಗಳಿಂದ ದೇವಾಲಯ, ದೇವಕಾರ್ಯಗಳಿಗಾಗಿ ಹಲವು ರೂಪದ ದಾನ ನೀಡಿರುವುದು ಗಮನಾರ್ಹ.

ಜೈನವರ್ತಕರು ಬಸದಿಗಳು, ದೇವಾಲಯಗಳು, ಮಂಟಪಗಳು, ದೀಪಮಾಲೆ ಕಂಭಗಳು, ಅನ್ನಸತ್ರ, ಕೆರೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರದಂಥ ರಚನಾತ್ಮಕ ಕಾರ್ಯಗಳನ್ನು ವ್ಯಾಪಕವಾಗಿ ಕೈಗೊಂಡಿರುವರು. ವಿಗ್ರಹ, ಲಿಂಗ ಪ್ರತಿಷ್ಠಾಪನೆಯಂಥ ಪರಧರ್ಮದ ಕೆಲಸಗಳನ್ನೂ ಕೈಗೊಂಡು ಧರ್ಮಸಹಿಷ್ಣುತೆಯನ್ನು ಮೆರೆದಿದ್ದಾರೆ. ಜೈನರ ಬಸದಿಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ಇವು ಜೈನರ ಭಕ್ತಿ ಭಾವದ ಪ್ರತೀಕ ವಾಗಿವೆ. ವಿಜಯನಗರದ ಅರಸರು ಬಸದಿಗಳ ನಿರ್ಮಾಣಕ್ಕೆ ಆಸಕ್ತಿ ವಹಿಸಿರುವ ಅನೇಕ ಉಲ್ಲೇಖಗಳಿವೆ. ಅರಸರಲ್ಲದೇ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೂ ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇದರಲ್ಲಿ ಸೆಟ್ಟಿಕುಲದವರು ಮುಂಚೂಣಿಯಲ್ಲಿರುವರು. ಜೈನ ನಕರರು ಶ್ರವಣಬೆಳ್ಗೊಳ ಶಾಸನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರಿಗೆ 'ಭವ್ಯ ನಕರ', 'ಮಾಣಿಕ್ಯ ನಕರ' ಎಂಬ ಪದಗಳನ್ನು ಬಳಸಲಾಗಿದೆ. ಜಿನ ಇವರ ಆರಾಧ್ಯ ದೈವ. ಈ ದೈವದ ಹೆಸರಿನಲ್ಲಿರುವುದು 'ನಕರ ಜಿನಾಲಯ'.

ಹಂಪೆಯಲ್ಲಿ ಕ್ರಿ.ಶ.೧೩೮೦ ರಿಂದಲೇ ಅಂದರೆ ಇಮ್ಮಡಿ ಹರಿಹರನ ಕಾಲದಿಂದಲೂ ತುಂಗಭದ್ರೆಯ ತಟದಲ್ಲಿ ವೈಷ್ಣವ ದೇವಾಲಯಗಳ ರಚನೆ ಆರಂಭವಾಗಿರುತ್ತದೆ. ಯಾದವ ವಂಶದವರಾದ ಸಂಗಮರ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವರಿಗೂ ಆಶ್ರಿತರಾಗುತ್ತಾರೆ. ಮುಂದೆ ಹಂಪೆ ವಿಜಯನಗರ ಎರಡರಲ್ಲೂ ಇವರ ರಚನೆಗಳೇ ಜಾಸ್ತಿಯಿವೆ. ಹೀಗಾಗಿ ಸಾಕಷ್ಟು ಸಂಖ್ಯೆಯ ವೈಷ್ಣವರು ಈ ಸಾಮ್ರಾಜ್ಯದ ರಾಜಧಾನಿಗೆ ಬಂದು ನೆಲೆಸಿರಬೇಕು. ನಂತರ ನರಸಿಂಹದೇವಾಲಯ, ರಾಮಚಂದ್ರ ದೇವಾಲಯಗಳು ಆರಂಭವಾದವು.

ನಂತರ ಅಚ್ಯುತದೇವರಾಯನ ದೇವಾಲಯವು ರಚಿತವಾಯಿತು. ಈ ಕಟ್ಟಡಗಳಲ್ಲೆಲ್ಲಾ ಬೃಹತ್ ರಚನೆಯೆಂದರೆ ವಿಠಲ ದೇವಾಲಯ, ಶ್ರೀ ವೈಷ್ಣವರ ಪ್ರಭಾವ ವಿಜಯನಗರ ತುಳುವರ ಕಾಲದಲ್ಲಿ ಉನ್ನತಮಟ್ಟದಲ್ಲಿತ್ತು. ಕ್ರಿ.ಶ.೧೫೦೦ರ ನಂತರ ವೈಷ್ಣವ ಧರ್ಮ ಮತ್ತು ಸಂಸ್ಕೃತಿಗೆ ವಿಶೇಷವಾದ ರಾಜಾಶ್ರಯ ದೊರೆಯಲಾಗಿ, ಹಂಪೆಯಲ್ಲಿ ಭವ್ಯ ದೇವಾಲಯಗಳು

ನಿರ್ಮಾಣಗೊಂಡವು. ವೈಷ್ಣವ ದೇವಾಲಯಗಳ ನಿರ್ಮಾಣ ನಿರ್ವಹಣೆಗೆ ವ್ಯಾಪಾರಿ ಬಣಗಳಾದ ಸೆಟ್ಟಿ ಪಟ್ಟಣಸ್ವಾಮಿಗಳು ದಾನಗಳನ್ನು ನೀಡಿದ ಉಲ್ಲೇಖಗಳು ಈ ಪ್ರಬಂಧದಲ್ಲಿ ಗಮನಿಸಲಾಗಿದೆ, ಸೆಟ್ಟಿಕುಲದವರ ಧಾರ್ಮಿಕ ಮನೋಭಾವ, ದೇವರ ಮೇಲೆ ಇಟ್ಟಿರುವ ಭಕ್ತಿ-ಭಾವ ವಿಶೇಷವೆನಿಸುತ್ತದೆ.

ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮವೆಂದರೆ ಶೈವಧರ್ಮ. ಶೈವ ಧರ್ಮದಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತದೆ. ವಿಜಯನಗರದಲ್ಲಿ ಮತೀಯ ಸ್ವಾತಂತ್ರ್ಯವಿದ್ದು ಇದೊಂದು ಜಾತ್ಯಾತೀತ ರಾಜ್ಯ ಎನಿಸಿತ್ತು. ವಿಜಯನಗರದ ಅರಸರು ಶೈವರಾಗಿದ್ದರೂ ಎಲ್ಲ ಧರ್ಮದ ಸಮನ್ವಯಿಗಳಾಗಿದ್ದರು. ಶೈವ ದೇವಾಲಯಕ್ಕೆ ಶೆಟ್ಟಿಕುಲದವರು ಕೊಟ್ಟ ಕೊಡುಗೆಗಳನ್ನು ಈ ಪ್ರಬಂಧದಲ್ಲಿ ಅಭ್ಯಸಿಸಲಾಗಿ, ಸೆಟ್ಟಿಕುಲದವರ ಕೊಡುಗೆ ಅಪಾರವಾಗಿದೆ ಎಂದೆನಿಸದೇ ಇರದು.

ಕ್ರಿ.ಶ.೧೪೪೪ನೇ ಒಂದು ಶಾಸನದ ಪ್ರಕಾರ ತಿಮ್ಮಣ್ಣವೊಡೆಯ ಬಾರಕೂರು ರಾಜ್ಯವನ್ನು ಆಳುವಾಗ, ಹಲವಾರು ಸೆಟ್ಟಿಕಾರರು ಬಸರೂರಿನ ಪಡುವಕೇರಿಯ ಭೂಮಿಯನ್ನು ಸಂಕರಸೆಟ್ಟಿಯ ಮಗ ನಾರಾಣಸೆಟ್ಟಿಗೆ ಕೊಟ್ಟು, ಆ ಭೂಮಿಯನ್ನು ನಖರೇಶ್ವರ ದೇವರ ಸೇವೆಗೆ ಉಪಯೋಗಿಸಬೇಕು ಎಂದು ಹೇಳಿರುವಲ್ಲಿ ಸೆಟ್ಟಿಕಾರರ ಭಕ್ತಿ, ಶ್ರದ್ಧೆಯ ಮನೋಭಾವ ವ್ಯಕ್ತವಾಗುತ್ತದೆ. ಈ ಪ್ರಬಂಧದಲ್ಲಿ ಶೆಟ್ಟಿಗಳು ಶೈವ ದೇವಾಲಯಕ್ಕೆ ನೀಡಿರುವ ಕೊಡುಗೆಗಳನ್ನು ಅನೇಕ ಶಾಸನಗಳ ಉಲ್ಲೇಖದಿಂದ ಮಹಾಪ್ರಬಂಧದಲ್ಲಿ ವ್ಯಕ್ತಪಡಿಸಿರುವೆನು.

'ನ್ಯಾಯ' ಎನ್ನುವ ಪದ ವಿಶಾಲ ಅರ್ಥದ ಮತ್ತು ಪವಿತ್ರವಾದ ಪದವಾಗಿದೆ. ನ್ಯಾಯದ ಆಧಾರದ ಮೇಲೆಯೇ ಜಗತ್ತು ನಿಂತಿದೆ. ನಿಷ್ಪಕ್ಷಪಾತವಾದ ನ್ಯಾಯವನ್ನು ಒದಗಿಸಲು ಅಪಾರ ಅನುಭವದ ಅವಶ್ಯಕತೆಯಿದೆ. ನ್ಯಾಯವು ಕಟ್ಟಿಗೆಯಲ್ಲಿರುವ ಉರುವಲಿನಂತೆ. ಹಾಲಿನಲ್ಲಿರುವ ಬೆಣ್ಣೆಯಂತೆ ಹುಡುಕಿ ತೆಗೆಯಬೇಕು. ನ್ಯಾಯವು ದಯೆಯ ಹೃದಯದಲ್ಲಿದೆಯೆಂದು ಹೇಳುವುದುಂಟು. ಮೆತ್ತನೆಯ ಗಾದೆಯ ಮೇಲೆ ಮಲಗುವವರ ಮತ್ತು ಬರೀ ನೆಲದ ಮೇಲೆ ಮಲಗುವವರ ಕನಸುಗಳಲ್ಲಿ ಯಾವ ಅಂತರವೂ ಇಲ್ಲವೆಂದ ಮೇಲೆ ನ್ಯಾಯ ಪ್ರಭುವಿನ ನ್ಯಾಯಾಲಯದಲ್ಲಿ ಪೂರ್ಣ ವಿಶ್ವಾಸದ ಮೇಲೆ ನಿಂತಿರುತ್ತದೆ. ಇಂಥ ಪವಿತ್ರವಾದ ನ್ಯಾಯ ತೀರ್ಮಾನಕಾರರಾಗಿ ಸೆಟ್ಟಿ ಕುಲದವರು ವಹಿಸಿದ ಪಾತ್ರ ಈ

ಪ್ರಬಂಧದಲ್ಲಿ ಚರ್ಚಿಸಲಾಗಿದೆ. ನ್ಯಾಯದ ಬಗ್ಗೆ ಸೆಟ್ಟಿ ಕುಲದವರು ತೋರಿದ ಮನೋಭಾವ ಇಂದಿನ ಸಮಾಜಕ್ಕೆ ಕಳಶಪ್ರಾಯವಾಗಲೆಂದು ಆಶಿಸಿ ಚರ್ಚಿಸಲಾಗಿದೆ. ನ್ಯಾಯ ಬಗೆಹರಿಸುವ ದಿಸೆಯಲ್ಲಿ ದೇಶದಲ್ಲಿ ಸಂಭವಿಸುವ ಧರ್ಮವ್ಯಾಜ್ಯ ಬಗೆಹರಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಅಧಿಕಾರವನ್ನು ರಾಜನು ಸೆಟ್ಟಿಗಳಿಗೆ ಅಂದರೆ ವರ್ತಕರಿಗೆ ನೀಡುತ್ತಿದ್ದನು. ದಾಯಾದಿ ಕಲಹವನ್ನು ಸೆಟ್ಟಿಕುಲದವರು ಪರಿಹರಿಸಿರುವ ಕ್ರಿ.ಶ.೧೪೩೧ರ ವಿಜಯನಗರದ ದೇವರಾಯನ ಕಾಲದ ಶಾಸನದಲ್ಲಿ ತಿಳಿದುಬರುತ್ತದೆ.

ಒಂದು ಸಮಾಜವನ್ನು ನಾವು ಅವಲೋಕಿಸಿದಾಗ ಅಲ್ಲಿಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ನಮಗೆ ತಿಳಿಯಬೇಕಾದರೆ ನಾವು ಇತಿಹಾಸದ ಮೊರೆ ಹೋಗಬೇಕಾಗುತ್ತದೆ. ಯಾವುದೇ ಒಂದು ಸಮಾಜವನ್ನು ತೆಗೆದುಕೊಂಡಾಗ ಅದು ಹಿಂದಿನ ಕಾಲದಿಂದ ಆಧುನಿಕ ಕಾಲದವರೆಗೆ ಮಾಡಿದ ಸಾಧನೆಗಳು ನಮಗೆ ಸ್ಪಷ್ಟವಾಗುತ್ತವೆ. ಒಳ್ಳೆಯ ಸಮಾಜವು ಶರೀರವಿದ್ದಂತೆ. ದುಃಖಿತರನ್ನು ರಕ್ಷಿಸಬೇಕಾಗುತ್ತದೆ ಎನ್ನುವ ಮಾತಿನಿಂದ ಸಮಾಜದ ಪ್ರಾಮುಖ್ಯತೆಯು ತಿಳಿಯದೇ ಇರದು. ನೈತಿಕ ಗುಣದಿಂದ ಕೂಡಿದ ಸಮಾಜ ಸುಖಿಯಾಗಿರಬಲ್ಲದು. ಒಬ್ಬರನ್ನೊಬ್ಬರು ಹಾರ್ದಿಕ ಭಾವನೆಯಿಂದ ಸನ್ಮಾನಿಸುವ ಸಮಾಜವೇ ಸುಖೀ ಸಮಾಜ. ಇಂಥ ಸಮಾಜವನ್ನು ಕಾಲ ಕಾಲಕ್ಕೆ ಮಹನೀಯರು ತಮ್ಮ ಸ್ವಪ್ರಯತ್ನದಿಂದ ಸಮಾಜದ ಒಳಿತನ್ನು ಬಯಸಿ, ಆ ದಿಸೆಯಲ್ಲಿ ಮುನ್ನಡೆಯುವರು.

ಜಾತಿ, ಧರ್ಮ, ಪಂಥಗಳ ಬೇಧವಿಲ್ಲದೆ ಮಹಾತ್ಮರು ಸಮಾಜದ ಏಳ್ಗೆಗಾಗಿ ಶ್ರಮಿಸಿದ್ದಾರೆ. ಸಮಾಜದ ಏಳ್ಗೆಯಲ್ಲಿ ಸಮಾಜದ ಜನರ ಹಿತವಿದೆ. ಸಮಾಜ ಮತ್ತು ಮನುಷ್ಯನಲ್ಲಿ ಬಿಡಿಸಲಾರದ ನಂಟಿದೆ, ಅವಿನಾಭಾವ ಸಂಬಂಧವಿದೆ. ಇಂಥ ಸಮಾಜಕ್ಕೆ ಸೆಟ್ಟಿ ಕುಲ ನೀಡಿದ ಕೊಡುಗೆಯನ್ನು ಜಲಸಂಬಂಧಿ ಕೊಡುಗೆಗಳಾದ ಕೆರೆ ಕಟ್ಟೆ ನಿರ್ಮಾಣ, ನಿರ್ವಹಣೆ, ಬಾವಿ, ಕೊಳ, ಅರವಟಿಗೆ ನಿರ್ಮಾಣ ನಿರ್ವಹಣೆ ಬಗ್ಗೆ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಇದು ಸಮಾಜದ ಜನರಿಗೆ ಸ್ಫೂರ್ತಿಯಾಗಿರಲೆಂದು ನನ್ನ ಆಶಯವಾಗಿದೆ. ಮನುಷ್ಯನ ಜೀವನಕ್ಕೆ ನೀರು ಅತ್ಯವಶ್ಯ. ಜಲದಿಂದಲೇ ದಾನ ಧರ್ಮಕ್ಕೆ ಹೆಚ್ಚಿನ ಮಹತ್ವವಿದೆ. ಹಿಂದಿನ ಕಾಲದಿಂದ ಇಲ್ಲಿಯವರೆಗೂ ಅವಲೋಕಿಸಿದಾಗ, ಜಲಸಂಬಂಧಿತವಾದ ಕೊಡುಗೆಗಳು ಸಮಾಜದ ಜನರ ಕಲ್ಯಾಣಕ್ಕಾಗಿ ಕೊಡಲ್ಪಟ್ಟಿವೆ. ಅನೇಕ ರಾಜರುಗಳು ಈ ದಿಸೆಯಲ್ಲಿ ಸಮಾಜದ ಜನರಿಗೆ ಸಹಾಯ ಮಾಡಿದ್ದಾರೆ. ಸೆಟ್ಟಿ ಕುಲವು ಈ ದಿಸೆಯಲ್ಲಿ ಮಾಡಿದ

ಸಾಮಾಜಿಕ ಕೊಡುಗೆಗಳಲ್ಲೊಂದಾದ ಜನಸಂಬಂಧಿತ ಕೊಡುಗೆಯನ್ನು ಸಮಾಜಕ್ಕೆ ತಿಳಿಸುವ ಪ್ರಯತ್ನ ಮಾಡಿರುವೆನು.

ಸೆಟ್ಟಿಗಳು ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ಸತ್ಕಾರ್ಯಗಳಿಗೆ ವಿನಿಯೋಗಿಸಿದ್ದಾರೆ. ವೈದಿಕ, ಜೈನ, ಶೈವಮತದ ಸೆಟ್ಟಿಗಳು ಮತ, ವರ್ಗ, ವರ್ಣ ಮತ್ತು ವಯಸ್ಸುಗಳು ತಾರತಮ್ಯವಿಲ್ಲದೆ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ದೇವಾಲಯದ ವಿವಿಧ ಕಾರ್ಯಗಳಿಗೆ ದಾನ ಮಾಡಿದುದು ಅನುಕರಣೀಯ, ಆದರ್ಶನೀಯ. ಇಂಥಹ ಧಾರ್ಮಿಕ ಕಾರ್ಯ ಪ್ರಸಂಗಗಳಲ್ಲಿ ತೋರಿಬರುವ ಸೆಟ್ಟಿ ಕುಲದವರ ಭಕ್ತಿಭಾವ, ಧಾರ್ಮಿಕ ಶ್ರದ್ಧೆ, ತ್ಯಾಗಗುಣ, ಸ್ವಮತಾಭಿಮಾನ, ಪರಮತ ಪುರಸ್ಕಾರಗಳನ್ನು ಶಾಸನಗಳು ತಿಳಿಯಪಡಿಸಿವೆ. ಐದನೆಯ ಅಧ್ಯಾಯದಲ್ಲಿ ವಿಜಯನಗರ ಕಾಲದ ಶಾಸನಗಳಲ್ಲಿ ಉತ್ತಮವಾಗಿರುವ ಸೆಟ್ಟಿಗಳ ಕಲ್ಯಾಣಕರ ಕಾರ್ಯಗಳಂತೆ ವಿವಿಧ ರಾಜಮನೆತನಗಳ ಶಾಸನಗಳ ಕಾಲದಲ್ಲಿ ಆಗಿರುವ ಜನಹಿತ ಕೈಂಕರ್ಯಗಳನ್ನು ತೌಲನಿಕವಾಗಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಕ್ರಿ.ಶ.೧೩೩೬ ರಿಂದ ೧೬೭೨ರವರೆಗಿನ ವಿಜಯನಗರ ಅರಸರ ಶಾಸನ ಗಳನ್ನು ಆಧಾರವಾಗಿ ಬಳಸಿಕೊಂಡು ಸೆಟ್ಟಿಕುಲದ ಪರಿಚಯ, ಶಾಸನಗಳಲ್ಲಿ ಸೆಟ್ಟಿಕುಲದ ಸ್ಥಾನಮಾನ, ಅವರ ಸಮಾಜಹಿತ ಕಾರ್ಯಗಳು ಮತ್ತು ಧಾರ್ಮಿಕ ಕಾರ್ಯಗಳನ್ನು ಬಿಂಬಿಸುವ ಪ್ರಯತ್ನ ಮಾಡಲಾಗಿದೆ. ಶಾಸನಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಅವುಗಳಿಂದ ಸಿಕ್ಕ ವಿಷಯಗಳನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿ ಸೆಟ್ಟಿಕುಲದವರ ವಿವಿಧ ಮಗ್ಗಲುಗಳಿಂದ ಅಧ್ಯಯನವನ್ನು ಮಾಡಲಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ಪ್ರಮುಖ ಶಾಸನ ಪಠ್ಯಗಳು
೩. ನಕ್ಷೆಗಳು
೪. ರೇಖಾಚಿತ್ರಗಳು
೫. ಛಾಯಾಚಿತ್ರಗಳು

ಒಂದು

ಪರಾಮರ್ಶನ ಗ್ರಂಥಗಳು

೧. ಅಣ್ಣಿಗೇರಿ ಎ.ಎಂ.(ಸಂ) **ಡಾ.ಜೆ.ಎಫ್.ಫ್ಲೀಟ್**, ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು, ೧೯೮೯

೨. ಅಣ್ಣಿಗೇರಿ ಎ.ಎಂ.(ಸಂ), **ಶಾಸನ ಸಂಗ್ರಹ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭

೩. ಅ.ನ.ಕೃ.,(ಸಂ), **ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೪. ಅಮರೇಶ ನುಗಡೋಣಿ(ಸಂ), **ಕನ್ನಡ ಸಂಶೋಧನೆಯ ವೈಧಾನಿಕತೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಆಲಂಪಲ್ಲಿ ಎಸ್.ವಿಷ್ಣುಭಾರತ್, **ಆರ್ಯವೈಶ್ಯ**, ಓಂಕಾರ ಆಫ್‌ಸೆಟ್ ಬೆಂಗಳೂರು, ೨೦೦೮

೬. ಇಂದ್ರಾಣಿ ನಂದಕುಮಾರ್, **ಶ್ರೀ ಕನ್ಯಕಾಪರಮೇಶ್ವರಿ ಸಂಕ್ಷಿಪ್ತ ಪುಣ್ಯ ಪುರಾಣ**, ಕರ್ನಾಟಕ ಆರ್ಯವೈಶ್ಯ ಮಹಾಸಭೆ, ಬೆಂಗಳೂರು ೨೦೧೦

೭. ಕಲಬುರ್ಗಿ ಎಂ.ಎಂ., **ಧಾರವಾಡ ತಾಲ್ಲೂಕಿನ ಶಾಸನಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೮. ಕಲಬುರ್ಗಿ ಎಂ.ಎಂ., **ಶಾಸನ ಸೂಚಿ: ವಿಜಾಪುರ ಜಿಲ್ಲೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೯. ಕಲಬುರ್ಗಿ ಎಂ.ಎಂ., **ಸಮಾಧಿ-ಬಲಿದಾನ-ವೀರಮರಣ-ಸ್ಮಾರಕಗಳು**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦

೧೦. ಕಲಬರ್ಗಿ ಎಂ.ಎಂ., **ಮಾರ್ಗ ೧ ಮತ್ತು ೨**, ನರೇಶ್ ಆ್ಯಂಡ್ ಕಂಪನಿ, ಬೆಂಗಳೂರು, ೧೯೯೮

೧೧. ಕಲಬುರ್ಗಿ ಎಂ.ಎಂ., **ಮಹಾಮಾರ್ಗ(ಅಭಿನಂದನಾ ಗ್ರಂಥ)**, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೮

೧೨. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ, ೧೯೭೦

೧೩. ಕೃಷ್ಣಮೂರ್ತಿ ಪಿ.ವಿ., **ತಮಿಳುನಾಡಿನ ಕನ್ನಡ ಶಾಸನಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೭

೧೪. ಕೃಷ್ಣಮೂರ್ತಿ ಪಿ.ವಿ., **ನಿತ್ಯ ಕರ್ಮಾನುಷ್ಠಾನ ದರ್ಪಣ ಮತ್ತು ವಾಸವಿ ಕನ್ಯಕಾವ್ರತಕಥೆ**, ಕುಸುಮಾ ಜನರಲ್ ಸ್ಟೋರ್ಸ್, ಬೆಂಗಳೂರು, ೨೦೦೧

೧೫. ಕೃಷ್ಣರಾಯ ಕಪಟರಾಳ, **ಕರ್ನಾಟಕ ಲಾಕುಳ ಶೈವರ ಇತಿಹಾಸ**, ಕರ್ನಾಟಕ ಇತಿಹಾಸ ಅಕಾಡೆಮಿ, ಧಾರವಾಡ, ೧೯೫೫

೧೬. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ ಎಂ., **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೩೦

೧೭. ಕೊಟ್ರಯ್ಯ ಸಿ.ಟಿ.ಎಂ., **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೮. ಕೊಟ್ರಯ್ಯ ಸಿ.ಟಿ.ಎಂ., **ಹಂಪೆ: ಶಿಲಾಯುಗ ಸಂಸ್ಕೃತಿ ಕ್ರಿಸ್ತ ಶತಾಬ್ಧ ಆರಂಭ: ಶಾಸನಗಳಲ್ಲಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೯. ಗುರುಮೂರ್ತಿ ಪೆಂಡಕೂರ್, **ಅನೇಕಮುಖಿ,** ಯುವಕರ ಸಂಘ, ಹಗರಿಬೊಮ್ಮನಹಳ್ಳಿ, ೨೦೦೭

೨೦. ಗೋಪಾಲರಾವ್ ಎಚ್.ಎಸ್.(ಸಂ), **ಇತಿಹಾಸದ ಪರಾಮರ್ಶೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು

೨೧. ಚನ್ನಬಸವ ಹಿರೇಮಠ, **ರಾಯಚೂರು-ಕೊಪ್ಪಳ ಜಿಲ್ಲೆಯ ಶಾಸನಗಳು,** ಚೇತನ ಪ್ರಕಾಶನ, ಮಸ್ಕಿ, ೧೯೯೯

೨೨. ಚನ್ನಬಸಪ್ಪ ಎಸ್.ಪಾಟೀಲ್(ಸಂ), **ವಿಜಯನಗರದ ಶಾಸನಗಳು,** ಕರ್ನಾಟಕದ ಶಾಸನಗಳು, ಸಂಪುಟ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೨೩. ಚೆನ್ನಕ್ಕ ಪಾವಟೆ, **ಕರ್ನಾಟಕದ ಶಾಸನೋಕ್ತ ಮಹಿಳೆ(ಸಮೀಕ್ಷೆ-ಸಂಸ್ಕೃತಿ),** ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ, ಧಾರವಾಡ, ೨೦೦೭

೨೪. ಚೆನ್ನಕ್ಕ ಎಲಿಗಾರ, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೨೫. ಚಿದಾನಂದಮೂರ್ತಿ ಎಂ., **ವೀರಶೈವ ಧರ್ಮ ಭಾರತೀಯ ಸಂಸ್ಕೃತಿ,** ಮಿಂಚು ಪ್ರಕಾಶನ, ಬೆಂಗಳೂರು, ೨೦೦೦

೨೬. ಚಿದಾನಂದಮೂರ್ತಿ ಎಂ., **ಹೊಸತು ಹೊಸತು,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೭೩

೨೭. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬

೨೮. ಚಂದ್ರಪೂಜಾರಿ ಎಂ., **ಸಮಾಜ ಸಂಶೋಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೨೯. ಚಂದ್ರಪೂಜಾರಿ ಎಂ., **ಸಂಶೋಧನ ಜವಾಬ್ದಾರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೩೦. ಚಂದ್ರಪೂಜಾರಿ ಎಂ., **ಸಂಶೋಧನೆ ಏನು? ಏಕೆ? ಹೇಗೆ?**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೩೧. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೭೪

೩೨. ದಸ್ತಗೀರ್‌ಸಾಬ್‌ದಿನ್ನಿ, **ಸಂಸ್ಕೃತಿ ಮಹಿಳಾ ಮಾಲಿಕೆ**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೯

೩೩. ದೀಕ್ಷಿತ್ ಜಿ.ಎಸ್.(ಸಂ), **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೪. ದೇವರಕೊಂಡಾರೆಡ್ಡಿ, **ಹಂಪಿ ಸಂಪುಟ:ಕಲೆ, ಕ್ರೀಡೆ ಮತ್ತು ಕೌಶಲ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬

೩೫. ದೇವರಕೊಂಡಾರೆಡ್ಡಿ, ಡಿ.ವಿ.ಪರಮಶಿವಮೂರ್ತಿ(ಸಂ), **ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೩೬. ದೇವರಕೊಂಡಾರೆಡ್ಡಿ(ಸಂ), **ಶಾಸನ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೩೭. ದೇವರಕೊಂಡಾರೆಡ್ಡಿ(ಸಂ), **ತುಳುನಾಡಿನ ಜೈನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೩೮. ದೇಸಾಯಿ ಪಿ.ಬಿ., **ಕನ್ನಡನಾಡಿನ ಶಾಸನಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೭

೩೯. ನರೇಗಲ್ ಎಂ.ಎಸ್., **ಉತ್ತರ ಗದಗ ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ,** ರವಿರಶ್ಮಿ ಪ್ರಕಾಶನ, ಗದಗ, ೨೦೦೯

೪೦. ನಾಗಭೂಷಣ ಸಿ., **ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ,** ಅಮೃತವರ್ಷಿಣಿ ಪ್ರಕಾಶನ, ನಂದಿಹಳ್ಳಿ, ಸಂಡೂರು, ೧೯೯೯

೪೧. ನಾಗಭೂಷಣ ಸಿ., **ಶಾಸನಗಳು ಮತ್ತು ಕನ್ನಡ ಸಾಹಿತ್ಯ,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೪೨. ನಾಗಯ್ಯ ಜೆ.ಎಂ., **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,** ವೀರಶೈವ ಅಧ್ಯಯನ ಅಕಾಡೆಮಿ, ಧಾರವಾಡ, ೧೯೯೨

೪೩. ನಾಗಯ್ಯ ಜೆ.ಎಂ., **ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ,** ವೀರಶೈವ ಅಧ್ಯಯನ ಅಕಾಡೆಮಿ, ಧಾರವಾಡ, ೧೯೯೨

೪೪. ನಂಜುಂಡಸ್ವಾಮಿ ಎ.ಎಸ್., **ಹೊಯ್ಸಳರ ಇತಿಹಾಸ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೮೦

೪೫. ಪರಮಶಿವಮೂರ್ತಿ ಡಿ.ವಿ., **ಶಾಸನ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೪೬. ಪರಮಶಿವಮೂರ್ತಿ ಡಿ.ವಿ., **ತುಟುಗೊಳ್ ಸಂಕಥನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೪೭. ಪರಮಶಿವಮೂರ್ತಿ ಡಿ.ವಿ., **ಶಾಸನಗಳ ಅಧ್ಯಯನ(ಸಂಯುಕ್ತ ಸಂಚಿಕೆ),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೪೮. ಪರಮಶಿವಮೂರ್ತಿ ಡಿ.ವಿ., **ಶಾಸನ ಸಂಶೋಧನೆ,** ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೪

೪೯. ಪರಮಶಿವಮೂರ್ತಿ ಡಿ.ವಿ., **ಪ್ರೌಢದೇವರಾಯನ ಶಾಸನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೫೦. ಪರಮಶಿವಮೂರ್ತಿ ಡಿ.ವಿ., **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೫೧. ಪರಮಶಿವಮೂರ್ತಿ ಡಿ.ವಿ., **ಕೃಷ್ಣದೇವರಾಯನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೫೨. ಪುರುಷೋತ್ತಮ ರಾ.ಲ., **ಆಚಾರ-ವಿಚಾರ**, ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಬೆಂಗಳೂರು, ೨೦೧೦

೫೩. ಪಾಂಡುರಂಗರಾವ್ ದೇಸಾಯಿ, **ಹಂಪೆ**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು ೧೯೭೧

೫೪. ಬಸವರಾಜಸ್ವಾಮಿ, **ಬೆಳಕಿನ ಬಳ್ಳಿ**, ಶ್ರೀ ಬಸವ ಸೇವಾ ಪ್ರತಿಷ್ಠಾನ, ೨೦೧೧

೫೫. ಬಸವರಾಜ ಕಲ್ಗುಡಿ, **ಮಹಾಸತಿ ಆಚರಣೆ ಒಂದು ಅಧ್ಯಯನ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೫

೫೬. ಭಟ್‌ಸೂರಿ ಕೆ.ಜಿ., **ಗೇರುಸೊಪ್ಪೆಯ ಜೈನ ವಾಸ್ತು ಮತ್ತು ಮೂರ್ತಿಶಿಲ್ಪ**, ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬

೫೭. ಭಟ್‌ಸೂರಿ ಕೆ.ಜಿ., **ಕರ್ನಾಟಕ ಶಾಸನ ಸಂಶೋಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೫೮. ಭಗವತ್ ಶರಣ ಉಪಾಧ್ಯಾಯ, **ಭಾರತೀಯ ಬಹುಮುಖಿ ಸಂಸ್ಕೃತಿ**, ಎಚ್.ಎಸ್. ಗೋಪಾಲರಾವ್(ಅನು), ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫

೫೯. ಮಹಾದೇವ ಸಿ.(ಸಂ), **ಹಂಪಿ:ಅಂದು-ಇಂದು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೬೦. ಮುರಿಗೆಪ್ಪ ಎ(ಸಂ), **ಕೃಷ್ಣದೇವರಾಯನ ಆಯ್ದ ಲೇಖನ ಸಂಪುಟ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೬೧. ಮೇವುಂಡಿ ಮಲ್ಲಾರಿ, ಕನ್ನಡ ಶಾಸನ ಕವಿಗಳು, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೯೩

೬೨. ಮಂಜುನಾಥ ಎಂ.ಜಿ(ಸಂ), **ಕನ್ನಡ ಲಿಪಿಶಾಸ್ತ್ರ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೬೩. ರಮೇಶ ಕೆ.ವಿ., **ತುಳುನಾಡಿನ ಇತಿಹಾಸ**, ಗೀತಾಬುಕ್ ಹೌಸ್, ಮೈಸೂರು, ೧೯೬೮

೬೪. ರಮೇಶ ಕೊ.ವ್ಯಾ., **ಕರ್ನಾಟಕ ಶಾಸನ ಸಮೀಕ್ಷೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೧

೬೫. ರಹಮತ್ ತರೀಕೆರೆ, **ಕನ್ನಡ ಸಂಶೋಧನೆ ತಾತ್ವಿಕ ವಿಚಾರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೬೬. ರವೀಂದ್ರನಾಥ ಕೆ.(ಸಂ), **ಅಧ್ಯಯನದ ವಿಧಿ-ವಿಧಾನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೬೭. ರಾಬರ್ಟ್‌ಸಿವಿಲ್(ಸಂ), **ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ**, ಸದಾನಂದ ಕನವಳ್ಳಿ(ಅನು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೬೮. ರಿತ್ತಿ ಶ್ರೀನಿವಾಸ, **ಆಡಳಿತ ಪರಿಭಾಷಕೋಶ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ಮೈಸೂರು, ೨೦೦೦

೬೯. ಲಕ್ಷ್ಮಣ್ ತೆಲಗಾವಿ(ಸಂ), **ಜೋಯಿಸರ ಐತಿಹಾಸಿಕ ಲೇಖನಗಳು**, ಚಿತ್ರದುರ್ಗ, ೧೯೭೬

೭೦. ವಾಸುದೇನ್ ಸಿ.ಎಸ್., **ಕನ್ನಡ ಇನ್‌ಸ್ಕ್ರಿಪಶನ್ಸ್ ಆಫ್ ಆಂಧ್ರಪ್ರದೇಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೭೧. ವಾಸುದೇವನ್ ಸಿ.ಎಸ್., **ಹಂಪಿ ಪರಿಸರದ ಕೆರೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೭೨. ವೀರೇಶ ಬಡಿಗೇರ, **ಬೆಂಗಳೂರು ನಗರದ ವೀರಶೈವ ಮಠಗಳು: ಒಂದು ಸಾಂಸ್ಕೃತಿಕ ಅಧ್ಯಯನ**, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು

೭೩. ವೀರೇಶ ಬಡಿಗೇರ, **ಹಸ್ತಪ್ರತಿ ವ್ಯಾಸಂಗ ೫**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೭೪. ವೀರಭದ್ರಪ್ಪ ಬಿ.ವಿ., **ಶಿಕ್ಷಣ ಮತ್ತು ಸಂಸ್ಕೃತಿ**, ನವಕರ್ನಾಟಕ ಪ್ರಕಶನ, ಬೆಂಗಳೂರು, ೨೦೦೭

೭೫. ವೆಂಕಟಾಚಲಶಾಸ್ತ್ರಿ ಟಿ.ವಿ., **ಹಳೆಯ ಹೊನ್ನು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೭೬. ವೆಂಕಟಾಚಲಶಾಸ್ತ್ರ ಟಿ.ವಿ., **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೪

೭೭. ವೆಂಕಟಕೃಷ್ಣಯ್ಯ ಎನ್.ಜಿ., **ಆರ್ಯವೈಶ್ಯ ಮಾರ್ಗದರ್ಶಿ**, ವೇದಪ್ರಕಾಶನ, ನೆಲಮಂಗಲ, ೨೦೦೧

೭೮. ವೆಂಕಟಸುಬ್ಬಯ್ಯ ಜಿ., **ಕನ್ನಡ ಶಾಸನ ಪರಿಚಯ**, ಪ್ರತಿಭಾ ಪ್ರಕಟಣಾ ಮಂದಿರ, ಬೆಂಗಳೂರು, ೧೯೬೮

೭೯. ವೆಂಕಟೇಶ ಇಂದ್ವಾಡಿ, **ದೇವ-ದೇವಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೭೯ ಶ್ರೀನಿವಾಸ ರಿತ್ತಿ(ಸಂ), **ಕೊಲ್ಲಾಪುರ ಜಿಲ್ಲೆಯ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೮೦. ಶ್ರೀಕಂಠಯ್ಯ ಕೆ., **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ**, ಮೈಸೂರು, ೧೯೮೩

೮೧. ಶಿರೂರ್ ಬಿ.ಬಿ., **ಸಂಶೋಧನ ಸ್ವರೂಪ**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೮

೮೨. ಶೇಠ ಎನ್., **ಕರ್ನಾಟಕದಲ್ಲಿ ಸತಿಪದ್ಧತಿ**, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೧

೮೩. ಶೇಷಶಾಸ್ತ್ರಿ ಆರ್., **ಶಾಸನ ಪರಿಚಯ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೨

೮೪. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೮೫. ಶೈಲಾ ಟಿ.ವರ್ಮ, **ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಜ್ಞಾನೋದಯ ಪ್ರಕಾಶನ, ಬೆಂಗಳೂರು, ೨೦೦೨

೮೬. ಸಬರದ ಬಿ., **ಶಾಸನಗಳು: ಪ್ರಭುತ್ವ ಮತ್ತು ಜನತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೮೭. ಸರಗಣಾಚಾರಿ ಎಸ್.ಎಸ್., **ಸಮಾಜ ಅಧ್ಯಯನ**, ಜಯಶ್ರೀ ಪ್ರಕಾಶನ, ಬಾಗಲಕೋಟೆ, ೧೯೯೮

೮೮. ಸರಸ್ವತಿದೇವಿ ಎಸ್.ಭಗವಂತ, **ಹಂಪೆಯ ಶಾಸನಗಳು: ಒಂದು ಅಧ್ಯಯನ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಡ, ೨೦೦೭, ೨೦೦೮

೮೯. ಸಿದ್ದಲಿಂಗಪ್ಪ ಕೊಟ್ನೇಕಲ್, **ಕೊಪ್ಪಳ ಜಿಲ್ಲೆಯ ಶಾಸನಗಳು: ಸಾಂಸ್ಕೃತಿಕ ಅಧ್ಯಯನ**, ಮೇಘನಾ ಪ್ರಕಾಶನ, ಬಿ.ಟಿ.ಪಾಟೀಲನಗರ, ಕೊಪ್ಪಳ, ೨೦೧೦

೯೦. ಸೋಮಶೇಖರ ಎಸ್.ವೈ., **ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ**, ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯

೯೧. ಹನುಮಾಕ್ಷಿಗೋಗಿ, **ಸುರಪುರದ ತಾಲೂಕಿನ ಶಾಸನಗಳು**, ಮಹಿಳಾ ಸಾಹಿತ್ಯಿಕಾ ಮಹಾನಗರ, ಹುಬ್ಬಳ್ಳಿ, ೧೯೯೫

೯೨. ಹನುಮಾಕ್ಷಿಗೋಗಿ, **ಕಲ್ಬುರ್ಗಿ ಜಿಲ್ಲೆಯ ಶಾಸನಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೯೩. ಹಳ್ಳಿಕೇರಿ ಎಫ್.ಟಿ.(ಸಂ), **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ, ಸಂಪುಟ ೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೯೪. ಹಿರೇಮಠ ಬಿ.ಆರ್., **ಶಾಸನಗಳಲ್ಲಿ ಕರ್ನಾಟಕದ ವರ್ತಕರು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬

೯೫. ಹಿರೇಮಠ ಆರ್.ಸಿ., **ಕನ್ನಡ ಶಾಸನ ಸಂಪದ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪

೯೫. ಹಿರೇಮಠ ಎಸ್.ಎಸ್., **ಸಮಾಜ ಸಂಸ್ಕೃತಿ ಸಂಘರ್ಷ,** ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು, ೨೦೦೫

೯೬. ಹಿರೇಮಠ ಎಸ್.ಎಂ., **ಶಾಸನ ಪರಿಭಾಷೆ,** ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೫

೯೭. ಹಂಪನಾಗರಾಜಯ್ಯ, **ಕಡೆಗೋಲು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಲೇಖನಗಳು

೧. ಗೋಪಾಲ್ ಆರ್.(ಸಂ), **ವಿಜಯನಗರ ವಿಚಾರ ಸಂಕಿರಣ,** ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆ, ಮೈಸೂರು

೨. ನಾಗಭೂಷಣ ಸಿ., **ಶಾಸನಗಳು ಮತ್ತು ಸಾಹಿತ್ಯ ಪ್ರೇರಣೆ–ಪ್ರಭಾವಗಳು: ಅಂತರಶಿಸ್ತೀಯ ಅಧ್ಯಯನ**

೩. ಶೆಟ್ಟಿ ಎಸ್.ಡಿ.(ಸಂ), **ಮಹಾವೀರ,** ಮೂಡಬಿದಿರೆ ಶೆಟ್ಟರ ಬಸದಿಯ ಕೆಲವು ಚಾರಿತ್ರಿಕ ಅಂಶಗಳು, ಮಹಾವೀರ ಸಂಘ ರಜತೋತ್ಸವ ಸಂಚಿಕೆ, ಮೂಡಬಿದರೆ

೪. ಗುಪ್ತ ಡಿ.ವಿ., **ಆರ್ಯವೈಶ್ಯರು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು,** ವೈಶ್ಯ ಧರ್ಮ ಜ್ಯೋತಿ ಪತ್ರಿಕೆ, ತಿಪಟೂರು

೫. ಚಂದ್ರಶೇಖರ ನಂದಗಿರಿ ಸ್ವಾಮಿ, **ಸಮಾಜದಲ್ಲಿ ವೈಶ್ಯರು,** ವೈಶ್ಯಧರ್ಮ ಜ್ಯೋತಿ ಪತ್ರಿಕೆ

೬. ನಾಗರಾಜಶೆಟ್ಟಿ ಟಿ.ಎಸ್., **ಕನ್ನಡ ಸಾಹಿತ್ಯಕ್ಕೆ ಆರ್ಯವೈಶ್ಯ ಸಾಹಿತಿಗಳ ಕೊಡುಗೆ,** ವೈಶ್ಯಧರ್ಮ ಜ್ಯೋತಿ ಪತ್ರಿಕೆ

೭. ಸೀತಾರಾಮ್ ಜಾಗೀರಾದಾರ್(ಸಂ), **ಕನ್ನಡ ಶಾಸನದಲ್ಲಿ ಜಿನಸೇನ ಹಾಗೂ ಗುಣಭದ್ರರು,** ಮೂ.ಕ., ಸಂ.೧೬, ಸಂಚಿಕೆ ೧, ೧೯೮೫

೮. ಶೆಟ್ಟರ್ ಡಿ.ಎಸ್., **ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕ ಧಾರ್ಮಿಕ ಸಾಮಾಜಿಕ ಜೀವನ,** ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೩

೯. ಚೆನ್ನಕ್ಕ ಪಾವಟೆ, **ಶಾಸನಗಳಲ್ಲಿ ಸ್ತ್ರೀ ಸ್ಥಾನಮಾನ ಮತ್ತು ಸಾಮಾಜಿಕ ಸಂಬಂಧ,** ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಸ್ವರೂಪ, ಸಾಹಿತ್ಯ ಪುನರ್ಮೌಲೀಕರಣ ಮಾಲೆ

೧೦. ನಾಗರಾಜ್ ಎಂ.ಜಿ., ಹಾಸನ ಜಿಲ್ಲೆಯ ವೀರಶೈವ ಮಠಗಳು, ಇತಿಹಾಸ ದರ್ಶನ, ಸಂ.೧೨, ೧೯೯೭

ಪತ್ರಿಕೆಗಳು

೧. ಇತಿಹಾಸದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೨. ಕರ್ನಾಟಕ ಭಾರತಿ, ಧಾರವಾಡ

೩. ಶಾಸನ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಚರಿತ್ರೆ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ದೇವಶ್ರೀ, ನೆನಪಿನ ಸಂಚಿಕೆ, ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ

೬. ಆರ್ಯವೈಶ್ಯ ಜ್ಯೋತಿ, ಬೆಂಗಳೂರು

೭. ಚಿರಂತನ ವೈಶ್ಯ ಪ್ರಭಾ, ಬೆಂಗಳೂರು

೮. ಮಾನವಿಕ ಕರ್ನಾಟಕ, ಮೈಸೂರು

೯. ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ

೧೦. ಕ್ವಾರ್ಟಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಬೆಂಗಳೂರು

೧೧. ವೈಶ್ಯ ವಾರ್ತಾಪತ್ರಿಕೆ, ಬೆಂಗಳೂರು

ಶಾಸನ ಸಂಪುಟಗಳು

೧. ಎಪಿಗ್ರಾಫಿಯಾ ಕರ್ನಾಟಿಕಾ(ರೈಸ್)ಸಂಪುಟಗಳು, ಸಪ್ಲಿಮೆಂಟರಿಗಳು ೧–೧೮

೨. ಎಪಿಗ್ರಾಫಿಯಾ ಕರ್ನಾಟಿಕಾ(ಪರಿಷ್ಕೃತ) ಸಂಪುಟಗಳು ೧–೧೩

೩. ಎಪಿಗ್ರಾಫಿಯಾ ಇಂಡಿಕಾ

೪. ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್

೫. ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂ.೪

೬. ಆನ್ಯುಯಲ್ ರಿಪೋರ್ಟ್ಸ್ ಆಫ್ ಮೈಸೂರು ಆರ್ಕಾಲಾಜಿಕಲ್ ಡಿಪಾರ್ಟ್‌ಮೆಂಟ್, ೧೯೦೮, ೧೯೧೮, ೧೯೨೮, ೧೯೩೪

೭. ಇಂಡಿಯನ್ ಆಂಟಿಕ್ವೈರಿ ವಾಲ್ಯೂಂ ೨, ೧೯೨೩

೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ

೧೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ ಶಾಸನಗಳು

೧೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೪, ತಮಿಳುನಾಡಿನ ಶಾಸನಗಳು

೧೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಆಂಧ್ರಪ್ರದೇಶದ ಕನ್ನಡ ಶಾಸನಗಳು ೨

೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ರಾಯಚೂರು ಜಿಲ್ಲೆ

೧೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ಬೀದರ್ ಜಿಲ್ಲೆ

೧೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಬಾಗಲಕೋಟೆ ಜಿಲ್ಲೆ

೧೬. ಎಂ.ಎ.ಆರ್. ಸ್ಟಡಿ ಬೈ ಶೆಟ್ಟರ್ ಎಸ್.ಡಿಪಾರ್ಟ್‌ಮೆಂಟ್ ಆಫ್ ಹಿಸ್ಟರಿ ಆಂಡ್ ಆರ್ಕಿಯಾಲಜಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂಪುಟ ೩

೧೭. ವಿಜಯನಗರ ಅಧ್ಯಯನ ಸಂಪುಟಗಳು, ೧–೧೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು,

೧೮. ವಿಜಾಪುರ ಜಿಲ್ಲೆ: ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ(ಬಾಗಲಕೋಟೆ ಜಿಲ್ಲೆ ಸೇರಿದಂತೆ)ಪರಿಷ್ಕೃತ ಆವೃತ್ತಿ

೧೯. ಚರಿತ್ರೆ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨

ಪ್ರಮುಖ ಶಾಸನ ಪಠ್ಯಗಳು

೧

ನಾಗಮಂಗಲ

ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ

ವೀರಭದ್ರದೇವಸ್ಥಾನದ ನವರಂಗ ಮಂಟಪದ ಬಲಭಾಗದಲ್ಲಿ

(ಎ.ಕ.೭, ನಾಗ-೮)

ಕ್ರಿ.ಶ.೧೫೧೧, ಮೇ ೨೭, ಮಂಗಳವಾರ

ಶಾಲಿವಾಹನ ಶಕವರುಷ ೧೪೩೩ನೆಯ ಪ್ರಜೋಪತಿ ಸಂವತ್ಸರದ ಜೇಷ್ಟ ಶು ೧ ಲು.. ಎಂದು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ.೧೫೧೧, ಮೇ ೨೭ ಮಂಗಳವಾರಕ್ಕೆ ಕ್ಕೆ ಸರಿಯಾಗುತ್ತದೆ. ಕೃಷ್ಣದೇವರಾಯನ ಅರಮನೆಯ ಬೇಹಾರಿಗಳಾದ (ವ್ಯವಹಾರಿ) ಗುಂಮಳಾಪುರದ ಅಕ್ಕನ ಚೆಂಗಿಸೆಟ್ಟಿಯರ ಮಗ ಹೊನ್ನಿಸೆಟ್ಟಿಯು ಆದಿ ಅಗ್ರಹಾರವಾದ ಮತ್ತು ವೀರಬಲ್ಲಾಳ ಚತುರ್ವೇದ ಭಟ್ಟ ರತ್ನಾಕರವೆಂದು ಕರೆಸಿಕೊಂಡಿದ್ದ ನಾಗಮಂಗಲದ ವೀರಭದ್ರದೇವಾಲಯದ ರಂಗಮಂಟಪ,

ಗಂಧಗೋಡಿ ಮಂಟಪವನ್ನು ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ. ಈ ಶಾಸನವನ್ನು ಬರೆದವನು ವಿರಾಚಾರಿ ಎಂಬುವನು.

◆

೧ ಶ್ರೀ |ನಮಸ್ತುಂಗಶಿರಶ್ಚುಂಬಿ ಚಂದ್ರಚಾ
೨ ಮರಚಾರವೇ ತ್ರೈಲೋಕ್ಯನಗರಾರಂಭ ಮೂ
೩ ಲಸ್ತಂಭಾಯ ಶಂಭವೇ ||೧ ಸ್ವಸ್ತಿ ಶ್ರೀ ಜಯಾ
೪ ಭ್ಯುದಯ ಶಾಲಿವಾಹನ ಸಕವರುಷ ೧೪೩೩ ನೆಯ
೫ ಪ್ರಜೋಪತಿ ಸಂವತ್ಸರದ ಜೇಷ್ಟ ಶು ೧ ಲು ಶ್ರೀಮನ್ಮ
೬ ಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ
೭ ಕ್ರುಷ್ಣದೇವಮಹಾರಾಯರೂ ಪ್ರುಥ್ವೀರಾಜ್ಯಂಗೆಯಿವುತಿ
೮ ರಲು ಅವರ ಅರಮನೆಯ ಬೇಹಾರಿಗಳು ಗುಂಮ
೯ ಳಾಪುರದ ಅಕ್ಕನ ಚೆಂನಿಸೆಟ್ಟಿಯರ ಮಕ್ಕಳು ಹೊಂನಿ
೧೦ ಸೆಟ್ಟಿಯರೂ ಶ್ರೀಮದನಾದಿಅಗ್ರಹಾರ ಶ್ರೀ ವೀರ
೧೧ ಬಲಾಳಚತುರ್ವೇದಭಟ್ಟರತ್ನಾಕರವಾದ ನಾಗ
೧೨ ಮಂ(ಗ)ಲದ ಶ್ರೀ ವೀರಭದ್ರದೇವರ ರಂಗಮಂಟಪ ಮುಂ
೧೩ ದಣ ಗಂಧಗೋಡಿಮಂಟಪದ ಸೇವೆಯನೂ ಮಾಡಿ
೧೪ ವೀರಭದ್ರದೇವರ ಶ್ರೀಪಾದಕ್ಕೆ ಸಮರ್ಪ್ಪಿಸ್ತರು
೧೫ ಬರದಾತ ವೀರಾಚಾರಿ ಶ್ರೀ

೨

ಮೂಡಬಿದಿರೆ

ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಜೈನ ಮಠದಲ್ಲಿ ದೊರೆತ ತಾಮ್ರಶಾಸನ

(ಇ.ದರ್ಶನ ೧೬, ಎಂ.ಜಿ.ಮ., ಹೊ.ನ.ನಿಓ(೨೦೦೧) ಪು.೪೪)

ಕ್ರಿ.ಶ.೧೫೧೧, ಆಗಸ್ಟ್ ೨೫, ಸೋಮವಾರ

ಶಾಸನದಲ್ಲಿ ಕಾಲವನ್ನು ...ಶಕವರ್ಷ ೧೪೩೩ನೆಯ ಪ್ರಜೋತ್ಪತ್ತಿ ಸಂವತ್ಸರದ ಭಾದ್ರಪದ ಶುದ್ಧ ಬಿದಿಗೆಯಲು... ಎಂದು ನೀಡಿದ್ದು ಇದು ಕ್ರಿ.ಶ.೧೫೧೧, ಆಗಸ್ಟ್ ೨೫, ಸೋಮವಾರವಾಗುತ್ತದೆ. ರತ್ನಪ್ಪವೊಡೆಯರು ಮಂಗಳೂರಿನ ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಇವರ ನಿರೂಪದಿಂದ ವಿಟ್ಠರಸೊಡೆಯರು ಬಿದಿರೆಯ ನಗರವನ್ನು ಆಳುತ್ತಿರುತ್ತಾನೆ. ಈ ಸಮಯದಲ್ಲಿ ಪುತ್ತಿಗೆಯಲ್ಲಿ ಚೌಟರು ಆಳುತ್ತಿರುತ್ತಾರೆ. ಈ ಸಮಯದಲ್ಲಿ ಅಂಣ ಸೇನಭೋವರು ಮತ್ತು ಸಾವಿರದವರೂ (ಒಂದು ಗುಂಪು) ಕೂಡಿ ಬಿದಿರೆಯ ಜೈನ ಮಠಾಧೀಶರಾದ ಅಭಿನವ ಚಾರುಕೀರ್ತಿ ಪಂಡಿತ ದೇವರ ಸಮ್ಮುಖದಲ್ಲಿ ಬಿದಿರೆಯ ಸೆಟ್ಟಿಕುಲದವರಿಗೆ, ನಾಲ್ವರು ಯಳಮೆಗೊಳಗಾದ ಜೈನ ಮುಖಂಡರಿಗೆ ಮತ್ತು ವ್ಯಾಪಾರಿಗಳಿಗೆ ತಾಮ್ರಶಾಸನವನ್ನು ಬರೆಯಿಸಿಕೊಟ್ಟು ಬಿದಿರೆಯ ಜೈನರ ತೊಂದರೆಗಳನ್ನು ನಿವಾರಿಸಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಅಂಣಸೇನ ಬೋವನ ಕಡೆಯವರು ಕಕ್ಕೆ ದಾಸುಸೆಟ್ಟಿ ಮತ್ತು ಅಡ್ಡಣೆ ಬಾಲ್ಯಮ್ಮ ಸೆಟ್ಟಿಯರ ಮನೆಯನ್ನು ಮತ್ತು ಸಕಲವನ್ನು ಜಪ್ತಿ ಮಾಡಿಕೊಂಡು ಹೋದಾಗ ಕಂಗಾಲಾದ ಎಲ್ಲ ಜೈನರೂ ಬಸದಿಗಳ ಬಾಗಿಲು ಮುಚ್ಚಿ ಊರಿನಿಂದ ವಲಸೆ ಹೋಗ ತೊಡಗುವರು. ಇದರಿಂದ ಕಂಗಾಲಾದ ಅಥವಾ ಪಶ್ಚಾತ್ತಾಪ ಪಟ್ಟ ಅಂಣಸೇನಬೋವನು ಜಪ್ತಿ ಮಾಡಿದ್ದ ಸಕಲ ವಸ್ತುಗಳನ್ನು ಹಿಂದಕ್ಕೆ ಕೊಡಿಸಿ, ಬಸದಿಯ ಬಾಗಿಲುಗಳನ್ನು ತೆಗೆಸಿ, ಆ ಬಸದಿಗಳಿಗೆ ಕಾಣಿಕೆಗಳನ್ನು ಕೊಡುತ್ತಾನೆ. ಅಲ್ಲದೆ ಇನ್ನು ಮುಂದೆ ನಮ್ಮ ಜನರು ನಿಮ್ಮ ವಿಷಯಕ್ಕೆ ಬರುವುದಿಲ್ಲ ನಿಮ್ಮ ಮನೆ ಬಾಗಿಲುಗಳಿಗೆ ಕಲ್ಲನ್ನು ಹಾಕುವುದಿಲ್ಲವೆಂದು ಪ್ರಮಾಣ ಮಾಡಿ ಸಂತೈಸುತ್ತಾನೆ.

ಯಾವ ವಿಷಯಕ್ಕೆ ಜೈನರ ಮನೆಗಳನ್ನು ಜಪ್ತಿ ಮಾಡಲಾಯಿತೆಂಬ ವಿಷಯವಿಲ್ಲ. ಅಲ್ಲದೆ ಈ ಸಮಯದಲ್ಲಿ ಯಾವುದೇ ಪ್ರತಿಭಟನೆ ನಡೆಸದೆ ವಲಸೆ ಹೋಗತೊಡಗಿದ ಜೈನರ ಆಗಿನ ಕಾಲದ ಸಾಮಾಜಿಕ ಸ್ಥಿತಿಯ ಬಗ್ಗೆ ಮರು ಆಲೋಚಿಸುವಂತೆ ಮಾಡುತ್ತದೆ. ಅಲ್ಲದೆ ಈ ಘಟನೆ ಮಧ್ಯಕಾಲೀನ ಕರ್ನಾಟಕದಲ್ಲಿ ಜೈನ ಸಮಾಜದವರು ಎದುರಿಸುತ್ತಿದ್ದ ಸಂಕಷ್ಟಗಳತ್ತ ಬೊಟ್ಟು ಮಾಡುತ್ತದೆ. ಶಾಸನದ ಕೊನೆಯಲ್ಲಿ ಸೋಮನಾಥ ಮತ್ತು ಪಾರ್ಶ್ವನಾಥರ ಉಲ್ಲೇಖವಿದೆ.

◆

ಮೊದಲ ಬದಿಯಲ್ಲಿ

೧ ಸ್ವಸ್ತಿ ಶ್ರೀಮತು ಶಕವರ್ಷ ೧೪೩೩ನೆಯ ಪ್ರ

೨ ಜೋತ್ಪತ್ತಿ ಸಂವತ್ಸರದ ಭಾದ್ರಪದ ಶುದ್ಧ

೩ ಬಿದಿಗೆಯಲು ಶ್ರೀಮನ್ಮಹಾರಾಜಾಧಿರಾ

೪ ಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಕ್ರುಷ್ಣ

೫ ದೇವರಾಯ ಮಹಾರಾಯರ ಕಾಲದ

೬ ಲು ತದ್ದಕ್ಷಿಣ ಭುಜಬಲ ಪ್ರತಾಪರುಮಪ್ಪ

೭ ರತ್ನಪ್ಪೊಡೆಯರು ಮಂಗಲೂರ ಬಾರಕೂ

೮ ರ ರಾಜ್ಯವನೂ ಪ್ರತಿಪಾಲಿಸುತ್ತಿರ್ದ್ದಲ್ಲಿ ಅವ

೯ ರ ನಿರೂಪದಿಂದ ಬಿದಿರೆಯ ನಗರವನೂ

೧೦ ವಿಟ್ಠರಸೊಡೆಯರೂ ಆಳುತ್ತಿರ್ದ್ದಲ್ಲಿ ಪುತ್ತಿ

೧೧ ಗೆಯಲೂ ತಿರುಮಲೆ ರಾಯರಸರಾ

೧೨ ದ ಚೌಟರೂ ಬುದ್ಧಿವಂತ ಅಂಣ ಸೇನಬೋ

೧೩ ವರೂ ಆಳುಸಾವಿರ ಬಳಿಸಾವಿರದವರೂ

೧೪ ಕೂಡಿ ಅಭಿನವ ಚಾರುಕೀರ್ತ್ತಿ ಪಂಡಿತದೇವರು

೧೫ ಗಳಿಗೆ ಬಿದಿರೆಯ ನಗರದ ಯೆಂಟು ಪ್ರಜೆ

೧೬ ಸೆಟ್ಟಿಕಾರರು ನಾಲ್ವರು ಯಳಮೆಗಳೊಳ

೧೭ ಗಾದ ಸಮಸ್ತ ಹಲರಿಗೆ ಕೊಟ್ಟ ತಾಂಬ್ರದ ಸಾ

೧೮ ಧನದ ಕ್ರಮವೆಂತೆಂದರೆ ನಮ್ಮ ಮನುಷ್ಯರು

೧೯ ಕಕ್ಕೆ ದಾಸುಸೆಟ್ಟಿಯ ಮನೆಯನೂ ಅಡ್ಡಣಿ

೨೦ ಬಾಲ್ಯಮ್ಮಸೆಟ್ಟಿಯ ಮನೆಯನೂ ಮುದ್ರಿಸಿ

೨೧ ಸರ್ವ್ವಸ್ವನೂ ಕೊಂಡು ಹೋಗಲಾಗಿ ನೀಉ ಸಮ

೨೨ ಸ್ತರು ಕೂಡಿ ಹೀಗಾದರೆ ನಮಗೆ ಯೀನಗರ

೨೩ ದಲೂ ಬಾಳೂದಶಕ್ಯವೆಂದು ಯೆಲ್ಲಾ

೨೪ ಬಸ್ತಿಗಳ ಬಾಗಿಲ ಕಟ್ಟಿ ನೀವೆಲ್ಲರೂ ಊ

೨೫ ರಿಂದ ವೊಕ್ಕಲು ತೆಗೆದು ಹೋಗಲಾಗಿ ನಾ

೨೬ ಉ ಕೊಂಡು ಹೋದ ಸರ್ವಸ್ವವನೂ ಹಿಂ

೨೭ ದಕ್ಕೆ ಕೊಡಿಸಿ ಬಸ್ತಿಯ ಬಾಗಿಲುಗಳ ತೆಗ

ಎರಡನೆ ಬದಿ ಶಾಸನ

೨೮ ಸಿ ಯೆರಡು ಬಸ್ತಿಗಳಿಗೆ ಕಾಣಿಕೆಯ ನಿಕ್ಕಿ ನಿಂ

೨೯ ಮನು ಸಂತಯಿಸಿ ಮುಂದಕ್ಕೆ ನಂಮ ಮ

೩೦ ನುಷ್ಯರು, ನಿಂಮ ಮನೆಯ ಹೊಸ್ತಿಲ ಪ್ರ

೩೧ ಮಾಣವ ಮೀರಲೀಸೆವು ನಿಂಮ ಮನೆಯ

೩೨ ಬಾಗಿಲುಗಳಿಗೆ ಕಲ್ಲನೇರಿಸಲೀಸೆವು ನಿಂ

೩೩ ಮನು ಪೂರ್ವ್ವ ಮರ್ಯ್ಯಾದೆಯಲು ಬಾಳಿ

೩೪ ಸಿಯೇವು ಯಿದಕ್ಕೆ ತಪ್ಪಿದರೆ ಸೊಮ

೩೫ ನಾಥಗೆ ಪಾರ್ಶ್ವನಾಥಗೆ ತಪ್ಪಿದ

೩೬ ವರು

೩

ಉದಿಯಾವರ(ಉದ್ಯಾವರ)

ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ

ವೆಂಕಟರಮಣಯ್ಯನವರ ಜಮೀನಿನಲ್ಲಿರುವ ಶಾಸನ

(ಎಸ್.ಐ.ಐ.VII-೨೯೬)

ಕ್ರಿ.ಶ.೧೫೧೪, ಡಿಸೆಂಬರ್ ೨೯, ಶುಕ್ರವಾರ

ಗಣಪತಿಯ ಸ್ತುತಿಯೊಂದಿಗೆ ಪ್ರಾರಂಭವಾಗುವ ಈ ಶಾಸನದಲ್ಲಿ ಕಾಲವನ್ನು ಶಕವರುಷ ೪೬೦೮ನೆಯ ಭಾವ ಸಂವಛರದ ಮಕರ ಮಾಸ ೧ನೆಯ ಶುಕ್ರವಾರ ಎಂದು ನೀಡಿದ್ದು ಇದು ಕ್ರಿ.ಶ.೧೫೧೪, ಡಿಸೆಂಬರ್ ೨೯, ಶುಕ್ರವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ರಾಜ್ಯವನ್ನಾಳುವಾಗ ಬಾರಕೂರು ನಾಡನ್ನು ರತ್ನಪ್ಪವೊಡೆಯರು ಆಳುತ್ತಿರುತ್ತಾರೆ. ಗ್ರಾಮದ

ವೀರಭದ್ರದೇವರಿಗೆ ಮತ್ತು ವಿನಾಯಕ ದೇವರ ಸೇವೆಗಾಗಿ ಅಕ್ಕಿಮೂಡೆ ಮತ್ತು ಭೂಮಿಯನ್ನು ದಾನ ನೀಡಿದ ವಿಷಯವಿದೆ. ಈ ದಾನ ನೀಡಿದವನು ನಾಗಣಬಂಣಿಯೆಂಬುವ ವನಾಗಿದ್ದು ತನ್ನ ಪಾಲಿಗೆ ಬಂದ ಉಪ್ಪಿನಕಳನ ಚತುಸ್ಸೀಮೆಯಲ್ಲಿ ದಾನ ನೀಡಿರುವನು. ನಂದಳಿಕೆಯ ದೈವಗಳಿಗೂ ದಾನ ನೀಡಲಾಗಿದೆ.

◆

೧ ಶ್ರೀ ಗಣಾಧಿಪತಯೇ ನಮಃ| ನಮಸ್ತುಂಗಶಿರಸ್ತುಂಬಿಚಂದ್ರ

೨ ಚಾಮರಚಾರವೇ| ತ್ರೈಲೋಕ್ಯನಗರಾರಂಭ ಮೂಲಸ್ತಂ

೩ ಭಾಯ ಶಂಭವೇ|| ಸ್ವಸ್ತಿ ಶ್ರೀ|| ಜಯಾಭ್ಯುದಯ

೪ ವಾದ ಶಕವರುಷ ೪೬೦೮| ನೆಯ ಭಾವ ಸಂವಛ

೫ ರದ ಮಕರಮಾಸ ೧ನೆಯ ಶುಕ್ರವಾರದಲು

೬ ವಿಜೆಯನಗರದಲು ಕ್ರುಷ್ಣರಾಯರು ರಾಜ್ಯವ ಪ್ರತಿ

೭ ಪಾಲಿಸು(ವ)ಲ್ಲಿ ಬಾರಕೂರಿ(ನ)ಲ್ಲಿ ರತ್ನಪ್ಪವೊಡೆಯರು

೮ ರಾಜ್ಯವನಾಳುವಲ್ಲಿ ವೀರಭದ್ರದೇವರ ನಿರೂಪ

೯ ದಲೂ ಅರುವರೆಪ್ಪತ್ತೆರಡು ಸಮಸ್ತ ಹಲರ ವಾ

೧೦ ಕಿಂದೊ(ವೀರ)ಭದ್ರ ವಿನಾಯಕದೇವರಿಗು ನಿಂ

೧೧ ಚಿತಾ ಬಲಿಪೂಜೆಯ ಕೊಂಬ ನಂದಳಿಕೆಯೊ(ದೈ)

೧೨ ವಗಳಿಗೂ (ನಾ)ಗಣ ಬಂಣಿೊತಾ ಬಾಳುವ ಉಪ್ಪಿನ

೧೩ ಕಳನ ಚತುಸ್ಸೀಮೆಯೊಳಗೆ ತ(೦)ನ್ನ ಮೂಲ ಬ(೦)(ಹ್ಮ)ದಾ

೧೪ ಯದ ಸ್ತಳಕೆ ಕಟ್ಟಿದ ಸೀಮೆ ೩ ನೆಲದ ಬಳಿ ಪರಾಳದ ಕೋ

೧೫ . . ಬೆಂಮಣ ಸೆಟ್ಟಿ ಕುಳಕಾಲ ಕುಂದಯ ಸೆಟಿ ಮಾಛಲಾಳ

೧೬ ಸೆಟ್ಟಿ ಬಳಿಯ ಬಗು ನೆಲಿಬಳಿ ಸಮಸ್ತರ ವಾಕ್ಕಿಂದ ಆ ಉಪ್ಪಿ

೧೭ ನ ಕಳಕೆ ಕಟ್ಟಿದ ಸೀಮೆ ನಿಂಜಕೊರದಯಿನಗ(ಳೇ) ನಿತ್ಯ

೧೮ ನಂದಾದೀವಿಗೆ ವಿನಾಯ(ಕ*) ದೇವರಿಗೆ ವರುಷ ೧ ಕ್ಕೆ ಕಾಲುಪಾ

೧೯ ಡಿ ವೀರಭದ್ರಗೆ ಕಾಲುಹಾಡ ಯೆಂಣೆ ಯೀ ರೀತಿಯಲಿ ನಾ

೨೦ ಡವುದೆಂದು ನಾಗಣಬಂನ ಹಾಕ್ಸಿದ ಧರ್ಮದ ಸೀಮೆ

೨೧ ಕಲ್ಲು ಆೊಸ್ತಳಕೆ ಆರೊಬ್ಬ ಅಡ್ಡವಿಳ ಬಂದವರು

೨೨ (ಆ)ದರೆ ಆ ದೈವಗಳಿಗೆ ೨೪ ಮೂಡೆ ಅಕ್ಕಿಯ ಸ್ಥಳವ

೨೩ ಧಾರೆಯ ನೆಱದು ಬಹನು ಅಂನ್ಯರಿಗೆ ಸಾಲ .....

೨೪ ಗೆ ಬೀಡಿಯಿಲ್ಲ ಯೀ ಬಮ್ಮಯ

೪

ತುಮಕೂರು

ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ

ಕೋಡಿ ಬಸವಣ್ಣ ಗುಡಿಯ ಗರುಡಕಂಬದಲ್ಲಿ

(ಈಗ ಬೃಹತ್ ಆಂಜನೇಯನ ಶಿಲ್ಪದ ಕಟ್ಟೆಯೊಳಗೆ ಸೇರಿದೆ)

(ಎ.ಕ.XII, ತುಮ-೩)

ಕ್ರಿ.ಶ.೧೫೧೫, ಮಾರ್ಚ್ ೨೨, ಗುರುವಾರ

ಶಾಸನದಲ್ಲಿ ಕಾಲವನ್ನು ಶಕವರುಷ ೧೪೩೮ ನೆಯ ಯಿವ ಸಂವತ್ಸರದ ಚಯಿತ್ರ ಶು ೭ ಸೋಮವಾರ ಎಂದು ನೀಡಿದ್ದು ಇದು ಕ್ರಿ.ಶ.೧೫೧೫, ಮಾರ್ಚ್ ೨೨, ಗುರುವಾರವಾಗುತ್ತದೆ. ಕೃಷ್ಣದೇವರಾಯನು ರಾಜ್ಯವಾಳುವಾಗ ಮಲ್ಲಿಶೆಟ್ಟಿಯ ಮಗ ಪರ್ವತನಾಯಕನು ತಂದೆ-ತಾಯಿಗೆ ಪುಣ್ಯವಾಗಬೇಕೆಂದು ಬಸವಣ್ಣ ಗುಡಿ ಮುಂದಿನ ದೀಪಸ್ತಂಭವನ್ನು ಮಾಡಿಸಿದಂತೆ ತಿಳಿದುಬರುತ್ತದೆ. ಈ ಶಾಸನದಲ್ಲಿರುವ ವ್ಯಕ್ತಿಗಳ ವಂಶದವರು ಇತ್ತೀಚೆಗೆ ಬಸವಣ್ಣನ ಪ್ರಭಾವಳಿಯನ್ನು ಮಾಡಿಸಿದ್ದು, ಅದರ ಎಡ, ಬಲ ಭಾಗದಲ್ಲಿ ಶಾಸನಸ್ಥ ವ್ಯಕ್ತಿಗಳ ಶಿಲ್ಪವನ್ನು ಚಿತ್ರಿಸಿರುವರು.

•

೧ ಸ್ವಸ್ತಿಶ್ರೀ ಜಯಾಭ್ಯುದಯ

೨ ಶಾಲಿವಾಹನ ಶಕವರುಷೊಗೊ

೩ ೪೩೮ನೆಯ ಯೀವಸಂವತ್ಸರ

೪ ದ ಚಯಿತ್ರ ಶು ೭ ಸೋಮವಾರದ

೫ ಲು ಶ್ರೀಮಂನ್ಮಹಾರಾಜಾಧಿ

೬ ರಾಜ ರಾಜಪರಮೇಶ್ವರ ವೀ

೭ ರಪ್ರತಾಪ ಕೃಷ್ಣರಾಯಮಹಾ

೮ ರಾಯ ರಾಜ್ಯಂನಾಳುತ್ತಿರಲು

೯ ಮಲ್ಲಿಶೆಟ್ಟಿಯರ ಮಕ್ಕಳು ಪಟ

೧೦ ವತನಾಯಕರು ತಂಮ ತಂದೆ

೧೧ ತಾಯಿಗೆ ಧಂರ್ಮ್ಮವಾಗಬೇಕೆಂದು

೧೨ ಆತೆವರದ ಶಿಲೆಯ ...ಕಂಬ

೧೩ ...ಮುಂದಣ.....

೧೪ ....

೧೫ ....

೧೬ ....

೫

ಹೊಂಗನೂರು

ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಮಾರಿಚಾವಡಿಗೆ ಉತ್ತರಕ್ಕೆ ನೆಟ್ಟಿರುವ ಶಾಸನ

(ಎ.ಕ.೪, ಚಾಮ-೧೬೨)

ಕ್ರಿ.ಶ.೧೫೧೫, ಡಿಸೆಂಬರ್ ೧೦, ಸೋಮವಾರ

ಶಾಸನದಲ್ಲಿ ಕಾಲವನ್ನು 'ಯಿವಸಂವತ್ಸರದ ಪುಷ್ಯ ಶು ೫ ಲು' ಎಂದು ನೀಡಿದೆ. ಇದು ಕ್ರಿ.ಶ.೧೫೧೫, ಡಿಸೆಂಬರ್ ೧೦, ಸೋಮವಾರಕ್ಕೆ ಸರಿಹೊಂದುತ್ತದೆ. ಕೃಷ್ಣರಾಯನ ಕೈಕೆಳಗಿನ ಅಧಿಕಾರಿಯಾದ ಸಾಳುವ ಗೋವಿಂದರಾಜಯ್ಯನವರ ನಿರೂಪದಿಂದ ಅಧಿಕಾರಿಯೊಬ್ಬನು ದೊಡ್ಡಣ್ಣಸೆಟ್ಟರಿಗೆ ಮನೆಯ ನಿವೇಶನವನ್ನು ಅರಮನೆಗೆ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಬೇರೆ ಮನೆಯನ್ನು ದಾನವಾಗಿ ನೀಡಿದ ವಿಷಯವಿದೆ. ನಂಜೇದೇಪನೆಂಬುವನು ತೆರಿಗೆ ತೆರಲಾರದೆ

ನಿವೇಶನದ ಪತ್ರವನ್ನು ಅರಮನೆಗೆ ಒಪ್ಪಿಸಿದನೆಂದು ಶಾಸನದಲ್ಲಿದ್ದು ಈ ನಿವೇಶನವು ಕರಸ್ತಳದ ಬಸವಪವೊಡೆಯರ ಮನೆಯ ಬಳಿಯಿತ್ತೆಂದು ತಿಳಿದುಬರುತ್ತದೆ. ಹಿಂತಿರುಗಿಸಿದ ನಿವೇಶನಕ್ಕೆ ಪ್ರತಿಯಾಗಿ ಹತ್ತು ಅಂಕಣ ಜಾಗವನ್ನು ಕೊಡಲಾಗಿದೆ.

◆

೧ ಯೀವಸಂವತ್ಸರದ ಪುಷ್ಯ ಶು ೫ ಲು ಶ್ರೀ (ಸಾ)
೨ ಳುವ ಗೋವಿಂದರಾಜಯ್ಯನವರ ನಿ(ರೂ)...
೩ ಯ್ಯ ಅರಸರ ಪಾರುಪತ್ಯದಲು ಅಂ(ಗಿ)...
೪ ಯ್ಯನವರ ಮಕ್ಕಳು ದೊಡಣಸೆಟ್ಟರಿಗೆ...
೫ ದ ಮನೆಯ ಸೀಮೆಯ ವಿವರ ಪಟುನಿಯಮನೆ ಆ..
೬ ಅಂಕಣ ಕರಸ್ತಳದ ಬಸವಪವೊಡೆಯರ ಮನೆಯಿಂ(ಂ).
೭ ಮೂಡಲು ಆಯಿದು ಅಂಕಣ ಉಭಯಂ ಹತ್ತು ಅ(ಂ)
೮ ಕಣ ಮನೆಯ ಸೀಮೆಯನೂ (ಅ)ರಮನೆಗೆ ತೆಗೆದುಕೊಂಡು
೯ ಪ್ರತಿಯಾಗಿ ಕೊಟ್ಟ ಮನೆಯ(ಸೀಮೆ)ವಿವರ ನಂಜೇದೇಪನವರು
೧೦ ಕುಳಸ್ಥೆಯ ತೆಱ(ಲಾ)ಐದೆ ಅರಮ(ನೆಗೆ) ಕೆಂಪೊತ್ತಿದ ವೋ
೧೧ ಲೆಯನು ಕೊಟ್ಟು ವೊಪಿಸಿದ ಕೊಡ(ಗೆಯ) ಮನೆ ಸೀಮೆ
೧೨ ಹತು ಅಂಕಣ ಸೀಮೆಯನೂ ಪರಿವರ್ತ್ತನೆಯಾ
೧೩ ಗಿ ಕೊಟ್ಟೆವಾಗಿ ನೀಉ ಆಚಂದ್ರಾರ್ಕಸ್ತಾಇ
೧೪ ಯಾಗಿ (ಅ)ನುಭವಿಸಿಕೊಂಡು ಸುಖದಲು
೧೫ ಯಿಹರಿ ||

೬

ಬಸ್ರೂರು

ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ

ದೊಡ್ಡಕೆರೆಕಟ್ಟೆಯ ಬಳಿಯಿರುವ ಕಟ್ಟಡದ ಜಾಗದಲ್ಲಿ

(ಎಸ್.ಐ.ಐ.IX-II-೫೧೧)

ಕ್ರಿ.ಶ.೧೫೪೯, ಅಕ್ಟೋಬರ್ ೨೫, ಮಂಗಳವಾರ

ಗಣಪತಿ ಮತ್ತು ಸರಸ್ವತಿಯರ ಸ್ತುತಿಯಿಂದ ಪ್ರಾರಂಭವಾಗುವ ಈ ಶಾಸನದಲ್ಲಿ ಕಾಲವನ್ನು ಶಕವರುಷ ೧೪೪೦ ಸಂದು ನಾಲ್ವತ್ತೊಂದನೆಯ ವರ್ತ್ತಮಾನ ಪ್ರಮಾದಿಸಂವತ್ಸರದ ಕಾರ್ತ್ತಿಕ ಶುದ್ಧ ೨ ಮಂಗಳವಾರ ಎಂದು ನೀಡಿದ್ದು ಇದು ಕ್ರಿ.ಶ.೧೫೧೯, ಅಕ್ಟೋಬರ್ ೨೫, ಮಂಗಳವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ವಿಜಯನಗರವನ್ನು ಆಳುವಾಗ ಬಾರಕೂರುನಾಡನ್ನು ರತ್ನಪ್ಪ ವೊಡೆಯರ ಮಗ ವಿಜಯಪ್ಪವೊಡೆಯನು ಆಳುತ್ತಿರುತ್ತಾನೆ. ಇವನ ಆಳ್ವಿಕೆಯಲ್ಲಿ ಬಸರೂರಿನ ಪಡುವಕೇರಿಯ ಸೆಟ್ಟಿಕಾರರಾದ ಜೊಕಿಸೆಟಿಯ ಮಗಳು ಕೋಚಿಸೆಟಿ, ನರಣಸೆಟಿಯ ಹೆಂಡತಿ ಸೆಟಿ, ತಿರುಮಕಸೆಟಿತ್ತಿ ಮಠವನ್ನು ಕಟ್ಟಿಸಿ ದಾನ ನೀಡುವರು. ಆನೆಗಳಿಯ ಗೋವಿಂದ, ಮೂಡಕೆರೆಯ ವಾಸುದೇವ, ಪೂರ್ವಕ್ಕೆ ಕೆರೆಯ ಮೂಲದ ಬಾಳು, ದಕ್ಷಿಣಕ್ಕೆ ಮಿತಾಂತಕಳ ಗಡಿ, ಉತ್ತರಕ್ಕೆ ದೇವತರ ಬಳಿ ಗಡಿ, ವಾಯುವ್ಯಕ್ಕೆ ಮೂಡಕರೆಯಕ್ಕಳಗಡಿ, ಆಗ್ನೇಯಕ್ಕೆ ಸಾಯಂಣನ ಗುಂಪುಳಿಯ ಗಡಿ. ಈ ಗಡಿಯ ಒಳಗಣ ಭೂಮಿಯನ್ನು ಅಲ್ಲಿನ ಮರಗಳು, ಇತರೆ ಉತ್ಪತ್ತಿ ಸಮೇತ ದಾನವಾಗಿ ನೀಡಿದ್ದು ಯಾವ ಯಾವ ಭೂಮಿ ಮೂಲದಿಂದ ಎಷ್ಟೆಷ್ಟು ಉತ್ಪತ್ತಿಯೆಂದು ವಿವರವಾಗಿ ತಿಳಿಸಲಾಗಿದೆ.

◆

೧ ಶ್ರೀಗಣಾಧಿಪತಿಎಂ ನಮಃ ಶ್ರೀಸರಸ್ವತ್ಯಾಎಂ ನಮಃ ಶ್ರೀಗುರುಭ್ಯೋಂನಮಃ ‖ ನಮಸ್ತುಂಗ ಶಿರಶ್ಚುಂಬಿಚಂದ್ರ

೨ ಚಾಮರಚಾರವೇ । ತ್ರಯಿಲೋಕ್ಯನಗರಾರಂಭೇ ಮೂಲಸ್ತಂಭಾಯ ಶಂಭವೇ ‖ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾ

೩ ಲಿವಾಹನ ಶಕವರುಷ ೧೪೪೦ ಸಂದು ನಾಲ್ವತ್ತೊಂದನೆಯ ವರ್ತ್ತಮಾನ ಪ್ರಮಾದಿಸಂವತ್ಸರದ ಕಾರ್ತ್ತಿಕ ಶುದ್ಧ ೨ ಮ

೪ ೦ಗಳವಾರದಲೂ ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಕ್ರುಷ್ಣ ರಾಯಮಹಾರಾಯರೂ ವಿಜಯನಗ

೫ ರಿಯ ಶಿಂಹ್ವಾಸನದಲೂ ಚಿತ್ತವಿಸಿ ಸಮಸ್ತ ದುಷ್ಟನಿಗ್ರಹಶಿಷ್ಟಪ್ರತಿಪಾಲನೆಯಾ(ಆ)ಗಿ ಸಕಲವ(೦)ರ್ನಧ(೦)ರ್ಮ

೬ ಕ್ರಮಗಳನು ಪ್ರತಿಪಾಳಿಸುತ್ತ ಯಿಹ ಕಾಲದಲೂ ಶ್ರೀವೀರಕ್ರುಷ್ಣರಾಯಮಹಾರಾಯರೂ ಬಾರಕೂರ ರಾಜ್ಯವನು ರತ್ನಪ್ಪ

೭ ವೊಡೆಯರಿಗೆ ಪಾಲಿಸಿ ಅವರ ಕುಮಾರ ವಿಜಯಪ್ಪವೊಡೆಯರು ಬಾರಕೂರರಾಜ್ಯವನು ಆಳುವ ಕಾಲದಲೂ

೮ ಬಸರುರ ಪಡುವಕೇರಿಯ ಸೆಟಿಕಾಱ ಜೊಕಿಸೆಟಿಯರ ಮಗಳು ಕೋಚಿಸೆಟಿಯ ನರಣಸೆಟಿಯ ಹೆಂಡತ್ತಿ ಸೆ

೯ ಟಿಯ ಬಳಿಯ ತಿರುಮಕಸೆಟಿತ್ತಿ ತಾನು ಮಠವನು ಕಟಿಸಿ ಧರ್ಮಕ್ಕೆ ಬಿಟ ಸರ್ವಸ್ವದ ವಿವರ ಆನೆಗಳಿಯ ವೊಳಗೆ ಗೋವಿಂದೆ-

೧೦ ಮೂಡಕರೆಯ ಮಗ ವಾಸುದೇವಮೂಡಕರೆಯ ಮೂಲ ಬಾಳು ಬಡಗಳು ಮಿತಾಂತಕಳ ಗಡಿಯಿಂದ ತೆಂಕಲು ಮೂಡಲು ದೇವತರ ಬಳಿಯವರ ಗಡಿ

೧೧ ಯಿಂದಂ ಪಡುವಲು ತೆಂಕಲು ಮೂಡಕರೆಯಕ್ಕಳ ಗಡಿಯಿಂದಂ ಬಡಗಲು ಪಡುವಲು ಸಾಯಂಣ ಗುಂಪುಳಿಯ ಗಡಿಯಿಂದೆಂ ಮೂಡಲು ಯೀ ನಾ

೧೨ ಲುಕು ಗಡಿಯಿಂದೊಳಗುಳ ಹೊಸಮಾಟದ ಬಾಳು ನಾಫಂಡುಗದಲು ಮೂ೯ಗದೆ ಕಟು ಕಳಿ ಮನ ಮಂದು ಮರ ಫಲ ಸಹಿತ ಬಿಡಾರುವಾರ(ವಾರ)ವಾಗಿ ತಿರುಮ

೧೩ ಸೆಟಿ ಮಾಡಿಕೊಂಡು ಕೊಟ ಅರ್ಥ ಅರುವಾರಕೆ ದೊಡವರಹ ಗ ೧೨೦ ಕುಂದಿಗೆ ವರಹ ಗ ೩ ಹೊಡೆಕಟಿಗೆ ವಗಹ ಗ ೩ ಮೂಲಾದಿಗೆ ವರಹ ಗ ೨೫ ಮಯಿಸಾ

೧೪ ಲ ವರಹ ಗ ೨೫ ಯೀ ಬಾಳಿಗೆ ತೆಱು ಹೆರಳೆ ಹೆಬಾರನ ಹದಿ ೧||=ಮೂರುರ ಹೆಬಾರನ ಹದಿ |||=ವೊಸರಿತಱು ಅನಾಯ ಕಳಚಿ ನಾಫಂ ಲೂ ಅ ಮು

೧೫ ೩೨ ಆನೆಗಳಿಯ ಕ್ರುಷ್ಣ ಉರುಡೆಯ ಹೆಬಾರನ ಮೂಲದ ಜಂನ ಕಾಉ ಸಹಿತ ವೊಸರಿ

೧೬ ಱ ಮೇಲೆ ಸೆಟ್ಟಿಕಾಱ ಚೊಕಿಸೆಟಿಯರೂ ಆದಿಯಾಗಿ ಕೊಟ ಕಾಟಿ ಹೊಂ ಗ ೨೧೧ ಅ

೧೭ ನದಮೇಲೆ ತಿರುಮಕ್ಕಸೆಟಿತಿ ಅರ್ಥಾಧಿಯಾಗಿ ಕೊಟ್ಟ ಕಾಟಿ ಹೊಂಗ ೨೧೯ ಬಡ್ಡಿ ಅಕಿ ನಾಲ ಮು |||೫ ಹೊಣೆಗಾಱ ಕೋಟಿಕಂಡ ಗೋವಿಂದಹೆಬಾರನ ನಡೆಸಿಕೊಡುವನು

೧೮ ಹೆರಳೆಯ ಹೆಯಹೆಬಾರನ ಜಂನವನೂ ಸೆಟಿಕಾರ ತಿರುಮಸೆರ್ಟಿ ಆದಿಯ ಮಾಡಿಕೊಂಡ ಅರ್ಥ ಆದಿಯಾಗಿ ಮಾದೆಸೆಟಿಯ ಅಳಿಯ ಸಂಕರಸೆಟಿ ಕೊಟ

೧೯ ದೊಡವರಹೊಗೊ೧೦೦ ಅ ನೂಱ ವರಹನನೂ ತಿರುಮಕ್ಕಸೆಟಿತಿ ಕೊಟು ಅರ್ಥ ಬಂದರೂ ಉತಿ ಬಂದರೂ ತಿರುಮಕಸೆಟಿತಿ ತನಗೆ ಉಳದು ಎಂದು ಮಾಡಿಕೊಂಡು

೨೦ ಆ ಹೆರಳೆಯಹೆಬಾರನ ಏಣಿ ಮುಖದಲೂ ಕಾಲಕಾಲಕೆ ನಡಸುವ ಆ ಮು ೧೦ ಮತ್ತಂ ಶಂಖರಮೇಲಾಡಿ ಯೆಂಚಣಮೇಲಾಡಿಯವರ ಮೂಲ

೨೧ ಕಯಿಪಾಡಿಯ ಯೀಶ್ವರಬಾಹಿರಿಯ ಅರುವಾರದ ಬಾಳು ಬೊವಣನ ಬಗೆ ಎಂಬ ಬಾಳ ಚತುಸೀಮೆ ನಾಗನ ತೋಟದಿಂದ ತಂಕಲು ಅರಿಬಳಿಯವ

೨೨ ರ ಗಡಿಯಿಂದ ಪಡುವಲು ಬಡಗಣ ತುರೆ ಯಿ ಹೊಱತಾಗಿ ಕಳಿ ಸಹಿತವಾಗಿ ಬಡಗಲು ಹಲರ ಗಡಿಯಿಂದ ಮೂಡಲು ಯೀ ನಾಲುಕು ಗಡಿಯಿಂದ ವೊಳಗೆ

೨೩ ಬಿತುವುದು ನಾಘಂ ಮು ೪ ಮನೆತಾಉ ತೋಟ ಮತ್ತಂ ಹಂದಟಿನಂಬ ಗದೆ ಮು ೧ ಹಾ ೩೦ ಮನೆಯ ಬಡಗ(೦)ಣ ಕಳಿಯೊಳಗೆ ಯೆಲಮುಳಿಯ ಹಾಳಿ

೨೪ ಮು ಹಾ ೧೦ ಅಂತು ಮು ೭ ಗದೆಯ ಮೇಲೆ ಅಂತರಾರುವಾರ ಅರ್ಧಾಧಿ ಮಯಿಸಾಲ ಸಹಿತವಾಗಿ ಕೊಟ ದೊಡವರಹ ಗ ೯೫ ತೆಱು ಅನಾಯ ಕಳಚಿ

೨೫ ನಡವ ಅ ನಾಘಂ ಮು ೪೪ ಈ ಬಾಳಿಗೆ ತೆಱು ಮಾರುರ ಹದಿವೊ ೧ |=ಹೆರಳೆಹದಿ ವೊ =ಮತ್ತಂ ಹೆರಳಿಯಹೆಬಾರನ ಮೇಲೆ ಮೈಸಾಲವಾ

೨೬ ಗಿ ಕೊಟ ವರಗ ೨೪ ತೆಱ ಮೂ ೨ ಬಾಡಕೈಪಾಲಿಯ ಒಳಗೆ ತಿರುಮಸೆಟಿಗೆ ಬಂದ ಭಾಗಿ ನಾರಣಹಾಳನ ಮಗ ವಿಷ್ಣುಹಾಳನ

೨೭ ಮೂಲದ ಬಡಗ ತಾಱು ಮು ೧ ಹಾ ೨೦ ಕುಂಞಣಕಾರಂತನ ಮಗ ಕ್ರುಷ್ಣಕಾರಂತನ ಮೂಲದ ತೆಂಕ ತಾಱಿನ ವೊಳಗಣ

೨೮ ಮು ಹಾ ೨೦ ಗೋವಿಂದಬಿಂನಾಣಿಯ ಮಗ ಕೊಂಮೆಬಿಂನಾಣಿಯ ಮೂಲದ ಬಡಗ ತಾಱಿನಲು ಹಾ ೨೬

೨೯ ಯಿದಕೆ ಅಕಿ ಮು ೪ |ಮತ್ತಂ ಹೂತಾಳ ಕಳ ಮೂಲ ಉಗರಭಂಡಾರಿಯ ಅರುವಾರ ತಿರುಮಸೆಟಿ

೩೦ ಯ ಮಾವ ಮಲಪಭಂಡಾರಿಯ ಅಂತರಾರುವಾರದ ಕಲಿಅನತರವೊಳಗೆ ತಿರುಮಸೆಟಿಯ ಭಾಗಿ ಮೂಱೊಂ

೩೧ ದು ಪಾಲ ಅರ್ಧ ಕಾಟಿ ಹೊಂನು ಗ ೫೦ ಕೆ ಅಕಿ ನಾಘು ಮು ೩ ||೦

೭

ಬಾರಕೂರು

ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ

ಚೌಳಿಕೇರಿಯಲ್ಲಿರುವ ಶಾಸನ

(ಎಸ್.ಐ.ಐ.VII-೩೪೩)

ಕ್ರಿ.ಶ.೧೫೨೪, ಮಾರ್ಚ್ ೧೫, ಮಂಗಳವಾರ

ಗಣಪತಿಯ ಸ್ತುತಿಯಿಂದ ಪ್ರಾರಂಭವಾಗಿರುವ ಈ ಶಾಸನದಲ್ಲಿ ಕಾಲವನ್ನು ಶಕವರುಷ ೧೪೪೭ ವರ್ತಮಾನ ತಾರಣ ಸಂವಚ್ಛರದ ಚಯಿತ್ರ ಶು ೧೦ ಮ ಲೂ ಎಂದು ನೀಡಿದ್ದು ಇದು ಕ್ರಿ.ಶ.೧೫೨೪, ಮಾರ್ಚ್ ೧೫, ಮಂಗಳವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ವಿಜಯನಗರದಲ್ಲಿ ಆಳುತ್ತಿದ್ದಾಗ ಇವನ ನಿರೂಪದಿಂದ ಲಕ್ಷ್ಮೀನಾರಾಯಣ ಕರಣಿಕರ ಮಗ ನಾದ ವಿಠರಸವೊಡೆಯನು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ಇಲ್ಲಿನ ಚೌಳಿಯಕೇರಿಯ ಕೆಲ್ಲಂಗೆಜೆಯ ವಿನಾಯಕ ದೇವರ ಸನ್ನಿಧಿಯಲ್ಲಿ ಅಂಣಿಸೆಟಿ ಎಂಬುವನು ಚಂದ್ರಗ್ರಹಣದ ಕಾಲದಲ್ಲಿ ಒಂದು ಮಠವನ್ನು ಕಟ್ಟಿಸಿ ಅಲ್ಲಿನ ೬ ಜನ ಬ್ರಾಹ್ಮಣರಿಗೆ ಊಟಕ್ಕೆ ಅನೇಕ ಕಡೆ ಗದ್ದೆ ಮತ್ತು ಅಕ್ಕಿಮೂಡೆಗಳನ್ನು ದಾನವಾಗಿ ನೀಡುತ್ತಾನೆ. ರಾಜಬೀದಿ, ಸಿಂದೂರಗೊಳಿ ರಾಜಬೀದಿ, ಯೀಸರಸೆಟ್ಟಿ ಮಠದ ಗಡಿಯ ಒಳಭಾಗದಲ್ಲಿ ಈ ಮಠವನ್ನು ಕಟ್ಟಿಸಿದಂತೆ ತಿಳಿದುಬರುತ್ತದೆ. ತಂಮ್ಮಣ ಸೆಟ್ಟಿ, ಬೆಳುವ ಗಣ್ಣ ಸೆಟ್ಟಿ, ತ್ತಿರುಮಣಸೆಟಿ, ನಾರುವಣಸೆಟಿಯರ ಉಲ್ಲೇಖವಿದೆ.

◆

೧ ಶ್ರೀಗಣಾಧಿಪತಯೇ(೦) ನಮಃ ನಿರ್ವ್ವಿಘ್ನಮಸ್ತು | ನಮಸ್ತುಂಗಶಿರಶ್ಚುಂಬಿಚಂದ್ರಚಾಮರ ಚಾರವೇ ತ್ರಯಿಲೋಕ್ಯನಗರಾ-

೨ ರಂಭಮೂಲಸ್ತಂಭಾಯ ಶಂಭವೇ | ಸ್ವಸ್ತಿಶ್ರೀ ಜಯಾದ್ಭುದಯ ಶಕವರುಶ ೧೪೪೭ ವರ್ತಮಾನ ತಾರಣ

೩ ಸಂವಚ್ಛರದ ಚಯಿತ್ರ ಶು ೧೦ ಮಲೂ ಶ್ರೀಮಂಮ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಕ್ರುಷ್ಣರಾ

೪ ಯಮಹಾರಾಯರೂ ವಿಜಯನಗರಿಯ ರಾಜಧಾನಿಯಲು ಸುಖಸಂಕಥಾವಿನೋದದಿಂ ಸಮಸ್ತ ವಂರ್ನಾಶ್ರಮಂಗಳ

೫ ನು ಪ್ರತಿಪಾಲಿಸುತ್ತ ಯಿಹ ಕಾಲದಲೂ ಆ ಕ್ರುಷ್ಣರಾಯಮಹಾರಾಯರ ನಿರೂಪದಿಂದ ಲಕ್ಷ್ಮೀನಾರಾ

೬ ಯಣಕರಣಿಕರ ಕುಮಾರ ವಿಠರಸವೊಡೆಯರೂ ಬಾರಕೂರರಾಜ್ಯವನಾಳುವ ಕಾಲದಲೂ ಚೌಳಿಯಕೇರಿಯ

೭ ಕೆಲ್ಲಂಗೆಜೆಯ ವಿನಾಯಕದೇವರ ಸಂನಿಧಿಯಲೂ ಬೊಂಮಿಸೆಟಿಯ ಬಳಿಯ ಮುದೆಗೆಡೆ ಅಂಣಿಸೆಟಿ

೮ ಯರೂ ಸೋಮೋಪರಾಗದ ಪುಂಣ್ಯಕಾಲದಲೂ ದಾನಧಾರಾಪೂರ್ವ್ವಕವಾಗಿ ಧಾರೆಯ ನೆಱಿದ ಶಿಲಾಶಾಸನದ ಕ್ರಮವೆಂ

೯ ತೆಂದರೆ ಮಠದ ಗಡಿಯ ವಿವರ ರಾಜಬೀದಿಯಿಂದಂ ಪಡುವಲು ಸಿಂದುರಗೊಳಿರಾಜ ಬೀದಿಯಿಂದಂ ಬಡಗಲು ಯೀಸರಸೆಟ್ಟಿಮ

೧೦ ಠದ ಗಡಿಯಿಂದಂ ಮೂಡಲು ದೇವ(ರ) ಹೊರ ಪವುಳಿಯಿಂದಂ ತೆಂಕಲು ಯೀ ಗಡಿಯಿಂದೊಳಗೆ ಕಟ್ಟಿಸಿದ ಮಠ ಬಿಟ್ಟ ಧ

೧೧ ರ್ಮ್ಮಕ್ಕೆ ದಿನ ೧ ಕೆ ಉಂಬ ಬ್ರಾಂಹ್ಮರ ಜನ ೬ಕೆ ಬಿಟ್ಟ ಬಾಳ ವಿವರ ತೆಂಕಹಡಹಿನಲ್ಲಿ ಬಾಳಗಡಿ ಸೆಟ್ಟಕಾರ ತಂಮ್ಯ

೧೨ ಣಸೆಟ್ಟಿ ಗಡಿ ಬೆಳುವ ಗಣ್ಣಪಸೆಟ್ಟಿ ಗಡಿಯಿಂದಂ ಪಡುವಲು ಹೊಳೆಯಿಂದಂ ಬಡಗಲು ಜೊರದರ ಬಳಿಯವರ ಗಡಿ

೧೩ ತೊಳಹರಬಳಿಯವರ ಗಡಿಯಿಂದಂ ಮೂಡಲು ತೊಳೆಹರಬಳಿಯವರ ಗಡಿಯಿಂದಂ ತ್ತೆಂಕಲೂ ಯೀ ಗಡಿ ಯಿ

೧೪ ಂದೊಳಗೆ ಮನೆಟಾಲು ಸಹ ಬಿತ್ತೂಬಾಳು ಮು ೩ ಗದ್ದೆ ಗೇಣಿ ಅಕ್ಕಿ ಮು ೧೫ ಅಯಿಕೋಟಯಲ್ಲಿ ಅಲಸಬೆಟ್ಟು ಪಡುವಮನೆಯ

೧೫ ಜನ್ನಿಕ್ರುಷ್ಣಹೆಬಾರನ ಹುಟು ಸೋಮನಾಥದೇವರ ಗಡಿಯಿಂದಂ ಪಡುವಲು ನಡವ ಒಕ್ಕಿಂದಂ ಬಡಗಲು ತ್ತಿರುಮಣಸೆಟ್ಟಿ ಗಡಿ ಕು .

೧೬ ಗಡಿಯಿಂದಂ ಮೂಡಲು ಚಪ್ಪಲ್ಲಿ .... ಗಡಿಯಿಂದಂ ತೆಂಕಲು ಯೀ ಚತುಸ್ಸೀಮೆ ಒಳಗೆ ಮೂ ಹ ೨ ಮತ್ತಂ ಮನೆ ಬಾಗಿಲ

೧೭ ಗದೆ ಕರ್ತರ ಶಂಖರಹೆಬಾರನ ಗಡಿಯಿಂದಂ ಪಡುವಲು ನಡವ ಒಕ್ಕು ಕರ್ತರ ಮನೆತಾವಿಂದಂ ಬಡಗಲು ಕರ್ತರ ಗಡಿಯಿಂದಂ

೧೮ ಮೂಡಲು ಕರ್ತರ ಗಡಿಯಿಂದಂ ತೆಂಕಲು ಯೀ ಚತುಸ್ಸೀಮೆಯಲ್ಲಿ ಬಿತ್ತ ಬಾಳು ಮು ||೦ ಆ ಯೆರಡು ಟಾವಿನ ಬಾಳು ಮು ೧||

೧೯ ಗದೆ ಮೇಲೆ ಅರುವರಮೂಲಾದಿ ಗ ೪೩ ನಾರುವಣಸೆಟಿಗೆ ನಡವ ಗೇಣಿ ಅಕ್ಕಿ ಮು ೮೦|| ಕಟಿ ಗ ಅ(ಳುಪೆ) ಹೆಬಾರನು ಯೀ ಬಾಳಿಗೆ ತೆ .

೨೦ ಮು ೭ ಯೀ ಬಾಳಿಗೆ (ಸು)ಗಿ(ಕೊ)ಳಕೆಗೆ ಹುರುಳುತ್ತ . ಕೆರ್ಱೆ ನೀರು ಮನೆಯ ಹಾದಿನ ಕೆರ್ಱೆ ನೀರು ಕಾಹು ಒಂದು(ಹಾ) ಮನೆಯ ..

೨೧ ನ ಗದೆಗೆ ಪಡುಮನೆ ಹೆಬಾರ್ಱ ಜಂನದ ಕಾಹು ಗುಂಡುಮೆಯ ತೆಂಕ ಹೊಳೆಯಲ್ಲಿ ....ಕೆಜೆ ತೋಟದ ....

೨೨ ಡುವಲು ಹರಿವ ತೋಡಿಂದಂ ಬಡಗಲು ಎಡಬೆಟ್ಟಿನ ಶಂಖರನಾರಾಯಣದೇವರ . ನ ಗಡಿ ...

೨೩ ಯಿಂದಂ ಮೂಡಲು ಕರ್ತರ ಗಡಿಯಿಂದಂ ತ್ತೆಂಕಲು ಯೀ ನಾಲ್ಕು ಗಡಿಯಿಂದೊಳಗೆ ಬಿತ್ತು ಭೂಮಿ|

೨೪ ಮತ್ತಂ ಬಂಚೆಟೆಬಾಳ ಗಡಿಯಿಂದಂ ಪಡುವಲು ಹರಿವ ತೋಡಿಂದಂ ಬಡಗಲು ......

೨೫ ದಲೂ ಸೊರಾಲಕಾರಂತ್ತನ ಗಡಿದೊಡ್ಡಿ ಹೊಳಹಾದಿಯಿಂದಂ ....

೨೬ ಮು ೧ |ಅಯಿವತ್ತು ಹಾನೆ ಉಭಯಂ ಮು ೨ ಗದೆ ....

೨೭ ಮತ್ತಂ ಕುಂಞಣ ಕಾರಂ(ತ)ನ ಗಡಿ ....

೮

ಶಿವಗಂಗೆ

ನೆಲಮಂಗಲ ತಾಲ್ಲೂಕು, ಬೆಂಗಳೂರು ಜಿಲ್ಲೆ

ಮಠದ ಬಾಗಿಲಲ್ಲಿ ಪೂರ್ವ ಕಂಬದ ಮೇಲೆ

(ಎ.ಕ.IX, ಬೆಂಗ (ಅನು)-೭೪)

ಕ್ರಿ.ಶ.೧೫೨೮, ಅಕ್ಟೋಬರ್ ೨೨, ಗುರುವಾರ

ಶಾಸನದಲ್ಲಿ ಕಾಲವನ್ನು ಶಕ ೧೪೫೦ನೆಯ ಸರ್ವಧಾರಿ ಸಂವಚ್ಛರದ ಕಾರ್ತಿಕ ಶು ೧೦ ಗುರುವಾರ ಎಂದು ಕಾಲವನ್ನು ನೀಡಿದೆ. ಇದು ಕ್ರಿ.ಶ.೧೫೨೮, ಅಕ್ಟೋಬರ್ ೨೨, ಗುರು ವಾರಕ್ಕೆ ಸಮನಾಗುತ್ತದೆ. ಕೃಷ್ಣದೇವರಾಯನ ಅರಮನೆಯ ಕುದುರೆ ಚನಮಲಿಸೆಟಿಯ ಮಗ ಚಂನಣಸೆಟರು ಶಿವಗಂಗೆಯ ಗಂಗಾಧರದೇವರ ಮಜ್ಜನದ ಸೇವೆಗಾಗಿ ಗೋಪುರವನ್ನು ಕಟ್ಟಿಸಿದಂತೆಯೂ ಇದಕ್ಕೆ ವಿಜಯಾಪುರದ ಚಂದ್ರಪಂಡಿತರ ಮಗ ಚಂದರಸರ ನೆರವು ಪಡೆದಿರಬಹುದಾದ ವಿಷಯವನ್ನು ತಿಳಿಸುತ್ತದೆ.

•

೧ ಶುಭಮಸ್ತು ಸ್ವಸ್ತಿಶ್ರೀ ವಿಜೆಯಾ

೨ ಭ್ಯದಯ ಶಾಲಿವಾಹನ ಶಕ

೩ ೧೪೫೦ ನೆಯ ಸರ್ವಧಾರಿ ಸಂವ

೪ ಚ್ಛರದ ಕಾರ್ತಿಕ ಶು ೧೦ ಗುರುವಾ

೫ ರದಲು ರಾಜಾಧಿರಾಜ ರಾಜಪರ

೬ ಮೇಶ್ವರ ಕ್ರುಷ್ಣರಾಯಮಹಾರಾಯನ

೭ ಮನೆಯ ಕುದುರೆಬಹರಿ ಚನಮ

೮ ಲಿಸಟಿರ ಮಗ ಚಂನಣ ಸೆಟರು ಗಂ

೯ ಗಾಧರದೇವರ ಮಜನದ ..ಕಿದ

೧೦ ವಾಗಿ ..ಚಂನಂಣ.ಕೊ

೧೧ ಲೆಗೋಪುರ ವಿಜಯಾಪುರದ ರಾ

೧೨ ಚಂದ್ರಪಂಡಿತರ ಮಗ ಚಂದರ್ಸರ ಕಾಲ

೯

ಹೊಸಾಳ

ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ

ಚೌಳೀಕೇರಿ ಬಳಿಯ ಕನ್ನಗದ್ದೆಯಲ್ಲಿನ ಶಾಸನ

(ಎಸ್.ಐ.ಐ.XXVII-೯೭)

ಕ್ರಿ.ಶ.೧೪೨೩, ಅಕ್ಟೋಬರ್ ೧೬, ಶನಿವಾರ

ಶಕವರುಷ ೧೩೪೫ನೆಯ ಶೋಭಕೃತ್ ಸಂವತ್ಸರದ ಕಾರ್ತಿಕ ಶು ೧೨ ಅ ಎಂದು ಕಾಲ ನಮೂದಾಗಿದ್ದು ಇದು ಕ್ರಿ.ಶ.೧೪೨೪೩, ಅಕ್ಟೋಬರ್ ೧೬, ಶನಿವಾರಕ್ಕೆ ಸರಿಯಾಗುತ್ತದೆ. ವಿರುಪಂಣ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುವಾಗ ಚೌಳಿಯಕೇರಿಯ ಹರಿಹರಸೆಟ್ಟಿಯರ ತಮ್ಮ ಕೋಟಿಯಂಣಸೆಟ್ಟಿಯರ ಮಕ್ಕಳುಪುರಷಂಣ ಸೆಟ್ಟಿಯರ ತಮ್ಮ ನಾರಾಯಣಸೆಟ್ಟಿ ಕೆಲ್ಲಂಗೆರೆಯ ವಿನಾಯಕ ಗುಡಿಯ ಪಕ್ಕ ಬಾರಕೂರಿನ ಅಧಿಕಾರಿಯಿಂದ ಭೂಮಿಯನ್ನು ಕೊಂಡು ಗುಡಿಗೆ ದಾನವಾಗಿ ನೀಡುತ್ತಾನೆ. ಉತ್ಥಾನ ದ್ವಾದಶಿಯಂದು ಭೂಮಿ ನೀಡಿದ ಉಲ್ಲೇಖವಿದೆ.

೧. ಶ್ರೀ ಗಣಾಧಿಪತಏ ನಮ |ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂ

೨. ಭ ಮೂಲಸ್ತಂಭಾಯ ಶಂಭವೇ |ಶುಭಮಸ್ತು |ಸ್ವಸ್ತಿಶ್ರೀ ಜಯಾಭ್ಯುದಯ ಶಕವರುಷ ೧೩೪೫ ನೆಯ ಸೋ

೩ ಭಕ್ರುತ್ ಸಂವತ್ಸರದ ಕಾರ್ತಿಕ ಶು ೧೨ ಅ |ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇ

೪ ವರಾಯ ಮಹಾರಾಯರು ವಿಜಯಾನಗರಿಯ ರಾಜಧಾನಿಯಲು ಯಿದ್ದು ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನೆಯನು

೫ ಮಾಡಿ ರಾಜ್ಯವನು ಪ್ರತಿಪಾಲಿಸುತ ಯಿರಲು ಆ ರಾಯರ ನಿರೂಪದಿಂ ವಿರುಪಂಣ ವೊಡೆಯರು ಬಾರಕೂರ ರಾಜ್ಯವನು

೬ ಪಾಲಿಸುವಕಾಲದಲೂ ಚೌಳಿಯಕೇರಿಯ ಹರಿಹರಸೆಟ್ಟಿಯರ ತಂಮ ಕೋಟಿಯಂಣಸೆಟ್ಟಿಯ

೭ ರ ಮಕ್ಕಳು . . . . ಯ ಪುರಷಂಣಸೆಟ್ಟಿಯರ ತಂಮ ನಾರಣಸೆಟ್ಟಿಯರ ಕೆಲ್ಲಂಗೆ ಱೆಯ ವಿನಾಯ

೮ ಕ ದೇವರ ಸಮಿಪದಲು ಅ ವುಥಾನ ದ್ವಾದಶಿ ಪುಂಣ್ಯಕಾಲದಲು ಅ ನಾರಣಸೆಟ್ಟಿಯರು ಬಾರಕೂರ ಅಧಿಕಾರಿಯ

೯ ಕಯ್ಯಲು ಅರ್ದ್ಧಪರಿಚ್ಯೇದವಾಗಿ ಕೊಂಡು ಮೂಲಪರಿಚ್ಯೇದವಾಗಿ ಧಾರಾಪೂರ್ವಕವಾಗಿ ಕ್ರಯವ ಕೊಂಡು ಧರ್ಮಶಾಸ

೧೦

ಬಾರಕೂರು

ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ

ಕೋಟಿಕೇರಿಯ ಪಂಚಲಿಂಗೇಶ್ವರ ಗುಡಿ ಒಳಗೆ ಇರುವ ಶಾಸನ

(ಎಸ್.ಐ.ಐ.VII-೩೮೫)

ಕ್ರಿ.ಶ.೧೪೨೫, ಮಾರ್ಚ್ ೪, ಭಾನುವಾರ

ಶಕವರ್ಷ ೧೩೪೭ನೆಯ ವರ್ತ್ತಮಾನ ಕ್ರೋಧಿ ಸಂವತ್ಸರದ ಫಾಲುಗುಣ ಸು ೧೫ ಭೌಮವಾರದಲ್ಲು... ಎಂದು ಕಾಲದ ಉಲ್ಲೇಖ ನೀಡಿರುವ ಈ ಶಾಸನ ಕ್ರಿ.ಶ.೧೪೨೫, ಮಾರ್ಚ್-೪,ಭಾನುವಾರಕ್ಕೆ ಸರಿಹೊಂದುತ್ತದೆ. ದೇವರಾಯ ಮಹಾರಾಯರ ನಿರೂಪದಿಂದ ಮಹಾಮಂತ್ರಿ ನರಸಿಂಹದೇವ ಒಡೆಯರು ಬಾರಕೂರ ರಾಜ್ಯವನ್ನು ಆಳುತ್ತಿರುತ್ತಾನೆ. ಈ ಅವಧಿಯಲ್ಲಿ ಆ ಬಾರಕೂರ ಕೋಟೆಯಕೇರಿಯ ಮೂಲಸ್ತಾನವಾದ ಮಾರ್ಕ್ಕಂಡೇಶ್ವರ ಪಂಚಲಿಂಗದೇವರ ಸನ್ನಿಧಿಯಲ್ಲಿ ಶಿವರಾತ್ರಿ ಹಬ್ಬದಲ್ಲಿ ಬ್ರಾಹ್ಮಣರ ಊಟಕ್ಕೆಂದು ಭೂಮಿಯನ್ನು ದಾನ ನೀಡಿದ ವಿಷಯ ಈ ಶಾಸನದಲ್ಲಿದೆ. ಮಾರ್ಕ್ಕಂಡೇಶ್ವರ ದೇವರ ಕೆರೆಯ ಪಶ್ಚಿಮದಿಕ್ಕಿನಲ್ಲಿ ಮಠವನ್ನು ಕಟ್ಟಿಸಿ, ಅಲ್ಲಿ ಪ್ರತಿದಿನ ಒಬ್ಬ ಬ್ರಾಹ್ಮಣನಿಗೆ ತೋಯ, ತುಪ್ಪ, ನಾಲ್ಕು ಶಾಕ, ಮಜ್ಜಿಗೆ, ಉಪ್ಪಿನಕಾಯಿ, ವಿಳೆಯ ಸಹಿತವಾಗಿ ಊಟಕ್ಕೆ ಹಾಕಬೇಕೆಂದು ವರ್ಷಕ್ಕೆ ನೂರಯಿಪ್ಪತ್ತು ಮೂಡೆ ಅಕ್ಕಿಯನ್ನು ದಾನ ನೀಡಲಾಗಿದೆ. ಈ ಅಕ್ಕಿಯನ್ನು ಸಂಗ್ರಹಿಸುವ ಕೇಶವನ ಮಗ ಗೋವಿಂದನಿಗೆ ಜೀವಿತಕ್ಕೂ ದಾನ ಬಿಡಲಾಗಿದೆ. ಈ ಧರ್ಮವನ್ನು ಬಾನಗೇಡು, ಬರಗೇಡು, ನಷ್ಟ-ತುಷ್ಟಯೆಂದು ಎನ್ನದೆ ನಡೆಸಬೇಕೆಂದಿದೆ. ಇದರ ಜೊತೆಯಲ್ಲಿ ಊರ ಮಧ್ಯದ ವಿಷ್ಣುಮೂರ್ತಿಗೆ ಪಂಚಲಿಂಗದೇವರಿಗೂ ದಾನ ಬಿಡಲಾಗಿದೆ. ಈ ದಾನಗಳಿಗೆ ತೊಂದರೆಯಾದರೆ ಕೋಟೆಯ ಕೇರಿಯ ಹಲವು ಸೆಟ್ಟಿಕಾರರು ಪರಿಹರಿಸಿ ಕೊಡಬೇಕೆಂದು ಸೂಚಿಸಲಾಗಿದೆ. ಇದಕ್ಕೆ ಕಂದಾವೂರ, ಕೋಟ, ಬ್ರಂಹ್ಮೂರು, ನಿರುವಾರ, ಪಡುವಣಕೋಣನಾಡು ಮೊದಲಾದ ಜನರ ಸಾಕ್ಷಿಯಿದೆ.

೧ ಸ್ವಸ್ತಿ| ಶ್ರೀಗಣಾಧಿಪತಯೇ ನಮಃ| ನಮಸ್ತುಂಗಶಿರಃಚುಂಬಿಚಂದ್ರಚಾಮರಚಾರವೇ| ತ್ರೈಲೋಕ್ಯನಗ

೨. ರಾರಂಭ ಮೂಲಸ್ತಂಭಾಯ ಶಂಭವೇ |ಸ್ವಸ್ತಿ ಶ್ರೀ||ಜಯಾಭ್ಯುದಯಂ ಶಕವರ್ಷ ೧೩೪೭ ನೆಯ ವರ್ತ್ತಮಾನ ಕ್ರೋಧಿಸಂವ

೩. ತ್ಸರದ ಫಾಲುಗುಣ ಸು ೧೫ಶೊಭೌಮವಾರದಲ್ಲು ಶ್ರೀಮಂನ್ಮಹಾರಾಜಾಧಿರಾಜ ರಾಜಪರಮೇಶ್ವರ ರಾಯವಿಭಾ

೪. ಡ ಭಾಷೆಗೆ ತಪ್ಪುವರಾಯರಗಂಡ ಚತುಃಸಮುದ್ರಾಧಿಪತಿ ಶ್ರೀವೀರಪ್ರತಾಪ ದೇವರಾಯ ಮಹಾರಾಯರು

೫. ವಿಜಯನಗರಿಯ ರಾಜಧಾನಿಯಲ್ಲು ಸುಖಸಂಕಥಾವಿನೋದದಿ ಇಹ ರಾಜ್ಯದ ವರ್ಂಣ ಧಂರ್ಮ್ಮಾಶ್ರಮಂಗಳಂ

೬. ನ್ನು ಪಾಲಿಸಿ ಯೇಕಛತ್ರದಿಂ ಸಾಂಬ್ರಾಜ್ಯಂ ಗೆಯ್ವ ಕಾಲದಲು ಶ್ರೀಮತು ದೇವರಾಯ ಮಹಾರಾಯರ ನಿರೂ

೭ ಪದಿಂ ಶ್ರೀಮಂನ್ಮಹಾಮಂತ್ರಿ ನರಸಿಂಹ್ಯದೇವ ಒಡೆಯರು ಬಾರಕೂರ ರಾಜ್ಯಮಂ ಪ್ರತಿಪಾಲಿಸುವ ಕಾಲದ

೮ ಲ್ಲಿ ಆ ಬಾರಕೂರ ಕೋಟೆಯಕೇರಿಯ ಮೂಲಸ್ತಾನ ಮಾರ್ಕ್ಕಂಡೇಶ್ವರದ ಪಂಚಲಿಂಗದೇವರ ಸಂನ್ನಿಧಿಯಲಿ ಶಿವರಾತ್ರೆಪು

೯ ಣ್ಯಕಾಲದಲ್ಲಿ ಬ್ರಾಂಹಣ ಭೋಜನಕ್ಕೆ ಸಹಿರಂಣ್ಯೋದಕದಾನ ದಾರಾಪೂರ್ವಕಮಾಗಿ ಕೊಟು ಬರಸಿದ ಶಿಲಾ

೧೦ ಶಾಸನದ ಕ್ರಮವೆಂತೆಂದರೆ ಆ ಮಾರ್ಕಂಡೇಶ್ವರ ದೇವರ ಕೆರ್ರೆಯ ಬಡಗಣ ದೆಸೆಯಲಿ ಮಠವ ಕಟಿಸಿ ಅಲ್ಲಿ ನಡ

೧೧ ಸುವ ಹಂನ್ನೆರಡುಮಂದಿ ಬ್ರಾಹ್ಮಣ ಭೋಜನಕೆ ಧಂರ್ಮ್ಮವ ಮಾಡಿ ಪ್ರತಿದಿನ ಒಂದಕ್ಕೆ ಜನ ಒಂದಕ್ಕಂ ಆತನ ತೋ

೧೨ ಯ ತುಪ ನಾಲ್ಕುಶಾಕ ಮಜಿಗೆ ಉಪಿನಕಾಯಿ ವಿಳಯಸಹವಾಗಿ ಪ್ರತಿವರುಶ ಒಂದಕ್ಕಂ ಬಾರಕೂರ ಕಂ

೧೩ ಚಿನಹಾನೆಗೆ ಒತಬಹನಾಡ ಹಾನೆ ನಾಲ್ವತ್ತಱಲು ಒರವೆಯಕ್ಕಿಯ ಮೂಡೆ ಹತ್ತಱ ಮರ್ಯ್ಯಾದೆಯ

೧೪ ಲು ಉಂಬ ಬ್ರಾಂಹ್ಮರ ಜನ ಹಂನ್ನೆರಡಕ್ಕೆ ಅಕ್ಕಿಯ ಮೂಡೆ ನೂರಯಿಪ್ಪತ್ತು ಪ್ರತಿವರುಶದಲ್ಲು ನಡದುಬಹುದು |

೧೫ ಪಡುವ ಕೋಣನಾಡು ಅರಮನೆಗೆ ತೆಱುವ ವಹಿಪ್ರಮಾಣಿನ . . . ಯ ಕಳದು ಅ
ನಾಡಹಡಿ ಹೊ

೧೬ ಱಗಾಗಿ ಪೂರ್ವದಲಿ ಪಡುವ ಕೋಣನಾಡ ಒತ್ತಿನ ಹಡಹಿನ . . . . . . ಳಿ ಹೊಳೆ ಬೆ-
ಟ್ಟುತಿಟ್ಟೆ ಕುಳವಿಲ್ಲದ

೧೭ ಭೂಮಿಯನೂ ತಂಮ್ಮ ಕ್ರುತವನಿಕ್ಕಿ ಮಾಡಿಕೊಂಡು ಬದ್ದ ಬಾಳನೂ ಪಡುವಕೋಣ
ನಾಡವರು ದುರಾಗತದ

೧೮ ಲು ತಿಜೆಗಿಕೊಂಡು ಬಂದದನೂ ನರಸಿಂಹದೇವ ಒಡೆಯರು ಆ ನಾಡನೂ ಕರಸಿ
ವಿಚಾರವ ಮಾಡಿದಲ್ಲಿ ಅ

೧೯ ಪಡುವಕೋಣನಾಡು ತಂಮ ನಾಡಕುಳದ ಒಳಗಣ ಭೂಮಿಯಲ್ಲಿ ಅಧಿಕವಾದ
ಭೂಮಿಯೆಂದು ಒಡಂಬ

೨೦ ಟ್ಟರಾಗಿ ಅ ಹಡಹಿನ ಭೂಮಿಯಲಿ ಹಂನೆರಡು ಮಂದಿ ಬ್ರಾಹ್ಮಣ ಭೋಜನಕೆ ವರುಷಂಪ್ರತಿ
ನಡ

೨೧ ಸಿ ಬಹದು ಅ ಹಡಹಿನ ಯೇಳು ಬಯಲ ವಿವರ ಒಱವಿನ ಕಳಿಯ ಬಯಲು ೧
ದೇವರ ಕಳಿಯ ಬಯ

೨೨ ಲ ಬಡಗ ಬಯಲು ೧ ಬೆಳುವಲಸು ಅರಗಿಸಾರಬಾಗಿಯ ಬಯಲು ೧ ನಂಜಿನಮಕ್ಕೆಯ
ಬಯಲು ೧ ಪುದುವ

೨೩ ಮೆಕೆಯ ಬಯಲು ೧ ಮೂಡಮೆಕೆಯ ಬಯಲು ೧ ಹೆಂಮಂಣಕೆಜೆಯ ಬಯಲು ೧
ಅಂತು ಯೇಳುಬ

೨೪ ಯಲ ಚತುಃಸೀಮೆಯ ವಿವರ ಮೂಡಲು ಹರಿದ ಹೊಳೆಯಿ . . . . ತೆಂಕಲು ಅ
ಹರಿದ ಹೊಳೆಯಿಂ

೨೫ ದಂ ಬಡಗಲು ಪಡುವಲು ಅಣದಹಡಿಯ ಗಡಿಯಿಂ ಮೂಡಲು ಬಡಗಲು ಹರಿದ
ಹೊಳೆ ಯಿಕ್ಕಿದ ಕಲ್ಲು

೨೬ ಗಳು ಜೀವಧನ ನಡವ ಜಡಿನ ಓಣಿಯಿಂದಂ ತೆಂಕಲು ಯಿಂತೀ ಚತುಃಸೀಮೆಯ
ಹಡಹಿನ ಯೇಳು ಬಯಲ ಭೂ

೨೭ ಮಿಯ ಒಳಗೆ ದೇವಸ್ವ ಬ್ರಂಹ್ಮಸ್ವ ಹೊಐಗಾಗಿ ಮೇಲಾದ ಮೂನೂಱಯಿಪತ್ತೆರಡು ಒಸರಿಯ ಮೇಲೆ ಅ ಹಂ

೨೮ ನೆರಡುಮಂದಿ ಬ್ರಾಹ್ಮರು ಭೋಜನವ ಮಾಡುವುದಕ್ಕೆ ಮುಂನ್ನಬರದ ಅಕಿಯ ಮೂಡೆ ೧೨೦ ಆ ಅಕ್ಕಿಯನೆ

೨೯ ತ್ತಿ ಧಂರ್ಮ . . ಸಲಿಸುವನು ಕಂಮದ ಕೋಣ ಯಂಣೆಯ ಹಾಗ ಕೇಶವನ ಮಗ ಗೋವಿಂದೆಗೆ ಜೀವಿತ ಕಾಟಿ

೩೦ ಗ ೧೨ ಅ ಆ . .ನು ನರಸಿಂಹದೇವ ಒಡೆಯರ ಧಂರ್ಮದ ಮತಕೆ ಹಾಯಿಕುವ ಹೊಜೆಯಾಳ ಕೂಲಿ

೩೧ ಗೆ ಒತದ ಹಾನೆ ನಾಲ್ವತಱ ಲೆಕದ ಅಕಿಯ ಮೂರ್ಡೆ ಹಾನೆ ೩೨ |ಸಹವಾಗಿ ಪ್ರತಿ ಒಸರೆ ೧ ಕಂ ಬಾರಕೂರ

೩೨ ಕಂಚಿನಹಾನೆಗೆ ಒತಬಹ ಅಕ್ಕಿಹಾನಿ ೧೬ ಮಾ ೦॥ ಕಾಟಿಯ . ಗ ೪ ॥ ಲೆಕ್ಕದಲೂ ವರುಷಂಪ್ರ

೩೩ ತಿ ಬಾನಗೇಡು ಬಱಗೇಡು ನಷ್ಟಿತುಷ್ಟಿಯಂದು ಯಂನದೆ . . . . . ಡಿದು ಅಪಯಿಸುವರು ಆ ಉ

೩೪ ರು ಜಗತ್ತು ಆಚಂದ್ರಾರ್ಕಸ್ಥಾಯಿಯಾಗಿ ಕಾಲ ಕಾಲದಲಿ ಯಿಹ ಬಾಳ ಹಾನೆ ಭೂಮಿಯಲು ನಡಸಿಬಹರು

೩೫ ಹಡಹಿನ ಉರ ಮಧ್ಯಸ್ಥಾನದ ಶ್ರೀವಿಷ್ಣುಮೂರ್ತ್ತಿಯ ಅಮ್ರುತಪಡಿಗೆ ವರುಷಂಪ್ರತಿ ನಡಸಿಬಹದು ನಾ

೩೬ ಡಹಾನೆ ೪೦ ಲ . . ಕ್ಕಿಯ ಮೂಡೆ ೨೦ ಪಂಚಲಿಂಗ ದೇವರ ನಂದಾದೀಪ್ತಿಗೆ ವರುಷಂಪ್ರತಿ ನಡಸಿಬಹದು

೩೭ ದು ಕಾಟಿ ಗ ೫ . . ಡಹಿನ ಉರ ಯಿಳುಪು ವರುಷಂಪ್ರತಿ ನಡೆದುಬಹದು ಕಾಟಿ ಯಿಪತ್ತಮೂಱು ಹೊ

೩೮ ಂನ್ನು ಪೂರ್ವಮರಿಯಾದೆಯಲು ಯಿಳುಹೂದು ಅಂತು ಯಿಪತ್ತು ಮೂಡೆಯಕ್ಕಿ ಯಿಪತ್ತಯೆಂಟು ಹೊ

೩೯ ೦ನ್ನು ಯಿ ಮೂನೂಱಿಯಿಪತ್ತು ಒಸರಿಯಮೇಲೆ ಹಡಿದು ನಡಸಿಬಹುದು ಯಿ ಹಡುಹಿನ ಏಳು ಬಯ

೪೦ ಲ ಚತುಃಸೀಮೆಯ ಒಳಗುಳ್ಳ ನಿಧಿ ನಿಕ್ಷೇಪ ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯವೆಂಬ ಅಷ್ಟಭೋಗ

೪೧ ತೇಜಸಾಂಮ್ಯಉ ಪಂಚಲಿಂಗದೇವರ ಮುಂದಣ ಧಂರ್ಮ್ಮ . . . . ಉದು ಯಿ ಧಂರ್ಮದ ಮಠಕೆ ಸಲು

೪೨ ವ ಭೂಮಿಗೆ ಯಿ ಶಾಸನಪ್ರಮಾಣ ಎಡೆ ಬಿಟ ಎಸೆ ಬಿಡಾರ ಮು . . . . ಸರ್ವಮಾಂನ್ಯ ಯಿ ಧರ್ಮವನೂ ಆರಸು

೪೩ ಅನುಸರಿ ಒತ್ತಿದರೆ ಪರಿಹರಿಸಿ ಕೊಡುವರು ಕೋಟಿಯಕೇರಿಯ ಹಲರು ಸೆಟ್ಟಿಕಾಱಿರು ಯೆಂದು ಬರ

೪೪ ದು ನಟ ಶಿಲಾಶಾಸನ ಯಿಂತಪುದಕ್ಕೆ ಸಾಕ್ಷಿಗಳು ಕಂದಾವುರದಗ್ರಾಮ ಕೋಟದಗ್ರಾಮ ಬಂಹ್ಮೂರ ಗ್ರಾ

೪೫ ಮೂನಿರುವಾರಗ್ರಾಮೊಪಡುವಕೋಣನಾಡು ಯಿಂತಿವರುಭಯಾನುಮತದಿಂ ಕೊಡಗ ನೂರ ಆರಾಧ್ಯರ ಬರ

೪೬ ಹ ಕಲುಕುಟೆ . . ನಪನ ಕೆಲಸ ಆ ಹಡಹಿನ ಉರು ಜಗತ್ತಿನ ಒಪ ಶ್ರೀವಿಷ್ಣುಮೂರ್ತ್ತಿ ಕೋಟೆಯಕೇರಿಯ

೪೭ ಹಲರು ಸೆಟಿಕಾಱಿರ ಒಪ್ಪ ಶ್ರೀಮಾರ್ಕ್ಕಡೇಶ್ವರದೇವರು ಸಾಕ್ಷಿಗಳ ಒಪ್ಪ ನಾಲ್ಕುಗ್ರಾಮದ ಒಪ್ಪ ಕಾನ್ತೇಶ್ವ...

೪೮ ಬಾಚೆನಾಡಒಪ್ಪ ಸಾತೆನಗೋಳಿಯ ಬ್ರಹ್ಮರು ||ಸಾಮಾಂನ್ಯೋಯಂ ಧಂರ್ಮ್ಮಸೇತುಂ ನ್ರುಪಾಣಾಂ ಕಾಲೇ ಕಾಲೇ ಪಾ

೪೯ ಲನೀಯೋಭವದ್ಭಿಃ ಸರ್ವಾನೇತಾರ್ಂ ಭಾವಿನಃ ಪಾರ್ಥಿವೇಂದ್ರೋ ಭೂಯೋ ಭೂಯೋ ಯಾಚತೇ ರಾಮಚಂದ್ರಃ |ಸ್ವ

೫೦ ದತ್ತಾಂ ಪರದತ್ತಾಂ ವಾಯೋ ಹರೇತಿ ವಸುಂಧರಾ |ಷಷ್ಟಿಂ ವರುಷ ಸಹಸ್ರಾಣಿ ವ್ರಿಷ್ಟಾಯಾಂ ಜಾಯತೇ ಕ್ರಿಮಿಃ||

೫೧ ಯೇಕೇವ ಭಗಿನೀ ಲೋಕೇ ಸರ್ವೇಷಾಯಪಿ ಭೂಭುಜಾರೊನ ಭೋಗ್ಯೊನ ಕರಗ್ರಾಹ್ಯಾ ವಿಪ್ರದತ್ತಾ ವಸುಂದರಾ॥ ಮಂಗಳ ಮಹಾ

೫೨ ಶ್ರೀ ಶ್ರೀ ಶ್ರೀ ಯಿಾ ಧರ್ಮ್ಮವನಾರು ಕಿಡಿಸಿದವರು ತಂಮ ಮಾತಾಪಿತ್ರುಗಳನು ನಾಯಕನರಕದಲ್ಲಿ ಯಿಕ್ಕಿದವ

೫೩ ರು ಸಾವಿರ ಬ್ರಾಹ್ಮಣರ ಕೊಂದವರು ಯಿ ಧಂರ್ಮವ ಪಾಲಿಸಿದವರು ಸಾವಿರ ಲಿಂಗವ ಪ್ರತಿಷ್ಟೆಯ ಮಾಡಿದವರು

೫೪ ಸಾವಿರ ಕಂನ್ಯಾದಾನವ ಮಾಡಿದವರು ಸಾವಿರ ಗೋದಾನವ ಮಾಡಿದವರು ಅಶ್ವಮೇಧಯಾಗವ ಮಾಡಿದವರು |ಯಿ ಧ

೫೫ ರ್ಮಶಾಸನಕೆ ಪಡುವ ಕೋಣನಾಡು ಸೆಟಿಕಾಜಿಜಿ ಒಪ ಸಾತಯನಗೋಳಿಯ ಬ್ರಂಹ್ಮರು ಆ ನಾಡ ಸೇನಬೋವ ಜ

೫೬ ನಾರ್ಜನನ ಒಪ ಶ್ರೀವಿಷ್ಣುಮೂರ್ತ್ತಿ ಮಂಗಳ ಮಹಾಶ್ರೀ ಶ್ರೀ ಶ್ರೀ

೧೧

ಬಾರಕೂರು

ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ

ಕೋಟೆಕೇರಿಯಲ್ಲಿರುವ ಶಾಸನ

(ಎಸ್.ಐ.ಐ.VII-೩೮೪)

ಕ್ರಿ.ಶ.೧೪೨೫, ಮಾರ್ಚ್-೧೪, ಬುಧವಾರ

ಶಕವರುಷ ೧೩೪೭ನೆ ಕೋಧಿ ಸಂವತ್ಸರದ ಫಾಲ್ಗುಣ ಬ ೧೦ ಗು ಲು ಎಂದು ಕಾಲದ ಉಲ್ಲೇಖವಿರುವ ಈ ಶಾಸನವು ಕ್ರಿ.ಶ.೧೪೨೫, ಮಾರ್ಚ್-೧೪, ಬುಧವಾರಕ್ಕೆ ಸಮನಾಗುತ್ತದೆ. ದೇವರಾಯರ ನಿರೂಪದಿಂದ ಬಾರಕೂರು ರಾಜ್ಯವನ್ನು ನರಸಿಂಹ ದೇವವೊಡೆಯರು ಪ್ರತಿಪಾಲಿಸುತ್ತಿರುತ್ತಾರೆ. ಈ ಅವಧಿಯಲ್ಲಿ ಕೋಟೆಯಕೇರಿಯ ಮಾರ್ಕಂಡೇಶ್ವರ ಸಂನಿಧಿಯಲ್ಲಿ ಹಿಂಗುಳದೇವಿಗುಡಿಗೆ ದಾನ ನೀಡಿದ ವಿಷಯದ ಶಾಸನ ಇದಾಗಿದೆ. ಹಿಂಗುಳದೇವಿಯನ್ನು ಪ್ರತಿಷ್ಠಾಪಿಸಿ ಪಂಚಲಿಂಗದೇವರ ಭಂಡಾರದಿಂದ ಅಕ್ಕಿಮೂಡೆಯನ್ನು, ಭೂಮಿ ತೆರಿಗೆ, ಅಂಗಡಿ ತೆರಿಗೆಯನ್ನು ದಾನ ನೀಡಿ ಮಧ್ಯಾಹ್ನದ ಊಟಕ್ಕೆ ಬಳಸಲು ನೀಡಲಾಗಿದೆ. ಹಾಗೆಯೇ ರಾತ್ರಿಯ ಊಟಕ್ಕೂ ದಾನ ನೀಡಿದೆ. ಬಳಮನ್ತ ಒಡೆಯರ ತೋಟದೊಳಗಿನ ಉತ್ಪತ್ತಿಯನ್ನೂ ದೇವರಿಗಾಗಿ

ನೀಡಲಾಗಿದ್ದು, ಇದಕ್ಕೆ ತಳುವಪ್ಪರಸ, ಸಂದಗಿರಿಸೆಟಿ, ಸಿರೆಸೆಟಿ, ಮತ್ತು ರತುನಸೆಟ್ಟಿಯರು ಒಪ್ಪಹಾಕಿರುವರು. ಪೂಜಾರಿಯ ಕೆರೆಯಿಂದ ೪೦ ಗದ್ಯಾಣದ ಆರುವಾರದ ಬಡ್ಡಿಯಾದ ೫ ಮೂಡೆ ಅಕ್ಕಿಯನ್ನು ರಾತ್ರಿಯ ಊಟಕ್ಕೆಂದು ನಿರ್ಧರಿಸಲಾಗಿದೆ.

೧ ...ಪತಯೇ ನಮಃ। ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ।

೨ ...ಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ॥ ಸ್ವಸ್ತಿ ಶ್ರೀ॥ ಜಯಾಭ್ಯುದ

೩ ಯ ಶಕವರುಷ ೧೩೪೭ ನೇ ಕ್ರೋಧಿಸಂವತ್ಸರದ ಫಾಲ್ಗುಣ ೧೦ ಗು ಲು ಶ್ರೀಮನ್ಮ

೪ ಹಾರಾಜಾಧಿರಾಜ ರಾಜಪರಮೇಶ್ವರ ಅರಿರಾಯ ವಿಭಾಡ ಭಾಷೆಗೆ ತಪ್ಪು

೫ ವರಾಯರಗಂಡ ಚತುಸ್ಸಮುದ್ರಾಧಿಪತಿ ಶ್ರೀವೀರಪ್ರತಾಪ ದೇವರಾಯಮಹಾ

೬ ರಾಯರು ವಿಜಯನಾಗರಿಯ ರಾಜಧಾನಿಯಲು ಸಕಳಸಾಂಬ್ರಾಜ್ಯವನು ಪ್ರತಿ

೭ ಪಾಲಿಸುತ್ತ ಯಿಹ ಕಾಲದಲೂ ಆ ದೇವರಾಯರ ನಿರೂಪದಿಂ ಬಾರಕೂರರಾ

೮ ಜ್ಯವನು ನರಸಿದೇವವೊಡೆಯರು ಪ್ರತಿಪಾಲಿಸುವ ಕಾಲದಲೂ ಕೋಟೆಯಕೇರಿಯ ಮಾ

೯ ರ್ಕ್ಕಂಡೇಶ್ವರದೇವರ ಸಂನಿಧಿಯಲೂ ಹಿಂಗುಳದೇವಿಯರ ದೇವಸ್ಥಾನಕ್ಕೆ ನಡವ ಕಟ್ಟ

೧೦ ಳೆಯ ಧಂರ್ಮ್ಮವನೂ ಹಲರು ಸಟ್ಟಿಕಾಱರು ಮಾಡಿ ಬರಸಿದ ಶಿಲಾಸಾಷನದ ಕ್ರ

೧೧ ಮವೆಂತೆಂದರೆ ಪಂಚಲಿಂಗದೇವರ ಭಂಡಾರದಿಂದ ಮೂಡೆ ೧ ಕ್ಕಂ ನಾಗಂಡುಗದೆ

೧೨ ಲೆಕ್ಕದ . . . . . ಅಮ್ರುತಪಡಿಗೆ ಅಕ್ಕಿ ಮೂಡೆ ೧೨ ದೀಪಕ್ಕೆ ೭೨ ತೆಂಗೆಂಣೆಯೂ

೧೩ ಪ್ರತಿವರುಷಉ ನಡದುಬಹುದು।ಯಿಾ ದೇವಸ್ಥಾನದ ಚತುಃಸೀಮೆಯ ವಿವರ ಮೂಡಲೂ

೧೪ .ಬಡಗ . ಮಠದಿಂದೆಂ ಪಡುವಲು ತೆಂಕಲು ಅಗಳಿಂದಂ ಬಡಗಲು ಪಡುವ-

೧೫ ಲೂ ರಾಜಬೀದಿಯಿಂದಂ ಮೂಡಲು ಬಡಗಲು ರಾಜಬೀದಿಯಿಂ ತೆಂಕಲು ಯಿಂ-

೧೬ ತೀ ಚತುಃಸ್ಸೀಮೆಯೊಳಗುಳ ನೆಲ ಮನೆ ೧೦ ಕ್ಕ ನೆಲ ಒಂದಕೆ ೪೫ ಹ ಮಠದ ಅಂಗಡಿ ೧ ಕೆ ಗ ೧ ಉಭೆ

೧೭ ಯಂ ಪ್ರತಿವರುಷ ೧ ಕೆ ಗ ೬ ಹೊಂನಿಂದ ಮಧ್ಯಾಂನದ ಉಪಾರ ನಡಉದು ಪೂಜಾರಿಯ

೧೮ ಕೆರೆಯಿಂದ ಅರುವಾರದ ಬಗೆಯ ಗೊಳರೊಬಡ್ಡಿಯ ೫ ಮೂಡೆ ಅಕ್ಕೊರಾತ್ರೆಯು

೧೯ ಪಾರಕ್ಕೆ ಬಹುದು | ಬಳಮನ್ತಒಡೆಯರ ತೋಟದೊಳಗಣ ಓಲೆಯಕಾಱರ ಮನೆ . .

೨೦ ಕಮಸೆಟ್ಟಿತಿ ವರುಷಕ್ಕೆ ಗ ೧ ಪಂಚಲಿಂಗದೇವರ ತೊಳಶಾಮಂಟಪದ ಕ್ಷೀರಾಬ್ಧಿ

೨೧ ಯ ಭೂರಿದಾನಕ್ಕೆ ಬಹುದು| ಯಿಾ ಧಂರ್ಮ್ಮ ಆಚಂದ್ರಾರ್ಕ್ಕಸ್ಥಾಯಿಯಾಗಿ ನಡವಂ

೨೨ ತಾಗಿ ಕೋಟೆಯಕೇರಿಯ ಹಲರು ಸೆಟ್ಟಿಕಾಱರು ಬರಸಿ ನಟ್ಟ ಶಿಲಾಸಾಶನ| ಇ

೨೩ ಧಂರ್ಮದ ಮೇಲಾರೈಕೆ ಬಲ್ಲೆಯಸೆಟ್ಟಿಯ ಮಗ ದಕ್ಕತನ ಬಳಿಯ ಮಾಣಿಸೆಟಿಯ

೨೪ ರದು ಯಿಂತಪುದಕ್ಕೆ ಕೋಟೆಯಕೇರಿಯ ಸೆಟ್ಟಿಕಾಱರು ತಳುವಪ್ಪರಸರು ಸಂ

೨೫ ದಗಿರಿಸೆಟಿಯರು ಸಿರೆಸೆಟಿಯರು ರತುನಸೆಟಿಯರು ಯಿಾ ನಾಲ್ವರು ಸೆಟಿಕಾಱರ

೨೬ ವೊಪ ಪಂಚಲಿಂಗದೇವರು ನಾಲ್ವಡ ಮಾಣಿಸೆಟ್ಟಿ ಕೋಚಸೆಟ್ಟಿಯ ವೊಪ ಪಂಚಲಿಂ

೨೭ ಗದೇವರು ಹಲರ ವೊಪ ಪಂಚಲಿಂಗದೇವರು ಯಿಾ ಧಂರ್ಮಕ್ಕೆ ಅಳುಪಿದವರು ವಾ


೨೮ ರಣಾಸಿಯಲ್ಲಿ ಸಾವಿರಕವಿಲೆಯ ಕೊಂದ ನಾಯಕ ನರಕಕ್ಕೆ ಹೋಹರು


೨೯ ದಾನಪಾಲನಯೋರ್ಮ್ಮಧ್ಯೇ ದಾನಾತ್ಸ್ರೇಯೋನ್ರುಪಾಲನಂ| ದಾನಾತ್ಸ್ವರ್ಗ್ಗಮವಾ

೩೦ ಪ್ನೋತಿ ಪಾಲನಾದಚ್ಚುತಂ ಪದರೊಮಂಗಳ ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ

೩

ನಕ್ಷೆಗಳು





ಶಾಸನ ಪ್ರಸರಣ ನಕ್ಷೆ
ಭದ್ರಾಚಲಂ
ಶ್ರೀಶೈಲ
ಗುಂಟೂರು
ಹಂಪಿ
ಕರ್ನೂಲು
ತಾಡಪತ್ರಿ
ಉದಯಗಿರಿ
ಚಿತ್ರದುರ್ಗ
ಲೇಪಾಕ್ಷಿ
ಕಾಳಹಸ್ತಿ
ಶೃಂಗೇರಿ
ತಿರುಪತಿ
ಬೇಲೂರು
ಕೋಲಾರ
ಕಾಂಚೀವರಂ
ಶ್ರೀರಂಗಪಟ್ಟಣ




ಆರ್ಯವೈಶ್ಯ ಕುಲದೇವತೆ
ಶ್ರೀ ಕನ್ನಿಕಾಪರಮೇಶ್ವರಿ







ಶೆಟ್ಟಿಕುಲದ ಪ್ರಮುಖರು




ವೀರಗಲ್ಲು (ದೇವಾವರ ರೇಖಾಚಿತ್ರ.)




ಪತಿಯೊಂದಿಗೆ ಚಿತೆಯೇರುತ್ತಿರುವ ಸತಿ. ಬಾವದ



ಬಾರಕೂರು ಶಾಸನ, ಕ್ರಿ.ಶ.೧೪೩೩, ಸಂ.೧೦೪




ಅಹಮದ್ ಖಾನನ ಶಾಸನ



ಹಂಪಿ ಶಾಸನ, ಕ್ರಿ.ಶ.೧೪೩೯, ಸಂ.೧೫೧



ಅಳ್ಳಿಕೆರೆ ಕೆರೆಯ ತೂಬು, ಕಮಲಾಪುರ




ಶಿವಗಂಗಾ ಕ್ಷೇತ್ರದ
ಅಗಸ್ತ್ಯತೀರ್ಥ ಅಥವಾ
ನೂರೆಂಟು ಲಿಂಗಗಳ ಕಲ್ಯಾಣಿ
ಅಥವಾ ಗಂಗಾಧರೇಶ್ವರ
ಮಜ್ಜನಕೊಳ




ಸ್ತ್ರೀಯೊಬ್ಬಳು ಮುಡಿಪಿದ ನಿಸಿಧಿಶಿಲ್ಪ, ಬಳ್ಳಿಗಾವೆ



ಮಹಾಸತಿ ಮೆರವಣಿಗೆ. ಸಾಸಲು



ಬುಕ್ಕಣ್ಣ ಒಡೆಯರ ಕಾಲದ ಶಾಸನ ಮದ್ದೂರು



ಪ್ರತಾಪದೇವರಾಯನ ಕಾಲದ ದಾನ ಶಾಸನ ೧೨೬೭



ತುರುಗೋಳ್, ಬಳ್ಳಿಗಾವೆ



[illegible]
[illegible]



ಮಾಸ್ತಿಕಲ್ಲು, ತಾಳಗುಂದ



ಗಂಡಭೇರುಂಡ, ಬಳ್ಳಿಗಾವೆ



ಪಾರ್ಶ್ವನಾಥ ತೀರ್ಥಂಕರ